ಕನ್ನಡದಲ್ಲಿ ಗುಂಡಬ್ರಹ್ಮಯ್ಯಗಳ ಸಾಹಿತ್ಯ

(ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಲಿಂಗಪ್ಪ

ಮಾರ್ಗದರ್ಶಕರು

ಡಾ. ಎಸ್.ಆರ್.ಚನ್ನವೀರಪ್ಪ

ಸಹ ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩೨೭೬

ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೨

ಕನ್ನಡದಲ್ಲಿ ಗುಂಡಬ್ರಹ್ಮಯ್ಯಗಳ ಸಾಹಿತ್ಯ

(ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಲಿಂಗಪ್ಪ

ಮಾರ್ಗದರ್ಶಕರು

ಡಾ. ಎಸ್.ಆರ್.ಚನ್ನವೀರಪ್ಪ

ಸಹ ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩೨೭೬

ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ -೫೮೩ ೨೭೬

೨೦೧೨

ದೃಢೀಕರಣ ಪತ್ರ

ಕನ್ನಡದಲ್ಲಿ ಗುಂಡಬ್ರಹ್ಮಯ್ಯಗಳ ಸಾಹಿತ್ಯ ಎಂಬ ವಿಷಯದ ಕುರಿತು ಲಿಂಗಪ್ಪ ಇವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದಾರೆ. ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಇದು ಇವರ ಸ್ವತಂತ್ರ ಸಂಶೋಧನ ಅಧ್ಯಯನವಾಗಿದೆ. ಇದನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲಾಗಿದೆ.

ಮಾರ್ಗದರ್ಶಕರು

ಡಾ.ಎಸ್.ಆರ್.ಚನ್ನವೀರಪ್ಪ
ಸಹ ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ಸ್ಥಳ: ವಿದ್ಯಾರಣ್ಯ

ದಿನಾಂಕ: ೨೧-೦೮-೨೦೧೨

ಘೋಷಣಾ ಪತ್ರ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಕನ್ನಡದಲ್ಲಿ ಗುಂಡಬ್ರಹ್ಮಯ್ಯಗಳ ಸಾಹಿತ್ಯ ಎಂಬ ಮಹಾಪ್ರಬಂಧವು ಡಾ.ಎಸ್.ಆರ್.ಚನ್ನವೀರಪ್ಪ ಅವರ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನವನ್ನು ಆಧರಿಸಿ ರಚನೆಗೊಂಡಿದ್ದಾಗಿದೆ. ಈ ಮಹಾಪ್ರಬಂಧವನ್ನು ನಾನು ಈ ಮೊದಲು ಯಾವುದೇ ಪದವಿಗಾಗಿ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವುದಿಲ್ಲವೆಂದು ಹಾಗೂ ಇದು ಬಿಡಿ ಇಲ್ಲವೆ ಇಡಿಯಾಗಿ ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

ಲಿಂಗಪ್ಪ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ಸ್ಥಳ: ವಿದ್ಯಾರಣ್ಯ

ದಿನಾಂಕ: ೨೧-೦೮-೨೦೧೨

ಪರಿವಿಡಿ

ಅಧ್ಯಾಯ-ಒಂದು

ಅಧ್ಯಯನದ ಉದ್ದೇಶ ಹಾಗೂ ಸ್ವರೂಪ

ಪ್ರವೇಶಿಕೆ
ಅಧ್ಯಯನದ ಉದ್ದೇಶ-ವ್ಯಾಪ್ತಿ
ಅಧ್ಯಯನದ ವೈಧಾನಿಕತೆ
ಅಧ್ಯಯನದ ಸ್ವರೂಪ
ಅಧ್ಯಯನದ ಸಮೀಕ್ಷೆ

ಅಧ್ಯಾಯ-ಒಂದು

ಅಧ್ಯಯನದ ಉದ್ದೇಶ ಹಾಗೂ ಸ್ವರೂಪ

ಪ್ರವೇಶಿಕೆ

ಕಲ್ಯಾಣ ಕ್ರಾಂತಿಯ ವಿಪ್ಲವದ ನಂತರ ಶಿವಶರಣರು ತಮ್ಮ ನೆಲೆಯನ್ನು ಸ್ಥಾಪಿಸಿಕೊಳ್ಳಲು ವಿವಿಧ ಪ್ರದೇಶಗಳಿಗೆ ಚದುರಿ ಹೋದರು. ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳೆನಿಸಿದ ಕರ್ನಾಟಕದ ಉಳವಿ, ಕೂಡಲಸಂಗಮ, ಬಸವಕಲ್ಯಾಣ ಮತ್ತು ಶ್ರೀಶೈಲಗಳಲ್ಲಿ ನೆಲೆ ಕಂಡುಕೊಂಡರು. ಕ್ರಿ.ಶ.೧೨ನೇ ಶತಮಾನದ ಸಾಮಾಜಿಕ ಮೌಲ್ಯಗಳು ಇತರರಿಗೆ ಪ್ರೇರಣೆಯೊದಗಿಸಿದವು. ವಿವಿಧ ಸ್ತರಗಳ ಜನರು ತಮ್ಮನ್ನು ಸಕ್ರೀಯವಾಗಿ ತೊಡಗಿಸಿಕೊಳ್ಳುತ್ತ ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳಲು ಹವಣಿಸಿದರು. ಇವರೆಲ್ಲರೂ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಬದುಕಿನ ಪ್ರಾತಿನಿಧಿಕ ಸ್ವರೂಪರಾಗಿ ಮುಂದಿನ ಜನಾಂಗಗಳಿಗೆ ಮಾದರಿ ವ್ಯಕ್ತಿಗಳಾಗಿ ರೂಪುಗೊಂಡರು. ಇವರ ಕಥೆಗಳು ಪುರಾಣ ಕಲ್ಪಿತವಾಗಿವೆ. ಶಿವನ ಪಂಚವಿಂಶತಿ ಲೀಲೆಗಳು, ಶೂಲದ ಹಬ್ಬ, ಬೆನ್ನಸಿಡಿಯೇರಿಸುವ ಆಚರಣೆಗಳು, ಅಗ್ನಿಕುಂಡ ಹೋಗುವ ಸಂಪ್ರದಾಯ, ವೀರಗಾಸೆ, ಸಾರುವಯ್ಯಗಳಂತ ಧಾರ್ಮಿಕ ವೃತ್ತಿಗಾಯಕರು ಆ ಕಾಲದ ವಚನ ಸಾಹಿತ್ಯದ ಧಾರ್ಮಿಕ ಅನುಸಂಧಾನದ ಪ್ರತಿಬಿಂಬ ಎನ್ನಬಹುದು. ವಚನೋತ್ತರ ಯುಗದ ಅಭಿವ್ಯಕ್ತಿ ಮಾಧ್ಯಮ ಪ್ರಸಾರ ಸಾಹಿತ್ಯ. ಇದರ ಕೇಂದ್ರ ಭಾವ ಸಾಮಾನ್ಯರಿಗೆ ತಲುಪಬೇಕೆಂಬುದೇ ಆಗಿತ್ತು. ಪ್ರಸಾರ ಸಾಹಿತ್ಯದ ಒಂದು ಭಾಗವಾಗಿ ರೂಪುಗೊಂಡ ಸಾಹಿತ್ಯ ಕೃತಿಯೆ ಗುಂಡಬ್ರಹ್ಮಯ್ಯಗಳ ಸಾಹಿತ್ಯವಾಗಿದೆ.

ಮಧ್ಯಕಾಲೀನ ಕರ್ನಾಟಕದ ವೀರ ಪರಂಪರೆಯಲ್ಲಿ ಕುಮಾರರಾಮ, ಸಿರುಮನಾಯಕ, ಏಕಾಂತರಾಮಯ್ಯ, ಆದಯ್ಯ, ಮೊಲ್ಲೆಬೊಮ್ಮಯ್ಯರಂತೆ ಗುಂಡಬ್ರಹ್ಮಯ್ಯರು ಸಾಂಸ್ಕೃತಿಕ ವೀರರಾಗಿದ್ದಾರೆ. ಇವರು ತಮ್ಮ ವೀರವ್ರತ, ನ್ಯಾಯಪಾಲನೆ, ಉದಾರಮನಸ್ಸು, ಕಾಯಕನಿಷ್ಠೆ, ತತ್ವ-ಸಿದ್ಧಾಂತಗಳಿಂದ ಜನಮನ ಹೃದಯದಲ್ಲಿ ನೆಲೆಸಿದ್ದಾರೆ. ಆದ್ದರಿಂದ ಇಂದಿಗೂ ಆಚರಣಾತ್ಮಕ ನೆಲೆಗಳನ್ನು ಗುರುತಿಸಬಹುದಾಗಿದೆ. ಇವರು ಕ್ರಾಂತಿಕಾರಕ ಶಿವಭಕ್ತರಾಗಿದ್ದಾರೆ. ತಾವು ಕೊಟ್ಟ ಭಾಷೆಗಾಗಿ, ತೊಟ್ಟ ವ್ರತಕ್ಕಾಗಿ ಜೀವದ ಹಂಗನ್ನು ತೊರೆದವರು. ತಮ್ಮ ತತ್ವ-ಸಿದ್ಧಾಂತಗಳ ಪಾಲನೆಯೆ ಜೀವನದ ಪರಮ ಗುರಿ ಎಂದು ಭಾವಿಸಿದವರು. ಆದ್ದರಿಂದ ಶೂಲದ ಶಿಕ್ಷೆಗೆ ತಮ್ಮನ್ನು ತಾವು ಅರ್ಪಿಸಿಕೊಂಡರು. ಈ ಶಿಕ್ಷೆ ಕೊನೆಗೆ ಸುಖಾಂತಗೊಳ್ಳುತ್ತದೆ.

ಶರಣು ಹೋದವರನ್ನು ರಕ್ಷಿಸಲು ತಮ್ಮ ಬದುಕನ್ನೇ ಸಮರ್ಪಣ ಭಾವದಿಂದ ಕಂಡಿದ್ದಾರೆ. ಕಳ್ಳರನ್ನು ಯಾವುದೇ ಕಾರಣದಿಂದ ಬಿಟ್ಟುಕೊಟ್ಟು ತಾವು ಮಾತ್ರ ಸುಖದಿಂದ ಇರಬೇಕೆಂಬ ಹಂಬಲವುಳ್ಳವರಲ್ಲ. 'ಪರೋಪಕಾರಮಿದಂ ಶರೀರಂ' ಎಂಬ ತತ್ವವನ್ನು ಶಿರಸಾವಹಿಸಿ ಪಾಲಿಸುವರು. ಅದರ ಮೂಲಕವೆ ಇಹದ ಬದುಕು ಹಸನಾಗುತ್ತದೆಂಬ ಅಚಲ ನಂಬಿಕೆ ಉಳ್ಳವರಾಗಿದ್ದರು. ಸರ್ವಾಂತರ್ಯಾಮಿಯಾದ ಭಗವಂತನನ್ನು ಕಾಣಲು ಅವರು ತಮ್ಮ ದೈನಂದಿನ ಬದುಕಿನ ಪ್ರತಿಕ್ಷಣವನ್ನು ಮೀಸಲಿರಿಸಿದರು. ಅಂತರಂಗ ಶುದ್ಧಿಯಾದರೆ ಬಹಿರಂಗ ಶುದ್ಧಿಯ ಅಗತ್ಯವಿಲ್ಲವೆಂದವರು.

ಇಹದ ಬದುಕನ್ನು ಹಸನಾಗಿಸಲು ಹೊರಟಾಗ ಎದುರಾಗುವ ಸಂಕಷ್ಟಗಳನ್ನು ನಿವಾರಿಸಿಕೊಂಡು ಶೂನ್ಯಸಂಪಾದನೆಯನ್ನು ಸಾಧಿಸುವುದು ಅತಿಮುಖ್ಯವಾಗಿತ್ತು. ಇಹದ ಬದುಕು ಹಸನಾಗದ ಹೊರತು ಪರದ ಬದುಕು ನಮಗೆ ದೊರೆಯದು ಎಂದು ನಂಬಿದವರಾಗಿದ್ದರು. ನಮ್ಮ ಅಂತಃಸಾಕ್ಷಿ, ಅಂತಃಸತ್ವ ಕೊಲ್ಲುವ ಈ ಪ್ರಾಪಂಚಿಕ ವ್ಯವಹಾರಗಳೊಂದಿಗೆ ಇದ್ದೂ ಇಲ್ಲದಂತಿರುವ ಅಂತೆಯೆ ಅವುಗಳ ಜೊತೆಗೆ ಹೊಂದಾಣಿಕೆ, ಸಂಘರ್ಷ, ಸಾಮರಸ್ಯದ ಮೂಲಕ ಜೀವನ ನಡೆಸುವ ಶರಣ ಧರ್ಮವೇ ವ್ರತವೆಂದು ತಿಳಿದು ಜೀವಿಸಿದ್ದರು. ಇಂತಹ ವೀರಭಕ್ತರ ಚರಿತ್ರೆಯನ್ನು ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ವಿವರಿಸಲಾಗಿದೆ. ಯುಗಧರ್ಮದ ದೃಷ್ಟಿಯಿಂದ, ಮಾನವೀಯ ಮೌಲ್ಯಗಳಿಂದ ಶರಣರು ನಮ್ಮ ಬದುಕಿನಲ್ಲಿ ಪ್ರವೇಶ ಪಡೆಯುವರು. 'ಸ್ಥಾವರದಿಂದ ಜಂಗಮ'ಕ್ಕೆ ಸಾಗುವ ನಿಟ್ಟಿನಲ್ಲಿ ಇವರ ಶಿವನಿಷ್ಠೆ ಪ್ರಕಟಗೊಳ್ಳುತ್ತದೆ. ಆದ್ದರಿಂದ ಇವರ ಶಿಲ್ಪಗಳು ಆರಾಧನೆಯ ಪ್ರತೀಕವಾಗಿವೆ. ಗುಂಡಬ್ರಹ್ಮಯ್ಯರು ಚಾರಿತ್ರಿಕ ಶರಣರು ಅಷ್ಟೆ ಅಲ್ಲ, ಬದಲಾಗಿ ಕರ್ನಾಟಕ ಮತ್ತು ಆಂಧ್ರದ ಚಾರಿತ್ರಿಕ ವೀರಪುರುಷರಿಗೆ ಆರಾಧ್ಯ ದೈವವಾಗಿ ನಿಂತ ಮಹಾಪುರುಷರಾಗಿದ್ದಾರೆ. ಇವರಿಗೆ ಸಂಬಂಧಿಸಿರುವ ಶಿಲಾವಿಗ್ರಹ, ದೇವಸ್ಥಾನ, ಮಂಟಪಗಳು, ಕತೆ, ಕಥಾನಕಗಳು, ಸ್ಥಳ ಐತಿಹ್ಯಗಳಿಂದ ಸಾಂಸ್ಕೃತಿಕ ಮಹತ್ವವನ್ನು ಅರಿಯಲಾಗಿದೆ. ಈ ಹಿನ್ನೆಲೆಯಲ್ಲಿ ಗುಂಡಬ್ರಹ್ಮಯ್ಯಗಳ ಸಾಹಿತ್ಯವು ಮಹತ್ವದ ಆಕರ ಕೃತಿಯಾಗಿದೆ.

ವಿವಿಧ ಛಂದೋ ಪ್ರಕಾರಗಳಲ್ಲಿ ರಚನೆಯಾದ 'ಗುಂಡಬ್ರಹ್ಮಯ್ಯಗಳ ಸಾಹಿತ್ಯ' ಕೃತಿಯಲ್ಲಿ ಅಂದಿನ ಶರಣ ಧರ್ಮದ ಪರಿಭಾಷೆ ಮತ್ತು ಶರಣ ಸಂಸ್ಕೃತಿಯು ಸೊಗಸಾಗಿ ಪ್ರತಿಬಿಂಬಿತವಾಗಿದೆ. ಲಿಂಗ, ಜಂಗಮ, ಪಾದತೀರ್ಥ, ಪ್ರಸಾದ, ಶರಣ, ದಾಸೋಹ, ಈಶ್ವರಾರ್ಚನೆ, ಲಿಂಗಮಜ್ಜನ, ಎಡೆಮಾಡು, ಹಸ್ತಲಿಂಗ, ಬಯಲಾಗು ಈ ಶಬ್ದಗಳು ಶರಣ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಶರಣು ಬಂದವರನ್ನು ಕಾಯುವ, ಗುಂಡಬ್ರಹ್ಮಯ್ಯರ ವೀರಭಕ್ತಿ ರಸಪ್ರಧಾನವಾದ ಈ ಕೃತಿಯು ಕನ್ನಡ ಕಾವ್ಯದ ಆದರ್ಶವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ದಿದೆ. ಆದ್ದರಿಂದ ಪ್ರಸ್ತುತ ಮಹಾಪ್ರಬಂಧದಲ್ಲಿ ಗುಂಡಬ್ರಹ್ಮಯ್ಯರ ಕುರಿತಾಗಿ ಸಾಂಸ್ಕೃತಿಕ ಅಧ್ಯಯನ ಕೈಗೊಳ್ಳಲಾಗಿದೆ. ಇದರಿಂದ ವೈಚಾರಿಕತೆಯ ಹಿನ್ನಲೆಯಲ್ಲಿ ಇವರ ಮೌಲ್ಯವನ್ನು ಕಟ್ಟಿಕೊಡಲಾಗಿದೆ.

ಅಧ್ಯಯನದ ಉದ್ದೇಶ-ವ್ಯಾಪ್ತಿ

ಮಧ್ಯಕಾಲೀನ ಕರ್ನಾಟಕ ಸಾಂಸ್ಕೃತಿಕ ಅಧ್ಯಯನಕ್ಕೆ ಕೆಲವು ಕನ್ನಡ ಕಾವ್ಯಗಳ ಅಭ್ಯಾಸ ಜರೂರಾಗಿ ನಡೆಯಬೇಕಾಗಿದೆ. ಇದಕ್ಕೆ ಪ್ರಮುಖ ಕಾರಣ, ಇವು ದೇಶಿಯ ಪಠ್ಯಗಳಾಗಿರುವುದರಿಂದ ಸ್ಥಳೀಯ ಚರಿತ್ರೆಯನ್ನು ನಿರೂಪಿಸುತ್ತವೆ. ಆದ್ದರಿಂದ ಎಂ.ಎಂ.ಕಲ್ಬುರ್ಗಿಯವರು ಕುಮಾರರಾಮನ ಸಾಂಗತ್ಯವನ್ನು ವಿವರಿಸುವ ಸಂದರ್ಭದಲ್ಲಿ ಸ್ಥಳೀಯ ಚರಿತ್ರೆಯನ್ನು ಕಟ್ಟಿಕೊಡುವ ದೇಸಿ ಕಾವ್ಯಗಳು ಮಾರ್ಗ ಕಾವ್ಯಗಳಿಗಿಂತ ಶ್ರೇಷ್ಠವೆಂದು ಹೇಳಿದ್ದಾರೆ. ನಾಡಿನ ದೊಡ್ಡ ಸಾಮ್ರಾಜ್ಯದ ಇತಿಹಾಸವನ್ನು ಮಾತ್ರ ದಾಖಲಿಸುವ ನಾವು ಇಂಥ ಚಾರಿತ್ರಿಕ ಕಾವ್ಯಗಳನ್ನು ಉಪೇಕ್ಷೆ ಮಾಡಿದ್ದೇವೆ. ಈ ಕಾವ್ಯಗಳು ಇಂಥ ಅಧ್ಯಯನಕ್ಕೆ ಪ್ರಮುಖ ಆಕರಗಳಲ್ಲದೆ, ಕೆಲವೊಮ್ಮೆ ನಿಜ ಸಂಗತಿಗಳನ್ನು ತಮ್ಮ ಒಡಲಲ್ಲಿ ಇರಿಸಿಕೊಂಡಿರುತ್ತವೆ. ಹೀಗಾಗಿ ಚರಿತ್ರೆಯನ್ನು ಮುರಿದುಕಟ್ಟುವ ಹಿನ್ನಲೆಯಲ್ಲಿ ಇಂತಹ ಕಾವ್ಯಗಳ ಅಧ್ಯಯನ ಪ್ರಮುಖವಾಗಿ ನಡೆಯಬೇಕಾಗಿದೆ. ಇದಕ್ಕೆ 'ಗುಂಡಬ್ರಹ್ಮಯ್ಯಗಳ ಚರಿತ್ರೆ' ಹೊರತಲ್ಲ. ಆದ್ದರಿಂದ ಅಲಕ್ಷಿತ ಕಾವ್ಯವಾದ ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ಅಡಕವಾಗಿರುವ ಅನೇಕ ಉಪಯುಕ್ತ ಅಂಶಗಳನ್ನು ಹೊರ ತೆಗೆಯುವುದು ಈ ಮಹಾಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಕಲ್ಯಾಣ ಕ್ರಾಂತಿಯ ನಂತರ ಶರಣರನ್ನು ಮತ್ತು ಶರಣರ ಸಾಹಿತ್ಯವನ್ನು ಪೋಷಿಸಿದವರಲ್ಲಿ ಒರಂಗಲ್ಲಿನ ಅರಸರು ಮುಖ್ಯರಾಗಿದ್ದಾರೆ. ಅದರಲ್ಲಿ ಗಣಪತಿರಾಯನು ಪ್ರಮುಖನಾಗಿದ್ದಾನೆ. ಗುಂಡಬ್ರಹ್ಮಯ್ಯರು ಈತನ ಕಾಲಘಟ್ಟದಲ್ಲಿ ಶಿವಪಾರಮ್ಯವನ್ನು ಮೆರೆದರು. ಗಣಪತಿರಾಜನ ಅಹಂಕಾರವನ್ನು ತೊಲಗಿಸುವ ನಿಟ್ಟಿನಲ್ಲಿ ಗುಂಡಬ್ರಹ್ಮಯ್ಯರನ್ನು ಕಾಣಲಾಗಿದೆ. ಪ್ರಭುತ್ವದ ಸಂಕೇತವಾದ ಗಣಪತಿರಾಯನು ಶಿವನಿಷ್ಠೆಗೆ ಪ್ರೋತ್ಸಾಹ ನೀಡಿದನೊ ಅಥವಾ ಇಲ್ಲವೊ ಎಂಬುದು ಮತ್ತು ಶರಣರ ತತ್ವ-ಆದರ್ಶಗಳು ಆಂಧ್ರನಾಡಿನಲ್ಲಿ ಹೇಗೆ ಬಿತ್ತರವಾದವು? ಗಣಪತಿರಾಯನು ಆಸ್ಥಾನದ ಅರಮನೆಯಲ್ಲಿ ತನ್ನ ವಂಶಜರ ಚಿತ್ರಪಟಗಳನ್ನು ಅಥವಾ ಕ್ಷತ್ರಿಯ ಧರ್ಮದ ಚಿತ್ರಗಳನ್ನು ಹಾಕುವ ಬದಲಾಗಿ, ಕರ್ನಾಟಕ ಮಹಾಮನೆಯ ಶರಣರ ಚಿತ್ರಪಟಗಳನ್ನು ಏಕೆ ಅರಮನೆಯ ಗೋಡೆಗಳ ಮೇಲೆ ಹಾಕಲಾಯಿತು? ಇದಕ್ಕೆ ಮೂಲ ಕಾರಣವಾದರೂ ಏನು? ಎಂಬ ಕುತೂಹಲದ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

'ಗುಂಡಬ್ರಹ್ಮಯ್ಯಗಳ ಚರಿತ್ರೆ' ಮತ್ತು 'ಗುಂಡಬ್ರಹ್ಮಯ್ಯಗಳ ಸಾಹಿತ್ಯ'ವೆಂಬ ಸಂಪಾದಿತ ಕೃತಿಗಳು ಗುಂಡಬ್ರಹ್ಮಯ್ಯರನ್ನೆ ಕೇಂದ್ರವಾಗಿಟ್ಟುಕೊಂಡು ರಚನೆಯಾದ ಕಾವ್ಯಗಳು. ಇನ್ನುಳಿದಂತೆ ಕಾವ್ಯ-ಪುರಾಣಗಳಾದ ಶಿವತತ್ತ್ವ ಚಿಂತಾಮಣಿ, ಪದ್ಮರಾಜ ಪುರಾಣ, ಚನ್ನಬಸವಪುರಾಣ, ಮರಳುಸಿದ್ಧ ಕಾವ್ಯ, ಬಸವಪುರಾಣ, ಕುಮಾರರಾಮ ಚರಿತೆ ಮುಂತಾದ ಕಾವ್ಯಗಳಲ್ಲಿ ಗುಂಡಬ್ರಹ್ಮಯ್ಯಗಳನ್ನು ಸಂದರ್ಭದ ಹಿನ್ನಲೆಯಲ್ಲಿ ಉಲ್ಲೇಖಿಸಲಾಗಿದೆ. ಹೀಗೆ ಉಲ್ಲೇಖಿತ ಪಠ್ಯಗಳು ಪ್ರಾಸಂಗಿಕವಾಗಿ ಹೇಗೆ ಉಲ್ಲೇಖಿಸಿವೆ ಎಂಬುದನ್ನು ಮತ್ತು ಈ ಉಲ್ಲೇಖಗಳು ಇವರ ಶೈವನಿಷ್ಠೆ ಕತೆಗೆ ಹೇಗೆ ಪೂರಕವಾಗುತ್ತವೆ ಎಂಬುದನ್ನು ಹಾಗೂ

ಒಟ್ಟಾರೆ ಎಲ್ಲಾ ಉಲ್ಲೇಖಿತ ಕೃತಿಗಳು ಇವರ ಬಗ್ಗೆ ಹೇಗೆ ಪ್ರಸ್ತಾಪಿಸಿವೆ ಎನ್ನುವ ಕುರಿತು ಅಧ್ಯಯನ ಮಾಡುವುದು ಈ ಮಹಾಪ್ರಬಂಧದ ಉದ್ದೇಶವಾಗಿದೆ.

ಗುಂಡಬ್ರಹ್ಮಯ್ಯರನ್ನು ಸಾಹಿತ್ಯ ದೃಷ್ಟಿಯಿಂದ ಅಧ್ಯಯನ ಮಾಡುವುದು ಒಂದು ಭಾಗವಾದರೆ, ಶಿಲ್ಪಮಾಧ್ಯಮದ ಮೂಲಕ ಇವರ ಚರಿತ್ರೆಯನ್ನು ಅರಿಯುವುದು ಇನ್ನೊಂದು ಮಾರ್ಗವಾಗಿದೆ. ಇವುಗಳೆರಡು ಒಂದಕ್ಕೊಂದು ಪೂರಕವಾಗಿರುವುದು ವಿಶೇಷವಾಗಿದೆ. ಓದುವ ವರ್ಗಕ್ಕೂ ಮತ್ತು ಓದದೆ ಇರುವ ವರ್ಗಕ್ಕೂ ಇವರ ತತ್ತ್ವ-ಸಿದ್ಧಾಂತಗಳು ತಲುಪುವ ನಿಟ್ಟಿನಲ್ಲಿ ಶಿಲ್ಪ ಮಾಧ್ಯಮದ ಮೂಲಕ ಗುಂಡಬ್ರಹ್ಮಯ್ಯರ ಶಿಲ್ಪಗಳನ್ನು ಕೆತ್ತಲಾಗಿದೆ. ಮೂಲತಃ ಆಂಧ್ರನಾಡಿನ ಶರಣರಾದ ಗುಂಡಬ್ರಹ್ಮಯ್ಯರು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಹೇಗೆ ಪ್ರಚಾರ ಪಡೆದರು? ಶಿಲ್ಪಗಳ ಮೂಲಕ ಕರ್ನಾಟಕದ ಭಾಗಗಳಲ್ಲಿ ಏಕೆ ಕೆತ್ತನೆ ಮಾಡಲಾಯಿತು? ವೀರಭದ್ರ ದೇವಾಲಯದಲ್ಲಿ ಅಥವಾ ಈ ಗುಡಿಯ ಅಕ್ಕಪಕ್ಕದಲ್ಲಿ ಹೆಚ್ಚಾಗಿ ಏಕೆ ಶಿಲ್ಪಗಳು ಲಭ್ಯವಾಗಿವೆ? ಗುಂಡಬ್ರಹ್ಮಯ್ಯಗಳ ಶಿಲ್ಪಗಳ ಸ್ವರೂಪವೇನು? ಇವರನ್ನು ಶಿಲ್ಪದಲ್ಲಿ ಗುರುತಿಸುವುದು ಹೇಗೆ? ಎಂಬ ಮುಂತಾದ ಪ್ರಶ್ನೆಗಳು ಮಹತ್ವವಾಗಿವೆ. ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ನಿಟ್ಟಿನಲ್ಲಿ ಅಧ್ಯಯನ ಕೈಗೊಂಡಿರುವುದು ಇಲ್ಲಿನ ಮುಖ್ಯ ಉದ್ದೇಶವಾಗಿದೆ.

ಮಧ್ಯಕಾಲೀನ ಸಾಹಿತ್ಯದ ಸಂದರ್ಭದಲ್ಲಿ ಹರಿಹರನು ತನ್ನ ಹಟದಂತೆ ಶರಣರನ್ನು ಪುರಾಣೀಕೃತಗೊಳಿಸುವ ಕಾರ್ಯ ಕೈಗೊಂಡನು. ಇದರಿಂದ ಮುಂದೆ ಬಂದಂತಹ ಚಾಮರಸ, ಭೀಮಕವಿ ಮುಂತಾದ ವೀರಶೈವ ಕವಿಗಳು ಶರಣರನ್ನು ದೈವತ್ವದ ನೆಲೆಗೇರಿಸಿ ಕಾವ್ಯವನ್ನು ರಚನೆ ಮಾಡಿದರು. ಅಂದಿನ ಕಾವ್ಯಗಳಲ್ಲಿ 'ಗುಂಡಬ್ರಹ್ಮಯ್ಯರ ಚರಿತ್ರೆ'ಯೂ ಒಂದಾಗಿದೆ. ಆಗಿನ ಯುಗಧರ್ಮವನ್ನು ಅನುಸರಿಸಿದ ಈ ಕೃತಿಗೆ ಐತಿಹಾಸಿಕ, ಚಾರಿತ್ರಿಕ ಮಹತ್ವವಿದೆ. ಶರಣರನ್ನು ಈ ಕಾವ್ಯದಲ್ಲಿ ಹೇಗೆ ಬಿಂಬಿಸಲಾಗಿದೆ? ದೇಶಿಯ ಕಾವ್ಯವಾಗಿರುವುದರಿಂದ ಸಾಹಿತ್ಯದ ಮೂಲಕ ಹೇಗೆ ಚರಿತ್ರೆಯನ್ನು ಕಟ್ಟಿಕೊಡಲಾಗಿದೆ? ಇವರ ಕಥೆಯು ಅಂದಿನ ಸಂದರ್ಭದಲ್ಲಿ ಹೇಗೆ ಪ್ರಚುರಗೊಂಡಿತು? ಗುಂಡಬ್ರಹ್ಮಯ್ಯಗಳ ಮುಖ್ಯ ಆಶಯವೇನಾಗಿತ್ತು? ಇವರ ಆಶಯವು ರಾಜತ್ವದ ಮೂಲಕ ಹೇಗೆ ಬಿತ್ತರಗೊಂಡಿತು? ಆಗಿನ ಕಾಲದ ಶಿಕ್ಷಣ ಪದ್ಧತಿ, ಸಾಮಾಜಿಕ, ಆರ್ಥಿಕ, ರಾಜಕೀಯ ಜೀವನದ ವಿಧಾನಗಳನ್ನು ಅಧ್ಯಯನ ಮಾಡುವುದು ಮಹತ್ವವಾಗಿದೆ. ಆದ್ದರಿಂದ ಇವುಗಳ ಸ್ಥೂಲ ಅಧ್ಯಯನವೆ ಈ ಮಹಾಪ್ರಬಂಧದ ಉದ್ದೇಶವಾಗಿದೆ.

'ಗುಂಡಬ್ರಹ್ಮಯ್ಯಗಳ ಚರಿತ್ರೆ'ಯು ಸಾಹಿತ್ಯಿಕವಾಗಿ ಹೇಗೆ ಪ್ರಸ್ತುತವೆನಿಸುತ್ತದೆ? ಅಲಂಕಾರ, ರಸ, ವರ್ಣನೆ ಕಾವ್ಯದಲ್ಲಿ ಸಂದರ್ಭಕ್ಕನುಗುಣವಾಗಿ ಹೇಗೆ ನಿರೂಪಿತಗೊಂಡಿವೆ? ದೇಸಿ ಕಾವ್ಯವಾಗಿರುವುದರಿಂದ ಸಾಹಿತ್ಯದ ಮೂಲಕ ಚರಿತ್ರೆಯನ್ನು ಹೇಗೆ ಕಟ್ಟಿಕೊಡಲಾಗಿದೆ? ವಸ್ತು, ತಂತ್ರ ಮತ್ತು ಶೈಲಿಯನ್ನು ಕಾವ್ಯದಲ್ಲಿ ಹೇಗೆ ಅಭಿವ್ಯಕ್ತಿಗೊಳಿಸಲಾಗಿದೆ? ನುಡಿಗಟ್ಟು, ಗಾದೆ, ವೀರಶೈವ ಪಾರಿಭಾಷಿಕ ಪದಗಳು, ಆಗಿನ ರಾಣಿಯರ ಹೆಸರುಗಳ ವೈಶಿಷ್ಟ್ಯ, ಮೂಢನಂಬಿಕೆ, ಶಕುನಶಾಸ್ತ್ರವನ್ನು ನಂಬಿದ ಪರಿ, ಗಣಪತಿರಾಯನ

ಅರಮನೆಯ ಕಾವಲು, ಓರಂಗಲ್ಲಿನ ಕೋಟೆಯ ವರ್ಣನೆ, ರಾಣಿಯರ ವರ್ಣನೆ, ಒಂದೇ ವಸ್ತುವಿಷಯವನ್ನು ವಿವಿಧ ಕವಿಗಳು ವಿಭಿನ್ನ ಸಾಹಿತ್ಯ ಪ್ರಕಾರಗಳಲ್ಲಿ ವಿಶ್ಲೇಷಿಸಿದ ರೀತಿ ಈ ಎಲ್ಲಾ ಅಂಶಗಳನ್ನು ಚಿಕಿತ್ಸಕ ದೃಷ್ಟಿಯಿಂದ ಅಧ್ಯಯನ ಮಾಡುವುದು ಮಹತ್ವವಾಗಿದೆ.

ಗುಂಡಬ್ರಹ್ಮಯ್ಯರನ್ನು ಹರ-ನಾರದರು ಪರೀಕ್ಷೆ ಮಾಡುವ ಉದ್ದೇಶ, ಹರ-ನಾರದರನ್ನು ಇವರು ಕಾಪಾಡಿದ ರೀತಿ, ಕಳುವಿಗೆ ಬಂದಾಗ ಚಾಣಾಕ್ಷತೆಯನ್ನು ತೋರಿದ ಪರಿ, ಆತ್ಮದ ಸಂಕೇತವಾಗಿ ಗಿಳಿಯು ತನ್ನ ಒಡೆಯರಿಗೆ ತೋರಿಸುವ ನಿಷ್ಠೆ, ರಾಣಿಯಾದ ರಾಮಾಯಿಯ ಮತ್ತು ಗಣಪತಿರಾಯನ ಮುನಿಸು, ಅದನ್ನು ತೊಲಗಿಸುವ ನಿಟ್ಟಿನಲ್ಲಿ ನಾರದನ ಸಂಧಾನದ ಮಾತುಗಳು, ಗುಂಡಬ್ರಹ್ಮಯ್ಯರ ಆಚರಣಾತ್ಮಕ ನೆಲೆಗಳನ್ನು, ಇನ್ನು ಮುಂತಾದ ಅಂಶಗಳನ್ನು ಸಾಂಸ್ಕೃತಿಕವಾಗಿ ಅಧ್ಯಯನ ಮಾಡುವುದು ಮುಖ್ಯವಾಗಿದೆ. ಆದ್ದರಿಂದ ಗುಂಡಬ್ರಹ್ಮಯ್ಯಗಳ ಕಾವ್ಯವನ್ನು ವಿಶ್ಲೇಷಣಾತ್ಮಕ ಹಿನ್ನಲೆಯಲ್ಲಿ ಅಧ್ಯಯನ ಮಾಡುವುದು ಪ್ರಸ್ತುತ ಮಹಾಪ್ರಬಂಧದ ಪ್ರಮುಖ ಉದ್ದೇಶವಾಗಿದೆ. ಈ ಎಲ್ಲ ಉದ್ದೇಶಗಳ ಹಿನ್ನಲೆಯಲ್ಲಿ ಈ ಅಧ್ಯಯನ ಮಹತ್ವದ್ದಾಗಿದೆ.

ಅಧ್ಯಯನದ ವ್ಯಾಪ್ತಿ ಎಂದರೆ 'ಅಧ್ಯಯನದ ಚೌಕಟ್ಟು' ಎಂದರ್ಥ. ಒಂದು ಸೈದ್ಧಾಂತಿಕ ಅಧ್ಯಯನಕ್ಕೆ ನಿರ್ಧಿಷ್ಟವಾದ ಚೌಕಟ್ಟು ಬಹಳ ಮುಖ್ಯ. ನಿರ್ಧಿಷ್ಟವಾದ ಚೌಕಟ್ಟು ಇದ್ದಾಗ ಮಾತ್ರ ನಿಶ್ಚಿತವಾದ ಫಲಿತಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ. ಪ್ರಸ್ತುತ ಅಧ್ಯಯನವು ತನ್ನದೆ ಆದ ವ್ಯಾಪ್ತಿಯನ್ನು ಪಡೆದುಕೊಂಡಿದೆ. ಕ್ರಿ.ಶ.೧೨ ಮತ್ತು ೧೩ನೇ ಶತಮಾನದಲ್ಲಿ ಬದುಕಿದ್ದ ಗುಂಡಬ್ರಹ್ಮಯ್ಯರ ಕುರಿತಾದ ಅಧ್ಯಯನವು ಮುಖ್ಯ ತಿರುಳಾಗಿದೆ. ಈ ಮಹಾಪ್ರಬಂಧದ ಅಧ್ಯಯನದ ವ್ಯಾಪ್ತಿಯು ಇತರೆ ಕಾವ್ಯ-ಪುರಾಣಗಳಿಗೆ, ಶರಣರ ಶಿಲ್ಪಗಳಿಗೆ, ಐತಿಹಾಸಿಕ ಮತ್ತು ಚಾರಿತ್ರಿಕ ಅಂಶಗಳವರೆಗೆ ವಿಸ್ತಾರಗೊಂಡಿದೆ.

ಓರಂಗಲ್ಲಿನ ಅರಸುಮನೆತನ ಮತ್ತು ಶರಣ ಚಳುವಳಿಯ ಅಧ್ಯಯನ ಸಂದರ್ಭದಲ್ಲಿ ಆಂಧ್ರನಾಡಿನ ಕೆಲವು ಶರಣರನ್ನು ಮತ್ತು ವೀರಶೈವ ಕವಿಗಳನ್ನು ಒಳಪಡಿಸಿಕೊಳ್ಳಲಾಗಿದೆ. 'ಕಲ್ಯಾಣ ಕ್ರಾಂತಿ'ಯು ಇದೇ ಸಂದರ್ಭದಲ್ಲಿ ನಡೆದಿರುವುದರಿಂದ ವಚನಕಾರರ ಮುಂದಿನ ಧ್ಯೇಯ-ಧೋರಣೆಗಳು ಏನಾದವು ಎನ್ನುವ ನಿಟ್ಟಿನಲ್ಲಿ ಸಂಕ್ಷಿಪ್ತವಾಗಿ ಗಣಪತಿರಾಯನ ಅರಮನೆಯ ಸಂದರ್ಭಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಉಲ್ಲೇಖಿತ ಪಠ್ಯಗಳ ಅಧ್ಯಯನದ ಸಂದರ್ಭದಲ್ಲಿ ವಿವಿಧ ವೀರಶೈವ ಕಾವ್ಯ-ಪುರಾಣಗಳನ್ನು ಒಳಪಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಗುಂಡಬ್ರಹ್ಮಯ್ಯಗಳ ಶಿಲ್ಪಸಂಪತ್ತು ಅಧ್ಯಯನ ಸಂದರ್ಭದಲ್ಲಿ ಶಿಲ್ಪಗಳ ಮಹತ್ವ ಹಾಗೂ ವಿವಿಧ ವಿದ್ವಾಂಸರು ಪ್ರಕಟಿಸಿರುವ ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ಒಳಪಡಿಸಿಕೊಂಡು, ಶಿಲ್ಪಗಳ ಸ್ವರೂಪವನ್ನು ಹೇಳಲಾಗಿದೆ. ಮುಖ್ಯವಾಗಿ ಗುಂಡಬ್ರಹ್ಮಯ್ಯಗಳ ಸಾಹಿತ್ಯ ಅಧ್ಯಯನದ ಸಂದರ್ಭದಲ್ಲಿ 'ಗುಂಡಬ್ರಹ್ಮಯ್ಯಗಳ ಚರಿತ್ರೆ (ಸುವ್ವಿ) ಹಾಗೂ 'ಗುಂಡಬ್ರಹ್ಮಯ್ಯಗಳ ಸಾಹಿತ್ಯ' ಎಂಬ ಸಂಪಾದಿತ ಕಾವ್ಯಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

ಈ ಅಧ್ಯಯನವು ಕ್ಷೇತ್ರಕಾರ್ಯವನ್ನು ಒಳಗೊಂಡಿದೆ. ಆದ್ದರಿಂದ ಅಧ್ಯಯನದ ಅವಧಿಯಲ್ಲಿ ನೆರೆಯ ರಾಜ್ಯವಾದ ಆಂಧ್ರದ ಓರಂಗಲ್‌ಗೆ ಕ್ಷೇತ್ರಕಾರ್ಯ ಕೈಗೊಳ್ಳಲಾಯಿತು. ಕರ್ನಾಟಕದ ರಾಮನಗರ, ಚಿತ್ರದುರ್ಗ, ತುಮಕೂರು, ಧಾರವಾಡ ಮತ್ತು ಬಳ್ಳಾರಿ ಮುಂತಾದ ಜಿಲ್ಲೆಗಳಿಗೆ ತೆರಳಿ ವಕ್ತೃಗಳನ್ನು ಭೇಟಿ ಮಾಡಿ ಮಾಹಿತಿಯನ್ನು, ಗುಂಡಬ್ರಹ್ಮಯ್ಯರ ಶಿಲ್ಪಗಳ ಛಾಯಾಚಿತ್ರಗಳನ್ನು ಸಂಗ್ರಹಿಸಲಾಯಿತು.

ಅಧ್ಯಯನದ ವೈಧಾನಿಕತೆ

ಪ್ರಸ್ತುತ ಈ ಮಹಾಪ್ರಬಂಧದಲ್ಲಿ ಗುಂಡಬ್ರಹ್ಮಯ್ಯರನ್ನು ಅಧ್ಯಯನ ಮಾಡಿರುವ ವಿಧಾನ ವಿಶೇಷವಾಗಿದೆ. ಓರಂಗಲ್ಲಿನ ಅರಸುಮನೆತನಕ್ಕೂ ಮತ್ತು ಶರಣ ಚಳುವಳಿಗೂ ಇರುವ ಸಂಬಂಧವನ್ನು ಚಾರಿತ್ರಿಕ ಹಿನ್ನಲೆಯಲ್ಲಿ ಗುರುತಿಸುವ ಪ್ರಯತ್ನವು ಈ ಅಧ್ಯಯನದ ವಿಧಾನವಾಗಿದೆ. ಗುಂಡಬ್ರಹ್ಮಯ್ಯರ ಸಾಹಿತ್ಯ ಸಂಪತ್ತನ್ನು ಮತ್ತು ಉಲ್ಲೇಖಿತ ಪಠ್ಯಗಳನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ಚದುರಿದ ಮಾಹಿತಿಗಳನ್ನು ಒಂದು ಕೇಂದ್ರ ಚಿಂತನೆಯ ಅಡಿಯಲ್ಲಿ ಸಂಗ್ರಹಿಸುವುದು ಅವುಗಳಲ್ಲಿ ಶಿಥಿಲವಾದವುಗಳನ್ನು ಕೈಬಿಡುವುದು. ಇವುಗಳ ನಡುವೆ ಅಂತರ್ ಸಂಬಂಧವನ್ನು ನಿರೂಪಿಸುವುದು ಆ ಮೂಲಕ ಗುಂಡಬ್ರಹ್ಮಯ್ಯಗಳ ಸಾಹಿತ್ಯವನ್ನು, ಅವರ ಚರಿತ್ರೆಯನ್ನು ಕಟ್ಟಿಕೊಡುವ ವಿಧಾನವನ್ನು ಈ ಅಧ್ಯಯನವು ಒಳಗೊಂಡಿದೆ.

ಒಟ್ಟಾರೆ ಪ್ರಸ್ತುತ ಅಧ್ಯಯನವು ಸಾಂಸ್ಕೃತಿಕ ಅಧ್ಯಯನ ವಿಧಾನವನ್ನು ಅಳವಡಿಸಿಕೊಂಡಿದೆ. ಕಾರಣ ಗುಂಡಬ್ರಹ್ಮಯ್ಯರ ಬಗೆಗೆ ಪುರಾಣಗಳಿವೆ. ಇವುಗಳು ಚರಿತ್ರೆಯನ್ನು ಕಟ್ಟಿಕೊಡುತ್ತವೆ. ಜನಪದ ನಂಬಿಕೆ, ಕೆಲವು ಐತಿಹ್ಯಗಳೊಂದಿಗೆ ಆಚರಣೆ ಕ್ರಮದ ಜೊತೆಗೆ ಆರಾಧನಾ ಪರಂಪರೆ ಇದೆ. ಇವುಗಳೆಲ್ಲವುಗಳ ನಡುವೆ ಒಂದು ಅಂತರ್ ಸಂಬಂಧ ಇದೆ. ರಾಜಕೀಯವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಇವುಗಳೆಲ್ಲವನ್ನು ಒಳಗೊಂಡಂತೆ ಸಾಂಸ್ಕೃತಿಕ ಹಾಗೂ ಚಾರಿತ್ರಿಕವಾಗಿಯೂ ಗಮನ ಸೆಳೆಯುತ್ತಾರೆ. ಈ ಬಗೆಯ ಬಹುರೂಪಿ ಆಕರಗಳನ್ನು ವರ್ತಮಾನದ ಆಲೋಚನೆಯ ಮೂಲಕ ಶೋಧಿಸುವ, ಅರ್ಥೈಸುವ ಸಾಂಸ್ಕೃತಿಕ ಅಧ್ಯಯನದ ವಿಧಾನವನ್ನು ಈ ಸಂಶೋಧನೆಯು ಒಳಗೊಂಡಿದೆ. ಒಟ್ಟಾರೆ ಸಾಹಿತ್ಯಕ ವಿಶ್ಲೇಷಣೆಯನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಮಾಡಲಾಗಿದೆ. ಮೂಲ ಆಕರಗಳು ಮತ್ತು ಪೂರಕ ಆಕರಗಳಲ್ಲದೆ ಈ ಅಧ್ಯಯನ ಕ್ಷೇತ್ರಕಾರ್ಯವನ್ನು ಅವಲಂಬಿಸಿದೆ. ಆಂಧ್ರನಾಡಿನ ಓರಂಗಲ್ ಮತ್ತು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಮತ್ತು ಛಾಯಾಚಿತ್ರಗಳನ್ನು ಸಂಗ್ರಹಿಸಿ ಗುಂಡಬ್ರಹ್ಮಯ್ಯಗಳ ಸ್ಥಾಪಿತ ಸಿದ್ಧಾಂತವನ್ನು ಭಿನ್ನ ನೆಲೆಯಲ್ಲಿ ನಿರೂಪಿಸುವ, ವಿಸ್ತರಿಸುವ ಕಾರ್ಯವನ್ನು ಸಾಧ್ಯವಾದಷ್ಟು ಇಲ್ಲಿ ಪೂರೈಸಲಾಗಿದೆ. ಕೆಲವು ಸಂದರ್ಭಗಳಲ್ಲಿ ಗುಂಡಬ್ರಹ್ಮಯ್ಯಗಳ ಸಾಹಿತ್ಯದ ಬಗ್ಗೆ ಚರ್ಚಿಸುವಾಗ, ಅನಿವಾರ್ಯವೆಂಬಂತೆ ಕೆಲವು ವಿಷಯಗಳು ಸಂದರ್ಭೋಚಿತವಾಗಿ ಪುನರ್ ಚರ್ಚಿಸಲಾಗಿದೆ ಎಂಬಂತೆ ಮೇಲ್ನೋಟಕ್ಕೆ ಕಂಡರೂ, ಆ ಎಲ್ಲಾ ಚರ್ಚೆಗಳು ಕೂಡ ಆಯಾ ಭಾಗಗಳ ಅಥವಾ ಚಿಂತನೆಯ ಭಿನ್ನತೆಯನ್ನು ಸೂಚಿಸುವ ಅಂಶವೇ ಆಗಿವೆ. ಹೀಗೆ ಗುಂಡಬ್ರಹ್ಮಯ್ಯಗಳ ಸಾಹಿತ್ಯ ಕೃತಿಯನ್ನು ಸಾಂಸ್ಕೃತಿಕ ನೆಲೆಯಲ್ಲಿ ಅಧ್ಯಯನ ಮಾಡಿರುವ ವಿಧಾನವನ್ನು ಈ ಸಂಶೋಧನೆಯಲ್ಲಿ ಕಾಣಬಹುದು.

ಅಧ್ಯಯನದ ಸ್ವರೂಪ

ಅಧ್ಯಯನದ ದೃಷ್ಟಿಯಿಂದ ಪ್ರಸ್ತುತ ಈ ಮಹಾಪ್ರಬಂಧವು ಒಟ್ಟು ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಮುಖ್ಯವಾಗಿ ಏಳು ಅಧ್ಯಾಯಗಳು ಈ ಕೆಳಗಿನ ವಸ್ತು ವಿಷಯಗಳನ್ನು ಹೊಂದಿರುತ್ತವೆ. ಅಧ್ಯಾಯ ಒಂದರಲ್ಲಿ ಒಟ್ಟಾರೆ ಮಹಾಪ್ರಬಂಧದ ತಾತ್ವಿಕ ನಿಲುವನ್ನು ಸ್ಥೂಲವಾಗಿ ವಿವರಿಸುತ್ತದೆ. ಇಲ್ಲಿ ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ, ಸ್ವರೂಪ, ವೈಧಾನಿಕತೆ, ಸಮೀಕ್ಷೆಯ ಕುರಿತಾಗಿದೆ. ಒಟ್ಟು ಸಂಶೋಧನೆಗೆ ಒಂದು ವಿಮರ್ಶಾತ್ಮಕ ಪ್ರವೇಶವನ್ನು ಒದಗಿಸಿಕೊಡುತ್ತದೆ.

ಅಧ್ಯಾಯ ಎರಡರಲ್ಲಿ ಗುಂಡಬ್ರಹ್ಮಯ್ಯಗಳ ಉಲ್ಲೇಖಗಳನ್ನು ಒಳಗೊಂಡಿರುವ ವೀರಶೈವ ಕೃತಿಗಳಾದ ಶಿವತತ್ತ್ವ ಚಿಂತಾಮಣಿ, ಪದ್ಮರಾಜ ಪುರಾಣ, ಚನ್ನಬಸವಪುರಾಣ, ಮರಳಸಿದ್ಧ ಕಾವ್ಯ, ಬಸವಪುರಾಣ, ಗುಂಡಬಸವೇಶ್ವರ ಚರಿತ್ರೆ, ಕುಮಾರರಾಮ ಚರಿತೆ, ವೀರಶೈವಾಮೃತ ಪುರಾಣ, ಗುರುರಾಜ ಚಾರಿತ್ರ, ಸಾನಂದ ಚರಿತೆ, ಗಣಸಹಸ್ರ ನಾಮಾವಳಿ, ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ, ಬಸವೇಶ್ವರ ವಚನ ಕಥಾಸಾರ, ಗುರುರಾಜ ಚಾರಿತ್ರ, ಪಾಲ್ಕುರಿಕೆ ಸೋಮೇಶ್ವರ ಪುರಾಣ, ಸ್ವರವಚನ ಸಂಚಯ, ಜನಪದ ಶರಣ ಕಾವ್ಯಗಳು ಮುಂತಾದ ಒಟ್ಟು ಹದಿನೆಂಟು ಕಾವ್ಯ-ಪುರಾಣಗಳಲ್ಲಿ ಗುಂಡಬ್ರಹ್ಮಯ್ಯರನ್ನು ಉಲ್ಲೇಖಿಸಿರುವುದನ್ನು ವಿಶ್ಲೇಷಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಓರಂಗಲ್ಲಿನ ಕಾಕತೀಯರು ಮತ್ತು ಅಲ್ಲಿಯ ಶರಣ ಚಳುವಳಿಯನ್ನು ವಿವರಿಸಲಾಗಿದೆ. ಆಂಧ್ರನಾಡಿನ ವೀರಶೈವ ಕವಿಗಳನ್ನು ಹಾಗೂ ಶಿವಶರಣರನ್ನು ಪ್ರಸ್ತಾಪಿಸಲಾಗಿದೆ. ಪಂಡಿತತ್ರಯರೆಂದು ಹೆಸರು ಪಡೆದ ಶಿವಲೆಂಕ ಮಂಚಣ್ಣ, ಶ್ರೀಪತಿ ಪಂಡಿತ, ಮಲ್ಲಿಕಾರ್ಜುನ ಪಂಡಿತರನ್ನು ವಿಶ್ಲೇಷಿಸಲಾಗಿದೆ. ಪಾಲ್ಕುರಿಗೆ ಸೋಮನಾಥ, ಕದಿರೆ ರೇಮಯ್ಯ, ದೇವನಾಯಕ, ಬಸವಾಭಕ್ತ, ವೈಜಕವ್ವೆ ಚೊಳ್ಳಿಯಕ್ಕ, ಕಾಚಿರಾಜಯ್ಯ, ಓದಿಸುವ ಮಡಿವಾಳ, ಗೋವಿಂದ ಹೆಗ್ಗಡೆ, ಶ್ರೀಶೈಲಮುನಿ ಮುಂತಾದ ಶಿವಶರಣರನ್ನು ಮತ್ತು ವೀರಶೈವ ಕವಿಗಳ ಬಗ್ಗೆ ಈ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿದೆ. ನಂತರ ಓರಂಗಲ್ಲಿನ ಅರಮನೆಯಲ್ಲಿರುವ ಕರ್ನಾಟಕದ ಮಹಾಮನೆಯ ಶರಣರ ಚಿತ್ರಪಟಗಳ ಬಗ್ಗೆ ಗಮನಿಸಲಾಗಿದೆ. ಮುಖ್ಯವಾಗಿ ಗಿರಿಜೆ, ಗಂಗೆ, ಸತ್ಯಕ್ಕ, ನುಲಿಯ ಚಂದಯ್ಯ, ಮಡಿವಾಳ ಮಾಚಯ್ಯ, ಅಮ್ಮವ್ವೆ, ಹೇರೂರ ಹೆಂಗಸು, ಸಿರಿಯಾಳ, ಕಣ್ಣಪ್ಪ, ಹೆಂಡದ ಮಾರಯ್ಯ, ಸಿಂಧು ಬಲ್ಲಾಳ ಮುಂತಾದ ಶಿವನಿಷ್ಠೆಯನ್ನುಳ್ಳ ಶರಣರ ಚಿತ್ರಪಟದ ಮೂಲಕ ಗಣಪತಿರಾಯನ ಶಿವನಿಷ್ಠೆಯನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಗುಂಡಬ್ರಹ್ಮಯ್ಯಗಳ ಸಾಹಿತ್ಯ ವಿಶ್ಲೇಷಣೆ ಮಾಡಲಾಗಿದೆ. ಮಧ್ಯಕಾಲೀನ ಕಾವ್ಯದ ಲಕ್ಷಣಗಳು ಈ ಕಾವ್ಯದಲ್ಲಿ ದಟ್ಟವಾಗಿ ಕಂಡುಬರುತ್ತವೆ. ಕಥೆಯ ವಸ್ತು, ತಂತ್ರ ಮತ್ತು ಶೈಲಿಯ ದೃಷ್ಟಿಯಿಂದ ಹರಿಹರನ ಕಥನ ತಂತ್ರದ ಮಾದರಿಯೊಂದನ್ನು ಅನುಸರಿಸಲಾಗಿದೆ. ಈ ಕಾರಣದಿಂದ ಮಧ್ಯಕಾಲೀನ ಸಾಹಿತ್ಯದ ಮಾದರಿಯೊಂದು ನಮಗೆ ಲಭ್ಯವಾಗಿದೆ. ವಸ್ತು-ತಂತ್ರ-ಶೈಲಿಯಿಂದ ಈ ಕೃತಿ ತುಂಬ ಸ್ವಾರಸ್ಯ ಪಡೆದಿರುವುದನ್ನು ವಿಶ್ಲೇಷಣೆ ಮಾಡಲಾಗಿದೆ. ಸಂಕ್ಷಿಪ್ತವಾಗಿ ಗುಂಡಬ್ರಹ್ಮಯ್ಯಗಳ

ಸಾಹಿತ್ಯದ ಕಥೆಯನ್ನು ಘಟನೆಗಳ ಹಿನ್ನೆಲೆಯಲ್ಲಿ ಐದು ಭಾಗಗಳನ್ನು ಮಾಡಿಕೊಂಡು ಈ ಕಥೆಯನ್ನು ನಿರೂಪಿಸಲಾಗಿದೆ. ಜೊತೆಗೆ 'ಮೊರೆಹೊಕ್ಕವರನ್ನು ಕಾಯ್ವೆ'ಯೆಂಬ ವೀರವ್ರತದ ಪ್ರಸ್ತುತತೆಯನ್ನು ವಿವರಿಸಲಾಗಿದೆ. ಈ ಮೂಲಕ ಶರಣರ ತತ್ವ-ಆದರ್ಶ ಮತ್ತು ಸಿದ್ಧಾಂತಗಳನ್ನು ವೈಚಾರಿಕ ನೆಲೆಯಲ್ಲಿ ವಿಮರ್ಶಾತ್ಮಕವಾಗಿ ಪ್ರಸ್ತುತ ಅಧ್ಯಾಯದಲ್ಲಿ ವಿವರಿಸಲಾಗಿದೆ. ಗುಂಡಬ್ರಹ್ಮಯ್ಯಗಳ ಸಾಹಿತ್ಯ ಪ್ರಕಾರಗಳಾದ ತ್ರಿಪದಿ, ಸಾಂಗತ್ಯ, ನಾಂದ್ಯ-ಸ್ತೋತ್ರ, ಚೌಪದಿ, ಗದ್ಯ ಮುಂತಾದ ಸಾಹಿತ್ಯ ಪ್ರಕಾರಗಳನ್ನು ಈ ಅಧ್ಯಾಯದಲ್ಲಿ ಗಮನಿಸಲಾಗಿದೆ. ಕಾವ್ಯದಲ್ಲಿ ಸಂದರ್ಭಾನುಸಾರಿಯಾಗಿ ಬರುವ ವರ್ಣನೆ, ರಸ, ಅಲಂಕಾರ, ನುಡಿಗಟ್ಟು, ಶಕುನಶಾಸ್ತ್ರ, ಗಿಳಿಯ ನೀತಿ ಮಾತುಗಳು, ಜನಪದ ಸೊಗಡು, ಮಧ್ಯಕಾಲೀನ ಸಂದರ್ಭದ ಭಾಷೆಯನ್ನು ಈ ಅಧ್ಯಾಯದಲ್ಲಿ ಗಮನಿಸಲಾಗಿದೆ. ಇದರ ಜೊತೆಗೆ ಕವಿಗಳ ಇತಿವೃತ್ತ, ಗುಂಡಬ್ರಹ್ಮಯ್ಯಗಳ ಇತಿವೃತ್ತವನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಒಟ್ಟಾರೆ ಈ ಅಧ್ಯಾಯದಲ್ಲಿ ಸಾಂಸ್ಕೃತಿಕವಾಗಿ ಗುಂಡಬ್ರಹ್ಮಯ್ಯರ ಸಾಹಿತ್ಯವನ್ನು ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ ಐದರಲ್ಲಿ ಗುಂಡಬ್ರಹ್ಮಯ್ಯಗಳ ಶಿಲ್ಪ ಸಂಪತ್ತನ್ನು ವಿಶ್ಲೇಷಿಸಲಾಗಿದೆ. ಈ ಅಧ್ಯಾಯಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಎರಡು ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ಸಂಶೋಧನೆ ಮಾಡಲಾಗಿದೆ. ಈ ಶಿಲ್ಪಗಳು ಚಿತ್ರದುರ್ಗ ಜಿಲ್ಲೆಯ ಸಿಂಗಾಪುರ ಮತ್ತು ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಸವಣದುರ್ಗದಲ್ಲಿ ಸಂಶೋಧನೆ ಮಾಡಲಾಗಿದ್ದು, ಇದರ ಜೊತೆಗೆ ಇತರ ಶಿಲ್ಪಗಳನ್ನು ವಿಶ್ಲೇಷಣೆ ಮಾಡಿರುವುದು ಈ ಅಧ್ಯಾಯದ ವಿಶೇಷವಾಗಿದೆ.

ಪ್ರಸ್ತುತ ಈ ಅಧ್ಯಾಯದ ಸಂದರ್ಭದಲ್ಲಿ ನೆರೆಯ ರಾಜ್ಯವಾದ ಆಂಧ್ರದ ಓರಂಗಲ್ಲಿಗೆ ಕ್ಷೇತ್ರಕಾರ್ಯ ಕೈಗೊಂಡು ಕಾಕತೀಯ ಅರಸರ ಬಗ್ಗೆ ಮಾಹಿತಿ ಪಡೆಯಲಾಯಿತು. ನಂತರ ಓರಂಗಲ್ಲಿನ ಪ್ರಾಚ್ಯವಸ್ತು ಸಂಗ್ರಾಲಯದಲ್ಲಿರುವ ಗುಂಡಬ್ರಹ್ಮಯ್ಯರ ಶಿಲ್ಪವನ್ನು ಮತ್ತು ಓರಂಗಲ್ಲಿನ ಕೋಟೆಯನ್ನು ಛಾಯಾಚಿತ್ರದ ಮೂಲಕ ಸೆರೆಹಿಡಿಯಲಾಯಿತು. ಈ ಮೂಲಕ ಕರ್ನಾಟಕ ಹಾಗೂ ಆಂಧ್ರನಾಡಿನ ಸಾಂಸ್ಕೃತಿಕ ಸಂಬಂಧವನ್ನು ವಿವರಿಸಲಾಗಿದೆ. ಕರ್ನಾಟಕದ ವಿವಿಧ ಪ್ರದೇಶಗಳಿಗೆ ಕ್ಷೇತ್ರಕಾರ್ಯ ಕೈಗೊಂಡು ಶಿಲ್ಪಗಳನ್ನು ಶೋಧಿಸಲಾಗಿದೆ. ಜೊತೆಗೆ ಈ ಹಿಂದೆ ವಿವಿಧ ವಿದ್ವಾಂಸರು ಗುರುತಿಸಿದ ಸ್ಥಳಗಳಿಗೆ ಹೋಗಿ ಶಿಲ್ಪಗಳ ಛಾಯಾಚಿತ್ರವನ್ನು ತೆಗೆಯಲಾಗಿದೆ. ಸಂಶೋಧಕರು ಸಂಶೋಧಿಸಿದ ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ಈ ಅಧ್ಯಾಯದಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಬುಕ್ಕಸಾಗರದಲ್ಲಿರುವ ಶಿಲ್ಪ, ಹೊಸದುರ್ಗದಲ್ಲಿರುವ ಶಿಲ್ಪ, ಚಿತ್ರದುರ್ಗದಲ್ಲಿರುವ ಶಿಲ್ಪ, ಗುಂಡೇನಹಳ್ಳಿಯಲ್ಲಿರುವ ಶಿಲ್ಪ, ಶಿವಮೊಗ್ಗದ ಕುಸ್ಕೂರಿನ ಶಿಲ್ಪ, ಬನವಾಸಿಯಲ್ಲಿರುವ ಶಿಲ್ಪ ಹೀಗೆ ಕರ್ನಾಟಕದಲ್ಲಿರುವ ಶಿಲ್ಪಗಳಲ್ಲಿ ಒಟ್ಟು ೨೫ ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಧ್ಯಾಯ ಆರರಲ್ಲಿ ಗುಂಡಬ್ರಹ್ಮಯ್ಯಗಳನ್ನು ಸಾಂಸ್ಕೃತಿಕ ಅನನ್ಯತೆಯ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಕುಮಾರರಾಮನ ಚರಿತ್ರೆಯಲ್ಲಿ ಬರುವ ಶೂಲದ ಹಬ್ಬಕ್ಕೂ ಗುಂಡಬ್ರಹ್ಮಯ್ಯಗಳ ಶೂಲದ ಹಬ್ಬಕ್ಕೂ

ಇರುವ ಸಾಂಸ್ಕೃತಿಕ ಸಂಬಂಧವನ್ನು ಈ ಅಧ್ಯಾಯದಲ್ಲಿ ಹೇಳಲಾಗಿದೆ. ಆಂಧ್ರನಾಡಿನ ಪ್ರದೇಶದಲ್ಲಿ ನಡೆದ 'ಶೂಲದ ಹಬ್ಬ'ವು ಕರ್ನಾಟಕದ ಭಾಗಗಳಲ್ಲಿ ಹೇಗೆ ಪ್ರಸಾರಗೊಂಡಿತೆಂಬುದನ್ನು, ಶೂಲಕ್ಕೇರಿದವರ ಕಥೆಗಳನ್ನು ಮತ್ತು ಮೊರೆಹೊಕ್ಕವರ ಕಾಯ್ದುವರನ್ನು, ವೀರಮೌಲ್ಯ ಪ್ರತಿಪಾದನೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಏಳರಲ್ಲಿ ಸಮಾರೋಪಗೊಳಿಸಲಾಗಿದೆ. ಇದರಲ್ಲಿ ಎಲ್ಲಾ ಅಧ್ಯಾಯಗಳನ್ನು ಸ್ಥೂಲವಾಗಿ ವಿವರಿಸಲಾಗಿದೆ. ನಂತರ ಸಂಶೋಧನೆಯಿಂದ ಕಂಡುಕೊಂಡ ಅಧ್ಯಯನದ ಫಲಿತಗಳನ್ನು ದಾಖಲಿಸಲಾಗಿದೆ. ಈ ರೀತಿ ಗುಂಡಬ್ರಹ್ಮಯ್ಯಗಳ ಸಂಶೋಧನೆಯ ಸ್ಥೂಲ ಸ್ವರೂಪವಾಗಿದೆ.

ಅಧ್ಯಯನದ ಸಮೀಕ್ಷೆ

ಡಾ.ವಿ.ಶಿವಾನಂದ ಅವರು ಸಂಪಾದಿಸಿದ 'ಗುಂಡಬ್ರಹ್ಮಯ್ಯಗಳ ಚರಿತ್ರೆ' (ಸುವ್ವಿ)ಯಲ್ಲಿ ಗುಂಡಬ್ರಹ್ಮಯ್ಯರ ಕುರಿತಾಗಿ ಕಥೆಯನ್ನು ಹೇಳಲಾಗಿದೆ. ತ್ರಿಪದಿಯ ಮೂಲಕ ಒಟ್ಟು ಮೂರು ಸಂಧಿಗಳಲ್ಲಿ ಈ ಕಾವ್ಯವನ್ನು ಸಂಪಾದಿಸಿದ್ದಾರೆ. ಜೊತೆಗೆ ಓರಂಗಲ್ಲಿನ ಕೋಟೆ, ಬನವಾಸಿ ಮಧುಕೇಶ್ವರದ ಶರಣರ ಶಿಲ್ಪ, ಗುಂಡೇನಹಳ್ಳಿಯ ಶಿಲ್ಪ, ಚಿಕ್ಕಮಗಳೂರು ಜಿಲ್ಲೆಯ ಆಣೆಗೆರೆಯಲ್ಲಿರುವ ಶೂಲಸ್ತಂಭದ ಚಿತ್ರಗಳನ್ನು ಪ್ರಕಟಿಸಿದ್ದಾರೆ. ಗುಂಡಬ್ರಹ್ಮಯ್ಯರ ಹೆಸರು, ಸ್ಥಳ, ಕಾಲ, ಗಣಪತಿರಾಯನ ಅವಧಿಯಲ್ಲಿ ವೀರಶೈವ ಧರ್ಮದ ಅಭ್ಯುದಯ, ಛಂದಸ್ಸು ಮುಂತಾದವುಗಳನ್ನು ಚರ್ಚಿಸಿದ್ದಾರೆ.

ಡಾ.ಕೆ.ರವೀಂದ್ರನಾಥ ಅವರು 'ಗುಂಡಬ್ರಹ್ಮಯ್ಯಗಳ ಸಾಹಿತ್ಯ' ಎಂಬ ಕೃತಿಯನ್ನು ಸಂಪಾದನೆ ಮಾಡಿದ್ದಾರೆ. ಈ ಕೃತಿಯಲ್ಲಿ ತ್ರಿಪದಿ, ಚೌಪದಿ, ಸಾಂಗತ್ಯ, ಗದ್ಯ, ಶರಣರಿಗೆ ಶರಣಾರ್ಥಿನಾಂದ್ಯ, ಘನಪತಿರಾಯನ ಕಥೆ ಹೀಗೆ ವಿವಿಧ ಸಾಹಿತ್ಯ ಪ್ರಕಾರಗಳನ್ನು ಸಂಪಾದನೆ ಮಾಡಲಾಗಿದೆ. ಭಿನ್ನ ಕವಿಗಳಿಂದ ಭಿನ್ನ ಸಾಹಿತ್ಯ ಪ್ರಕಾರಗಳಲ್ಲಿ ಒಂದೇ ಕಥೆಯನ್ನು ಪ್ರಸ್ತಾಪಿಸಿರುವುದು ಈ ಸಂಪಾದನಾ ಕೃತಿಯ ವಿಶೇಷವಾಗಿದೆ.

ಡಾ.ಪಿ.ಕೆ.ರಾಜಶೇಖರಪ್ಪ ಅವರು 'ಜನಪದ ಶರಣ ಕಾವ್ಯಗಳು' ಎಂಬ ಕೃತಿಯನ್ನು ಸಂಪಾದನೆ ಮಾಡಿರುವರು. ಈ ಕೃತಿಯಲ್ಲಿ ಸುಮಾರು ಇಪ್ಪತ್ತೆಂಟು ಶರಣರ ಕಥೆಯನ್ನು ಸಂಪಾದನೆ ಮಾಡಲಾಗಿದೆ. ಅದರಲ್ಲಿ 'ಗುಂಡು ಬ್ರಹ್ಮಯ್ಯ' ಎಂದು ಕಥೆಯನ್ನು ಸಂಪಾದನೆ ಮಾಡಿದ್ದಾರೆ. ಈ ಕಾವ್ಯದ ಸಂಪಾದನೆಯು ವಿಭಿನ್ನವಾಗಿದೆ. ಇಲ್ಲಿ ಭಾಷಿಕವಾಗಿ ಸಾಮಾನ್ಯ ಜನರ ಆಡುನುಡಿಯಲ್ಲಿ ಕಥೆಯನ್ನು ಹೇಳಿದ್ದಾರೆ. ಈ ಸಂಪಾದನೆಯಲ್ಲಿ ಒಟ್ಟು ಹದಿನಾರು ಸಂದುಗಳನ್ನಾಗಿ ಮಾಡಿಕೊಂಡು ಕಥೆಯನ್ನು ಪ್ರಸ್ತಾಪಿಸಲಾಗಿದೆ. ಘನಪತಿರಾಯ ಶಿವನಿಂದ ವರ ಪಡೆದ ಸಂದು, ಓರುಗಲ್ಲಿನಲ್ಲಿ ಕಾಳೆ ಮೊಳಗಿದ ಸಂದು, ಓರುಗಲ್ಲು ಕೋಟೆಗೆ ಕನ್ನಕ್ಕೆ ನಾರಯ್ಣ ಗುರುತಿಟ್ಟ ಸಂದು, ಕನ್ನಗತ್ತಿ ಮಾಡಿಸಿದ ಸಂದು ಹೀಗೆ ವಿವಿಧ ಸಂದುಗಳನ್ನಾಗಿ ಮಾಡಿಕೊಂಡು ಕಥೆಯನ್ನು ನಿರೂಪಿಸಲಾಗಿದೆ.

ಡಾ.ಕೆ.ರವೀಂದ್ರನಾಥ ಅವರು 'ಅಗ್ನಿದಿವ್ಯ' ಕೃತಿಯಲ್ಲಿ 'ಗುಂಡಬ್ರಹ್ಮಯ್ಯಗಳು: ಒಂದು ದಾಖಲೆ' ಎಂಬ ಲೇಖನವನ್ನು ಬರೆದಿರುವರು. ಇದರಲ್ಲಿ ದಾಖಲೆಯ ಸ್ವರೂಪ, ಗುಂಡಬ್ರಹ್ಮಯ್ಯಗಳ ಜನನ,

ಗುಂಡಬ್ರಹ್ಮಯ್ಯರ ಶಿಲ್ಪಗಳನ್ನು ಪ್ರಕಟಿಸಲಾಯಿತು. ಈ ಲೇಖನದಲ್ಲಿ ಎರಡು ಶಿಲ್ಪಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಲಾಗಿದೆ.

ಡಾ.ಎಂ.ಜಿ.ನಾಗರಾಜ್ ಮತ್ತು ಡಾ.ಪಿ.ವಿ.ಕೃಷ್ಣಮೂರ್ತಿಯವರು ಸಂಪಾದಿಸಿದ ಇತಿಹಾಸದರ್ಶನ ಸಂಪುಟ ೨೫/೨೦೧೦ರಲ್ಲಿ ಡಾ.ಸಿ.ಯು.ಮಂಜುನಾಥ ಅವರು 'ಶೂಲಬ್ರಹ್ಮಯ್ಯಗಳ ವಿಗ್ರಹ:ನವಶೋಧ' ಎಂಬ ಲೇಖನವನ್ನು ಪ್ರಕಟಿಸಿದ್ದಾರೆ. ಈ ಲೇಖನದಲ್ಲಿ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನ ಚಿಕ್ಕಜಾಜೂರಿನಿಂದ ಸುಮಾರು ೩ ಕಿಲೋಮೀಟರ್ ದೂರದಲ್ಲಿರುವ ಕಡೂರಿನ ಶಿಲ್ಪವನ್ನು ಪ್ರಕಟಿಸಿದ್ದಾರೆ.

ಎಸ್.ಎಸ್.ಮಹಂತೇಶ ಅವರು 'ಇತಿಹಾಸ ದರ್ಪಣ'ದಲ್ಲಿ 'ಹೊಸದುರ್ಗ ತಾಲೂಕಿನ ನವಶೋಧಿತ ಎರಡು ಶೂಲಬ್ರಹ್ಮ ಶಿಲ್ಪಗಳು' ಎಂಬ ಲೇಖನವನ್ನು ಬರೆದಿದ್ದಾರೆ. ಈ ಲೇಖನದಲ್ಲಿ ಕಲ್ಲೇದೇವರ ಕಟ್ಟೆಯ ಶಿಲ್ಪ, ದೊಡ್ಡತೇಕಲವಟ್ಟಿಯ ಶಿಲ್ಪಗಳನ್ನು ಶೋಧಿಸಿ ಚಿತ್ರಸಮೇತ ಪ್ರಕಟಿಸಿದ್ದಾರೆ. ಇದರ ಜೊತೆಗೆ ಆ ಶಿಲ್ಪಗಳ ಸ್ವರೂಪವನ್ನು ತಿಳಿಸಿದ್ದಾರೆ.

ಎಂ.ಜಿ.ನಾಗರಾಜ್ ಮತ್ತು ಡಾ.ಪಿ.ವಿ.ಕೃಷ್ಣಮೂರ್ತಿ ಅವರು ಸಂಪಾದಿಸಿದ 'ಇತಿಹಾಸದರ್ಶನ' ಸಂಪುಟ ೧೯/೨೦೦೪ರಲ್ಲಿ ಡಾ.ಚನ್ನಕ್ಕ ಪಾವಟೆಯವರು 'ಬೈಲುಹೊಂಗಲ ಪ್ರಾದೇಶಿಕ ಪ್ರಾಚ್ಯ ಸ್ಮಾರಕಗಳು' ಎಂಬ ಲೇಖನದಲ್ಲಿ ಮೂರ್ಕಿಭಾವಿಯ ವೀರಗಲ್ಲಿನಲ್ಲಿ ಗುಂಡಬ್ರಹ್ಮಯ್ಯರನ್ನು ಗುರುತಿಸಿ ಪ್ರಕಟಿಸಿದ್ದಾರೆ.

ಎಂ.ಎಂ.ಕಲಬುರ್ಗಿಯವರು 'ಶಾಸನ ವ್ಯಾಸಂಗ' ಸಂಪುಟ-೨ರಲ್ಲಿ 'ಗುಂಡಬ್ರಹ್ಮಯ್ಯಗಳ ವಿಗ್ರಹ' ಎಂಬ ಲೇಖನವನ್ನು ಪ್ರಕಟಿಸಿದ್ದಾರೆ. ಈ ಲೇಖನದಲ್ಲಿ ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ವಿಶ್ಲೇಷಣೆ ಮಾಡಿದರು. ಕಾವೇರಿ ಮತ್ತು ಚಿತ್ರದುರ್ಗದ ಶಿಲ್ಪಗಳನ್ನು ಶೋಧಿಸಿ ಈ ಲೇಖನವನ್ನು ಬರೆದರು.

ಚಿದಾನಂದ ಮೂರ್ತಿಯವರು ಜನ-ಜನಪದ-ಜಾನಪದದಲ್ಲಿ 'ಮತ್ತೆರಡು ಶೂಲಬ್ರಹ್ಮ ಶಿಲ್ಪಗಳು ಮತ್ತು ಶೂಲದ ಹಬ್ಬ' ಎಂಬ ಲೇಖನಗಳನ್ನು ಪ್ರಕಟಿಸಿದರು. ಮತ್ತೆರಡು ಶೂಲಬ್ರಹ್ಮ ಶಿಲ್ಪಗಳು ಎಂಬ ಲೇಖನದಲ್ಲಿ ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲೂಕಿನ ನೀತಿಗೆರೆಯ ಶಿಲ್ಪ ಮತ್ತು ಶಿವಮೊಗ್ಗದ ಕುಸ್ಕೂರಿನ ಶಿಲ್ಪಗಳನ್ನು ವಿವರಿಸಿದ್ದಾರೆ.

ಡಾ.ಎಂ.ಎಂ.ಕಲಬುರ್ಗಿ ಅವರು 'ಮಾರ್ಗ ಸಂಪುಟ-೨'ರಲ್ಲಿ ಮಧುಕೇಶ್ವರ ದೇವಾಲಯದ ಶರಣರ ವಿಗ್ರಹಗಳು, ಗುಂಡಬ್ರಹ್ಮಯ್ಯಗಳ ವಿಗ್ರಹ, ಚಿತ್ರದುರ್ಗದಲ್ಲಿರುವ ಗುಂಡಬ್ರಹ್ಮಯ್ಯಗಳ ವಿಗ್ರಹ ಎಂಬ ಲೇಖನಗಳನ್ನು ಬರೆದಿರುವರು. ಈ ಲೇಖನದಲ್ಲಿ ಶಿಲ್ಪಗಳ ವಿನ್ಯಾಸದ ದೃಷ್ಟಿಯಿಂದ ಗುಂಡೇನಹಳ್ಳಿ ಹಾವೇರಿಯವು ಒಂದು ವರ್ಗ, ಬನವಾಸಿಯದು ಒಂದು ವರ್ಗ, ಚಿತ್ರದುರ್ಗದ್ದು ಮತ್ತೊಂದು ವರ್ಗವೆಂದು ವಿಂಗಡಿಸಿದ್ದಾರೆ. ಒಟ್ಟಾರೆಯಾಗಿ ಸಮೀಕ್ಷೆಯನ್ನು ಗಮನಿಸುವುದಾದರೆ, ವೀರಶೈವ ಸಾಹಿತ್ಯ ಕೃತಿಗಳಲ್ಲಿ ಇವರ ಕುರಿತು ಚರ್ಚಿತವಾದ ಪ್ರಮುಖ ವಿಷಯವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಅಧ್ಯಾಯ-ಎರಡು

ಗುಂಡಬ್ರಹ್ಮಯ್ಯಗಳ ಉಲ್ಲೇಖಿತ ಕಾವ್ಯ ಸಾಹಿತ್ಯ

ಪ್ರಧಾನ ಸಾಹಿತ್ಯ
ಪ್ರಾಸಂಗಿಕ ಸಾಹಿತ್ಯ

ಅಧ್ಯಾಯ-ಎರಡು

ಗುಂಡಬ್ರಹ್ಮಯ್ಯಗಳ ಉಲ್ಲೇಖಿತ ಕಾವ್ಯ ಸಾಹಿತ್ಯ

ಕನ್ನಡ ನಾಡಿನ ಇತಿಹಾಸದಲ್ಲಿ ಅಪೂರ್ವವಾದ ಧಾರ್ಮಿಕ, ಸಾಮಾಜಿಕ, ರಾಜಕೀಯ ಹಾಗೂ ಸಾಹಿತ್ತಿಕ ವಲಯಗಳಲ್ಲಿ ಚಳುವಳಿ ನಡೆದ ಕಾಲಮಾನ ಹನ್ನೆರಡನೇ ಶತಮಾನ. ಈ ಅವಧಿಯಲ್ಲಿ ಬಸವಾದಿ ಶಿವಶರಣರು ಸಮಾಜದ ಪರಿವರ್ತನೆಗಾಗಿ ಅನೇಕ ಪ್ರಯತ್ನ ನಡೆಸಿದರು. ಇದರ ಫಲವಾಗಿ ಸಮಾಜೋಧಾರ್ಮಿಕ ಕ್ರಾಂತಿ ಸಂಭವಿಸಿತು. ಈ ಕ್ರಾಂತಿಯ ಪ್ರತೀಕವಾಗಿ ನಮಗೆ ಉಳಿದಿರುವ ಸೊತ್ತೆಂದರೆ ವಚನ ಸಾಹಿತ್ಯ. ಜನಸಾಮಾನ್ಯರಲ್ಲಿ ಮನೆಮಾಡಿಕೊಂಡಿದ್ದ ಮೂಢನಂಬಿಕೆ, ಜಾತಿವ್ಯವಸ್ಥೆ, ಧಾರ್ಮಿಕ ಶೋಷಣೆ, ದುರ್ವಿಚಾರಗಳನ್ನು ಬುಡಸಮೇತ ತೊಲಗಿಸಲಾಗದಿದ್ದರೂ ಅಲ್ಪ ಮಟ್ಟಿನ ಸುಧಾರಣೆಗಳನ್ನು ತಂದರು. ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಸರಳ, ಸುಂದರ, ಸ್ಪಷ್ಟವಾಗಿ ಆಗಿನ ಸಂದರ್ಭವನ್ನು ನುಡಿಯ ಮೂಲಕ ವಿವರಿಸಿದರು. ಇವುಗಳ ಸಂಕಲನ ಕಾರ್ಯ ಕೈಗೊಂಡ ಪರಿಣಾಮವಾಗಿ ವಚನ ಸಾಹಿತ್ಯ ರೂಪುಗೊಂಡಿತು.

ಅವುಗಳಲ್ಲಿ ಪ್ರತಿಭಟನಾತ್ಮಕ ಚಳುವಳಿಯ ಮೂಲಕ ವಿವಿಧ ನೆಲೆಗಳಲ್ಲಿ ಆಲೋಚನೆಗಳು ವ್ಯಕ್ತವಾಗಿವೆ. ಬದುಕನ್ನು ಹೊಸ ನೆಲೆಯೊಂದರಿಂದ ಅಥೈಸುವ ಮತ್ತು ಹೊಸ ಬದುಕನ್ನು ಕಟ್ಟುವ ಅದಮ್ಯ ಪ್ರಯತ್ನವನ್ನು ಶಿವಶರಣರು ಮಾಡಿದರು. ಕಾಯಕವನ್ನು ಪ್ರಥಮ ಬಾರಿಗೆ ಸೈದ್ಧಾಂತಿಕ ತಳಹದಿಯ ಮೇಲೆ ರೂಪಿಸಿದವರು ಶರಣರು. 'ಕಾಯಕವೇ ಕೈಲಾಸ'ವೆಂದು ತನುಮನವನ್ನು ತಲ್ಲೀನಗೊಳಿಸಿ ಶ್ರಮಿಸುವ ಪ್ರಾಮಾಣಿಕ ಕ್ರಿಯೆಯಾಗಿತ್ತು. ಶರಣರ ಇನ್ನೊಂದು ಬಹುಮುಖ್ಯ ಮೌಲ್ಯವೆಂದರೆ, ಸಮಾನತೆಯ ಪರಿಕಲ್ಪನೆ. ಬೌದ್ಧ, ಜೈನ, ವೈದಿಕ ಧರ್ಮಗಳು ವ್ಯಾಪಕವಾಗಿ ಹಬ್ಬಿದ್ದ ಕಾಲದಲ್ಲಿ ಅಸಮಾನತೆಯನ್ನು ಅಲ್ಲಗಳೆದ ಶರಣರು ಸರ್ವರಿಗೂ ಸಮಾನತೆಯ ಅವಕಾಶವನ್ನು ಭೂಮಿಕೆಯನ್ನಾಗಿಸಿದರು. ದಾಸೋಹ ಕಲ್ಪನೆ ನೀಡಿದ ಇವರು ನುಡಿದಂತೆ ನಡೆದು ಅನ್ಯರಿಗೆ ಮಾದರಿಯಾದರು. ಆದ್ದರಿಂದ ಹನ್ನೆರಡನೆ ಶತಮಾನವನ್ನು 'ಧಾರ್ಮಿಕ ಪರಂಪರೆಯ ಸುವರ್ಣಯುಗ' ಎಂದರೆ ಅತಿಶಯೋಕ್ತಿಯಾಗದು.

ಈ ಹಿಂದೆ, ಪ್ರಸ್ತಾಪಿಸಿದಂತೆ 'ಕಲ್ಯಾಣ ಕ್ರಾಂತಿ'ಯಿಂದ ಕೆಲಕಾಲ ಕನ್ನಡ ನಾಡಿನ ಶರಣ ಸಾಹಿತ್ಯವು ಅಜ್ಞಾತವಾಸ ಅನುಭವಿಸಿತು. ನಂತರ ಶರಣರನ್ನು, ಶರಣ ಸಾಹಿತ್ಯ ನಿಕ್ಷೇಪವನ್ನು ಸಂರಕ್ಷಿಸಿ ಸಂಕಲಿಸುವ ಗುರುತರವಾದ ಜವಬ್ದಾರಿಯನ್ನು ನಾಡಿನ ಕೆಲವು ಅರಮನೆ, ಗುರುಮನೆಗಳು ಹೊತ್ತುಕೊಂಡವು. ಇದರಿಂದ

ಕಳೆದು ಹೋದ ಕೆಲವು ಮಹತ್ವದ ಕಾವ್ಯಗಳು ನಮಗೆ ದೊರೆಯುತ್ತವೆ. ಅವುಗಳಲ್ಲಿ ''ಗುಂಡಬ್ರಹ್ಮಯ್ಯಗಳ ಚರಿತ್ರೆ'ಯೂ ಒಂದಾಗಿದೆ. ಓರಂಗಲ್ಲಿನ ಕಾಕತೀಯರು, ವಿಜಯನಗರದ ಅರಸರು, ನೂರಾರು ವೀರಶೈವ ಮಠ-ಮಾನ್ಯಗಳ ತ್ರೀವ್ರ ಕಾಳಜಿಯಿಂದಾಗಿ ವೀರಶೈವ ಧರ್ಮ, ಸಾಹಿತ್ಯ ಮತ್ತು ಸಂಸ್ಕೃತಿಯ ಕೆಲವು ಮಹತ್ವದ ದಾಖಲೆಗಳು ದೊರೆಯುವಂತಾಗಿವೆ. ಅವುಗಳಲ್ಲಿ 'ಗುಂಡಬ್ರಹ್ಮಯ್ಯಗಳ ಚರಿತ್ರೆ'ಯು ಪ್ರಮುಖವಾಗಿದೆ. ಗುಂಡಬ್ರಹ್ಮಯ್ಯರ ಉಲ್ಲೇಖಿತ ಕಾವ್ಯ ಸಾಹಿತ್ಯವನ್ನು ಎರಡು ಭಾಗಗಳಲ್ಲಿ ಅಧ್ಯಯನ ಮಾಡಬಹುದು. ಪ್ರಧಾನ ಸಾಹಿತ್ಯ, ಪ್ರಾಸಂಗಿಕ ಸಾಹಿತ್ಯದ ಮೂಲಕ ಗುಂಡಬ್ರಹ್ಮಯ್ಯಗಳನ್ನು ಉಲ್ಲೇಖಿಸಲಾಗಿದೆ.

ಪ್ರಧಾನ ಸಾಹಿತ್ಯ

ಕರ್ನಾಟದಲ್ಲಿ ಗುಂಡಬ್ರಹ್ಮಯ್ಯರ ಚರಿತ್ರೆಯನ್ನು ಮೊದಲು ಸಂಪಾದಿಸಿಕೊಟ್ಟವರು ವಿ.ಶಿವಾನಂದ ಅವರು. 'ಗುಂಡಬ್ರಹ್ಮಯ್ಯಗಳ ಚರಿತ್ರೆ' ಎಂಬ ಸಂಪಾದಿತ ಕೃತಿಯನ್ನು ೧೯೭೪ರಲ್ಲಿ ಪ್ರಕಟಿಸಿದರು. ಸಾಂಗತ್ಯದಲ್ಲಿ ಈ ಕೃತಿಯನ್ನು ಸಂಪಾದನೆ ಮಾಡಿದರು. ಒಟ್ಟು ಮೂರು ಸಂಧಿಗಳಲ್ಲಿ ಗುಂಡಬ್ರಹ್ಮಯ್ಯಗಳ ಚರಿತ್ರೆಯನ್ನು ಸಂಪಾದಿಸಲಾಗಿದೆ. ನಂತರ ಇವರ ಶಿಲ್ಪಗಳ ಕುರಿತಾದ ಅನೇಕ ಲೇಖನಗಳನ್ನು ವಿದ್ವಾಂಸರು ಪ್ರಕಟಿಸಿದರು. ಆದರೆ ಗುಂಡಬ್ರಹ್ಮಯ್ಯರೆಂಬ ಶಿವಭಕ್ತರ ಸಮಗ್ರ ಸಾಹಿತ್ಯದ ಕಡೆಗೆ ಯಾರೂ ಗಮನಹರಿಸಲಿಲ್ಲ.

ಅನಂತರ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರವಾಚಕರಾದ ಡಾ.ಕೆ.ರವೀಂದ್ರನಾಥ ಅವರು ೧೯೯೯ರಲ್ಲಿ ಹರಪನಹಳ್ಳಿಯಲ್ಲಿ ಸಮಾವೇಶಗೊಂಡಿದ್ದ ಕರ್ನಾಟಕ ಇತಿಹಾಸ ಅಕಾಡೆಮಿಯಲ್ಲಿ ಪ್ರಬಂಧವನ್ನು ಮಂಡಿಸಿದರು. ನಂತರ ಗುಂಡಬ್ರಹ್ಮಯ್ಯಗಳ ಸಮಗ್ರ ಸಾಹಿತ್ಯವನ್ನು ಒಂದೆಡೆಗೆ ಕೂಡಿಹಾಕಬೇಕೆಂಬ ಉದ್ದೇಶದಿಂದ ನಾಡಿನ ಹಸ್ತಪ್ರತಿ ಭಂಡಾರಗಳನ್ನು ಸಂಪರ್ಕಿಸಿದರು. ಹೀಗೆ ಸತತ ಪರಿಶ್ರಮದ ಫಲವಾಗಿ ೨೦೦೬ರಲ್ಲಿ ಗುಂಡಬ್ರಹ್ಮಯ್ಯಗಳ ಕುರಿತಾದ 'ಗುಂಡಬ್ರಹ್ಮಯ್ಯಗಳ ಸಾಹಿತ್ಯ' ಎಂಬ ಸಮಗ್ರ ಕಾವ್ಯವನ್ನು ಸಂಪಾದಿಸಿದರು. ವಿವಿಧ ಸಾಹಿತ್ಯ ಪ್ರಕಾರಗಳಾದ ಸಾಂಗತ್ಯ, ಚೌಪದಿ, ತ್ರಿಪದಿ, ನಾಂದ್ಯ, ಕಥೆ, ಗದ್ಯ ಪ್ರಕಾರಗಳಲ್ಲಿ ಸಂಪಾದಿಸಿದರು. ಸುಮಾರು ೪೭೬ ಪುಟಗಳಲ್ಲಿ 'ಗುಂಡಬ್ರಹ್ಮಯ್ಯಗಳ ಸಾಹಿತ್ಯ'ವನ್ನು ಪ್ರಕಟಿಸಿದರು. ಇದರಿಂದ ಇವರ ಕುರಿತಾಗಿ ಸಮಗ್ರ ಸಾಹಿತ್ಯವು ನಮಗೆ ಲಭ್ಯವಾಯಿತು. ಗುಂಡಬ್ರಹ್ಮಯ್ಯಗಳ ಚರಿತ್ರೆ ಮತ್ತು ಗುಂಡಬ್ರಹ್ಮಯ್ಯಗಳ ಸಾಹಿತ್ಯ ಕೃತಿಗಳು ಪ್ರಧಾನವಾಗಿ ವಿವರಿಸುತ್ತವೆ. ಈ ಹಿನ್ನಲೆಯಲ್ಲಿ ಈ ಎರಡೂ ಕೃತಿಗಳು ಪ್ರಧಾನ ಕೃತಿಗಳಾಗಿವೆ.

ಪ್ರಾಸಂಗಿಕ ಸಾಹಿತ್ಯ

ಈ ಕೆಳಕೆಂಡ ಕಾವ್ಯ ಪುರಾಣಗಳ ಮೂಲಕ ಗುಂಡಬ್ರಹ್ಮಯ್ಯಗಳನ್ನು ಸಂದರ್ಭಾನುಸಾರವಾಗಿ ಉಲ್ಲೇಖಿಸಲಾಗಿದೆ.

ಶಿವತತ್ತ್ವ ಚಿಂತಾಮಣಿ   ಬಸವೇಶ್ವರ ವಚನ ಕಥಾಸಾರ

ಪದ್ಮರಾಜ ಪುರಾಣ	ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ
ಚನ್ನಬಸವ ಪುರಾಣ	ವೀರಶೈವಾಮೃತ ಪುರಾಣ
ಮರುಳಸಿದ್ಧ ಕಾವ್ಯ	ಕುಮಾರರಾಮನ ಚರಿತೆ
ಸಾನಂದ ಚರಿತ್ರೆ	ನಂದಿಯಾಗಮಲೀಲೆ
ಬಸವ ಪುರಾಣ	ಜನಪದ ಶರಣಕಾವ್ಯಗಳು
ಗಣಸಹಸ್ರ ನಾಮಾವಳಿ	ಸ್ವರವಚನ ಸಂಚಯ
ಗುಂಡ ಬಸವೇಶ್ವರ ಚರಿತ್ರೆ	

ಶಿವತತ್ತ್ವ ಚಿಂತಾಮಣಿ

ಲಕ್ಕಣ್ಣ ದಂಡೇಶನು ವಿರಚಿಸಿದ 'ಶಿವತತ್ತ್ವ ಚಿಂತಾಮಣಿ' ಯು ಸಂಶೋಧಕರಿಗೆ, ವೀರಶೈವ ಸಿದ್ಧಾಂತ ಅರಿಯುವವರಿಗೆ ಪ್ರಮುಖ ಆಕರ ಗ್ರಂಥವಾಗಿದೆ. ಈ ಕೃತಿಯಲ್ಲಿ "ಈ ಕಲಿಯುಗದೊಳತಿ ಪೌಢಮತಿ ದೇವರಾಜೇಂದ್ರನ ಮಹಾಪ್ರಧಾನಂ ಲೋಕೈಕ ಬಂಧು ಲಕ್ಕಣ್ಣ ದಂಡೇಶ್ವರಂ"[೧] ಎಂದು ಮೊದಲಾಗಿ ಹೇಳಿಕೊಂಡಿರುವುದರಿಂದ ಪ್ರೌಢದೇವರಾಯನ ಬಳಿ ಮುಖ್ಯಮಂತ್ರಿ ಆಗಿದ್ದರೆಂದು ತಿಳಿಯುತ್ತದೆ. ಈ ರಾಜನ ಕಾಲ ಕ್ರಿ. ಶ. ೧೪೧೬-೧೪೪೬ ಎಂದು ತಿಳಿಯಲಾಗಿದೆ. ಆದ್ದರಿಂದ ಈ ಕೃತಿಯು ಕ್ರಿ.ಶ.೧೪೫೦ ರ ಸುಮಾರಿನಲ್ಲಿ ರಚನೆಯಾಗಿರಬೇಕೆಂದು ತಿಳಿಯಲಾಗಿದೆ. ಈ ಕೃತಿಯ ಹೆಸರು ಅತ್ಯಂತ ಔಚಿತ್ಯಪೂರ್ಣವಾಗಿದೆ. 'ಚಿಂತಾಮಣಿ' ಎಂದರೆ ಚಿಂತಿಸಿದವರಿಗೆ ಬೇಡಿದ್ದನ್ನು ನೀಡುವ ಅಮೂಲ್ಯವಾದ ರತ್ನ. ಶಿವನ ಹಂಬಲವುಳ್ಳವರಿಗೆ, ಶಿವಸಾಧಕರಿಗೆ ಈ ಕೃತಿಯು ಶಿವತತ್ವಗಳನ್ನು ನೀಡುತ್ತದೆ.

ಈ ಕೃತಿಯು ೫೪ ಸಂಧಿ, ೨೨೨೧ ವಾರ್ಧಕ ಷಟ್ಪದಿಯಲ್ಲಿ ರಚಿತಗೊಂಡಿದೆ. ಕೆಲವು ನೂತನ ಶಿವಶರಣರನ್ನು ಪರಿಚಯಿಸುವ ಮಹತ್ವದ ಕೃತಿಯಾಗಿದೆ. ಬಸವಾದಿ ಪ್ರಮಥರಾದ ನಂತರ ವೀರಶೈವ ಧರ್ಮಕ್ಕೆ ಕಾಕತೀಯರು ರಾಜಾಶ್ರಯ ನೀಡಿದರು. ಈ ಅವಧಿಯಲ್ಲಿ ಅನೇಕ ಶಿವಶರಣರು ಆಂಧ್ರನಾಡಿನಲ್ಲಿ ಅವತರಿಸಿದರು. ಲಕ್ಕಣ್ಣ ದಂಡೇಶನು ಹೇಳುವ ಆಂಧ್ರನಾಡಿನ ಬೊಮ್ಮಯ್ಯ, ಪಂಡಿತರಾಧ್ಯ (ಬಿಜ್ಜವಾಡ), ಮಲ್ಲಿನಾಥ (ರಂಟಾಲ), ಮಹದೇವರಾಜ (ಬೆಲ್ಲಕೊಂಡೆ), ವೇಮನಾರಾದ್ಯ (ವೆಲಗುಂಡ) ಹಾಗೂ ಗುಂಡಬ್ರಹ್ಮಯ್ಯ (ಓರುಗಲ್ಲು) ಇವರು ಶೈವನಿಷ್ಠರಾದ ಶರಣರು. ಗುಂಡಬ್ರಹ್ಮಯ್ಯರು ಮೊರೆ ಹೊಕ್ಕವರನ್ನು ಕಾಪಾಡುವ ಛಲಕ್ಕಾಗಿ ಪ್ರಾಣವನ್ನು ಪಣಕಿಟ್ಟರು. ಇವರ ಧೀರೋದಾತ್ತ ವೃತ್ತಿ ವೀರಶೈವ ಗಣಾಚಾರ ಹಾಗೂ ಪ್ರಸಾದಿ ಸ್ಥಲದ ಭಕ್ತಿಯ ಆಚರಣೆಗೆ ಒಂದು ಆದರ್ಶವಾಗಿದೆ.

ಗುಂಡಬ್ರಹ್ಮಯ್ಯರು ಶೂಲಕ್ಕೇರಿದ ಕಥೆ ೧೪-೧೫ ನೆಯ ಶತಮಾನದಲ್ಲಿ ಓರಂಗಲ್ಲ ಪ್ರದೇಶಕ್ಕಿಂತ ಹೆಚ್ಚಾಗಿ, ಕರ್ನಾಟಕದಲ್ಲಿ ಪ್ರಸಾರವಾಗುತ್ತ ಬಂದಿತು. ಕಾಕತೀಯರ ತರುವಾಯದಲ್ಲಿ ವೀರಶೈವ ಸಾಹಿತ್ಯವನ್ನು ಪುನರುಜ್ಜೀವಿಸಿದವರು ವಿಜಯನಗರದ ಅರಸರು. ಈ ಕಾಲದಲ್ಲಿ ರಚಿತವಾದ ಮಹಾಮಂತ್ರಿ ಲಕ್ಕಣ್ಣ ದಂಡೇಶನ 'ಶಿವತತ್ತ್ವ ಚಿಂತಾಮಣಿ'ಯಲ್ಲಿ ಗುಂಡಬ್ರಹ್ಮಯ್ಯಗಳ ಬಗೆಗೆ ಹೆಚ್ಚಿನ ಮಾಹಿತಿ ದೊರಕುತ್ತದೆ.

ಇಲ್ಲಿ ಹೇಳಿದ ಸಂಗತಿಗಳನ್ನು ಆಧರಿಸಿ, ಗುಂಡಬ್ರಹ್ಮಯ್ಯಗಳ ಬಗೆಗೆ ಸ್ವತಂತ್ರ್ಯ ಕೃತಿಗಳು ನಿರ್ಮಾಣಗೊಂಡಿರಬೇಕು. 'ಶಿವತತ್ತ್ವ ಚಿಂತಾಮಣಿ'ಯಲ್ಲಿ ಬರುವ ಗುಂಡಬ್ರಹ್ಮಯ್ಯಗಳ ವಿಷಯ ಇಂತಿದೆ.

"ಹರಭಕ್ತರಾವಗಂ ತಪುಮಾಡಿಯೆ ಬಂದು
ಮರೆವೊಕ್ಕಡಂ ಕಾವನೆಂಬ ಬಿರುದಿನ ಕಹಳೆ
ಹರನ ಸಭೆಯೊಳ್ ಮರೆಯೆ ಕೇಳುತಂ ನಾರದನು ನಿಮಗೆಯಿದು ಸಲ್ಲದೆನುತ
ಕರಮುಗಿದು ಬಿನ್ನಹಂ ದೇವರವಧರಿಸುವುದು
ನರಲೋಕದೊಳಗೋರುಗಲ್ಲ ಪಟ್ಟಣದೊಳಂ
ಪರಮಭಕ್ತರು ಗುಂಡಬ್ರಹ್ಮಯ್ಯನೆಂಬವರ ಚರಣಾಂಬುಜಕೆ ಶರಣು

ಪರಮ ಸದ್ಭಕ್ತರಿವರಿಬ್ಬರುಂ ಶರಣಜನ
ರಱುದು ಮರೆದುಂ ತಪ್ಪುಮಾಡಿ ಮರೆವೊಕ್ಕವರ
ಹರ ಬಂದೊಡೊಮ್ಮೆಗಂ ಕೊಡವೆಂಬ ಬಿರುದಿನಿಂ ನಡೆವುತಿಹರೆನಲು ಕೇಳಿ
ಪುರಹರಂ ನಗುತವರ ಮನವ ನೋಡುವೆನೆನುತ
ಧರೆಗಿಳಿದು ಬಂದು ಗಣಪತಿಯನರಮನೆಯ
ನಿರುಳಗನ್ನವನಿಕ್ಕಿ ಚೋರನಾದಾಶಿವನ ಚರಣಾಂಬುಜಕೆ ಶರಣು

ಇರುಳಗನ್ನವನಿಕ್ಕಿ ಕನಕರತ್ನಾದಿಗಳ
ನಿರದೆ ಕೊಂಡೊಯ್ಯುತಿರೆ ಕಂಡರಾ ತಳವಱರು
ಬರುವುತಾ ಹೆಜ್ಜೆಯಾ ಬೆಂಬಳಿಯೊಳಟ್ಟೆ ಬರೆವಹಿಲದಿಂ ಶಿವನುಬಂದು
ಮಱೆವೊಕ್ಕವೈ ಗುಂಡುಬೊಮ್ಮಯ್ಯಯೆಂದೆನುತ
ಭರದಿ ಬಂದೆಯ್ತೆಂದು ಮನೆಯ ಹೊಗಲಾಕ್ಷಣಂ
ಕರದವರನೊಳಗೆ ಬೈಚಿಟ್ಟುಕೊಂಡಿಪ್ಪವರ ಚರಣಾಂಬುಜಕ್ಕೆ ಶರಣು

ಅರಮನೆಯ ಕನ್ನವಿಕ್ಕಿದ ಕಳ್ಳರಂಗಸಹಿ
ತಿರದೆ ಬಂದರು ತೋಱಕೊಡಿಯೆನುತಲಾಕ್ಷಣಂ
ತಱವಳರು ಗುಂಡಬ್ರಹ್ಮಯ್ಯಗಳನಿಬ್ಬರಂ ಜಱೆವುತಂ ದಟ್ಟಿಸುತ್ತ
ಧರಣಿಪನ ಹೊರಗೊಯ್ಯೆ ಶೂಲದಲಿ ತೆಗಸೆನಲು
ಹೊಱಗೆ ನಿಂದಾವು ಕಳ್ಳರು ತಪ್ಪದೆಂದೆನುತ
ಪುಱಜನಂ ಬೆಱಗಾಗಿ ನಡೆವುತಿರ್ದವರುಗಳ ಚರಣಾಂಬುಜಕ್ಕೆ ಶರಣು

ಹರುಷದಿಂ ನಡೆಯ ಬರೆ ಧರಣಿಪಂ ಬೇಡೆಂದು
ಚರರ ಕಳಹುಲು ನಗುತ ನುಡಿದರವರಿಬ್ಬರುಂ
ಹರಗರ್ಪಿಸಿದ ಶೂಲವಿನ್ನು ಮರಳುವದುಂಟೆ ಹೋಗೆನುತ ಜಜೆವು
ಕರದಿ ಹೊಯ್ಡಾ ರಕ್ತಮಂ ಚೆಲ್ಲಿ ದೆಸೆದೆಸೆಗೆ
ಮಜೆವೊಕ್ಕ ಭಕ್ತರ ಕಾವ ಬಿರುದುಂಟೆನಿಸಿ
ಶಿರದೊಳುಚ್ಚಳಿಸೆ ದಸಿ ಧೈರ್ಯದಿಂದೊಪ್ಪುವರ ಚರಣಾಂಬುಜಕೆ ಶರಣು

ಹರಭಕ್ತರೇಱಿದಾ ಶೂಲ ಪಲ್ಲವಿಸುತಿರೆ
ಪುರಹರಂ ಬಂದು ನಿಜದೋಱು ಕಾರುಣ್ಯದಿಂ
ಪರಮ ಕೈವಲ್ಯಮಂ ಕೊಟ್ಟು ಮನ್ನಿಸಿದನಿದು ಲೋಕ ವಿಖ್ಯಾತಮಾಗೆ
ಪಮ ಸದ್ಭಕ್ತರುತ್ಸವದಿ ಕೊಂಡಾಡುತಿರೆ
ಪುರಜನಂ ಬೆಱಗಾಗಿ ಕೈವಾರಿಸುತ್ತಿರಲು
ಧರೆಗೆ ಸೋಜಿಗವೆನಿಪ ಗುಂಡಬೊಮ್ಮಯ್ಯಗಳ ಚರಣಾಂಬುಜಕೆ ಶರಣು"[೨]

೩೭ ನೇ ಸಂಧಿಯಾದ ಶಿವಲೋಕ ವಿಸ್ತಾರ, ಶಿವಲೋಕಾಸ್ಥಾನ ವರ್ಣನೆಯಲ್ಲಿ ಗುಂಡಬ್ರಹ್ಮಯ್ಯಗಳ ಕುರಿತಾದ ಕಥೆಯನ್ನು ಹೇಳಲಾಗಿದೆ. ಮೊರೆಹೊಕ್ಕವರನ್ನು ಕಾಪಾಡಿ ಶೂಲಕ್ಕೇರುವ ಶರಣರ ಚರಿತ್ರೆಯನ್ನು ಈ ಕಾವ್ಯವು ತಿಳಿಸುತ್ತದೆ. ಪದ್ಮರಾಜ ಪುರಾಣದಲ್ಲಿ ಮೊದಲಾಗುವ ಸಂಕ್ಷಿಪ್ತ ಸೂಚನೆಯನ್ನು ಬಿಟ್ಟರೆ, ಕನ್ನಡದಲ್ಲಿ ಗುಂಡಬ್ರಹ್ಮಯ್ಯಗಳ ಕಥೆಯನ್ನು ಲಕ್ಕಣ್ಣ ದಂಡೇಶನು ಇಷ್ಟೊಂದು ವಿವರವಾಗಿ ಎಲ್ಲಿಂದ ಸ್ವೀಕರಿಸಿದನು? ಎಂಬುದು ತಿಳಿದು ಬರುವುದಿಲ್ಲ. ಗುಂಡಬ್ರಹ್ಮಯ್ಯಗಳ ಕುರಿತ ನೇರ ಸಾಹಿತ್ಯವೆಲ್ಲ ಲಕ್ಕಣ್ಣ ದಂಡೇಶನ ತರುವಾಯದಲ್ಲಿ ರಚಿತವಾಗಿವೆ. ಪ್ರಾಯಶಃ ಗುಂಡಬ್ರಹ್ಮಯ್ಯಗಳು ಶೂಲಕ್ಕೇರಿದ ಕಥೆ ಭಕ್ತ ಜನರಲ್ಲಿ ಅರಳಿ, ನಾಡಿನ ಬಹುಭಾಗದಲ್ಲಿ ಹಾಡುಗಬ್ಬವಾಗಿರಬೇಕು. ಗುಂಡಬ್ರಹ್ಮಯ್ಯಗಳನ್ನು ಕುರಿತ ಹಾಡುಗಳು ಮೂಲತಃ ಸುಪ್ಪಿ ರೂಪದಲ್ಲಿದ್ದು ಇವೇ ಲಕ್ಕಣ್ಣ ದಂಡೇಶನಿಗೂ ಆಕರವಾಗಿರಬೇಕು.

ಪದ್ಮರಾಜಪುರಾಣ

ಪದ್ಮರಾಜಪುರಾಣವು ಶರಣರೂ, ಕವಿಗಳೂ, ಪವಾಡಪುರುಷರಾದ ಕೆರೆಯ ಪದ್ಮರಸನನ್ನು ಕುರಿತು ಬರೆದ ಹಿರಿಯ ಕಾವ್ಯ. ಈ ಕಾವ್ಯದ ಕರ್ತೃ ಪದ್ಮಣಾಂಕರಾಗಿದ್ದಾರೆ. ಪದ್ಮಣಾಂಕನು ಕ್ರಿ.ಶ. ಸು.೧೩೮೫ ರಲ್ಲಿ ಜೀವಿಸಿರಬೇಕೆಂದು ಕವಿಚರಿತೆಕಾರರ ಅಭಿಪ್ರಾಯ. "ಕೆರೆಯ ಪದ್ಮರಸರು ಹೊಯ್ಸಳ ನರಸಿಂಹಬಲ್ಲಾಳನ ಆಸ್ಥಾನದಲ್ಲಿ ವೈಷ್ಣವವಾದಿಯಾದ ತ್ರಿಭುವನತಾತನನ್ನು ಸೋಲಿಸಿ ಶಿವಾದ್ವೈತ ಸಿದ್ಧಾಂತವನ್ನು ಪ್ರತಿಷ್ಠಾಪಿಸಿ ಆತನಿಗೆ ಲಿಂಗದೀಕ್ಷೆಯನ್ನು ಕೊಟ್ಟು ಷಟ್‌ಸ್ಥಲಲೋಪದೇಶ ಮಾಡಿದ ವಿಷಯ ಇತಿಹಾಸ ಪ್ರಸಿದ್ಧವಾಗಿದೆ"[೩]. ಪದ್ಮರಾಜ ಪುರಾಣದಲ್ಲಿ ಪೀಠಿಕಾ ಸಂಧಿ, ಪದ್ಮರಸನ ಜನನ, ಪದ್ಮರಸನ ವಿವಾಹ, ದಂಡನಾಥ ಪದ್ಮರಸರು, ಹರೀಶ್ವರ, ಪದ್ಮರಸರ ಹಿರಿಮೆ, ಪದ್ಮರಸರು ಕೆರೆಯ ನಿರ್ಮಿಸಿದುದು, ಪದ್ಮರಸರ ಶಿವಪೂಜಾ ಸಂಭ್ರಮ,

ವನವಿಹಾರ, ವಾದಕ್ಕೆ ನೃಪ ಸಭೆಗೆ ಪೋದುದು, ತ್ರಿಭುವನ ತಾತನ ಪರಾಜಯ, ಶೈವಾಧಿಕ್ಯ, ಶಿವದೀಕ್ಷೆ, ಕೆರೆಯ ಪದ್ಮರಸರು ವಿಶ್ವನಾಥನಲ್ಲಿ ಐಕ್ಯವಾದುದು ಹೀಗೆ ಒಟ್ಟು ೧೩ ಸಂಧಿಗಳಿಂದ ಪದ್ಮರಸನ ಚರಿತ್ರೆಯನ್ನು ಕಟ್ಟಿಕೊಡಲಾಗಿದೆ. 'ಕೆರೆಯ ಪದ್ಮರಸರು ವಿಶ್ವನಾಥನಲ್ಲಿ ಐಕ್ಯವಾದುದು' ಎಂಬ ಕೊನೆಯ ಸಂಧಿಯಲ್ಲಿ ಗಣಪತಿರಾಯ ಮತ್ತು ಗುಂಡಬ್ರಹ್ಮಯ್ಯರ ಪ್ರಸ್ತಾಪ ಬರುತ್ತದೆ. ಅದನ್ನು ಈ ಕೆಳಗಿನಂತೆ ನೋಡಬಹುದು.

"ಅತ್ತಲಾ ವಿಧವೆ ನಲಿವುತೆ ನಿಜಗೃಹಕೆ ಪೊದ
ಳಿತ್ತ ಗುರುವನಿತಜೆಂ ಮೇಲೆ ಶಿವನೊಳ್ ಮುನಿದು
ವಿತ್ತನಾಥಾಪ್ತಂ ಸುವರ್ಣಾದ್ರಿವಾಸನೆಮಗಾಗಿಂತು ಚೌರ್ಯಗುಣಮಂ
ಪೊತ್ತನೇ ಗಣಪತಿನೃಪಾಲ ನನ್ನರಮನೆಯ
ವಿತ್ತಮಂ ಕೊಂಡೊಡಂ ಕೊಳ್ಗೆ ಬಡವೆಯ ಬಾಯ
ತುತ್ತನೇಕಪಹರಿಸಿದಂ ಠಕ್ಕಿಸುವ ತನ್ನ ನಿಜಗುಣವನೇಕೆ ಮಾಣ್ಬಂ

ತಿರುನೀಲಕಂಠರಂ ಮಾಂಜಿ ಸೂರುಳ್ಗೊಂಡ
ನಿರತಂಗಮರನೀತಿಯಂ ಠಮಾಳಿಸಿ ಮಟ್ಟ
ಮಿರದೊಕ್ಕಲಂ ಮಾಱುಗೊಂಡಂಗೆ ನಂಬಿಯನಳಿಪಿ ತೊಳ್ತುಗೊಂಡವಂಗೆ
ಅರಿದಾವುದರಲ್ಲಿ ಮೇಣ್ ಗೋಪನಾರಿ ಶಂ
ಕರದೇವನಂ ಬಿಟ್ಟಿಗೆಯ್ದು ಪಿಟ್ಟಾಂಬೆಯಂ
ಒರದೆ ಪೊರೆವೊತ್ತ ಮುಗಿದೇವಗಳನಿಂತು ಪಲರಂ ಪೊರೆದನಂತಲ್ಲದೆ

ಇಂದು ತಗಿಗೆಟ್ಟೆಮ್ಮುವಂ ಪೊರೆವೆನೆಂಬೊಂದು
ದಂದುಗಂಬೊತ್ತು ವಿಧವಾವಿತ್ತಮಂ ಕಳ್ದು
ತಂದಿತ್ತನವರಟ್ಟಿ ಬಂದೊಡಾನೇಂ ಗುಂಡಬೊಮ್ಮಯ್ಯನೇ ಕಾಯ್ದೊಡೆ
ಚೆಂದವಾಯ್ತೆಮಗೆ ತಾಂ ನೆಗಳ್ದುದದನಾಡಲೇಂ
ಸಂದ ವಿಶ್ವಕುಟುಂಬಿ ಎಂತೊದವಿಪಂ ಬಿಟ್ಟೆ
ವಿಂದು ಮೊದಲಾಗಿ ತಾನಿಂತೀವ ಪಡಿಯನೆಂದೊರೆದು ಗುರುಮತ್ತಮೆಂದಂ"[೪]

ಕೆರೆಯ ಪದ್ಮರಸರು ಅಖಿಳ ಜನರನ್ನು ಉದ್ಧರಿಸುತ್ತ, ಶಿವನು ನೀಡಿದ ಹಣ-ಹೊನ್ನನ್ನು ಕೊಡುತಿದ್ದನು. ಈ ಸಮಯದಲ್ಲಿ ನೆರೆಯ ಮನೆಯಲ್ಲಿ ಒಬ್ಬ ಹೆಣ್ಣುಮಗಳು ಅಳುವ ಧ್ವನಿ ಕೇಳಿತು. ಅವಳನ್ನು ಪದ್ಮರಸರು ವಿಚಾರಿಸಿದರು. ಮಗನ ಮದುವೆಗಾಗಿ ಕೂಡಿಟ್ಟ ಹಣ-ಹೊನ್ನು ಕಳುವಾಗಿದೆಂದು ಕಣ್ಣೀರು ಸುರಿಸುವಳು. ಆಗ ಪದ್ಮರಸರು ತನ್ನ ಕೈಯೊಳಗಿದ್ದ ಹಣ-ಹೊನ್ನನ್ನು ತೋರಿಸುತ್ತ 'ಇವು ನಿನ್ನವೊ'? ಎಂದು ಕೇಳಿದರು. ಅವಳು ತನ್ನವೆಂದು ಹೇಳಲು ಹಿಂಜರಿಯುತ್ತಿರುವುದನ್ನು ಗಮನಿಸಿ, ಹಣ-ಹೊನ್ನನ್ನು ಆ ವಿಧವೆಗೆ ಸಂತೋಷದಿಂದ ಹಿಂದಿರುಗಿಸಿದನು.

ನಂತರ ಪದ್ಮರಸರು ಶಿವನ ಮೇಲೆ ಸಿಟ್ಟಾಗಿ 'ನೀನು ನನಗಾಗಿ ಚೌರ್ಯ ಮಾಡಿದಿಯೆ? ಹಿಂದೆ ತಿರುನೀಲಕಂಠ, ಅಮರನೀತಿ, ನಂಬಿ, ಶಂಕರದೇವ, ಪಿಟ್ಟಾಂಬೆಯರನ್ನು ಪೊರೆದಂತೆ ನನ್ನನ್ನೂ ಪೊರೆಯಲು ವಿಧವೆಯ ಮನೆಯಲ್ಲಿ ಏಕೆ ಕದ್ದುತಂದೆ? ಎಂದು ಶಿವನಿಗೆ ಪ್ರಶ್ನಿಸುತ್ತಾನೆ. ಹಣದವರು ಬೆನ್ನತ್ತಿ ಬಂದು ನನ್ನ ಮೊರೆಹೊಕ್ಕರೆ, ನಿನ್ನನ್ನು ಕಾಪಾಡಲು ನಾನೇನು ಗುಂಡಬ್ರಹ್ಮಯ್ಯನೆ ಎಂದು ಪ್ರಶ್ನಿಸುವಾಗ ಗುಂಡಬ್ರಹ್ಮಯ್ಯಗಳ ಹೆಸರು, ವ್ರತ, ಶಿವನಿಷ್ಠೆ ಮತ್ತು ಗಣಪತಿರಾಯನ ಕುರಿತು ಪ್ರಸ್ತಾಪಿಸಲಾಗಿದೆ.

ಚನ್ನಬಸವ ಪುರಾಣ

ಚನ್ನಬಸವ ಪುರಾಣವನ್ನು ವಿರುಪಾಕ್ಷ ಪಂಡಿತರು ಬರೆದರು. ಕ್ರಿ.ಶ.೧೬ನೆಯ ಶತಮಾನದ ಉತ್ತರಾರ್ಧದಲ್ಲಿದ್ದನೆಂದು ತಿಳಿಯಲಾಗಿದೆ. ಈ ಗ್ರಂಥವನ್ನು ೫ ಕಾಂಡಗಳಾಗಿ ವಿಭಾಗಿಸಲಾಗಿದೆ. ಇದರಲ್ಲಿ ಒಟ್ಟು ೬೩ ಸಂಧಿಗಳು, ೨೯೦೬ ಪದ್ಯಗಳಿದ್ದು ವಾರ್ಧಕ ಷಟ್ಪದಿಯಲ್ಲಿ ಚನ್ನಬಸವನ ಚರಿತ್ರೆಯನ್ನು ಹೇಳಲಾಗಿದೆ. ಮೊದಲನೆಯ ಕಾಂಡದಲ್ಲಿ ಚನ್ನಬಸವನ ಜನ್ಮ-ಬಾಲ್ಯ ಮತ್ತು ಪ್ರೌಢಾವಸ್ಥೆಯನ್ನು ವಿಸ್ತಾರವಾಗಿ ಹೇಳಲಾಗಿದೆ. ಎರಡು-ಮೂರು ಮತ್ತು ನಾಲ್ಕನೇ ಕಾಂಡಗಳಲ್ಲಿ ಈಶ್ವರನ ಪಂಚವಿಂಶತಿ ಲೀಲೆಗಳನ್ನು ಬಣ್ಣಿಸಿದ್ದಾನೆ. ಐದನೆ ಕಾಂಡದಲ್ಲಿ ವೀರಶೈವತತ್ವ, ಷಟ್ಸ್ಥಲಜ್ಞಾನಗಳೂ, ೬೩ ಪುರಾತನರು, ೧೦೧ ವಿರಕ್ತರುಗಳ ಸಂಕ್ಷಿಪ್ತ ಇತಿಹಾಸವನ್ನು ತಿಳಿಸಲಾಗಿದೆ.

ಈ ಕೃತಿಯ ಕಾಲಜ್ಞಾನ ಸಂಧಿ ೬೩ ರಲ್ಲಿ ಗುಂಡಬ್ರಹ್ಮಯ್ಯಗಳ ವೃತ್ತಾಂತವಿದೆ. ಕಲ್ಯಾಣದಲ್ಲಿ ಬಿಜ್ಜಳ ದೊರೆ ಹರಳಯ್ಯ-ಮಾದವಯ್ಯರಿಗೆ ಎಳಹೂಟೆ ಶಿಕ್ಷೆ ವಿಧಿಸುತ್ತಾನೆ. ಶರಣ ಸಂಕುಳ ಇದರಿಂದ ಕ್ಷೋಭೆಗೊಳ್ಳುತ್ತದೆ. ಬಿಜ್ಜಳರಾಯನ ಪಂಜಿನವರಾದ ಇಬ್ಬರು ವೀರಭಟರು ಜಗದೇವ-ಮಲ್ಲೆಬೊಮ್ಮಣ್ಣಗಳು ರಾಯನನ್ನು ಕೊಲೆಗೈಯುವರು. 'ಹಿಂಸಾತ್ಮಕವಾದ ಈ ಕೊಲೆಗೆ ಶರಣರು ಒಡಂಬಡುವರೆ'? ಎಂದು ನಾಗಾಂಬಿಕೆ ಕೇಳಿದಳು. ನಂತರ 'ಇವರಿಬ್ಬರು ಓರುಗಲ್ಲೆಂಬ ಪಟ್ಟಣದ ಹೊರಪುರದಲ್ಲಿ ವೀರ ಗುಂಡಬ್ರಹ್ಮರೆಂದು ಶೂಲಕ್ಕೇರಿ ಮುಕ್ತರಾಗುವರು'. ಎಂಬುದಾಗಿ ಭವಿಷ್ಯ ನುಡಿಯುವಳು. ಇವಿಷ್ಟು ಹೊಸ ಸಂಗತಿಯನ್ನು ಬಿಟ್ಟರೆ, ಬಹಶಃ ಉಳಿದೆಲ್ಲ ಕಥೆ ಲಕ್ಕಣ್ಣ ದಂಡೇಶನನ್ನೇ ಅನುಸರಿಸಿದೆ. ಈ ಕಾವ್ಯದಲ್ಲಿ ಉಲ್ಲೇಖವಾದ ಪದ್ಯಗಳು ಕೆಳಗಿನಂತಿವೆ.

"ಓರುಗಲ್ಲೆಂಬ ಪಟ್ಟಣದ ಹೊರಪುರದಲ್ಲಿ
ವೀರ ಗುಂಡಬ್ರಹ್ಮರೆಂಬ ಪೆಸರಿಂದಿರಲ್
ಮುರಾರಿ ಬಂದು ಗಣಪತಿ ರಾಯನರಮನೆಯ ಕದ್ದವರ ಮರೆಹೋಗಲು

ದಾರಿವಿಡಿದೈತಂದು ಕಳ್ಳರಂ ನೀಮೆಮಗೆ
ತೋರಿಯೆನೆ ಮರೆಯ ಹೊಕ್ಕರಕೊಡದವರಿಗಾಗಿ
ದೀರರಾ ಗುಂಡಬೊಮ್ಮಯ್ಯಗಳ್ ಶೂಲಮಂಟಪತ್ತಿನೆರೆಮುಕ್ತರಹರು"[15]

ಗುಂಡಬ್ರಹ್ಮಯ್ಯಗಳು ಶೂಲಕ್ಕೇರಿದುದು ಅವರು ತೊಟ್ಟ ಬಿರುದಿನಿಂದ ಎಂದು ಎಲ್ಲ ಕೃತಿಗಳು ಹೇಳುತ್ತವೆ. ಆದರೆ ಈ ಹಿಂದೆ ಬಿಜ್ಜಳನನ್ನು ಕೊಂದ ಶರಣರೇ ಇವರೆಂದು ಈ ಕಾವ್ಯದಲ್ಲಿ ಹೇಳಲಾಗಿದೆ. ಶರಣ ಧರ್ಮವು ಅಹಿಂಸಾತ್ಮಕವಾದುದರಿಂದ ಶೂಲಕ್ಕೇರಬೇಕಾದರೆ, ಏನಾದರೂ ಹಿಂಸೆ ಇವರಿಂದ ನಡೆದಿರಬೇಕೆಂದು, ಈ ಕಾರಣದಿಂದ ಪುನರ್ಜನ್ಮದಲ್ಲಿ ಶೂಲವೇರಬೇಕಾಗಿ ವಿರುಪಾಕ್ಷ ಪಂಡಿತ ಇಲ್ಲಿ ಕಲ್ಪನೆ ಮಾಡಿದಂತಿದೆ. ಒಂದು ದೃಷ್ಠಿಯಿಂದ ಈ ಕಲ್ಪನೆ ಔಚಿತ್ಯಪೂರ್ಣವೆ ಎನ್ನಬೇಕು. ಇಲ್ಲವಾದರೆ ಜಗದೇವ-ಮಲ್ಲೆಬೊಮ್ಮರು ಉಗ್ರಹಿಂಸಾವಾದಿಗಳೆಂದು ಆಪಾದನೆ ವೀರಶೈವ ಪುರಾಣಗಳಲ್ಲಿ ಹಾಗೇ ಉಳಿದುಬಿಡುತ್ತಿತ್ತು.

ಮರುಳಸಿದ್ಧಕಾವ್ಯ

ಈ ಕೃತಿಯ ಕರ್ತೃ ದೇವಕವಿ. ಮರುಳಸಿದ್ಧರ ಬಗ್ಗೆ ತಿಳಿಸುವ 'ಮರುಳಸಿದ್ಧಕಾವ್ಯ' ಮಹತ್ವದ್ದಾಗಿದೆ. ಇದಕ್ಕೆ ಮರುಳಸಿದ್ಧೇಶ್ವರ ಚಾರಿತ್ರ್ಯ, ಸಿದ್ಧಲಿಂಗಚಾರಿತ್ರ್ಯಗಳೆಂಬ ಹೆಸರುಗಳಿವೆ. ಶ್ರೀ ಗೋವಿಂದಪೈಗಳು ನಿರ್ಣಯಿಸಿದಂತೆ ಇದರ ಕಾಲ ಕ್ರಿ. ಶ. ೧೫೮೭. ಈ ಕಾವ್ಯವನ್ನು ಕಾದಂಬರಿಕಾರ ಅ. ನ. ಕೃ. ಸಂಪಾದಿಸಿದರು. ಒಟ್ಟು ಆರು ಸಂಧಿಗಳಿಂದ ಕಾವ್ಯವನ್ನು ವಿವರಿಸಲಾಗಿದೆ. ಮೊದಲ ಸಂಧಿಯಲ್ಲಿ ಕೆಳಗಿನಂತೆ ಗುಂಡಬ್ರಹ್ಮಯ್ಯರನ್ನು ಉಲ್ಲೇಖಿಸಲಾಗಿದೆ.

"ದಂಡಾಧಿನಾಥ ನಿಂಡೆಯಶಾಂತ ಕಡುಗಲಿಯು
ಗುಂಡಬ್ರಹ್ಮಯ್ಯ ಹೆಂಡದ ಮಾರಿತಂದೆಗಳು
ಪಂಡಿತಾರಾಧ್ಯ ಕಲಿಗಣನಾಥ ಚಾರಮನು ಚಂದೇಶನತಿಭಕ್ತನು|
ಗುಂಡಯ್ಯನಮರಗುಂಡದ ಮಲ್ಲಿನಾಥ ವಿಷ
ಉಂಡುದಂ ಮರಳಿಸಿದಲಂಡ ಪಶುಪತಿಗಳು
ದ್ದಂಡಧರಗಂಡುಗೊಡಲಿಯ ಮೊನೆಯಿಡುವರ ಪದಪುಂಡರೀಕಕ್ಕೆರಗುವೆ"[೬]

ಪದ್ಯದ ಆರಂಭದಲ್ಲಿ ಕಲಕೇತಯ್ಯ, ದಂಡಾಧಿನಾಥ, ನಿಂಡೆಯಶಾಂತ, ಹೆಂಡದ ಮಾರಿತಂದೆ, ಪಂಡಿತರಾಧ್ಯ, ಕಲಿಗಣನಾಥ, ಚಾರಮ, ಚಂದೇಶ ಮುಂತಾದ ಶರಣರಿಗೆ ವಂದಿಸುವಾಗ ಗುಂಡಬ್ರಹ್ಮಯ್ಯರನ್ನು ಪ್ರಸ್ತಾಪಿಸಿ ವಂದಿಸಲಾಗಿದೆ.

ಮರುಳಸಿದ್ಧರು ದೀಕ್ಷೆ ಪಡೆದುಕೊಂಡು ಕೊಲ್ಲಾಪುರದ ಮಾರ್ಗವಾಗಿ ಹೋಗುವಾಗ ಗುಂಡಬ್ರಹ್ಮಯ್ಯರನ್ನು ಸಂಧಿಸಿದರು. ಈ ಅಂಶವನ್ನು ಕೆಳಗಿನ ಪದ್ಯಗಳ ಮೂಲಕ ತಿಳಿಯಬಹುದಾಗಿದೆ.

"ಗಳಿಗೆ ತುಂಬಿದ ಬತ್ತ ತೀರುವನಕವು ನಿಮ್ಮ
ನಿಳಯವನು ತಂದುಕೊಡುವೆ ನಿಮ್ಮ ಅನುಜನಂ
ಕಳವಳದ ಮಾತೆಲ್ಲ ಕಪಟವಲ್ಲೆನುತಾಗ ಬಳಿಸಂದ ಬಗೆಯನರುಹೆ
ಗಳಿಗೆ ತುಂಬಿದ ಬತ್ತಗಳು ವೃದ್ಧಿಯಾಗುತಿರೆ

ತಿಳುಹಿ ಬಾಳಿಂದವನ ಬಿಡಿಸಿ ಮುಂದಕೆ ನಡೆದ
ಚಲನೇಮ ವ್ರತಶೀಲ ಗುಂಡಬ್ರಹ್ಮಯ್ಯಗಳ ನೆಲೆಯ ನೋಡುತಾಗ

ಗುಂಡಬ್ರಹ್ಮರೊಳಿರುವ ನಿಷ್ಠೆಯ
ಕಂಡುಮರುಳನು ಮೂಕನಾದನು
ಕಂಡುಕೊಂಡನು ಭಕ್ತಿಶಿವನಿಂದಧಿಕನೆಂಬುದನು
ಕೆಂಡದಾ ಮಳೆ ಸುರಿಯ ಶರಧಿಯು
ಕೊಂಡು ಜ್ವಾಲೆಯ ಬೆಂದು ಹೋಹುದೆ
ಭಂಡುಖೋರರಿಗಂಜಿ ಬಾಳರು ಶರಣರೆಂಬುದನು

ಅಚಲ ನಿಷ್ಠರು ಗುಂಡಬ್ರಹ್ಮರು
ಅಚಲ ನೇಮದ ಗುಂಡಬ್ರಹ್ಮರು
ಅಚಲರಾಚಾರದಲಿ ಶಿವಭಕ್ತರಿಗೆ ರಕ್ಷಕರು
ಅಚಲರೈವರ ವೀರಶೈವದಿ
ಅಚಲರಾಗಿಹರಿಷ್ಟಲಿಂಗದಿ
ಅಚಲ ಗುಂಡಬ್ರಹ್ಮರಿಗೆ ಶರಣೆನುತ ನಿಂದಿಹನು

ಗುಂಡಬ್ರಹ್ಮರ ಕಂಡು ಮರಳನು
ಕಂಡನೋರಗಲ್ಲ ಸಿರಿಯನು
ಕಂಡುಬೆರಗಾಗಿಹನು ಶಿಲ್ಪದ ಸೊಗದ ಸುಗ್ಗಿಯನು
ಕಂಡು ಇಮ್ಮಡಿ ಪೋಲರಾಜನ
ಕಂಡು ಯುವರಾಜೇಂದ್ರ ರುದ್ರನ
ಕಂಡು ಅರಮನೆಯಲ್ಲಿ ಉಂಡನು ಬಸವತತ್ವವನು"[2]

ಮರುಳಸಿದ್ಧರು ಕೊಲ್ಲಾಪುರಕ್ಕೆ ಹೋಗುವ ದಾರಿಯಲ್ಲಿ ಗಣಪತಿರಾಯನ ರಾಜ್ಯವಾದ ಓರುಗಲ್ಲಿಗೆ ಹೋಗಿ, ಅಲ್ಲಿದ್ದ ಗುಂಡಬ್ರಹ್ಮಯ್ಯಗಳನ್ನು ಕಂಡರು. ಅವರಲ್ಲಿದ್ದ ಅಚಲ ನಿಷ್ಠೆ, ನೇಮ, ವೀರವ್ರತವನ್ನು ಕಂಡು ಮೆಚ್ಚುಗೆ ಸೂಚಿಸಿದರು. 'ಕಂಡು ಯುವರಾಜೇಂದ್ರ ರುದ್ರನ ಕಂಡು ಅರಮನೆಯಲ್ಲಿ ಉಂಡನು ಬಸವತತ್ವನು' ಎಂಬ ಈ ವಾಕ್ಯದಿಂದ ಹಿಂದೆ ಚರ್ಚಿಸಿದಂತೆ, ಓರಂಗಲ್ಲಿನ ಆಸ್ಥಾನದಲ್ಲಿ ಬಸವಾದಿ ಪ್ರಮಥರ ತತ್ವಗಳು ಹರಡಿದ್ದವು ಎಂಬುದಕ್ಕೆ ನಿದರ್ಶನ ಸಿಗುತ್ತದೆ. ಮರುಳಸಿದ್ಧರು ಓರಂಗಲ್ಲಿನ ಅರಮನೆಯಲ್ಲಿ ಬಸವಣ್ಣನವರ ತತ್ವಗಳನ್ನು ತಿಳಿದುಕೊಂಡರು. ಇದರಿಂದ ಗಣಪತಿರಾಯ ಶರಣಧರ್ಮವನ್ನು ಸ್ವೀಕರಿಸಿದ್ದನು ಎಂಬುದಕ್ಕೆ 'ಮರುಳಸಿದ್ಧಕಾವ್ಯ' ಆಕರಗ್ರಂಥವಾಗಿದೆ.

ಸಾನಂದ ಚರಿತ್ರೆ

ಸಾನಂದ ಚರಿತೆಯ ಕರ್ತೃ ಕುಮಾರ ಪದ್ಮರಸ. ಕುಮಾರ ಪದ್ಮರಸನ ತಂದೆ ಕೆರೆಯ ಪದ್ಮರಸ. ತಂದೆಯ ಆಜ್ಞೆಯಂತೆ 'ಸಾನಂದ ಚರಿತ್ರೆ'ಯನ್ನು ರಚಿಸಿದನು. ಕೆರೆಯ ಪದ್ಮರಸನು ಸಂಸ್ಕೃತದಲ್ಲಿ 'ಸಾನಂದ ಚರಿತೆ'ಯನ್ನು ಬರೆದು, ಕನ್ನಡದಲ್ಲಿ ಮಗನನ್ನು ಬರೆಯುವಂತೆ ಪ್ರೇರೇಪಿಸಿದನು. ಸಾನಂದನ ಕಥೆಯೇ ಈ ಗ್ರಂಥದ ಕಥಾವಸ್ತು. ಈ ಕಥೆಯಲ್ಲಿ ಅವನ ಬಾಲಲೀಲೆ, ಶಿವಪೂಜಾಸಕ್ತಿ, ಶಿವಕಥಾಶ್ರವಣಾಸಕ್ತಿ, ನರಕವರ್ಣನೆಯನ್ನು ವಿವರಿಸಲಾಗಿದೆ.

ಈ ಕಾವ್ಯದಲ್ಲಿ ಒಟ್ಟು ೯ ಸಂಧಿಗಳಿದ್ದು, ಕೊನೆಯ ಸಂಧಿಯಲ್ಲಿ ಗುಂಡಬ್ರಹ್ಮಯ್ಯಗಳನ್ನು ಕೆಳಗಿನಂತೆ ಉಲ್ಲೇಖಿಸಲಾಗಿದೆ.

"ಶರಣವೇಷದಿ ಪಿಂದೆ ಪುಗೆಕ
ಳ್ಪರನಿರಿಸಿಯವರ್ಗಾಗಿ ಶೂಲ
ಕ್ಕರವರಿಸದಾರ್ದುರವಣೆಸಿ ಮರನಂಕುರಿಸಿ ತಳಿತು
ಕರಮೆಸೆಯೆ ಲಿಂಗಂಗಳಾಗೀ
ಧರೆಗೆ ಶರಣರ ಘನವನಾಗಳೆ
ನೆಱಿಮೆಱೆದ ಗುಂಡಯ್ಯ ಬೊಮ್ಮಯ್ಯಂಗಳಂತೊಪ್ಪೆ"[೮]

ಈ ಪದ್ಯದಲ್ಲಿಯೂ ಗುಂಡಬ್ರಹ್ಮಯ್ಯರ ಕಥೆಯನ್ನು ಹೇಳಲಾಗಿದೆ. ಶರಣತ್ವವನ್ನು ಸ್ವೀಕರಿಸಿದ ಗುಂಡಬ್ರಹ್ಮಯ್ಯರು ಕದ್ದವರಿಗೆ ಆಶ್ರಯ ನೀಡಿ ಶೂಲಕ್ಕೇರಲು ಸಿದ್ಧರಾದರು. ಶೂಲದ ಮೇಲೆ ಕೂಡುತ್ತಿದ್ದಂತೆಯೇ ಶೂಲವು ಚಿಗುರಿತು. ಶರಣರು ಧರೆಯ ಮೇಲೆ ಘನತೆಯ ವ್ಯಕ್ತಿಗಳಾಗಿ ಮೆರೆದರು ಎಂದು ಈ ಕಾವ್ಯದಲ್ಲಿ ವಿವರಿಸಲಾಗಿದೆ.

ಬಸವ ಪುರಾಣ

ಕನ್ನಡದ ಬಸವ ಪುರಾಣದ ಕರ್ತೃ ಭೀಮಕವಿ. ಇದರ ಮೂಲ ಕರ್ತೃ ಪಾಲ್ಕುರಿಕೆ ಸೋಮನಾಥನಾಗಿದ್ದಾನೆ. ಸೋಮನಾಥನ 'ಬಸವ ಪುರಾಣಂ' ಕೃತಿಯು ಈ ಕಾವ್ಯಕ್ಕೆ ಮೂಲ ಆಕರವಾಗಿದೆ. ಈ ಕಾವ್ಯದಲ್ಲಿ ಸುಮಾರು ೬೩ ಶಿವಶರಣರ ವ್ರತ-ಸಿದ್ಧಾಂತಗಳನ್ನು ಕಥೆಯ ರೂಪದಲ್ಲಿ ಹೇಳಲಾಗಿದೆ. 'ಬಸವ ಪುರಾಣ' ಕೃತಿಯ ಕಾಲವನ್ನು ಸು. ೧೪ನೇ ಶತಮಾನವೆಂದು ನಂಬಲಾಗಿದೆ. ಶೈವದೀಕ್ಷಾಚಾರ್ಯರ ಉಲ್ಲೇಖವಿರುವ ಸಂಧಿ ೫೭ ರಲ್ಲಿ ಈ ಹೆಸರುಗಳಿವೆ.

"ಬೊಮ್ಮಿದೇವಯ್ಯಗಳು ಶೂಲದ
ಬೊಮ್ಮಿದೇವಯ್ಯನು ನಿವಾಳಿಯ
ಬೊಮ್ಮದೇವಯ್ಯಂಗಳುಂ ಕಲಕೇತ ಬೊಮ್ಮಯ್ಯಗಳು"[೯]

ಇಲ್ಲಿನ 'ಶೂಲದ ಬೊಮ್ಮಿದೇವಯ್ಯ' ಗುಂಡಬ್ರಹ್ಮಯ್ಯನಿಗಿಂತ ಭಿನ್ನನು. ಈ ವಿಷಯವನ್ನು ಮುಂದೆ ಚರ್ಚಿಸಲಾಗಿದೆ.

ಗಣಸಹಸ್ರ ನಾಮಾವಳಿ

ಈ ಕೃತಿಯ ಕರ್ತೃ ಮಲ್ಲಿಕಾರ್ಜುನ ಪಂಡಿತಾರಾಧ್ಯರಾಗಿದ್ದು, ೧೧೬೦ ರಲ್ಲಿದ್ದರೆಂದು ಗುರುತಿಸಿದ್ದಾರೆ. ಗಣಸಹಸ್ರ ನಾಮಾವಳಿಯ ೮ ನೆಯ ಸ್ಥಲದ ಅಮರಗಣನಾಮಾವಳಿಯಲ್ಲಿ ೧೩೩ ನೆಯ ಹೆಸರು "ಗುಂಡಬ್ರಹ್ಮಯ್ಯ"[೧೦] ಎಂದಿದೆ.

ಗುಂಡ ಬಸವೇಶ್ವರ ಚರಿತ್ರೆ

'ಗುಂಡ ಬಸವೇಶ್ವರ ಚರಿತ್ರೆ' ಪ್ರಾದೇಶಿಕ ಧರ್ಮಸಂಪ್ರದಾಯವೊಂದನ್ನು, ಈ ಸಂಪ್ರದಾಯದ ಮುಖ್ಯ ವ್ಯಕ್ತಿಯೊಬ್ಬನ ಚರಿತ್ರೆಯನ್ನು ಸಂಕಥಿಸುವ ಸಾಂಗತ್ಯ ಕೃತಿಯಾಗಿದೆ. ಇದರ ಕರ್ತೃವಿನ ಹೆಸರು ತಿಳಿದು ಬಂದಿಲ್ಲ. ಕೃತಿರಚನಾ ಕಾಲವೂ ಗೊತ್ತಾಗಿಲ್ಲ. ಹಸ್ತಪ್ರತಿಯ ಲಿಪಿಕರಣ ಕಾಲ ೧೬೨೨ (ವಿಕ್ರಮನಾಮ ಸಂವತ್ಸರ) ಅಂದರೆ ಕ್ರಿ. ಶ. ೧೭೦೦. ಹೀಗಾಗಿ ಈ ಕೃತಿ ಇದಕ್ಕೆ ಮೊದಲು ಹುಟ್ಟಿದೆಯೆಂದು ಮಾತ್ರ ಹೇಳಬಹುದು. ಕವಿಯು ಒಮ್ಮೆ ಮಾತ್ರ 'ಗುಂಡಬಸವೇಶ್ವರ ಚರಿತ್ರೆ' (೭-೯೧) ಎಂದು ಕರೆದುದರಿಂದ ಇದನ್ನೇ ಕೃತಿನಾಮವೆಂದು ಇಟ್ಟುಕೊಂಡಿದ್ದಾರೆ. 'ಧರ್ಮಕಲ್ಯಾಣ'ದ ಸ್ಥಾಪಕರಾದ ಗುಂಡಬಸವಣ್ಣನ ಕುರಿತಾಗಿ ಈ ಕಾವ್ಯವನ್ನು ರಚಿಸಲಾಗಿದೆ. ಶರಣಸ್ತುತಿ, ಗುಂಡಬಸವೇಶ್ವರನ ಶಿವಸನ್ನಿಧಿ ಕಥನ, ಗುಂಡಬಸವೇಶ್ವರನ ಗ್ರಾಮ ಕಥನ, ಗುಂಡಬಸವೇಶ್ವರ ಅವತಾರ ಕಥನ, ಗುಂಡಬಸವೇಶ್ವರನ ಸಂಸಾರ ಕಥನ, ಗುಂಡಬಸವೇಶ್ವರನ ಲೀಲಾಕಥನ, ಗುಂಡಬಸವೇಶ್ವರನ ಐಕ್ಯಕಥನ ಒಟ್ಟು ಏಳು ಸಂಧಿಗಳಲ್ಲಿ ಈ ಕಾವ್ಯವನ್ನು ನಿರೂಪಿಸಲಾಗಿದೆ.

ಮೊದಲ ಸಂಧಿಯಾದ 'ಶರಣಸ್ತುತಿ'ಯಲ್ಲಿ ಎಲ್ಲಾ ಶಿವಶರಣರನ್ನು ಸ್ತುತಿಸಲಾಗಿದೆ. ಆ ಸಮಯದಲ್ಲಿ ಗುಂಡಬ್ರಹ್ಮಯ್ಯರಿಗೆ ವಂದಿಸಲಾಗಿದೆ. ಕೆಳಗಿನ ಪದ್ಯವನ್ನು ಗಮನಿಸಬಹುದು.

"ವೀರಶೈವದ ಸಂಗಯ್ಯನು ಮುಗ್ಧಸಂಗಯ್ಯ
ಕ್ರೂರಭಕ್ತಿಯಲಿ (ಗೂರ್ಜರನ)
ಯಾರರಿಯದಲಿರ್ದ ಸತ್ಯಣ್ಣ ಪೆದ್ದಯ್ಯ
ಧೀರ ಗುಂಡಬೊಮ್ಮಯ್ಯಗೊಂದಿಸುವೆ"[೧೧]

ಹೀಗೆ 'ಗುಂಡ ಬಸವೇಶ್ವರ ಚರಿತ್ರೆ'ಯಲ್ಲಿ ಮುಗ್ಧಸಂಗಯ್ಯ, ಸತ್ಯಣ್ಣ, ಪೆದ್ದಯ್ಯರಿಗೆ ವಂದಿಸುವಾಗ, ಗುಂಡಬ್ರಹ್ಮಯ್ಯರನ್ನು ವಂದಿಸಲಾಗಿದೆ.

ಮುಂದೆ ಸಂಧಿ ನಾಲ್ಕರಲ್ಲಿ 'ಗುಂಡ ಬಸವೇಶ್ವರ'ನ ಅವತಾರ ಕಥನವಿದೆ. ಇಲ್ಲಿಯೂ ಗುಂಡಬ್ರಹ್ಮಯ್ಯಗಳನ್ನು ಉಲ್ಲೇಖಿಸಲಾಗಿದೆ.

"ಕುಂಬಾರ ಗುಂಡಯ್ಯನ ಕಪ್ಪರಕೆ ಕಾಡಿ
ನಂದದಂದದಿ ಭಾಷೆಗೊಂಡೆ|

ಬೆಂಬಿಡದಲಿ ಗುಂಡಬೊಮ್ಮಯ್ಯಗಳ ಕಾಡಿ

ದಂಬರಾತ್ಮಕ ಶಿವ ನೀನು"[೧೨]

ಗುಂಡಬಸವೇಶ್ವರನನ್ನು ಶಿವನು ವಿವಿಧ ರೀತಿಯಲ್ಲಿ ಕಾಡುವನು. ಈ ಸಂದರ್ಭದಲ್ಲಿ ಶಿವಶರಣರನ್ನು ಕಾಡಿದವರನ್ನು ಹೆಸರಿಸುವಾಗ 'ಗುಂಡಬೊಮ್ಮಯ್ಯಗಳ ಕಾಡಿದ ದಂಬರಾತ್ಮಕ ಶಿವ ನೀನು' ಎಂದು ಉಲ್ಲೇಖ ಬರುತ್ತದೆ.

ಸಂಧಿ ೫ ರಲ್ಲಿ 'ಗುಂಡ ಬಸವೇಶನ ಸಂಸಾರದ ಕಥನ'ವಿದೆ. ಗುಂಡ ಬಸವೇಶನು ಹೆಂಡತಿಯನ್ನು ನೋಡಲು ಗುಂಡಗುರುಕಿಗೆ ಹೋದನು. ಅವರ ಮನೆಯಲ್ಲಿ ಗುಂಡಬ್ರಹ್ಮಯ್ಯಗಳ ಎರಡು ಸುರಿಗೆಗಳಿದ್ದವು. ಒಂದನ್ನು ಅವರಿಂದ ಪಡೆದು, ಹೆಂಡತಿ ಜಕ್ಕಾಂಬೆಯೊಂದಿಗೆ ಮರಳಿದನು. ಇದನ್ನು ಈ ಕೆಳಗೆ ನೋಡಬಹುದು.

"ಕರೆಯ ಹೋದನು ಗುಂಡಗುರುಕಿಗೆ ಸತಿಯನು

ಸುರಗಿಯ ಕಂಡ ಮನೆಯೊಳಗೆ

ಹರಭಕ್ತ ಗುಂಡಬೊಮ್ಮಯ್ಯಗಳ್ಹಿಡಿದಿರ್ದ

ವೆರೆಡೊಳಿನ್ನೊಂದೆಲ್ಲೆಂದ"[೧೩]

ಹೀಗೆ 'ಗುಂಡ ಬಸವೇಶ್ವರ ಚರಿತ್ರೆ'ಯಲ್ಲಿ ಶಿವಶರಣರನ್ನು ವಂದಿಸುವಾಗ, ಶಿವನು ಕಾಡುವಾಗ, ಬಸವೇಶ ತನ್ನ ಹೆಂಡತಿಯ ಮನೆಗೆ ಹೋದಾಗ ಗುಂಡಬ್ರಹ್ಮಯ್ಯರ ಉಲ್ಲೇಖ ಬರುತ್ತದೆ.

ಬಸವೇಶ್ವರ ವಚನ ಕಥಾಸಾರ

ಈ ಕೃತಿಯನ್ನು ಪ್ರಕಟಿಸಿದ ಫ. ಗು. ಹಳಕಟ್ಟಿ ಅವರಿಗೆ ಇದರ ಕರ್ತೃವಿನ ಹೆಸರು ಗುರುತಿಸಲಾಗಿಲ್ಲ.[೧೪] ಕರ್ನಾಟಕ ಕವಿಚರಿತೆಯ ಭಾಗ ೨ರಲ್ಲಿ ಪರ್ವತ ಶಿವಯೋಗಿಯು ಬಸವೇಶ್ವರ ದೇವರ ವಚನ ಸಾರಾರ್ಥವನ್ನು ಬರೆದಿರುವನೆಂದಿದೆ. ಆದ್ದರಿಂದ ಸಾರಾರ್ಥ ಮತ್ತು ಕಥಾಸಾರಗಳು ಒಬ್ಬ ವ್ಯಕ್ತಿಯವಾಗಿರಬೇಕೆಂದು ವಿ. ಶಿವಾನಂದರು ಅನುಮಾನಿಸಿದ್ದಾರೆ. ಈ ಕೃತಿಯ ಮಾಹೇಶ್ವರ ಸ್ಥಲದ ೧೮೦ ನೆಯ ವಚನದಲ್ಲಿ ಬರುವ ಗುಂಡಬ್ರಹ್ಮನ ಹೆಸರಿಗೆ ಕಥೆಯನ್ನು ಹೀಗೆ ಹೇಳಿದೆ.

ಗೋಚನಪುರದಲ್ಲಿ ಗುಂಡಬ್ರಹ್ಮಯ್ಯಗಳು ಮೊರೆಹೊಕ್ಕವರನ್ನು ಕೊಡೆನೆಂದು ಬಿರುದಿನ ಕಾಳೆಯ ಹಿಡಿಸಲು, ಇದನ್ನು ನಾರದನು ಕೇಳಿ ಶಿವನಿಗೆ ಹೇಳಲು ಓರುಗಲ್ಲ ಗಣಪತಿರಾಯನ ಮನೆಯ ಕನ್ನವನ್ನಿಕ್ಕಿ ಮುತ್ತು ಮಾಣಿಕವ ಚೆಲುತ ಗುಂಡಬ್ರಹ್ಮನ ಮನೆಗೆ ಬರಲು, ಬಂದ ಕಳ್ಳನ ಕೊಡು ಎನಲು, ಕೊಂದರೆ ಕೊಲ್ಲಲಿ ಕೊಡುವುದಿಲ್ಲೆನಲು, ನುಡಿಕೇಳಿ ಗಣಪತಿರಾಯ ಶೂಲಕ್ಕೆ ಹಾರಬೇಕೆಂದು ಕರಿಸಲು ಆ ಬ್ರಹ್ಮನ ಸತಿ ಶಿರವನುಳುಹಿ ಮುಂಡದಲಿ ಆರತಿ ಹಿಡಿದು ಬರಲು ಅರಸ ಕಂಡು ಅವರ 'ಬಿಡಿ' ಎನಲು, ಶೂಲದ ಲಿಂಗಕ್ಕರ್ಪಿಸಿದೆ ಇನ್ನು ಹೋದೆವೇ? ಎಂದು ಶೂಲಕ್ಕೆ ಬೀಳಲು, ಶಿವಮೆಚ್ಚಿ ಶೂಲದ ಮರ ಸಹಿತವಾಗಿ

ಕೈಲಾಸಕ್ಕೆ ಕರೆದುಕೊಂಡು ಹೋದನು.”[೧೫] ಬಸವೇಶ್ವರ ವಚನದ ಕಥಾಸಾರದಲ್ಲಿ ಉಕ್ತವಾದ ಈ ಕಥೆಗೆ ಮೂಲವಾದ ಗುಂಡಬ್ರಹ್ಮಯ್ಯಗಳ ಹೆಸರು ಅವರ ಷಟ್‌ಸ್ಥಲದ ವಚನಗಳಲ್ಲಿ ದೊರಕದಿರುವುದು ಆಶ್ಚರ್ಯದ ಸಂಗತಿ. ಆದರೆ ಶಿವಶರಣರ ವೀರವ್ರತ್ತ, ಶಿವನು ಮರೆಹೊಕ್ಕ ಸಂದರ್ಭ ಹಾಗೂ ಶೂಲದ ಪದ ಪ್ರಯೋಗಗಳು ಅನೇಕ ಕಡೆ ಬಂದಿವೆ. ಅವುಗಳನ್ನು ಗಮನಿಸಲಾಗಿದೆ. ಅಂದೊಮ್ಮೆ ಓಡಿಹೋಗಿ ಆತನ ಮೊರೆಯ ಹೊಗದಂದು (ವ.೫೫೧), ಇಕ್ಕುವ ಶೂಲ ಪ್ರಾಪ್ತಿಸಲಿ (ವ.೭೦೬) ಮುಂತಾದವುಗಳನ್ನು ಗಮನಿಸಬಹುದಾಗಿದೆ. ಗುಂಡಬ್ರಹ್ಮಯ್ಯಗಳ ಹೆಸರು ವಚನಗಳಲ್ಲಿ ಪ್ರಸ್ತಾಪಿಸಲಾಗದಿದ್ದರೂ, ಆಚಾರ, ವೀರವ್ರತ, ನೇಮ-ನಿಷ್ಠೆಗಳನ್ನು ಪ್ರಸ್ತಾಪಿಸಲಾಗಿದೆ.

ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ

ಶಾಂತಲಿಂಗದೇಶಿಕರು ‘ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ’ ಎಂಬ ಕೃತಿಯನ್ನು ರಚಿಸಿದರು. ಈ ಕೃತಿ ರಚನೆಯಾದ ಕಾಲವನ್ನು ಗ್ರಂಥಕರ್ತೃವೇ ಹೇಳಿದ್ದರಿಂದ ಕ್ರಿ.ಶ.೧೬೭೨ ಎಂದು ಕವಿತರಿತೆಕಾರರು ಗುರುತಿಸಿದ್ದಾರೆ. ಕೃತಿಯ ಹೆಸರೇ ಸೂಚಿಸುವಂತೆ ಇದೊಂದು ಭೈರವೇಶ್ವರ ಕಾವ್ಯೋಕ್ತ ಕಥೆಗಳನ್ನು ವಿವರಿಸುವ ಕೃತಿಯಾಗಿದೆ. ‘ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ’ ಭಾಗ ಒಂದರಲ್ಲಿ ೨೩೩ ಕಥೆಗಳಿವೆ. ಇದೇ ಕೃತಿಯ ಭಾಗ ಎರಡರಲ್ಲಿ ೨೮೫ ಕಥೆಗಳಿವೆ. ಒಟ್ಟು ಎರಡರಲ್ಲಿಯೂ ೫೧೮ ಕಥೆಗಳನ್ನು ಹೇಳಿರುವ ಬೃಹತ್ ಗ್ರಂಥವಾಗಿದೆ. ಈ ಕೃತಿಯ ಭಾಗ ಎರಡರಲ್ಲಿ ೪ನೇ ಸಂಧಿಯಲ್ಲಿ ‘ರತ್ನವನ್ನು ಕದ್ದ ಜಂಗಮನನ್ನು ಕೊಡದೆ ಗುಂಡಬ್ರಹ್ಮಯ್ಯ ಶೂಲವೇರಿದುದು’ ಎಂಬ ಕಥೆಯಲ್ಲಿ ಗುಂಡಬ್ರಹ್ಮಯ್ಯರ ಜೀವನ ವೃತ್ತಾಂತ ಹೇಳಲಾಗಿದೆ. ಅದನ್ನು ಕೆಳಗೆ ಗಮನಿಸಲಾಗಿದೆ.

“ಕದ್ದು ಜಂಗಮ ಬರೆ
ನಿರ್ದರ ಶೂಲದೊ
ಳಿದ್ದರೂ ಗುಂಡಬೊಮ್ಮಿಗಳೂ
ಸದ್ಯ ನೃಪನ ರಾಣಿ
ಗಿದ್ದ ಜಂಗಮ ಸತ್ತ
ಡೆದ್ದಿರಿಸಿದ ಬಸವೇಶಾ

ಆಂದ್ರದೇಶದೊಳೊಪ್ಪುವ ವೋರುಗಲ್ಲೆಂಬ ಪಟ್ಟಣದಲ್ಲಿ ರುದ್ರರಾಯನ ಸುತ ಗಣಪತಿರಾಯನೆಂಬವ ರಾಜ್ಯವನಾಳುವಾಗಲು ಯಿತ್ತ ಗವಚೆರೆಂಬ ಪುರದಲ್ಲಿ ಗುಂಡಬ್ರಹ್ಮಯ್ಯನೆಂಬ ಶರಣರಿಬ್ಬರು ವೀರಭಕ್ತಿಯನಾಚರಿಸುತ್ತ ಜಂಗಮ ದಾಸೋಹಮಂ ಮಾಡುತ್ತ ಕದ್ದು ಬಂದು ಮೊರೆಹೊಕ್ಕರೂ ಕೊಡೆವು ಮಾರ್ಮಲತ ಶಿವದ್ರೋಹಿಗಳ ಹೊಡೆವೆವೆನುತ್ತ ಬಿರುದಿನ ಕಹಳೆಯಂ ತಮ್ಮ ಪುರದೊಳು ಸಾರಿಸುತ್ತಿರಲು ಆಗ ಕಹಳೆಯ ಧ್ವನಿಯು ಕೈಲಾಸಕ್ಕೆ ಕೇಳಲು ಶಿವನು ನಗುತ್ತ ನಾರದನ ಕೇಳಲು ಆಗ ಬಿರಿದಂಕರಾದ ಶರಣರ ಕಹಳೆಯ ಧ್ವನಿಯೆಸಲು ನಾರದನು ಶಿವನು ಅವರ ಬಿರುದ ಸೆಳೆಯಬೇಕೆಂದು ಗೌರಿ ಮೊದಲಾದ

ಪ್ರಮಥರಿಗೆ ಪೇಳಿ ಭೂತಳಕ್ಕೆ ಬಂದು ಗಾಳಿ ಪೂಜೆಯಲ್ಲಿ ಕನ್ನಗತ್ತಿಯಂ ಮಾಡಿಸಿ ವೋರುಗಲ್ಲಿಗೆ ಪೋಗಿ ಗಣಪತಿರಾಯನ ಮನೆಯಲ್ಲಿ ಕನ್ನವನಿಕ್ಕೆ ಮುತ್ತು ರತ್ನವ ತೆಗೆದುಕೊಂಡು ಹೋಗುವಾಗ ಕಹಳೆಗಳನೊಡದು ಪಟುಭಟರ ಅಲುಗಂ ಮರೆದು ಆನೆ ಕುದುರೆಗಳ ಪಾಶ ಸರ್ಪಮೆಗಳಂ ಪರೆದು ಬಿಟ್ಟು ಬಾಗಿಲ ಬೀಗವ ಮುರಿದು ಈಡಾಡಿ ನಡದು ಬರುತ್ತ ಮುತ್ತು ರತ್ನ ಸೂಸುತ್ತ ಗವಚರಕ್ಕೆ ಬಂದು ಗುಂಡಬ್ರಹ್ಮಯ್ಯನಲ್ಲಿರಲು ಗಣಪತಿರಾಯ ಬೆಳಗಾಗಿ ಎಚ್ಚೆತ್ತು ತನ್ನ ಮೈದೊಡಿಗೆಸತಿಯುಟ್ಟು ಆಭರಣವಿಲ್ಲದಿರೆ ಸತಿಯ ಬೈದು ಝುಂಕಿಸುವಾಗ ಕನ್ನವಂ ಕಂಡು ತನ್ನ ಬಂಟರಂ ಕರೆಸಿ ಪಟ್ಟಣದ ಕೋಳಾಹಳವಂ ಕೇಳಲು ತಳವಾರರು ಕಳ್ಳರ ಹೆಜ್ಜೆವಿಡಿದು ಹೋಗಿ ಗವಚರ ಪುರವಂಪೊಕ್ಕುದ ಭೂಪಗೆ ಪೇಳಲು ಗಣಪತಿರಾಯ ದಂಡೆತ್ತಿ ನಡೆದು ಗವರಪುರವಂ ಮುತ್ತಿ ಕದ್ದಕಳ್ಳರಂ ಕೂಡಿ ಗುಂಡಬ್ರಹ್ಮಯ್ಯ ಎನಲು ನಮ್ಮಲ್ಲಿದ್ದ ಚರಲಿಂಗವ ನಾವು ಕೊಡೆವು ಎಂದು ವಾದಿಸಲು ಆಗ ಶಿವನು ಚೋರರಂತೆ ಹೆದುರುತ್ತ ಬೆದರುತ್ತ ಮುತ್ತು ರತ್ನವ ನಿಮಗೆ ಕೊಳ್ಳಿ ನಮ್ಮ ಪ್ರಾಣವನುಳುಹಿಯೆಂದು ಬ್ರಹ್ಮಯ್ಯಗಳ ಸತಿಯರಿಗೆ ಪೇಳಲು ಅವರೊಲ್ಲದಿರಲು ಇತ್ತ ಗಣಪತಿರಾಯನು ತ್ರಿಶೂಲಧರ ಕಳ್ಳನಾದರೂ ಶೂಲಕ್ಕೆ ಹಾಕದೆ ಬಿಡುವನೇ ಎಂದು ಕದ್ದಕಳ್ಳರ ನೀ ಕೊಡದೊಡೆ ಊರ ಮುಂದಿದ್ದ ಶೂಲವ ನೀವೇರಿಯೆಂದು ಭೂಪ ನುಡಿಯಲು ವೀರಾವತಾರರು ಶೃಂಗಾರವಾಗಿ ಹರಭಕ್ತರಾಗಿ ಸತಿಯರು ಸಹಿತ ಶೂಲವಿದ್ದಲ್ಲಿಗೆ ಬಂದು ಲೋಕಾಧಿಲೋಕ ನೆರೆದು ನೋಡಲು ಆಗ ಶೂಲವ ಬಳಸುತ್ತ ಬೊಬ್ಬಿರಿಯಲು ಇತ್ತ ಶಿವನ ಭೋದೆಯಿಂದ ಗಣಪತಿರಾಯ ಶೂಲವನೇರ ಬೇಡವೆನಲು ಏರಿಸಿದ ಭಾಷೆಯೇ ವೀರಭಕ್ತಿಗೆ ಮೀರಬಾರದೆಂದು ಶೂಲವನೇರುವಾಗ ಸತಿಯರು ತಮ್ಮ ಶಿರವರಿದು ಪತಿಗಳಿಗಾರತಿಯನೆತ್ತಲು ಗುಂಡಬ್ರಹ್ಮಯ್ಯಗಳಿಬ್ಬರು ಶೂಲವನೇರಿ ಸುಖಾಸನ ಭಾವನೆಯಿಂದ ಶೂಲಧರರಾಯ ನಮೋ ಎಂದು ಶೂಲವನಂಗಯಿಸಲಾಗ ಶಿವನು ಪ್ರಮಥೀಹ ಗಿರಿಜೆ ಸಂಗೀತ ಎಂದು ಪುಷ್ಪದ ಮಳೆ ಸುರಿದು ದೇವ ದುಂದುಬಿ ಮೊಳಗಿ ಸತಿಯರ ಶಿರವ ಪತ್ತಿಸಿ ಪ್ರಾಣವನಿತ್ತು ಪತಿಗಳ ಶೂಲದಿಂದುಳುಹಿ ತೆಗೆದು ಬಿಗಿಯಪ್ಪ ಜಗದ ಜನರೀ ನೋಡುವಂತೆ ಶೂಲ ಜಿಗಿತಿರಲಾಗ ಬಿರಿದಿನ ಭಕ್ತಿ ಸಂಹಿತೆಂದು ಕೈಲಾಸಕ್ಕೊಯ್ದು ಗುಂಡಬ್ರಹ್ಮಯ್ಯಗಳಿಗೆ ನಿತ್ಯ ಪದವಿತ್ತ ಶಿವನು."[೧೬]

'ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ'ವೆಂಬ ಈ ಕೃತಿಯಲ್ಲಿ ಇತರ ಕಾವ್ಯಗಳಂತೆ ಗುಂಡಬ್ರಹ್ಮಯ್ಯರ ಜೀವನದ ವೃತ್ತಾಂತವನ್ನು ಹೇಳಲಾಗಿದೆ. ಆದರೆ ಇದರಲ್ಲಿ ವಿಸ್ತಾರವಾಗಿ, ಸರಳವಾಗಿ ಎಲ್ಲರಿಗೂ ತಿಳಿಯುವಂತೆ ಬರೆಯಲಾಗಿರುವುದು ವಿಶೇಷದ ಸಂಗತಿ. ಗದ್ಯ ರೂಪದಲ್ಲಿ ಬರೆದಿರುವುದರಿಂದ ಗುಂಡಬ್ರಹ್ಮಯ್ಯರ ಚರಿತ್ರೆ ಅರಿಯುವವರಿಗೆ ಉಪಯುಕ್ತ ಆಕರ ಗ್ರಂಥವಾಗಿದೆ.

ವೀರಶೈವಾಮೃತ ಪುರಾಣ

ವೀರಶೈವಾಮೃತ ಪುರಾಣವು ಒಂದು ವಿಶ್ವಕೋಶದಂತಿದೆ. ಈ ಕೃತಿಯ ಕರ್ತೃ ಗುಬ್ಬಿಯ ಮಲ್ಲಣಾರ್ಯ. ರಚನೆಯಾದ ಕಾಲ ಕ್ರಿ. ಶ. ಸುಮಾರು ೧೫೩೦ ಎಂದು ತಿಳಿದುಬಂದಿದೆ. ಇದು ಒಟ್ಟು ಎಂಟು ಕಾಂಡ, ಒಂದುಸೂರ ಮೂವತ್ತಾರು ಸಂಧಿ, ಏಳುಸಾವಿರದ ತೊಂಬತ್ತೊಂಬತ್ತು ವಾರ್ಧಕ ಷಟ್ಪದಿಯಲ್ಲಿ ಕಾವ್ಯ

ರಚನೆಯಾಗಿದೆ. ಇದರಲ್ಲಿ ವೇದಾಂತ, ಶೈವ, ಸಿದ್ಧಾಂತಗಳ ಕೋಶ ಅಡಗಿದೆ. ಶಿವಶರಣರಿಗೆ ಸಂಬಂಧಿಸಿದಂತೆ ನೂರಾರು ಕಥೆಗಳನ್ನು ಹೇಳಲಾಗಿದೆ. ಸಂಧಿ ೧೧ಲ ರಲ್ಲಿ ಬಸವೇಶ್ವರನ ಕೆಲವು ಪವಾಡಗಳು, ಪುರಾತನರ ಪ್ರಸಂಗಗಳನ್ನು ಹೇಳುವಾಗ ಗುಂಡಬ್ರಹ್ಮಯ್ಯಗಳನ್ನು ಉಲ್ಲೇಖಿಸಲಾಗಿದೆ. ಅದನ್ನು ಕೆಳಗಿನ ಪದ್ಯದಲ್ಲಿ ಕಾಣಬಹುದು.

"ಅರಸನೊಡವೆಯ ಕದ್ದ ಶಿವನನೊಪ್ಪಿಸಿಕೊಡದೆ
ಹಿರಿಯ ಶೂಲವನಡರ್ದ ಗುಂಡಬೊಮ್ಮಯ್ಯಗಳು
ಪರವಾದಿಗಳು ನೋಡೆ ಹೋದಲಿಂಗವಕರದ ಚಂಡೇಶಮಾರಯ್ಯನೂ"[೧೭]

ಈ ಕಾವ್ಯದಲ್ಲಿ ಗುಂಡಬ್ರಹ್ಮಯ್ಯರ ಬಗ್ಗೆ ವಿಶೇಷವಾಗಿ ಏನನ್ನೂ ಹೇಳಲಾಗಿಲ್ಲ. ಸಾಮಾನ್ಯ ವಿಷಯವಾದ ರಾಜನ ಒಡವೆಯನ್ನು ಕದ್ದು ಶೂಲಕ್ಕೇರಿರುವುದನ್ನು ಪ್ರಸ್ತಾಪಿಸಲಾಗಿದೆ.

ಕುಮಾರರಾಮ ಚರಿತೆ

ಈ ಕೃತಿಯ ಕರ್ತೃ ನಂಜುಂಡನಾಗಿದ್ದು, ಕುಮಾರರಾಮನ ಕುರಿತಾಗಿ ವಿವರಿಸುತ್ತದೆ. ಪ್ರಾದೇಶಿಕ ಚರಿತ್ರೆಯನ್ನು ಚಿತ್ರಿಸುವ ಮೂಲಕ ಕಾವ್ಯವು ಮಹತ್ವ ಪಡೆದುಕೊಂಡಿದೆ. ಕುಮಾರ ಓರುಗಲ್ಲು ಪ್ರವೇಶಿಸಿದುದು, ಓರುಗಲ್ಲು ಯುದ್ಧದಲ್ಲಿ ಬೊಲ್ಲನನ್ನು ತಂದುದು, ಶೂಲದ ಹಬ್ಬ, ಕುಮ್ಮಟದುರ್ಗ ನಿರ್ಮಾಣ ಮುಂತಾದ ಅಂಶಗಳನ್ನು ಕುಮಾರರಾಮ ಚರಿತ್ರೆಯಿಂದ ತಿಳಿಯಬಹುದು. ಸಾಂಗತ್ಯದ ಮೂಲಕ ಕಾವ್ಯವನ್ನು ರಚಿಸಲಾಗಿದೆ. ಹಳೆಯ ಕುಮಾರರಾಮನ ಸಾಂಗತ್ಯ, ಬಾಲರಾಮನ ಸಾಂಗತ್ಯ, ಹೊಸಕುಮಾರರಾಮನ ಸಾಂಗತ್ಯದಲ್ಲಿ ಶೂಲದ ಹಬ್ಬದ ವರ್ಣನೆ, ಬೊಲ್ಲ ಕುದುರೆ ತಂದಿದ್ದು, ಗುಂಡಬ್ರಹ್ಮಯ್ಯ ದೇವಾಲಯದಲ್ಲಿ ಕುಮಾರರಾಮ ಮಲಗಿದ್ದು ಇನ್ನು ಮೊದಲಾದ ಅಂಶಗಳು ಹೊಸ ಕುಮಾರರಾಮ ಸಾಂಗತ್ಯದಲ್ಲಿ ಬರುತ್ತವೆ. ಅವುಗಳನ್ನು ಈ ಕೆಳಗೆ ಕಾಣಬಹುದು.

"ನಿಷ್ಕ್ರುಳ್ಳ ಗುಂಡಬ್ರಹ್ಮಯ್ಯನ ಗುಡಿಯಲಿ
ಬಿಟ್ಟನು ಹೊರ (ಬೀಡು) ಗಳ|
ಅಷ್ಟ ಐಶ್ವರ್ಯದ ಸಂಭ್ರಮ ಸಹವಾಗಿ
ನೆಟ್ಟನೆ ರಾಯರ ಬಳಿಗೆ||

ಗಂಡುಗಲಿ ರಾಮ ಬಂದಾನೆ ಚಿತ್ತೈಸು
ಗುಂಡಬ್ರಹ್ಮನ ದೇವಾಲಯದಿ|
ಮಂಡಲಪತಿ ಕಂಪಿಲನೊಳು ಮುನಿಸಾಗಿ
ಉದ್ದಂಡ ಪರಿತಂದ ನಿಮ್ಮ ಬಳಿಗೆ||

ಚೆಲವ ಚನ್ನಿಗರಾಮ ಜಳಕ ಮಜ್ಜನಮಾಡಿ

ನಲವಿಂದ ಭೋಜನಗಳನು|
ಸುಲಲಿತ ಗುಂಡಬ್ರಹ್ಮನ ದೇವಾಲಯದಲ್ಲಿ
ಹಲವು ನೆನೆದು ಪವಡಿಸಿದ||

ಮಾರಾಂತರ ಕೊಲ್ವೆ ಮಹಾ ಪರಮಾತ್ಮನೆ
ಮೊರೆಹೊಕ್ಕವರ ಕಾಯ್ದುಳುಹು [ವೆ]|
ನೆರೆಗಲಿ ಗುಂಡಬ್ರಹ್ಮಯ್ಯ ನೀನಲ್ಲ [ವೆ]
ಧುರಧೀರ ರಾಮ ಹೊಗಳಿದ||

ಎಪ್ಪತ್ತು ರಾಜನ ಬೊಲ್ಲನು ಸಿಕ್ಕರೆ
ತಪ್ಪದೆ ನಾ ಬಲಗೊಂಬೆ|
ಒಪ್ಪುವ ಶೂಲದ ಹಬ್ಬವ ಮಾಳ್ಪೆನು
ಛಪ್ಪನ್ನ ದೇಶರಿವಂತೆ||

ಇಷ್ಟಾರ್ಥವ ಬೇಡಿ ರಾಮಯ್ಯ ಪವಡಿಸೆ
ಅಷ್ಟರೊಳಗೆ ನಿದ್ರೆಗೈದು|
ದೃಷ್ಟ ಮೂರುತಿ ಗುಂಡಬ್ರಹ್ಮಯ್ಯ ಸ್ವಪ್ನದಿ
ನಿಷ್ಠೆಯ ತೋರಿ ರಾಮನಿಗೆ||

ಇದಿರೇರಿದ ರೋಮ ಚೆದುರ ಚನ್ನಿಗರಾಮ
ಒದಗಿದ ನಿದ್ರೆಯೊಳಿರಲು|
ಮದನಹರನ ಶರಣ ಬರೆ ಗುಂಡಬ್ರಹ್ಮಯ್ಯ
ಕದನಗಲಿಯ ಸ್ವಪ್ನದಲ್ಲಿ||

ಒಡಗೊಂಡು ಲಿಂಗರಾಹುತ ರಾಮಯ್ಯ[ರು]
ನಡೆತಂದು ಬೀಡಾರದೊಳಗೆ|
ದೃಢವುಳ್ಳ ಗುಂಡಬ್ರಹ್ಮಯ್ಯನಾಲಯದಲ್ಲಿ
ಬಿಡದೆ ಏಕಾಂತ ಮಾಡಿದರು||

ಗುಂಡಬ್ರಹ್ಮಯ್ಯನ ಮನದೊಳು ನೆನೆವುತ
ತಂಡ ತಂಡದಿ ವರವ ಪಡೆದು|
ಖಂಡೆಯ ಜಳಪಿಸಿ ಕದನಕ್ಕೆ ನಡೆದ ಪ್ರ
ಚಂಡ ಚೆನ್ನಿಗ ರಾಮನಾಥ||

ತುಂಡುತುಂಡುಗಳಾಗಿ ಕಡಿದಾಡಿ ಇಬ್ಬರು
ಖಂಡೆಯಲಿ ಹೊಯಿದಾಡೆ|
ಗುಂಡಬ್ರಹ್ಮಯ್ಯಗೆ ಶರಣೆಂದು ರಾಮನು
ಗಂಡಾಳು ತಿರುವಿ ಹೊಯ್ದನು||

ಎಪ್ಪತ್ತುರಾಜನ ಬಿಡು ಬೇಗ ಪೋಗಲಿ
ತಪ್ಪದೆ ತಲೆಯ ಮುಸುಕಿನಲಿ|
ಒಪ್ಪುವ ಗುಂಡಬ್ರಹ್ಮಯ್ಯಗೆ ರಾಮಯ್ಯ
ಒಪ್ಪದಿ ನಡೆದು ವಂದಿಸಿದ||

ಗಂಡಾಳು ರಾಮ ಬೊಲ್ಲನ ಇಳಿದೈತಂದು
ಗುಂಡಬ್ರಹ್ಮಯ್ಯನಾಲಯದಿ|
ಪುಂಡರೀಕನ ಸಖ ಪಶ್ಚಿಮಕಿಳಿಯಲು
ದಂಡು ಬಿಡಿಸಿದನಾಕ್ಷಣದಿ||

ಓರುಗಲ್ಲಿನ ರುದ್ರಸುತನ ಬೊಲ್ಲನ ತಂದು
ಧೀರ ಚೆನ್ನಿಗ ರಾಮನಿರಲು|
ಕಾರುಣ್ಯ ನಿಧಿ ಗುಂಡಬ್ರಹ್ಮಯ್ಯ ಸ್ವಪ್ನದಿ
ತೋರೆ ಶೂಲದ ಮಹತ್ಮೆಯನು||

ಗಂಡಾಳು ರಾಮಯ್ಯ ತಂದೆ ಬಳಿಗೈತಂದು
ಗುಂಡಬ್ರಹ್ಮಯ್ಯನೊಲಿದುದನು|
ತಂಡ ತಂಡದಿ ತನಗೆ ವರವಿತ್ತ ಸ್ವಪ್ನವ
ಮಂಡಲಪತಿಗೆ ಹೇಳಿದನು"||[೧೮]

ರುದ್ರರಾಯನ ಮಗನಾದ ಎಪ್ಪತ್ತುರಾಯನಲ್ಲಿರುವ 'ಬೊಲ್ಲ' ಎಂಬ ಕುದುರೆಯನ್ನು ತರಲು ಕುಮಾರರಾಮನು ಆಂಧ್ರನಾಡಿನ ಓರುಗಲ್ಲಿಗೆ ಬರುವನು. ದಾರಿಯಲ್ಲಿ ಗುಂಡಬ್ರಹ್ಮಯ್ಯರ ದೇವಾಲಯವಿರುತ್ತದೆ. ಅಂದು ಅಲ್ಲಿಯೇ ಮಲಗುವನು.ರಾತ್ರಿ ವೇಳೆಯಲ್ಲಿ ಸ್ವಪ್ನದಲ್ಲಿ ಗುಂಡಬ್ರಹ್ಮಯ್ಯರು ಆಶಿರ್ವಾದ ಮಾಡುವರು. ನಂತರ ಕುಮಾರರಾಮನು ಬೊಲ್ಲ ಕುದುರೆ ವಶವಾದರೆ, ಶೂಲದ ಹಬ್ಬ ಆಚರಿಸುವುದಾಗಿ ಬೇಡಿಕೊಳ್ಳುವನು. ಕೊನೆಗೆ. ಬೊಲ್ಲ ಕುದುರೆಯನ್ನು ಕುಮಾರರಾಮ ಜಯಿಸುವನು. ನಂತರ ಶೂಲದ ಹಬ್ಬವನ್ನು ನೆರವೇರಿಸುವನು. ಗುಂಡಬ್ರಹ್ಮಯ್ಯಗಳ ಸಾಂಸ್ಕೃತಿಕ ಅನನ್ಯತೆಯಲ್ಲಿ ಮುಂದೆ ವಿವರವಾಗಿ ಚರ್ಚಿಸಲಾಗಿದೆ. ಗುಂಡಬ್ರಹ್ಮಯ್ಯಗಳ ಚರಿತ್ರೆಯನ್ನು ಸಂಪೂರ್ಣವಾಗಿ ಅರಿಯಬೇಕಾದರೆ, ಕುಮಾರರಾಮ ಸಾಂಗತ್ಯ ಕೃತಿಗಳನ್ನು ತಿಳಿಯುವುದು ಮುಖ್ಯವೆನಿಸಿದೆ. ಆದ್ದರಿಂದ ಕುಮಾರರಾಮನ ಕುರಿತಾದ ಕೃತಿಗಳು ಪ್ರಮುಖ ಆಕರಗಳಾಗಿವೆ.

ನಂದಿಯಾಗಮಲೀಲೆ

ಈ ಕೃತಿಯ ಕರ್ತೃ ವೀರಸಂಗಪಯ್ಯ. ಶೈವ ವೀರಶೈವ ಮೊದಲಾದ ಸಂಸ್ಕೃತಿಗಳ ಆಂತರಿಕ ಸಂಬಂಧಗಳ ಸ್ವರೂಪವನ್ನು ತಿಳಿಯುವಲ್ಲಿ ಮಹತ್ವದ ಆಕರವಾಗಿ ನಿಲ್ಲುತ್ತದೆ. ೧೫೪೮ ರಲ್ಲಿ ಈ ಕೃತಿಯು ರಚನೆಯಾಗಿದೆಯೆಂದು ಹೇಳಲಾಗಿದೆ. ಮುಖ್ಯವಾಗಿ ಕರ್ನಾಟಕದ ಸಾಂಸ್ಕೃತಿಕ ನಾಯಕನಾದ ಕೊಡೆಕಲ್ಲ ಬಸವಣ್ಣನ ಜೀವನ ಮತ್ತು ಸಾಧನೆಯ ಮೇಲೆ ಬೆಳಕು ಚೆಲ್ಲುವ ಕೃತಿ. ಒಟ್ಟು ೧೪ ಸಂಧಿ, ೧೧೦೦ ಪದ್ಯಗಳನ್ನು ಒಳಗೊಂಡಿದೆ. ಈ ಕಾವ್ಯದಲ್ಲಿ ಶರಣರಿಗೆ ವಂದಿಸುವಾಗ ಗುಂಡಬ್ರಹ್ಮಯ್ಯರ ಹೆಸರುಗಳನ್ನು ಹೇಳಲಾಗಿದೆ. ಅದನ್ನು ಈ ಕೆಳಗಿನಂತೆ ಕಾವ್ಯದಲ್ಲಿ ಉಲ್ಲೇಖಿಸಿದೆ.

"ಮಾಡುವೆ ವಂದನೆ ಮಾಡುವೆ ವಂದನೆ|
ಕೂಡಿ ಆಡುವೆ ಶರಣರ ಅಂಗಳದೊಳಗೆ|
ಕುಂಬಾರ ಗುಂಡಯ್ಯ ಅಂಬಿಗರ ಚೌಡಯ್ಯ|
ಬೊಂಬೆಯ ಬಾಚಿ ಬಿಡದಿಪ್ಪ ಚಾರಮಗೆ|
ಶಂಭು ಮೊರೆಹೊಕ್ಕರೆ ಶೂಲಕೆ ನಡೆದಂತೆ|
ನಂಬಿದ ಗುಂಡಬೊಮ್ಮಯ್ಯನಿಗೆ"[೧೯]

ಹೀಗೆ ಕುಂಬಾರ ಗುಂಡಯ್ಯ, ಅಂಬಿಗರ ಚೌಡಯ್ಯ, ಬಾಚಿ ಬಿಡದಿಪ್ಪ, ಚಾರಮ, ಮುಂತಾದ ಶರಣರಿಗೆ ವಂದಿಸುವಾಗ ಗುಂಡಬ್ರಹ್ಮಯ್ಯರಿಗೆ ವಂದಿಸಲಾಗಿದೆ.

ಜನಪದ ಶರಣಕಾವ್ಯಗಳು

ಜನಪದ ವೃತ್ತಿಗಾಯಕರು ಹಾಡಿರುವಂತ ಶರಣರ ಜೀವನ ಚರಿತ್ರೆಯನ್ನು ಡಾ.ಪಿ.ಕೆ.ರಾಜಶೇಖರ ಅವರು ಸಂಪಾಧಿಸಿದ್ದಾರೆ. ಈ ಸಂಪಾದನಾ ಕೃತಿಯಲ್ಲಿ ಕಲ್ಯಾಣದ ಬಸವಣ್ಣ, ಘನಶರಣ ಹರಳಯ್ಯ, ನುಲಿಯ ಚಂದಯ್ಯ, ಶಿವನಾಗಮ್ಮ, ಅಕ್ಕನಾಗಮ್ಮ, ಮಡಿವಾಳ ಮಾಚಯ್ಯ, ಕುಂಬಾರ ಗುಂಡಯ್ಯ, ಮೈದಾರ ರಾಮಣ್ಣ ಮುಂತಾದವರ ಜನಪದ ಶರಣರ ಕಾವ್ಯಗಳನ್ನು ಸಂಗ್ರಹಿಸಲಾಗಿದೆ. ಅವುಗಳಲ್ಲಿ ವೃತ್ತಿಗಾಯಕರಾದ ನೀಲಗಾರರು ಗುಂಡುಬ್ರಹ್ಮಯ್ಯನ ಕುರಿತು ಹಾಡಿದ್ದಾರೆ. ಹೀಗೆ ಹಾಡಿದ ಹಾಡುಗಳನ್ನು ಕೆಳಗಿನಂತೆ ಕಾಣಬಹುದು.

"ಗುಂಡುಬ್ರಮ್ಮಯ್ಯ ಉರುಬ್ಬಂತ ಕಾಳೆ ಸಬ್ತ
ಪಾರ್ವತಿ ಅಮ್ಮನ ಪಾದದ ಮ್ಯಾಲೆ
ಮುರ್ತಿಂಗ್ಳು ಮಗಾ ಒದ್ದಾಡುವಂಗೆ ಒದ್ದಾಡ್ಬುಡ್ತಂತೆ
ಘನಪತಿ ರಾಜ ಉರುಬ್ಬಂತ ಕಂಚುನ ಕಾಳೆ ಸಬ್ತ
ಅಮ್ಮನವರ ಎದೆ ಮ್ಯಾಲೆ ಶೂಲ ಹೊಡ್ದಂಗೆ ಹೊಡಿಯದಂತೆ
ಪಾರ್ವತಿ ಅಮ್ಮಯ್ಯನೊರೂವೆ ಪರಮೇಶ್ವರನೂವೆ

ಪಗಡೆ ಮಂಚುದ್ಮೇಲೆ ಕುಂತ್ಗಂಡು ಪಗ್ಡೆ ಆಡ್ತಿದ್ರಂತೆ
ಆಹ್ಹಾ ಆ ಜಿವ್ಸ ಘನಪತುರಾಜುಂಗೆ
ಕೇಳಿದ ವರ ಕೊಟ್ರು ಪರಮೇಶ್ವರ
ಆದ್ರೆ ಈವತ್ತುನ ಜಿವ್ಸ ಅವ್ನು ಶಿವುನ ಮ್ಯಾಲೆ
ಪಂಥ ಮಾಡ್ತಿದ್ದಾನೆ
ಆಂಕಾರ ಪಟ್ಟೋರ್ಗೆ ವಾಂಕಾರ ತಪ್ಪಿದ್ದಲ್ಲ.
ಬೇಷ್! ಬ್ರಹ್ಮಗುಂಡಯ್ಯ ನುಡುಸ್ದಂತ ಮುಲ್ಲುನ ಕಾಳೆಸಬ್ದ
ನನ್ನ ಪಾದುಕ್ಕೆ ಸರುಣ್ ಮಾಡ್ತಿದೆಯಲ್ಲ
ಅವನು ಇನ್ನೆಂಥ ಶರಣ ಇರ್ಬೇಕು."[೨೦]

ಗುಂಡಬ್ರಹ್ಮಯ್ಯಗಳು 'ಮೊರೆಹೊಕ್ಕವರನ್ನು ಕಾಪಾಡುವೆವು' ಎಂದು ಓರಂಗಲ್ಲಿನ ಅರಸುಮನೆಯಲ್ಲಿ ಕಹಳೆ ಊದುತ್ತಾರೆ. ಈ ಕಹಳೆಯು ಗಣಪತಿರಾಯನ ವಿರುದ್ಧ ಪಂಥ ಮಾಡಿ ಊದುವಂತಿದೆ. ಕಹಳೆಯ ಧ್ವನಿ ಪಾರ್ವತಿಯ ಪಾದದ ಮೇಲೆ ಮೂರು ತಿಂಗಳ ಮಗು ಒದ್ದಾಡುವಂತೆ, ಪಾರ್ವತಿಯ ಎದೆಯ ಮೇಲೆ ಶೂಲ ತಾಗಿದಂತೆ, ಇವರ ವೀರವ್ರತದ ಕಹಳೆಯ ಧ್ವನಿ ದೇವಲೋಕದಲ್ಲಿ ಕೇಳಿಸಿತು. ಈ ಕಾವ್ಯದಲ್ಲಿ ಗುಂಡಬ್ರಹ್ಮಯ್ಯಗಳ ಚರಿತ್ರೆಯನ್ನು ಹೇಳಲಾಗಿದೆ. ಇದರಿಂದ ಇವರ ಕುರಿತಾದ ಹಾಡುಗಳು ಮೌಖಿಕವಾಗಿ ಉಳಿಯದೆ ಲಿಖಿತ ರೂಪದಲ್ಲಿ ಬಂದಿರುವುದು ಸಂತಸದ ಸಂಗತಿ. ಈ ಕಾವ್ಯದಲ್ಲಿ ೧೬ ಸಂಧಿಗಳನ್ನಾಗಿ ಮಾಡಿಕೊಳ್ಳಲಾಗಿದೆ. ಗುಂಡಬ್ರಹ್ಮಯ್ಯಗಳು ಕಹಳೆ ಊದಿದ್ದು, ಓರುಗಲು ಕೋಟೆಕನ್ನಕ್ಕೆ ನಾರಾಯ್ಣ ಗುರುತಿಟ್ಟದ್ದು, ಕನ್ನಗತ್ತಿ ಮಾಡಿಸಿದ್ದು, ಓರುಗಲ್ಲು ಬೀದಿಗಳ ಸಂಚಾರ, ಗುಂಡಬ್ರಹ್ಮಯ್ಯನನ್ನು ಶೂಲಕ್ಕೆತ್ತಿದ ಅಂಶಗಳು ಪ್ರಮುಖವಾಗಿವೆ. ಈ ಕಾವ್ಯವನ್ನು ಜನಪದ ಸಾಹಿತ್ಯದ ಹಿನ್ನೆಲೆಯಲ್ಲಿ ನೋಡುವುದು ಮುಖ್ಯವಾಗಿದೆ.

ಸ್ವರವಚನ ಸಂಚಯ

ಗೌ.ಮ. ಉಮಾಪತಿ ಶಾಸ್ತ್ರಿಯವರು ಶರಣರ ಅಪ್ರಕಟಿತ ಸ್ವರವಚನಗಳನ್ನು ಆಳವಾದ ಶಾಸ್ತ್ರೀಯ ಅಧ್ಯಯನ ನಡೆಸಿ, 'ಸ್ವರವಚನ ಸಂಚಯ' ಎಂಬ ಕೃತಿಯನ್ನು ಸಂಪಾದಿಸಿದ್ದಾರೆ. ಈ ಕೃತಿಯು ಸಂಶೋಧನ ಕ್ಷೇತ್ರದ ಒಂದು ಆಕರ ಗ್ರಂಥ ಎಂಬುದರಲ್ಲಿ ಎರಡು ಮಾತಿಲ್ಲ. ಏಳಯ್ಯಾ ಬೆಳಗಾಯಿತು, ಸ್ವಾಮಿ ನಮೋ, ಗಣಂಗಳ ಪಾದವ ನೆನವುತ್ತ, ಗುರುವಿನ ನೋಡಿದೆನಮ್ಮಾ, ಶಿವಯೋಗವ ಮಾಡು, ಮಾಡಲಿಲ್ಲವೆ ಮನವೆ ಮುಂತಾದ ೧೧ ಭಾಗಗಳನ್ನು ಮಾಡಿಕೊಂಡು ಕೃತಿ ರಚಿಸಲಾಗಿದೆ. ಶಿವಯೋಗವ ಮಾಡಬೇಕಣ್ಣ ಎಂಬ ಭಾಗದಲ್ಲಿ ಗುಂಡಬ್ರಹ್ಮಯ್ಯನನ್ನು ಉಲ್ಲೇಖಿಸಲಾಗಿದೆ. ಅದನ್ನು ಈ ಕೆಳಗಿನಂತೆ ಗಮನಿಸಬಹುದು.

"ಅಂಡಾಂಡ ಪಿಂಡಾಂಡ ಐಕ್ಯ ಭಾವದಿ ನೋಡು ಮನವೆ| ನಿತ್ಯ
ಕುಂಡಲಿಯೊಳು ಕೂಡಿ ಮಂಡಲಂಗಳ ದಾಟು ಮನವೆ| ಅಲ್ಲಿ

ತಂಡತಂಡದ ಬೆಳಕು ತಾರಕದೊಳು ನೋಡು ಮನವೆ| ಅಲ್ಲಿ
ಗುಂಡಬ್ರಹ್ಮಯ್ಯನಂದ ಗುರುಮೂರ್ತಿಯನ ಕೂಡು ಮನವೆ||

ಧರಣಿ ಭೋಗವನು ಅಳಿದು| ಪರಮ ಅಮೃತ ಶರದಿ ಬೆರೆದು
ನಿರುತ ಗುಂಡಬ್ರಹ್ಮನೊಳಗೆ| ಪರಮ ಪದವಿ ಪಡದ ಬಳಿಕ
ಭ್ರಾಂತಿ ಯಾತಕೋ ವಿಷಯಗಳ| ಚಿಂತೆ ಯಾತಕೋ
ಅಂತರಂಗ ಚಿಂತೆ ಮನದಿ| ಸಂತವಿಟ್ಟ ಶರಣ ಜನಕ್ಕೆ
ಭ್ರಾಂತಿ ಯಾತಕೋ ವಿಷಯಗಳ| ಚಿಂತೆ ಯಾತಕೋ"[೩೧]||

ಈ ಮೇಲಿನ ಗುಂಡಬ್ರಹ್ಮಯ್ಯಗಳ ಕುರಿತಾದ ಸಾಹಿತ್ಯ ಸಂಪತ್ತನ್ನು ಗಮನಿಸಿದರೆ, ಇವರ ಹೆಸರು ಮೊದಲು ಕಾಣಿಸಿಕೊಳ್ಳುವುದು ಗಣಸಹಸ್ರ ನಾಮಾವಳಿಯಲ್ಲಿ. ಈ ಕೃತಿಯಲ್ಲಿ 'ಗುಂಡದ ಬ್ರಹ್ಮಯ್ಯ' ಎಂದು ಉಲ್ಲೇಖಿಸಲಾಗಿದೆ. ೧೫೫೦ ರಲ್ಲಿದ್ದ ನಂಜುಂಡದೇವನು ತನ್ನ ಕೃತಿಯಲ್ಲಿ 'ಗುಂಡಬೊಮ್ಮಿ'ಗಳೆಂದು ಕರೆದಿದ್ದಾರೆ. ಕ್ರಿ. ಶ. ೧೫೮೫ ರ ವಿರುಪಾಕ್ಷಪಂಡಿತನ ಚನ್ನಬಸವ ಪುರಾಣದಲ್ಲಿ 'ಧೀರಗುಂಡ ಬೊಮ್ಮಯ್ಯ' ಎಂದು ಕರೆಯಲಾಗಿದೆ. ಕ್ರಿ. ಶ. ೧೫೮೭ ರ ದೇವಕವಿಯ ಮರುಳಸಿದ್ದ ಕಾವ್ಯದಲ್ಲಿ 'ಗುಂಡಯ್ಯ ಬೊಮ್ಮಯ್ಯ' ಎಂದು ಗುಂಡಬ್ರಹ್ಮಯ್ಯರನ್ನು ಹೆಸರಿಸಲಾಗಿದೆ.

ಮೊರೆಹೊಕ್ಕ ಶಿವನನ್ನು ಕಾಪಾಡಿದರೆಂಬ ಸಂಗತಿ 'ಪದ್ಮರಾಜ ಪುರಾಣ'ದಿಂದ ಮೊದಲಾಗುತ್ತದೆ. 'ಚನ್ನಬಸವ ಪುರಾಣ'ದಲ್ಲಿ ಜಗದೇವ-ಮಲ್ಲಿಬೊಮ್ಮರೇ ಗುಂಡಬ್ರಹ್ಮಯ್ಯಗಳಾಗಿ ಜನಿಸಿದರೆಂಬ ಅಂಶ ಬರುತ್ತದೆ. ಇದನ್ನು ಗಮನಿಸುವುದಾದರೆ, ಕಲ್ಯಾಣದಲ್ಲಿ ಬಿಜ್ಜಳನು ಹರಳಯ್ಯ-ಮಾದರಸರಿಗೆ ಎಳಹೊಡೆ ಶಿಕ್ಷೆ ವಿಧಿಸುತ್ತಾನೆ. ಇದರಿಂದ ಜಗದೇವ-ಮಲ್ಲಿಬೊಮ್ಮಣ್ಣಗಳು ರಾಯನನ್ನು ಕೊಲೆಗೈಯುವರು. ಶರಣ ಧರ್ಮವು ಅಹಿಂಸಾತ್ಮಕವಾದುದರಿಂದ ವಿರುಪಾಕ್ಷ ಪಂಡಿತನು ಪುನರ್ಜನ್ಮದಲ್ಲಿ ಗುಂಡಬ್ರಹ್ಮಯ್ಯಗಳಾಗಿ ಜನಿಸಿ ಶೂಲಕ್ಕೇರುವಂತೆ ಕಾವ್ಯದಲ್ಲಿ ಅಭಿವ್ಯಕ್ತಿಸಲಾಗಿದೆಂದು ಅನುಮಾನ ಸುಳಿಯುತ್ತದೆ. ಇಲ್ಲದಿದ್ದರೆ ಶರಣ ಧರ್ಮದಲ್ಲಿ ಜಗದೇವ-ಮೊಲ್ಲೆಬೊಮ್ಮರು ಉಗ್ರಹಿಂಸಾವಾದಿಗಳೆಂಬ ಅಪಾದನೆಗೆ ಗುರಿಯಾಗುತಿದ್ದರು ಎನಿಸುತ್ತದೆ.

ಮರುಳಸಿದ್ದರು ಕೊಲ್ಲಾಪುರಕ್ಕೆ ಹೋಗುವಾಗ ದಾರಿಯಲ್ಲಿ ಓರಂಗಲ್ಲಿಗೆ ಹೋಗಿ, ಗುಂಡಬ್ರಹ್ಮಯ್ಯರನ್ನು ಕಾಣುವರು. ಅವರ ವೀರವ್ರತ, ನಿಷ್ಠೆಯನ್ನು ಕಂಡು ಮೆಚ್ಚುವರು. ನಂತರ 'ಓರಂಗಲ್ಲಿನ ಅರಮನೆಯಲ್ಲಿ ಬಸವತತ್ವವನ್ನು ಉಂಡರು' ಎಂಬ ಪ್ರಸ್ತಾಪ ಬರುತ್ತದೆ. ಇದರಿಂದ ಓರಂಗಲ್ಲಿನ ಅರಮನೆಯಲ್ಲಿ ಕರ್ನಾಟಕ ಶರಣರ ಪ್ರಭಾವವಿದೆ ಎಂಬುದಕ್ಕೆ ಮೂಲ ನಿರ್ದೇಶನವಾಗಿದೆ. ಈ ಹಿಂದಿನ ಚಿತ್ರಪಟಗಳನ್ನು ಮತ್ತು ಈ ಹೇಳಿಕೆಯನ್ನು ಗಮನಿಸಿದರೆ, ಓರಂಗಲ್ಲಿನ ಅರಮನೆಯು ರಾಜಧರ್ಮದಿಂದ ಮುಕ್ತಿಗೊಂಡು ಶರಣಧರ್ಮಕ್ಕೆ ತಿರುಗಿದೆ ಎನಿಸುತ್ತದೆ. ಅರಮನೆಯರ ಶರಣರ ತತ್ವ - ಸಿದ್ಧಾಂತಗಳು ಪಾಲನೆಯಲ್ಲಿ ಇರುವುದಾಗಿ ತಿಳಿಯುತ್ತದೆ. ಈ ದೃಷ್ಟಿಯಿಂದ 'ಮರುಳಸಿದ್ಧ ಕಾವ್ಯ'

ಮಹತ್ವದ್ದಾಗಿದೆ. ಕುಮಾರರಾಮನ ಸಾಂಗತ್ಯದಲ್ಲಿ ಬಂದಿರುವ 'ಶೂಲದ ಹಬ್ಬ'ದ ವರ್ಣನೆ ಮತ್ತಾವ ಕೃತಿಯಲ್ಲಿಯೂ ವಿಸ್ತಾರವಾಗಿ ಬಂದಿಲ್ಲ. ಮತ್ತು ಗುಂಡಬ್ರಹ್ಮಯ್ಯಗಳ ದೇವಾಲಯವಿದ್ದ ಅಂಶವನ್ನು ಕುಮಾರರಾಮ ಸಾಂಗತ್ಯದಲ್ಲಿ ಹಾಗೂ ಜನಪದ ಶರಣ ಕಾವ್ಯಗಳಲ್ಲಿ ಬರುತ್ತದೆ. ಉಳಿದ ವೀರಶೈವ ಕೃತಿಗಳಲ್ಲಿ ಗುಂಡಬ್ರಹ್ಮಯ್ಯಗಳ ದೇವಾಲಯವಿದ್ದ ವಿವರ ಬರುವುದಿಲ್ಲ.

ಇನ್ನುಳಿದ ಉಲ್ಲೇಖಿತ ಕಾವ್ಯಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಒಂದೇ ರೀತಿಯಾಗಿ ಗುಂಡಬ್ರಹ್ಮಯ್ಯಗಳ ಜೀವನ ವೃತ್ತಾಂತವನ್ನು ಹೇಳಲಾಗಿದೆ. ಮೊರೆಹೊಕ್ಕ ಶಿವನ ಸಂರಕ್ಷಣೆಗಾಗಿ ಶೂಲವನ್ನೇರಿ ಸಾವನ್ನಪ್ಪಿ ಕೈಲಾಸ ಪದವಿ ಪಡೆದ ವೀರಭಕ್ತರ ಚರಿತ್ರೆಯಂತೆ ನಿರೂಪಿಸಲಾಗಿದೆ. ಹೀಗೆ ವೀರಶೈವ ಕಾವ್ಯ-ಪುರಾಣ ಕೃತಿಗಳು, ಜನಪದ ಕಾವ್ಯಗಳು ಮತ್ತು ವೃತ್ತಿಗಾಯಕರಾದ ನೀಲಗಾರರ ಹಾಡುಗಳ ಮೂಲಕ ಗುಂಡಬ್ರಹ್ಮಯ್ಯಗಳನ್ನು ಸಮಗ್ರವಾಗಿ ಅಧ್ಯಯನ ಮಾಡಬಹುದು. ಆದ್ದರಿಂದ ಗುಂಡಬ್ರಹ್ಮಯ್ಯಗಳ ಕುರಿತಾದ 'ಸಾಹಿತ್ಯ ಸಂಪತ್ತನ್ನು' ಅಧ್ಯಯನ ಮಾಡದ ಹೊರತು, ಸಂಪೂರ್ಣ ಚರಿತ್ರೆಯನ್ನು ಕಟ್ಟಿಕೊಡಲಾಗದು. ಆದ್ದರಿಂದ ಈ ಅಧ್ಯಯನ ಪ್ರಮುಖವಾಗಿದೆ.

ಅಡಿಟಿಪ್ಪಣಿ

೧. ಶಿವತತ್ತ್ವ ಚಿಂತಾಮಣಿ : ಸಂ. ಎಚ್. ದೇವೀರಪ್ಪ, ಪುಟ ೭, ಪ್ರಾಚ್ಯವಸ್ತು ಸಂಶೋಧನಾಲಯ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೦.

೨. ಅದೇ. ಸಂಧಿ ೩೭, ಪದ್ಯ ೧೦೪ - ೧೦೯, ಪುಟ ೩೬೧.

೩. ಪದ್ಮರಾಜ ಪುರಾಣ : ಸಂ. ಡಾ. ಆರ್. ಸಿ. ಹರೇಮಠ, ಪುಟ ೧, ಶ್ರೀನಿ. ಪ್ರ. ಸಂ. ಮೃತ್ಯುಂಜಯ ಮಹಾಸ್ವಾಮಿಗಳು ಮುರುಘಾಮಠ ಧಾರವಾಡ, ೧೯೫೮.

೪. ಅದೇ. ಸಂಧಿ ೧೩, ಪುಟ ೩೩೪.

೫. ಚನ್ನಬಸವ ಪುರಾಣ : ವಿರುಪಾಕ್ಷ ಪಂಡಿತ, ಸಂಧಿ ೬೩, ಪುಟ ೭೪೦, ಲಿಂಗಾಯತರ ವಿದ್ಯಾಭಿವೃದ್ಧಿ ಸಂಸ್ಥೆಯ ವಾಙ್ಮಯ ಶಾಖೆ ಧಾರವಾಡ, ೧೯೩೪.

೬. ಮರುಳಸಿದ್ಧ ಕಾವ್ಯ : ಸಂ. ಅ. ನ. ಕೃಷ್ಣರಾಯ, ಸಂಧಿ ೧, ಪುಟ ೪, ವಿಶ್ವವಾಣಿ ಪ್ರಕಟನ ಮಂದಿರ ಬೆಂಗಳೂರು, ೧೯೫೮.

೭. ಅದೇ. ಸಂಧಿ ೪, ಪುಟ ೭೨.

೮. ಸಾನಂದ ಚರಿತೆ : ಸಂ. ಎಸ್. ಬಸಪ್ಪ, ಪುಟ ೩೦೧, ಸಂಧಿ ೯, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ೧೯೭೫.

೯. ಬಸವ ಪುರಾಣ : ಸಂ. ಡಾ. ಆರ್. ಸಿ. ಹಿರೇಮಠ, ಸಂಧಿ ೫೭, ಶ್ರೀನಿ. ಪ್ರ. ಸ್ವ. ಮಹಾಂತ ಸ್ವಾಮಿಗಳು, ಶ್ರೀಗುರು ಮೃತ್ಯುಂಜಯ ಮಹಾಸ್ವಾಮಿಗಳು, ಶ್ರೀ ಮುರುಘಾಮಠ, ಧಾರವಾಡ, ೧೯೭೧.

೧೦. ಗಣಸಹಸ್ರ ನಾಮಾವಳಿ : ಸಂ. ಶಿವಮೂರ್ತಿಶಾಸ್ತ್ರಿ, ಪುಟ ೩೪.

೧೧. ಗುಂಡ ಬಸವೇಶ್ವರ ಚರಿತ್ರೆ : ಸಂ. ಎಂ. ಎಂ. ಕಲಬುರ್ಗಿ, ಸಂಧಿ ೧, ಪುಟ ೭, ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ ಬೆಂಗಳೂರು, ೨೦೦೭.

೧೨. ಅದೇ. ಸಂಧಿ ೪, ಪುಟ ೬೭.

೧೩. ಅದೇ. ಸಂಧಿ ೫, ಪುಟ ೭೯.

೧೪. ಶಿವಾನುಭವ ಗ್ರಂಥಮಾಲೆ ನಂ. ೪೧, ೧೯೩೯.

೧೫. ಗುಂಡಬ್ರಹ್ಮಯ್ಯಗಳ ಚರಿತ್ರೆ : ಸಂ. ಡಾ. ವಿ. ಶಿವಾನಂದ, ಪುಟ ೧೩, ಅಖಂಡೇಶ್ವರ ಗ್ರಂಥಮಾಲೆ ಜೇವರಗಿ. ಜಿ. ಗುಲ್ಬರ್ಗ, ೧೯೭೪.

೧೬. ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ : ಸಂ. ಡಾ.ಆರ್.ಸಿ. ಹಿರೇಮಠ, ಸಂಧಿ ೪, ಪುಟ ೩೧೪ - ೩೨೦, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೬೮.

೧೭. ವೀರಶೈವಾಮೃತ ಪುರಾಣ : ಸಂ. ಡಾ. ಆರ್.ಸಿ. ಹಿರೇಮಠ, ಕಾಂಡ ೮, ಪುಟ ೧೪೪೯, ಎನ್.ಎಸ್.ಎಸ್. ಕಲ್ಯಾಣ ಕೇಂದ್ರ ಬೆಂಗಳೂರು.

೧೮. ಹೊಸ ಕುಮಾರರಾಮನ ಸಾಂಗತ್ಯ : ಸಂ ಎಂ.ಎಂ. ಕಲಬುರ್ಗಿ, ವೀರಣ್ಣ ರಾಜೂರ, ಸಂಧಿ ೫-೭, ಪುಟ ೬೦-೧೦೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೧೯. ನಂದಿಯಾಗಮಲೀಲೆ : ಸಂ. ಇರಸಂಗಯ್ಯ ಗೆ. ಕೊಡೆಕಲ್ಲಮಠ, ಪು. ೨೬೬. ಶ್ರೀಕೊಡೇಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ ಕೊಡೇಕಲ್, ೨೦೦೪.

೨೦. ಜನಪದ ಶರಣ ಕಾವ್ಯಗಳು : ಸಂ ಡಾ. ಪಿ.ಕೆ.ರಾಜಶೇಖರ, ಪು ೪೨೨, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೧೦.

೨೧. ಸ್ವರವಚನ ಸಂಚಯ: ಸಂ.ಗೌ.ಮ. ಉಮಾಪತಿಶಾಸ್ತ್ರಿ, ಪುಟ ೧೩೧-೧೩೨, ಶಿವಪ್ಪ ನಾಯಕ ವಸ್ತು ಸಂಗ್ರಹಾಲಯ ಮತ್ತು ಸಂಶೋಧನ ಪ್ರತಿಷ್ಠಾನ ಶಿವಮೊಗ್ಗ, ೨೦೦೭.

ಅಧ್ಯಾಯ-ಮೂರು

ಓರಂಗಲ್ಲಿನ ಕಾಕತೀಯರು ಮತ್ತು ಶರಣ ಚಳುವಳಿ

ಅಧ್ಯಾಯ-ಮೂರು

ಓರಂಗಲ್ಲಿನ ಕಾಕತೀಯರು ಮತ್ತು ಶರಣ ಚಳುವಳಿ

ಮಧ್ಯಕಾಲೀನ ಸಂದರ್ಭದಲ್ಲಿ ಧಾರ್ಮಿಕ, ಸಾಮಾಜಿಕ ಕ್ಷೇತ್ರದಲ್ಲಿ ವಿಷಮತೆಯ ಬಿರುಗಾಳಿ ಬೀಸುತ್ತಿದ್ದ ಕಾಲದಲ್ಲಿ ಶರಣರ ಚಳುವಳಿ ಪ್ರಾರಂಭವಾಯಿತು. ಅಶುದ್ಧತೆಯಿಂದ ಶುದ್ಧತೆಯೆಡೆಗೆ ತರಲು ಜನರಲ್ಲಿ ಸತ್ಯ, ಸಮತೆ, ಪ್ರೇಮ, ದಯೆ, ಶಾಂತಿ, ಭಕ್ತಿ, ಕಾಯಕದ ಸಂದೇಶವನ್ನು ಸಾರಿದರು. ಇವುಗಳಿಂದ ಬದುಕನ್ನು ವಿಭಿನ್ನ ನೆಲೆಯೊಂದರಿಂದ ಅರ್ಥೈಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದರು. ಈ ಎಲ್ಲದರ ಸಹಕಾರದಿಂದ ಜಾತಿಪದ್ಧತಿ, ಏಣಿಶ್ರೇಣಿ, ಅಂಧ ನಂಬಿಕೆ ಮುಂತಾದ ಸಾಮಾಜಿಕ ಸಮಸ್ಯೆಗಳ ಬೇರನ್ನು ಅಲುಗಾಡಿಸಲಾಯಿತು. ಆತ್ಮಸ್ಥೈರ್ಯವನ್ನು ಮೂಡಿಸುವುದರ ಮೂಲಕ ಮಾನವೀಯ ಗುಣಗಳನ್ನು ಬಿತ್ತರಿಸಿದರು. ಅಲ್ಲದೆ ಶರಣರು ಜಗತ್ತಿನಲ್ಲಿಯೇ ಇದ್ದುಕೊಂಡು ಲಿಂಗಾಂಗ ಸಾಮರಸ್ಯ ಹೊಂದಬಹುದೆಂದು ತೋರಿಸಿಕೊಟ್ಟರು. ಪ್ರತಿಯೊಬ್ಬ ಶಿವಶರಣರ ಮಾರ್ಗಗಳು ಬೇರೆ ಬೇರೆಯಾದರೂ, ಸೇರುವ ಮಹಾಮಾರ್ಗ ಒಂದೆ. ಆದ್ದರಿಂದ ಇಹದ ಬದುಕನ್ನು ಹಸನುಗೊಳಿಸುವ ನಿಟ್ಟಿನಲ್ಲಿ ಎಲ್ಲ ಶರಣರ ಮೂಲ ಉದ್ದೇಶ ಒಂದೇ ಆಗಿದೆ. ತಮ್ಮಲ್ಲಿ ಹುದುಗಿದ ಭಕ್ತಿ ಮತ್ತು ಶಕ್ತಿಯನ್ನು ನಿತ್ಯ ಕಾಯಕದ ನಿಷ್ಠೆಯ ಮೂಲಕ ತೋರಿದರು. ಇದರಿಂದ ಶರಣರು ತಮ್ಮ ಕಾಯಕದ ಮೂಲಕವೇ ಪರಮಾತ್ಮನನ್ನು ಮೆಚ್ಚಿಸಬಹುದೆಂದು ತೋರಿಸಿಕೊಟ್ಟರು.

ಕಾಯಕ ಯಾವುದೇ ಆಗಿರಲಿ, ಅವುಗಳಲ್ಲಿ ಮೇಲು ಮತ್ತು ಕೀಳು ಎಂಬ ಭಾವನೆಯಿಲ್ಲವೆಂದು ಬೋಧಿಸಿದರು. ಇದರಿಂದ ಕಾಯಕಕ್ಕೆ ಪಾರಮಾರ್ಥಿಕ ಸ್ವರೂಪವನ್ನು ನೀಡಿದಂತಾಯಿತು. ಶರಣರ ತತ್ವ -ಸಿದ್ಧಾಂತಗಳಿಂದ ಬಸವಣ್ಣನವರ ಕರ್ತೃತ್ವ ಶಕ್ತಿಗೆ ಕಲ್ಯಾಣ ಕೇಂದ್ರವಾಯಿತು. ನೆರೆಯ ನಾಡುಗಳಾದ ಆಂಧ್ರ, ಮಹಾರಾಷ್ಟ್ರ, ಕೇರಳ, ಉತ್ತರ ಕಾಶ್ಮೀರದವರೆಗೂ ಕಲ್ಯಾಣ ಕೈಚಾಚಿತು. ಕರ್ನಾಟಕದ ನಾನಾ ಭಾಗಗಳಿಂದ, ನಾನಾ ಮನೋಧರ್ಮದ, ನಾನಾ ಕಾಯಕಗಳ ಜನ ಕಲ್ಯಾಣದಲ್ಲಿ ಕಿಕ್ಕಿರಿದು ಹೊಸ ಧರ್ಮದ ಬೆಳಕಿನಂತೆ ಕಾರ್ಯನಿರತರಾದರು. ಕಲ್ಯಾಣದಲ್ಲಿ ಸಮಾವೇಶಗೊಂಡಿದ್ದ ಶರಣರಲ್ಲಿ ಅದೆಷ್ಟು ಭಿನ್ನತೆ, ಪರಿಸರ, ಅನುಭವ, ಪ್ರಭಾವಗಳಿಂದ ಬಂದಿದ್ದರೆಂಬುದನ್ನು ಗಮನಿಸಿದರೆ ಅಚ್ಚರಿಯೆನಿಸುತ್ತದೆ. ಸಿದ್ಧರಾಮ, ಸಕಲೇಶ ಮಾದರಸ, ಶಿವಲೆಂಕ ಮಂಚಣ್ಣ ಇವರೆಲ್ಲ ತಮ್ಮ ಉನ್ನತ ಮಟ್ಟದ ಸಾಧನೆಯಿಂದ ಬಸವನ ಸನ್ನಿಧಿಗೆ ಒಲಿದು ಬಂದರು. ಸೊಡ್ಡಳ ಬಾಚರಸ, ಮಧುವರಸರಂತಹ ಉತ್ತಮ ಕುಲದವರು

ಬಸವನ ಪ್ರಭೆಗೆ ತಲೆಬಾಗಿ ಅಹಂಕಾರ ಕಳಚಿ ಬಂದು ಶರಣರಾದರು. ಕೆಳಸ್ತರದವರಿಗಂತೂ ಮಹಾಮನೆಯ ಬಾಗಿಲು ತೆರೆದುದೆ ತಡ ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಮಾದಾರ ಚೆನ್ನಯ್ಯ, ಮೋಳಿಗೆಯ ಮಾರಯ್ಯ, ಕಿನ್ನರಿಬೊಮ್ಮಣ್ಣ, ಹಡಪದ ಅಪ್ಪಣ್ಣ, ತುರುಗಾಹಿ ರಾಮಣ್ಣ ಮುಂತಾದ ಸಾಧಕರು ತಮ್ಮ ವಿಶಿಷ್ಟ ಸಾಧನೆಯಿಂದ ಮೇಲೆದ್ದರು.

ಬಸವಾದಿ ಶರಣರು ಕೈಗೊಂಡ ಕಾಯಕವು ತನು ಮನಗಳನ್ನು ತಲ್ಲೀನಗೊಳಿಸಿ ಶ್ರಮಿಸುವ ಪ್ರಾಮಾಣಿಕ ಕ್ರಿಯೆಯಾಗಿತ್ತು. ಶರಣರು ವ್ಯಕ್ತಪಡಿಸಿದ ಕಾಯಕ ವೈವಿಧ್ಯಮಯ ಅಷ್ಟೇ ಶ್ರಮ ಶ್ರದ್ಧೆಯನ್ನು ವ್ಯಕ್ತಪಡಿಸುವಂತಿದೆ. ನಿತ್ಯ ಬದುಕಿಗೆ ಸಂಬಂಧಿಸಿದ ಹೊಳೆ ದಾಟಿಸುವ, ಮೀನು ಹಿಡಿಯುವ, ದನ ಕಾಯುವ, ಕ್ಷೌರಿಕ ಮಾಡುವ, ಕೃಷಿ ಮಾಡುವ, ಹಗ್ಗ ಹೊಸೆವ, ಪಾದರಕ್ಷೆ ಮಾಡುವ, ನೂಲುವಿಕೆ ಮಾಡುವ, ಬಟ್ಟೆ ಸ್ವಚ್ಛಗೊಳಿಸುವ, ಕಿನ್ನರಿ ಬಾರಿಸುವ, ಕಾಯಕವನ್ನು ಕೈಗೊಂಡಿದ್ದರು. ಇಂತಹ ಕಾಯಕದ ತತ್ವವನ್ನು ಪ್ರಥಮ ಬಾರಿಗೆ ಸೈದ್ಧಾಂತಿಕ ತಳಹದಿಯ ಮೇಲೆ ರೂಪಿಸಿದವರು ಶರಣರು.

ಹನ್ನೆರಡನೆ ಶತಮಾನದಿಂದ ಹದಿನಾರನೆ ಶತಮಾನದವರೆಗಿನ ಭಕ್ತಿ ಆಂದೋಲನದಲ್ಲಿ, ಸಾಮಾಜಿಕ ಮೌಲ್ಯಗಳ ಕಾಳಜಿ ಮತ್ತು ಆಧ್ಯಾತ್ಮಿಕ ಚಿಂತನೆ ಮುಖ್ಯವಾಗಿತ್ತು. ಭಾರತದಲ್ಲಿ ಬೇರಾವ ಭಾಷೆಗಳಲ್ಲೂ ಸಂಖ್ಯೆಯ ದೃಷ್ಟಿಯಿಂದ ಕನ್ನಡದಲ್ಲಿ ಬಂದಷ್ಟು ಪ್ರಮಾಣದಲ್ಲಿ ಭಕ್ತರು, ಸಮಾಜ ಸುಧಾರಕರು ಹಾಗೂ ಆಧ್ಯಾತ್ಮ ಸಾಧಕರು ಬರಲಿಲ್ಲ. ಬೇರೆಲ್ಲೂ ಭಕ್ತಿಯ ಆಂದೋಲನವು ಒಂದು ಬೃಹತ್ಪ್ರಮಾಣದ ಸಾಮಾಜಿಕ ಚಳುವಳಿಯಾಗಿ ಬೆಳೆಯಲಿಲ್ಲ. ಆದರೆ ಕನ್ನಡದಲ್ಲಿ ಭಕ್ತಿ ಚಳುವಳಿಯು ತನ್ನೆಲ್ಲ ಹಾಸು-ಬೀಸುಗಳೊಂದಿಗೆ ಸಾಮೂಹಿಕ ಜನಜಾಗೃತಿಯನ್ನು ಮೂಡಿಸುವುದರ ಜೊತೆಗೆ ಭಕ್ತಿಯನ್ನು ಸಾರ್ವತ್ರಿಕಗೊಳಿಸಿದೆ. ಈ ರೀತಿಯ ಶರಣ ಚಳುವಳಿಯು ಜನರಲ್ಲಿ ಹೊಸ ಸಂಚಲನ ಮೂಡಿಸಿತು. ಆದ್ದರಿಂದ ಕಾಲಕ್ರಮೇಣ ಭಕ್ತಿಯ ನವಕಲ್ಪನೆ ನಾಡಿನ ತುಂಬಾ ಪ್ರಸರಿಸಿತು. ಇದರಿಂದ ಅಸಂಖ್ಯಾತ ಶಿವಶರಣರು ಕಲ್ಯಾಣಕ್ಕೆ ಬಂದರು. ಹೀಗೆ ಕಲ್ಯಾಣವು ಮನುಕುಲ ಉದ್ಧಾರದ ಸ್ಥಳವಾಯಿತು.

ಇಂತಹ ತಾತ್ವಿಕ ಮತ್ತು ಧಾರ್ಮಿಕ ತತ್ವವುಳ್ಳ ಶರಣರು ಹಾಗೂ ಇವರ ಚಿಂತನೆಗಳು ಬಹಳ ದಿನಗಳ ಕಾಲ ಉಳಿಯಲಿಲ್ಲ. ಇದಕ್ಕೆ ಕಾರಣ ಆಕಸ್ಮಿಕವಾಗಿ ಸಂಭವಿಸಿದ ಕಲ್ಯಾಣ ಕ್ರಾಂತಿ. ಶರಣರಿಂದ ಜೀವನ ಮೌಲ್ಯಗಳು ರೂಪುಗೊಳ್ಳುತ್ತಿದ್ದ ಸಮಯದಲ್ಲಿ ಶರಣರ ಕೆರೆಯೊಡೆದು ಅನೇಕ ಬದಲಾವಣೆಗೆ ಕಾರಣವಾಯಿತು. ಆದ್ದರಿಂದ ಕಲ್ಯಾಣ ಕ್ರಾಂತಿಯ ನಂತರ ಆಂಧ್ರದ ಓರಂಗಲ್ಲು, ಶ್ರೀಶೈಲ, ಹಂಪಿ, ಎಡೆಯೂರು, ಉಳವಿ ಮುಂತಾದ ಕ್ಷೇತ್ರಗಳಿಗೆ ಶಿವಶರಣರು ತೆರಳಿದರು. ಇದರಿಂದ ಈ ಊರುಗಳು ವೀರಶೈವ ಕೇಂದ್ರಗಳಾದವು.

ಕಲ್ಯಾಣ ಕ್ರಾಂತಿಯಿಂದ ಒಂದು ರೀತಿಯಲ್ಲಿ ಹಾನಿ ಎನಿಸಿದರೂ ಮತ್ತೊಂದು ದೃಷ್ಟಿಯಲ್ಲಿ ಸಹಕಾರಿಯಾಯಿತು. ಶರಣರು ಮತ್ತು ಅವರ ತತ್ವಗಳು ಹತ್ತೂ ದಿಕ್ಕಿಗೂ ಹರಡಿದವು. ಇದರಿಂದ ಶರಣ ಧರ್ಮಕ್ಕೆ ದೊಡ್ಡ ವ್ಯಾಪ್ತಿ ಸೃಷ್ಟಿಯಾಯಿತು. ಬೇರೆ ಬೇರೆ ದಿಕ್ಕಿಗೆ ಚದುರಿದವರಲ್ಲಿ ಮುಖ್ಯವಾಗಿ ಎರಡು

ಗುಂಪುಗಳು. ಒಂದು ಗುಂಪು ಉಳವಿಯತ್ತ ಹೋಯಿತು. ಇನ್ನೊಂದು ಗುಂಪು ಶ್ರೀಶೈಲದತ್ತ ತೆರಳಿತು. ಶ್ರೀಶೈಲದತ್ತ ಹೊರಟ ಶರಣರು ಓರಂಗಲ್ಲಿನಲ್ಲಿ ನೆಲೆನಿಂತ ಸಂಭವವಿದೆ. ಓರಂಗಲ್ಲಿನ ಕಾಕತೀಯರ ದೊರೆಗಳು ಶರಣ ಧರ್ಮಕ್ಕೆ ವಿಶೇಷವಾದ ಪ್ರೋತ್ಸಾಹ ನೀಡಿದರು. ಈ ಶರಣರ ಬಾಯಿಂದ ನೆರೆಹೊರೆಯ ಜನರು ಬಸವಾದಿ ಪ್ರಥವರ ಚರಿತ್ರೆಯನ್ನು ಕೇಳಿರಬೇಕು. ಆದ್ದರಿಂದ ಓರಂಗಲ್ಲಿನ ಸಮೀಪದಲ್ಲಿದ್ದ ಪಾಲ್ಕುರಿಗೆ ಸೋಮನಾಥನು ಇಂತಹ ನಿದರ್ಶನಗಳ ಮೂಲಕ 'ಬಸವ ಪುರಾಣ'ವನ್ನು ರಚಿಸಿರಬೇಕೆನಿಸುತ್ತದೆ.

ಅಜ್ಞಾತವಾಸ ಸಂಭವಿಸುವ ಅವಧಿಯಲ್ಲಿ ಶರಣರನ್ನು, ಶರಣ ಧರ್ಮವನ್ನು, ಶರಣ ಸಾಹಿತ್ಯವನ್ನು ರಕ್ಷಿಸಿಕೊಂಡು ಬಂದ ಕೀರ್ತಿ ಓರಂಗಲ್ಲಿನ ಕಾಕತೀಯರಿಗೆ ಸಲ್ಲುತ್ತದೆ. ಶ್ರೀಶೈಲದತ್ತ ಬಂದ ಮತ್ತು ಇನ್ನಿತರ ಕಡೆಗೆ ಚದುರಿದ ಶರಣರು ಸುಮ್ಮನೆ ಕೂಡಲಿಲ್ಲ. ಬದಲಾಗಿ ತಮ್ಮ ತತ್ವ ಸಿದ್ಧಾಂತಗಳನ್ನು ಆಯಾ ಸ್ಥಳಗಳಲ್ಲಿ ಬಿತ್ತಿದರು. ಈ ಕಾರಣದಿಂದ ಶರಣರ ಶಿವತತ್ವಗಳು ಎಲ್ಲಾ ದಿಕ್ಕಿಗೂ ವ್ಯಾಪಿಸಿದವು. ಇದರಿಂದ ವೀರಶೈವ ಧರ್ಮವು ಸಮೃದ್ಧಗೊಳ್ಳತೊಡಗಿತು. ಶಿವವಾಣಿಯನ್ನು ಶರಣವಾಣಿಯನ್ನಾಗಿಸಿಕೊಂಡು ಜನರಿಗೆ ತಲುಪಿಸುವ ಮಹತ್ತರವಾದ ಆಶಯವನ್ನು ಶರಣರು ಹೊಂದಿದ್ದರು. ಈ ವಾಣಿಯು ಮೊದಲಿಗೆ ಕಲ್ಯಾಣದಲ್ಲಿ ಬಿತ್ತರಗೊಂಡಿತು. ನಂತರದ ದಿನಗಳಲ್ಲಿ ಎಲ್ಲಾ ಪ್ರದೇಶಗಳನ್ನು ಆವರಿಸಿತು. ಶ್ರೀಶೈಲದ ಶರಣರ ಶಿವವಾಣಿಯಂತೂ ಓರಂಗಲ್ಲಿನ ಅರಸರಿಗೆ ಮತ್ತು ಅಲ್ಲಿಯ ಜನರಿಗೆ ಬಹಳ ಪ್ರಭಾವ ಬೀರಿರಬೇಕು. ಆದ್ದರಿಂದ ಗಣಪತಿರಾಯನ ಅರಮನೆಯಲ್ಲಿ ಕರ್ನಾಟಕದ ಮಹಾಮನೆಯ ಶರಣರ ಚಿತ್ರಪಟಗಳು ಕಂಡುಬರುತ್ತವೆ.

ಇದರಿಂದ ಕಾಕತೀಯರ ಕಾಲದ ವೀರಶೈವ ಧರ್ಮ, ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಸೂಕ್ಷ್ಮವಾಗಿ ಗಮನಿಸುವುದು ಮುಖ್ಯವಾಗಿದೆ. ಈ ಕಾರ್ಯದಿಂದ ಕರ್ನಾಟಕದ ಶರಣ ಸಾಹಿತ್ಯದಲ್ಲಿ ಕಳೆದುಹೋದ ಹಲವಾರು ಘಟನೆಗಳು ನಮಗೆ ದೊರೆಯುತ್ತವೆ. ಆದ್ದರಿಂದ ಈ ನಿಟ್ಟಿನಲ್ಲಿ ಅಧ್ಯಯನ ಮಾಡುವುದು ಪ್ರಮುಖವಾಗಿದೆ. ಕಲ್ಯಾಣ ಕ್ರಾಂತಿಯ ನಂತರ ಎಲ್ಲಾ ದಿಕ್ಕಿಗೂ ಹರಡಿದ ಶರಣರು ಏನಾದರು? ಇತರರಿಗೆ ಯಾವ ರೀತಿಯಲ್ಲಿ ಪ್ರಭಾವ ಬೀರಿದರು? ಅವರ ಮೂಲ ಆಶಯಗಳು ಅಲ್ಲಿ ಫಲಿಸಿತೆ? ಶಿವವಾಣಿಯನ್ನು ಬಿತ್ತರಿಸುವಾಗ ಮತ್ಯಾವ ಶಕ್ತಿಗಳು ಅಡ್ಡಿಯಾದವು? ಅನ್ಯ ಪ್ರದೇಶದಲ್ಲಿ ಇವರನ್ನು ಕಾಣುತ್ತಿದ್ದ ಬಗೆ ಹೇಗೆ? ಇನ್ನೂ ಮುಂತಾದ ಪ್ರಶ್ನೆಗಳಿಗೆ ಉತ್ತರಿಸಲು ಓರಂಗಲ್ಲಿನ ಕಾಕತೀಯರ ಮತ್ತು ಇತರರ ಬಗ್ಗೆ ಅಧ್ಯಯನ ಕೈಗೊಳ್ಳುವುದು ಮುಖ್ಯವಾಗಿದೆ. ಈ ದೃಷ್ಟಿಯಿಂದ ಕಾಕತೀಯ ಅರಸರ ಬಗ್ಗೆ ಪ್ರಸ್ತಾಪಿಸುವುದು ಸೂಕ್ತವೆನಿಸುತ್ತದೆ.

"ಕಾಕತೀಯರು ಕಲ್ಯಾಣ ಚಾಲುಕ್ಯರ ಸಾಮಂತರು ಮತ್ತು ರಾಷ್ಟ್ರಕೂಟರ ಅನುಯಾಯಿಗಳಾಗಿದ್ದರು. ಇವರು ಮೊದಲಿಗೆ ಜೈನ ಮತಾವಲಂಬಿಯಾಗಿದ್ದರು. ಗಣಪತಿರಾಯನ ಕಾಲದಲ್ಲಿ ಶೈವ ಮತಾವಲಂಬಿಗಳಾದರು".[7] ವಿಜಯನಗರದ ಹಕ್ಕಬುಕ್ಕರ ಒಡನಾಟದಲ್ಲಿದ್ದ ಇವರು ಆಂಧ್ರದಲ್ಲಿ ತಮ್ಮ ರಾಜಕೀಯ ಅಸ್ತಿತ್ವವನ್ನು ಬಲಪಡಿಸಿಕೊಂಡಿದ್ದರು. ದುರ್ಜಯಕುಲಕೆ ಸೇರಿದವರಾಗಿದ್ದ ಇವರು ಜಾತಿಯಿಂದ

ಶೂದ್ರರಾಗಿದ್ದರು. ಒಂದನೆಯ ಬೇತನು ಕಾಕತೀಯ ಮನೆತನದ ಮೊದಲ ಅರಸನಾಗಿದ್ದಾನೆ. ಕ್ರಿ.ಶ.೧೦೦೦-೧೦೨೦ರಲ್ಲಿ ಆಳ್ವಿಕೆ ನಡೆಸಿದ ಇವನು ಹನುಕೊಂಡವನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ಆನಂತರ ಓರಂಗಲ್ಲಿಗೆ ರಾಜಧಾನಿಯನ್ನು ಸ್ಥಳಾಂತರಿಸಿಕೊಂಡರು. ಆ ವೇಳೆಗಾಗಲೇ ಶ್ರೀಶೈಲ, ಕೊಲ್ಲೀಪಾಕಿ ಹಾಗೂ ಓರಂಗಲ್ಲುಗಳು ವೀರಶೈವ ಧರ್ಮದ ಕೇಂದ್ರಸ್ಥಾನಗಳಾಗಿದ್ದವು. ಕಲ್ಯಾಣ ಕ್ರಾಂತಿಯ ಪ್ರಭಾವ ಆಂಧ್ರಕ್ಕೂ ಹರಡಿ ಪಂಡಿತರಾಧ್ಯರಂಥವರು ಶರಣ ಕ್ರಾಂತಿಗೆ ಪ್ರಭಾವಿತರಾದರು.

ಮಲ್ಲಿಕಾರ್ಜುನ ಪಂಡಿತಾರಾಧ್ಯರು 'ಶಿವತತ್ವ ಸಾರ'ದ ೫೦೦ ಪದ್ಯದಲ್ಲಿ ಶೈವಸಿದ್ಧಾಂತಗಳನ್ನು ಪ್ರತಿಪಾದಿಸಿದರು. ಹಂಪಿಯ ರಾಘವಾಂಕನು "ಕೃತಿಗಧಿಪತಿ ಓರಂಗಲ್ಲ ವೀರೇಶ"[೨]ನೆಂದು ಹೇಳಿ ಮೀಸಲುಗವಿತೆಯೆಂಬ ವೀರೇಶ ಚರಿತೆಯನ್ನು ಬರೆದನು. ಪಾಲ್ಕುರಿಗೆ ಸೋಮನಾಥನ ಮಗನಾದ ಚತುರ್ಮುಖ ಬಸವೇಶನಿಂದ ವೀರಭದ್ರ ವಿಜಯ, ಶಂಭುಲೀಲೆ ಮುಂತಾದ ಕೃತಿಗಳು ರಚನೆಗೊಂಡವು. ಬಹುಶಃ ಗುಂಡುಬ್ರಹ್ಮಯ್ಯಗಳ ಚೌಪದಿ ಬರೆದ ಓದಿಸುವ ಮಡಿವಾಳಯ್ಯ ಕಾಕತೀಯ ಅರಸರ ಆಶ್ರಿತ ಕವಿಯಾಗಿ ಶಿವಶರಣರ ಕಥೆಯನ್ನು ಬರೆದಿರಬೇಕೆನಿಸುತ್ತದೆ. ಪ್ರತಾಪರುದ್ರನ ಕಾಲದಲ್ಲಿ ವಿಶ್ವೇಶ್ವರ ಶಿವದೇಶಿಕನಿಂದ ಶಿವತತ್ವ ರಸಾಯನ, ಪಡವರ್ತಿ ಬಸವಕವಿಯಿಂದ ವೀರಶೈವ ದೀಕ್ಷಾಬೋಧ, ಪಡವರ್ತಿ ಸೋಮನಾಥನಿಂದ ಬಸವಪುರಾಣ ಗ್ರಂಥಗಳು ಸೃಷ್ಟಿಗೊಂಡಿವೆ.

ಗಣಪತಿರಾಯನ ಕಾಲದಲ್ಲಿ ಗುಂಡಬ್ರಹ್ಮಯ್ಯಗಳೆಂಬ ಶಿವಶರಣರು ಸಾಹಿತ್ಯ ಸಂವರ್ಧನೆಯ ಜೊತೆಗೆ ಶಿಲ್ಪಗಳ ಮೂಲಕ ಶೈವ ಧರ್ಮವನ್ನು ಪ್ರತಿನಿಧಿಸಿದರು. ಇವರ ದೇವಾಲಯಗಳು ಹೆಚ್ಚಾಗಿ ಶಿವಾಲಯಗಳಾಗಿವೆ. "ಓರಂಗಲ್ಲಿನ ವೀರಭದ್ರ ದೇವಾಲಯಗಳಲ್ಲಿ 'ವೀರಬ್ರಹ್ಮಯ್ಯ' ಮತ್ತು ಗುಂಡಬ್ರಹ್ಮಯ್ಯಗಳ ದೇವಸ್ಥಾನವಿದ್ದಂತೆ ತೋರುತ್ತದೆ. ಪ್ರತಾಪರುದ್ರನ ಕಾಲದ ಕ್ರಿ.ಶ.೧೨೬೦ರ ಶಾಸನದಲ್ಲಿ ಭೀಮದೇವ ಎಂಬುವವನು ಪಾತಳ್ಳಿಪಾಟ, ಶ್ರೀ ಸೋಮನಾಥ, ಅನ್ನೇಶ್ವರ ಮತ್ತು ಬ್ರಂಮಯಂಗಾರಕೆ ಎಂದು ಅವರಿಬ್ಬರಿಗೂ ಓಗರಮು, ನೇತಿಕೆ, ಪೆರಗುನಕೂ, ಉದಯ ಮಜ್ಜನಮು, ಪಾಲಕು"[೩] ಎಂದು ದತ್ತಿ ಬಿಟ್ಟಿರುವುದು ತಿಳಿಸುತ್ತದೆ.

ಗುಂಡಬ್ರಹ್ಮಯ್ಯಗಳೆಂಬ ಚಾರಿತ್ರಿಕ ಶರಣರಿಬ್ಬರು ಆಂಧ್ರನಾಡಿನಲ್ಲಿ ಶೈವನಿಷ್ಠೆ ಮೆರೆದರು. ಈ ಶರಣರು ಶೈವ ಧರ್ಮಕ್ಕೆ ಆಶ್ರಯ ನೀಡಿದ ಕಾಕತೀಯ ಅರಸ ಗಣಪತಿರಾಯನ ಆಳ್ವಿಕೆಯಲ್ಲಿದ್ದರು. ಆದ್ದರಿಂದ ಈತನ ಕಾಲವು ಆಂಧ್ರನಾಡಿನ ವೀರಶೈವ ಚರಿತ್ರೆಯಲ್ಲಿ ಒಂದು ನವಯುಗವನ್ನು ನಿರ್ಮಿಸಿದೆ. ಕಲ್ಯಾಣ ಕ್ರಾಂತಿಯ ತರುವಾಯದಲ್ಲಿ ಅನುಭವ ಮಂಟಪದಂತಹ ಒಂದು ಸಂಸ್ಥೆ ಪುನರ್ರಚನೆಯಾಗಿದೆ. ಅಲ್ಲಿ ಮತ್ತೆ ಶರಣಗೋಷ್ಠಿಗೆ ಇಂಬನ್ನಿತ್ತವನು ಗಣಪತಿರಾಯ. ಈ ರಾಜನ ಬಗೆಗೆ ಮಲಿಕಾಪೂರ ಶಾಸನದಲ್ಲಿ ಹೀಗೆ ಹೇಳಿದೆ.

"ವಿದ್ಯಾಮಂಟಪ ವರ್ತಿನಂ ಗಣಪತಿಕ್ಷ್ಮಾಪಾಲ ದೀಕ್ಷಾಗುರುಂ ಶ್ರೀ ವಿಶ್ವೇಶ್ವರ ಶಂಭುಮೀಕ್ಷಿತವತಾಂ ತೇ ಚಕ್ಷುಷೀ ಚಕ್ಷುಶಿ"[೪] ಇಲ್ಲಿನ 'ವಿದ್ಯಾಮಂಟಪ' ಅನುಭವ ಮಂಟಪವನ್ನೇ ಹೋಲುತ್ತಿದ್ದು ಅದಕ್ಕೆ

ಅಧಿಪತಿಯೂ, ದೀಕ್ಷಾಗುರುವೂ, ಆಸ್ಥಾನ ಕವಿಯೂ ಆದ ಗೋಳಕೀಮಠದ ಶ್ರೀ ವಿಶ್ವೇಶ್ವರ ದೇಶಿಕನಿಂದ ಗಣಪತಿರಾಯನು ಬಸವ ಮಹಾತ್ಮೆಯನ್ನು ಕೇಳಿ ತಿಳಿದನೆಂದು ಗೊತ್ತಾಗುತ್ತದೆ. ಇಂತಹ ಶರಣಧರ್ಮದ ಪೋಷಕನಾದ ದೊರೆ ಇತರರ ದೃಷ್ಟಿಯಲ್ಲಿ ಗಣಪತಿರಾಯನು ಶರಣರಿಗೆ ಶೂಲದ ಶಿಕ್ಷೆಯಿತ್ತನೆಂದು ನಿಂದನೆಗೆ ಗುರಿಯಾದರೂ, ಶರಣರ ಭಕ್ತಿನಿಷ್ಠೆಗೆ ಒರೆಗಲ್ಲಾಗಿ ನಿಲ್ಲುವಂತಾದನು. ಇದರಿಂದಾಗಿ ಗುಂಡಬ್ರಹ್ಮಯ್ಯರು ಚಾರಿತ್ರಿಕ ವ್ಯಕ್ತಿಗಳಾದರು. ಇವರು ಜೀವನವನ್ನು ಮೂರ್ತದಿಂದ ಅಮೂರ್ತಕ್ಕೆ ಕೊಂಡೊಯ್ಯುವ ಶಿವಪಾರಮ್ಯ ಮೆರೆದರು. ಇದರಿಂದಾಗಿ ಕನ್ನಡ ಸಾಹಿತ್ಯದಲ್ಲಿ ವಿನೂತನವಾಗಿ ಸೇರುವ ಇವರ ಕಥೆಯು ಕಲ್ಯಾಣ ಕ್ರಾಂತಿಯ ನಂತರದ ಕರ್ನಾಟಕಾಂಧ್ರ ಸಾಹಿತ್ಯ ಪರಂಪರೆಯನ್ನು ಒಗ್ಗೂಡಿಸುವ ಚಾರಿತ್ರಿಕ, ಸಾಂಸ್ಕೃತಿಕ ಭಾವ ಸೇತುವೆಯಾಯಿತು.

ಪಂಡಿತತ್ರಯರು

ಆಂಧ್ರದಲ್ಲಿ ವೀರಶೈವ ಮತಕ್ಕೆ ದೇಶ ಭಾಷೆಯ ಸಾಹಿತ್ಯ ದೊರೆಯಲಿಲ್ಲ. ಮತಗ್ರಂಥಗಳೆಲ್ಲ ಕೇವಲ ಸಂಸ್ಕೃತದಲ್ಲಿದ್ದವು. ಅಲ್ಲಿನ ವೀರಶೈವ ಧರ್ಮವು ವೇದಸಂಪ್ರದಾಯಗಳನ್ನು ಅನುಸರಿಸಿಕೊಂಡು ಬಂದಿತು. ವರ್ಣಾಶ್ರಮಗಳ ಕಟ್ಟಿನಲ್ಲೆ ಬೆಳೆಯಿತು. ಆದರೂ ತಮ್ಮದೇ ಆದ ಒಂದು ವೈಶಿಷ್ಟ್ಯದಿಂದ ವೈದಿಕ ತಾಂತ್ರಿಕ ಸ್ವರೂಪದಲ್ಲಿ ಆಚಾರ್ಯ ಪುರುಷರಿಂದ ವೀರಶೈವ ಧರ್ಮವು ಆಂಧ್ರದಲ್ಲಿ ಬೆಳೆದುಬಂದಿತು. ಈ ಪ್ರದೇಶದಲ್ಲಿ ವೀರಶೈವ ಧರ್ಮವನ್ನು ಮಹತ್ವದ ಸ್ಥಾನಕ್ಕೆ ತಂದು ಉದ್ಧರಿಸಿದವರು ಮೂವರು ಮಹಾಪುರುಷರು. ಇವರನ್ನು ಪಂಡಿತತ್ರಯರು ಎಂದು ಕರೆಯವರು. ಅವರುಗಳೆಂದರೆ ೧. ಶಿವಲೆಂಕ ಮಂಚಣ್ಣ ೨. ಶ್ರೀಪತಿ ಪಂಡಿತ ೩. ಮಲ್ಲಿಕಾರ್ಜುನ ಪಂಡಿತ. ಶಿವಲೆಂಕ ಮಂಚಣ್ಣನು ಜೈನರನ್ನು ಅನೇಕ ವಾದಗಳಲ್ಲಿ ಗೆದ್ದು ಆಂಧ್ರದಲ್ಲಿ ವೀರಶೈವ ಮತವನ್ನು ಪ್ರಚಾರ ಮಾಡಿದನು. ನಂತರ ಕಾಶಿಗೆ ಹೋಗಿ ಅಲ್ಲಿಯೂ ಬೇರೆ ಸಂಪ್ರದಾಯದವರನ್ನು ವಾದದಲ್ಲಿ ಸೋಲಿಸಿದನು. ಶಿವಸವೋತ್ಕೃಷ್ಟವನ್ನು ಸಮರ್ಥಿಸಿ ಬಸವಣ್ಣನಿಂದ ಸನ್ಮಾನಿತನಾದನು.

ಆಂಧ್ರದಲ್ಲಿ ವೀರಶೈವ ಧರ್ಮವನ್ನು ಪ್ರಚಾರಗೊಳಿಸಿದ ಮೂವರು ಪಂಡಿತತ್ರಯರಲ್ಲಿ ಶ್ರೀಪತಿ ಪಂಡಿತರು ಒಬ್ಬರಾಗಿದ್ದಾರೆ. ಇವರು ಕೃಷ್ಣಾನದಿಯ ತೀರದಲ್ಲಿರುವ ಬೆಜವಾಡ (ವಿಜಯವಾಡ)ದಲ್ಲಿ ಜನಿಸಿದರು. ಆರನೇ ಪಶ್ಚಿಮ ಚಾಲುಕ್ಯ ರಾಜನಾದ ವಿಕ್ರಮಾದಿತ್ಯನ ಸೇನಾನಾಯಕ ಅನಂತಪಾಲನ ಗುರುವಾಗಿದ್ದನು. "ಆ ಕಾಲದಲ್ಲಿ (ಕ್ರಿ.ಶ.೧೧೨೦) ಈತನು ಅನೇಕ ಪವಾಡ ತೋರಿಸಿದನೆಂದು ಪಲ್ಲಿಕೇತನ ಶಾಸನದಿಂದ ತಿಳಿಯುತ್ತದೆ. ಈತನ ವಂಶದವರು ಕೃಷ್ಣಾಜಿಲ್ಲಾ ಗುಡಿವಾಡ ತಾಲ್ಲೂಕು ಎಲಕ್ಕೂರು ಗ್ರಾಮದಲ್ಲಿದ್ದರೆಂದು ತಿಳಿದುಬರುತ್ತದೆ. ಇವರು ಬ್ರಹ್ಮಸೂತ್ರಗಳಿಗೆ ವ್ಯಾಖ್ಯಾನ ಬರೆದಿದ್ದಾರೆ. ಅಲ್ಲದೆ ಶ್ರೀಕರಭಾಷ್ಯ ಎಂಬ ದರ್ಶನ ಗ್ರಂಥದಿಂದ ವೀರಶೈವ ಧರ್ಮವನ್ನು ಪ್ರಚಾರಗೊಳಿಸಿದನು".[೯] ಆದ್ದರಿಂದ ಶ್ರೀಪತಿ ಪಂಡಿತನೆಂಬ ಮಹಾಪುರುಷನು ಪ್ರಸಿದ್ಧನಾದನು.

ಆಂಧ್ರದಲ್ಲಿ ವೀರಶೈವ ಧರ್ಮವನ್ನು ಪೋಷಿಸಿದವರಲ್ಲಿ ಮಲ್ಲಿಕಾರ್ಜುನ ಪಂಡಿತರು ಪ್ರಮುಖರಾಗಿದ್ದಾರೆ. ಆದ್ದರಿಂದ ಇವರನ್ನು ಪಂಡಿತತ್ರಯರಲ್ಲಿ ಮೂರನೆಯವರೆಂದು ಪ್ರಸಿದ್ಧವಾಗಿದ್ದಾರೆ.

ಈ ಮಲ್ಲಿಕಾರ್ಜುನ ಪಂಡಿತರು ಬಸವಣ್ಣನವರ ಸಮಕಾಲಿನವರು. ಗೋದಾವರಿ ನದಿಯ ತೀರದಲ್ಲಿರುವ ಶಿವಕ್ಷೇತ್ರವಾದ ದ್ರಾಕ್ಷಾರಾಮ ಗ್ರಾಮದಲ್ಲಿ ಜನಿಸಿದರು. ಪಂಡಿತರಾಧ್ಯರ ಚರಿತ್ರೆಯಲ್ಲಿ ಇವರ ಜೀವನ ಮತ್ತು ಗ್ರಂಥಗಳನ್ನು ವಿವರಿಸಲಾಗಿದೆ. ಪಂಡಿತರಾದ ಮಲ್ಲಿಕಾರ್ಜುನರು ತೆಲುಗಿನಲ್ಲಿ 'ಶಿವತತ್ವಸಾರಂ' ಮತ್ತು 'ಶ್ರೀಮುಖದರ್ಶನಂ' ಎಂಬ ಗ್ರಂಥಗಳನ್ನು ಬರೆದರು. ಅಲ್ಲದೆ ಕನ್ನಡದಲ್ಲಿ ಸ್ತೋತ್ರಗಳನ್ನು ರಚಿಸಿದರು. ಇವರು ಬಸವಣ್ಣನನ್ನು ನೋಡುವುದಕ್ಕೆ ಕಲ್ಯಾಣವನ್ನು ಪ್ರವೇಶಿಸುವಷ್ಟರಲ್ಲಿ ಬಸವಣ್ಣನವರು ಸ್ವರ್ಗಸ್ಥರಾದರೆಂಬ ಸುದ್ದಿ ಕೇಳಿ ಮರಳಿ ಹಿಂದಿರುಗಿದನು.

ಪಾಲ್ಕುರಿಕೆ ಸೋಮನಾಥ

ಪಾಲ್ಕುರಿಕೆ ಸೋಮನಾಥನು ೧೩ನೇ ಶತಮಾನದ ಆದಿಭಾಗದಲ್ಲಿ ಜೀವಿಸಿದ್ದನು. ಹೈದ್ರಾಬಾದ್ ಓರಂಗಲ್ ಸೆಂಟ್ರಲ್ ರೈಲ್ವೆದಾರಿಯ ಘನಪೂರ್ ಸ್ಟೇಷನ್ನಿಗೆ ಕೆಲವು ಮೈಲಿ ದೂರದಲ್ಲಿರುವ ಪಾಲ್ಕುರಿಕೆ ಗ್ರಾಮದಲ್ಲಿ ಹುಟ್ಟಿದನು. ಈತನಿಗೆ ಆ ಗ್ರಾಮದ ಸೋಮನಾಥದೇವರ ಹೆಸರನ್ನೆ ಇಟ್ಟರು. ಚಿಕ್ಕವನಿರುವಾಗಲೇ ಪ್ರತಿಭಾಶಾಲಿಯಾಗಿದ್ದನು. ತನ್ನ ತಪಸ್ಸಿನ ಬಲದಿಂದ ಅನೇಕ ಗ್ರಂಥಗಳನ್ನು ರಚಿಸಿದನು. ಇವರ ಉತ್ತಮ ಕೃತಿಗಳಲ್ಲಿ ಬಸವಪುರಾಣಮು, ಪಂಡಿತಾರಾಧ್ಯ ಚರಿತಮು ಎಂದು ಹೆಸರಿಸಲಾಗಿದೆ. ಈ ಕೃತಿಗಳು ಜಾನಪದ ತೆಲುಗಿನಲ್ಲಿ ಬರೆಯಲ್ಪಟ್ಟಿವೆ. ಇವರ 'ಬಸವ ಪುರಾಣಮು' ಕೃತಿಯನ್ನು ಭೀಮಕವಿಯು ಬಸವಪುರಾಣವನ್ನಾಗಿ ಕನ್ನಡಕ್ಕೆ ಅನುವಾದ ಮಾಡಿದ್ದಾನೆ. ಅಲ್ಲದೆ ಈ ಕೃತಿಯು ತಮಿಳಿಗೂ ಅನುವಾದವಾಗಿದ್ದು, ಸೋಮನಾಥನ ಕಾವ್ಯದ ಮಹತ್ವವನ್ನು ಸಾರುತ್ತದೆ.

ಈತನು ಆಂಧ್ರ, ಕನ್ನಡ, ಸಂಸ್ಕೃತದಲ್ಲಿ ಉದ್ದಾಮ ಕವಿ. ಪ್ರಸಿದ್ಧ ವೀರಶೈವ ಶರಣರ ಸ್ಥಳಗಳನ್ನೆಲ್ಲ ಸಂದರ್ಶಿಸಿದನು. ಇದರಿಂದ ಶರಣರ ಚರಿತ್ರೆ ಕಟ್ಟಿಕೊಡಲು ಪ್ರೇರಣೆಯಾಯಿತು. ಆಳವಾದ ವೀರಶೈವ ಜ್ಞಾನವನ್ನು ಪಡೆದು, ಮಾರ್ಗದರ್ಶನವಾಗಬಲ್ಲ ಶಾಸ್ತ್ರಗ್ರಂಥಗಳನ್ನು ಬರೆದಿದ್ದಾನೆ. ಇದರಿಂದ ಕನ್ನಡದ ಬಸವಪುರಾಣಕ್ಕೆ ಈತನ ತೆಲುಗು ಗ್ರಂಥವೇ ಆಧಾರವೆಂದು ನೆನೆಯಬಹುದು. "ಓರಂಗಲ್ಲಿನ ಶಿವಾಲಯದಲ್ಲಿ ಬಸವಪುರಾಣವನ್ನು ಕೇಳಲೆಂದು ಶಿವಭಕ್ತರು ಕಿಕ್ಕಿರಿದು ತುಂಬಿದ್ದರು. ಇದನ್ನು ಸಹಿಸದ ಬ್ರಾಹ್ಮಣರು ಹಾಸ್ಯ ಮಾಡುತ್ತಿದ್ದರು."[೬] ಓರಂಗಲ್ಲಿನ ರಾಜರ ಆಸ್ಥಾನದಲ್ಲಿ ಸೋಮೇಶ್ವರನು ಪರವಾದಿಗಳನ್ನೆಲ್ಲ ವಾದದಲ್ಲಿ ಸೋಲಿಸಿ, ರಾಜನಿಂದ ಉಂಬಳಿಯನ್ನು ಪಡೆದನು. ಇದನ್ನು ಕೇಳಿ ಚಕ್ರಪಾಣಿ ರಂಗನಾಥನೆಂಬ ವೈಷ್ಣವನು ಈತನೊಡನೆ ವಾದ ಮಾಡಲೆಂದು ಪಾಲ್ಕುರಿಕೆಗೆ ಬಂದನು. ಆತನ ವಾದವನ್ನು ಖಂಡಿಸಲು 'ಸ್ವಚ್ಛಂದ ಲಲಿತಭೈರವಿ'ಯೆಂಬ ಗ್ರಂಥಕ್ಕಾಗಿ ಸೋಮೇಶ್ವರನನ್ನು ಹುಡುಕಾಡುತ್ತಿರಲು, ಶಿವನು ಆ ಶರಣನ ಕನಸಿನಲ್ಲಿ ಕಾಣಿಸಿಕೊಂಡು ಆ ಗ್ರಂಥವನ್ನು ಪೆಟ್ಟಿಗೆಯಲ್ಲಿರಿಸಿರುವುದಾಗಿ ತಿಳಿಸಿದನು. ಈ ಗ್ರಂಥದ ಸಹಾಯದಿಂದ ಸೋಮೇಶ್ವರನನ್ನು ಸೋಲಿಸಿದನು.

"ಸೋಮೇಶ್ವರನಿಂದ ಸೋಲನ್ನುಂಡ ರಂಗನಾಥ ಹಾದಿಯಲ್ಲಿ ಸಿಕ್ಕ ಶ್ರೀಶೈಲವನ್ನು ನೋಡಬಾರದೆಂದು ಕೊಡೆಯನ್ನು ಅಡ್ಡ ಹಿಡಿದನು. ಕೂಡಲೇ ಅವನ ಕಣ್ಣುಗಳು ಇಂಗಿದವು. ಆತನು ನರಸಿಂಹದೇವರನ್ನು

ಮೊರೆಹೋಗಲು, ಆ ದೇವರು ಮಲ್ಲಿಕಾರ್ಜುನ ಸ್ವಾಮಿಯನ್ನೇ ಮರೆಹೋಗುವಂತೆ ಹೇಳಿದ. ರಂಗನಾಥನು ಹಾಗೆಯೆ ಮಾಡಲು ಒಂದು ಕಣ್ಣು ಬಂದಿತು. ಮತ್ತೊಂದನ್ನು ಸೋಮನಾಥನಿಂದಲೇ ಪಡೆಯಬೇಕೆಂದು ಶಿವನು ಅಪ್ಪಣೆ ಮಾಡಿದನು. ಆಗ ರಂಗನಾಥನು ಮತ್ತೆ ಸೋಮೇಶ್ವರನ ಬಳಿಗೆ ಬಂದು ಆತನ ಮರೆಹೊಕ್ಕನು. ಸೋಮೇಶ್ವರನು ತನ್ನ ಮಗನಾದ ಬಸವರಾಜನಿಂದ ಆತನ ಕಣ್ಣುಗಳಿಗೆ ವಿಭೂತಿ ಹಚ್ಚಿಸಿ, ಕಣ್ಣನ್ನು ನೀಡಿದನು. ನಂತರ ರಂಗನಾಥನು ಶಿವಾಧಿಕ್ಯವನ್ನು ಅರ್ಥಮಾಡಿಕೊಂಡು ಬಸವರಾಜನಿಂದ ವೀರಶೈವ ದೀಕ್ಷೆಯನ್ನು ಸ್ವೀಕರಿಸಿದನು."[೭] ಸೋಮನಾಥನು ಓರಂಗಲ್ಲಿನ ಆಸ್ಥಾನದಲ್ಲಿ ಅನೇಕರಿಗೆ ವೀರಶೈವ ದೀಕ್ಷೆಯನ್ನು ನೀಡುವುದು ಈ ಒಂದು ಅಂಶದಿಂದ ವ್ಯಕ್ತವಾಗುತ್ತದೆ. ಪಾಲ್ಕುರಿಕೆ ಸೋಮೇಶ್ವರನಿಂದ ಅನೇಕರು ಪ್ರಭಾವಿತರಾಗಿ ಶೈವನಿಷ್ಠೆ ಮೆರೆದರು. ಇದರಿಂದ ಓರಂಗಲ್ಲಿನಲ್ಲಿ ವೀರಶೈವ ಪ್ರಭಾವ ಬೀರತೊಡಗಿತು.

ಕದಿರೆ ರೇಮಯ್ಯ

"ಕದಿರೆ ರೇಮಯ್ಯನು ಕಡಪಾ ಜಿಲ್ಲೆಯ ಕದಿರೆ ಎಂಬಲ್ಲಿದ್ದನು."[೮] ಈ ರೇಮಯ್ಯನ ಗುರು ಪಾಲ್ಕುರಿಕೆಯ ವೇಮಯ್ಯನಾಗಿದ್ದಾನೆ. ವೇಮಯ್ಯನ ದರ್ಶನಕ್ಕೆ ಹೊರಟು ದಾರಿಯಲ್ಲಿ ಸೋಮನಾಥನೆಂಬ ಭಕ್ತನ ಮನೆಯಲ್ಲಿ ನಿಂತು ಊಟ ಮಾಡಿ ಹೋಗುವನು. ಅಂದು ಸೋಮನಾಥನ ಹೆಂಡತಿಯು ತನ್ನ ಮಗನಾದ ಮಲ್ಲಿನಾಥನೊಡನೆ ಬೆರಣಿಯನ್ನು ಆಯಲು ಹೋದಳು. ಅಲ್ಲಿ ಒಂದು ಸರ್ಪ ಆ ಹುಡುಗನನ್ನು ಕಚ್ಚುತ್ತದೆ. ಇದರಿಂದ ಮಲ್ಲಿನಾಥನು ತೀರಿಕೊಂಡನು. ತಂದೆ-ತಾಯಿಯು ಮನೆಯಲ್ಲಿಯೇ ಮಗುವಿನ ಸಮಾಧಿ ಮಾಡಿದರು. ರೇಮಯ್ಯನು ಗುರುಗಳನ್ನು ಕಂಡು ಏಳುದಿನಗಳ ಮೇಲೆ ಹಿಂದಿರುಗುವಾಗ ಆತನ ಮಗು ಸತ್ತು ಸಮಾಧಿಯಾದುದನ್ನು ತಿಳಿದನು. ನಂತರ ಕದಿರೆಯ ರೇಮಯ್ಯ ಆ ಸಮಾಧಿಯನ್ನು ಅಗೆಸಿ 'ಮಲ್ಲಿನಾಥ ಸಲಿಸು ಬಾ' ಎಂದು ಪ್ರಸಾದ ಸ್ವೀಕಾರಕ್ಕೆ ಆಹ್ವಾನಿಸಿದ. ಆ ಮಗು ಮೇಲೆದ್ದು ಬಂದನು. ಹೀಗೆ ರೇಮಯ್ಯನು ವೀರಶೈವದ ತತ್ವ-ಸಿದ್ಧಾಂತಗಳಿಂದ ಶಿವನನ್ನು ಮೆಚ್ಚಿಸಿಕೊಂಡಿದ್ದನು. ಶಿವಪಾರಮ್ಯ ಮೆರೆಯುವ ಮೂಲಕ ಕಡಪಾ ಜಿಲ್ಲೆಯ ಶರಣರಿಗೆ ಮತ್ತು ಇತರರಿಗೆ ಮಾದರಿಯಾದನು. ಶಿವನಿಷ್ಠೆಯ ಮೆರೆಯುವ ಮೂಲಕ ಆಂಧ್ರದಲ್ಲಿ ಶರಣ ಚಳುವಳಿಯನ್ನು ಪಕ್ವಗೊಳಿಸಿದನು.

ದೇವನಾಯಕ

"ಆಂಧ್ರದೇಶದ ಅಂತ್ಯಜಾತಿಯಲ್ಲಿ ಹುಟ್ಟಿ ಪುಟ್ಟರಾಜನಾಗಿದ್ದನು."[೯] ಇವನು ಜಂಗಮಾರ್ಚನೆ ನಿಯಮ ಪರಿಪಾಲಕನಾಗಿದ್ದನು. ಒಮ್ಮೆ ಮೂರು ದಿನಗಳಾದರೂ ಜಂಗಮ ದೊರೆಯದೆ ಉಪವಾಸದಿಂದ ಇದ್ದನು. ಅಂದು ಹಾದಿಯಲಿ ಜಂಗಮನೊಬ್ಬ ಸಿಗಲು, ತನ್ನ ಮನೆಗೆ ಆಹ್ವಾನಿಸಿದನು. ಈ ಆಹ್ವಾನವನ್ನು ಮನ್ನಿಸಿ ಆತನು ಒಪ್ಪಿದನು. ಅಷ್ಟರಲ್ಲಿ ಬ್ರಾಹ್ಮಣನೊಬ್ಬನು ಜಂಗಮನನ್ನು ಕಂಡು 'ದೇವನಾಯಕನು ಅಂತ್ಯಜ'ನೆಂದು ಹೇಳಲು, ಆತನು ತಲೆ ಮರಿಸಿಕೊಂಡು ಹೊರಟನು. ಆಗ ದೇವನಾಯಕನು ಆತನನ್ನು ಹಿಂಬಾಲಿಸಿದ. ಜಂಗಮನು ಹೊಳೆಯ ದಡದಲ್ಲಿ ಲಿಂಗಾರ್ಚನೆ ಮಾಡುತಿರಲು, ಆತನನ್ನು ದೇವನಾಯಕ

ಬಿನ್ನಕ್ಕೆ ಆಹ್ವಾನಿಸಿದ. ತಲೆಹೊಯ್ಯರೂ ತಾನು ಬರೆನೆನ್ನಲೂ, ದೇವನಾಯಕ ಅವನ ತಲೆಯನ್ನು ಕತ್ತರಿಸಿಕೊಂಡು ಬಂದು ತನ್ನ ಮನೆಯಲ್ಲಿಟ್ಟನು. ಆ ತಲೆಗೆ ಎಡೆಮಾಡಿ ಉಣಿಸಿ, ಮತ್ತೆ ತಲೆಯನ್ನು ಆತನ ದೇಹಕ್ಕೆ ಅಂಟಿಸಿ ಬದುಕಿಸಿದನು. ಇದನ್ನು ಕಂಡು ಭಕ್ತರೆಲ್ಲ ದೇವನಾಯಕನನ್ನು ಕೊಂಡಾಡಿದರು. ಈತನು ಜಂಗಮಪೂಜೆ ಮಾಡುತ್ತಾ ಕೈಲಾಸ ಪದವಿಯನ್ನು ಪಡೆದನು. ಹೀಗೆ ಆಂಧ್ರನಾಡಿನ ದೇವನಾಯಕನು ವೀರಶೈವ ಧರ್ಮದ ಪ್ರಮುಖ ತತ್ವವಾದ ಜಂಗಮಾರ್ಚನೆಯ ನಿಯಮವನ್ನು ಪಾಲಿಸಿ ಶಿವನ ಕೃಪೆಗೆ ಪಾತ್ರನಾಗಿದ್ದಾನೆ.

ಬಸವಾಭಕ್ತ

"ಶ್ರೀಶೈಲದ ದಕ್ಷಿಣಕ್ಕಿರುವ ಉಪ್ಪರಪಾಡದಲ್ಲಿ ಬಸವಾಬಕ್ತನಿದ್ದನು."[೨೦] ಈ ಭಕ್ತನು ಬಸವನ ಉಂಗುರ ಮಾಡುವ ಕಾಯಕದಿಂದ ಗುರುಲಿಂಗ ಜಂಗಮ ಸೇವಕನಾಗಿದ್ದ. ಶರಣಸತಿ 'ಲಿಂಗಪತಿ' ಎನ್ನುವಂತೆ ಸತಿಯೊಡನೆ ನಿಷ್ಠೆಯಿಂದ ಗುರುಸೇವೆ ಮಾಡುತ್ತಿದ್ದನು. ಒಮ್ಮೆ ಪರಶಿವನು ಈತನ ಕನಸಿನಲ್ಲಿ ಕಾಣಿಸಿಕೊಂಡು ಮೂರು ಖಂಡುಗ ಮೆಣಸಿನ ಅಮೃವನ್ನು ತನಗೆ ನಿವೇದಿಸುವಂತೆ ಕೇಳಿಕೊಂಡ. ತನಗೆ ಅಷ್ಟು ಯೋಗ್ಯತೆಯಿಲ್ಲವೆಂದು ಈತನು ಸುಮ್ಮನಿರಲು, ಈತನ ಹೆಂಡತಿ ತೀರಿ ಹೋದಳು. ನಂತರ ಶಿವನ ಆತನ ಗುರುವಿಗೆ ಕನಸಿನಲ್ಲಿ ಕಾಣಿಸಿಕೊಂಡು ತನ್ನ ಆಸೆಯನ್ನು ತಿಳಿಸಿದ. ಆತನೂ ಉದಾಸೀನನಾಗಲು ಆತನ ಸತಿಯೂ ಸತ್ತಳು. ಆಗ ಗುರುಶಿಷ್ಯರಿಬ್ಬರೂ ತಮ್ಮ ತಪ್ಪನ್ನು ಅರಿತುಕೊಂಡು, ಭಿಕ್ಷೆಯಿಂದ ಮೆಣಸನ್ನು ಗಳಿಸಿ ಒಂದು ಕಲ್ಲಿನ ದೋಣಿಯಲ್ಲಿ ಅದನ್ನು ಸುರಿಯಲು, ಶಿವನು ಅದನ್ನು ಸೊರ್ರೆಂದು ಕುಡಿದು ಬಸವಾಭಕ್ತನಿಗೆ ಸದ್ಗತಿಯಿತ್ತನು. ಈ ರೀತಿ ಬಸವಾಭಕ್ತನು ಶ್ರೀಶೈಲದಲ್ಲಿ ಶಿವನನುಡಿ ಪಾಲಿಸಿ ಸದ್ಗತಿ ಪಡೆದನು. ಶಿವನ ಬೇಡಿಕೆಯನ್ನು ನೆರವೇರಿಸುವ ಮೂಲಕ ಶಿವತತ್ವವನ್ನು ಪ್ರಸಾರ ಮಾಡಿದನು.

ವೈಜಕವ್ವೆ ಅಥವಾ ವೈಜವ್ವೆ

"ಹೈದರಾಬಾದ್ ದೇಶದ ಬೀಡ ಜಿಲ್ಲೆಯಲ್ಲಿ ಪರಳಿ ಎಂಬ ಗ್ರಾಮವಿದೆ. ಅದರ ಬಳಿಯಿರುವ ಶಿವಭಕ್ತ ದಂಪತಿಗಳ ಏಕಮಾತಪುತ್ರಿ ವೈಜವ್ವೆ"[೨೧]. ಮಗಳಾದ ವೈಜವ್ವೆಯೂ ತಂದೆ-ತಾಯಿಗಳಂತೆ ಶಿವನಿಷ್ಠಳಾಗಿದ್ದಳು. ಈಕೆಯನ್ನು ಸೋದರಳಿಯನೆಂಬ ಬಲವಂತಕ್ಕಾಗಿ ಪರಳಿಯಲ್ಲಿದ್ದ ನೇಮಿಸೆಟ್ಟಿಯೆಂಬ ಜೈನನಿಗೆ ಮದುವೆ ಮಾಡಿಕೊಡಲಾಯಿತು. ಭವಿಯನ್ನು ಮದುವೆಯಾದ ವ್ಯಥೆಯಲ್ಲಿ ವೈಜವ್ವೆ ಮುಳುಗಿರಲು, ಪರಶಿವನು ಈಕೆಯ ಕನಸಿನಲ್ಲಿ ಕಾಣಿಸಿಕೊಂಡನು. ಇವಳ ಹೆಸರನ್ನು ಅಜರಾಮರವಾಗಿ ಮಾಡುವೆನೆಂದು ವಚನವಿತ್ತನು. ವೈಜವ್ವೆ ಗಂಡನ ಮನೆಯಲ್ಲಿ ಗುಪ್ತಭಕ್ತಿಯನ್ನು ನಡೆಸಿಕೊಂಡು ಬಾಳುತಿದ್ದಳು. ಒಮ್ಮೆ ಗಂಡನು ಜೈನ ಮುನಿಗಳನ್ನು ಮನೆಗೆ ಕರೆದುತಂದು ಅವರಿಗಾಗಿ ಭಕ್ಷ್ಯಭೋಜ್ಯಗಳನ್ನು ಮಾಡಿಸಿದ. ಪರಶಿವನು ಜಂಗಮವೇಷದಿಂದ ಬಂದು ಕಾಣಿಸಿಕೊಳ್ಳಲು, ವೈಜವ್ವೆ ಅಡುಗೆಯನ್ನು ಆತನಿಗೆ ನೀಡಿ, ಒಡನೆಯೇ ಅಲ್ಲಿಂದ ಹೋಗುವಂತೆ ತಿಳಿಸಿದಳು. ಆದರೆ ಅದನ್ನು ಅಷ್ಟರಲ್ಲಿಯೇ ಕಂಡ ಜೈನ ಮುನಿಗಳು ಮೀಸಲೋಸರಿಸಿದ್ದನ್ನು ಊಟ ಮಾಡುವುದಿಲ್ಲವೆಂದು ಹೇಳಿದರು. ಗಂಡನು ಸಿಟ್ಟಿನಿಂದ ವೈಜಕವ್ವೆಯನ್ನು

ಕ್ರೂರವಾಗಿ ಶಿಕ್ಷಿಸತೊಡಗಿದನು. ಈ ಶಿಕ್ಷೆಯ ದಂಡನೆಯು ವೈಜಕವ್ವೆಗೆ ಪೆಟ್ಟು ನೀಡಲಿಲ್ಲ. ಬದಲಾಗಿ ಆ ಊರಿನ ಜೈನರುಗಳಿಗೆಲ್ಲ ತಗಲಿ ಕಿರುಚಿಕೊಂಡರು. ಅವರಿಗೆ ಇದರ ಕಾರಣ ತಿಳಿಯಲಿಲ್ಲ.

ಮರುದಿನ ಬೆಳಿಗ್ಗೆ ಜೈನರು ಬಸದಿಗೆ ಹೋಗಿ ನೋಡಲು ಅದರ ಬಾಗಿಲನ್ನು ತೆರೆಯಲು ಯಾರಿಂದಲೂ ಸಾಧ್ಯವಾಗಲಿಲ್ಲ. ಆಗ ಅವರು ವೈಜವ್ವೆಯನ್ನು ಪ್ರಾರ್ಥಿಸಲು, ಆಕೆ ಬಂದು ಮುಟ್ಟುತ್ತಲೆ ಕದ ತೆರೆಯಿತು. ಒಳಗಿರುವ ಜನನ ಪ್ರತಿಮೆ ಒಡೆದು ಲಿಂಗ ಉದ್ಭವವಾಗಿತ್ತು. ಇದನ್ನು ಕಂಡು ವೈಜಕವ್ವೆಯ ಗಂಡ ಕ್ಷಮಾಪಣೆ ಕೇಳಿಕೊಂಡನು. ಆಕೆ ಅಲ್ಲಿ ಮೂಡಿದ್ದ ವೈಜನಾಥ ಲಿಂಗವನ್ನು ಪೂಜಿಸುವಂತೆ ಹೇಳಿ, ಆತನಿಗೆ ದೀಕ್ಷೆಯಿತ್ತು ತಾನು ಸ್ತುತಿಸುವ ರೀತಿ ಮನೋಜ್ಞವಾಗಿದೆ. ಒಂದೇ ಸಂಸಾರದಲ್ಲಿ ಎರಡು ಧರ್ಮಗಳು ಸೇರಿಕೊಂಡಿವೆ. ಸಹಜವೆನ್ನುವಂತೆ ಇವೆರಡು ಒಂದನ್ನೊಂದು ಅನುಸರಿಸಿಕೊಂಡು ಹೋಗದೆ, ಸಂಘರ್ಷಗೊಂಡಿರುವುದನ್ನು ಕಾಣುತ್ತೇವೆ. ಇದರಿಂದ ವೀರಶೈವ ಧರ್ಮ ಆಂಧ್ರನಾಡಿನ ಸ್ತ್ರೀಯರಿಗೂ ಆದರ್ಶವಾಗಿತ್ತೆಂದು ತಿಳಿಯುತ್ತದೆ. ಇದರ ಜೊತೆಗೆ ವೈಜವ್ವೆಯ ಮೂಲಕ ಶರಣೆಯರಿಗೂ ಮಾನ್ಯತೆ ಇರುವುದನ್ನು ಗುರುತಿಸಬಹುದು. ಆದರೆ ಶರಣೆಯರ ಪ್ರಮಾಣ ಆಂಧ್ರದಲ್ಲಿ ತುಂಬಾ ಕಡಿಮೆ ಅನಿಸುತ್ತದೆ. ತನ್ನ ವಿಶಿಷ್ಟವಾದ ಶಿವನಿಷ್ಠೆಯ ಮೂಲಕ ವೈಜವ್ವೆ ಲಿಂಗದಲ್ಲಿ ಲೀನವಾದಳು. ಇದರಿಂದ ಜೀವನವನ್ನು ಬಯಲಾಗಿಸಿಕೊಂಡಳು. ಇತರರ ಶಿವನಿಷೆ ಪ್ರೇರಣೆಯಾಗುವಂತೆ ವೀರಶೈವ ಧರ್ಮದ ನಿಷ್ಠೆ ಮೆರೆದಳು.

ಚೋಳಿಯಕ್ಕ

ಆಂಧ್ರದ ಶರಣೆಯರಲ್ಲಿ ಚೋಳಿಯಕ್ಕ ಒಬ್ಬಳು. ಇವಳು "ಆಂದ್ರನಾಡಿನ ಭೀಮೇಶ್ವರವೆಂಬ ಊರಲ್ಲಿದ್ದಳು."[೧೨] ಈ ಭಕ್ತೆಯು ಸವಿಯಾದ ಹುಗ್ಗಿಯನ್ನು ಮಾಡಿ, 'ಭೀಮಿ, ನಿನ್ನ ಭಾವನಿಗುಣಿಸಿ ಬಾ' ಎಂದು ತಂಗಿಯ ಕೂಡ ಹುಗ್ಗಿಯನ್ನು ಭೀಮೇಶ್ವರನಿಗೆ ಕಳಿಸಿಕೊಟ್ಟಳು. ಇದನ್ನು ಶಿವನು ಉಂಡು ಅವಳಿಗೆ ಒಲಿದ. ಅರಮನೆಯ ಎಡೆಯನ್ನು ಪೂಜಾರಿ ಬಂಗಾರದ ತಟ್ಟೆಯಲ್ಲಿ ಭೀಮೇಶ್ವರನ ಮುಂದೆ ಇಡುತ್ತಾನೆ. ವೇಶ್ಯೆಯಾದ ಚೋಳಿಯಕ್ಕ ಶಿವ ಉಣ್ಣಲೆಂದು ಬೆಳ್ಳಿಯ ತಟ್ಟೆಯಲ್ಲಿ ಕಳಿಸಿದಳು. ಶಿವನು ಅದನ್ನು ಒಳಗಿಟ್ಟುಕೊಂಡು ಬಂಗಾರದ ತಟ್ಟೆಯನ್ನು ಚೋಳಿಯಕ್ಕನಿಗೆ ಕೊಟ್ಟು ಕಳಿಸಿದ. ರಾಜನ ಬಂಗಾರದ ತಟ್ಟೆಯನ್ನು ಕದ್ದಳೆಂದು ಚೋಳಿಯಕ್ಕನನ್ನು ಶೂಲಕ್ಕೆ ಹಾಕಲು ಹೊರಟರು. ಆಗ ಶಿವನು ಪ್ರತ್ಯಕ್ಷವಾಗಿ ಎಲ್ಲರನ್ನೂ ಕೈಲಾಸಕ್ಕೆ ಕರೆದೊಯ್ದನು. ಯಾರು ನಿಷ್ಠೆಯಿಂದ ಶಿವನ ಆರಾಧನೆ ಮಾಡುವರೋ, ಅವರಿಗೆ ಶಿವನ ಸಿರಿಯನ್ನು ಕರುಣಿಸುವುದರ ಮೂಲಕ ಒಲಿಯುವನು. ಇಲ್ಲಿ ಚೋಳಿಯಕ್ಕನೆಂಬ ಶರಣೆಯ ವಿಚಾರವೂ ಇದೇ ಆಗಿದೆ. ಪ್ರತಿ ದಿನ ಶಿವನಿಗೆ ಪ್ರಸಾದವನ್ನು ಕಳಿಸುವ ಮೂಲಕ ಶಿವನ ಕೃಪೆಗೆ ಪಾತ್ರಳಾಗಿದ್ದಾಳೆ.

ಕಾಚಿರಾಜಯ್ಯ

"ಆಂಧ್ರಪ್ರದೇಶದ ಪುಲೀಂದ್ರಪುರದಲ್ಲಿದ್ದ ಈತನು ಪಾದೋದಕವನ್ನು ಪರವಾದಿಗಳತ್ತ ಚೆಲ್ಲಲು, ಪ್ರಳಯಾಗ್ನಿಯಂತೆ ಎಲ್ಲವೂ ಹೊತ್ತಿ ಉರಿಯುತಿರಲು, ಪರವಾದಿಗಳು ಮರೆಹೊಕ್ಕು ಬದುಕಿದರು. ಈತ

ಶಿವನಲ್ಲಿ ಲೀನವಾದನು."[೧೪] ಇವನು ಬ್ರಾಹ್ಮಣರೊಂದಿಗೆ ಸ್ಪರ್ಧಿಸಿ ಜಂಗಮ ಪಾದೋದಕವು ಕಾಶಿಯ ತೀರ್ಥಕ್ಕಿಂತಲೂ ಅಧಿಕವೆಂದು ಸಾರಿದನು.

ಓದಿಸುವ ಮಡಿವಾಳಯ್ಯ

ಗುಂಡಬ್ರಹ್ಮಯ್ಯಗಳ ಚೌಪದಿಯನ್ನು ಬರೆದ ಕವಿ ಮಡಿವಾಳಯ್ಯ. ಕ್ರಿ.ಶ.ಸುಮಾರು ೧೬-೧೭ನೇ ಶತಮಾನದಲ್ಲಿ ಜೀವಿಸಿದಂತೆ ತೋರುತ್ತದೆ. ಚೌಪದಿಯ ೧೪೭ನೆಯ ಪದ್ಯದಲ್ಲಿ

"ಮೇಧಿನಿಯೊಳಧಿಕ ಓರ್ಗಲ್ಲ ವೋದಿಸುವಾ |
ಸಾಧುಭಕ್ತನು ಮಡಿವಾಳಯ್ಯನಿಗೆ ಶಿವಸುಖವಾ |
ಆದರದಿ ಕೊಟ್ಟು ಹೇಳಿಸಿದನೀ ಪದವಾ |
ಕಾದು ರಕ್ಷಿಸು ಹರನೆ ಮುಕ್ತಿಸಂಪದವಾ ||"[೧೫]

ಎಂಬ ಉಲ್ಲೇಖವಿದೆ. ಹೀಗಾಗಿ ಓದಿಸುವ ಕಾಯಕದವನಾದ ಮಡಿವಾಳಯ್ಯ ಓರಂಗಲ್ಲಿನವನು. ಹೀಗೆ ಕಲ್ಯಾಣ ಕ್ರಾಂತಿಯ ನಂತರ ವೀರಶೈವ ಸಾಹಿತ್ಯ ಸಂಸ್ಕೃತಿಗಳ ಅಸ್ತಿತ್ವವನ್ನು ಒಪ್ಪವಾಗಿ ಉಳಿಸಿಕೊಂಡು ಬಂದವರು ಓರಂಗಲ್ಲಿನ ಕಾಕತೀಯರು. ಪ್ರಾಯಶಃ ಇವರ ಆಶ್ರಿತ ಕವಿಯಾಗಿ ಓದಿಸುವ ಮಡಿವಾಳಯ್ಯನು ಈ ಶಿವಕಥೆಯನ್ನು ರಚಿಸಿರಬೇಕು.

ಗೋವಿಂದ ಹೆಗ್ಗಡೆ

"ಈತನು ಶ್ರೀಶೈಲದ ಸಮೀಪದಲ್ಲಿರುವ ಪಾನುಗಲ್ಲಿನ ರಾಜ ಉದಯಭೂಪಾಲನಲ್ಲಿ ಅಧಿಕಾರಿಯಾಗಿದ್ದನು."[೧೬] ಇವನು ಬಾಹ್ಯವಾಗಿ ವಿಷ್ಣುಭಕ್ತನಂತೆ ಆಚರಿಸುತ್ತ ಅಂತರಂಗದಲ್ಲಿ ಶಿವಭಕ್ತನಾಗಿದ್ದ. ಈತನು ಪಂಡಿತಾರಾಧ್ಯರ ಶಿಷ್ಯನಾಗಿದ್ದು, ಆತನು ತನ್ನ ಊರಿಗೆ ಬಂದಾಗ ಪಂಡಿತಾರಾಧ್ಯರ ಸೇವೆಯನ್ನು ಅತಿಶಯವಾಗಿ ಸಲ್ಲಿಸಿದನು. ಈ ಗೋವಿಂದ ಹೆಗ್ಗಡೆಯು ದೈವದ ನಿಶ್ಚಲ ಆರಾಧನೆಯಲ್ಲಿ ಪಕ್ವಗೊಂಡಿಲ್ಲ ಅನಿಸುತ್ತದೆ. ಅಂದು ಬ್ರಾಹ್ಮಣರ ಪ್ರಭಾವ ಹೆಚ್ಚು ಇರುವುದರಿಂದ ಗೋವಿಂದರ ಮೇಲೆ ಯಾವುದೋ ಒತ್ತಡವಿರಬೇಕು. ಆದ್ದರಿಂದ ಒಬ್ಬ ವ್ಯಕ್ತಿಯಲ್ಲಿಯೇ ಎರಡು ಧರ್ಮಗಳು ಮುಖಾಮುಖಿಗೊಂಡಿವೆ. ಬಹುಶಃ ವೀರಶೈವ ಧರ್ಮವು ಆಗ ಇನ್ನು ಪಕ್ವಗೊಂಡಿಲ್ಲದೇ ಇರಹುದು. ಆದ್ದರಿಂದ ತೆರೆಮರೆಯಲ್ಲಿ ಶಿವನ ಆರಾಧನೆ ಮಾಡುತ್ತಿರುವನು.

ಶ್ರೀಶೈಲದ ಮುನಿ

ಶ್ರೀಶೈಲದ ಮುನಿಯು ಒಮ್ಮೆ ಶ್ರೀಶೈಲದಲ್ಲಿ ತಪಸ್ಸು ಮಾಡುತ್ತಿದ್ದನು. ಈ ಸಮಯದಲ್ಲಿ ಸಿದ್ಧನೊಬ್ಬನು ಮೂಲಿಕೆಯನ್ನು ಹುಡುಕುತ್ತಾ ಅಲ್ಲಿಗೆ ಬಂದನು. ಸಿದ್ಧನಿಗೆ ಬಳ್ಳಿಯೊಂದು ತೊಡರಿಸಿಕೊಂಡಿತು. ಆ ಬಳ್ಳಿಯನ್ನು ಕಿತ್ತು ಮುನಿಯ ಮೇಲೆ ಎಸೆದನು. ಆಗ ಶ್ರೀಶೈಲದ ಮುನಿಯು ಕೋಪಗೊಂಡು ಸರ್ಪವಾಗೆಂದು ಶಾಪವಿತ್ತನು. ಹೀಗೆ ಶಾಪಾಗ್ರಸ್ಥನಾದ ಅವನು ಕಾಳಹಸ್ತೀಶ್ವರ ಲಿಂಗಕ್ಕೆ ತನ್ನ ಹೆಡೆಯಿಂದ ನೆರಳುಮಾಡಿ ಶಾಪವನ್ನು ಕಳೆದುಕೊಂಡನು.

ಈ ಮೇಲಿನಂತೆ ಓರಂಗಲ್ಲಿನ ಶರಣರು ಅಥವಾ ಮಹಾಪುರುಷರು ತಮ್ಮ ತಮ್ಮ ವಿಶಿಷ್ಟ ವ್ರತನೇಮಗಳ ಮೂಲಕ ಶರಣ ಸಿದ್ಧಾಂತವನ್ನು ಸಾರಿದರು. ಶರಣ ಚಳುವಳಿಯು ಕನ್ನಡ ನಾಡಿನಲ್ಲಿ ಇದ್ದಷ್ಟು ಪ್ರಕರತೆಗೊಂಡಿರಲಿಲ್ಲ ಎನಿಸುತ್ತದೆ. ಆದರೆ ತಕ್ಕ ಮಟ್ಟಿಗೆ ಉತ್ತಮ ಎನ್ನುವಷ್ಟು ವೀರಶೈವ ಧರ್ಮ ಪ್ರಭಾವ ಬೀರಿದೆ. ವೀರಶೈವ ಧರ್ಮಕ್ಕೂ, ವೈಷ್ಣವಕ್ಕೂ ತೆರೆಮರೆಯಲ್ಲಿ ಅಗ್ಗ ಜಗ್ಗಾಟ ನಡೆದಿದೆ. ಆದ್ದರಿಂದ ಇಲ್ಲಿ ಕೆಲವರು ಪಕ್ಕಗೊಂಡಿಲ್ಲ. ಹಾಗಿನ್ನೂ ಶರಣ ಸಿದ್ಧಾಂತಗಳು ಪರಿಣಾಮ ಬೀರುವ ದಾರಿಯಲ್ಲಿದೆಯೆನಿಸುತ್ತದೆ. ವೈಷ್ಣವ ಪ್ರಭಾವದಿಂದ ಸಂಪೂರ್ಣವಾಗಿ ಬಿಡುಗಡೆಗೊಂಡಿರಲಿಲ್ಲ. ಈ ಮಾತಿಗೆ ಪುಷ್ಟಿನೀಡುವಂತೆ ಗೋವಿಂದ ಹೆಗ್ಗಡೆಯು ಬಹಿರಂಗದಲ್ಲಿ ವಿಷ್ಣುವನ್ನು ಮತ್ತು ಅಂತರಂಗದಲ್ಲಿ ಶಿವನನ್ನು ನೆನೆಯುತ್ತಾನೆ. ವೈಜವ್ವೆ ಮತ್ತು ನೇಮಿಸೆಟ್ಟಿಯ ಸಂಸಾರದಲ್ಲಿಯೂ ಎರಡು ಧರ್ಮಗಳು ಬಿರುಸುಗೊಂಡಿವೆ. ಇದರಿಂದ 'ಸತಿಪತಿಗಳೊಂದಾದ ಭಕ್ತಿ ಹಿತ ವಪ್ಪುದು ಶಿವಂಗೆ' ಮತ್ತು 'ಶರಣಸತಿ ಲಿಂಗ ಪತಿ' ಎಂಬ ತತ್ವಗಳಿಂದ ದೂರ ಉಳಿಯುತ್ತಾಳೆ. ರೇಚಯ್ಯನೆಂಬ ಶರಣನೂ ಮೊದಲ ಸಲ ಆರ್ಥಿಕ ತೊಂದರೆಯಿಂದ ಶಿವನ ಬೇಡಿಕೆ ಈಡೇರಿಸುವುದಿಲ್ಲ. ನಂತರ ತನ್ನ ಸತಿ ತೀರಿದಾಗಿ ಬಿಕ್ಷಾಟನೆ ಮಾಡಿ ಶಿವನ ಕೋರಿಕೆ ತೀರಿಸುತ್ತಾನೆ.

ಈ ಎಲ್ಲಾ ಅಂಶಗಳಿಂದ ಕನ್ನಡದ ಶರಣರಷ್ಟು ಪ್ರಭಾವಶಾಲಿ ಆಗಿರಲಿಲ್ಲವೆಂದು ಹೇಳಬಹುದು. ಆದರೆ ಇಲ್ಲಿ ಉತ್ತಮವೆಂದು ಹೇಳುವಷ್ಟು ಸಂಖ್ಯೆಯಲ್ಲಿ ಶಿವಶರಣರು ಅಥವಾ ಮಹಾಪುರುಷರು ಸಿಗುತ್ತಾರೆ. ಈ ಮೇಲೆ ಪ್ರಸ್ತಾಪಿಸಿದ ಶರಣರಲ್ಲದೆ ರೇಚಯ್ಯ, ಜಂಬೀರರಾಯ, ಜಯದೇವ ಇನ್ನೂ ಮೊದಲಾದ ಶರಣರನ್ನು ಆಂಧ್ರ ಅಥವಾ ಓರಂಗಲ್ಲಿನಲ್ಲಿ ಗುರುತಿಸಬಹುದು. ಇವರಲ್ಲಿ ಕೆಲವರಿಗೆ ಕಲ್ಯಾಣದ ಶರಣರ ಪ್ರಭಾವವಾಗಿದೆ. ಆದ್ದರಿಂದ ಮಲ್ಲಿಕಾರ್ಜುನ ಪಂಡಿತ, ಬಸವಣ್ಣನ ದರ್ಶನಕ್ಕಾಗಿ ಕಲ್ಯಾಣಕ್ಕೆ ಹೋಗುತ್ತಿರುವುದು ತಿಳಿದುಬರುತ್ತದೆ. ಕರ್ನಾಟಕದ ಶಿವಶರಣರ ಆದರ್ಶಗಳನ್ನು ಇವರು ತಿಳಿದಿದ್ದರು. ಆದ್ದರಿಂದ ಜೀವನವನ್ನು ಶುದ್ಧಗೊಳಿಸುವ ನಿಟ್ಟಿನಲ್ಲಿ ಶರಣಮಾರ್ಗ ಹಿಡಿದರು. ಶರಣ ಸಂದೇಶವನ್ನು ಸಾರಲು ಅನೇಕ ಕಾವ್ಯಗಳಲ್ಲಿ ಶಿವತತ್ವ ಬೋಧಿಸಿದರು. ಕಲ್ಯಾಣ ಕ್ರಾಂತಿಯ ನಂತರ ಓರಂಗಲ್ಲಿನಲ್ಲಿ ಶರಣ ಧರ್ಮವು ಪ್ರಬುದ್ಧವಾಗಿ ಬೆಳೆಯಿತು.

ಗುಂಡಬ್ರಹ್ಮಯ್ಯಗಳು 'ಮೊರೆ ಹೊಕ್ಕವರ ಕಾಯ್ವೆ' ಎಂಬ ವೀರ ವ್ರತವನ್ನು ಕೈಗೊಂಡಿದ್ದರು. ಆದ್ದರಿಂದ ಇವರ ವ್ರತ ನಿಷ್ಠೆಯನ್ನು ಪರೀಕ್ಷಿಸಲು ಹರ-ನಾರದರು ಗಣಪತಿರಾಯನ ಅರಮನೆಯನ್ನು ಕಳವು ಮಾಡಲು ಓರಂಗಲ್ಲಿಗೆ ಬರುವರು. ಅರಮನೆಯ ಒಡವೆಗಳೆಲ್ಲ ಕದ್ದು ನಂತರ ಚಿತ್ರ ಶಾಲೆಗೆ ಬರುವರು. ಅಲ್ಲಿ ಕಾಣುವ ಅರಮನೆಯ ಗೋಡೆಗಳ ಮೇಲೆ ಕರ್ನಾಟಕದ ಶರಣರ ಚಿತ್ರಪಟಗಳು ಅಧ್ಯಯನ ದೃಷ್ಟಿಯಿಂದ ಕುತೂಹಲಕ್ಕೆ ಕಾರಣವಾಗಿವೆ. ಇದರಿಂದ ಅನೇಕ ಪ್ರಶ್ನೆಗಳು ಗೋಚರಿಸುತ್ತವೆ. ಓರಂಗಲ್ಲಿನ ಅರಮನೆಯಲ್ಲಿ ಕರ್ನಾಟಕದ ಶರಣರ ಚಿತ್ರಪಟಗಳನ್ನು ಹಾಕಲು ಕಾರಣವೇನು? ಇದು ಹೇಗೆ ಸಾಧ್ಯವಾಯಿತು? ಅರಮನೆಯ ಗೋಡೆಗಳ ಮೇಲೆ ತನ್ನ ವಂಶಜರ ಚಿತ್ರಪಟಗಳನ್ನು ಅಥವಾ

ಕ್ಷತ್ರಿಯ ಧರ್ಮದ ಚಿತ್ರಗಳನ್ನು ಹಾಕಬೇಕಿತ್ತು. ಬದಲಾಗಿ ಕರ್ನಾಟಕದ ಮಹಾಮನೆಯ ಸದಸ್ಯರ ಚಿತ್ರಪಟಗಳನ್ನು ಏಕೆ ಹಾಕಿದರೆಂಬ ಕುತೂಹಲದ ಪ್ರಶ್ನೆಗಳು ಕೆರಳುತ್ತವೆ.

ಹಿಂದೆ ಪ್ರಸ್ತಾಪಿಸಿದಂತೆ ಕರ್ನಾಟಕದಿಂದ ಬಂದ ಶರಣರು ತಮ್ಮ ಮೂಲ ತತ್ವ-ಸಿದ್ಧಾಂತಗಳ ಬೀಜಗಳನ್ನು ಆಯಾ ಪ್ರದೇಶದಲ್ಲಿ ಬಿತ್ತರಿಸಿದರು. ಇದರ ಫಲವೆಂಬಂತೆ ಆಂಧ್ರದಲ್ಲಿ ವೀರಶೈವ ಧರ್ಮವು ಪುನರುತ್ಥಾನವಾಯಿತು. ಗಣಪತಿರಾಯನು ಶರಣರ ತತ್ವ-ಸಿದ್ಧಾಂತಗಳಿಗೆ ಮಾರುಹೋಗಿದ್ದರಿಂದ ಇವರಿಗೆ ಆಶ್ರಯ ನೀಡಿರಬೇಕೆನಿಸುತ್ತದೆ. ಆದ್ದರಿಂದ ಶರಣರ ಚಿತ್ರಪಟಗಳನ್ನು ಅರಮನೆಯ ಗೋಡೆಗಳ ಮೇಲೆ ಹಾಕಿರುವರು. ಈ ಚಿತ್ರಪಟಗಳಿಂದ ಗಣಪತಿರಾಯನ ಅರಮನೆಯಲ್ಲಿರುವ ಶರಣಧರ್ಮವನ್ನು ತಿಳಿಯಬಹುದು. ಇವುಗಳು ಶರಣರಲ್ಲಿಟ್ಟಿರುವ ಶ್ರದ್ಧೆ, ಭಕ್ತಿಗೆ ಜೀವಂತ ಸಾಕ್ಷಿಯಾಗಿವೆ. ರಾಜತ್ವವು ಶಿವತ್ವಕ್ಕೆ ಗೌರವ, ಭಕ್ತಿಯಿಂದ ಶರಣಾಗಿರುವುದನ್ನು ಗಮನಿಸಲಾಗುತ್ತದೆ. ಶಿವತ್ವದ ಮೊರೆಹೋಗಿರುವ ರಾಜತ್ವವು ಮುಕ್ತಿಯ ಮಾರ್ಗದ ಕಡೆಗೆ ಮುಖಮಾಡಿದೆಂದು ಅನಿಸುತ್ತದೆ.

ಲೌಕಿಕ ಜಗತ್ತಿನಲ್ಲಿ ಉನ್ನತ ಸ್ಥಿತಿಗೆ ತಲುಪಿದ್ದ ಗಣಪತಿರಾಯನು ಕ್ರಮೇಣ ತನ್ನನ್ನು ಬಯಲಾಗಿಸಿಕೊಳ್ಳಲು ಅಲೌಕಿಕ ಮಾರ್ಗವನ್ನು ಕಂಡುಕೊಂಡನು. ಇದರ ಸೂಚಕವೆಂಬಂತೆ ಅರಮನೆಯಲ್ಲಿ ಮಹಾಮನೆಯ ಶರಣರ ಚಿತ್ರಪಟಗಳಿವೆ. ಇಂತಹ ಚಿತ್ರಪಟಗಳು ಕೇವಲ ಬೆರಳೆಣಿಕೆಯಷ್ಟಲ್ಲದೆ ಲೆಕ್ಕವಿಲ್ಲದಷ್ಟು ಇವೆ. ಆದ್ದರಿಂದ ಶಿವನು ನಾರದನಿಗೆ 'ಗುಂಡಬ್ರಹ್ಮಯ್ಯಗಳ ಸಾಹಿತ್ಯ'ದಲ್ಲಿ ಈ ಕೆಳಗಿನಂತೆ ಹೇಳುವನು.

"ಚಿತ್ರವ ನೋಡುವರೆ ಹತ್ತೆಂಟು ದಿನ ಬೇಕು
ಕಟ್ಟು ನಾರಂದ ನವರತ್ನ ಮಾಣಿಕ್ಯವ
ಕಟ್ಟು ನಮಗೊಂದು ಹೊರೆ ಮಾಡಿ"[೧೭].

"ಕೊಳು ಕೆಚ್ಚಿಗೆ ಬರೆದ ಹಾಳು ಬೀಳುಗಳಲ್ಲ
ಏಳೆಂಟು ದಿನವು ಇದನೋಡ|| ಬೇಕಯ್ಯ
ವೇಳ್ಯವಾದವು ಬಿಜ ಮಾಡಿ".[೧೮]

ಹೀಗೆ ಶಿವನು ಗಣಪತಿರಾಯನ ಅರಮನೆಯ ಶರಣರ ಚಿತ್ರಪಟಗಳನ್ನು ನೋಡಲು ೮-೧೦ ದಿನಗಳು ಬೇಕು. ಆದ್ದರಿಂದ ನವರತ್ನ, ಮುತ್ತು-ಮಾಣಿಕ್ಯಗಳನ್ನು ಕಟ್ಟೆಂದು ಹೇಳುತ್ತಾನೆ. 'ಗುಂಡಬ್ರಹ್ಮಯ್ಯಗಳ ಸಾಹಿತ್ಯ'ದಲ್ಲಿ ೨೫-೩೦ ಶರಣರ ಚಿತ್ರಪಟಗಳ ಹೆಸರು ಮತ್ತು ಅವರ ವಿಭಿನ್ನ ಶೈವನಿಷ್ಠೆಯನ್ನು ವಿಶ್ಲೇಷಿಸಲಾಗಿದೆ. ಅವುಗಳನ್ನು ಮುಂದೆ ದೀರ್ಘವಾಗಿ ಪ್ರಸ್ತಾಪಿಸಲಾಗುತ್ತದೆ. ರಾಜತ್ವವು ಶಿವತ್ವದ ನೆಲೆಯಲ್ಲಿ ರಾಜ್ಯಭಾರ ಮಾಡುವುದು ಶ್ರೇಷ್ಠವೆನಿಸುತ್ತದೆ. ಗಣಪತಿರಾಯ ಬಹುಶಃ ಇದರ ಪಾಲಕನಾಗಿರಬೇಕು. ಅರಮನೆಯಲ್ಲಿ ಮಹಾಮನೆಯ ಶರಣರ ಚಿತ್ರಗಳು ಗೋಡೆಯ ಮೇಲೆ ಕಾಣುವುದೆಂದರೆ ಸಾಮಾನ್ಯವಲ್ಲ. ಆದ್ದರಿಂದ ವೀರಶೈವ ಶರಣರ ಪ್ರಭಾವ ಕಾಕತೀಯರ ಅರಸನಿಗೆ ಎಷ್ಟು ಪರಿಣಾಮ ಬೀರಿರಬೇಕೆಂಬುದು ವಿವೇಚನೆಯ ಸಂಗತಿಯಾಗಿದೆ.

ಈ ಹಿನ್ನಲೆಯಲ್ಲಿ ಶರಣರು ಶೈವಧರ್ಮದ ನೆಲೆಗಳನ್ನು ತಮ್ಮ ಬದುಕಿನಲ್ಲಿ ಕಟ್ಟಿಕೊಂಡ ರೀತಿ ಅಸಾಧಾರಣವಾಗಿದೆ. ಬಸವಣ್ಣ ಮತ್ತು ಅಲ್ಲಮಪ್ರಭುವಿನಂತ ಮುಂಚೂಣಿ ನಾಯಕರ ಬೆಂಬಲವು ಕೆಲಸ್ತರದ ಸಾಮಾಜಿಕ ಜೀವನ ನಡೆಸುತ್ತಿದ್ದವರಿಗೆ ಮೇಲುಸ್ತರದ ಶಿವಶರಣರಾಗಲು ಅವಕಾಶ ನೀಡಿತು. ಮತ್ತು ಅಪೂರ್ವ ಜನಾಂದೋಲನವಾಗಲು ಪ್ರೋತ್ಸಾಹಿಸಿದ್ದೆ ಕರ್ನಾಟಕ ಶರಣ ಚಳುವಳಿಯ ಮಹತ್ವದ ಬದಲಾವಣೆ. ಈ ಬದಲಾವಣೆಯ ಗಾಳಿ ಆಂಧ್ರಕ್ಕೂ ಬೀಸಿ ಅಲ್ಲಿಯ ಅರಸರ ಬೆಂಬಲದೊಂದಿಗೆ ಓರಂಗಲ್ಲಿನ ಸಾಮಾಜಿಕ ಜೀವನದಲ್ಲಿ ಸಂಚಲನ ಮೂಡಿಸಿತು. ಇದರಿಂದ ಶರಣ ಚಳುವಳಿಯ ಮುಖ್ಯ ಧ್ಯೇಯವಾದ ಆದರ್ಶ ಸಮಾಜದ ಕಟ್ಟುವಿಕೆಗೆ ಪ್ರೇರಣೆ ನೀಡಿತು. ಇದು ಕರ್ನಾಟಕ ಮತ್ತು ಆಂಧ್ರ ರಾಜ್ಯಗಳ ಸುವರ್ಣ ಸೇತುವೆಯಾಗಿಯೂ ಕಾರ್ಯನಿರ್ವಹಿಸಿತು. ಆದ್ದರಿಂದ ಕಾಕತೀಯರು ಶಿವಶರಣರಿಗೆ ರಾಜಾಶ್ರಯ ನೀಡಿದರು. ಜೊತೆಗೆ ವೀರಶೈವ ಧರ್ಮದ ಭದ್ರನೆಲೆಯನ್ನು ಒದಗಿಸಲು ಅವಕಾಶವಿತ್ತರು. ಇವರಲ್ಲಿ ಗಣಪತಿರಾಯ ಪ್ರಮುಖನಾಗಿದ್ದಾನೆ.

ಗಣಪತಿರಾಯನ ಅರಮನೆಯ ಚಿತ್ರಪಟಗಳ ಮೂಲಕ ಮಧ್ಯಕಾಲೀನ ಕರ್ನಾಟಕದ ಸಮಗ್ರ ಆಯಾಮಗಳು ಮಾತ್ರವಲ್ಲದೆ, ಮಧ್ಯಕಾಲೀನ ಆಂಧ್ರನಾಡಿನ ಜೀವನದ ಸಮಗ್ರ ಆಯಾಮಗಳ ಅಭಿವ್ಯಕ್ತಿಯಾಗಿದೆ. ಶರಣರು ಲೌಕಿಕ ಜೀವನದ ಮೂಲಕ ಪಾರಮಾರ್ಥಿಕ ಜೀವನ ನಡೆಸಲು ಹೋದರು. ಇವರೆಲ್ಲರ ಮಾರ್ಗವು ಭಕ್ತಿಮಾರ್ಗವಾದರೂ ಸ್ವರೂಪದಲ್ಲಿ ಬೇರೆಯಾಗಿದೆ. ಇಂತಹ ಶರಣರ ಚಿತ್ರಪಟಗಳಿಂದ ತುಂಬಿದ ಅರಮನೆಯಲ್ಲಿ ಬೆಳಕು ತುಂಬಿತ್ತು. ಈ ಬೆಳಕು ಕತ್ತಲೆಯ ಜಗತ್ತನ್ನು ತೊಲಗಿಸಿತ್ತು. ಆದ್ದರಿಂದ 'ಗುಂಡಬ್ರಹ್ಮಯ್ಯಗಳ ಸಾಹಿತ್ಯ'ದಲ್ಲಿ ಈ ಕೆಳಗಿನಂತೆ ಪ್ರಸ್ತಾಪಿಸಲಾಗಿದೆ.

"ಎತ್ತ ನೋಡಲು ಅರಮನೆ ಮುತ್ತು ಮಾಣಿಕ್ಯರತ್ನ
ಕೆತ್ತಿಸಿದ ಕಂಭ ತೊಲೆ ಪಚ್ಚೆ|| ನವರತ್ನ
ಕತ್ತಲೆಯಿಲ್ಲ ಅರಮನೆಯಲ್ಲಿ

ವಾಲಗದ ಬಾವಿಯೊಳಗೆ ಚಿನ್ನದಗೆಲಸ
ಮೇಲುಪ್ಪರಿಗೆ ಧ್ರುವಲೋಕ|| ಹೊಳೆದಂತೆ
ಥಾಳಿಸುವ ಕಳಸ ರವಿಯಂತೆ"

ಹೀಗೆ ಅರಮನೆಯ ಬದುಕನ್ನು ಬೆಳಕಿನಡೆಗೆ ಸಾಗಿಸಿದೆ. ಇದು ಭೌತಿಕವಾಗಿ ಕಾಣುವಂತ ಬೆಳಕಲ್ಲ. ಬದಲಾಗಿ ಅಭೌತಿಕವಾಗಿ ಹೊಳೆಯುವಂತ ಬೆಳಕೆಂದು ತಿಳಿಯಬೇಕಾಗಿದೆ. ಇಲ್ಲಿ ಕಂಭ, ತೊಲೆಗಳು ವೀರಶೈವ ಧರ್ಮವಾಗಿದೆ. ಮುತ್ತು ಮಾಣಿಕ್ಯರತ್ನಗಳು ಶಿವಶರಣರಾಗಿಗಿದ್ದಾರೆ. ಇವರ ತತ್ವ ಸಿದ್ಧಾಂತಗಳು ಮುತ್ತು ಜೀವನದ ಮೌಲ್ಯಗಳನ್ನು 'ಧ್ರುವಲೋಕ ಹೊಲೆಯಂತೆ ಥಾಳಿಸುವ ಕಳಸ ರವಿಯಂತೆ' ಎಂದು ಅರ್ಥೈಸಿಕೊಳ್ಳಬೇಕಾಗಿದೆ. ಹೀಗೆ ಶರಣರ ಕ್ರಾಂತಿಯಿಂದ ಅಥವಾ ಮಹಿಮೆಯಿಂದ ಓರಂಗಲ್ಲು ಆಸ್ಥಾನವು ಶೈವಧರ್ಮದ ಬೆಳಕಿನಡೆಗೆ ಸಾಗಿತು. ಇದರಿಂದ ಕರ್ನಾಟಕ ಮತ್ತು ಆಂಧ್ರದ ಸಾಂಸ್ಕೃತಿಕ ರಾಯಭಾರತ್ವದ

ಈ ಹಿನ್ನಲೆಯಲ್ಲಿ ಶರಣರು ಶೈವಧರ್ಮದ ನೆಲೆಗಳನ್ನು ತಮ್ಮ ಬದುಕಿನಲ್ಲಿ ಕಟ್ಟಿಕೊಂಡ ರೀತಿ ಅಸಾಧಾರಣವಾಗಿದೆ. ಬಸವಣ್ಣ ಮತ್ತು ಅಲ್ಲಮಪ್ರಭುವಿನಂತ ಮುಂಚೂಣಿ ನಾಯಕರ ಬೆಂಬಲವು ಕೆಲಸ್ತರದ ಸಾಮಾಜಿಕ ಜೀವನ ನಡೆಸುತ್ತಿದ್ದವರಿಗೆ ಮೇಲುಸ್ತರದ ಶಿವಶರಣರಾಗಲು ಅವಕಾಶ ನೀಡಿತು. ಮತ್ತು ಅಪೂರ್ವ ಜನಾಂದೋಲನವಾಗಲು ಪ್ರೋತ್ಸಾಹಿಸಿದ್ದೆ ಕರ್ನಾಟಕ ಶರಣ ಚಳುವಳಿಯ ಮಹತ್ವದ ಬದಲಾವಣೆ. ಈ ಬದಲಾವಣೆಯ ಗಾಳಿ ಆಂಧ್ರಕ್ಕೂ ಬೀಸಿ ಅಲ್ಲಿಯ ಅರಸರ ಬೆಂಬಲದೊಂದಿಗೆ ಓರಂಗಲ್ಲಿನ ಸಾಮಾಜಿಕ ಜೀವನದಲ್ಲಿ ಸಂಚಲನ ಮೂಡಿಸಿತು. ಇದರಿಂದ ಶರಣ ಚಳುವಳಿಯ ಮುಖ್ಯ ಧ್ಯೇಯವಾದ ಆದರ್ಶ ಸಮಾಜದ ಕಟ್ಟುವಿಕೆಗೆ ಪ್ರೇರಣೆ ನೀಡಿತು. ಇದು ಕರ್ನಾಟಕ ಮತ್ತು ಆಂಧ್ರ ರಾಜ್ಯಗಳ ಸುವರ್ಣ ಸೇತುವೆಯಾಗಿಯೂ ಕಾರ್ಯನಿರ್ವಹಿಸಿತು. ಆದ್ದರಿಂದ ಕಾಕತೀಯರು ಶಿವಶರಣರಿಗೆ ರಾಜಾಶ್ರಯ ನೀಡಿದರು. ಜೊತೆಗೆ ವೀರಶೈವ ಧರ್ಮದ ಭದ್ರನೆಲೆಯನ್ನು ಒದಗಿಸಲು ಅವಕಾಶವಿತ್ತರು. ಇವರಲ್ಲಿ ಗಣಪತಿರಾಯ ಪ್ರಮುಖನಾಗಿದ್ದಾನೆ.

ಗಣಪತಿರಾಯನ ಅರಮನೆಯ ಚಿತ್ರಪಟಗಳ ಮೂಲಕ ಮಧ್ಯಕಾಲೀನ ಕರ್ನಾಟಕದ ಸಮಗ್ರ ಆಯಾಮಗಳು ಮಾತ್ರವಲ್ಲದೆ, ಮಧ್ಯಕಾಲೀನ ಆಂಧ್ರನಾಡಿನ ಜೀವನದ ಸಮಗ್ರ ಆಯಾಮಗಳ ಅಭಿವ್ಯಕ್ತಿಯಾಗಿದೆ. ಶರಣರು ಲೌಕಿಕ ಜೀವನದ ಮೂಲಕ ಪಾರಮಾರ್ಥಿಕ ಜೀವನ ನಡೆಸಲು ಹೋದರು. ಇವರೆಲ್ಲರ ಮಾರ್ಗವು ಭಕ್ತಿಮಾರ್ಗವಾದರೂ ಸ್ವರೂಪದಲ್ಲಿ ಬೇರೆಯಾಗಿದೆ. ಇಂತಹ ಶರಣರ ಚಿತ್ರಪಟಗಳಿಂದ ತುಂಬಿದ ಅರಮನೆಯಲ್ಲಿ ಬೆಳಕು ತುಂಬಿತ್ತು. ಈ ಬೆಳಕು ಕತ್ತಲೆಯ ಜಗತ್ತನ್ನು ತೊಲಗಿಸಿತ್ತು. ಆದ್ದರಿಂದ 'ಗುಂಡಬ್ರಹ್ಮಯ್ಯಗಳ ಸಾಹಿತ್ಯ'ದಲ್ಲಿ ಈ ಕೆಳಗಿನಂತೆ ಪ್ರಸ್ತಾಪಿಸಲಾಗಿದೆ.

"ಎತ್ತ ನೋಡಲು ಅರಮನೆ ಮುತ್ತು ಮಾಣಿಕ್ಯರತ್ನ
ಕೆತ್ತಿಸಿದ ಕಂಭ ತೊಲೆ ಪಚ್ಚೆ|| ನವರತ್ನ
ಕತ್ತಲೆಯಿಲ್ಲ ಅರಮನೆಯಲ್ಲಿ

ವಾಲಗದ ಬಾವಿಯೊಳಗೆ ಚಿನ್ನದಗೆಲಸ
ಮೇಲುಪ್ಪರಿಗೆ ಧ್ರುವಲೋಕ|| ಹೊಳೆದಂತೆ
ಥಾಳಿಸುವ ಕಳಸ ರವಿಯಂತೆ"[17]

ಹೀಗೆ ಅರಮನೆಯ ಬದುಕನ್ನು ಬೆಳಕಿನಡೆಗೆ ಸಾಗಿಸಿದೆ. ಇದು ಭೌತಿಕವಾಗಿ ಕಾಣುವಂತ ಬೆಳಕಲ್ಲ. ಬದಲಾಗಿ ಅಭೌತಿಕವಾಗಿ ಹೊಳೆಯುವಂತ ಬೆಳಕೆಂದು ತಿಳಿಯಬೇಕಾಗಿದೆ. ಇಲ್ಲಿ ಕಂಭ, ತೊಲೆಗಳು ವೀರಶೈವ ಧರ್ಮವಾಗಿದೆ. ಮುತ್ತು ಮಾಣಿಕ್ಯರತ್ನಗಳು ಶಿವಶರಣರಾಗಿಗಿದ್ದಾರೆ. ಇವರ ತತ್ವ ಸಿದ್ಧಾಂತಗಳು ಮುತ್ತು ಜೀವನದ ಮೌಲ್ಯಗಳನ್ನು 'ಧ್ರುವಲೋಕ ಹೊಲೆಯಂತೆ ಥಾಳಿಸುವ ಕಳಸ ರವಿಯಂತೆ' ಎಂದು ಅರ್ಥೈಸಿಕೊಳ್ಳಬೇಕಾಗಿದೆ. ಹೀಗೆ ಶರಣರ ಕ್ರಾಂತಿಯಿಂದ ಅಥವಾ ಮಹಿಮೆಯಿಂದ ಓರಂಗಲ್ಲು ಆಸ್ಥಾನವು ಶೈವಧರ್ಮದ ಬೆಳಕಿನಡೆಗೆ ಸಾಗಿತು. ಇದರಿಂದ ಕರ್ನಾಟಕ ಮತ್ತು ಆಂಧ್ರದ ಸಾಂಸ್ಕೃತಿಕ ರಾಯಭಾರತ್ವದ

ಪ್ರತಿನಿಧಿಗಳಾಗಿ ಚಿತ್ರಪಟಗಳು ಕಾಣುತ್ತವೆ. ಆದ್ದರಿಂದ ಗಣಪತಿರಾಯನ ಅರಮನೆಯಲ್ಲಿರುವ ಮಹಾಮನೆಯ ಚಿತ್ರಪಟಲಗಳನ್ನು ಒಂದೊಂದಾಗಿ ವಿಶ್ಲೇಷಿಸುವುದು ಪ್ರಮುಖವಾಗಿದೆ. ಈ ಹಿಂದೆ ಪ್ರಸ್ತಾಪಿಸಿದಂತೆ ೨೫-೩೦ ಶರಣರ ಚಿತ್ರಪಟಗಳನ್ನು ಮತ್ತು ಅವರು ಕೈಗೊಂಡ ಭಕ್ತಿಯ ನಿಷ್ಠೆಯನ್ನು ತ್ರಿಪದಿಯಲ್ಲಿ ವಿಶ್ಲೇಷಿಸಲಾಗಿದೆ. ಅವುಗಳನ್ನು ಈ ಮುಂದಿನಂತೆ ಒಂದೊಂದಾಗಿ ಅಧ್ಯಯನ ಮಾಡಲಾಗುತ್ತದೆ.

ಗಿರಿಜೆ

ಗಣಪತಿರಾಯನ ಆಸ್ಥಾನದಲ್ಲಿ ಗಿರಿಜೆಯ, ಗಂಗೆಯ, ಶಿವಶರಣರ ಚಿತ್ರಪಟಗಳಿವೆ. ಶಿವ ಮತ್ತು ನಾರದರು ಅರಮನೆಯ ಚಿತ್ರಶಾಲೆಗೆ ಪ್ರವೇಶಿಸಿದ ಕೂಡಲೆ ಮೊದಲಿಗೆ ಚಿತ್ರಪಟ ಕಾಣುತ್ತದೆ. ನಂತರ ಗಂಗೆಯ ಚಿತ್ರಪಟ ಮುಂದೆ ಎಣಿಕೆಯಿಲ್ಲದಷ್ಟು ಶಿವಶರಣರ ಚಿತ್ರಪಟಗಳು ಕಾಣುತ್ತವೆ. ಪರ್ವತರಾಜನಾದ ಹಿಮವಂತನಿಂದ ಮೇನೆಯೆಂಬಾಕೆಯಲ್ಲಿ ಜನಿಸಿದ ಮೂವರು ಪುತ್ರಿಯರಲ್ಲಿ ಪಾರ್ವತಿ ಹಿರಿಯಳಾಗಿದ್ದಾಳೆ. ಪಾರ್ವತಿಗೆ ಗಿರಿಜೆ, ಅಪರ್ಣೆ, ಉಮೆ ಮೊದಲಾದ ಪರ್ಯಾಯ ಹೆಸರುಗಳಿವೆ. ಈಕೆಯು ಗಿರಿರಾಜನ ಮಗಳಾದುದರಿಂದ ಗಿರಿಜೆ, ಪರ್ಣ(ಎಲೆ)ವನ್ನು ತಿನ್ನದೆ ತಪಸ್ಸು ಮಾಡಿದ್ದರಿಂದ ಅಪರ್ಣೆ. ಕಷ್ಟಸಾಧ್ಯವಾದ ತಪಸ್ಸು ಮಾಡಬೇಡವೆಂದು ತಡೆಯಲ್ಪಟ್ಟವಳಾದ್ದರಿಂದ ಉಮೆ ಎಂದು ಕರೆಯುವರು. ಪಾರ್ವತಿಯು ಶಿವನನ್ನು ವಿವಾಹವಾದಳು. ತಾರಕಾಸುರನ ಭಾದೆಯನ್ನು ತಡೆಯಲಾರದ ದೇವತೆಗಳು ಮನ್ಮಥನನ್ನು ಶಿವನ ತಪೋಭಂಗಕ್ಕೆ ಕಳುಹಿಸಲು ಶಿವನು ಮನ್ಮಥನನ್ನು ಮೂರನೆಯ ಕಣ್ಣಿನಿಂದ ಸುಟ್ಟು ಪಾರ್ವತಿಯನ್ನು ವಿವಾಹವಾಗುವನು. ಈಕೆ ಪೂರ್ವಜನ್ಮದಲ್ಲಿ ದಕ್ಷನ ಮಗಳಾಗಿದ್ದರಿಂದ ದಾಕ್ಷಾಯಿಣಿ ಎಂದು ಹೆಸರುವಾಸಿ. ಜಲಂಧರನು ಈಕೆಯ ಪಾತಿವ್ರತ್ಯವನ್ನು ಕೆಡಿಸಲು ಹೋಗಿ ಶಿವನಿಂದ ನಾಶವಾದನು.

ಶಕ್ತಿ ದೇವತೆಯಾದ ಪಾರ್ವತಿಯ ಚಿತ್ರಪಟವನ್ನು ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ಕೆಳಗಿನಂತೆ ವಿವರಿಸಲಾಗಿದೆ.

“ಅರಮನೆಗಳ ಹೊಕ್ಕು ಬರೆದ ಚಿತ್ರವ ಕಂಡು
ಹೊರಗೆ ನಾರಂದ ನುಡಿದಾರು|| ಅದವೊಂದು
ಗಿರಿಜೆ ತಂದ ಪಟವಿದೆ”[೨೦]

ಹೀಗೆ ಗಣಪತಿರಾಜನು ಶಿವನ ಮಡದಿಯಾದ ಗಿರಿಜೆಯ ಚಿತ್ರಪಟಗಳನ್ನು ಹಾಕಿರುವುದನ್ನು ಹರನಾರದರು ಗಮನಿಸುವರು.

ಗಂಗೆ

ಗಂಗೆ ಶಿವನ ಹೆಂಡತಿಯಾಗಿದ್ದಾಳೆ. ಒಮ್ಮೆ ದೇವಸಭೆಯಲ್ಲಿ ಎಲ್ಲರೂ ತಲೆತಗ್ಗಿಸಿದ್ದರೂ ಇಕ್ಷ್ವಾಕು ವಂಶದ ‘ಮಹಭಿಷೆ’ ಎಂಬ ರಾಜನು ಮಾತ್ರ ಈಕೆಯನ್ನು ನೆಟ್ಟ ದೃಷ್ಟಿಯಿಂದ ನೋಡುತ್ತಿರಲು ಗಂಗೆಯೂ ಈತನನ್ನು ಮೋಹಿಸಿದಳು. ಇದರಿಂದ ಬ್ರಹ್ಮನು ಇಬ್ಬರಿಗೂ ಭೂಲೋಕದಲ್ಲಿ ಜನಿಸುವಂತೆ ಶಾಪವಿತ್ತನು. ಮಹಾಭಿಷನು ಶಂತಾನು ರಾಜನಾಗಿ ಹುಟ್ಟಿದನು. ತಾರುಣ್ಯದಲ್ಲಿ ಇವನು ಬೇಟೆಯಾಡಲು ಕಾಡಿಗೆ ಹೋದಾಗ

ಗಂಗೆಯನ್ನು ಕಂಡು ಪತ್ನಿಯಾಗೆಂದು ಕೇಳಿದನು. ಆಕೆಯು ಅವನನ್ನು ಒಪ್ಪಿದಳು. ನಂತರ ತನ್ನ ವರ್ತನೆಯನ್ನು ಕಂಡಿಸಿದಾಗ ನಿನ್ನನ್ನು ಬಿಟ್ಟು ಹೋಗುವೆನೆಂದಳು. ಅದರಂತೆ ಇವರೀರ್ವರಿಗೂ ಮದುವೆಯಾಗುತ್ತದೆ. ಮುಂದೆ ಗಂಗೆಗೆ ಮಕ್ಕಳು ಹುಟ್ಟಿದರು. ಗಂಗೆಯು ಒಂದೊಂದು ಮಗು ಹುಟ್ಟಿದೊಡನೆ ಗಂಗಾನದಿಗೆ ಎಸೆಯುತ್ತಾ ಬಂದಳು. ಹೀಗೆ ಏಳು ಮಕ್ಕಳು ನಾಶವಾದವು. ಎಂಟನೆ ಮಗುವಿಗೆ ಜನ್ಮವಿತ್ತು ಅದನ್ನು ನೀರಿಗೆ ಬಿಡುವ ಸಮಯದಲ್ಲಿ ಶಂತಾನು ಮಹಾರಾಜ ಅಕ್ಷೇಪಿಸಿದನು. ಇದರಿಂದ ಪ್ರತಿಜ್ಞಾ ಭಂಗವಾಯಿತೆಂದು ಗಂಗೆಯು ಆ ಪುತ್ರನನ್ನು ಎತ್ತಿಕೊಂಡು ಸ್ವರ್ಗಕ್ಕೆ ನಡೆದುಬಿಟ್ಟಲು. ಗಂಗೆಯ ಚಿತ್ರಪಟವನ್ನು ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ಕೆಳಗಿನಂತೆ ವಿವರಿಸಲಾಗಿದೆ.

"ಆಕಾಶದಗಲಕೆ ಭೂಮಿಯ ನೀಳಕ್ಕೆ
ಹಾಕಿದರು ಶಿವನ ಕಿರುಜಡೆಯ|| ಗಂಗಮ್ಮನ
ಪಾತಾಳಕಿಳಿದ ಪಟವಿದೆ"[೨೧]

ಹರ-ನಾರದರಿಗೆ ಗಂಗೆಯ ಚಿತ್ರಪಟಗಳೂ ಅರಮನೆಯಲ್ಲಿ ಕಂಡವು. ನಂತರ ಶರಣರ ಚಿತ್ರಪಟಗಳು ಕಾಣುತ್ತವೆ. ಅವುಗಳನ್ನು ಮುಂದೆ ನೋಡಬಹುದಾಗಿದೆ.

ಮೈದುನ ರಾಮಯ್ಯ

ಬಸವಣ್ಣನವರ ಮಹಾನಾಯಕತ್ವದಲ್ಲಿ ನಡೆದ ಕಲ್ಯಾಣ ಸಮಾಜೋ-ಧಾರ್ಮಿಕ ಆಂದೋಲನದಲ್ಲಿ ಪಾಲ್ಗೊಂಡು ಇಡೀ ವಿಶ್ವವೇ ವಿಸ್ಮಯಪಡುವಂಥ ವೈಚಾರಿಕ ಕ್ರಾಂತಿಗೆ ಕಾರಣರಾದ ಶರಣರ ಸಂಖ್ಯೆ ಅಗಣಿತ. ಅನುಭವ ಮಂಟಪವೆಂಬ ಕರ್ತಾರನ ಕಮ್ಮಟದಲ್ಲಿ ಶರಣತತ್ವ ಸಿದ್ಧಾಂತ ಮುದ್ರಾಂಕಿತರಾಗಿ ನಡೆಸಿದ ಜನಪರ-ಜೀವನಪರ ಚಳುವಳಿಯ ಗಾಳಿ ದಿಕ್ಕು ದಿಕ್ಕಿಗೆ ಬೀಸಿತು. ಇದರಿಂದ ಅನೇಕ ಸಮಾನ ಧೋರಣೆಯನ್ನು ಸಾತ್ವಿಕರನ್ನು ಕಲ್ಯಾಣದತ್ತ ಸೆಳೆದು ತಂದಿತು. ಹಾಗೆ ಬಂದು ಸೇರಿದ ಶರಣರಲ್ಲಿ ಮೈದುನ ರಾಮಯ್ಯನೂ ಒಬ್ಬ. ಮೈದುನ ರಾಮಯ್ಯನ ಜೀವನ ವೃತ್ತಾಂತವನ್ನು ತಿಳಿಸುವಲ್ಲಿ ಆತನೇ ರಚಿಸಿದ ವಚನಗಳು, ಆದಯ್ಯನ (೧೧೯೫) ಒಂದು ವಚನ, ಶಂಕರಲಿಂಗನ (೧೯೨೦) ಮೈದುನ ರಾಮಯ್ಯನ ರಗಳೆ, ಕಿಕ್ಕೇರಿಯಾರಾಧ್ಯ ನಂಜುಂಡನ (೧೫೫೦) ಭೈರವೇಶ್ವರ ಕಾವ್ಯ, ಉತ್ತರ ದೇಶದ ಬಸವಲಿಂಗನ (೧೬೦೦) ಭೈರವೇಶ್ವರ ಪುರಾಣ ಕಥಾಸಾಗರ, ಅಜ್ಞಾತ ಕವಿಗಳ ಮೈದುನ ರಾಮಯ್ಯನ ಸಾಂಗತ್ಯ, ಮೈದುನ ರಾಮಯ್ಯನ ಚರಿತ್ರೆ, ಮೈದುನ ರಾಮಯ್ಯನ ಸುವ್ವಿ, ಗುಬ್ಬಿಮಲ್ಲಣಾರ್ಯನ (೧೫೧೩) ವೀರಶೈವಾಮೃತ ಮಹಾಪುರಾಣ-ಮೊದಲಾದ ಕೃತಿಗಳು ಸಹಾಯಕವಾಗಿವೆ.

ಮೇಲಿನ ಆಕರಗಳಲ್ಲಿ ಮೈದುನ ರಾಮಯ್ಯನ ರಗಳೆ ಮತ್ತು ಮೈದುನ ರಾಮಯ್ಯನ (ಚರಿತೆ, ಸುವ್ವ) ಕೃತಿಗಳು ಈ ಶರಣನ ಸಮಗ್ರ ಚರಿತ್ರೆಯನ್ನು ಹೇಳಲು ಮೀಸಲಾಗಿವೆ. 'ಗುಂಡಬ್ರಹ್ಮಯ್ಯಗಳ ಸಾಹಿತ್ಯ ಕೃತಿಯಲ್ಲಿ ಮೈದುನ ರಾಮಯ್ಯನ ಬಗ್ಗೆ ಪ್ರಸ್ತಾಪಿಸಲಾಗಿದೆ. ಆಂಧ್ರದ ಕಾಕತೀಯ ಅರಸರ ರಾಜನಾದ ಗಣಪತಿರಾಯನ ಅರಮನೆಯಲ್ಲಿ ಮೈದುನ ರಾಮಯ್ಯನ ಚಿತ್ರಪಟವನ್ನು ಹಾಕಲಾಗಿತ್ತು.

ಅದಕ್ಕೆ ಸಾಕ್ಷಿಯಾಗಿ ಈ ಶರಣನ ಚಿತ್ರಪಟಗಳು ಮತ್ತು ಈತನ ಕಥೆಯನ್ನು ಸಾರುವ ಕೆಳಗಿನ ಪದ್ಯವನ್ನು ಗಮನಿಸಬಹುದು.

"ಓದುವ ಸಣ್ಣವರೊಳು ಸೋದರರುಂಟೆಂದು
ವಾದಿಸಿ ಅಕ್ಕ ಭಾವಗಳ ಕರತಂದ ನಿಮ್ಮ
ಮೈದ ಆ ರಾಮಯ್ಯನ ಪಟವಿದೆ"[೨೨]

ಹೀಗೆ ತ್ರಿಪದಿಯಲ್ಲಿ ಕೇವಲ ಮೂರೇ ಸಾಲಿನಲ್ಲಿ ಮೈದುನ ರಾಮಯ್ಯನ ಕಥೆಯನ್ನೆಲ್ಲ ತಿಳಿಸುತ್ತಾರೆ. ಆದ್ದರಿಂದ ತ್ರಿಪದಿಯು ಶಕ್ತಿಶಾಲಿ ಛಂದೋಪ್ರಕಾರವಾಗಿದೆ. ಮೈದುನ ರಾಮಯ್ಯನ ಜೀವನದ ಸಿದ್ಧಾಂತಗಳನ್ನು ಮತ್ತು ಆತನ ಕಥೆಯನ್ನು ಕೆಳಗೆ ನೋಡಲಾಗುತ್ತದೆ. ರಾಮಯ್ಯನು ಹುಟ್ಟಿದ ಕೆಲವೇ ದಿನಗಳಲ್ಲಿ ತಂದೆ ಸೋಮನಾಥ ತೀರಿಕೊಳ್ಳುತ್ತಾನೆ. ಮಹಾದೇವಿ ಮನೆಯ ಭಾರವನ್ನೆಲ್ಲ ಹೊತ್ತು, ಮಗನನ್ನು ಪ್ರೀತಿಯಿಂದ ಪೋಷಿಸುತ್ತಾಳೆ. ನಾಲ್ಕಾರು ವರ್ಷದವನಾಗುತ್ತಲೇ ಊರಿನ ಮಕ್ಕಳ ಜೊತೆ ರಾಮಯ್ಯನನ್ನು ಓದಲು ಕಳಿಸುತ್ತಾಳೆ. ಜಾಣನಾದ ರಾಮಯ್ಯ ಎಲ್ಲರಿಗಿಂತ ಮೊದಲೇ ಅಕ್ಷರ ವಿದ್ಯೆಯನ್ನು ಕಲಿತು ತನ್ನ ಬುದ್ಧಿಶಕ್ತಿಯನ್ನು ಪ್ರದರ್ಶಿಸುತ್ತಾನೆ.

ಹೀಗೆ ವಿದ್ಯಾಭ್ಯಾಸ ಮುಂದುವರಿದಿರುವಾಗ ದೀಪಾವಳಿ ಹಬ್ಬ ಸಮೀಪಿಸುತ್ತದೆ. ರಾಮಯ್ಯನ ಸಹಪಾಠಿಗಳೆಲ್ಲ ಹಬ್ಬಕ್ಕೆ ತಮ್ಮ ಅಕ್ಕ-ಭಾವಂದಿರನ್ನು ಕರೆತರುವ ಕುರಿತು ಮಾತನಾಡುತ್ತಾರೆ. ರಾಮಯ್ಯ ತಾನೂ ಕರೆತರುವುದಾಗಿ ತಿಳಿಸುತ್ತಾನೆ. ಆತನಿಗೆ ಅಕ್ಕನಿಲ್ಲದ ವಿಷಯ ತಿಳಿದಿದ್ದ ಗೆಳೆಯರು 'ನೀನು ಬಡ ವಿಧವೆಯ ಮಗ. ನಿಮ್ಮವ್ವ ತಿರಿದು ತಂದು ಹೊಟ್ಟೆ ಹೊರೆಯುವವಳು. ಇಲ್ಲದ ಅಕ್ಕ-ಭಾವರನ್ನು ಎಲ್ಲಿಂದ ತರುವೆ? ಎಂದು ಅಪಹಾಸ್ಯ ಮಾಡುತ್ತಾರೆ. ಈ ಮಾತು ಕೇಳಿದ ರಾಮಯ್ಯ ತುಂಬ ನೊಂದುಕೊಳ್ಳುತ್ತಾನೆ. ಅಳುತ್ತ ಮನೆಗೆ ಬಂದು ತಾಯಿಯನ್ನು ವಿಚಾರಿಸುತ್ತಾನೆ. ಆಕೆ ಸಮಾಧಾನಪಡಿಸುತ್ತ ನಿನಗೆ ಅಕ್ಕ-ಭಾವ ಇಲ್ಲವೆಂದವರಾರು? ಎಂದು ಕೇಳುತ್ತಾಳೆ. ಹಾಗಾದರೆ ಎಲ್ಲಿದ್ದಾರೆ? ಅವರ ಹೆಸರೇನು? ಎಂದು ರಾಮಯ್ಯ ಮರುಪ್ರಶ್ನೆ ಹಾಕುತ್ತಾನೆ. ಅದಕ್ಕೆ 'ನಿನ್ನಕ್ಕ ಗೌರಿ, ಭಾವ ಮಲ್ಲಿಕಾರ್ಜುನ, ಅವರಿರುವ ಸ್ಥಳ ಶ್ರೀಶೈಲ ಪರ್ವತ' ಎಂದು ಉತ್ತರಿಸುತ್ತಾಳೆ.

ತಾಯಿಯ ಮಾತು ನಿಜವೆಂದೇ ಭಾವಿಸಿದ ರಾಮಯ್ಯ ಅಕ್ಕ-ಭಾವರನ್ನು ಕರೆತರಲು ಶ್ರೀಶೈಲಕ್ಕೆ ಹೋಗುತ್ತಾನೆ. ಪರ್ವತದಲ್ಲಿ 'ಮಲ್ಲಭಾವಾ ಬಾ, ಅಕ್ಕ ಗೌರಾಯಿ ಬಾ, ಹಬ್ಬಕ್ಕೆ ಕರೆಯ ಬಂದೆಂ ದೇವ ಭಾವಾ ಬಾ' ಎಂದು ಕೂಗುತ್ತ ಅಲೆಯುತ್ತಾನೆ. ಕಂಡವರನ್ನೆಲ್ಲ ಕೇಳುತ್ತಾನೆ. ಯಾರಿಂದಲೂ ಅವರನ್ನು ತೋರಿಸಲಾಗುವುದಿಲ್ಲ. ಕೊನೆಗೆ ಅಡವಿಯೆಲ್ಲ ಸುತ್ತಿ ಬಳಲಿ ಬೆಂಡಾಗಿ, ಹಬ್ಬ ಸಮೀಪಿಸುವುದನ್ನು ನೆನೆದು ಕಳವಳಗೊಂಡನು. 'ಅಕ್ಕ-ಭಾವರಿಲ್ಲದ ಬದುಕು ಇನ್ನೇಕೆ' ಎಂದು ಒಂದು ಕೊಡುಗಲ್ಲ ಮೇಲೆ ನಿಂತು 'ಕೊನೆಯದಾಗಿ ಇನ್ನೊಮ್ಮೆ ಕರೆಯುತ್ತೇನೆ. ಓಗೊಡದಿದ್ದರೆ ಕೊಳ್ಳದಲ್ಲಿ ಹಾರಿ ಪ್ರಾಣಬಿಡುತ್ತೇನೆ' ಎಂದು ನಿರ್ಧರಿಸಿ ಕೂಗುತ್ತಾನೆ. ಮಾರುತ್ತರ ಬರುವುದಿಲ್ಲ. ಪ್ರತಿಜ್ಞೆ ಮಾಡಿದಂತೆ ಕೊಳದಲಿ ಜಿಗಿಯುತ್ತಾನೆ.

ತಕ್ಷಣ ಮಲ್ಲಯ್ಯ ಹಿಡಿದೆತ್ತಿಕೊಂಡು ಗೌರಿಸಮೇತ ತನ್ನ ನಿಜರೂಪ ತೋರಿಸುತ್ತಾನೆ. ಗೌರಿ ಪ್ರೀತಿಯಿಂದ ತಲೆದಡವಿ ತೊಡೆಯ ಮೇಲೆ ಕೂಡಿಸಿಕೊಂಡು ನಮ್ಮನ್ನು ಹುಡುಕುತ್ತ ಬಳಲಿದೆಯಾ? ಎಂದು ಸಂತೈಸುತ್ತಾಳೆ.

ರಾಮಯ್ಯನ ಭಿನ್ನಹದಂತೆ ಶಿವ-ಪಾರ್ವತಿಯರು ಗಣಸಮೂಹ ಸಹಿತ ಭೀಮಾವತಿಪುರಕ್ಕೆ ಬರುತ್ತಾರೆ. ಮಹಾದೇವಿ ಅವರನ್ನು ಪುರಜನ ಸಮೇತವಾಗಿ ಸ್ವಾಗತಿಸಿ ಮಗಳು ಅಳಿಯ ಬಂದಿಹರೆಂದು ಸಂಭ್ರಮದಿಂದ ಅಡಿಗೆ ಮಾಡಿ ಪಕ್ವಾನ್ನ ಭೋಜನವನ್ನು ಎಲ್ಲರಿದೂ ಉಣಬಡಿಸುತ್ತಾಳೆ. ಅಳಿಯನಿಗೆ ಹೊಸ ಬಟ್ಟೆಯನ್ನು, ಮಗಳಿಗೆ ಬಂಗಾರದ ಒಡವೆಗಳನ್ನು, ಬಡ ಗಣಂಗಳಿಗೆ ವಸ್ತ್ರ ಕಾಣಿಕೆಯನ್ನು ಕೊಟ್ಟು ಸಂತಸಪಡುತ್ತಾಳೆ. ಶಿವನು ಇವರ ಮುಗ್ಧಭಕ್ತಿಗೆ ಅಚ್ಚರಿಪಟ್ಟು ಭೂಮಿಯ ಮೇಲೆ ಇಂತಹ ಮುಗ್ಧಭಕ್ತರುಂಟೆಂದು ಪ್ರಥಮಗಣವನ್ನೆಲ್ಲ ಕುಳ್ಳಿರಿಸಿಕೊಂಡು ಕೈಲಾಸಕ್ಕೆ ಕರೆದೊಯ್ಯುತ್ತಾನೆ. ರಾಮಯ್ಯನು ತನ್ನ ಮುಗ್ಧಭಕ್ತಿಯಿಂದ ಶಿವ-ಪಾರ್ವತಿಯರನ್ನೇ ಅಕ್ಕ-ಭಾವಂದಿರನ್ನಾಗಿ ಮಾಡಿಕೊಂಡು ತಾಯಿಸಹಿತ ಗಣಪದವಿಯನ್ನು ಪಡೆಯುತ್ತಾನೆ. ಇದರಿಂದ ಲೋಕದಲ್ಲಿ ಮೈದುನ ರಾಮಯ್ಯನೆಂದು ಪ್ರಸಿದ್ಧಿಯಾಗಿದ್ದಾನೆ.

ಈ ಕಾರಣದಿಂದಲೇ ಈತನ ಚಿತ್ರಪಟವು ಓರಂಗಲ್ಲಿನ ಅರಸುಮನೆಯಲ್ಲಿ ಗೋಡೆಗಳ ಮೇಲೆ ಹಾಕಿರಬೇಕು. ಶಿವನಲ್ಲಿ ನಿಷ್ಠೆಯಿರುವ ಶರಣರ ಚಿತ್ರಗಳನ್ನು ಗೋಡೆಗಳ ಮೇಲೆ ಹಾಕುವುದರ ಮೂಲಕ ಗಣಪತಿರಾಯನು ಶೈವನಿಷ್ಠೆಯನ್ನು ಮೆರೆದಿದ್ದಾನೆ. ಇಂತಹ ಶರಣರ ತತ್ವ-ಸಿದ್ಧಾಂತಗಳಿಗೆ ಗೌರವದಿಂದ ಶರಣು ಹೋಗಿದ್ದಾಂಬುದು ನಮಗೆ ಮನವರಿಕೆಯಾಗುತ್ತದೆ. ಇದರಿಂದ ಗಣಪತಿರಾಯನ ಅರಮನೆಯು ಶರಣಧರ್ಮದ ಪ್ರತೀಕವಾಗಿತ್ತೆಂದು ಹೇಳಬಹುದು.

ಸತ್ಯಕ್ಕ

ಶರಣೆಯರು ಭಕ್ತಿ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಅನುಭವ ಹಾಗೂ ಅನುಭಾವದ ಕಾಣಿಕೆಯನ್ನು ಲೋಕದ ಮುಂದಿಟ್ಟಿದ್ದಾರೆ. ಅವರಲ್ಲಿ ಸತ್ಯಕ್ಕ ಪ್ರಮುಖಳು. ಶಿವತತ್ವ ಚಿಂತಾಮಣಿ, ಚೆನ್ನಬಸವ ಪುರಾಣ, ಸೋಮನಾಥ ಚರಿತ್ರೆಗಳಲ್ಲಿ ಸತ್ಯಕ್ಕನ ಶಿವನಿಷ್ಠೆಯ ಬಗ್ಗೆ ವಿವರಿಸಲಾಗಿದೆ. ಅಲ್ಲದೆ ಹರಿಹರನ ಲಿಂಗಾರ್ಚನೆಯ ರಗಳೆ ಮತ್ತು ವೀರಶೈವ ಕವಿಗಳ ವಚನಗಳಲ್ಲಿ ಈ ಶರಣೆಯ ಉಲ್ಲೇಖ ಇದೆ. ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪ ತಾಲೂಕಿನ ಹಿರೇಜಂಬೂರು ಈಕೆಯ ಹುಟ್ಟಿದ ಊರು. ಶಿವಭಕ್ತರ ಮನೆಯಲ್ಲಿ ಕಸಗೂಡಿಸುವುದು ಇವಳ ಕಾಯಕವಾಗಿತ್ತು. ಇವಳು ಏಕದೇವತಾ ನಿಷ್ಠೆಯುಳ್ಳವಳು. ಶಿವನಲ್ಲಿ ಮಾತ್ರ ಭಕ್ತಿ ಇಟ್ಟಿದ್ದಳು. ಆಕಸ್ಮಿಕವಾದರೂ ಬೇರೆ ದೇವರ ಹೆಸರನ್ನು ಹೇಳುತ್ತಿರಲಿಲ್ಲ. ಪೂಜೆ ಪುನಸ್ಕಾರಗಳಲ್ಲಿ ನಂಬಿಕೆಯಿರಲಿಲ್ಲ. 'ಶಂಭುಜಕ್ಕೇಶ್ವರ' ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾಳೆ.

"ಅರ್ಚನ ಪೂಜೆ ನೇಮವಲ್ಲ
ಮಂತ್ರ ತಂತ್ರ ನೇಮವಲ್ಲ
ಧೂಪ ದೀಪಾರತಿ ನೇಮವಲ್ಲ

ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೆ ನೇಮ
ಶಂಭುಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯ ನೇಮ"[೨೨]

ಎಂದು ಹೇಳಿ ತನಗೆ ಪೂಜೆ, ಮಂತ್ರ, ತಂತ್ರಗಳಲ್ಲಿ ಮತ್ತು ಅನ್ಯದೇವರಲ್ಲಿ ನಂಬಿಕೆಯಿಲ್ಲವೆಂಬುದನ್ನು ಅಭಿವ್ಯಕ್ತಿಸಿದ್ದಾಳೆ. ವೀರಶೈವ ಧರ್ಮದ ಸಿದ್ಧಾಂತಗಳನ್ನು ತನ್ನ ನಿಜದ ಬದುಕು ಮತ್ತು ಚಿಂತನೆಯಲ್ಲಿ ಅಳವಡಿಸಿಕೊಂಡು ಬಾಳಿದ ಸತ್ಯಕ್ಕ ಇತರರಿಗೆ ಮಾದರಿಯಾದಳು. ಈಕೆಯ ಪ್ರೌಢ ಚಿಂತನೆಯನ್ನು ಗಮನಿಸಿದರೆ ಈಕೆಯು ಸಾಕಷ್ಟು ಓದಿಕೊಂಡಿದ್ದಾಳೆಂದು ಅನಿಸದೇ ಇರದು. ವ್ಯಾಪಕ ಲೋಕಾನುಭವ ಇವಳ ವಚನಗಳಲ್ಲಿ ಹರಿದುಬಂದಿದೆ. ಭಕ್ತರ ಮನೆಯ ಅಂಗಳವನ್ನು ಗುಡಿಸಿ, ಮನೆಯನ್ನು ಸಾರಿಸಿ, ಓರಣವಾಗಿಟ್ಟುಕೊಳ್ಳುವ ಕಲೆಯನ್ನು ಬೋಧಿಸುತ್ತಿದ್ದಳು. ತನ್ನ ಈ ಕಾಯಕದ ಬಗ್ಗೆ ಎಂದೂ ಹೀನಭಾವನೆ ಬೆಳೆಸಿಕೊಳ್ಳದೆ ಕಾಯಕವನ್ನು ಶಿವನ ಕಾಯಕವೆಂದು ಪರಿಭಾವಿಸಿದ ಶುದ್ಧಭಕ್ತಳು. 'ಕಾಯಕವೇ ಕೈಲಾಸ ಎಂಬ ಬಸವಣ್ಣನವರ ಸಿದ್ಧಾಂತದೊಂದಿಗೆ ಕಾಯಕ ಪ್ರೀತಿಯನ್ನು ಸತ್ಯಕ್ಕ ಮೆರೆದಳು.

ಶಿವನು ತನ್ನ ಬಗ್ಗೆ ಇಟ್ಟ ನಿಷ್ಠೆಯನ್ನು ಪರೀಕ್ಷಿಸಬೇಕೆಂದು ಶಿವನು ಬಿಕ್ಷುಕನ ವೇಷದಲ್ಲಿ ಇವಳ ಮನೆಗೆ ಬರುತ್ತಾನೆ. ಸತ್ಯಕ್ಕ ಕಾಳನ್ನು ತಂದು ಜೋಳಿಗೆಯಲ್ಲಿ ನೀಡುತ್ತಿರುವಾಗ ಜೋಳಿಗೆ ಹರಿದುದರಿಂದ ಕಾಳು ನೆಲಕ್ಕೆ ಬೀಳುತ್ತವೆ. ಆಗ ಭಿಕ್ಷುಕನ ವೇಷದ ಶಿವನು 'ಹರಿಯಿಂದ ಹರಿದ ಕಾಳು ನೆಲಕ್ಕೆ ಬಿತ್ತು' ಎನ್ನುತ 'ನಿತ್ಯಳಾಗೌ ತಾಯೇ ಹರಿಯ ಕರುಣಾದಿಯೆನಲು' ಎಂದು ಹರಸುತ್ತಾನೆ. 'ಹರಿ' ಎಂಬ ಶಬ್ದವನ್ನು ಕೇಳಿ ಭಿಕ್ಷುಕನು ಹರಿಯ ಭಕ್ತನಿರಬೇಕು, ನಾನು ಹರಿಯ ಭಕ್ತನಿಗೆ ಭಿಕ್ಷೆನೀಡಿ ನನ್ನ ನಿಷ್ಠೆಯನ್ನು ಭಂಗಗೊಳಿಸಿದೆನಲ್ಲ ಎಂದು ಕೋಪಗೊಂಡು ಸತ್ಯಕ್ಕ ತನ್ನ ಕೈಯಲ್ಲಿರುವ ಸೌಟಿನಿಂದ ಭಿಕ್ಷುವಿಗೆ ಹೊಡೆಯುತ್ತಾಳೆ. ಆಗ ಭಿಕ್ಷುಕನು ನೋವಿನಿಂದ ಮೊರೆಯಿಡುತ್ತಾ ಬೀದಿಯಲ್ಲಿ ಬಂದು ನಿಲ್ಲುತ್ತಾನೆ. ಊರ ಜನರು ಸತ್ಯಕ್ಕನನ್ನು ಬಯ್ಯುತ್ತಾರೆ. ಹೊಡೆದ ಕಾರಣ ಕೇಳಲು ಆತ ಮತ್ತೆ 'ಹರಿ' ಶಬ್ದವನ್ನು ಉಚ್ಚರಿಸಲು ಸತ್ಯಕ್ಕ ಕೋಪಗೊಂಡು ಮತ್ತೆ ಸೌಟಿನಿಂದ ಹೊಡೆಯುತ್ತಾಳೆ. ಅವಳು ತನ್ನಲಿ ಇಟ್ಟ ನಿಷ್ಠೆಯನ್ನು ನೋಡಿ ಶಿವನು ನಿಜರೂಪ ತೋರಿ ಯಾವ ವರ ಬೇಕು ಕೇಳಿಕೋ ಎಂದು ಹೇಳಲು, ಸತ್ಯಕ್ಕ ನನ್ನನ್ನು ಭಿಕ್ಷೆಯನ್ನಾಗಿ ಮಾಡಿ ನಿನ್ನ ಕುಕ್ಷಿಯಲ್ಲಿಟ್ಟುಕೊ ಎಂದು ಬೇಡುತ್ತಾಳೆ. ಅದರಂತೆ ಶಿವನು ಅವಳನ್ನು ಭಿಕ್ಷೆಯನ್ನಾಗಿ ಮಾಡಿ ತನ್ನ ಕುಕ್ಷಿಯಲ್ಲಿಟ್ಟುಕೊಳ್ಳುತ್ತಾನೆ.

ಹೀಗೆ, ಸತ್ಯಕ್ಕನ ಪರತತ್ವ ಚಿಂತನೆ ಗಂಭೀರ ಸ್ವರೂಪದ್ದಾಗಿದೆ. ಪರಮಾತ್ಮ ನಿರಾಕಾರಿ, ನಿರಂಜನ, ಅನಂತ ಎಂಬ ತತ್ವವನ್ನು ನಿರಾಕರಿಸುತ್ತಾಳೆ. ಈಕೆಯ ದೃಷ್ಟಿಯಲ್ಲಿ ಭಕ್ತಿಯೆಂದರೆ ಭಜನೆಯಲ್ಲ. ಬದಲಾಗಿ ಅದು ಅಂತರಂಗ-ಬಹಿರಂಗ ಶುದ್ಧಿಗೊಂಡ ಸಾಧಕನ ಮಾನವ ಪ್ರೀತಿ ಮತ್ತು ಸೇವೆಯೇ ನಿಜವಾದ ಭಕ್ತಿಯಾಗಿದೆ. ಇಂತಹ ಆದರ್ಶವನ್ನು ಮತ್ತು ಸಿದ್ಧಾಂತವನ್ನು ಬಹುತೇಕ ವಚನಕಾರರು ಇಟ್ಟುಕೊಂಡಿದ್ದಾರೆ. ಆದ್ದರಿಂದ ಗಣಪತಿರಾಯನು ಶರಣರ ನಡೆ-ನುಡಿಗಳನ್ನು ಗೌರವಿಸಿರಬೇಕು. ಇದರಿಂದಾಗಿ ಸತ್ಯಕ್ಕನೆಂಬ ಶರಣೆಯ ಚಿತ್ರಪಟವನ್ನು ಗೌರವ ಸೂಚಕವಾಗಿ ಅರಮನೆಯ ಗೋಡೆಗಳ ಮೇಲೆ ಹಾಕಲಾಗಿದೆ.

ರಾಜತ್ವದಲ್ಲೂ ಶಿವತ್ವದ ಆಶ್ರಯ ನೀಡುವ ಮನಸಾಗಿರಬೇಕು. ಈ ಎಲ್ಲಾ ಅಂಶಗಳು ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ಬರುವ ಚಿತ್ರಪಟಗಳನ್ನು ನೋಡಿದ ಕೂಡಲೇ ವ್ಯಕ್ತವಾಗುತ್ತವೆ. ಇವುಗಳನ್ನು ನಾವು ಸರಳವಾಗಿ ಮೇಲ್ನೋಟಕ್ಕೆ ಹಾಗೆ ನೋಡಿದರೆ, ಓರಂಗಲ್ಲಿನ ಅರಸುಮನೆತನ ಮತ್ತು ಶರಣರ ಚಳುವಳಿ ಸಮರ್ಪಕವಾಗಿ ಕಟ್ಟಿಕೊಡಲು ಸಾಧ್ಯವಿಲ್ಲವೆನಿಸುತ್ತದೆ. ಆದ್ದರಿಂದ ಇಲ್ಲಿ ಬರುವಂತಹ ಪ್ರತಿಯೊಬ್ಬ ಶರಣ-ಶರಣೆಯರ ಚಿತ್ರಪಟಗಳನ್ನು ಅವರ ಕುರಿತಾದ ಕಥೆಯೊಂದಿಗೆ ವಿವರಿಸುವ ಮೂಲಕ ಕಟ್ಟಿಕೊಡಲಾಗುತ್ತದೆ. ಅರಮನೆಯಲ್ಲಿರುವ ಮಹಾಮನೆಯ ಚಿತ್ರಪಟದಲ್ಲಿ ಸತ್ಯಕ್ಕ ಮತ್ತು ಇನ್ನೂ ಮುಂತಾದ ಶರಣೆಯರನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

"ಸತ್ಯಕ್ಕ ಮುಕ್ತಾಯಿ ಒಪ್ಪುವ ಚಂಗಳದೇವಿ
ಮತ್ತೆ ಮಂಗಾಯಕ್ಕ ಅಮರವ್ವೆ|| ಅಮ್ಮವೆ
ಭಕ್ತರಾದವರ ಪಟವಿದೆ"[೨೨]

ಓರಂಗಲ್ಲಿನ ಆಸ್ಥಾನದಲ್ಲಿ ಶರಣೆಯರಿಗೂ ಉನ್ನತ ಸ್ಥಾನ ನೀಡಿರಬೇಕು. ಈ ಮಾತನ್ನು ಪುಷ್ಟೀಕರಿಸಲು ಇವರೆಲ್ಲರುಗಳ ಚಿತ್ರಪಟಗಳು ಸಹಾಯವಾಗಿವೆ. ಈ 'ತ್ರಿಪದಿ'ಯಂತೆ ಸತ್ಯಕ್ಕ, ಮುಕ್ತಾಯಿ, ಚಂಗಳದೇವಿ, ಮಂಗಾಯಕ್ಕರ ಚಿತ್ರಪಟಗಳಿವೆ. ಗಣಪತಿರಾಯನಿಗೆ ಗಂಡುಮಕ್ಕಳು ಇರಲಿಲ್ಲ. ಈ ಕೊರತೆಯನ್ನು ತುಂಬಲು ಹೆಣ್ಣುಮಗುವಿಗೆ ರುದ್ರದೇವನೆಂಬ ಗಂಡು ಹೆಸರಿತ್ತು ರಾಜಾಧಿಕಾರ ವಹಿಸಿಕೊಟ್ಟಿರುವುದನ್ನು ನೆನೆಯಬಹುದು. ಈ ಹಿನ್ನಲೆಯಲ್ಲಿ ಸ್ತ್ರೀಯರಿಗೆ ಉತ್ತಮವಾದ ಅವಕಾಶಗಳನ್ನು ಕೊಟ್ಟಿರಬೇಕು. ಶರಣರ ತತ್ವಗಳಿಗೆ ಎಷ್ಟು ಮಾನ್ಯತೆ ಇತ್ತೋ, ಅಷ್ಟೇ ಮಾನ್ಯತೆ ಕೊಟ್ಟಿರಬೇಕು. ಆದ್ದರಿಂದ ಗಣಪತಿರಾಯ ಶರಣೆಯ ಚಿತ್ರಪಟಗಳನ್ನು ಹಾಕಿದ್ದಾನೆ.

ಕಲ್ಯಾಣ ಕ್ರಾಂತಿಯ ನಂತರ ಶರಣೆಯರೂ ಬಂದಿರುವ ಸಾಧ್ಯತೆಗಳಿವೆ. ಆಸೆ-ಲೋಭ-ಮೋಹ ಮದಾದಿಗಳು ಭಕ್ತಿಯ ಪರಮವೈರಿಗಳು. ಭಕ್ತರಿಗೆ ಇವು ಕೂಡದು. ಆಸೆಯಿಂದ ಗಾವುದ ದೂರವಿರುವಂಥವರು ಭಕ್ತರು. ತನ್ನದಲ್ಲದ್ದು ದಾರಿಯಲ್ಲಿ ಬಿದ್ದಿದ್ದರೂ ಅದರತ್ತ ನೋಡಬಾರದೆಂದು ಶರಣ-ಶರಣೆಯರು ಸಾರಿದರು. ಭಕ್ತಿಯೆಂದರೆ ಭವದ ಹಂಗಿನಲ್ಲಿರಬಾರದು, ನೀರ ಬೆರಸಿದ ಎಣ್ಣೆಯಂತಿರಬಾರದೆಂದು ಬೋಧಿಸಿದರು. ಇಂತಹ ಮಹತ್ವದ ಸಂದೇಶಗಳಿಂದ ವೀರಶೈವ ಧರ್ಮವು ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು.

ನುಲಿಯ ಚಂದಯ್ಯ

ನುಲಿಯ ಚಂದಯ್ಯನು ಕಲ್ಯಾಣದಲ್ಲಿ ವಾಸವಾಗಿ ಹಗ್ಗ ಹೊಸೆಯುವ ಕಾಯಕ ಮಾಡುತ್ತಿದ್ದನು. ಪ್ರತಿದಿನ ಬೆಳಿಗ್ಗೆ ಪೂಜೆ ಮುಗಿಸಿ ಪೇಟೆಯಲ್ಲಿ ಮಾರುತ್ತಿದ್ದನು. ಇದರಿಂದ ಬಂದ ಹಣದಿಂದ ಜಂಗಮರ ಆರಾಧನೆ ನಡೆಸುತ್ತಿದ್ದ. ಈತ ಪೂಜೆಗಿಂತ ಕಾಯಕದಲ್ಲಿಯೇ ಹೆಚ್ಚು ಶ್ರದ್ಧೆಯುಳ್ಳವನಾಗಿದ್ದನು. ಚಂದಯ್ಯನು ಕಾಯಕದಲ್ಲಿ ಎಷ್ಟು ತಲ್ಲೀನನಾಗಿದ್ದನು ಎಂಬುದಕ್ಕೆ ಇವನ ಜೀವನದಲ್ಲಿ ನಡೆದ ಒಂದು ಘಟನೆಯು

ಸಾಕ್ಷಿಯಾಗಿದೆ. ಒಮ್ಮೆ ಈತನು ಹಳ್ಳದಲ್ಲಿ ಹುಲ್ಲು ಕೊಯುತ್ತಿರುವಾಗ ಚಂದಯ್ಯ ಲಿಂಗವನ್ನು ಬಿಟ್ಟು ಮನೆಗೆ ಹೊರಡುತ್ತಿರುವಾಗ 'ನಾನು ಬಂದೆನು ಚಂದಯ್ಯ' ಎಂದು ಆತನ ಬೆನ್ನಟ್ಟುತ್ತದೆ. ಅದಕ್ಕೆ ಅವನು 'ಮೊದಲೇಕೆ ಹೋದಿರಿ, ಈಗಲೇಕೆ ಬಂದೆನೆಂದರಿ ನಾನೊಲ್ಲೆ' ಎಂದು ಹೇಳಿ ಹೊರಡುತ್ತಾನೆ. ಆಗ ಲಿಂಗವು ಮಾಚಯ್ಯನ ಮನೆಗೆ ಹೋಗಿ ದೂರು ನೀಡುತ್ತದೆ.

ಇದರಿಂದ ಮಾಚಯ್ಯ ಚಂದಯ್ಯನನ್ನು ವಿಚಾರಿಸಲು ನಮಗೆ ಲಿಂಗಪೂಜೆ ವೇಳೆಯಿಲ್ಲ ಎಂದು ಹೇಳುತ್ತಾನೆ. ಆಗ ಲಿಂಗವು ಜಂಗಮರ ಸೇವೆಗೆ ನಾನೆರದಪ್ಪೆನು ಎಂದು ಹೇಳಿ ಹುಲ್ಲನ್ನು ಮನೆಗೊಯ್ದು, ಹಗ್ಗ ಹೊಸೆದು ಪೇಟೆಯಲ್ಲಿ ಮಾರಲು ಹೋಗುತ್ತದೆ. ಹಗ್ಗ ಗಂಟಾಗಿದ್ದುದರಿಂದ ಅದನ್ನು ಯಾರೂ ಕೊಳ್ಳುವುದಿಲ್ಲ. ನಂತರ ಲಿಂಗವು ಅದನ್ನು ಬಸವಣ್ಣನವರ ಮನೆಗೊಯ್ದು ವಿಷಯವನ್ನು ತಿಳಿಸಲು ಬಸವಣ್ಣನವರು ಲಿಂಗಕ್ಕೆ ಒಂದು ಸಾವಿರ ಹೊನ್ನನ್ನು ಕೊಟ್ಟು ಕಳುಹಿಸುತ್ತಾರೆ. ಆದರೆ ಚಂದಯ್ಯ ಅದು ಅನ್ಯಾಯದ ಹಣ, ಹಗ್ಗದ ನಿಜವಾದ ಬೆಲೆಯ ಹಣವನ್ನು ತಂದರೆ ಮಾತ್ರ ಸ್ವೀಕರಿಸುತ್ತೇನೆಂದು ಹೇಳುತ್ತಾನೆ. ಲಿಂಗವು ಆ ಸಾವಿರ ಹೊನ್ನನ್ನು ಬಸವಣ್ಣನಿಗೆ ಕೊಟ್ಟು ಹಗ್ಗದ ಬೆಲೆಯ ಹಣವನ್ನು ತಂದ ಚಂದಯ್ಯನಿಗೆ ಕೊಡುತ್ತದೆ. ಆ ಹಣದಿಂದ ಚಂದಯ್ಯ ಜಂಗಮರ ಆರೋಗಣೆ ಮಾಡುತ್ತಾನೆ.

'ಗುಂಡಬ್ರಹ್ಮಯ್ಯಗಳ ಸಾಹಿತ್ಯ'ದಲ್ಲಿ ಬರುವ ಗಣಪತಿರಾಯನ ಆಸ್ಥಾನದಲ್ಲಿ ಈ ನುಲಿಯ ಚಂದಯ್ಯನ ಚಿತ್ರಪಟವನ್ನು ಹಾಕಲಾಗಿದೆ. 'ಗುಂಡಬ್ರಹ್ಮಯ್ಯಗಳ ಸಾಹಿತ್ಯ'ವು ಚಾರಿತ್ರಿಕ ಅಂಶಗಳ ಮೇಲೆ ಬೆಳಕು ಚೆಲ್ಲುತ್ತದೆ. ಮೂರು ಸಾಲಿನ ಪದ್ಯವಾದ ಒಂದೇ ತ್ರಿಪದಿಯಲ್ಲಿ ನುಲಿಯ ಚಂದಯ್ಯನ ಕಾಯಕ ತತ್ವವನ್ನು ತಿಳಿಸುತ್ತದೆ. ಈ ಕೃತಿಯಲ್ಲಿ ಬರುವ ಓರಂಗಲ್ಲಿನ ಅರಮನೆಯ ಚಿತ್ರಪಟಗಳಿಂದ ಗಣಪತಿರಾಯ ಶೈವಧರ್ಮಕ್ಕೆ ಮಾರ್ಪಾಡು ಹೊಂದಿರುವುದು ಗಮನಿಸಬಹುದು. ಅಲ್ಲದೆ ಶರಣಧರ್ಮವು ಪ್ರಭುದ್ಧವಾಗಿತ್ತೆಂದು ತಿಳಿಯಲು ಪ್ರಮುಖವಾದ ಆಕರ ಸಾಮಾಗ್ರಿಯಾಗಿದೆ. ಈ ಹಿನ್ನಲೆಯಲ್ಲಿ 'ಗುಂಡಬ್ರಹ್ಮಯ್ಯರ ಸಾಹಿತ್ಯಕ್ಕೆ' ವಿಶೇಷವಾದ ಚಾರಿತ್ರಿಕ ಸ್ಥಾನವಿದೆ. ಈ ಕೃತಿಯಲ್ಲಿ ನುಲಿಯ ಚಂದಯ್ಯನ ಬಗ್ಗೆ ಈ ಕೆಳಗಿನಂತೆ ಹೇಳಲಾಗಿದೆ.

"ಹಲವು ಹುಲ್ಲನು ತಂದು ನುಲಿಯ ಕಾಯಕವ ಮಾಡಿ
ಚಲುವ ಜಂಗಮಕೆ ಎಡೆಮಾಡಿ|| ನೀಡುವ
ನುಲಿಯ ಚಂದಯ್ಯಗಳ ಪಟವಿದೆ"[39]

ಹೀಗೆ ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ಅತಿ ಸಂಕ್ಷಿಪ್ತವಾಗಿ ಶಿವಶರಣನ ಕಾಯಕದ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. ಈ ದೃಷ್ಟಿಯಿಂದ ತ್ರಿಪದಿಯು ಅತ್ಯಂತ ಉತ್ಕೃಷ್ಟವಾದ ಛಂದಾಪ್ರಕಾರವಾಗಿದೆ. ಅನೇಕ ಪುಟಗಟ್ಟಲೆ ವಿವರಿಸಬೇಕಾದುದನ್ನು ಮೂರೇ ಪಾದದಲ್ಲಿ ಎಲ್ಲವನ್ನು ವಿಶ್ಲೇಷಿಸುತ್ತದೆ. ಈ ದೃಷ್ಟಿಯಿಂದಲೆ ಬಹುಶಃ ಚನ್ನಕವಿಯು ಗುಂಡಬ್ರಹ್ಮಯ್ಯಗಳ ಸಾಹಿತ್ಯವನ್ನು ತ್ರಿಪದಿಯಲ್ಲಿ ಹೇಳಿರಬೇಕು.

ನುಲಿಯ ಚಂದಯ್ಯ ಎಂದೊಡನೆ ನಮಗೆ ಕಾಯಕನಿಷ್ಠೆ ನೆನಪಿಗೆ ಬರುತ್ತದೆ. ಲಿಂಗಪೂಜೆ ಮಾಡುವುದಕ್ಕೂ ಸಮಯವಿಲ್ಲ ಎಂದು ಹೇಳುವ ಈ ಶರಣನಿಗೆ ತನ್ನ ಕಾಯಕದ ಪ್ರಜ್ಞೆ ಎಷ್ಟು ಇತ್ತು ಎಂಬುದನ್ನು ತೋರಿಸುತ್ತದೆ. ಈತನು ವಚನಗಳಲ್ಲಿಯೂ ಕಾಯಕದ ಬಗ್ಗೆ ಪ್ರಸ್ತಾಪಿಸಿರುವುದನ್ನು ಕಾಣಬಹುದು. ಉದಾಹರಣೆಗೆ ಈ ವಚನವನ್ನು ಗಮನಿಸಬಹುದು.

"ಗುರುವಾದರೂ ಕಾಯಕದಿಂದಲೇ ಜವನ್ಮುಕ್ತಿ

ಲಿಂಗವಾದರೂ ಕಾಯಕದಿಂದಲೇ ಶಿಲೆಯ ಕುರುಹು ಹರಿವುದು

ಜಂಗಮವಾದರೂ ಕಾಯಕದಿಂದಲೇ ತನ್ನ ವೇಷದ ಪಾಶ ಹರಿವುದು"[15]

ಎಂಬುದು ನುಲಿಯ ಚಂದಯ್ಯನ ವಚನವಾಗಿದೆ. ಪ್ರತಿಯೊಬ್ಬರೂ ಕಾಯಕ ಯೋಗಿಗಳಾಗಿಬೇಕು. ಅದರಿಂದಲೇ ಜೀವನದಲ್ಲಿ ಮುಕ್ತಿ ಹೊಂದಲು ಸಾಧ್ಯವೆಂದು ಸಾರಿದ್ದಾರೆ. ಗುರು-ಲಿಂಗ-ಜಂಗಮವಾದರೂ ಕಾಯಕದಿಂದ ದೋಷ ತೊಲಗುವುದೆನ್ನವುದು ಈ ಶರಣನ ಮಹತ್ವದ ಸಂದೇಶವಾಗಿದೆ. ಇಂತಹ ಕಾಯಕ ಯೋಗಿಯ ಚಿತ್ರಪಟಗಳನ್ನು ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ಕಾಣಬಹುದು. ಆದ್ದರಿಂದ ಈ ಕೃತಿಯು ಚರಿತ್ರೆಯನ್ನು ಸಾರುವ ಆಕರ ಸಾಮಾಗ್ರಿಯೆಂದು ಹೇಳಬಹುದು. ಓರಂಗಲ್ಲಿನ ಗಣಪತಿರಾಯ ನುಲಿಯ ಚಂದಯ್ಯನನ್ನೂ ಒಬ್ಬ ಆದರ್ಶ ಶರಣನನ್ನಾಗಿ ಕಂಡಿದ್ದಾನೆ. ಪ್ರತಿಯೊಬ್ಬರಿಗೂ ತಮ್ಮ ಕಾಯಕದ ಅರಿವನ್ನು ತಿಳಿಯಗೊಳಿಸುವುದಕ್ಕೆ ನುಲಿಯ ಚಂದಯ್ಯನು ಚಿತ್ರಪಟವನ್ನು ಗಣಪತಿರಾಯನು ತನ್ನ ಅರಮನೆಯಲ್ಲಿರುವ ಚಿತ್ರಶಾಲೆಯ ಗೋಡೆಗಳ ಮೇಲೆ ಈತನ ಚಿತ್ರಪಟವನ್ನು ಹಾಕಿದ್ದಾನೆ.

ಮಡಿವಾಳ ಮಾಚಯ್ಯ

ಗಣಪತಿರಾಯನ ಆಸ್ಥಾನದಲ್ಲಿ ಶರಣರ ಚಿತ್ರಪಟಗಳಿರುವುದರಲ್ಲಿ ಈತನದೂ ಒಂದಾಗಿದೆ. ಈ ಮಡಿವಾಳ ಮಾಚಯ್ಯ ವಿಜಾಪುರ ಜಿಲ್ಲೆಯ ಹಿಪ್ಪರಗಿಯ ಕಲ್ಲಿನಾಥ ದೇವರ ಭಕ್ತನಾಗಿದ್ದ ಬಸವಣ್ಣನವರ ಕೀರ್ತಿ ಎಲ್ಲ ಕಡೆಗೂ ಹಬ್ಬಿ ಮಾಚಯ್ಯನ ಗಮನಕ್ಕೂ ಬಂದಿತು. ಆಗ ಕಲ್ಯಾಣಕ್ಕೆ ಹೋಗಿ ತನ್ನ ಕಾಯಕ ಮುಂದುವರೆಸಬೇಕೆಂಬ ಇಚ್ಛೆಯುಂಟಾಗಿ, ಕಲ್ಯಾಣಕ್ಕೆ ಹೋಗಿ ಬಸವಣ್ಣನವರು ಒಪ್ಪಲು ಅಲ್ಲಿಯೇ ಇದ್ದು ವಸ್ತ್ರಗಳನ್ನು ಮಡಿ ಮಾಡಿ, ಉಳಿದ ಸಮಯವನ್ನು ಶಿವನ ಧ್ಯಾನದಲ್ಲಿ ಕಳೆಯುತ್ತಿದ್ದ. ನೆಮ್ಮದಿಯ ಬಾಳಿದ್ದರೂ ಮನದಲ್ಲಿ ಏನೋ ಅತೃಪ್ತಿಯಿತ್ತು. ಜೀವನದಲ್ಲಿ ಏನನ್ನಾದರೂ ಸಾಧಿಸಬೇಕೆಂಬ ಬಯಕೆಯಿತ್ತು. ಆದ್ದರಿಂದಲೇ ಕಲ್ಯಾಣದ ಪ್ರವೇಶ ಪಡೆದನು.

ಮಾಚಯ್ಯನ ಪ್ರತಿಭೆ, ಕೀರ್ತಿಯನ್ನು ಕಂಡು ಅನೇಕ ಜನರು ಆತನ ಬಗ್ಗೆ ಮತ್ಸರಗೊಂಡು ಬಿಜ್ಜಳ ರಾಜನಿಂದ ಏನಾದರೂ ಅವಮಾನ ಮಾಡಬೇಕೆಂದು ಯೋಚಿಸುತ್ತಾರೆ. ಇದರಿಂದ ಒಬ್ಬ ಕುಹುಕಿ ದಾರಿಯಲ್ಲಿ ಮಾಚಯ್ಯನನ್ನು ಕೆಣಕಿ ಬಿಜ್ಜಳನವರೆಗೆ ದೂರು ಒಯ್ಯುತ್ತಾನೆ. ಬಿಜ್ಜಳನು ಬಟ್ಟೆ ಒಗೆಯುವ ಅಗಸನಿಗೆ ಇಷ್ಟು ಅಹಂಕಾರವೇ ಎಂದು ಆತನನ್ನು ಆನೆಯಿಂದ ತುಳಸಿ ಕೊಲ್ಲಲು ಜಟ್ಟಿಗಳನ್ನು ಪಟ್ಟದಾನೆಯನ್ನು ಕಳುಹಿಸುತ್ತಾನೆ. ಆದರೆ ಮಾಚಯ್ಯನ ದಿವ್ಯಶಕ್ತಿಗೆ ಆನೆ ಮತ್ತು ಜಟ್ಟಿಗಳು ಆಹುತಿಯಾಗುತ್ತಾರೆ. ಮಾಚಯ್ಯನ

ಮಹಿಮೆಯನ್ನು ತಿಳಿದ ಬಿಜ್ಜಳ ಓಡುತ್ತಾ ಬಂದು ಕ್ಷಮೆ ಕೇಳಲು, ಸತ್ತ ಆನೆ ಮತ್ತು ಜಟ್ಟಿಗಳನ್ನು ಬದುಕಿಸುತ್ತಾನೆ.

ದೈವೀ ಸ್ವರೂಪದ ಕಾಯಕನಿಷ್ಠೆಯನ್ನು ಹೊಂದಿದ ಮಡಿವಾಳ ಮಾಚಯ್ಯನ ಜೀವನದ ಆದರ್ಶಗಳು ಓರಂಗಲ್ಲಿನ ಅರಸ ಗಣಪತಿರಾಯನಿಗೆ ಪ್ರಭಾವ ಬೀರಿವೆ. ಆದ್ದರಿಂದ 'ಗುಂಡಬ್ರಹ್ಮಯ್ಯ ಸಾಹಿತ್ಯ'ದಲ್ಲಿ ಬರುವ ಗಣಪತಿರಾಯನ ಅರಮನೆಯ ಚಿತ್ರಶಾಲೆಯಲ್ಲಿ ಈ ಮಡಿವಾಳ ಮಾಚಯ್ಯನ ಚಿತ್ರಪಟವಿದೆ. ಈ ಹಿನ್ನಲೆಯಲ್ಲಿ ಮಧ್ಯಕಾಲೀನ ಸಾಹಿತ್ಯ ಸಂದರ್ಭದ ಈ ಕೃತಿಗೆ ಪ್ರಮುಖವಾದ ಸ್ಥಾನವಿದೆ. ಕಲ್ಯಾಣ ಕ್ರಾಂತಿಯ ನಂತರ ಶರಣರ ಬಗ್ಗೆ ಸ್ಪಷ್ಟ ಚಿತ್ರಣವನ್ನು ತಿಳಿಯಲು, ಈ ಕೃತಿಯು ದಾಖಲು ಸಾಹಿತ್ಯವಾಗಿದೆ. ವಿಶಿಷ್ಠ ಶೈಲಿಯಲ್ಲಿ ನಿರೂಪಣೆ ಹೊಂದಿರುವುದರಿಂದ ಮತ್ತು ಶರಣರ ಕುರಿತು ವಿವರಿಸುವುದರಿಂದ ಐತಿಹಾಸಿಕ ಅಂಶಗಳಿಗೆ ಮಹತ್ವದ ವಿಷಯಾನುಕ್ರಮಣಿಕೆಯನ್ನು ಒದಗಿಸಿದಂತಾಗಿದೆ. ಮಧ್ಯಕಾಲೀನ ಸಾಹಿತ್ತಿಕ, ಸಾಂಸ್ಕೃತಿಕ, ಐತಿಹಾಸಿಕ ವಿಷಯಗಳು ಇದರಲ್ಲಿ ಅಭಿವ್ಯಕ್ತಗೊಂಡಿದೆ. ಇದರಿಂದ ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಅವಕಾಶ ಒದಗಿಸಿದೆ. ಈ ಕೃತಿಯಲ್ಲಿ ಮಾಚಿದೇವನ ಚಿತ್ರಪಟದ ಬಗ್ಗೆ ಮತ್ತು ಆತನ ವ್ರತನೇಮದ ಬಗ್ಗೆ ಈ ಕೆಳಗಿನಂತೆ ಪ್ರಸ್ತಾಪ ಮಾಡಲಾಗಿದೆ.

"ಕಡುಗಲಿ ಬಿಜ್ಜಳನ ಉಡಿಯ ಕೊಳೆಯಾದಡೆ
ನಡೆದವು ಕುದುರೆ ಗಜ ಮುಂದೆ|| ಸೀಳಿದ
ಮಡಿವಾಳಯ್ಯಗಳ ಪಟವಿದೆ"[32]

ಹೀಗೆ ಕವಿಚನ್ನನು ಗುಂಡಬ್ರಹ್ಮಯ್ಯಗಳ ತ್ರಿಪದಿಯಲ್ಲಿ ಸಮರ್ಥವಾಗಿ ಚಿಕ್ಕದಾಗಿರುವಂತಹ ತ್ರಿಪದಿಯ ಸಾಲಿನಲ್ಲಿ ಮಡಿವಾಳ ಮಾಚಿದೇವನ ಬಗ್ಗೆ ಪ್ರಸ್ತಾಪಿಸಲಾಗಿದೆ. ಕೇವಲ ಮೂರೇ ಪಾದಗಳಲ್ಲಿ ಅವರ ಜೀವನದ ಸಿದ್ಧಾಂತಗಳನ್ನು ಮತ್ತು ಅವರ ಬದುಕಿದ ರೀತಿಯನ್ನು ಕಟ್ಟಿಕೊಡುವಂತಹ ಕಾರ್ಯವನ್ನು ನಿರ್ವಹಿಸಿದ್ದಾನೆ. ಓರಂಗಲ್ಲಿನ ಆಸ್ಥಾನದ ಅರಮನೆಯ ಚಿತ್ರಶಾಲೆಯ ಚಿತ್ರವನ್ನು ವರ್ಣಿಸುವ ರೀತಿ ಅಮೋಘವಾಗಿದೆ. ಈ ಚಿತ್ರಗಳಿಂದ ಚರಿತ್ರೆಯನ್ನು ಕಟ್ಟಿಕೊಡುವತ್ತ ಗಮನಹರಿಸಿರುವುದು ಕಾಣುತ್ತದೆ. ಆದ್ದರಿಂದ ಓರಂಗಲ್ಲಿನ ಅರಮನೆಯ ರಾಜರುಗಳ ಬಗ್ಗೆ ತಿಳಿಯಲು ಮೂಲ ದಾಖಲೆ ಎಂದು ಹೇಳಿದರೆ ಅತಿಶಯೋಕ್ತಿಯಾಗದು. ಏಕೆಂದರೆ ಒಂದು ಶಿಸ್ತಿನಿಂದ ಇನ್ನೊಂದು ಶಿಸ್ತನ್ನು ಕಟ್ಟುವುದು ಸಾಮಾನ್ಯವಾದ ಕೆಲಸವಲ್ಲ. ಈ ನೆಲೆಯಲ್ಲಿ ಈ ಕೃತಿ ಪ್ರಮುಖ ಪಾತ್ರವಹಿಸುತ್ತದೆ. ಗುಂಡ ಬ್ರಹ್ಮಯ್ಯಗಳ ಸಾಹಿತ್ಯ ಒಂದು ಕೃತಿಯು ಒಂದು ಧರ್ಮವನ್ನು ಕಟ್ಟಿಕೊಡುತ್ತದೆ ಎಂದರೆ ಸಾಮಾನ್ಯ ಕೆಲಸವಲ್ಲ. ಅದು ಇಲ್ಲಿ ನೆರವೇರಿದೆ. ಓರಂಗಲ್ಲಿನ ಅರಸುಮನೆತನದ ಸಾಂಸ್ಕೃತಿಕ ಬದುಕನ್ನು ಕಟ್ಟುವ ಜೊತೆಗೆ ಶರಣರ ಹೆಜ್ಜೆಗಳನ್ನು ಗುರುತಿಸುತ್ತದೆ.

ಅಮ್ಮವ್ವೆ

ಅಮ್ಮವ್ವೆಯು ಶಿವಶರಣೆಯರಲ್ಲಿ ಒಬ್ಬಳಾಗಿದ್ದಾಳೆ. ಇವಳು ಬಿಜ್ಜಾವರವೆಂಬ ಊರಿನಲ್ಲಿ ಶಂಕರ

ಮತ್ತು ಭಾಗೀರಥಿ ಎಂಬ ದಂಪತಿಗಳಿಗೆ ಪ್ರೀತಿಯ ಮಗಳಾಗಿ ಜನಿಸಿದಳು. ಈಕೆಗೆ ಸದಾ ಶಿವನ ಧ್ಯಾನದಲ್ಲಿರುವುದೇ ಪರಮಸಂತೋಷವಾಗಿತ್ತು. ದೇವಾಲಯಕ್ಕೆ ಹೋಗಿ ಶಿವನನ್ನು ಕಂಡು ಹಾಡುತ್ತ, ಕೊಂಡಾಡುತ್ತ ಶಿವನೇ ತನಗೆ ಮಗನಾಗಿ ಹುಟ್ಟಬೇಕೆಂದು ಆಸೆಪಡುತ್ತಲಿದ್ದಳು. ಪ್ರಾಯಕ್ಕೆ ಬರಲು ತಂದೆ ತಾಯಿಯರು ತಮ್ಮ ಸೋದರಳಿಯನಿಗೆ ಅಮ್ಮವ್ವೆಯನ್ನು ಮದುವೆ ಮಾಡಿ ಕೊಟ್ಟರು. ನಂತರ ಕೆಲವು ದಿವಸಗಳಾದ ಮೇಲೆ ಆಕೆಯ ಪತಿ ತೀರಿಕೊಂಡು ವಿಧವೆಯಾದಳು. ಶಿವನನ್ನು ತನ್ನ ಮಗನನ್ನಾಗಿ ಪಡೆಯಬೇಕೆಂಬ ಆಸೆ ಆಸೆಯಾಗಿಯೇ ಉಳಿಯಿತು. ವಿಧವೆಯಾದ ಮೇಲೆಯೂ ಉದರ ಪೋಷಣೆಗೆ ಅಂಜದೆ ಕದಿರ ಕಾಯಕ ಮಾಡಿ ಹಂಜಿಯನ್ನು ನೇಯ್ದು ಸ್ವಾವಲಂಬನ ಜೀವನ ನಡೆಸುತ್ತಿದ್ದಳು.

ಹಂಜಿಯನ್ನು ನೇಯುತ್ತ, ಪಂಪಾನಾಥನನ್ನು ಭಜಿಸುತ್ತ, ಶರಣರನ್ನು ನೆನೆಯುತ್ತ ಜೀವನ ಸಾಗಿಸುತ್ತಿದ್ದಳು. ಈ ರೀತಿ ಜೀವನ ಕಳೆಯುತ್ತಿರುವಾಗ ಒಂದು ದಿನ ದೇಶಾಂತ್ರಿ ಜಂಗಮನೊಬ್ಬ ಈಕೆಯ ಮನೆಗೆ ಬಂದ. ಅಮ್ಮವ್ವೆ ಜಂಗಮನನ್ನು ಮನೆಯೊಳಗೆ ಕರೆದು ಗದ್ದುಗೆ ಹಾಕಿ ಕುಳ್ಳಿರಿಸಿ 'ಯಾವ ಕಡೆಯಿಂದ ಬಂದಿರಿ, ನಿಮ್ಮನ್ನು ಕಂಡು ನಾನು ಧನ್ಯಳಾದೆನು' ಎಂದು ಜಂಗಮನನ್ನು ವಿಚಾರಿಸಿದಳು. ಅದಕ್ಕೆ ಜಂಗಮನು 'ನಾವು ಭಾಳಲೋಚನನ ಭಕ್ತರು, ನಾವು ದೇಶಾಂತ್ರಿಗಳು ಎಂದು ಹೇಳಲು ಅಮ್ಮವ್ವೆ ಆ ಶಿವನು ಹೇಗೆ ಇರುವನು, ಎಲ್ಲಿರುವನು ಎಂಬುದನ್ನು ನನಗೆ ಹೇಳು ಎಂದು ಕೇಳಿದಳು. ಆಗ ಜಂಗಮನು, 'ಶಿವನು ಜಡೆಯಲ್ಲಿ ಚಂದ್ರ, ಸೂರ್ಯ, ಗಂಗೆಯರನ್ನು ಧರಿಸಿರುವನು. ಕಿಡಿಗಣ್ಣು ಕಿವಿಯಲ್ಲಿ ಕುಂಡಲ, ಕೊರಳೊಳಗೆ ಸರ್ಪ ಧರಿಸಿರುವನು. ಕೈಯಲ್ಲಿ ಬ್ರಹ್ಮನ ತಲೆ ಹಿಡಿದಿರುವನು. ಆನೆಯ ಚರ್ಮಧರಿಸಿ ಸುಡುಗಾಡಿನಲ್ಲಿ ವಾಸಿಸುವನು. ಆತನಿಗೆ ತಂದೆತಾಯಿಗಳಿಲ್ಲ. ಆದರೆ ಆತನೆ ಜಗತ್ತಿಗೆ ಒಡೆಯನಾಗಿದ್ದಾನೆ. ಹಸಿದರೆ ಆತನಿಗೆ ಊಟಕ್ಕಿಕ್ಕುವವರು ಯಾರೂ ಇಲ್ಲ. ಅಲ್ಲದೆ ಬಸವಳಿದು ಬಂದರೆ ಬಳಲಿಕೆಯನ್ನು ಕೇಳುವವರಿಲ್ಲ'ವೆಂದು ಶಿವನ ವರ್ಣನೆ ಮಾಡುವನು.

ಶಿವನು ಪರದೇಶಿ ಎಂದು ತಿಳಿದು ಅಮ್ಮವ್ವೆ "ನಾಂ ಮಕ್ಕಳಿಲ್ಲದ ಬಂಜೆ, ನಿನಗಾರುವಿಲ್ಲ, ಅಡವಿಯಲ್ಲಿ, ಬೆಟ್ಟದಲ್ಲಿ ಏಕೆ ತಿರುಗುವೆ? ತಿರಿದು ಏಕೆ ತಿನ್ನುವೆ? ಹಾಲೆರೆದು ನಿನ್ನನ್ನು ಸಾಕುವೆ, ಪರಿಪರಿಯಲ್ಲಿ ನಿನ್ನ ಉಪಚಾರವನ್ನು ಮಾಡುವೆ"[೨೮] ಎಂದು ಶಿವನನ್ನು ತನ್ನ ತಾಯ್ತನದ ಹಂಬಲವನ್ನು ವ್ಯಕ್ತಪಡಿಸುವಳು. ಅಮ್ಮವ್ವೆಯ ಪ್ರಾರ್ಥನೆಗೆ ಕರಗಿದ ಶಿವನು ಇವಳ ಮಗನಾಗಿ ಸುಖವನ್ನ ಅನುಭವಿಸಿ ಬರುವೆನೆಂದು ಗಿರಿಜೆಗೆ ಹೇಳುತ್ತಾನೆ. ಆದರೆ ವಿಧವೆಯಾದ ಇವಳ ಹೊಟ್ಟೆಯಲ್ಲಿ ಜನಿಸಿದರೆ ಲೋಕದ ನಿಂದನೆಯನ್ನು ಎದುರಿಸಬೇಕಾಗುತ್ತದೆಂದು ಅಡವಿಯಲ್ಲಿ ಒಂದು ತೊಟ್ಟಿಲಲ್ಲಿ ಶಿಶುವಾಗಿ ಮಲಗುತ್ತಾನೆ. ಅಮ್ಮವ್ವೆ ಮನೆಯಲ್ಲಿ ಹಂಜಿಯನ್ನು ಮಾಡುತ್ತಿರುವಾಗ ನಾನು ಶಿಶುವಾಗಿ ಬಂದಿರುವೆ, ಬೆರಣಿ ತರುವ ನೆಪದಲ್ಲಿ ಕಾಡಿಗೆ ಬಾ ಎಂದು ಶಿವನು ಕರೆದಂತಾಗುತ್ತದೆ. ಕಾಡಿಗೆ ಬೆರಣಿ ತರುವ ನೆಪದಲ್ಲಿ ಅಮ್ಮವ್ವೆ ಹೋಗಿ ಶಿಶುವನ್ನು ನೋಡಿ ಸಂತೋಷಪಟ್ಟು ಮನೆಗೆ ತಂದು ನಾಗನಾಥನೆಂದು ಹೆಸರಿಟ್ಟು ಹಾಡಿ ಮಲಗಿಸುತ್ತಾಳೆ.

ಒಂದು ದಿನ ಇದ್ದಕ್ಕಿದ್ದಂತೆ ಶಿಶುವಿಗೆ ಸೆಟೆಬೇನೆ ಬಂದು ಕಣ್ಣುಗಡ್ಡೆಗಳು ಮೇಲಕ್ಕೆ ಹೋಗಿ ಕೈಕಾಲುಗಳು ನಡುಗತೊಡಗಿದವು. ಶಿಶುವಿನ ಸ್ಥಿತಿಯನ್ನು ನೋಡಿ ಅಮ್ಮವ್ವೆ 'ನೀನೆನಗೆ ಮಗನಾಗಿ ನೋವನಿಕ್ಕಿದೆಯಲ್ಲ'ವೆಂದು ಮಗುವಿನ ನೋವನ್ನು ಕಂಡು ಜೀವನದ ಮೇಲಿದ್ದ ವ್ಯಾಮೋಹ ಕಳೆದುಕೊಂಡಳು. ನಿನ್ನ ನೋವನ್ನು ನಾನು ನೋಡಲಾರೆಯೆಂದು ದುಃಖಿಸತೊಡಗಿದಳು. ಕೊನೆಗೆ ನೀನು ಸಾಯುವುದನ್ನು ನಾನು ನೋಡಲಾರೆನೆಂದು ಈಳಿಗೆಯಿಂದ ತನ್ನ ಕೊರಳನ್ನು ಕತ್ತರಿಸಿಕೊಳ್ಳುತ್ತಿರುವಾಗ ಶಿವನು ಗಿರಿಜೆಯೊಡನೆ ದರ್ಶನವೀಯುತ್ತಾನೆ.

ಈ ರೀತಿ ಅಮ್ಮವ್ವೆಯು ಮಗುವಿನ ಮೂಲಕ ಶಿವಪಾರಮ್ಯ ಮೆರೆವಳು. ಕಡಿಮೆ ಸಂಖ್ಯೆಯ ಶರಣೆಯರಲ್ಲಿ ಇವಳು ವಿಶಿಷ್ಠವಾದ ಗುಣಗಳಿಂದ ಎಲ್ಲರ ಗಮನ ಸೆಳೆಯುವಂತವಳಾಗಿದ್ದಾಳೆ. ಇದರಿಂದ ಗಣಪತಿರಾಯನು ಇವಳ ಗುಣ-ನಡತೆಗಳಿಗೆ ಪ್ರಭಾವಿತನಾಗಿರಬಹುದು. ಆದ್ದರಿಂದ ಅಮ್ಮವ್ವೆಯ ಚಿತ್ರಪಟವನ್ನು ಅರಮನೆಯ ಗೋಡೆಯಲ್ಲಿ ಹಾಕಲಾಗಿದೆ. 'ಗುಂಡಬ್ರಹ್ಮಯ್ಯಗಳ ಸಾಹಿತ್ಯ' ಕೃತಿಯಲ್ಲಿ ಈ ಕೆಳಗಿನಂತೆ ಪದ್ಯವನ್ನು ನೋಡಬಹುದು.

"ಸತ್ಯಕ್ಕ ಮುಕ್ತಾಯಿ ಒಪ್ಪುವ ಚಂಗಳದೇವಿ
ಮತ್ತೆ ಮಂಗಾಯಕ್ಕ ಅಮರವ್ವೆ|| ಅಮ್ಮವ್ವೆ
ಭಕ್ತರಾದವರ ಪಟವಿದೆ"[34]

ಗಣಪತಿರಾಯನ ಅರಮನೆಯಲ್ಲಿ ಸತ್ಯಕ್ಕ, ಮುಕ್ತಾಯಿ, ಚಂಗಳದೇವಿ, ಮಂಗಾಯಕ್ಕ, ಅಮರವ್ವೆ ಮತ್ತು ಅಮ್ಮವ್ವೆಯ ಚಿತ್ರಪಟಗಳಿವೆ. ಶರಣರ ಸಿದ್ಧಾಂತಗಳನ್ನು ಮಾತ್ರವಲ್ಲ, ಶರಣೆಯರ ತತ್ವಗಳನ್ನೂ ಓರಂಗಲ್ಲಿನ ಅರಸರು ಸ್ವೀಕರಿಸಿದ್ದರು ಎಂಬುದು ಇವರ ಚಿತ್ರಪಟಗಳಿಂದ ತಿಳಿದು ಬರುತ್ತದೆ. ಹೀಗೆ 'ಗುಂಡಬ್ರಹ್ಮಯ್ಯಗಳ ಸಾಹಿತ್ಯ' ಕಾವ್ಯದಲ್ಲಿ ಐತಿಹಾಸಿಕ ಪ್ರಜ್ಞೆಯಿರುವುದರಿಂದ ಈ ಕೃತಿಯ ಮೌಲ್ಯ ಹೆಚ್ಚಿದೆ. ಇದರಿಂದ ಚರಿತ್ರೆಯನ್ನು ತಿಳಿಯಲು ಸಹಕಾರಿಯಾಗಿರುವುದರಿಂದ ಕೃತಿಯ ಮಹತ್ವ ಹೆಚ್ಚಿದೆ.

ಹೇರೂರ ಹೆಂಗಸು

ಹೇರೂರ ಹೆಂಗಸಿಗೆ ಇನ್ನೊಂದು ಹೆಸರು ತಿಲಕವ್ವ. ಇವಳು ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳು ತಾಲೂಕಿನ ಹೇರೂರೆಂಬ ಗ್ರಾಮದಲ್ಲಿ ಒಂದು ಜೈನ ಕುಟುಂಬದಲ್ಲಿ ಜನಿಸಿದಳು. ತಿಲಕವ್ವೆ ಬುದ್ಧಿ ಬರುತ್ತಲೇ ವೀರಶೈವ ಧರ್ಮಕ್ಕೆ ಮನಸೋತು ಈಶ್ವರನ ಗುಡಿಗೆ ಹೋಗಿ ಬರಲು ಪ್ರಾರಂಭಿಸಿದಳು. ಶಿವಭಕ್ತಿಯಲ್ಲಿ ತಂದೆಯನ್ನು ಮೀರಿಸುತಿದ್ದಳು. ಮಗಳ ಯೌವ್ವನದ ಸೌಂದರ್ಯವನ್ನು ಕಂಡು ಬೆರಗಾಗಿ 'ಈ ಮಗಳು ಗಂಡುಮಗನಾಗಿದ್ದರೆ ನನ್ನ ಭಾಗ್ಯಕ್ಕೆ ಎಣಿಕೆಯೇ ಇರುತ್ತಿರಲಿಲ್ಲ'ವೆಂದು ಅಂದುಕೊಳ್ಳುತ್ತಿದ್ದಳು. ಶಿವಭಕ್ತನ ತಂಗಿಯನ್ನು ಜೈನಮನೆತನಕ್ಕೆ ಕೊಟ್ಟಿದ್ದರು. ತಂಗಿಗೆ ವಯಸ್ಸಿಗೆ ಬಂದ ಮಗನೂ ಇದ್ದನು. ಹೇರೂರ ಹೆಂಗಸಿನ ಅಂದವನ್ನು ನೋಡಿ ಹೇಗಾದರೂ ತನ್ನ ಮಗನಿಗೆ ತಂದುಕೊಳ್ಳುವ ಆಸೆಯಾಗುತ್ತದೆ. ಆಗ ಆಕೆ ಅಣ್ಣನೂರಿಗೆ ಬಂದು ಹೆಂಗೂಸನ್ನು ತನ್ನ ಮಗನಿಗೆ ಕೊಟ್ಟು ಮದುವೆ ಮಾಡಬೇಕೆಂದು ಒತ್ತಾಯಪಡಿಸಿದಳು. ಮದುವೆ ನಿಶ್ಚಯವಾಯಿತು.

ಈ ವಿಷಯವು ಹೆಂಗೂಸನ್ನು ಅತಿಶಯವಾದ ಚಿಂತೆಗೆ ಈಡುಮಾಡಿತು. ನಿತ್ಯ ನೇಮದಂತೆ ಹರನಾಲಯಕ್ಕೆ ಹೋಗಿ ಪೂಜಿಸುತ್ತಿದ್ದಳು. ಕೊನೆಗೆ ಆ ದಿನವು ಬಂದೇಬಿಟ್ಟಿತು. ಮದುವೆಯ ಹಂದರವಾಯಿತು. ನೆಂಟರೆಲ್ಲರೂ ಆಗಮಿಸಿದರು, ಮದುವಣಗಿತ್ತಿಯನ್ನು ಬಹು ಸಡಗರದಿಂದ ಸಿಂಗರಿಸಿದರು. ಆಗ ಈಕೆಗೆ ಕಡುಕೊರಗುಟಾಗಿ ದೇವರ ಮೇಲೆ ಮುನಿಸು ಮಾಡಿಕೊಂಡಳು. ನೋವು, ಬೇಸರ, ಬೆದರಿಕೆಗಳು ಆಕೆಯ ಅಂತರಂಗದಲ್ಲಿ ಆವರಿಸಿಕೊಂಡಿದ್ದವು. ಕೊನೆಗೂ ಮದುವೆ ಸಮಾರಂಭ ನಡೆದು ಹೋಯಿತು. ಊಟದ ವೇಳೆಗೆ ಶಿವದರ್ಶನವಿಲ್ಲದೆ ಊಟಮಾಡೆನೆಂದು ಹೇಳಿ ಶಿವಮಂದಿರಕೆ ಹೋಗಿ ಅವನಲ್ಲಿ ತನ್ನ ಗತಿ ಹೀಗಾಯಿತು ಎಂದು ಕೊರಗಿದಳು. "ವೈಜಕ್ಕವ್ವೆ, ಬಾಣಸುರ, ಬಸವಣ್ಣ, ಮಾದರ ಚನ್ನಯ್ಯ, ನಿಂಬಿಯಕ್ಕ ಕೋಳೂರು ಕೊಡಗೂಸು ಇವರೆಲ್ಲರಿಗೂ ಕರುಣಿಸಿದಿರಿ, ನನ್ನಲ್ಲಿ ಏನು ತಪ್ಪು ಕಂಡಿರಿ ದೇವ"[೩೦]ಎಂದು ಪರಿ ಪರಿಯಾಗಿ ಬೇಡಿದಳು . ಐದು ದಿನದೊಳಗೆ ಶಿವನೊಳಗೆ ಒಂದಾಗಿಬಿಡುವನು ಎಂದು ಭಾಷೆ ಕೊಟ್ಟು, ಮನೆಗೆ ಹಿಂದಿರುಗವಳು.

ದಿಬ್ಬಣ ನಾಲ್ಕನೆಯ ದಿನ ನೂತನ ದಂಪತಿಗಳನ್ನು ಒಡಗೊಂಡು ಗಂಡಿನ ಊರಿಗೆ ಹೊರಟಿತು. ಬಂಡಿಯನ್ನೇರಿ ಕುಳಿತುಕೊಂಡಳು. ಸ್ವಲ್ಪ ದೂರಕ್ರಮಿಸಿದ ನಂತರ ಊಟ ಮಾಡಲು ಕೊಲ್ಲಾರಿ ಬಂಡಿಯಿಂದ ಇಳಿದರು. ಹೇರೂರು ಹೆಂಗಸು ಶಿವದರ್ಶನವಿಲ್ಲದೆ ಏನನ್ನೂ ತಿನ್ನವಂತಿರಲಿಲ್ಲ. ಆದ್ದರಿಂದ ಸಂಗಡಿಗರು ಶಿವಾಲಯವನ್ನು ಹುಡುಕಿ ಅಲ್ಲಿಗೆ ಹೆಂಗಸನ್ನು ಕಳುಹಿದರು. ಆ ಸಮಯಕ್ಕೆ ಸರಿಯಾಗಿ ತನ್ನ ಪ್ರತಿಜ್ಞಾವಚನದ ಅವಧಿಯೂ ಮುಗಿಯುತ್ತ ಬಂದಿತು. ಶಿವಲಿಂಗವನ್ನು ಕಂಡಳು ಆಗ ದುಗುಡದ ಕಟ್ಟೆಯೊಡೆದು ಕಣ್ಣೀರ ಕೋಡಿ ಹರಿಯಿತು. ಓಡಿಹೋಗಿ ಶಿವಲಿಂಗವನ್ನು ಅಪ್ಪಿಕೊಂಡಳು. ಸ್ತ್ರೀರೂಪ ಹೋಯಿತು ಪುರುಷರೂಪ ಬಂದಿತು. ಇದರಿಂದ ಹೇರೂರು ಹೆಣ್ಣು ತುಂಬ ಸಂತೋಷಗೊಂಡಳು. ಈ ವೇಳೆಗೆ ಕಾದು ಸುಸ್ತಾಗಿ ಶಿವಲಿಂಗದ ಹತ್ತಿರ ಬಂದರು. ಆಗ ಹೇರೂರು ಹೆಂಗಸು ಗಂಡಿನ ರೂಪತಾಳಿ ಕೆಳಗಿನಂತೆ ಹೇಳುತ್ತಾಳೆ.

"ಆರನಜಿಸುವಿರೆಲೆಲೆ ಭಕ್ತರೇ ಬನ್ನಿರೇ
ಮಾರಾರಿಯಣುಗರೆನ್ನೊಡೆಯದಿರೆ ಬನ್ನಿರೇ"[೩೧]

ಈ ಮಾತನ್ನು ಕೇಳಿದ ಅವರು 'ಮಗಳ ದನಿಯನ್ನೆ ಹೋಲುತ್ತದೆ ಆದರೆ ಇದು ಗಂಡುಕೂಸೆಂದುಕೊಳ್ಳವರು. ಇವರು ಬೆಪ್ಪರಂತೆ ನಿಂತಿರುವುದನ್ನು ಕಂಡು 'ಬನ್ನಿರೇ ನಿಮ್ಮ ಮಗಳಾನು' ಶಿವನನ್ನು ಒಲಿದು ಗಂಡುಮಗವಾಗಿರುವೆಂದು ಆ ಮಗು ಹೇಳುತ್ತದೆ. ಅವರು ನಂಬದಿದ್ದ ಸಮಯದಲ್ಲಿ ಮೈಮೇಲಿನ ಮಚ್ಚೆಗಳನ್ನು ಆ ಮಗು ತೋರಿಸಿತು. ಆಗ ಹೇರೂರಿನ ಶಿವಭಕ್ತರೆಲ್ಲರೂ ಹೇರೂರು ಹೆಂಗೂಸಿನ (ಮಗುವಿನ) ಶಿವಭಕ್ತಿಯ ಮಹಿಮೆಯನ್ನು ಕೊಂಡಾಡಿದರು. ಎಲ್ಲಾ ಜನರು ಇವಳ ಭಕ್ತಿಗೆ ಶರಣಾಗಿ ಶಿವಸಂದೇಶ ಬಿತ್ತತೊಡಗಿದರು.

ಈಕೆಯ ಭಕ್ತಿ ಮತ್ತು ಶಕ್ತಿಗಳನ್ನೆರಡೂ ಮೆಚ್ಚುವಂತಹವುಗಳಾಗಿವೆ. ಶಿವನನ್ನೆ ತನ್ನ ಜೀವನವನ್ನಾಗಿ ಮಾಡಿಕೊಂಡಿದ್ದಾಳೆ. ಆದ್ದರಿಂದ ಜೈನನೆಂಬ ಉದ್ದೇಶಕ್ಕೆ ಆ ಮದುವೆಯು ಅವಳಿಗೆ ಹಿಂಸೆಯೆನಿಸಿದೆ. ಅವಕ್ಕಾಗಿ ಕೊನೆಗೂ ಗಂಡಸಿನ ರೂಪ ಪಡೆಯುವುದರ ಮೂಲಕ ಶಿವಭಕ್ತಿಯನ್ನು ಶಾಶ್ವತವಾಗಿಸಿಕೊಂಡಿದ್ದಾಳೆ. ಆದ್ದರಿಂದ ಇವಳ ಭಕ್ತಿ ಮತ್ತು ಶಕ್ತಿಯನ್ನು ಮೆಚ್ಚುವಂತಹದ್ದಾಗಿದೆ. ಇದರಿಂದ ಗಣಪತಿರಾಯನಿಗೂ ಇವಳ ಜೀವನದ ನಡತೆಗಳು ಪರಿಣಾಮ ಬೀರಿರಬಹುದು. ಆದ್ದರಿಂದ ಚಿತ್ರಶಾಲೆಯಲ್ಲಿ ಇವಳ ಚಿತ್ರಪಟ ಭಕ್ತಿಯ ಪಾರಮ್ಯವನ್ನು ಮೆರೆದರು ಎಂಬುದನ್ನು 'ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ವಿಶ್ಲೇಷಿಸಲಾಗಿದೆ. ಈ ದೃಷ್ಠಿಯಿಂದ ಕಾವ್ಯಕ್ಕೆ ಮೌಲ್ಯ ಸಿದ್ದಿಸಿದೆ. ಓರಂಗಲ್ಲಿನ ಕಾಕತೀಯ ಅರಸುಮನೆತನದಲ್ಲಿ ಗಣಪತಿರಾಯ ಶೈವಧರ್ಮದಿಂದ ಪ್ರಭಾವಿತನಾಗಿದ್ದು, ಶಿವನಿಷ್ಠೆ ಅನುಸರಿಸುತ್ತಿರಬೇಕು ಆದ್ದರಿಂದ ಶರಣರ ಚಿತ್ರಪಟಗಳು ನಮ್ಮ ಕಣಿಗೆ ಬೀಳುತ್ತವೆ. ಶಿವನಿಷ್ಠೆಯಿಂದ ಶೈವಧರ್ಮದ ಪುನರುತ್ಥಾನದಡೆಗೆ ಆತನ ಮನಸು ಹರಿದಿರಬೇಕು. ಈತನ ಪ್ರೋತ್ಸಾಹದಿಂದಾಗಿ ಕರ್ನಾಟಕದಿಂದ ಆಂಧ್ರಕ್ಕೆ ವಲಸೆ ಹೋದ ಶರಣರು ಆಶ್ರಯ ಪಡೆದರು ಎಂದರೆ ತಪ್ಪಾಗಲಾರದು. ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ಬರುವ ಹೇರೂರು ಹೆಣ್ಣು ಅಥವಾ ತಿಲಕವ್ವಯ ಬಗ್ಗೆ ಕೆಳಗಿನಂತೆ ವಿವರಿಸಲಾಗಿದೆ.

"ಗಂಡನು ಭವಿಯೆಂದು ನಿಮ್ಮ ಪಾದವ ಬಿಡದೆ
ಗಂಡ ಹೆಂಡರು ಮುಖ್ಯಮಾಗೆ|| ಒಂದಾಗಿ
ಲಿಂಗ ಕೂಡಿಸಿದ ಹೇರೂರು ಹೆಣ್ಣು ಇವಳೀಗ" [31]

ಈ ಮೇಲಿನ ಪದ್ಯದಂತೆ ಬಹು ವಿಸ್ತಾರವಾಗಿ ಹೇಳಬೇಕಾದ್ದನ್ನು ಬಹಳ ಸರಳವಾಗಿ ತ್ರಿಪದಿಯಲ್ಲಿ ಕವಿಚನ್ನನು ಕಟ್ಟಿಕೊಟ್ಟಿರುವುದು ವಿಶೇಷವಾಗಿದೆ. ವಚನೋತ್ತರ ಯುಗದಲ್ಲಿ ಪ್ರಸಾರ ಸಾಹಿತ್ಯವು ಅಭಿವ್ಯಕ್ತಿಯ ಮಾಧ್ಯಮವಾಗಿ ಹೆಸರು ಮಾಡಲು ಪ್ರಯತ್ನಿಸಿತು. ಇದೂ ಕೂಡ ಜನಸಾಮಾನ್ಯರಿಗೆ ತಲುಪಬೇಕೆಂಬ ಕೇಂದ್ರಭಾವದಿಂದ ನಿರ್ಮಾಣಗೊಂಡಿದೆ. ಜೊತೆಗೆ ಚರಿತ್ರೆಯನ್ನು ಕಟ್ಟಿಕೊಡುವ ನಿಟ್ಟಿನಲ್ಲಿ ಈ ಕೃತಿ ಮಹತ್ವದ ಪಾತ್ರವಹಿಸಿದೆ. ಆದ್ದರಿಂದ 'ಗುಂಡಬ್ರಹ್ಮಯ್ಯಗಳ' ಸಾಹಿತ್ಯ ಪ್ರಸ್ತುತವೆನಿಸುತ್ತದೆ.

ಕಣ್ಣಪ್ಪ

ಕಣ್ಣಪ್ಪನ ಮೊದಲ ಹೆಸರು ಕಣ್ಣನ್ ಎಂಬುದಾಗಿತ್ತು. ನಂತರ ಬೇಡರ ಕಣ್ಣಪ್ಪ ಎಂದು ಪ್ರಸಿದ್ದಿಯಾಗಿದ್ದಾನೆ. ತಂದೆಯು ಬೇಡರ ನಾಯಕನಾಗಿದ್ದನು. ತಂದೆಗೆ ಮುಪ್ಪು ಬಂದು ಬೇಟೆಯ ಕೆಲಸ ಮಾಡಲು ಅಶಕ್ತನಾದಾಗ ಆ ಕೆಲಸವನ್ನು ಮಗನಿಗೆ ಒಪ್ಪಿಸಿದನು. ಕಣ್ಣಪ್ಪನು ಚಿಕ್ಕವನಿರುವಾಗಲೇ ಕಾಡಿನಲ್ಲಿ ಪ್ರಾಣಿಗಳ ಹಿಂದೆ ಓಡಿ ಹೋಗಿ ಮೊಲ, ಹುಲಿಮರಿ, ಕಾಡು ಹಂದಿ ಮುಂತಾದ ಪ್ರಾಣಿಗಳನ್ನು ಹಿಡಿದು ತಂದು ಮನೆಯಲ್ಲಿ ಸಾಕುತಿದ್ದ. ಜೊತೆಗೆ ತಂದೆಯು ಅವನಿಗೆ ಬಿಲ್ಲು ವಿದ್ಯೆಯಲ್ಲಿ ಪರಿಣಿತನಾಗಿ ಮಾಡಿದ್ದ. ಪ್ರತಿದಿನ ಈತ ಖಡ್ಗವನ್ನು ಹಿಡಿದು ಕಾಡಿಗೆ ಬೇಟೆಗೆ ಹೋಗುತಿದ್ದನು. ಒಂದು ದಿನ ಕಾಡು ಹಂದಿಯು ಈತನಿಂದ ತಪ್ಪಿಸಿಕೊಂಡು ಓಡಿಹೋಗುತ್ತದೆ. ಆದರೂ ಕಣ್ಣಪ್ಪನು ಬಿಡದೆ ಅದನ್ನು ಬೆನ್ನಟಿ

ಓಡಿಹೋಗಿ ಕೊಲ್ಲುತ್ತಾನೆ. ಅಲ್ಲಿ ಒಂದು ಈಶ್ವರ ದೇವಾಲಯ ಕಣ್ಣಿಗೆ ಬೀಳುತ್ತದೆ. ಸ್ನಾನ ಮಾಡಿ ದೇವರಿಗೆ ನಮಸ್ಕರಿಸಿ ಈಶ್ವರನನ್ನು ಆಲಂಗಿಸಿಕೊಳ್ಳುತ್ತಾನೆ. ಆಗ ಅವನ ಶರೀರದ ರೋಮರೋಮಗಳು ಪುಳಕಕೊಂಡು ಕಣ್ಣಿನಿಂದ ಆನಂದ ಬಾಷ್ಪ ಸುರಿಯುತ್ತದೆ. ಅಂಥ ದಟ್ಟವಾದ ಅರಣ್ಯದಲ್ಲಿ ನೀನೊಬ್ಬನೆ ಇರುವೆಯಾ? ನಿನಗೆ ಪ್ರತಿದಿನ ಊಟಕ್ಕೆ ಕೊಡುವವರು ಯಾರು? ಎಂದು ಯೋಚಿಸಿ ತಾನು ಕೊಂದ ಹಂದಿಯ ಮಾಂಸವನ್ನು ಬೇಯಿಸಿ ತಂದು ದೇವರ ಮುಂದೆ ಇಟ್ಟು ಇದನ್ನು ಸ್ವೀಕರಿಸು ಎಂದು ಬೇಡಿಕೊಳ್ಳುತ್ತಾನೆ. ನಂತರ ಬೇಟೆಗೆ ಕಾಡಿನೊಳಕ್ಕೆ ಹೋಗುತ್ತಾನೆ. ಆಗ ಪ್ರತಿದಿನ ಅಲ್ಲಿ ಪೂಜೆ ಮಾಡುತಿದ್ದ ಶಿವಗೋಚರಿಯಾರ್ ಎಂಬ ಬ್ರಾಹ್ಮಣನು ಪೂಜೆಗೆ ಬರುತ್ತಾನೆ.

ದೇವರ ಮುಂದೆ ಇದ್ದ ಮಾಂಸವನ್ನು ನೋಡಿ ಅಯ್ಯ ಈ ಕೆಲಸ ಯಾರು ಮಾಡಿದರು. ಬಹುಶಃ ಇದು ಬೇಡರ ಕೆಲಸವೇ ಇರಬೇಕೆಂದು ಯೋಚಿಸಿ ಮಾಂಸವನ್ನು ತೆಗೆದು ಹಾಕಿ, ದೇವಾಲಯವನ್ನು ಶುದ್ಧಗೊಳಿಸಿ ನಿತ್ಯದಂತೆ ಪೂಜೆ ಮಾಡುತ್ತಾನೆ. ನಂತರ ಅಲ್ಲಿಗೆ ಬಂದ ಕಣ್ಣಪ್ಪನು ತಾನಿಟ್ಟ ಮಾಂಸವನ್ನು ಶಿವನೇ ತಿಂದಿರುವನೆಂದು ತಿಳಿದು ಪ್ರತಿದಿನ ಅವನಿಗೆ ಮಾಂಸವನ್ನು ಇಡುತ್ತಿರುತ್ತಾನೆ. ಅದನ್ನು ಬ್ರಾಹ್ಮಣನು ಶುದ್ಧಗೊಳಿಸುತ್ತಾನೆ. ಬ್ರಾಹ್ಮಣನಿಗೆ ಸಂಶಯ ಬಂದು ಈ ಮಾಂಸವನ್ನು ತಂದಿಡುವವರು ಯಾರೆಂದು ನೋಡಬೇಕೆಂದು ಯೋಚಿಸಿ ದೇವಾಲಯದಲ್ಲಿಯೇ ಅಡಗಿ ಕುಳಿತುಕೊಳ್ಳುತ್ತಾನೆ.

ಕಣ್ಣಪ್ಪನು ದಿನದ ಪದ್ಧತಿಯಂತೆ ಮಾಂಸವನ್ನು ತಂದು ದೇವರ ಮುಂದೆ ಇಟ್ಟು ಸ್ವೀಕರಿಸಲು ಬೇಡಿಕೊಳ್ಳುತ್ತಿರುತ್ತಾನೆ. ಈಶ್ವರನು ಕಣ್ಣಪ್ಪನ ಭಕ್ತಿಯನ್ನು ಬ್ರಾಹ್ಮಣನಿಗೆ ತೋರಿಸಬೇಕೆಂದು ತನ್ನ ಬಲಗಣ್ಣಿನಲ್ಲಿ ರಕ್ತ ಸುರಿಯುವಂತೆ ಮಾಡುತ್ತಾನೆ. ರಕ್ತವನ್ನು ನೋಡಿದ ಕಣ್ಣಪ್ಪನು ಇಂಥ ಕೃತ್ಯವನ್ನು ಮಾಡಿದವರು ಯಾರು? ಏನು ಮಾಡಿದರೆ ರಕ್ತ ನಿಲ್ಲುತ್ತದೆ, ಕಾಡಿನಲ್ಲಿ ಸಿಗುವ ಗಿಡ ಮೂಲಿಕೆಗಳ ರಸವನ್ನು ಹಿಂಡಿದರೆ ರಕ್ತ ನಿಲ್ಲುವುದೇ. ನೋಡೋಣವೆಂದು ಯೋಚಿಸಿ ಕಾಡಿನೊಳಗೆ ಹೋಗಿ ಔಷಧ ತಯಾರಿಸಿ ತಂದು ಶಿವನ ಕಣ್ಣಿನಲ್ಲಿ ಸುರಿಯುತ್ತಾನೆ. ರಕ್ತ ನಿಲ್ಲುವುದಿಲ್ಲ.

'ಇನ್ನೇನು ಮಾಡಲಿ ನನ್ನ ಕಣ್ಣನ್ನೇ ಕಿತ್ತು ಶಿವನಿಗೆ ಅಂಟಿಸಲೇ, ಆಗಲಾದರು ರಕ್ತ ನಿಲ್ಲುತ್ತದೆಯೋ ನೋಡೋಣ'ವೆಂದು ಯೋಚಿಸಿ ತನ್ನ ಕಣ್ಣನ್ನೇ ಕಿತ್ತು ಶಿವನಿಗೆ ಅಂಟಿಸುತ್ತಾನೆ. ಆಗ ರಕ್ತ ನಿಲ್ಲುತ್ತದೆ. ಸಂತೋಷಗೊಂಡು ಕುಣಿದು ಕುಪ್ಪಳಿಸುತ್ತಾನೆ. ಆದರೆ ಶಿವನು ಆತನ ಭಕ್ತಿಯನ್ನು ಇನ್ನೂ ಒರೆಗೆ ಹಚ್ಚಬೇಕೆಂದು ತನ್ನ ಎಡಗಣ್ಣಿಲ್ಲಿ ರಕ್ತ ಸುರಿವಂತೆ ಮಾಡುತ್ತಾನೆ. ಅದನ್ನು ನೋಡಿದ ಕಣ್ಣಪ್ಪನು ಇನ್ನೇನು ಮಾಡಲು ತನ್ನಲ್ಲಿ ಹೇಗಿದ್ದರೂ ಇನ್ನೊಂದು ಕಣ್ಣಿದೆ ಅದನ್ನೇ ತೆಗೆದು ದೇವರಿಗೆ ಅಂಟಿಸಿ ನೋವನ್ನು ಗುಣಪಡಿಸುವೆನೆಂದು ಯೋಚಿಸುತ್ತಾನೆ. ಆದರೆ ಕಣ್ಣನ್ನು ತೆಗೆದ ಮೇಲೆ ಅದನ್ನು ಅಂಟಿಸಲು ತನಗೆ ಕಣ್ಣು ಕಾಣುವುದಿಲ್ಲವಲ್ಲವೆಂದು ಕಾಲನ್ನು ರಕ್ತಸುರಿಯುತ್ತಿರುವ ಶಿವನ ಕಣ್ಣಿನ ಮೇಲೆ ಇಟ್ಟು ಕಣ್ಣನ್ನು ಕಿತ್ತುಕೊಳ್ಳಲು ಬಾಣವನ್ನು ಚುಚ್ಚುತ್ತಿರುವಾಗ ದೇವರಿಗೆ ಆತನ ಕಷ್ಟವನ್ನು ನೋಡಿ ಸಹಿಸಲಾಗುವುದಿಲ್ಲ. ತಕ್ಷಣವೇ ದೇವರು ಕಣ್ಣಪ್ಪನ ಕೈಹಿಡಿದು ಆಗುವ ಅನಾಹುತ ತಪ್ಪಿಸುತ್ತಾನೆ. ಹಿಂದೆ

ಅಡಗಿ ಕುಳಿತಿದ್ದ ಬ್ರಾಹ್ಮಣನು ಇದನ್ನು ನೋಡಿ ಆಶ್ಚರ್ಯಪಡುತ್ತಾನೆ. ಅಂದಿನಿಂದ ಕಣ್ಣನ್‌ನಿಗೆ ಕಣ್ಣಪ್ಪನೆಂದು ಹೆಸರು ಅನ್ವರ್ಥಕವಾಗುತ್ತದೆ. 'ಕಣ್ಣಪ್ಪನೇ ನಿನಗಿಂತ ಶ್ರೇಷ್ಠರಾದವರಿಲ್ಲ. ನೀನು ಸದಾ ನನ್ನಬಲ ಪಕ್ಕದಲ್ಲಿ ನೆಲೆಸುವವನಾಗು' ಎಂದು ಶಿವನು ಆಶೀರ್ವದಿಸುತ್ತಾನೆ.

ಹೀಗೆ ಬೇಡರ ಕಣ್ಣಪ್ಪನ ಆದರ್ಶವಾದ ಶಿವಭಕ್ತಿಯು ನಾಡಿನಾದ್ಯಂತ ಜನಸಾಮಾನ್ಯರಲ್ಲಿಯೂ ಪ್ರಚಾರವಿರುವುದನ್ನು ವಿಶೇಷವಾಗಿ ಕಾಣಬಹುದು. ಜನಸಾಮಾನ್ಯರಲ್ಲಿ ಶಿವ ಭಕ್ತಿಯನ್ನು ಮತ್ತು ಹೊಸ ಬದುಕನ್ನು ಕಟ್ಟಲು ಇಂತಹ ಶಿವಭಕ್ತರ ಕಥೆಗಳು ಪ್ರಮುಖವಾದ ಪಾತ್ರ ವಹಿಸುವುದನ್ನು ನೆನೆಯಬಹುದು. ಒಬ್ಬ ಬೇಡನೂ ಸಹ ಶಿವಭಕ್ತಿಯಿಂದ ಪೂಜಿಸಿದರೆ ಶಿವನು ಒಲಿಯುವನೆಂದು ಸಾರುತ್ತದೆ. ಶಿವನ ಕೃಪೆಗೆ ಪಾತ್ರನಾಗಲು ಬೇಡರ ಕನ್ನಪ್ಪನಂತಹ ಭಕ್ತಿ ಅವಶ್ಯವಿರುವುದರಿಂದ ತನ್ನ ಆಸ್ಥಾನದಲ್ಲಿ ಶಿವತತ್ವವನ್ನು ಸಾರಲು ಗಣಪತಿರಾಯನು ಅರಮನೆಯ ಗೋಡೆಗಳ ಮೇಲೆ ಚಿತ್ರಪಟಗಳನ್ನು ಹಾಕಿಕೊಂಡಿರುವನು. ಗಣಪತಿರಾಯನು ಇಂತಹ ಶಿವಭಕ್ತರಿಂದ ಪ್ರಭಾವಿತನಾಗಿ ಭಕ್ತಿಯ ಶಕ್ತಿಯನ್ನು ಪಡೆಯಲು ಪ್ರಯತ್ನಿಸುವುದು 'ಗುಂಡಬ್ರಹ್ಮಯ್ಯಗಳ ಸಾಹಿತ್ಯ' ಕಾವ್ಯದಲ್ಲಿ ಕಾಣಬಹುದು.

ಈ ಮೇಲೆ ವಿವರಿಸಿದ ಕಣ್ಣಪ್ಪನ ಕತೆಯನ್ನು ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ಕೆಳಗಿನಂತೆ ವಿವರಿಸಲಾಗಿದೆ.

"ಗೋಡೆ ಗೋಡೆಗಳಲ್ಲಿ ನೋಡಿದರು ಚಿತ್ರವ
ಬೇಡರ ಕಣ್ಣಪ್ಪ ನಿಮಗಂದು|| ಕಂಗಳ
ಜೋಡಿಸಿ ಕಿತ್ತ ಪಟವಿದೆ"[೩೩]

ಈ ಮೇಲೆ ತಿಳಿಸಿದಂತೆ ಅರ್ಥಪೂರ್ಣವಾಗಿ ಬೇಡರ ಕಣ್ಣಪ್ಪನ ಜೀವನದ ಸಾಧನೆ ಮತ್ತು ಚಿತ್ರಪಟಲದ ಕುರಿತು ಹೇಳಲಾಗಿದೆ. 'ಗುಂಡಬ್ರಹ್ಮಯ್ಯಗಳ ಸಾಹಿತ್ಯ'ವು ಭಿನ್ನಕವಿಗಳ ಭಿನ್ನ ಸಾಹಿತ್ಯ ಪ್ರಕಾರಗಳಿಂದೊಡಗೂಡಿದ ಕೃತಿಯಾಗಿದೆ. ಸಾಹಿತ್ಯದಲ್ಲಿ ಐತಿಹಾಸಿಕ / ಚಾರಿತ್ರಿಕ ಪ್ರಜ್ಞೆಯನ್ನು ಬಿತ್ತರಿಸುವ ಕೃತಿಯಾಗಿ ಗುಂಡಬ್ರಹ್ಮಯ್ಯಗಳ ಸಾಹಿತ್ಯವು ಗೋಚರಿಸುತ್ತದೆ. ಆದ್ದರಿಂದ ಮಧ್ಯಕಾಲೀನ ಸಾಹಿತ್ಯ ಮತ್ತು ಚರಿತ್ರೆಯ ಸಂದರ್ಭದಲ್ಲಿ ಈ ಕೃತಿ ಮಹತ್ವದ ಪಾತ್ರ ವಹಿಸಿದೆ.

ಸಿರಿಯಾಳ

ಕಾಂಚೀಪುರದಲ್ಲಿ ಅತ್ಯಾಣಸೆಟ್ಟಿ ಎಂಬ ಶ್ರೀಮಂತ ವರ್ತಕನು ಮಕ್ಕಳಿಲ್ಲವಲ್ಲಾ ಎಂದು ಕೊರಗುತಿದ್ದನು. ಕೊನೆಗೆ "ಶಂಕರನನರ್ಚಿಸಿಯೆ ಸುತನ ಪಡೆವೆಂ"[೩೪] ಎಂದು ನಿಶ್ಚಯಿಸಿ ಶಿವಮಂದಿರಕ್ಕೆ ಹೋಗಿ ಶಿವನನ್ನು ಅನನ್ಯಭಕ್ತಿಯಿಂದ ಬೇಡಿಕೊಂಡನು. ಶಿವನು ಈತನ ಕಡುನಿಷ್ಠೆಗೆ ಮೆಚ್ಚಿ ಪುತ್ರಸಂತಾನವಾಗಲೆಂದು ಹರಸಿದನು. ಕೆಲಕಾಲದ ಮೇಲೆ ಅತ್ಯಾಣಸೆಟ್ಟಿಯು ಪುತ್ರನೊಬ್ಬನನ್ನು ಪಡೆದನು. ಈ ಕುಮಾರನೇ ಮುಂದೆ ಸಿರಿಯಾಳನೆಂದು ಹೆಸರು ಪಡೆದನು. ಅತ್ಯಾಣಸೆಟ್ಟಿಯು ಮಗನು ಪ್ರಾಪ್ತವಯಸ್ಕನಾಗಿದ್ದಾಗಲೇ

ಚಂಗಳೆ ಎಂಬುವಳನ್ನು ತಂದುಕೊಂಡು ಮದುವೆ ಮಾಡಿದನು. ಅನಂತರ ಕೆಲವು ದಿನಗಳ ಬಳಿಕ ಅನಾರೋಗ್ಯದ ಕಾರಣ ಶಿವೈಕ್ಯನಾದನು. ತಂದೆಯ ಮರಣವನ್ನು ಕಣ್ಣಾರೆ ಕಂಡ ಶಿರಿಯಾಳ ಮತ್ತು ಚೆಂಗಳೆಯು ಜೀವನವು ಬಯಲಾಗಿಹುದು, ಆದ್ದರಿಂದ ಗುರುಲಿಂಗ ಜಂಗಮದ ಸೇವೆಯೇ ಬದುಕಿನ ಗುರಿಯೆಂದು ನಿರ್ಧರಿಸಿದರು.

ಕೆಲವು ದಿನಗಳ ನಂತರ ಪರಶಿವನು ಸಿರಿಯಾಳ ಚಂಗಳೆಯರ ಭಕ್ತಿಯನ್ನು ಬರೆದೊರೆದು ನೋಡಲೆಂದು ಭೈರವ ವೇಷಧಾರಿಯಾಗಿ ಆಗಮಿಸಿದನು. ಆತನ ವೇಷಭೂಷಣ ನಡೆನುಡಿಗಳು ಸಂದರ್ಭಕ್ಕೆ ತಕ್ಕವಾಗಿದ್ದುವು. ಕಾಂಚೀಪುರವನ್ನು ಪ್ರವೇಶಿಸಿ, ಸಿರಿಯಾಳನ ಮನೆ ಯಾವುದೆಂದು ವಿಚಾರಿಸುತ್ತ ಆತನ ಮನೆಯ ಬಾಗಿಲೆಡೆಗೆ ಬಂದು ನಿಂತನು. ಸಿರಿಯಾಳನು ಮನೆಯಲ್ಲಿಲ್ಲವೆಂಬುದನ್ನು ತಿಳಿದು ತನ್ನನ್ನು ಆತನು ನೋಡುವುದಾದರೆ ಸಮಿಪದಲ್ಲಿಯೇ ಇರುವ ಆಚದ ಮರದ ಬಳಿಗೆ ಬರಲೆಂದು ಹೇಳಿ ಹೊರಟು ಹೋದನು. ಶಿವಭಕ್ತರನ್ನರಸುತ್ತ ಹೋಗಿದ್ದ ಸಿರಿಯಾಳನಿಗೆ ಅಂದು ಭಕ್ತರಾರೂ ಕಾಣದೆ ನಿರಾಶೆಯಿಂದ ಮನೆಗೆ ಮರಳಿದನು. ಜಂಗಮರೊಬ್ಬರು ಬಂದಿರುವ ವಿಷಯ ತನಗೆ ತಿಳಿಯಲು ಕೂಡಲೆ ಆಚದಮರದ ಸಮಿಪಕ್ಕೆ ಹೋಗಿ ಅಲ್ಲಿದ್ದ ಜಂಗಮಮೂರ್ತಿಗೆ ವಂದಿಸಿ ಮನೆಗೆ ದಯಮಾಡಬೇಕೆಂದು ಬಿನ್ನಹ ಮಾಡಿಕೊಂಡನು. ಜಂಗಮಮೂರ್ತಿಯು ಅವನ ಬಿನ್ನಪವನ್ನು ಸುಲಭವಾಗಿ ಸ್ವೀಕರಿಸಲಿಲ್ಲ. ಸಿರಿಯಾಳನನ್ನು ಕುರಿತು. 'ಕೇಳಯ್ಯ ಭಕ್ತ, ನನಗೆ ಬೇಕಾದುದು ಎಲ್ಲರೂ ಉಣ್ಣುವ ಊಟವಲ್ಲ, ನರಮಾಂಸ' ಎಂದನು. ಸಿರಿಯಾಳನು ಆಗಬಹುದೆಂದ. ಐದು ವರ್ಷದ ಕೋಮಲಾಂಗನಾಬೇಕು, ಅವನು ಅಂಗಹೀನನಾಗಿರಬಾರದು, ಸತ್ಕುಲ ಪ್ರಸೂತನಾಗಿರಬೇಕು, ಸದಾಚಾರ ಸಂಪನ್ನನೂ ಸರ್ವಗುಣಲಕ್ಷನೂ ಆಗಿರಬೇಕೆಂದನು. ಅಲ್ಲದೆ ಸುಕುಮಾರನ ಶಿರವನ್ನು ತಂದೆ ತಾಯಿಗಳೇ ಕತ್ತರಿಸಬೇಕು. ಮಾಂಸವನ್ನು ತಾಯಿಯೇ ನಿಶ್ಚಿಂತೆಯಿಂದ ಅಡುಗೆ ಮಾಡಬೇಕು. ಹಾಗಾದರೆ ಸಂತೋಷದಿಂದ ಸುಖಭೋಜನ ಮಾಡುತ್ತೇನೆಂದನು.

ಸಿರಿಯಾಳನು ಈ ಎಲ್ಲಾ ಶರತ್ತುಗಳಿಗೆ ಬೆದರಲಿಲ್ಲ. ಎಲ್ಲವನ್ನು ಒಪ್ಪಿಕೊಂಡನು. ತನ್ನ ಸತಿಗೆ ಈ ವಿಚಾರಗಳನ್ನು ತಿಳಿಸಿದಾಗ ಆಕೆಯು ಅಳುಕಲಿಲ್ಲ. ಸಿರಿಯಾಳನು ಮಗನನ್ನು ಕರೆದು ತರಲು ಪಾಠಶಾಲೆಗೆ ಹೊರಟನು. ಶಿವನು ಚಂಗಳೆಯ ಮನವನ್ನು ಅರಿಯಲೆಂದು ಇನ್ನೊಂದು ಆಟವನ್ನಾಡಿದನು ತಾಯಿ, ನಿನ್ನ ಪ್ರೀತಿಯ ಮಗನು ರಕ್ಕಸನೊಬ್ಬನಿಗೆ ಆಹಾರವಾಗುತಿದ್ದಾನೆಂದು ಹೇಳಿದ. ಚಂಗಳೆ ಮುಗುಳ್ನಗೆ ನಗುತ್ತಾ ತನ್ನ ಸಂತೋಷವನ್ನು ಸೂಚಿಸಿ ತಮಗಿಂತ ಧನ್ಯರು ಮತ್ತಾರು ಎಂದು ನುಡಿದಳು. ತಂದೆತಾಯಿಗಳು ಮಗನ ಶಿರಸ್ಸನ್ನು ಕತ್ತರಿಸಿದರು. ಚಂಗಳೆಯು ತನ್ನ ದಾಸಿಯಾದ ಚಂದನೆಯ ನೆರವಿನಿಂದ ಅಡುಗೆ ಮಾಡಿಟ್ಟಳು. ಆಗ ಸಿರಿಯಾಳನು ಆಚದ ಮರದ ಬುಡದಲ್ಲಿ ಕಾಯುತ್ತ ಕುಳಿತಿದ್ದ ಜಂಗಮನನ್ನೊಡಗೊಂಡು ಮನೆಗೆ ಬಂದನು. ಸಿರಿಯಾಳ ಚಂಗಳೆಯರು ಅತ್ಯಂತ ಸಂಭ್ರಮದಿಂದ ಪಾದ ತೊಳೆದರು. ಸುಗಂಧಿ, ಪುಷ್ಪ, ದೂಪದೀಪಗಳಿಂದ ಅರ್ಚಿಸಿದರು.

ಅಡ್ಡಣಿಯ ಮೇಲಿನ ಹೊನ್ನ ಹರಿವಾಣದಲ್ಲಿದ್ದ ಅಡುಗೆ ನೋಡಿದ ಕಪಟ ತಪಸ್ವಿ. ಆಗ 'ದೇಹದಲ್ಲೆಲ್ಲಾ ತಲೆಯೇ ಪ್ರಧಾನವಾದುದಲ್ಲವೆ? ಅದನ್ನೇಕೆ ಬಿಟ್ಟಿರುತ್ತೀರಿ' ಎಂದು ಬೇಸರದಿಂದ ಆಕ್ಷೇಪಿಸಿದನು. ಚಂಗಳೆ ಕೂಡಲೆ ಅದನ್ನು ಬಿಡಿಸಿದಳು. ಮತ್ತೆ 'ನಾನೊಬ್ಬನೇ ಊಟ ಮಾಡಬೇಕೆ? ಭಕ್ತರಾರೂ ಇಲ್ಲವೆ ನನ್ನ ಜೊತೆ ಕುಳಿತು ಊಟ ಮಾಡಲು' ಎಂದು ಸಿಡುಕಿದ. ಸಿರಿಯಾಳನ್ನು ಊರಿನಲ್ಲೆಲ್ಲ ತಿರುಗಾಡಿ ಭಕ್ತರನ್ನು ಕಾಣದೆ ಮನೆಗೆ ಬಂದುದನ್ನು ಕಂಡು 'ನೀನಾದರೂ ಕುಳಿತುಕೊ' ಎಂದು ಆಹ್ವಾನಿಸಿದನು.

ಚಂಗಳೆ ತಾನೇ ಬೇಯಿಸಿದ ಮಗನ ಮಾಂಸವನ್ನು ಹೊನ್ನ ಹರಿವಾಣದಲ್ಲಿ ಬಡಿಸಿದಳು. ಸಿರಿಯಾಳನು ಊಟಕ್ಕೆ ಕುಳಿತುಕೊಳ್ಳುತಿದ್ದಂತೆಯೇ ಆ ಭೈರವನು "ಅತಿಥೇಯರು ಅತಿಥಿಗಳ ಊಟವಾದ ಮೇಲೆ ಉಣ್ಣಬೇಕು. ಅದೇ ಭೃತ್ಯನ ಲಕ್ಷಣ ನೀನು ಬೇಡ ನಿನ್ನ ಮಗನು ನನ್ನ ಜೊತೆಗೆ ಊಟ ಮಾಡುವುದಾಗಲಿ"[೩೫] ಎಂದನು. ಈ ದಂಪತಿಗಳಿಗೆ ದೊಡ್ಡ ಚಿಂತೆಯಾಗುತ್ತದೆ. ಮಗನನ್ನು ಹುಡುಕಿ ಬೇಗನೆ ತರದಿದ್ದರೆ ನಾನು ಊಟ ಮಾಡುವುದೇ ಇಲ್ಲವೆಂದು ಹಠ ಹಿಡಿಯುತ್ತಾನೆ. ಸಿರಿಯಾಳ, ಚಂಗಳೆಯರು ಅತಿಥಿಯ ಮಾತನ್ನು ಮೀರಲಾರದವರಾಗಿ,

"ಮಗನೆ ಮಗನೆ ಬಾರೆನುತ್ತ ತಂದೆ ಕರೆದುನೋಡಿ ಬೀಗಿ
ಕುಲದ ಮಣಿಯೆ ಗುಣದ ಕಣಿಯೆ ಕಾಂಚಿನಾಥ ಬಾರೆನುತ್ತ"[೩೬]

ಹಲುಬಿದರು. ಸರ್ವಾಲಂಕಾರಭೂಷಣನಾದ ಮಗನು ಕೂಡಲೆ ಮೈದೋರಿ ಅವರಿಬ್ಬರನ್ನೂ ಆಲಿಂಗಿಸಿದನು.

ಈ ರೀತಿ ಭಕ್ತಿಯು ತ್ಯಾಗಮೂಲವಾದುದೆಂದು ಶಿವಭಕ್ತಿಯನ್ನು ಗಣಪತಿರಾಯ ನಂಬಿದವನಾಗಿದ್ದಾನೆ. ಆದ್ದರಿಂದ ಬೇಡರ ಕಣ್ಣಪ್ಪ, ಕೋಳೂರು ಕೊಡಗೂಸು, ಸಿರಿಯಾಳ ಶಿವಶರಣರ ಮುಂತಾದ ಚಿತ್ರಪಟಗಳನ್ನು ಅರಮನೆಯ ಚಿತ್ರಶಾಲೆಯಲ್ಲಿ ಹಾಕಿಕೊಂಡಿದ್ದಾನೆ. ಈ ರಾಜನು ಶಿವನ ಆರಾಧಕನಾಗಿರಬೇಕು. ಆದರಿಂದ ಶಿವಭಕ್ತರ ಚಿತ್ರಪಟಗಳಿವೆ. 'ಗುಂಡಬ್ರಹ್ಮಯ್ಯಗಳ ಸಾಹಿತ್ಯ'ದಲ್ಲಿ ಗಣಪತಿರಾಯನ ಆಸ್ಥಾನದ ಅರಮನೆಯಲ್ಲಿನ ಚಿತ್ರಪಟದಲ್ಲಿ ಸಿರಿಯಾಳನ ಬಗ್ಗೆ ಕೆಳಗಿನಂತೆ ಪ್ರಸ್ತಾಪಿಸಲಾಗಿದೆ.

"ಸಿರಿಯಾಳ ಚಂಗಳೆಯ ಮಗನ ಬಾಣಸ ಮಾಡಿ
ಉರುಗ ಭೂಷಣಗೆ ಉಣಲಿಕ್ಕ|| ನೀಡಿದ
ಪುರ ಸಹ ಬಂದ ಪಟವಿದೆ."[೩೭]

ಓರಂಗಲ್ಲಿನ ಆಸ್ಥಾನದಲ್ಲಿರುವ ಚಿತ್ರಪಟಗಳನ್ನು ವಿವರಿಸುವಾಗ ಕವಿಚನ್ನನು ಭಕ್ತಿಯ ಸ್ವರೂಪವನ್ನು ಕಟ್ಟಿಕೊಟ್ಟಿರುವುದು ವಿಶೇಷವಾಗಿದೆ. 'ಗುಂಡಬ್ರಹ್ಮಯ್ಯಗಳ ಸಾಹಿತ್ಯ'ವನ್ನು ಅವಲೋಕಿಸಿದರೆ ನಮಗೆ ಹರಿಹರನ ರಗಳೆಗಳ ಕಥನ ತಂತ್ರದ ಮಾದರಿಯೊಂದು ಲಭ್ಯವಾಗುತ್ತದೆ. ಶರಣರನ್ನು ಶಿವನೆ ಪರೀಕ್ಷೆಗೆ

ಗುರಿಪಡಿಸುವುದು. ಅನಂತರ ಶಿವನಿಂದಲೇ ಶರಣರನ್ನು (ಭಕ್ತ) ಸಂರಕ್ಷಿಸುವುದು. ಅಂದರೆ ಭಕ್ತ ದೈವಕ್ಕೋಸ್ಕರ ತುಡಿಯುವ ಗುಣಗಳಾದರೆ, ದೈವ ಭಕ್ತನಿಗೋಸ್ಕರ ಮಿಡಿಯುವ ಗುಣವುಳ್ಳನಾಗಿರುತ್ತಾನೆ. ಇದಕ್ಕೆ ಬೇಕಾದ ಒಂದು ತಾತ್ವಿಕ ಚೌಕಟ್ಟನ್ನು ಈ ಕೃತಿಯು ತಿಳಿಸುತ್ತದೆ. ಆದ್ದರಿಂದ ಸಾಹಿತ್ಯದೊಂದಿಗೆ ಚಾರಿತ್ರಿಕವಾಗಿ ಮಹತ್ವವುಳ್ಳ ಕಾವ್ಯವಾಗಿದೆ. ಶರಣ ತತ್ವ, ಶರಣ ಸಂಸ್ಕೃತಿಯ ಪ್ರತಿನಿಧಿಯಾಗಿ ಈ ಕಾವ್ಯ ರೂಪುಗೊಂಡಿದೆ. ಲೌಕಿಕ ಬದುಕನ್ನು ಹಸನಾಗಿಸಿಕೊಂಡರೆ, ಪಾರಮಾರ್ಥಿಕ ಬದುಕು ತನ್ನಷ್ಟಕ್ಕೆ ತಾನೇ ಹಸನಾಗುವುದೆಂಬ ಮಹತ್ವದ ಸಂದೇಶ ನೀಡುತ್ತದೆ.

ಕೋಳೂರು ಕೊಡಗೂಸು

ಕೋಳೂರು ಎಂಬ ಗ್ರಾಮದಲ್ಲಿ ಸಂಗಯ್ಯ ಮತ್ತು ಸೋಮಲೆ ಎಂಬ ದಂಪತಿಗಳಿಗೆ ಚನ್ನಕ್ಕನೆಂಬ ಮಗಳಿದ್ದಳು. ಸಂಗಯ್ಯ ಮತ್ತು ಸೋಮಲೆಯರು ಪ್ರತಿನಿತ್ಯ ಆ ಊರಿನ ಸಂಗಮೇಶನಿಗೆ ಪೂಜೆ ಸಲ್ಲಿಸಿ ನೈವೇದ್ಯ ಮಾಡುವ ಸಂಪ್ರದಾಯವನ್ನಿಟ್ಟುಕೊಂಡಿದ್ದರು. ತಂದೆ ತಾಯಿಗಳು ಸಂಗಮೇಶನಲ್ಲಿಟ್ಟ ಭಕ್ತಿ ನೋಡಿ ಚನ್ನಕ್ಕ ದೇವರು ನೋಡಲು ಹೇಗಿರುತ್ತಾನೆಂದು ಕೇಳುತ್ತಾಳೆ. ಅದಕ್ಕೆ ತಾಯಿಯು ಆತನಿಗೆ ಐದು ಮುಖಗಳು, ಹತ್ತು ಭುಜಗಳು, ತಲೆಯ ಮೇಲೆ ಜಡೆಯಿದೆ. ಅದರಲ್ಲಿ ಚಂದ್ರ, ಗಂಗೆಯರು ವಾಸಮಾಡಿದ್ದಾರೆ. ಹಣೆಯ ಮೇಲೆ ಉರಿಗಣ್ಣು, ತೊಡೆಯ ಮೇಲೆ ಪಾರ್ವತಿ ಕುಳಿತಿದ್ದಾಳೆ ಎಂದು ಶಿವನ ವರ್ಣನೆ ಮಾಡುವಳು. ಇದನ್ನು ಕೇಳಿ ಚನ್ನಕ್ಕನಿಗೆ ಶಿವನನ್ನು ನೋಡಬೇಕೆಂಬ ಬಯಕೆಯುಂಟಾಗುತ್ತದೆ.

ಅದೇ ಸಮಯದಲ್ಲಿ ಸೋಮಲೆಯ ತಮ್ಮನ ಮದುವೆ ನಿಶ್ಚಯವಾಗಿ ಆತ ತನ್ನ ಅಕ್ಕ, ಭಾವನನ್ನು ಕರೆದೊಯ್ಯಲು ಬರುತ್ತಾನೆ. ಆದರೆ ದಂಪತಿಗಳು ತಾವು ಹೋದರೆ ಸಂಗಮೇಶನ ಪೂಜೆ ನಿಂತು ಹೋಗುತ್ತದಲ್ಲಾ ಎಂದು ಚಿಂತಿಸುವಾಗ ಚನ್ನಕ್ಕ ತಾನು ಶಿವನನ್ನ ನೋಡಲು ಇದೇ ಸಮಯವೆಂದು ಯೋಚಿಸಿ ತಂದೆ ತಾಯಿಗಳಿಗೆ ನೀವು ಮದುವೆಗೆ ಹೋಗಿ ಬನ್ನಿರಿ, ನಾನು ಸಂಗಮೇಶನಿಗೆ ಪೂಜೆ ಸಲ್ಲಿಸಿ ಹಾಲು ನೈವೇದ್ಯ ಮಾಡುತ್ತೇನೆಂದು ಹೇಳುತ್ತಾಳೆ. ಮಗಳ ಮಾತನ್ನು ಕೇಳಿ ಸೋಮಲೆ ಸಂತೋಷದಿಂದ ಅವಳ ಮೈದಡವಿ

"ಚಿಜ್ಜೆದನಿಕೇಳಿ ಎದ್ದು ಮಜ್ಜಣಮಿದು
ರುದ್ರಾಕ್ಷಿ ತೊಟ್ಟು ಮಡಿಯುಟ್ಟು ಸಿದ್ದರ ಊಳಿಗದ
ಶಿವಗುಡಿಗೆ ನೀನು ಹೋಗಮ್ಮ
ತಾಯಿ ಚನ್ನಮ್ಮ ಬಾಲರೊಡನಾಡಿಕೆ
ಕೀಲು ಗೊಂಬೆಗಳ ತರುವೆ ನಿನಗೆ ಕೋಳುರು
ಚೋಳು ಮಲ್ಲಯ್ಯನವರಿಗೆ ಹಾಲು ಸಲಿಸಮ್ಮ"[೩೮]

ಎಂದು ಹೇಳಿ ತವರಿಗೆ ಹೋಗುತ್ತಾಳೆ. ಮರುದಿನ ಬೇಗನೆ ಎದ್ದು ಸ್ನಾನ ಮಾಡಿ ಮಡಿಯುಟ್ಟು ಹೊಸ ಮಡಿಕೆಯಲ್ಲಿ ಹಾಲು ತೆಗೆದುಕೊಂಡು ಹೋಗುತ್ತಾಳೆ. ಶಿವನನ್ನು ಪೂಜಿಸಿ ಹಾಲು ನೈವೇದ್ಯ

ಮಾಡಿ ದೇವರ ಮುಂದಿಟ್ಟು ಹಾಲು ಕುಡಿ ಎಂದು ದೇವರಿಗೆ ಬೇಡಿಕೊಳ್ಳುತ್ತಾಳೆ. ಆದರೆ ಶಿವನು ಬಂದು ಹಾಲು ಕುಡಿಯುವುದಿಲ್ಲ. 'ಬರಿ ಹಾಲು ಕುಡಿಯಲು ಬೇಸರವಾದರೆ ಹೇಳು, ಮನೆಯಲ್ಲಿ ಬಾಳೆಹಣ್ಣು, ಚಕ್ಕುಲಿ ಎಲ್ಲಾ ಇದೆ ತಂದುಕೊಡುವೆ'. ನಿನಗೇನು ಬೇಕೆಂದು ಪರಿಪರಿಯಾಗಿ ಕೇಳುತ್ತಾಳೆ. ಶಿವನಿಗೆ ಪಾರ್ವತಿಯು ಇನ್ನೆಷ್ಟು ಹೊತ್ತು ಆ ಕೂಸನ್ನು ಬಳಲಿಸುವಿರಿ? ಅವಳ ಆಸೆ ಹಿಡೇರಿಸಿರಿ ಎಂದು ಹೇಳುತ್ತಾಳೆ. ಆಗ ಶಿವನು ಆ ಬಾಲೆಯ ಮಾತುಗಳು ಹಾಲಿಗಿಂತ ಸವಿಯಾಗಿವೆ. ನಾನು ಹಾಲು ಕುಡಿದರೆ ಇಂಥ ಸವಿ ಮಾತುಗಳ ಸವಿಯು ಇಲ್ಲದಂತಾಗುತ್ತದಲ್ಲಾ ಎಂದು ಹೇಳುತ್ತಾನೆ. ಎಷ್ಟೇ ಪರಿಯಾಗಿ ಬೇಡಿದರೂ ಶಿವನು ಹಾಲು ಕುಡಿಯದಿದ್ದನ್ನು ನೋಡಿ ಚನ್ನಕ್ಕ ಬೇಸರಗೊಂಡು ತನ್ನ ತಲೆಯನ್ನು ಕಂಬಕ್ಕೆ ಬಡಿದುಕೊಳ್ಳುತ್ತಾಳೆ. ಆಗ ಶಿವನು ಬಂದು ಹಾಲು ಕುಡಿದು ಹೋಗುತ್ತಾನೆ.

ಈ ರೀತಿ ಶಿವನಿಗೆ ಮೂರನೇ ದಿವಸ ಹಾಲು ಕುಡಿಸಿ ಬಂದಾಗ ಚನ್ನಕ್ಕನ ತಂದೆ-ತಾಯಿಗಳು ಊರಿಗೆ ಬಂದಿರುತ್ತಾರೆ. ಹಾಲಿನ ಬಟ್ಟಲು ಬರಿದಾಗಿದ್ದನ್ನು ನೋಡಿ ದೇವಾಲಯಕ್ಕೆ ನೈವೇದ್ಯಕ್ಕೆ ಒಯ್ದು ಹಾಲು ಏನಾಯಿತೆಂದು ಕೇಳಲು ಸೋಮೇಶ್ವರನು ಕುಡಿದನೆಂದು ಹೇಳುತ್ತಾಳೆ. ಮಗಳ ಮಾತನ್ನು ಇಬ್ಬರೂ ದಂಪತಿಗಳು ನಂಬುವುದಿಲ್ಲ. ಮರುದಿನ ಚನ್ನಕ್ಕ ತಂದೆ-ತಾಯಿಗಳೊಂದಿಗೆ ದೇವಾಲಯಕ್ಕೆ ಬಂದು ದೇವರನ್ನು ಪೂಜಿಸಿ ಹಾಲು ಮುಂದಿಟ್ಟು ಕುಡಿಯಲು ಬೇಡಿಕೊಳ್ಳುತ್ತಾಳೆ. ಶಿವನು ಬಂದು ಕುಡಿಯುವುದಿಲ್ಲ. ಆಗ ಸುಳ್ಳು ಎಂದು ತಂದೆ-ತಾಯಿಗಳು ಮಗಳನ್ನು ಹೊಡೆಯಲು ಹೋಗುತ್ತಾರೆ. ಆಗ ಲಿಂಗ ಒಡೆದು ಚನ್ನಕ್ಕನನ್ನು ಒಳಗೆ ಸೆಳೆದುಕೊಳ್ಳುತ್ತದೆ. ಇದನ್ನು ನೋಡಿ ತಂದೆಯು ತಕ್ಷಣವೇ ಮಗಳ ಕೂದಲನ್ನು ಹಿಡಿದು ತನ್ನೆಡೆಗೆ ಎಳೆದುಕೊಳ್ಳುತ್ತಾನೆ. ಆದರೆ ತಲೆಗೂದಲು ಮಾತ್ರ ಆತನ ಕೈಯಲ್ಲಿ ಉಳಿದು ಚನ್ನಕ್ಕ ಲಿಂಗದಲ್ಲಿ ಲೀನವಾಗುತ್ತಾಳೆ. ಇಂತಹ ಶಿವ ಪಾರಮ್ಯವನ್ನು ಮೆರೆದ ಚನ್ನಕ್ಕನ ಕುರಿತು ಗುಂಡಬ್ರಹ್ಮಯ್ಯರ ಕಾವ್ಯದಲ್ಲಿ ಪ್ರಸ್ತಾಪಿಸಲಾಗಿದೆ.

ಓರಂಗಲ್ಲಿನ ಕಾಕತೀಯ ಅರಸನಾದ ಗಣಪತಿರಾಯನು ಕೊಳೂರು ಕೊಡಗೂಸಿನ ಚಿತ್ರಪಟವನ್ನು ತನ್ನ ಅರಮನೆಯಲ್ಲಿ ಗೋಡೆಗಳ ಮೇಲೆ ಹಾಕುವುದರ ಮೂಲಕ ಶಿವನಿಷ್ಠೆಯನ್ನು ಮೆರೆದಿರುವನು. ಭಕ್ತಿಯ ಮಾರ್ಗದಿಂದ ಆದರ್ಶ ರಾಜ್ಯವನ್ನಾಗಿ ಮಾಡಲು ಶಿವತತ್ವಗಳನ್ನು ಒಪ್ಪಿಕೊಂಡು ಶಿವಭಕ್ತರ ಚಿತ್ರಗಳನ್ನು ಅರಮನೆಯಲ್ಲಿ ಹಾಕುವುದರ ಮೂಲಕ ಶರಣರ ಮಾರ್ಗದಡೆಗೆ ಸಾಗಿರಬೇಕೆನಿಸುತ್ತವೆ. ಈ ಶರಣರ ಚಿತ್ರಪಟಗಳು ವೀರಶೈವ ಧರ್ಮದ ಪ್ರತಿನಿಧಿಗಳಂತಿವೆ. ಇದರ ಮೂಲಕ ಗಣಪತಿರಾಯನು ಶೈವಧರ್ಮವನ್ನು ಸ್ವೀಕರಿಸಿದ್ದನೆಂದು ಹೇಳಬಹುದು. ಈ ದೃಷ್ಠಿಯಿಂದ ಗುಂಡಬ್ರಹ್ಮಯ್ಯಗಳ ಕಾವ್ಯ ವಿಶೇಷ ಎನಿಸುತ್ತದೆ. ಗುಂಡಯ್ಯ ಬ್ರಹ್ಮಯ್ಯಗಳು ಏಕೋಭಾವ ನಿಷ್ಠೆಯ ಶರಣರು. ಇವರದು ಒಂದೇ ವ್ರತ ಮೊರೆ ಹೊಕ್ಕವರನ್ನು ಸಂರಕ್ಷಿಸುವುದು. ವೀರವ್ರತದ ಬದುಕು, ಶೈವನಿಷ್ಠೆ, ಶೈವೋಪಾಸನೆಯೆಂಬ ತ್ರಿವೇಣಿ ಸಂಗಮವೆ ಇವರ ಬದುಕಿನ ಮೂಲ ಸೂತ್ರಗಳು. ಕ್ಷತ್ರಿಯ ಧರ್ಮದ ಮೌಲ್ಯವಾಗಿದ್ದ ವೀರತ್ವವು ಶೈವಧರ್ಮದ ಮೌಲ್ಯವಾಗಿ ಪರಿವರ್ತಿತವಾಗಿ ಅದು ಗುಂಡಬ್ರಹ್ಮಯ್ಯರಂತಹ ವ್ಯಕ್ತಿಗಳಲ್ಲಿ

ವ್ರತವು ವೀರತ್ವವನ್ನು ಪಡೆದುಕೊಳ್ಳುತ್ತದೆ. ಸಾತ್ವಿಕತೆಯ ಜೊತೆಗೆ ವೀರತ್ವದ ಅಭಿವ್ಯಕ್ತಿಯೂ ಇವರ ಬಹುಮುಖಿ ವ್ಯಕ್ತಿತ್ವದ ಪ್ರಕಟಣೆಯಾಗಿದೆ. ಅಲ್ಲದೆ ಮನುಷ್ಯನಲ್ಲಿರಬೇಕಾದ ಮಾನವೀಯ ಮೌಲ್ಯದ ಸಾಂಕೇತಿಕತೆಯೂ ಆಗುತ್ತದೆ. ಈ ಇಬ್ಬರ ವ್ರತನಿಷ್ಠೆ, ಶಿವನಿಷ್ಠೆ, ಶೈವನಿಷ್ಠೆ, ಕಾಯಕನಿಷ್ಠೆಯನ್ನು ಅಭಿವ್ಯಕ್ತಿಪಡಿಸುವ ಕಾವ್ಯವೇ ಗುಂಡಬ್ರಹ್ಮಯ್ಯಗಳ ಸಾಹಿತ್ಯವಾಗಿದೆ. ಈ ಕೃತಿಯಲ್ಲಿ ಪೌರಾಣಿಕ, ಚಾರಿತ್ರಿಕ, ಸಾಹಿತ್ಯಿಕ ಹಾಗು ಸಮಕಾಲೀನಗೊಳಿಸಬಹುದಾದ ಅನೇಕ ಅಂಶಗಳು ನಮಗೆ ಲಭಿಸುತ್ತವೆ. ಅರಮನೆಯ ಚಿತ್ರಶಾಲೆಯಲ್ಲಿರುವ ಕೋಳೂರು ಕೊಡಗೂಸಿನ ಚಿತ್ರಪಟದ ಬಗ್ಗೆ ಈ ಕೆಳಗಿನಂತೆ ಪ್ರಸ್ತಾಪಿಸಲಾಗಿದೆ.

"ಗಡಿಗೆ ತುಂಬಿದ ಹಾಲ ನೀವು ಸಲಿಸೆಂದು ಬಂದಳು
ಒಡಲ ತುಂಬಿ ನೀವು ಸಲಿಸಯ್ಯ|| ಹೇಳಿದವಳೀಗ
ಕೋಳೂರು ಕೊಡಗೂಸು ಪಟವು ಬರೆದಿರೆ"[೨೮]

ಹರನಾರದರು ಅರಮನೆಯ ಚಿತ್ರಶಾಲೆಯನ್ನು ಪ್ರವೇಶಿಸಿದ ಕೂಡಲೇ ಒಂದು ಕ್ಷಣ ಮೈಮರೆತು ಎಲ್ಲಾ ಚಿತ್ರಪಟಗಳನ್ನು ನೋಡುತ್ತಾರೆ. ಗಣಪತಿಯ ಆಸ್ಥಾನದಲ್ಲಿಯ ಚಿತ್ರಪಟಗಳನ್ನು ನೋಡಿದಾಗ ಹರನಾರದರು ಕಳವಿಗೆ ಬಂದಿದ್ದಕ್ಕೆ ತಾವೇ ಮುಜುಗರಕ್ಕೆ ಒಳಗಾಗುವರು. ಗಣಪತಿರಾಯನು ಶಿವಭಕ್ತನೆಂದು ತಿಳಿದ ಮೇಲೆ ಕಳುವು ಮಾಡುವ ಉತ್ಸಾಹ ಸ್ವಲ್ಪ ಹೊರಟು ಹೋಗುತ್ತದೆ. ತನ್ನ ಭಕ್ತನಿಗೆ ತಾನೇ ಶಿಕ್ಷೆ ಕೊಡುತ್ತಿರುವೆನಲ್ಲ ಎಂಬ ಸಂಕೋಚಭಾವನೆ ಬಂದಿರಬೇಕೆನಿಸುತ್ತದೆ. ಈ ಚಿತ್ರಪಟಗಳು ಅನೇಕ ಗ್ರಹಿಕೆಗಳಿಗೆ ಪ್ರಮುಖ ಆಕಾರಗಳಾಗಿವೆ. ಆದ್ದರಿಂದ ಇವುಗಳ ಅಧ್ಯಯನ ಮುಖ್ಯವೆಂದು ಭಾವಿಸಲಾಗಿದೆ. ಈ ದೃಷ್ಟಿಯಿಂದ ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ಬರುವಂತಹ ಪ್ರತಿಯೊಂದು ಚಿತ್ರಪಟಗಳು ಒಬ್ಬೊಬ್ಬ ಶರಣರ ಜೀವನದ ವಿಧಾನದ ಬಗ್ಗೆ ವಿವರಿಸುತ್ತವೆ. ಈ ಗುಣಲಕ್ಷಣದಿಂದ ಗುಂಡಬ್ರಹ್ಮಯ್ಯಗಳ ಚರಿತ್ರೆಯು ಐತಿಹಾಸಿಕವಾಗಿ ಪ್ರಮುಖವಾಗಿದೆ.

ಹೆಂಡದ ಮಾರಯ್ಯ

ಕಲ್ಯಾಣದಲ್ಲಿದ್ದ ಈ ಭಕ್ತನು ಅರವಟ್ಟಿಗೆ ಇಟ್ಟು ಶಿವಭಕ್ತರ ಸೇವೆ ಸಲ್ಲಿಸುತ್ತಿದ್ದನು. ಕೆಲವು ಜನರು ಹೆಂಡವನ್ನು ಇಟ್ಟರೆ ಅದನ್ನು ಕುಡಿದು ಶಿವಾನುಭವ ಗೋಷ್ಠಿಯಲ್ಲಿ ಭಾಗವಹಿಸುವುದಾಗಿ ಹೇಳಿದರು. ಮಾರಯ್ಯನು ಒಪ್ಪಿ ಹಾಗೆಯೇ ಮಾಡಿದನು. ಕುಡಿಯಲು ಬಂದವರಿಗೆ ಈತನು ವಿವೇಕ ಭೋಧೆಯನ್ನು ಮಾಡುತ್ತಿದ್ದನು. ಮಾರಯ್ಯನ ಕಾಯಕವನ್ನು ಕೇಳಿ ದೊರೆಯಾದ ಬಿಜ್ಜಳನು ಬಸವಣ್ಣನನ್ನು ಆಪೇಕ್ಷಿಸಿದನು. ಆಗ ಬಸವಣ್ಣನು ಆತನ ಮಹತ್ವವನ್ನು ತೋರಿಸುವುದಾಗಿ ಬಿಜ್ಜಳನನ್ನು ಆತನ ಬಳಿಗೆ ಕರೆದೊಯ್ದನು. ರಾಜನು ಮಾರಯ್ಯನ ಹಸ್ತಗಳನ್ನು ಕತ್ತರಿಸಲು ಒಡನೆಯೇ ಅವು ಚಿಗುರಿದವು.

ಹೆಂಡದ ಮಾರಯ್ಯನು ತನ್ನದೇ ಆದ ಕಾಯಕದ ಮೂಲಕ ಗುರುತಿಸಿಕೊಂಡಿದ್ದಾನೆ. ಕಾಯಕವು ಯಾವುದೇ ಆಗಲಿ ಶ್ರದ್ಧೆಯಿಂದ ನಿರ್ವಹಿಸಬೇಕೆಂಬುದನ್ನು ಮನವರಿಕೆ ಮಾಡುತ್ತದೆ. 'ಕಾಯಕವೇ ಕೈಲಾಸ'ವೆಂಬ ತತ್ವದ ಮೂಲಕ ಎಲ್ಲ ವೃತ್ತಿಗಳಿಗೂ ಸಮಾನ ಗೌರವ ಕೊಟ್ಟರು. ಎಲ್ಲಾ ಕಾಯಕವೂ

ಶ್ರೇಷ್ಠವೆಂದು ಕಾಕತೀಯ ಅರಸನಾಗಿರುವ ಗಣಪತಿರಾಯ ಒಪ್ಪಿಕೊಂಡಿದ್ದಾನೆ. ಆದ್ದರಿಂದ ಹೆಂಡದ ಮಾರಯ್ಯನಂತಹ ಶರಣನನ್ನು ಗೌರವದಿಂದ ಕಂಡು ಅರಮನೆಯಲ್ಲಿ ಚಿತ್ರಪಟಗಳನ್ನು ಹಾಕಿಕೊಂಡಿರಬೇಕೆನಿಸುತ್ತದೆ. ಹೆಂಡದ ಮಾರಯ್ಯನ ಬಗ್ಗೆ ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ಈ ಕೆಳಗಿನಂತೆ ವಿವರಿಸಲಾಗಿದೆ.

"ಹೆಂಡದ ಮಾರಯ್ಯಗೆ ಖಂಡುಗಕ್ಕಿಯ ನೇಮ
ಕಂಡಲ್ಲಿ ಜಂಗಮಕೆ ಎಡೆಮಾಡಿ|| ನೀಡಿದ
ಹೆಂಡದ ಮಾರಯ್ಯಗಳ ಪಟವಿದೆ."[೪೦]

ಮೌಖಿಕ ಪರಂಪರೆಯಿಂದ ಬಂದ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಲಭ್ಯವಾದ ಕಪ್ಪೇ ಅರಭಟ್ಟನ ಶಾಸನದಲ್ಲಿ ತ್ರಿಪದಿಯಂತಹ ಛಂದಸ್ಸೊಂದನ್ನು ಆಯ್ಕೆ ಮಾಡಿಕೊಂಡು, ಕವಿಚನ್ನನು ತ್ರಿಪದಿಯ ಮೂಲಕ ಗುಂಡಬ್ರಹ್ಮಯ್ಯಗಳ ಚರಿತ್ರವನ್ನು ಕಟ್ಟಿಕೊಡುವುದರ ಜೊತೆಗೆ ಇನ್ನಿತರ ಶರಣರ ಬಗ್ಗೆ ಉಲ್ಲೇಖಿಸಿರುವುದು ವಿಶೇಷವಾಗಿದೆ. ಆದ್ದರಿಂದ ಐತಿಹಾಸಿಕ ಅಂಶಗಳು ನಮಗೆ ಲಭ್ಯವಾಗಿವೆ.

ಗೊಲ್ಲಾಳ

ಕಾಟಕೋಟನೆಂಬ ಕುರುಬನಿಗೆ ಗೊಲ್ಲಾಲನೆಂಬ ಮಗನಿದ್ದನು. ಈತ ಕುರಿ ಕಾಯುತ್ತಿರುವಾಗ, ಕಾವಡಿಯನ್ನು ಹೊತ್ತು ಶ್ರೀಶೈಲಕ್ಕೆ ಹೋಗುತ್ತಿದ್ದನು. ಮುದುಕನೊಬ್ಬ ಈತನಿಗೆ ಶ್ರೀಶೈಲದಿಂದ ಲಿಂಗಗಳನ್ನು ತಂದುಕೊಡುವುದಾಗಿ ಹೇಳಿದ್ದನು. ಹಿಂತಿರುಗುವಾಗ ಆ ಮುದುಕ ಲಿಂಗತರುವುದನ್ನು ಮರೆತು ಬಂದಿದ್ದ. ಆದ್ದರಿಂದ ಗೊಲ್ಲಾಳ ಲಿಂಗವನ್ನು ಬೇಡಿದಾಗ, ಕುರಿಯ ಹಿಕ್ಕೆಯನ್ನು ಲಿಂಗವೆಂದು ಹೇಳಿ, ಲಿಂಗಪೂಜಾ ವಿಧಾನವನ್ನು ಅವನಿಗೆ ಹೇಳಿಕೊಟ್ಟ. ಗೊಲ್ಲಾಳ ಆ ಹಿಕ್ಕೆಯನ್ನೇ ಭಕ್ತಿಯಿಂದ ಪೂಜಿಸುತಿದ್ದನು. ಕುರಿಗಳ ಹಾಲೆಲ್ಲ ದೇವರಿಗೆ ಅರ್ಪಣೆಯಾಗುತ್ತಿತ್ತು. ತಂದೆಯಾದ ಕಾಟಕೋಟ ಇದನ್ನು ಪತ್ತೆಹಚ್ಚಿ ಸಿಟ್ಟಿನಿಂದ ಕುರಿ ಹಿಕ್ಕೆಯನ್ನು ತುಳಿದುಹಾಕಿದ. ತನ್ನ ಲಿಂಗ ಹೋಯಿತೆಂಬ ದುಃಖದಲ್ಲಿ ತಂದೆಯನ್ನು ಕೊಡಲಿಯಿಂದ ತುಂಡರಿಸಿಹಾಕಿದ. ಇವನ ಭಕ್ತಿಗೆ ಮೆಚ್ಚಿ ಶಿವನು ಪ್ರತ್ಯಕ್ಷನಾದನು.

ಗೊಲ್ಲಾಳನ ಶಿವನಿಷ್ಠೆಗೆ ತಂದೆ ಭಂಗಪಡಿಸಿದ್ದಕ್ಕೆ ಸ್ವತಃ ತಂದೆಯನ್ನೆ ಕೊಂದು ಭಕ್ತಿಯನ್ನು ಮೆರೆದನು. ಶಿವಭಕ್ತಿಯ ಮುಂದೆ ಯಾರೂ ಶ್ರೇಷ್ಠವಲ್ಲವೆಂದು ಗೊಲ್ಲಾಳನ ಉದ್ದೇಶವಾಗಿತ್ತು. ಶಿವನಿಷ್ಠೆ ಪ್ರದರ್ಶಿಸಿದ ಗೊಲ್ಲಾಳನ ಬಗ್ಗೆ 'ಗುಂಡಬ್ರಹ್ಮಯ್ಯಗಳ ಸಾಹಿತ್ಯ'ದಲ್ಲಿ ಉಲ್ಲೇಖಿಸಲಾಗಿದೆ. ಗೊಲ್ಲಾಳನ ಚಿತ್ರಪಟವು ಗಣಪತಿರಾಯನ ಆಸ್ಥಾನದಲ್ಲಿ ಗೋಡೆಗಳ ಮೇಲಿದೆ. ಈ ಕೃತಿಯಲ್ಲಿ ಬರುವ ಗೊಲ್ಲಾಳನ ಚಿತ್ರಪಟದ ಬಗ್ಗೆ ಕೆಳಗಿನಂತೆ ಪ್ರಸ್ತಾಪಿಸಲಾಗಿದೆ.

"ನಂಬಿ ಪರಮರಾಯ ಕೆಂಬಾವಿ ಭೋಗಣ್ಣ
ತಂದೆಯ ಶಿರವ ತರದಾನು|| ಗೊಲ್ಲಾಳನ
ಅಂದದ ಪಟವು ಬರದಿದೆ.

ಒಂದು ಪಾದದ ಮೇಲೆ ಒಂದು ಪಾದವನೂರಿ
ಚಂದದಿ ಕೊಳಲ ನುಡಿಸಿದ|| ಗೊಲ್ಲಾಳನ
ಅಂದದ ಪಟವು ಬರೆದಿದೆ.”[೪೧]

ಹೀಗೆ ಓರಂಗಲ್ಲಿನ ಅರಮನೆಯಲ್ಲಿರುವ ಗೊಲ್ಲಾಳನ ಚಿತ್ರಪಟಗಳನ್ನು ವಿವರಿಸಲಾಗಿದೆ. ಗೊಲ್ಲಾಳನು ಕೊಳಲು ನುಡಿಸುವುದರಲ್ಲಿ ಪರಿಣಿತಿ ಪಡೆದಿರುವನು. ಆದ್ದರಿಂದ ಚಂದದಿಂದ ಕೊಳಲನ್ನು ನುಡಿಸಿದಂತಹ ಗೊಲ್ಲಾಳನ ಪಟವು ಇದೆ ಎಂದು ಉಲ್ಲೇಖಿಸಲಾಗಿದೆ. ಈತನು ಕ್ರಾಂತಿಕಾರಕ ಭಕ್ತಿಯ ಶಿವಪಾರಮ್ಯ ಮೆರೆದನು. ಆದ್ದರಿಂದ ಈ ಭಕ್ತಿಯ ಪ್ರತೀಕವಾಗಿ ಚಿತ್ರಪಟವನ್ನು ಅರಮನೆಯ ಗೋಡೆಯ ಮೇಲೆ ಹಾಕಲಾಗಿದೆ.

ಸಿಂಧು ಬಲ್ಲಾಳ

ಸಿಂಧು ಬಲ್ಲಾಳನು ಪರಮ ಶಿವಭಕ್ತನಾಗಿದ್ದನು. ಈತನ ಭಕ್ತಿಯನ್ನು ಪರೀಕ್ಷಿಸುವುದಕ್ಕಾಗಿ ಶಿವನು ಜಂಗಮರೂಪಿನಿಂದ ಬಂದು ಅವನ ಸತಿಯನ್ನು ಬೇಡಲು, ರಾಯನು ಹಿಂದು ಮುಂದು ನೋಡದೆ ತನ್ನ ಸತಿಯನ್ನು ಅವನ ಬಳಿಗೆ ಕಳುಹಿಸಿದನು. ಅವಳು ನಿದ್ದೆ ತಿಳಿದಾಗ ಶಿಶುವಾಗಿ ಮೊಲೆಯುಣ್ಣುತ್ತಿರಲು, ರಾಜ ರಾಣಿಯರು ಆಶ್ಚರ್ಯಚಕಿತರಾದರು. ಶಿವನು ಅವರನ್ನು ಕೈಲಾಸಕ್ಕೆ ಕರೆದೊಯ್ದನು. ಓರಂಗಲ್ಲಿನ ಅರಮನೆಯಲ್ಲಿರುವ ಚಿತ್ರಪಟದ ಬಗ್ಗೆ ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ವಿವರಿಸಲಾಗಿದೆ. ಸಿಂಧುಬಲ್ಲಾಳನ ಶಿವನಿಷ್ಠೆಯನ್ನು ಈ ಕೆಳಗಿನಂತೆ ಕಾಣಬಹುದು.

“ಸಿಂಧು ಬಲ್ಲಾಳನ ಹೆಂಡತಿಯ ಶಿವಬೇಡೆ
ಆ ಬಾಲೆಯನು ಕೊಟ್ಟ ಶಿವನಿಗೆ|| ನೀವು ಅವಳ
ಕಂದನಾದಂತ ಪಟವಿದೆ”[೪೨]

ಈ ರೀತಿ ಬಲ್ಲಾಳನ ಶಿವನಿಷ್ಠೆಯನ್ನು ಈ ಕಾವ್ಯದಲ್ಲಿ ವಿವರಿಸಲಾಗಿದೆ. ಗಣಪತಿರಾಯನ ಆಸ್ತಾನದ ಚಿತ್ರಪಟಗಳಲ್ಲಿ ಸಿಂಧು ಬಲ್ಲಾಳನ ಚಿತ್ರಪಟವೂ ಒಂದಾಗಿದೆ. ಗಣಪತಿರಾಯನು ಎಲ್ಲಾ ಶರಣರ ಅಥವಾ ಮಹಾಪುರುಷರ ತತ್ವ ಸಿದ್ಧಾಂತಗಳನ್ನು ಅರಿತವನಾಗಿದ್ದಾನೆ. ಆದ್ದರಿಂದ ಶಿವಧರ್ಮಕ್ಕೆ ಶರಣಾಗಿ ಈ ಚಿತ್ರಪಟಗಳನ್ನು ಹಾಕಿರಬಹುದು.

ಬಿಲ್ಲಮ

ವೀರಶೈವ ದೀಕ್ಷೆ ಹೊಂದಿದ ಬಿಲ್ಲಮನು ಸತಿಯೊಡನೆ ಚರಲಿಂಗ ಪೂಜೆ ನಡೆಸುತ್ತಿದ್ದನು. ಈತನ ಗುರು ಚನ್ನಮ್ಮನೆಂಬ ದೊಂಬರ ಸ್ತ್ರೀಯನ್ನು ಮೋಹಿಸಿ ಅವಳೊಡನೆ ಹೊರಟು ಹೋದನು. ರಾಜನು ಏಕಾಂತದಲ್ಲಿ ಗುರುವನ್ನು ಕಂಡು, ಅವನ ಇಷ್ಟದಂತೆ ಚೆನ್ನಮ್ಮನಿಂದ ಪ್ರಸಾದವನ್ನು ಸ್ವೀಕರಿಸಿ ಶಿವಕೃಪೆ ಪಡೆದನು. ಈ ಬಿಲ್ಲಮನ ಬಗ್ಗೆ ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ಕೆಳಗಿನಂತೆ ಹೇಳಲಾಗಿದೆ.

"ಗುರುವೆ ಶಿವನೊಡನೆ ವರ ಶಿಷ್ಯ ಹೇಸದೆ
ಕರವಂತ ಶಿಷ್ಯನಕೊಂಡು || ಕೈಲಾಸದ
ಪುರಕ್ಕೆ ಬಿಲ್ಲಮ ಹೋದ ಪಟವಿದೆ."[೪೩]

ಸುಂಕದ ಬಂಕಣ್ಣ

ಈತನ ಬಿಜ್ಜಳನಿಗೆ ಕೊಡಬೇಕಾದ ೧೨ ಸಹಸ್ರ ಹೊನ್ನನ್ನು ಪಡೆಯುವುದಕ್ಕಾಗಿ ಬಸವಣ್ಣನ ಬಳಿಗೆ ಬರುತ್ತಿರಲು, ದಾರಿಯಲ್ಲಿ ಇದಿರಾದ ಕಲಕೇತ ಬ್ರಹ್ಮಯ್ಯರು ತನ್ನ ಕೈಲಿದ್ದ ತರಗನ್ನು ಕೊಡಹಿ ಹೊನ್ನ ಸುರಿಸಿದನು. ಬಂಕಣ್ಣನು ಅದರಿಂದ ತನ್ನ ಸಾಲವನ್ನು ತೀರಿಸಿ ಜಂಗಮಾರ್ಚನೆ ಮಾಡುತ್ತ ಸುಖವಾಗಿದ್ದನು.

ಮಲುಹಣ

ಮಾಣಿಕದೇವಿ ಮತ್ತು ಸುವರ್ಣ ಬಟ್ಟರ ಮಗನಾದ ಇವನು ನರ್ತಕಿ ಪದ್ಮಾವತಿಯ ಮಗಳು ಮಲುಹಣೆಯೆಂಬುವಳನ್ನು ಮೋಹಿಸಿ ಅವಳನ್ನು ಕೂಡಿದನು. ಆತನ ಅಪಾರವಾದ ಧನವೆಲ್ಲವನ್ನು ಸುಲಿದುಕೊಂಡು ಪದ್ಮಾವತಿ ಅವನನ್ನು ಹೊರ ಓಡಿಸಲು, ಅವನು ಅವಳನ್ನು ಬಿಟ್ಟಿರಲಾರದೆ, ಬೆಳಿಗ್ಗೆ ಹೋಗಿ ಅವಳ ದನಿಯನ್ನಾದರೂ ಕೇಳವೆನೆಂದು ನಿಂತಿರಲು, ಮಲುಹಣೆ ಕಂಡು ಶಿವನನ್ನಾದರೂ ದ್ಯಾನಿಸು ಎನ್ನಲು, ಇವನು ವಿಜಯೇಶ್ವರ ಲಿಂಗದ ಬಳಿಗೆ ಹೋಗಿ ಶಿವನನ್ನು 'ಕಾಂತಾ ಕಚಪ್ರಚಯ'ನೆಂದು ಹೊಗಳಿ, ಕಟಕಿವಾತಿನಿಂದ ನುತಿಸಿ, ಕೃಪೆ ಪಡೆದನು.

ಈ ಮೇಲಿನಂತೆ ಎಲ್ಲಾ ಶರಣರು ಶಿವನ ಪಾರಮ್ಯವನ್ನು ಮೆರೆದರು. ಇದಕ್ಕಾಗಿ ಗಣಪತಿರಾಯನು ಶಿವಶರಣರ ಚಿತ್ರಪಟಗಳನ್ನು ಅರಮನೆಯಲ್ಲಿ ಹಾಕಿಕೊಂಡಿದ್ದಾನೆ. ಕವಿಚನ್ನನ ತ್ರಿಪದಿಯಲ್ಲಿ ಬರುವ ಶರಣರ ಚಿತ್ರಗಳನ್ನು ಕೆಳಗಿನಂತೆ ಹೆಸರಿಸಲಾಗಿದೆ.

"ಶಂಕರದಾಸಯ್ಯ ಸುಂಕದ ಬಂಕಯ್ಯ
ಲೆಂಕಯ್ಯ ಮಂಚಯ್ಯ ಮಲುಹಯ್ಯ|| ಮೊದಲಾದ
ಶಂಕರನ ಪಟವು ಬರೆದಿರೆ"[೪೪]

ಗಣಪತಿರಾಯನ ಚಿತ್ರಶಾಲೆಯಲ್ಲಿ ರಾಶಿ ರಾಶಿ ಶರಣರ ಚಿತ್ರಪಟಗಳನ್ನು ಗೋಡೆಗಳ ಮೇಲೆ ಹಾಕಲಾಗಿದೆ. ಆದ್ದರಿಂದ ಈ ಕಾವ್ಯದಲ್ಲಿ ಚಿತ್ರವನ್ನು ನೋಡಲು ಹತ್ತೆಂಟು ದಿನಬೇಕೆಂದು ಶಿವನು ನಾರದನಿಗೆ ಹೇಳುತ್ತಾನೆ. ಶರಣರ ದೃಷ್ಟಿಯಲ್ಲಿ ಭಕ್ತಿಯಂದರೆ ಭಜನೆಯಲ್ಲ. ಬದಲಾಗಿ ಅಂತರಂಗ ಬಹಿರಂಗ ಶುದ್ಧಿಗೊಂಡ ಸಾಧಕನ ಮಾನವ ಪ್ರೀತಿ ಮತ್ತು ಸೇವೆಯೇ ನಿಜವಾದ ಭಕ್ತಿಯಾಗಿದೆ. ಇಂತಹ ಸಿದ್ಧಾಂತವನ್ನು ಬಹುತೇಕ ವಚನಕಾರರು ಇಟ್ಟುಕೊಂಡಿದ್ದಾರೆ. ಆದ್ದರಿಂದ ಗಣಪತಿರಾಯನು ಶರಣರ ನಡೆ-ನುಡಿ-ಸಿದ್ಧಾಂತಗಳನ್ನು ಗೌರವಿಸಿ, ಇವರ ಹಾದಿಯಲ್ಲಿ ಸಾಗುವ ಸಂಕೇತವಾಗಿ ಚಿತ್ರಪಟಗಳನ್ನು ಅರಮನೆಯ ಗೋಡೆಗಳ ಮೇಲೆ ಹಾಕಿರಬೇಕು. ಈ ಮೂಲಕ ಗುಂಡಬ್ರಹ್ಮಯ್ಯಗಳ ಸಾಹಿತ್ಯವು ಐತಿಹಾಸಿಕ ಮಹತ್ವ ಪಡೆದಿದೆ.

ಶರಣರ ಶೈವಧರ್ಮದ ನೆಲೆಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡ ರೀತಿ ಅಸಾಧಾರಣವಾಗಿದೆ. ಬಸವಣ್ಣ ಮತ್ತು ಅಲ್ಲಮಪ್ರಭುವಿನಂತ ಮುಂಚೂಣಿ ನಾಯಕರ ಬೆಂಬಲವು ಕೆಲಸ್ಥರದ ಸಾಮಾಜಿಕ ಜೀವನ ನಡೆಸುತ್ತಿದ್ದವರಿಗೆ ಮೇಲುಸ್ಥರದ ಶರಣರಾಗಲು ಅವಕಾಶ ನೀಡಿತು. ಮತ್ತು ಅಪೂರ್ವ ಜನಾಂದೋಲನವಾಗಲು ಪ್ರೋತ್ಸಾಹಿಸಿದ್ದೆ ಕರ್ನಾಟಕದ ಶರಣ ಚಳುವಳಿಯ ಮಹತ್ವದ ಬದಲಾವಣೆಯಾಗಿದೆ. ಈ ಬದಲಾವಣೆಯ ಗಾಳಿ ಆಂಧ್ರಕ್ಕೂ ಬೀಸಿ ಅರಸರ ಬೆಂಬಲದೊಂದಿಗೆ ಓರಂಗಲ್ಲಿನ ಸಾಮಾಜಿಕ ಜೀವನದಲ್ಲಿ ಸಂಚಲನ ಮೂಡಿಸಿತು. ಇದರಿಂದ ಶರಣಚಳುವಳಿಯ ಮುಖ್ಯ ಧ್ಯೇಯವಾದ ಆದರ್ಶ ಸಮಾಜದ ಕಟ್ಟುವಿಕೆಗೆ ಪ್ರೇರಣೆ ನೀಡಿತು. ಇದು ಕರ್ನಾಟಕ ಆಂಧ್ರದ ಸೇತುವೆಯಾಗಿ ಕಾರ್ಯ ನಿರ್ವಹಿಸಿತು. ಆದ್ದರಿಂದ ಕಾಕತೀಯರು ಸಾಹಿತ್ಯ, ಕಲೆ, ರಾಜಾಶ್ರಯ ನೀಡಿದರು. ಜೊತೆಗೆ ವೀರಶೈವ ಧರ್ಮದ ಭದ್ರ ನೆಲೆಯನ್ನು ಒದಗಿಸಲು ಅವಕಾಶವಿತ್ತರು. ಇವರಲ್ಲಿ ಗಣಪತಿರಾಯನು ಪ್ರಮುಖವಾಗಿದ್ದಾನೆ. ಈತನ ಅರಮನೆಯ ಚಿತ್ರಪಟಗಳ ಮೂಲಕ ಮಧ್ಯಕಾಲೀನ ಕರ್ನಾಟಕದ ಸಮಗ್ರ ಆಯಾಮಗಳು ಮಾತ್ರವಲ್ಲದೆ, ಮಧ್ಯಕಾಲೀನ ಆಂಧ್ರನಾಡಿನ ಜೀವನದ ಸಮಗ್ರ ಆಯಾಮಗಳ ಅಭಿವ್ಯಕ್ತಿಯಾಗಿದೆ. ಈ ಹಿನ್ನಲೆಯಲ್ಲಿ ಗುಂಡಬ್ರಹ್ಮಯ್ಯಗಳ ಸಾಹಿತ್ಯವು ಪ್ರಸ್ತುತ ಸಂದರ್ಭದಲ್ಲಿ ಮುಖ್ಯವೆನಿಸುತ್ತದೆ.

ಶರಣರು ಕ್ಷತ್ರಿಯ ಧರ್ಮ, ರಾಜಧರ್ಮದಿಂದ ವಿಮುಖಗೊಳಿಸಿ ಮನುಷ್ಯ ಧರ್ಮವನ್ನು ಎತ್ತಿ ಹಿಡಿದರು. ಇಲ್ಲಿ ಮಾನವೀಯ ಧರ್ಮವು ಶೈವಧರ್ಮವಾಗಿ ಕೆಲಸ ಮಾಡಿದೆ. ಈ ಮೂಲಕ ಸಾಹಿತ್ತಿಕ ಕೃತಿಯೊಳಗೆ ಐತಿಹಾಸಿಕ ನೆಲೆ ಚಾರಿತ್ರಿಕ ಪ್ರಜ್ಞೆಯ ನೇರ ಪರಿಣಾಮ ಗುಂಡಬ್ರಹ್ಮಯ್ಯಗಳ ಸಾಹಿತ್ಯದ ಮೇಲಾಗಿದೆ. ಕ್ಷತ್ರಿಯ ಧರ್ಮದ ಕೆಲಸ ಮತ್ತು ಶರಣ ಧರ್ಮದ ಕೆಲಸ ಬೇರೆ ಬೇರೆಯಾಗಿದೆ. ಈ ಎರಡನ್ನು ಒಂದುಗೂಡಿಸುವ ಮೂಲಕ ಶರಣಧರ್ಮ ಮತ್ತು ರಾಜಧರ್ಮ ಮಿಲನಗೊಂಡಿರುವುದನ್ನು ಕಾಣಬಹುದು. ಲೌಕಿಕವಾದ ಆಸೆಗೆ ಮಿತಿಯಿಲ್ಲವೆಂದು ಇದಕ್ಕೊಂದು ಚೌಕಟ್ಟು ಹಾಕಿ, ಅಲೌಕಿಕ ಮಾರ್ಗದೆಡೆಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಚಿತ್ರಪಟಗಳು ಅಭಿವ್ಯಕ್ತಿಗೊಂಡಿವೆ. ಅಲೌಕಿಕ ನೆಲೆಗೆ ಕೊಂಡೊಯ್ಯಲು ಶರಣರ ತತ್ವ ಸಿದ್ಧಾಂತಗಳು ಮುಖ್ಯವಾಗಿವೆ. ಆದ್ದರಿಂದ ಶರಣರನ್ನು ಚಿತ್ರಪಟಗಳಲ್ಲಿ ಕಾಣಬಹುದು. ಗಣಪತಿರಾಯನು ಶರಣಧರ್ಮವನ್ನು ಅನುಸರಿಸುವುದರಿಂದ ಶರಣರ ಚಿತ್ರಪಟಗಳನ್ನು ಹಾಕಿಕೊಂಡಿದ್ದಾನೆ. ಇದರಿಂದ ರಾಜಧರ್ಮವು ಶರಣ ಧರ್ಮಕ್ಕೆ ವಿಮುಖಗೊಂಡು ಮನುಷ್ಯ ಧರ್ಮವಾಗಿ ನೆಲೆಯೂರಿರುವುದನ್ನು ಈ ಕಾವ್ಯದಲ್ಲಿ ಕಾಣಬಹುದು.

ಈ ಕಾವ್ಯದಲ್ಲಿ ಬರುವ ಚಿತ್ರಪಟಗಳು ಧಾರ್ಮಿಕವಾದ ಚೌಕಟ್ಟು ದಾಟುವ ಮತ್ತು ಸಾಂಸ್ಕೃತಿಕವಾಗಿ ಒಗ್ಗೂಡುವ ನೆಲೆಯಲ್ಲಿರುವುದನ್ನು ಕಾಣಬಹುದು. ಆದರ್ಶವಾದವನ್ನು ಸಾರುವ ಮತ್ತು ಬಹುಮುಖಿನೆಲೆಯ ಬದುಕನ್ನು ಕಟ್ಟಿಕೊಡುವಂತಹ ರೀತಿಯಲ್ಲಿ ಅರಮನೆಯ ಶರಣರ ಚಿತ್ರಪಟಗಳು ಗೋಚರಿಸುತ್ತವೆ. ಇವುಗಳಿಂದ ಅಂತಿಮವಾಗಿ ಸಿಗುವುದು ರಾಜಧರ್ಮ ಮತ್ತು ಶರಣಧರ್ಮ ಸಂಘರ್ಷಕ್ಕಿಳಿಯದೆ

ಸಮನ್ವಯತೆಯಿಂದ ಸಾಧಿಸಿದ್ದು ಅತಿಮುಖ್ಯ. ಆ ಸಮನ್ವಯದ ಹೊಸ ಉತ್ಪನ್ನವೇ ಗುಂಡಬ್ರಹ್ಮಯ್ಯಗಳ ಸಾಹಿತ್ಯವಾಗಿದೆ.

ಅಡಿಟಿಪ್ಪಣಿಗಳು

೧. ಗುಂಡಬ್ರಹ್ಮಯ್ಯಗಳ ಸಾಹಿತ್ಯ : ಸಂ. ಡಾ. ಕೆ. ರವೀಂದ್ರನಾಥ ಪುಟ ೯, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೨. ಅದೇ. ಪುಟ ೧೦.

೩. ಅದೇ. ಪುಟ ೧೧.

೪. ಗುಂಡಬ್ರಹ್ಮಯ್ಯಗಳ ಚರಿತ್ರೆ (ಸುಪ್ಪಿ) : ಸಂ. ಡಾ. ವಿ. ಶಿವಾನಂದ, ಪುಟ ೨೭, ಅಖಂಡೇಶ್ವರ ಗ್ರಂಥಮಾಲೆ ಜೇವರ್ಗಿ. ಜಿ. ಗುಲ್ಬರ್ಗ, ೧೯೭೪.

೫. ದೇವಗಂಗೆ : ಬಿ. ಶಿವಮೂರ್ತಿಶಾಸ್ತ್ರಿಗಳ ಷಷ್ಟ್ಯಬ್ದಶಾಂತಿ ಸಮಾರಂಭ ಸಮಿತಿ ಬೆಂಗಳೂರು, ಪುಟ ೨೦೪, ೧೯೬೮.

೬. ಶಿವಶರಣ ಕಥಾರತ್ನಕೋಶ : ತ. ಸು. ಶಾಮರಾಯ. ಪುಟ ೨೪೬, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಮೈಸೂರು, ೨೦೦೩.

೭. ಅದೇ. ಪುಟ ೨೪೪.

೮. ಅದೇ. ಪುಟ ೬೨.

೯. ಅದೇ. ಪುಟ ೧೯೫.

೧೦. ಅದೇ. ಪುಟ ೨೯೮.

೧೧. ಅದೇ ಪುಟ ೪೩೦.

೧೨. ಅದೇ. ಪುಟ ೪೩೦.

೧೩. ಅದೇ. ಪುಟ ೧೫೫.

೧೪. ಅದೇ. ಪುಟ ೭೮.

೧೫. ಗುಂಡಬ್ರಹ್ಮಯ್ಯಗಳ ಸಾಹಿತ್ಯ : ಸಂ. ಡಾ. ಕೆ. ರವೀಂದ್ರನಾಥ, ಪುಟ ೫, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೧೬. ಶಿವಶರಣರ ಕಥಾರತ್ನಕೋಶ : ತ. ಸು. ಶಾಮರಾಯ, ಪುಟ ೧೨೬, ತಳುಕಿನ ವೆಂಕಟಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು. ೨೦೦೩.

೧೭. ಗುಂಡಬ್ರಹ್ಮಯ್ಯಗಳ ಸಾಹಿತ್ಯ : ಸಂ. ಡಾ. ಕೆ. ರವೀಂದ್ರನಾಥ, ಪುಟ ೮೨, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೧೮. ಅದೇ. ಪುಟ ೮೩.

೧೯. ಅದೇ. ಪುಟ ೪೪.

೨೦. ಅದೇ. ಪುಟ ೭೯.

೨೧. ಅದೇ ಪುಟ ೮೦.

೨೨. ಅದೇ. ಪುಟ ೮೦.

೨೩. ಶಿಲ್ಪಗಳಲ್ಲಿ ಶಿವಭಕ್ತರು : ವಿನೋದಾ ಪಾಟೀಲ್, ಪುಟ ೧೭೫, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೩.

೨೪. ಗುಂಡಬ್ರಹ್ಮಯ್ಯಗಳ ಸಾಹಿತ್ಯ : ಸಂ. ಡಾ. ಕೆ. ರವೀಂದ್ರನಾಥ, ಪುಟ ೮೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೨೫. ಅದೇ. ಪುಟ ೮೦.

೨೬. ಶಿಲ್ಪಗಳಲ್ಲಿ ಶಿವಭಕ್ತರು: ವಿನೋದಾ ಪಾಟೀಲ್, ಪುಟ. ೧೪೫, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೩.

೨೭. ಗುಂಡಬ್ರಹ್ಮಯ್ಯಗಳ ಸಾಹಿತ್ಯ : ಸಂ. ಡಾ. ಕೆ. ರವೀಂದ್ರನಾಥ, ಪುಟ ೮೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೨೮. ಶಿಲ್ಪಗಳಲ್ಲಿ ಶಿವಭಕ್ತರು : ವಿನೋದಾ ಪಾಟೀಲ್, ಪುಟ. ೧೭೯, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೩

೨೯. ಗುಂಡಬ್ರಹ್ಮಯ್ಯಗಳ ಸಾಹಿತ್ಯ : ಸಂ. ಡಾ. ಕೆ. ರವೀಂದ್ರನಾಥ, ಪುಟ.೮೧ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೩೦. ಶಿವಶರಣ ಸಂಪುಟ : ದೇವಿರಪ್ಪ.ಎ.ಚಿ. ಪುಟ ೧೦೪.

೩೧. ಅದೇ. ಪುಟ ೧೦೫.

೩೨. ಗುಂಡಬ್ರಹ್ಮಯ್ಯಗಳ ಸಾಹಿತ್ಯ : ಸಂ. ಡಾ. ಕೆ. ರವೀಂದ್ರನಾಥ, ಪುಟ ೮೨, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೩೩. ಅದೇ. ಪುಟ ೮೨.

೩೪. ಶಿವಶರಣ ಸಂಪುಟ : ದೇವಿರಪ್ಪ.ಎ.ಚಿ. ಪುಟ ೬೩.

೩೫. ಅದೇ. ಪುಟ ೯೫.

೩೬. ಅದೇ.ಪುಟ ೬೫.

೩೭. ಗುಂಡಬ್ರಹ್ಮಯ್ಯಗಳ ಸಾಹಿತ್ಯ : ಸಂ. ಡಾ. ಕೆ. ರವೀಂದ್ರನಾಥ, ಪುಟ ೮೦, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೩೮. ಶಿಲ್ಪಗಳಲ್ಲಿ ಶಿವಭಕ್ತರು : ವಿನೋದಾ ಪಾಟೀಲ್, ಪುಟ.೧೨೦, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೩.

೩೯. ಗುಂಡಬ್ರಹ್ಮಯ್ಯಗಳ ಸಾಹಿತ್ಯ : ಸಂ. ಡಾ. ಕೆ. ರವೀಂದ್ರನಾಥ, ಪುಟ ೮೨, ಪ್ರಸರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೪೦. ಅದೇ. ಪುಟ ೮೦.

೪೧. ಅದೇ. ಪುಟ ೮೧.

೪೨. ಅದೇ. ಪುಟ ೮೧.

೪೩. ಅದೇ. ಪುಟ ೮೨.

೪೪. ಗುಂಡಬ್ರಹ್ಮಯ್ಯಗಳ ಚರಿತ್ರೆ (ಸುವ್ವಿ) ಸಂ. ವಿ. ಶಿವಾನಂದ, ಪುಟ ೫೧, ಅಖಂಡೇಶ್ವರ ಗ್ರಂಥಮಾಲೆ ಜೇವರಗಿ ಜಿ.ಗುಲ್ಬರ್ಗ, ೧೯೭೪.

ಅಧ್ಯಾಯ-ನಾಲ್ಕು

ಗುಂಡಬ್ರಹ್ಮಯ್ಯಗಳ ಸಾಹಿತ್ಯ ವಿಶ್ಲೇಷಣೆ

ಕವಿಗಳ ಇತಿವೃತ್ತ
ಗುಂಡಬ್ರಹ್ಮಯ್ಯಗಳ ಇತಿವೃತ್ತ
ಸಾಹಿತ್ಯ ಪ್ರಕಾರಗಳು
ಕವಿ-ಕಾವ್ಯ ಮಹೋನ್ನತಿ
ವಸ್ತು-ಕಥನ ತಂತ್ರ ಮತ್ತು ಶೈಲಿ

ಅಧ್ಯಾಯ-ನಾಲ್ಕು

ಗುಂಡಬ್ರಹ್ಮಯ್ಯಗಳ ಸಾಹಿತ್ಯ ವಿಶ್ಲೇಷಣೆ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ೧೦ನೇ ಶತಮಾನವು ಚಂಪೂ ಸಾಹಿತ್ಯದ ಸುವರ್ಣಯುಗವಾಗಿದೆ. ಪಂಪ, ಪೊನ್ನ, ರನ್ನ, ಜನ್ನ ಮುಂತಾದ ಜೈನ ಕವಿಗಳು ಮೌಲಿಕವಾದ ಕೃತಿಗಳನ್ನು ರಚಿಸಿದರು. ಲೌಕಿಕ ಮತ್ತು ಆಗಮಿಕ ಎಂಬ ಎರಡು ಕಾವ್ಯ ಮಾದರಿಯಲ್ಲಿ ಕೃತಿಗಳು ರಚನೆಯಾದವು. ಈ ಸಮಯದಲ್ಲಿ ಜೈನಮತದ ಪ್ರಾಬಲ್ಯ ಇರುವುದರಿಂದ ಕವಿಗಳು ಮತನಿಷ್ಠವಾಗಿ ಕಾವ್ಯ ರಚನೆ ಮಾಡಿದರು. ಮಾರ್ಗ ಪರಂಪರೆಯ 'ಚಂಪೂ' ಸಾಹಿತ್ಯ ರೂಪವನ್ನು ಬಳಕೆ ಮಾಡಲಾಯಿತು. ಮಹಾಕಾವ್ಯದ ಲಕ್ಷಣಗಳ ಛಾಯೆ, ಅಷ್ಟಾದಶ ವರ್ಣನೆ, ನವರಸಗಳ ಬಳಕೆಯಿಂದಾಗಿ ಈ ಕಾವ್ಯಗಳು ಪಾಂಡಿತ್ಯಮುಖಿಗೊಂಡವು. ರಾಜಾಶ್ರಯದಲ್ಲಿ ಸೃಷ್ಠಿಯಾದ ಮಾರ್ಗ ಸಾಹಿತ್ಯವು ಧರ್ಮಕೇಂದ್ರಿತ ನೆಲೆಯಲ್ಲಿ ಹುಟ್ಟಿಕೊಂಡಿತು. ರಾಜರನ್ನು ಓಲೈಸುವ ಮತ್ತು ಪಾಂಡಿತ್ಯ ಪ್ರದರ್ಶಿಸುವ ರೀತಿಯಲ್ಲಿ ರಚನೆಗೊಂಡವು. ಹೀಗಾಗಿ ಈ ಕಾಲದ ಕಾವ್ಯಗಳು ಜನಮುಖಿಗೊಳ್ಳಲಿಲ್ಲ. ಆದ್ದರಿಂದ ಈ ಅವಧಿಯ ಕನ್ನಡ ಸಾಹಿತ್ಯವು ಶಿಷ್ಟ ಪರಿಭಾಷೆಗೆ ಸೀಮಿತಗೊಂಡಿತು.

ಮಧ್ಯಕಾಲೀನ ಸಂದರ್ಭದಲ್ಲಿ ಜನಸಾಮಾನ್ಯರಿಗೆ ಹತ್ತಿರವಾದ ಭಾಷೆ, ನುಡಿಗಟ್ಟು, ದೇಶಿ ಮಟ್ಟುಗಳನ್ನು ಬಳಸಿದರ ಫಲವಾಗಿ ಮಾರ್ಗ ಸಾಹಿತ್ಯದಿಂದ ಬಿಡುಗಡೆಗೊಂಡು, ದೇಶಿ ಸಾಹಿತ್ಯ ಸೃಷ್ಟಿಯಾಯಿತು. ಈ ಕಾಲದ ಸಾಹಿತ್ಯದ ಭಾಷೆ ನಡುಗನ್ನಡವಾಗಿದ್ದು ಹಳಗನ್ನಡದ ಕ್ಲಿಷ್ಟತೆಯಿಂದ ಸಂಕ್ರಮಣಗೊಂಡಿತು. ವಚನ, ಕೀರ್ತನೆ, ರಗಳೆ, ಷಟ್ಪದಿಗಳಲ್ಲಿ ನಡುಗನ್ನಡದ ಪರಾಕಾಷ್ಠತೆ ಕಾಣಬಹುದು. ರಸ ದೃಷ್ಠಿಯಿಂದ ಈ ಯುಗದಲ್ಲಿ ಭಕ್ತಿರಸ ಪ್ರಧಾನವಾಗಿ ಹರಿದಿದೆ. ವೀರಶೈವ ಕವಿಗಳು ಲೌಕಿಕ ಮತ್ತು ಶಾಸ್ತ್ರೀಯ ಗ್ರಂಥಗಳನ್ನು ರಚಿಸದೆ, ತಾತ್ವಿಕ ಅನುಭಾವಿಕ ಕೃತಿಗಳನ್ನು ರಚಿಸಿದರು. ಆದ್ದರಿಂದ ಪಂಡಿತ ಕವಿಗಳ ಜೊತೆಗೆ ಆಧ್ಯಾತ್ಮಿಕ ಅನುಭಾವಿಕ ಕಾವ್ಯ ಪರಂಪರೆ ಸೃಷ್ಟಿಯಾಯಿತು.

ಪೂರ್ವ ಪರಂಪರೆಯ ರಾಜಾಶ್ರಯ ಪದ್ಧತಿಯ ಕಾವ್ಯ ಸೃಷ್ಠಿಗೆ ವಚನಕಾರರಲ್ಲಿ ಪ್ರತಿಭಟನೆ ಅಭಿವ್ಯಕ್ತಗೊಂಡಿತು. ಆದರೂ ಮಧ್ಯಕಾಲೀನ ಸಂದರ್ಭದಲ್ಲಿ ವಿಜಯನಗರದ ಅರಸರು, ಮೈಸೂರಿನ ಒಡೆಯರು ಹಾಗೂ ಇನ್ನಿತರ ಸಣ್ಣ ಪುಟ್ಟ ದೊರೆಗಳ ಆಶ್ರಯದಿಂದ ಸಾಹಿತ್ಯ ರಚನೆಯಾಯಿತು. ಇಲ್ಲಿ ಕವಿಮನೋಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಜನಪರವಾದ ಅಂತರ್‌ದೃಷ್ಠಿ ಕಾಣಬಹುದು. ಈ ಅವಧಿಯಲ್ಲಿ

ವಚನಕಾರರಲ್ಲಿ ತ್ರಿಪದಿಯೂ, ಹರಿಹರನಲ್ಲಿ ರಗಳೆಯೂ, ರಾಘವಾಂಕನಲ್ಲಿ ಷಟ್ಪದಿಯ ಸಾಹಿತ್ಯವು ಬಳಕೆಗೊಂಡಿತು.

೧೨ನೇ ಶತಮಾನದಲ್ಲಿ ರಚನೆಯಾದ ಸತ್ವಯುತ ವಚನಗಳು ಶರಣರ ವ್ಯಕ್ತಿತ್ವದ ಪ್ರಾಮಾಣಿಕ ಪ್ರತಿಬಿಂಬಗಳಾಗಿವೆ. ದಿನನಿತ್ಯದ ಬದುಕಿನಲ್ಲಿ ಪಾರಮಾರ್ಥಿಕ ಶಕ್ತಿಯನ್ನು ತುಂಬಿದವು. ಅಂತೆಯೇ ವೈಚಾರಿಕ ನಿಲುವನ್ನು ಸದೃಢಗೊಳಿಸಿದವು. ಪೂರ್ಣತೆಯತ್ತ ಸಾಗುವ ಅಂತರಂಗದ ಅಭೀಪ್ಸೆಗೆ ಸಾಧನಮಾರ್ಗವಾದವು. ಸರ್ವಕಾಲಿಕ ಮೌಲ್ಯಗಳನ್ನು ಬಿತ್ತರಿಸುತ್ತ, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವು. ಇವೆಲ್ಲದರ ಪರಿಣಾಮವಾಗಿ ಜನತೆ ಪರಿಪೂರ್ಣ, ಆದರ್ಶ ಸಮಾಜದ ಕನಸನ್ನು ಕಂಡಿತು. ಬದುಕಿನ ಸಾರ್ಥಕತೆಗೆ ಪೂರಕವಾದ ಕಾಯಕ, ದಾಸೋಹ, ಆಚರಣೆ, ನಿರಹಂಕಾರ ಮನೋಧರ್ಮ, ಭಾವಶುದ್ಧಿ ಮೊದಲಾದ ವಿಶಿಷ್ಟ ಗುಣಗಳನ್ನು ಗೌರವಿಸಿತು. ಸ್ವಸ್ಥ ಸಮಾಜ ರಚನೆ, ಸಮಷ್ಟಿ ಹಿತವನ್ನೊಳಗೊಂಡ ಈ ಬಗೆಯ ಸಮಾಜಮುಖಿ ಚಿಂತನೆಯನ್ನು ವಿಶೇಷವಾಗಿ ಶರಣರಲ್ಲಿ ಕಾಣಬಹುದು. ಜನಸಾಮಾನ್ಯರಿಗೆ ಅರ್ಥೈಸುವ ನೆಲೆಯಲ್ಲಿ ವಚನಗಳನ್ನು ಅಭಿವ್ಯಕ್ತಿಯ ಮಾಧ್ಯಮವನ್ನಾಗಿಸಿಕೊಂಡರು. ನಂತರ ಇವುಗಳ ಸಂಕಲನಕಾರ್ಯ ಕೈಗೊಂಡಿದ್ದರ ಪರಿಣಾಮವಾಗಿ ವಚನ ಸಾಹಿತ್ಯ ರೂಪ ಪಡೆಯಿತು. ಅನುಭವ ಮಂಟಪ ಸೃಷ್ಟಿಸುವ ಮೂಲಕ ಎಲ್ಲ ಜಾತಿಯ, ಸ್ತರದ ಜನರು ಒಂದೆಡೆ ಸೇರಲು ಅವಕಾಶವಾಯಿತು. ಇಂತಹ ಮೂಲ ತಾತ್ವಿಕ ಆಶಯ ಹೊಂದಿದ ವಚನ ಸಾಹಿತ್ಯವು ಕಲ್ಯಾಣಕ್ರಾಂತಿಯ ಪರಿಣಾಮದಿಂದ ಅವಸಾನಗೊಂಡಿತು.

ಕಲ್ಯಾಣಕ್ರಾಂತಿಯ ನಂತರ ವಚನ ಸಾಹಿತ್ಯ ಮತ್ತು ಶಿವಶರಣರ ಜೀವನ ಪ್ರವಾಹಗಳು ಹರಿದು ಬಂದವು. ಈ ಶ್ರೀಮಂತ ಬದುಕಿನ ಸ್ಫೂರ್ತಿ ಪಡೆದು ಕಾವ್ಯ ರಚನೆ ಮಾಡಿದವರಲ್ಲಿ ಹರಿಹರ ಮೊದಲಿಗ. ದೇಶಿ ಛಂದೋರೂಪವಾದ ರಗಳೆಯು ಮೊದಲು ಪಂಪನಲ್ಲಿ ಬಳಕೆಗೊಂಡರೂ, ಹರಿಹರನು ರಗಳೆಯನ್ನು ಸಮರ್ಥವಾಗಿ ಬಳಸಿಕೊಂಡನು. ಆದ್ದರಿಂದ ರಗಳೆಕವಿ ಎಂದು ಪ್ರಸಿದ್ಧವಾಗಿದ್ದಾನೆ. ಹೀಗೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟ ಗೌರವಕ್ಕೆ ಪಾತ್ರನಾದ ಕವಿ ಹರಿಹರ. ಸ್ವತಂತ್ರ ಮನೋವೃತ್ತಿಯ ಈ ಕವಿ ಕ್ರಾಂತಿಕಾರಿಯೂ ಹೌದು. ಮಹಾಭಕ್ತನೂ ಹೌದು. ತನ್ನದೇ ಆದ ಮಾರ್ಗ ನಿರ್ಮಾಣ ಮಾಡಿದ್ದಾನೆ. ಜೈನವಾಹಿನಿಗೆ 'ಪಂಪ' ಹೇಗೆ ಪರಂಪರೆಯೊಂದರ ನಿರ್ಮಾಪಕನೊ ಹಾಗೆ ವೀರಶೈವ ಸಾಹಿತ್ಯವಾಹಿನಿಗೆ 'ಹರಿಹರ' ಒಂದು ಪರಂಪರೆಯ ನಿರ್ಮಾಪಕ.

"ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆಯಕ್ಕಟಾ
ತನತನಗಿಂದ್ರ ಚಂದ್ರರವಿಕರ್ಣದಧೀಚಿ ಬಲೀಂದ್ರನೆಂದು ಮೇಣ್
ಅನವರತಂ ಪೊಗಳ್ದು ಕೆಡಬೇಡೆಲೆ ಮಾನವ ನೀನಹರ್ನಿಶಂ
ನೆನೆಪೊಗಳರ್ಚಿಸೆಮ್ಮ ಕಂಡುಸೊಂಪಿನ ಪೆಂಪಿನ ಹಂಪೆಯಾಳ್ದನಂ"[7]

ಮನುಜರ ಮೇಲೆ, ಸಾವವರ ಮೇಲೆ, ಕನಿಷ್ಠರ ಮೇಲೆ ಕಾವ್ಯ ರಚಿಸಬಾರದೆಂದು ಪ್ರತಿಜ್ಞೆ ಮಾಡಿದನು. ಇದರಿಂದ ಐತಿಹಾಸಿಕ ವ್ಯಕ್ತಿಯನ್ನು ವೈಭವೀಕರಿಸಿ ಪುರಾಣೀಕೃತಗೊಳಿಸುವ ಕಾರ್ಯ ಮಧ್ಯಕಾಲೀನ ಸಂದರ್ಭದಲ್ಲಿ ವಿಶೇಷವಾಗಿ ಪ್ರಾರಂಭವಾಯಿತು.

ಹರಿಹರನು ತನ್ನ ಹಟದಂತೆ ಶರಣರನ್ನು ಪುರಾಣೀಕೃತಗೊಳಿಸಿದನು. ಬಸವಣ್ಣನನ್ನು ದೈವತ್ವದ ನೆಲೆಗೆ ಏರಿಸುವುದರ ಮೂಲಕ 'ಬಸವರಾಜದೇವರ ರಗಳೆ' ರಚಿಸಿದನು. ಹರಿಹರನ ನಂತರ ಬಂದ ಚಂಪೂಕವಿಗಳಲ್ಲಿ ಅದರಲ್ಲೂ ವೀರಶೈವ ಕವಿಗಳಲ್ಲಿ ಚಾಮರಸನು ಪ್ರಮುಖನಾಗಿದ್ದಾನೆ. ಇವನೂ ಹರಿಹರನ ಹಾದಿಯಲ್ಲಿಯೇ ಸಾಗಿ ಅಲ್ಲಮಪ್ರಭುವನ್ನು ದೈವತ್ವಕ್ಕೇರಿಸುವ ಮೂಲಕ "ಪ್ರಭುಲಿಂಗ ಲೀಲೆ" ಎಂಬ ಕೃತಿಯನ್ನು ರಚಿಸಿದನು. ಇದೇ ಮಾದರಿಯನ್ನು ಭೀಮಕವಿ ಅನುಸರಿಸಿ 'ಬಸವಪುರಾಣ'ವನ್ನು ಬರೆದನು. ಹೀಗೆ ಮುಂದೆ ಬಂದ ವೀರಶೈವ ಕಾವ್ಯಗಳಲ್ಲಿ ಶರಣರನ್ನು ದೈವತ್ವದ ನೆಲೆಗೇರಿಸಿ ಕಾವ್ಯ ರಚಿಸಿದರು. ಅಂತಹ ಕಾವ್ಯಗಳಲ್ಲಿ "ಗುಂಡಬ್ರಹ್ಮಯ್ಯಗಳ ಚರಿತ್ರೆ'ಯೂ ಒಂದಾಗಿದೆ.

ಮಧ್ಯಕಾಲೀನ ಕರ್ನಾಟಕದ ವೀರ ಪರಂಪರೆಯಲ್ಲಿ ಕುಮಾರರಾಮ, ಸಿರುಮನಾಯಕ, ನಿಂಬಸಾಮಂತ, ಮೊಲ್ಲೆಬೊಮ್ಮಯ್ಯ, ಆದಯ್ಯ, ಏಕಾಂತ ರಾಮಯ್ಯರಂತೆ ಗುಂಡಬ್ರಹ್ಮಯ್ಯಗಳು ಪ್ರಮುಖರಾಗಿದ್ದಾರೆ. ಇವರು ತಮ್ಮ ವೀರವ್ರತ, ನ್ಯಾಯಪಾಲನೆ, ಉದಾರಮನಸ್ಸು ಮತ್ತು ನಿಷ್ಠೆಯ ಮೂಲಕ ಜನಮನ ಹೃದಯದಲ್ಲಿ ನೆಲೆಸಿದ್ದಾರೆ. ಇಂದಿಗೂ ಗುಂಡಬ್ರಹ್ಮಯ್ಯಗಳ ಹಿನ್ನಲೆಯಲ್ಲಿ ನಡೆಯುವ ಆಚರಣಾತ್ಮಕ ನೆಲೆಗಳನ್ನು ಗಮನಿಸಬಹುದು. 'ಗುಂಡಬ್ರಹ್ಮಯ್ಯಗಳ ಚರಿತ್ರೆ'ಯು ಚಾರಿತ್ರಿಕ ಅಂಶಗಳ ಮೇಲೆ ಬೆಳಕು ಚೆಲ್ಲುತ್ತದೆ. ಸಾಹಿತ್ಯ ಮತ್ತು ಶಿಲ್ಪಸಂಪತ್ತು, ಸಾಹಿತ್ಯ ಮತ್ತು ಚರಿತ್ರೆ, ಸಾಹಿತ್ಯ ಮತ್ತು ಸಮಾಜ ಹೀಗೆ ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಅವಕಾಶ ಒದಗಿಸಿದೆ.

'ಗುಂಡಬ್ರಹ್ಮಯ್ಯಗಳ ಸಾಹಿತ್ಯ' ಕೃತಿಯು ದೇಶಿಯ ಕಾವ್ಯವಾಗಿದ್ದು; ಸಾಂಗತ್ಯ, ತ್ರಿಪದಿ, ಚೌಪದಿ ಮುಂತಾದ ಛಂದೋಲಯಗಳನ್ನು ಒಳಗೊಂಡಿದೆ. ವರ್ಣನೆಗಳು, ನುಡಿಗಟ್ಟು, ಅಲಂಕಾರ, ಗಾದೆ ಇತ್ಯಾದಿ ಜಾನಪದ ಸೊಗಡನ್ನು ಒಳಗೊಂಡಿದೆ. ಈ ಛಂದೋಲಯಗಳನ್ನು ಒಳಗೊಂಡಿರುವುದರಿಂದ ಹಾಡಲು ಬಲು ಯೋಗ್ಯವಾದ ಹಾಡು ಗಬ್ಬವಾಗಿದೆ. ದೇಶಿಯ ಸೊಗಡು ಹೊಂದಿರುವ ಈ ಕೃತಿ ಮಧ್ಯಕಾಲೀನ ಸಾಹಿತ್ಯ, ಸಾಂಸ್ಕೃತಿಕ, ವಿನಿಮಯ ಗುರುತಿಸಲು ಮುಖ್ಯವಾದ ಆಕರ ಸಾಮಾಗ್ರಿಯಾಗಿದೆ. ಇಂತಹ ಕಾವ್ಯಗಳು ಪ್ರಮುಖ ಆಕರಗಳಿಗಿಂತಲೂ, ನಿಜಸಂಗತಿಯನ್ನು ತಮ್ಮ ಒಡಲಿನಲ್ಲಿ ಅಡಗಿಸಿಕೊಂಡಿವೆ. ತಪ್ಪಾದ ಇತಿಹಾಸವನ್ನು, ಹಿಂದು ಮುಂದಾದ ಇತಿಹಾಸವನ್ನು, ಕಳಚಿಬಿದ್ದ ಇತಿಹಾಸದ ಕೊಂಡಿಯನ್ನು ಸರಿಮಾಡಲಿಕ್ಕೆ ಇಂತಹ ಕಾವ್ಯಗಳು ಸಹಕಾರಿಯಾಗಿವೆ.

ಶರಣರ ಬದುಕು, ಆದರ್ಶ, ವೈವಿಧ್ಯತೆಗಳ ನಡುವೆ ನಡೆದ ಸಂಘರ್ಷವನ್ನು ನಿರೂಪಿಸುವಲ್ಲಿ ಈ ಕೃತಿಗೆ ಐತಿಹಾಸಿಕ ಮಹತ್ವವಿದೆ. ಇಂತಹ ಅನೇಕ ಕೃತಿಗಳು ತಮ್ಮ ಒಡಲಿನಲ್ಲಿ ಮಾಣಿಕ್ಯದ ಮೌಲ್ಯವನ್ನು ಅಡಗಿಸಿಕೊಂಡು ಓದುಗರ ಉಪೇಕ್ಷೆಗೆ ಒಳಗಾಗಿರುವುದು ದುರದೃಷ್ಟವೇ ಸರಿ. ಗುಂಡಬ್ರಹ್ಮಯ್ಯಗಳ ಕುರಿತಾದ ಕಾವ್ಯವು ಜನ ಸಮ್ಮುಖಿಯಾಗಿದೆ. ಭಾಷೆ, ಜನಪದ ಸತ್ವ, ದೇಶಿಯ ಸೊಗಡು, ಐತಿಹ್ಯಗಳಿಂದ ಕೂಡಿದ ಈ ಕೃತಿಯು ಜನಜೀವನದ ವೈವಿಧ್ಯ ವೈಚಿತ್ರಗಳಿಂದ ಕೂಡಿದೆ. ಗುಂಡಬ್ರಹ್ಮಯ್ಯಗಳು ಶರಣ ಚಳುವಳಿಗೆ ಪ್ರಭಾವಿತರಾಗಿ ಮೊರೆಹೊಕ್ಕವರನ್ನು ಕಾಪಾಡುವ ವೀರ ವ್ರತವನ್ನು ಕೈಗೊಂಡರು. ಇದರ

ಫಲವಾಗಿ ಕೊನೆಗೆ ಶೂಲದ ಶಿಕ್ಷೆಗೆ ಗುರಿಯಾಗುವ ಸಂದರ್ಭ ಒದಗುತ್ತದೆ. ಇದರಿಂದ ಇವರು ಆಚರಣೆ, ಆರಾಧನೆ, ಜನವದಂತಿ, ನಂಬಿಕೆಗಳಂಥ ಮೌಖಿಕ ಹಾಗೂ ಸಾಹಿತ್ಯ ಶಿಲ್ಪಗಳಂತ ಲಿಖಿತ ಸಂಪ್ರದಾಯಗಳಲ್ಲಿ ದಾಖಲಾಗುತ್ತ ಬಂದಿದ್ದಾರೆ. ಈ ಕಾರಣಕ್ಕಾಗಿ ಭೂತಕಾಲದ ಜೀವನ ಪದ್ಧತಿಗಳನ್ನು ವರ್ತಮಾನದ ಸಂದರ್ಭದಲ್ಲಿ ತಿಳಿಸುವ ಮೂಲಕ ಪಾರಂಪರಿಕ ಪ್ರಜ್ಞೆಯನ್ನು ಈ ಕಾವ್ಯ ಪ್ರತಿನಿಧಿಸುತ್ತದೆ. ಆದ್ದರಿಂದ ಈ ಕಾವ್ಯದ ಅಧ್ಯಯನ ವರ್ತಮಾನದ ಸಂದರ್ಭದಲ್ಲಿ ಅನಿವಾರ್ಯವಾಗಿ ನಡೆಯುವುದು ಮುಖ್ಯವಾಗಿದೆ.

ವೀರಶೈವ ಕಾವ್ಯಗಳಲ್ಲಿ 'ಗುಂಡಬ್ರಹ್ಮಯ್ಯಗಳ ಚರಿತ್ರೆ'ಯು ವಿಶಿಷ್ಟವಾದ ಸ್ಥಾನ ಪಡೆದಿದೆ. ಈಗಾಗಲೇ ಚರ್ಚಿಸಿದಂತೆ ಗುಂಡಬ್ರಹ್ಮಯ್ಯಗಳನ್ನು ದೈವತ್ವದ ನೆಲೆಗೇರಿಸಿ ಕಾವ್ಯ ರಚನೆ ಮಾಡಲಾಗಿದೆ. ಇಲ್ಲಿ ಲೌಕಿಕ ಮತ್ತು ಅಲೌಕಿಕ ಎಂಬ ಎರಡೂ ಜಗತ್ತನ್ನು ಕಾವ್ಯದಲ್ಲಿ ಕಾಣಬಹುದು. ದೇವಲೋಕ ಮತ್ತು ಮರ್ತ್ಯಲೋಕ ಕಲ್ಪನೆ ಮೂಡಿಸುವುದರ ಜೊತೆಗೆ ಅಲ್ಲಿಯ ಘಟನೆಗಳು ಕಣ್ಣಂಚಿನಲ್ಲಿ ಸುಳಿಯುತ್ತವೆ. ಈ ಕಾವ್ಯದಲ್ಲಿ ಬರುವಂತ ಘಟನೆಗಳ ಹಿನ್ನಲೆಯಲ್ಲಿ ಐದು ಭಾಗಗಳಾಗಿ ವಿಂಗಡಿಸಲಾಗಿದೆ.

೧. ಶಿವ-ಪಾರ್ವತಿಯರ ಒಡ್ಡೋಲಗ

೨. ನಾರದ ಕೋಟೆ ಪ್ರವೇಶ

೩. ಹರ-ನಾರದರು ಕನ್ನಗತ್ತಿ ಮಾಡಿಸುವುದು

೪. ಹರ-ನಾರದರು ಕನ್ನವಿಕ್ಕುವುದು

೫. ಮೊರೆ ಹೊಕ್ಕವರ ಕಾಪಾಡುವುದು

೧. ಶಿವ-ಪಾರ್ವತಿಯರ ಒಡ್ಡೋಲಗ

"ಉತ್ತರದೇಶದೊಳೊಂದು ಓರುಗಲ್ಲೆಂಬುದು ಅದ
ರೊತ್ತೀಲೀ ಪುರವು ಕೈಲಾಸ || ದೊಳಗಣ ಶಿವ
ಭಕ್ತರು ಮೆರೆದ ಕಥೆಗೇಳಿ"[೨]

ಉತ್ತರ ದೇಶದೊಳಗೆ ಓರುಗಲ್ಲು ಪುರವಿದೆ. ಅಲ್ಲಿ ಶಿವಭಕ್ತರು ತಮ್ಮ ನಿಷ್ಠೆಯ ಮೂಲಕ ಭಕ್ತಿಯನ್ನು ಮೆರೆದ ಕಥೆ ಕೇಳಿರಿ ಎಂಬ ಪದ್ಯದ ಮೂಲಕ ಕಾವ್ಯ ಪ್ರಾರಂಭವಾಗುತ್ತದೆ. ಕುಮಾರವ್ಯಾಸನು ತನ್ನ ಕೃತಿಯನ್ನು ಕೇಳಿದವರಿಗೆ ವೇದ ಪಾರಾಯಣದ ಫಲ, ಗಂಗಾದಿ ತೀರ್ಥಸ್ನಾನ ಫಲ, ತಪಸ್ಸಿನ ಫಲ, ಜ್ಯೋತಿಷ್ಟೋಮಯಾಗದ ಫಲ ಪ್ರಾಪ್ತಿಯಾಗುತ್ತದೆಂದು ಪೀಠಿಕೆ ಸಂಧಿಯಲ್ಲಿ ಹೇಳಿದ್ದಾನೆ. ಅದರಂತೆ ಈ ಕಾವ್ಯದಲ್ಲಿಯೂ ಆರಂಭದಲ್ಲಿ ಶಿವಕಥೆಯನ್ನು ಕೇಳಿದರೆ ಪುಣ್ಯಫಲ ಬರುತ್ತದೆ. ಯಾರಾದರೂ ಇದನ್ನು ಜರಿದರೆ ವಿಧಿ ಬಂದು ಬೆನ್ನ ನುಲಿವುದು ಎಂದು ಹೇಳಲಾಗಿದೆ.

ಕಾಕತೀಯ ಅರಸನಾದ ಗಣಪತಿರಾಯನ ಆಸ್ಥಾನದಲ್ಲಿ ಗುಂಡಬ್ರಹ್ಮಯ್ಯಗಳೆಂಬ ಶಿವಭಕ್ತರು ತಮ್ಮ ಭಕ್ತಿಯ ಪರಾಕಾಷ್ಠೆಯನ್ನು ಮೆರೆದರು. ಹಿಂದೆ ಪ್ರಸ್ತಾಪಿಸಿದಂತೆ ಮೊರೆಹೊಕ್ಕವರನ್ನು ಕಾಪಾಡುವೆನೆಂಬ ವೀರವ್ರತವನ್ನು ಕೈಗೊಂಡರು. ಅಂಗನೆಯರು ತಮ್ಮ ಪುರುಷನ ನೆನೆಯುವಂತೆ ಶಿವಲಿಂಗದ ಸುಖವು

ವ್ರತದಲ್ಲಿ, ಹೆಣ್ಣು, ಹೊನ್ನು, ಪರಧನ ಕದ್ದು ಬರಲು ಅಂತವರಿಗೆ ರಕ್ಷಣೆ ನೀಡುವೆವು ಎಂದು ಸಂದೇಶ ಸಾರುವರು. 'ಮೊರೆಹೊಕ್ಕವರ ಕಾಯ್ವೆ'ವೆಂದು ಕಾಲ್ಪೆಂಡೆಯನ್ನು ಧರಿಸಿಸಿಂತು ಮೂರು ಲೋಕವೆಲ್ಲ ಕೇಳುವಂತೆ ತಮ್ಮ ಬಿರುದಿನ ಕಹಳೆ ಊದುವರು. ಇವರ ಪಂಥದ ಕಹಳೆಯು ಕೈಲಾಸಕ್ಕೂ ಕೇಳುತ್ತದೆ.

ಪಾರ್ವತಿ ನಸುನಗುತ್ತ ಪರಶಿವನಿಗೆ 'ಕಂಡೆಯ ಶಿವರಾಯ ನಿಮ್ಮ ಶರಣರು ದಿಂಡೆಯರು, ಮಂಡೆಯ ಹಂಗು ಅವರಿಗಿಲ್ಲ. ಶರಣರ ಗಂಡಾಳುತನದ ಪರಿಯನು ಬಲ್ಲೆಯ? ಹಿಂದೆ ನಿಮ್ಮಲ್ಲಿ ಮೊರೆ ಕೇಳಿದ ನಂಬಿಯನ್ನು ರಕ್ಷಿಸದೆ ಹೋದಿರಿ. ಅವನನ್ನು ಚಾರಮರಾಯನಿಗೆ ಕೊಟ್ಟಿರಿ. ಅದಕ್ಕೆ ಈ ಶರಣರೀಗ 'ಶರಣಾಗತ ರಕ್ಷಕ' ಎಂಬ ನಿಮ್ಮ ಬಿರುದನ್ನು ಕಿತ್ತುಕೊಂಡು ತಾವು ಅದನ್ನು ಧರಿಸಿದರು. ನಿಜಕ್ಕೂ ಅವರು ಕಲಿಗಳು. ಅವರ ವ್ರತನೇಮ, ಗಂಡಾಳುತನದ ಪರಿ, ತೊಟ್ಟಪಂಥ ನಿಮ್ಮನ್ನು ಮೀರಿಸಿವೆ' ಎನ್ನುವಳು. ಪರಶಿವನು ಪಾರ್ವತಿಯ ನುಡಿಗಳನ್ನು ಕೇಳುತ್ತಿದ್ದಂತೆ ಕಿಡಿ ಕಿಡಿಯಾಗುವನು. 'ಪಾರ್ವತಿಯೇ ಕೇಳು, ಅವರನ್ನು ಹಾಳು ಮಾಡುವೆ. ಅವರ ವ್ರತಗಳನ್ನು ಧೂಳಿಪಟ ಮಾಡುವೆ. ಶೂಲದ ಬಳಿಗೆ ನಡೆಸಿ, ಅವರ ಪರಿಯನ್ನು ಪರೀಕ್ಷಿಸುವೆ' ಎಂದು ಕೋಪದಿಂದ ನುಡಿಯುವನು.

ತಾನು ಕಳ್ಳನಾಗಿ ಹೋಗಿ ಗಣಪತಿರಾಯನ ಅರಮನೆಯನ್ನು ಕದ್ದು, ಅವರಲ್ಲಿ 'ಮೊರೆ' ಕೇಳುವ ಹಂಚಿಕೆ ಹಾಕುವನು. ಅರಮನೆಗೆ ಕನ್ನ ಹಾಕುವುದಕ್ಕೆ ಮುಂಚಿತವಾಗಿ ನಾರದನನ್ನು ಜಂಗಮ ರೂಪದಿಂದ ಅಲ್ಲಿಗೆ ಕಳುಹಿಸಿ ಕನ್ನಕ್ಕೆ ಕುರುಹಿಟ್ಟು ಬರಲು ಹೇಳುವನು. ಹೀಗೆ ಶಿವ-ಪಾರ್ವತಿಯರ ಒಡ್ಡೋಲಗದಲ್ಲಿ ಗುಂಡಬ್ರಹ್ಮಯ್ಯಗಳ ವ್ರತನೇಮ, ನಿಷ್ಠೆಯ ಬಗ್ಗೆ ಪ್ರಸ್ತಾಪ ನಡೆಯುತ್ತದೆ.

೨. ನಾರದ ಕೋಟೆ ಪ್ರವೇಶ

ಓರುಗಲ್ಲಿಗೆ ಹೋಗಿ ವೀರರನ್ನು ನೋಡುವವರು ಯಾರುಂಟು? ಎಂದು ದೇವಸಭೆಯಲ್ಲಿ ಚರ್ಚಿಸುವಾಗ, ನಾರದನು ನಾನು ಹೋಗುವೆನೆಂದು ಕರವ (ಕೈ) ಮುಗಿದನು. ನಂತರ ಗಣಪತಿರಾಯನ ಅರಮನೆಗೆ ಬರಲು ಸಿದ್ಧನಾಗುವನು. ನಾರದನು ಓರಂಗಲ್ಲಿನ ಅರಮನೆಗೆ ಬರುವ ಸಮಯದಲ್ಲಿ ಜಂಗಮ ವೇಷ-ಭೂಷಣಗಳನ್ನು ಧರಿಸಿದನು. ಅವುಗಳನ್ನು ಈ ಕೆಳಗಿನಂತೆ ಕಾವ್ಯದಲ್ಲಿ ಪ್ರಸ್ತಾಪಿಸಲಾಗಿದೆ.

"ಉಟ್ಟ ಕಾವಿಯ ದೊತ್ರ ಕಟ್ವಾಂಗ ಕಿನ್ನರಿ
ಪಟ್ಟು ಸೀರೆಗಳು ಹೊಸಕಂಥೆ|| ನಾರದಗೆ
ಕಟ್ಟಿದರು ರುದ್ರಾಕ್ಷಿ ಜಪಸರ

ಪಾದದ ಕಿರುಗೆಜ್ಜೆ ಪದ್ಮದ ಹಾವುಗೆ
ಆಧಾರ ಕೈಯ ಹೊಸಬೆತ್ತ|| ಲಾಕುಳ
ವೇದ ಶಾಸ್ತ್ರಗಳ ಬರದೋಲೆ

ಸೂಕ್ಷ್ಮದ ಕೆಂಜೆಡೆ ಸುಲಿಪಲ್ಲು ಕೊನೆಮೀಸೆ

ರೇಖೆಗಳ ಗಂಧಗಳು ಮುಖಭಸ್ಮ|| ಕಾಮಾಕ್ಷ

ಲೋಕಮಾಣಿಕದ ಪ್ರಭೆಯಂತೆ"[3]

ನಾರದನು ಓರುಗಲ್ಲಿಗೆ ಬರಲು ಕಾವಿಯ ದೋತ್ರ, ಕಟ್ವಾಂಗ, ಕಿನ್ನರಿ, ಪಟ್ಟೆಯ ಸೀರೆ, ಕೊರಳಲ್ಲಿ ರುದ್ರಾಕ್ಷಿ ಜಪಸರ, ಪಾದದಲ್ಲಿ ಕಿರುಗೆಜ್ಜೆ, ಕೈಯಲ್ಲಿ ಬೆತ್ತ, ಗಂಧ-ಮುಖಭಸ್ಮ ಬಳಿದುಕೊಂಡು ಜಂಗಮ ವೇಷ ತಾಳುವನು. ನಂತರ ಧರೆಗಿಳಿದು ಓರುಗಲ್ಲು ಪುರದ ಬಸವನ ಗುಡಿಗೆ ಬಂದನು. ಪುರದೊಳಗೆ ಶಿವಪೂಜೆ, ಹರನ ಕೊಂಡಾಟ, ಶರಣರ ಬಿರುದಿನ ಕಹಳೆ ಮೊಳಗಿತ್ತು. ನಾರದನು ಬಿರುದೇಕೆ ನಿಮಗೆ ಎಂದು ಕೇಳಿದನು. ಆಗ ಗುಂಡಬ್ರಹ್ಮಯ್ಯರು ಯಾರಾದರೂ ಕದ್ದು ತಮ್ಮ ಮೊರೆ ಹೋಗಲು ರಕ್ಷಣೆ ಕೊಡುವುದಾಗಿ ಹೇಳಿದರು. ಪರಧನ, ಪರನಾರಿಯರ ಕದ್ದು ಮೊರೆ ಹೋಗಲು ಅವರಿಗೆ ನಮ್ಮ ಜೀವ ಕೊಟ್ಟು ಕಾಪಾಡುವೆವು ಎಂದು ಬಿರುದಿನ ಮಾತನ್ನು ಮತ್ತೊಮ್ಮೆ ನುಡಿದರು. ಇದನ್ನು ಕೇಳಿದ ಜಂಗಮವೇಷಧಾರಿಯಾದ ನಾರದನು, ಅರಮನೆಯ ಕದ್ದು ನಿಮ್ಮಲ್ಲಿ ಮೊರೆ ಹೋಗಲು ಬಂದಾಗ ಅರಸನಾದ ಗಣಪತಿರಾಯನಿಗೆ ತಿಳಿದರೆ ನಿಮ್ಮ ಬಿರುದಿಗೆ ಅಂಜಿ ಕಳ್ಳರನ್ನು ಬಿಡುವನೆ? ಎಂದು ಮರುಪ್ರಶ್ನೆ ಹಾಕುವನು. ಆಗ ಗುಂಡಬ್ರಹ್ಮಯ್ಯಗಳು 'ಕೊಲ್ಲಲಿಸೆವು ಕಳ್ಳರ ತಲೆಗೆ ತಲೆಯ ಕೊಟ್ಟು ಗೆಲ್ಲುವೆವು' ಎಂದು ವೀರ ಮಾತನ್ನು ನುಡಿದರು.

ನಂತರ ನಾರದ ಮುನಿಯು ಚಿಂದಿಬಟ್ಟೆ ತೊಟ್ಟು ಓರುಗಲ್ಲಿಗಾಗಿ ನಡೆದನು. ದಾರಿಯಲ್ಲಿ ಹೆಬ್ಬಾವು, ಕರಡಿ, ಹುಲಿ, ಗಜ, ಸಿಂಹ ಮುಂತಾದ ಪ್ರಾಣಿಗಳು ಕಂಡವು. ದಾರಿಯುದ್ದಕ್ಕೂ ಎಲೆದೋಟ, ಕೆರೆತೋಪು ನೋಡುತ್ತ ಓರುಗಲ್ಲು ಪುರವನ್ನು ಪ್ರವೇಶ ಮಾಡಿದನು. ನಾರದರು ಓರುಗಲ್ಲು ಪುರವನ್ನು ಪ್ರವೇಶ ಮಾಡುತ್ತಿದ್ದಂತೆಯೇ ಬಾಗಿಲ ಗೊಲ್ಲರು ಅವನನ್ನು ತಡೆದರು. 'ತಿರಿದುಂಬ ಜಂಗಮರನ್ನು ಕಂಡರೆ ನಮ್ಮ ರಾಯನಿಗೆ ಆಗುವುದಿಲ್ಲ. ಮೇಲಾಗಿ ವೇಷಧಾರಿಗಳಿಂದ ಮಹಾರಾಜರು ಶಂಕಿತರಾಗುವರು. ಅದಕ್ಕಾಗಿ ತಮಗಿಲ್ಲಿ ಪ್ರವೇಶ ದೊರಕದು. ಪರದೇಶಿಯ ವೇಷದಲ್ಲಿ, ಪರರಾಯರ ವೇಷದಲ್ಲಿ ಪುರದೊಳಗೆ ಹೊಕ್ಕು ಅರಸನನ್ನು ಕೊಂದಿಹರೆಂಬ ಸಂದೇಹದಿಂದ ಓರುಗಲ್ಲು ಪುರದೊಳಗೆ ಬಿಡುವುದಿಲ್ಲ' ಎನ್ನುವರು. ಇದರಿಂದ ವೇಷದಾರಿಯಾದ ನಾರದನನ್ನು ಬಿಡಲಿಲ್ಲ.

ನಾರದನು ಅಂತಹ ಕಪಟ ದೇಶಾಂತ್ರಿ ತಾನಲ್ಲವೆಂದು ಹೇಳುವನು. ತಾನು ಸತ್ಯವಂತ ಜಂಗಮನಾಗಿದ್ದು, ವೇದ ಪರಿಣಿಣತನೆಂದೂ, ಶಕುನಶಾಸ್ತ್ರ ಬಲ್ಲೆನೆಂದು ಹೇಳಿದನು. ಅವರು ಕೇಳಿದ ಹಸುಬ (ಶಕುನದ ಹಕ್ಕಿ), ಗವುಳಿ (ಹಲ್ಲಿ) ನುಡಿದ ಶಕುನದ ಫಲವನ್ನು ನುಡಿಯುವನು. ಇದರಿಂದ ಮಂತ್ರಿಯ ಮನವೊಲಿಸಿಕೊಂಡು ಅರಮನೆಗೆ ಪ್ರವೇಶಿಸುವನು. ಗಣಪತಿರಾಯನ ನೆಚ್ಚಿನ ರಾಣಿ ರಾಮರಸಿ ಮುನಿಸಿಕೊಂಡು ಮಲಗಿರುವುದನ್ನು ತಿಳಿದು, ಮಗಳೆ ರಾಯನ ಜೊತೆ ಜಗಳ ಸಲ್ಲದೆನ್ನುವನು. ಆಗ ಮಲಗಿದ್ದ ರಾಣಿ ಮೈಮುರಿದೆದ್ದು, ನಾರದನ ಪಾದಕ್ಕೆ ನಮಸ್ಕರಿಸಿದಳು. ನಂತರ ನನ್ನ ರಾಯನಿಗೆ ಬುದ್ಧಿಯ ಹೇಳಿ ಗುರುರಾಯವೆನ್ನುವಳು. ರಾಣಿ-ರಾಜರನ್ನು ಎಡಬಲದಲ್ಲಿ ಕುಳ್ಳಿರಿಸಿಕೊಂಡನು. ನಡುವೆ ನಾರದನು ಕುಳಿತು ಗಂಡ ಹೆಂಡಿರನ್ನು ಒಡಂಬಡಿಸಿ ರಾಜದಂಪತಿಗಳನ್ನು ನಗಿಸುವನು.

ಜಗತ್ತಿಗೆಲ್ಲ ತಂತ್ರದ ಕಳ್ಳನಾದ ನಾರದನ ನಿಲುವು ಮಹಾರಾಜನಿಗೆ ತಿಳಿಯದೆ ತನ್ನ ರಾಣಿಯನ್ನು ಒಡಂಬಡಿಸಿದಕ್ಕೆ ಸಂತುಷ್ಟನಾಗಿ ಅವನನ್ನು ಸತ್ಕರಿಸಲು ನಿಶ್ಚಯಿಸುವನು. ಆದರೆ ನಾರದನು ಈ ರಾಜಾತಿಥ್ಯ, ರಾಜಪೂಜೆಗಳು ನನ್ನ ಗುರುಗಳಿಗೆ ಸಲ್ಲಿಸಬೇಕು. ಅದಕ್ಕಾಗಿ ತಾವು ಅನುಮತಿ ನೀಡಿದರೆ ಅವರನ್ನು ಇಲ್ಲಿಗೆ ಕರೆತರುವೆನೆಂದನು. ರಾಜನು ಅದಕ್ಕೆ ಸಮ್ಮತಿಸಿದನು. ನಂತರ ನಾರದನು ಅರಮನೆಯ ಭಂಡಾರವನ್ನೆಲ್ಲ ಸೂಕ್ಷ್ಮವಾಗಿ ಗಮನಿಸಿದ. ರಾಣಿಯ ಸೆಳೆಮಂಚದ ಬಳಿಗೂ, ಓರುಗಲ್ಲು ಪುರದ ಕಲ್ಲುಕೋಟೆಗೆ ಕನ್ನ ಹಾಕಲು ಗುರುತಿಟ್ಟನು. ನಿನ್ನಂತ ಜಂಗಮನಿಗೆ ಅರಮನೆಗೆ ಬರಲು ತಡೆದವು ಎನುತ ಗಣಪತಿರಾಯ ದಾನ-ಧರ್ಮವ ಕೊಟ್ಟ. ನಿಮ್ಮ ಒಡೆಯರನ್ನು ಇಲ್ಲಿಗೆ ಕರೆದು ತನ್ನಿ ಎಂದು ಮುಡಿಗೆರಗಿ ಶರಣೆಂದನು. ಅಲ್ಲಿಂದ ಬೀಳ್ಕೊಂಡು ಕೈಲಾಸಕ್ಕೆ ಬಂದನು. ಅಲ್ಲಿ ಓರುಗಲ್ಲು ಕೋಟೆ ಹಾಗೂ ಅರಮನೆಯ ವಿವರಗಳನ್ನು ತಿಳಿಸುವನು.

೩. ಹರ-ನಾರದರು ಕನ್ನಗತ್ತಿ ಮಾಡಿಸುವುದು

ನಾರದನು ಕೈಲಾಸಕ್ಕೆ ಬಂದು ಓರುಗಲ್ಲಿನ ಕೋಟೆಯ ವಿವರ ನೀಡುವಾಗ, ಶಿವನಿಗೆ ಕೋಟೆಯ ಒಳಗಡೆ ನುಗ್ಗುವುದು ಹೇಗೆಂದು ಯೋಚನೆಯಾಯಿತು. ತಕ್ಷಣವೇ ನಾರದನಿಗೆ ಕನ್ನಗತ್ತಿ ಮಾಡಿಸಬೇಕೆಂದು ಸಲಹೆ ನೀಡಿದ. ಕನ್ನಗತ್ತಿ ಮಾಡಲು ನಮ್ಮಲ್ಲಿ ಯಾರಿಂದಲೂ ಸಾಧ್ಯವಿಲ್ಲವೆನ್ನುವನು. ಅದಕೆ ಶಿವನು ಮಲ್ಲಿಕಾರ್ಜುನಗಿರಿಯ ಪರ್ವತಕ್ಕೆ ಹೋಗಿ, ಸ್ವಾಮಿಯವರು ಹೇಳಿದರು ಎಂದು, ಕನ್ನಗತ್ತಿ ಮಾಡಿಸಿಕೊಂಡು ಬರುವಂತೆ ಆಜ್ಞಾಪಿಸಿದರು. ಅದರಂತೆ ನಾರದ ಮಲ್ಲಿಕಾರ್ಜುನಗಿರಿಯ ಪರ್ವತಕ್ಕೆ ಬರುವನು. ಅಲ್ಲಿ ಬ್ರಹ್ಮಲೋಕದ ಶಿಲ್ಪಿಯೆನಿಸಿದ ವಿಶ್ವಕರ್ಮನ ಮನೆಗೆ ತೆರಳಿದ. ಕೋಳಿ ಕೂಗದ ಮುಂಚೆ, ಮೂಡು ಕೆಂಪಾಗದ ಮುಂಚೆ, ಬೆಳಗಿನ ಜಾವವೇ ಮನೆಯ ಮುಂದೆ ಕಾಯ್ಕೊಂಡಿದ್ದ. ಬಹಳ ಹೊತ್ತಿನಿಂದ ಕಾದು ನಿಂತಿರುವೆ ಬೇಗ ಎದ್ದು ಬಾಗಿಲು ತೆಗೆಯೆಂದು ಕದ ತಟ್ಟುವನು. ಎಷ್ಟು ತಟ್ಟಿದರೂ ಬಾಗಿಲು ತೆಗೆಯದಿದ್ದರಿಂದ 'ಎಷ್ಟೊತ್ತಿಗೆ ಈಚೆಗೆ ಬರುತಿಯೋ ಅಷ್ಟೊತ್ಗೆ ಬಾರಪ್ಪ' ಎಂದು ಸುಮ್ಮನೆ ಕುಳಿತ.

ಕೋಳಿ ಕೂಗಿ, ಮೂಡಲು ಕೆಂಪತ್ತಿ, ಬೆಳ್ಳಿ ಮೂಡಿ ಬೆಳಕು ಬಂದೊಡನೆ ವಿಶ್ವಕರ್ಮನು ತಿಳಿಗೊಂಡು ಹೊರ ಬಂದನು. ನಾರದನ ಕಂಡೊಡನೆ ಪಾದಕ್ಕೆ ನಮಿಸಿದ. ಪರಮಾತ್ಮನೆ ನಾನು ಮಾಡಿರುವ ಅಪರಾಧವೇನು? ನನ್ನ ಬುದ್ಧಿಯಿಲ್ಲದ ಹೆಂಡತಿಯಾದರೂ ಮಾಡಿದ ಅಪರಾಧವೇನು ನನ್ನಪ್ಪ ಎನ್ನುವನು. ನಾರದ ಸಂತೈಸುತ್ತ ನೀನೇನೂ ತಪ್ಪು ಮಾಡಿಲ್ಲ. ನಿನ್ನ ಹೆಂಡತಿಯೂ ಏನೂ ತಪ್ಪು ಮಾಡಿಲ್ಲ. ಸುಮ್ಮನೆ ನಿನ್ನ ನೋಡಬೇಕೆಂದು ಬಂದೆನು ಎಂದು ನಸುನಕ್ಕ. 'ಏನ್ ಸಮಾಚಾರ ಬುದ್ಧಿ' ಎನ್ನುತ್ತಿದ್ದಂತೆ, ಲೋಕಕ್ಕೆ ದೊಡ್ಡೋರಾದ ಶಿವ ನಿನ್ನ ನೋಡಬೇಕಂತೆ ಅದಕ್ಕೆ ಬಂದಿರುವೆನೆಂದ. 'ಅಂಗಾದ್ರೆ ಕೇಳಿಕೊಂಡು ಬರುತಿನಿ ನಡಿ' ಎಂದು ನಾರದನೊಂದಿಗೆ ಬರುವನು. ನಾರದ ಮುಂದೆ ವಿಶ್ವಕರ್ಮನು ಹಿಂದೆ ನಡೆದುಕೊಂಡು ಬರುವರು. ಹರನು ವಿಶ್ವಕರ್ಮನ ಆಗಮನವನ್ನೆ ಕಾಯುತ್ತಿದ್ದ. ವಿಶ್ವಕರ್ಮನು ಬಂದೊಡನೆ ಶಿವ ಪಾದಕ್ಕೆ ನಮಿಸಿ 'ಹಂ ಬಂದಿದಿನಿ ಸ್ವಾಮಿ. ಲೋಕಕ್ಕೆ ದೊಡ್ಡೋರ ಅಪ್ಪಣೆಯಾಗಿದೆಯೆಂದು ಮಾಸ್ವಾಮಿಯವರು ಹೇಳಿದರು.

ಆದ್ದರಿಂದ ತಮ್ಮ ಪಾದಕ್ಕೆ ಬಂದಿನಿ' ಎನ್ನುವನು. ನಾಡು ನಾಡಿನ ಮೇಲೆ ಒಂದು ಬಿರುದು ಗೆಲ್ಲಬೇಕಂತೀವಿ, ನಿಮ್ಮ ಸಹಕಾರ ಬೇಕೆಂದು ಶಿವರಾಯ ಕೇಳುವನು. ನಿಮ್ಮೊಳಗೆ ಇದ್ದೀನಿ ಮಾಸ್ವಾಮಿ ನೀವು ಹೇಳಿದ ಹಾಗೆ ಕೇಳುತ್ತೇನೆಂದು ವಿಶ್ವಕರ್ಮನು ನುಡಿಯುವನು. ಶಿವನು ಹಾಗಾದರೆ ಭಾಷೆ ಕೊಡು ಎನುತ, ಯಾರೂ ಹೋಗದೆ ಇದ್ದ ಓರುಗಲ್ಲಿಗೆ ಹೋಗಬೇಕು. ಆದ್ದರಿಂದ ಕನ್ನಗತ್ತಿ ಮಾಡಿಕೊಡಬೇಕೆಂದ. ಹರನ ನುಡಿ ಕೇಳುತ್ತಿದ್ದಂತೆ ಭಾಷೆಕೊಟ್ಟು ತಪ್ಪು ಮಾಡಿದೆನೆಂದು ಮನದಲ್ಲಿಯೇ ವಿಶ್ವಕರ್ಮನು ಮರುಗುವನು. ಮೋಸಗೊಳಿಸಿ ನಾರದನು ಇಲ್ಲಿಗೆ ಕರೆತಂದನು ಎಂದು ಅವನನ್ನು ಶಪಿಸುವನು.

"ಈ ಮ್ಯಾಸುಗಾರ ನಾರಾಯ್ಣ ನನ್ನ ಕರ್ರೊಂಡ್ಬಂದು
ಇಂತ ಕಷ್ಟಕ್ಕೆ ಸಿಕ್ಕುಸ್ಬುಟ್ನಲ್ಲ
ಮೊದಲೆ ಅಲ್ಲಾರೆ ಹೇಳಿದ್ರೆ ಬರ್‍ತ್ತಿಲ್ಲ ನಾನು
ಆ ಕೆಲ್ಸ ಈ ಕೆಲ್ಸ ಹೇಳಿ ತಪ್ಪುಸ್ಕೊಂಡ್ಬುಡ್ತಿದ್ದೆ
ಈಗ್ ಬಂದು ಭಾಷೆ ಬ್ಯಾರೆ ಕೊಟ್ಬುಟ್ಟೆ
ಈಗ್ ಕೊಟ್ ಮಾತ್ಗೆ ತಪ್ಪೋ ಹಂಗೂ ಇಲ್ಲ
ಏನ್ಮಾಡ್ಲಪ್ಪ ಅಂತ ಚಿಂತಾಕ್ರಾಂತರಾಗಿ ಹೇಳಿದ್ದಾರೆ
ಸ್ವಾಮಿ ಕನ್‌ಗತ್ರಿ ಮಾಡಿ ಕೊಡೋದೇನೋ ಕೊಡ್ತಿನಿ
ನಾನ್ ಹೇಳಿದ ಸಾಮಾನ್ ಕೊಟ್ಟೀರ್ರಾ"?"

ಹೀಗೆ ಕಳ್ಳನಾರದನೆಂದು ಮನದಲ್ಲಿಯೇ ನಿಂದಿಸುವನು. ತಾನು ಭಾಷೆ ನೀಡಬಾರದಾಗಿತ್ತು ಎಂದು ಸಪ್ಪೆ ಮುಖ ಮಾಡಿದ. ನಂತರ ಸ್ವಲ್ಪ ಯೋಚಿಸಿ ಕನ್ನಗತ್ತಿ ಮಾಡುವೆ ಹೇಳಿದ ಸಾಮಾನು ತರುವೆಯ ಎಂದನು. ಹರನು ಅಷ್ಟೇ ಆಗಲಿ ಏನೇನು ಸಾಮಾನು ತರಬೇಕೆಂದ. ಅದಕ್ಕೆ ವಿಶ್ವಕರ್ಮ ಇಂದು ಭಾನುವಾರ ನಾಳೆ ಸೋಮವಾರವಾಗಿದೆ. ಸಮಸಮ ರಾತ್ರಿಯಲ್ಲಿ ಚಂದ್ರಗ್ರಹದ ತಿಥಿಯಲ್ಲಿ ಅಮವಾಸೆಯ ದಿನ ಸುಡುಗಾಡಿಗೆ ಹೋಗಿ ಅಲ್ಲಿ ಬಿದ್ದಿರುವ ಕಬ್ಬಿಣವನ್ನು ತರಿಸಬೇಕೆಂದನು.

ಹರನು ನಾರದನಿಗೆ ಏನಪ್ಪ ಹೀಗೆ ಕೇಳುತಾನೆ ಎಂದ. ಅದಕೆ ನಾರದ ವಿಶ್ವಕರ್ಮನು ಇಲ್ಲಿಂದ ಕಳಚಿಕೊಂಡು ಹೋಗಬೇಕು ಎಂದುಕೊಂಡಿದ್ದಾನೆ. ಹಾಗಂತ ಅವನನ್ನು ಬಿಡಲು ಸಾಧ್ಯವೆ? ಎಂದನು. ನಾರದನು ಭಾನುವಾರ ಒಂದು ಘಳಿಗೆ, ಸೋಮವಾರ ಒಂದು ಘಳಿಗೆ, ಮಂಗಳವಾರ ಒಂದು ಘಳಿಗೆ ಮೂರು ವಾರನೂ ಸೇರಿಸಿ ಒಂದು ವಾರ ಮಾಡಿಕೊಂಡ. ಅಮೃತದ ಘಳಿಗೆ ತಕ್ಕೊಂಡು ಭಾನುವಾರ ಅಮವಾಸೆ ಮಾಡಿದನು. ಸೂರ್ಯ, ಚಂದ್ರರಿಗೆ ಗ್ರಾಣ ಕಚ್ಚಿದ ಸಮ ಸಮ ರಾತ್ರಿಯಲ್ಲಿ ಸುಡುಗಾಡಿನಲ್ಲಿ ಬಿದ್ದ ಕಬ್ಬಿಣ ತೆಗೆದುಕೊಂಡು ಬಂದು ವಿಶ್ವಕರ್ಮನ ಮುಂದೆ ಸುರಿದ. ಇಷ್ಟೂ ಸಾಮಾನುಗಳು ಎಲ್ಲಿ ದೊರೆತವು ಎಂದು ವಿಶ್ವಕರ್ಮನಿಗೆ ವಿಸ್ಮಯವಾಯಿತು. ಮುಂದೆ ಹೇಗೆ ತಪ್ಪಿಸಿಕೊಳ್ಳುವುದು ಎಂದು ಯೋಚಿಸುವನು.

'ಇವರ ಮನೆ ಹಾಳಾಗ' ಎಲ್ಲಿಂದ ತಗೊಂಡು ಬಂದನೊ ಬೆಳಕಾಗುವುದರಲ್ಲಿ ಅಂದುಕೊಂಡ. ಇಷ್ಟಕ್ಕೆ ಕನ್ನಗತ್ತಿ ಆಗುವುದಿಲ್ಲ ಇನ್ನು ಸಾಮಾನು ಬೇಕೆಂದು ಹೇಳುವನು. ಹರ-ನಾರದರು ಇನ್ನೂ ಏನು ಬೇಕೆಂದು ಕೇಳುವರು. ಸಿಳ್ಳು ಕುಡ್ಯವು, ಸಿಳ್ಳು ಒಡೆದು ಇವತ್ತಿಗೆ ಹನ್ನೆರಡು ವರ್ಷವಾಗಿರಬೇಕು. ಮೂರೂರು ಸುಟ್ಟು ಹೋಗಿರಬೇಕು. ಆ ಸಿಳ್ಳು ಕುಡ್ಯ ನೀವು ತಂದುಕೊಟ್ಟರೆ ಕನ್ನಗತ್ತಿ ಮಾಡುವೆನೆಂದ. ನಾರದ ಏಳು ಲೋಕವೆಲ್ಲ ಸಂಚಾರ ಮಾಡಿದ. ಈಶಾನ್ಯ ಮೂಲೆಯಲ್ಲಿ ನಿಂತು ಭೂಮಿಯನ್ನು ಒಂದು ಸಲ ಜೋರಾಗಿ ಒದ್ದ. ಈಶಾನ್ಯ ಮೂಲೆಯಲ್ಲಿ ಭೂಮಿಯು ಇಬ್ಭಾಗವಾಯಿತು. ಹನ್ನೆರಡು ವರ್ಷದಲ್ಲಿ ಒಡೆದಿರುವಂತಹ ಸಿಳ್ಳು ಕುಡ್ಯವು ಮೂರೂರು ಬೇಯ್ಸಿ ಪಾತಾಳದಲ್ಲಿತ್ತು. ನಾರಾಯಣ ಇದನ್ನು ಹುಡುಕಿ ವಿಶ್ವಕರ್ಮನಿಗೆ ಕೊಟ್ಟನು.

ಕನ್ನಗತ್ತಿ ಮಾಡಲು ಇಷ್ಟವಿಲ್ಲದ ವಿಶ್ವಕರ್ಮನು 'ಅಯ್ಯೊಯ್ಯೊ ಇನ್ನೊಂದು ಸಾಮಾನು ಮರೆತಿರುವೆ ಅದನ್ನು ತಂದುಕೊಡಿ ಸ್ವಾಮಿ' ಎಂದನು. ಏನಾದರೂ ತಯಾರಿಸಬೇಕಾದರೆ ಹನ್ನೆರಡು ಆಯುಧಗಳು ಬೇಕು. ಆಯುಧವಿಲ್ಲದೆ ಕನ್ನಗತ್ತಿ ಮಾಡಲಾಗುವುದಿಲ್ಲ. ಆದ್ದರಿಂದ ನಾನೇ ಶ್ರೀಶೈಲಗಿರಿ ಪರ್ವತಕ್ಕೆ ಹೋಗಿ, ಅಲ್ಲಿಯೆ ಮಾಡಿಕೊಂಡು ತರುವೆನೆಂದ. ಅದಕ್ಕೆ ಹರ-ನಾರದರು ಅಲ್ಲಿಗೆ ಹೋದರೆ ನಿನ್ನ ಸಾಲಗಾರರು ಬಿಡುವುದಿಲ್ಲ. ಏಕೆಂದರೆ ಖಡ್ಗ ಕೊಡು, ಡಾಬ ಕೊಡು, ಕುಪ್ಪೆ ಕೊಡು ಎಂದು ಬರುವರು. ಇದರಿಂದ ಕನ್ನಗತ್ತಿ ಮಾಡಲಾಗುವುದಿಲ್ಲ. ಅದಕ್ಕಾಗಿ ಇಲ್ಲಿಗೆ ಆಯುಧಗಳನ್ನು ತರುತ್ತೇವೆ ಅಂದರು. ಕೊನೆಗೂ ಕಷ್ಟಪಟ್ಟು ತಂದು 'ಹುಂ ಈಗ ಕನ್ನಗತ್ತಿ ಮಾಡಪ್ಪ' ಎಂದರು. ವಿಶ್ವಕರ್ಮನು ಏನೇನೊ ನೆವ ಹೇಳಿದರೂ ನಡಿಯಲಿಲ್ಲ. ಕನ್ನಗತ್ತಿ ಮಾಡದೆ ವಿಧಿಯಿಲ್ಲವೆಂದುಕೊಂಡನು.

ಕೊನೆಗೆ ಶಿವನ ಆಜ್ಞೆಯಂತೆ ಕನ್ನಗತ್ತಿ ಮಾಡಲು ಅಣಿಗೊಳಿಸಿದ. ಏಳು ಲೋಕದ ಏಳು ಲೋಹ, ಮುಪ್ಪುರವನುರಹಿದ ಇದ್ದಲಿಯನ್ನು ತಂದು ವಿಶ್ವಕರ್ಮನು ರಾಕ್ಷಸರನ್ನೇ ತಿದಿ ಮಾಡಿ ಕನ್ನಗತ್ತಿ ಮಾಡಿದ. ಹರ-ನಾರದರು ಪರಮ ಸಂತೋಷಗೊಂಡರು. ಶಿವನು 'ಗನ್ನಗತ್ತಿಯ ಮಾಡಿದ ವಿಶ್ವಕರ್ಮನೆ ನೀ ಕೇಳು ಚನ್ನಾಗಿ ಕಳವು ದೊರೆತರೆ ನಾವು ಕದ್ದು ತಂದ ಹೊನ್ನು ಬಂಗಾರ ಸರಿಪಾಲು ಎನ್ನುವನು. ನಾರದನು ವಿಶ್ವಕರ್ಮನಿಗೆ ಈ ಸಲ ಒಳ್ಳೆಯ ಭಾಗ್ಯವ ಕೊಡುವೆನೆಂದ. ಹರ-ನಾರದರು ವಿಶ್ವಕರ್ಮನನ್ನು ಹೊಗಳುವರು. ಗಗನ ಮಂಡಲದಂತೆ ಹೊಳೆಯುವ ಕನ್ನಗತ್ತಿಯನ್ನು ಹಿಡಿದು ಹರ-ನಾರದರು ಓರುಗಲ್ಲು ಅರಮನೆಯ ಕಳುವಿಗೆ ಸಿದ್ಧರಾಗುವರು.

೪. ಹರ-ನಾರದರು ಕನ್ನವಿಕ್ಕುವುದು

ಹರ-ನಾರದರು ಓರುಗಲ್ಲಿನ ಅರಮನೆಗೆ ಕನ್ನವಿಕ್ಕಲು ಕನ್ನಗತ್ತಿ ಮಾಡಿಸಿದರು. ಕನ್ನಕ್ಕೆ ಹೊರಡಲು ಸಿದ್ಧವಾಗಿ ಪಾರ್ವತಿಗೆ ಹೋಗಿ ಬರುವುದಾಗಿ ತಿಳಿಸಿದ. ಪಾರ್ವತಿಯು 'ಕಳವೇಕೆ ಸ್ವಾಮಿ ಕರಕಷ್ಟವದು. ಕಾಯುವ ಹರನೇ ಕಳ್ಳನಾದರೆ ಮರ್ತ್ಯದ ಶರಣರು ನಗುವರು' ಎಂದು ಬುದ್ಧಿ ಹೇಳುವಳು. ಧರೆಯೊಳಿರುವ ಗುಂಡಬ್ರಹ್ಮಯ್ಯಗಳ ಬಿರುದಿನ ಭಕ್ತಿಯನ್ನು ಲೋಕಕ್ಕೆ ಪ್ರಕಟಿಸಲು ಈ ವೇಷವೆಂದ. ಓರುಗಲ್ಲಿಗೆ

ಹೋಗಿ ವೀರ ಗಣಪತಿರಾಯನ ಅರಮನೆಯ ಒಳಹೊಕ್ಕು ಬಾರಿ ಬಂಗಾರ ತರುವೆನೆಂದ. ಎಂಟು ಸುತ್ತಿನ ಕೋಟಿ ಗಂಟೆಯ ಒಳಪಾರ ಮಂಟಪದೊಳಗೆ ಹೊಕ್ಕು ಕಳ್ಳತನ ಮಾಡಬೇಕು. ಕಂಡರೆ ಅವರು ಗಂಟಲು ತೆಗೆವರು. ಕೋಟೆ ಹತ್ತಿ ಇಳಿವಾಗ ನೋಟಕರು ಕಂಡರೆ, ನಿಮ್ಮನ್ನು ಹಿಡಿಯುವರು. ಒಂದು ವೇಳೆ ನೀವು ಸಿಕ್ಕರೆ ಬೇಟೆಯ ಅಂಬಿನಲ್ಲೆ ಚುಚ್ಚಿ ಕೊಲ್ಲುವರೆಂದು ಹೇಳುವಳು.

'ಕಲ್ಲಿನ ಮೇಲೆ ಮಳೆ ಸೂಸಿದರೆ ಕಲ್ಲು ಸಿಡಿಯುವುದೆ? ಕಲ್ಲಿನ ಮೇಲೆ ತಾವರೆ ಬೆಳೆಯುವುದೆ? ಹೆಣ್ಣಿನ ಸೊಲ್ಲ ಮೆಚ್ಚುವ ಮರಳನಾರೆಂದನು'. ಕೊನೆಗೂ ಹರನನ್ನು ಒಪ್ಪಿಸಲಾಗಲಿಲ್ಲ. ಪಾರ್ವತಿಯು 'ಶಿವರಾಯ ನೀವು ನೆನೆದಂತೆ ಕಳವು ಜಯಿಸಯ್ಯ' ಎಂದು ಹರಸಿ ಆರತಿಯ ಬೆಳಗಿದಳು. ನಂತರ ಹರ-ನಾರದರು ಓರುಗಲ್ಲಿಗೆ ಕನ್ನವಿಕ್ಕಲು ಬರುವರು. ಹರನು ಬರುವಾಗ ವನವೆಲ್ಲ ಅಚ್ಚಹಸಿರಿನಿಂದ ಕಂಗೊಳಿಸುತ್ತಿತ್ತು. ದಾಳಿಂಬೆ ಅರೆಬಾಯಿ ಬಿಟ್ಟು ನಗುತ್ತಿತ್ತು. ಅಲ್ಲಿನ ಪುರೋದ್ಯಾನದಲ್ಲಿ ಗೊರವಕ್ಕಿ ಗುಟುಕು ಕೊಡುವುದನ್ನು ಶಿವನು ಕಾಣುವನು. ಈ ಶಕುನದಿಂದ ನಿಶ್ಚಿತವಾಗಿ ತಮಗೆ ಅರಮನೆಯ ಬಂಗಾರ ದೊರಕುವುದೆಂದು ಹೇಳುವನು. ಧೀರರಿಬ್ಬರು ಕೋಟೆಯ ಸೇರಿ, ಕನ್ನಗತ್ತಿಗೆ ತಂದ ಹಣ್ಣು, ತೆಂಗಿನಕಾಯಿ, ದೀಪದೂಪಗಳನ್ನು ಅರ್ಚಿಸಿ ಕೈಮುಗಿದರು. ಕನ್ನಗತ್ತಿಯ ಪೂಜಿಸಿದ ನಂತರ ಕನ್ನದ ಬ್ರಹ್ಮಯ್ಯನನ್ನು ನೆನೆಯುತ್ತ ಕನ್ನವಿಕ್ಕಲು ಅನುವಾದರು.

ಹರ-ನಾರದರು ಕನ್ನವಿಕ್ಕುವ ಸರಿಯಾಗಿ ಭೂಮಿಯು ಕಳವಳಿಸಿತು. ಅಚಲ ಗುರಿ ಇಟ್ಟುಕೊಂಡಿದ್ದ ಹರ-ನಾರದರು ಮೊದಲು ಕಂಚಿನ ಕೋಟೆಗೆ ಕನ್ನವಿಕ್ಕುವರು. ನಂತರ ಉಕ್ಕಿನ ಕೋಟೆಗೆ ಲೋಕವು ಉರಿಯುವಂತೆ ಕನ್ನವಿಕ್ಕುವರು. ಮೂರನೆಯದಾಗಿ ಗಾಜಿನ ಕೋಟೆಯನ್ನು ಒಡೆಯುವರು. ಮಾಯದ ನಿದ್ರೆ ಬರಿಸಿದಕ್ಕಾಗಿ ರಾಯನ ಪುರದ ಜನರೆಲ್ಲ ಆಯುಷ್ಯವಾದಂತೆ, ಮರದಂತೆ ಮಲಗಿದ್ದರು. ಹರ-ನಾರದರು ಕತ್ತಿ, ಕಠಾರಿ, ಬಿಲ್ಲಂಬು ಮೊದಲಾದ ಆಯುಧಗಳನ್ನು ತೆಗೆದು ಮಡಗಿದರು. ಮುಂದೆ ಪಾರೆಯದ ಒಡ್ಡಣೆಯನ್ನೆಲ್ಲ ಕೆಡಿಸಿ ಅಂತಪುರವನ್ನು ಪ್ರವೇಶಿಸುವರು. ಅಲ್ಲಿಯ ಸೆಳೆಮಂಚ, ತೂಗುಮಂಚ, ಕುಸುರಿಮಂಚಗಳು ದೀಪದ ಬೆಳಕಿನಲ್ಲಿ ಜಗಜಗಿಸುವವು.

ಹರ-ನಾರದರು ರಾಜನ ಮಂಚ ಹಾಗೂ ಸೌಂದರ್ಯದ ಅಧಿದೇವತೆಯಂತಿದ್ದ ರಾಮರಸಿ ಮಲಗಿದ ಮಂಚವನ್ನು ನೋಡುವರು. ಅರಸಿಯನ್ನು ನೋಡಿದೊಡನೆ ಹರನ ಮನಸ್ಸು ಚಂಚಲವಾಗುತ್ತದೆ. ರಾಮರಸಿಯ ಸೌಂದರ್ಯವನ್ನು ಕೆಳಗಿನ ಪದ್ಯಗಳ ಮೂಲಕ ನೋಡಬಹುದು.

"ಜಾಜಿಯ ಹಾಸಿನ ಮೇಲಣ ಜಾಣೆಯ ನೋಡು ನಾರಂದ
ಕೇತಕಿಯ ಎಸರು ತಲೆದಿಂಬು || ರಾಮಾಯಿ
ಮೂಗು ಸಂಪಿಗೆಯ ಎಸಳಂತೆ

ತೋಳು ತೊಡೆಗಳೆರಡು ಹೊನ್ನ ಬಾಳೆಯ ಕಂಬ
ಬಾಳಲೆ ಹೋಲುವ ತೆಳು ನಸುರು || ಆಕೆಯ ಮುಖ

ಬಾಲ ಚಂದಿರನ ಹೋಲುವಂತೆ

ಸತಿಯರಿಗೆ ಸತಿಯವಳು ಮುಖ ಹೊನ್ನ ಪದ್ಮವು

ಅತಿಭಾವ ಇವಳ ಮುಖದಲ್ಲಿ || ಕಂಗಳ ನೋಟ

ಯತಿಗಳ ತಪವ ಕೆಡಿಸಿದವು""

ಸುಂದರಿಯಾದ ರಾಮಾಯಿಯನ್ನು ಬಿಟ್ಟು ಹೋಗಲು ಮನಸಿಲ್ಲವೆಂದು ಚಿತ್ರಶಾಲೆಗೆ ನಡೆದನು. ಅರಮನೆಯ ಗೋಡೆಗಳ ಮೇಲೆ ನುಲಿಯ ಚಂದಯ್ಯ, ಶಂಕರ ದಾಸಿಮಯ್ಯ, ಮೈದುನ ಮಾರಯ್ಯ, ಬೇಡರ ಕಣ್ಣಪ್ಪ, ಸಿರಿಯಾಳ, ಚೆಂಗಳೆಯರ ಚಿತ್ರಪಟಗಳನ್ನು ಬರೆದಿರುವುದನ್ನು ಕಂಡು ಶಿವಭಕ್ತಿಯನ್ನು ಪ್ರಶಂಸಿಸುವನು. ಪರಶಿವನ ಅಂದಿನ ರಾತ್ರಿಯ ಶಿವಪೂಜೆ ಅಂತಪುರದಲ್ಲಿ ಲಕ್ಷ್ಮಿಯ ಆತಿಥ್ಯದಲ್ಲಿ ವೈಭವದಿಂದ ನಡೆಯುತ್ತದೆ. ಹರ-ನಾರದರು ಮತ್ತೆ ಕನ್ನಕ್ಕೆ ಆರಂಭಿಸುವರು. ಪೆಟ್ಟಿಗೆಯಲ್ಲಿನ ಪಟ್ಟ ದೇವಾಂಗ, ರತ್ನಮಾಣಿಕ್ಯ, ಉಡುಗೆ ವಸ್ತ್ರ, ಬಂಗಾರ, ಹೊನ್ನಗಿಂಡಿಗಳನ್ನು ಹೊರ ತೆಗೆಯುವರು. ಝಲ್ಲಿ, ಚಾಮರ, ಭಲ್ಲೆ, ಕಠಾರಿಗಳನ್ನು ಒಟ್ಟಿಗೆ ಮಾಡುವರು. ರಾಯನ ಕಂಡೆಯನ್ನು ವಶಪಡಿಸಿಕೊಂಡರು. ಮಲಗಿದ್ದ ರಾಮಾಯಿ ಹಾಗೂ ಉಳಿದ ಪರನಾರಿಯರನ್ನು ಮುಟ್ಟದೆ, ಅವರ ಮೈಮೇಲಿನ ವಸ್ತ್ರಾಭರಣಗಳನ್ನು ಜಾಗ್ರತೆಯಿಂದ ತೆಗೆದರು.

ಈ ಗದ್ದಲಕ್ಕೆ ರಾಣಿ ಸಾಕಿದ ಪಂಜರದ ಅರಗಿಳಿ ಪಕ್ಕಬಿಟ್ಟು ಒದರಿದರೂ, ಮಾಯಾದ ನಿದ್ರೆಯ ಕಾರಣ ಯಾರಿಗೂ ಎಚ್ಚರವಾಗಲಿಲ್ಲ. ಹರನಾರದರು ಅವರ ಓಲೆಯ ಭಾಗ್ಯವೊಂದನ್ನು ಬಿಟ್ಟು ಉಳಿದ ಎಲ್ಲವನ್ನೂ ಮೂಟೆ ಕಟ್ಟುವರು. ನಂತರ ಅರಮನೆಯ ಆನೆಗಳ ಮೇಲೆ ಹೇರಿಕೊಂಡು ಕೋಟೆಯ ಬಾಗಿಲುಗಳನ್ನು ದಾಟಿದರು. ಪುರದ ಬೀದಿಗಳಲ್ಲಿ ಮಾಣಿಕ್ಯದ ಮುತ್ತು ಹರವುತ್ತ ಕಳ್ಳರು ವೀರರ ಪುರಕ್ಕೆ ಬಂದರು. ಸೂಳೆಗೇರೆಯಲ್ಲಿ ಆಭರಣಗಳನ್ನು ಸೂರೆ ಮಾಡುತ್ತ, ತಳವಾರ ಗಟ್ಟಿಯಲ್ಲಿ ಝಲ್ಲಿ ಭಲ್ಲೆಗಳನ್ನು ಚೆಲ್ಲುತ್ತ ನಂದಿಯ ಗುಡಿಗೆ ಬಂದರು. ನಂದಿಯ ಮೂರ್ತಿಗೆ ವಸ್ತ್ರಾಭರಣಗಳನ್ನು ಅಲಂಕರಿಸಿದರು. ದಾರಿಯುದ್ದಕ್ಕೂ ಆಭರಣ ಚೆಲ್ಲುತ್ತ ಗುಂಡಬ್ರಹ್ಮಯ್ಯಗಳಿದ್ದ ಮಠಕ್ಕೆ ಬರುವರು. ನಂತರ ಗುಂಡಬ್ರಹ್ಮಯ್ಯಗಳಲ್ಲಿ ಆಶ್ರಯ ಪಡೆಯುವರು. ಮೊರೆ ಹೊಕ್ಕವರನ್ನು ಕೊಡೆವೆಂಬ ಬಿರುದನ್ನು ಹೊಂದಿರುವ ಗುಂಡಬ್ರಹ್ಮಯ್ಯಗಳು ನಿಮಗಾಗಿ ಬಾಳುವ ಶಿರವಕೊಟ್ಟು ಕಾಪಾಡುವೆವು ಎಂದು ನುಡಿದರು. ಹಾಗಾದರೆ ನಮಗೆ ಸಂಚಕಾರವಿಲ್ಲವಲ್ಲವೆಂದು ಹರ-ನಾರದರು ಸುಮ್ಮನಾದರು. ಇವರಲ್ಲಿ ಆಶ್ರಯ ಪಡೆದು ಶರಣರ ಭಕ್ತಿಯನ್ನು ಪರೀಕ್ಷಿಸುವರು. ಶರಣರು 'ಕಾಯಕವೇ ಕೈಲಾಸ'ವೆಂದು ಕಾಯಕ ನಿಷ್ಠೆ ತೋರಿದರು.

೫. ಮೊರೆ ಹೊಕ್ಕವರ ಕಾಪಾಡುವುದು

ಹರ-ನಾರದರು ಅರಮನೆಯ ವಸ್ತ್ರಾಭರಣಗಳನ್ನು ಕದ್ದು ಹೋಗಲು ಬೆಳಕು ಹರಿಯಿತು. ಮಲಗಿದ್ದ ಮಹಾರಾಜ ಎದ್ದವನೇ ತನ್ನ ಹಾಗೂ ರಾಣಿಯ ವಸ್ತ್ರಾಭರಣಗಳು ಇಲ್ಲದಿರುವುದನ್ನು ಕಂಡು

ಗಾಬರಿಗೊಳ್ಳುವನು. ತಕ್ಷಣವೇ 'ತೊಟ್ಟ ವಸ್ತ್ರಾಭರಣ ಕಳವಾಯಿತು ರಾಮಾಯಿ ಅರಮನೆ ಬಯಲಾಯಿತು' ಎಂದು ಎಚ್ಚಿಸುವನು. ಉಗ್ರಕೋಪದಲ್ಲಿ ನನ್ನ ಮಡದಿಯ ಮೈಮುಟ್ಟಿ ಒಡವೆಗಳ ಕದ್ದವರ ಕೊರಳ ಕೊಯಿಸುವೆ, ಅರಮನೆಯ ಕದ್ದವನ ಗರಗಸದಲ್ಲಿ ಕೊಯಿಸುವೆ, ಹೊನ್ನ ಕದ್ದ ಕಳ್ಳನ ಬೆನ್ನಖಂಡವ ಕೊಯಿಸುವೆ, ಕದ್ದ ಕಳ್ಳನಿಗೆ ಶೂಲದ ಶಿಕ್ಷೆ ವಿಧಿಸುವೆ ಎಂದು ಉಗ್ರಕೋಪ ತಾಳುವನು. ಭಂಡಾರವೆಲ್ಲ ಸೂರೆ ಹೋಗಿರುವುದು ತಿಳಿದಾಗಲಂತೂ ಊರೊಳಗಿನ ಕಿಚ್ಚು ಆಕಾಶ ಸುಡುವಂತೆ ಎದೆಯಲ್ಲಿ ಕಿಚ್ಚೇಳುತ್ತದೆ. ಮಂತ್ರಿಮಾನ್ಯರನ್ನು, ಕರುಣಿಕರನ್ನು ಕರೆದು ಕಳ್ಳರನ್ನು ಹಿಡಿದು ತನ್ನಿರೆಂದು ಸಿಡಿಲಂತೆ ಘರ್ಜಿಸುವನು.

ಮಂತ್ರಿಗಳು, ಸುಭಟರು ಅರಮನೆಯ ಅಂಗಳಕ್ಕೆ ಬರುವರು. ಮಂತ್ರಿಮಾನ್ಯರು ಮುತ್ತು, ಒಡವೆಗಳನ್ನು ಆಯ್ದುಕೊಳ್ಳುತ್ತ ಶರಣರ ನಂದಿಗುಡಿಯ ಮುಂದೆ ಬರುವರು. ನಂದಿಗೆ ಚಂದ ಚಂದದಲ್ಲಿ ತೊಡಿಗೆ ತೊಡಿಸಿರುವುದನ್ನು ಕಾಣುವರು. ತಂದ ಒಡವೆಗಳೆಲ್ಲ ನಂದಿಗೆ ತೊಡಿಸಿರುವುದನ್ನು ಕಂಡು ಬೆರಗಾದರು. ಗುಂಡಬ್ರಹ್ಮಯ್ಯರ ಬಾಗಿಲ ಮುಂದೆ ಮುತ್ತು ರತ್ನದ ಗಂಟು ಕಾಣುವುದು. ನಂತರ ಗುಂಡಬ್ರಹ್ಮಯ್ಯರಲ್ಲಿಗೆ ಬಂದು ನಮ್ಮ ರಾಯನ ಅರಮನೆಯ ಕನ್ನವಿಕ್ಕಿ ನಿಮ್ಮಲ್ಲಿ ಕಳ್ಳರು ಬಂದಿರುವರು. ನಮ್ಮ ಒಡೆಯರಾದ ಗಣಪತಿಗೆ ಇದು ತಿಳಿದರೆ, ನಿಮ್ಮ ತಲೆಗೆ ಕಡೆಗಾಲ ಬರುವುದು. ಆದ್ದರಿಂದ ಕದ್ದ ಕಳ್ಳರನ್ನು ನಮಗೆ ಒಪ್ಪಿಸಿ ಎನ್ನುವರು. ಅದಕ್ಕೆ ಗುಂಡಬ್ರಹ್ಮಯ್ಯಗಳು ಈ ಕೆಳಗಿನಂತೆ ಉತ್ತರಿಸುವರು.

"ಸತಿಯನಾದರೆ ಕೊಟ್ಟೆವು ಸುತನಾದರೆ ಕೊಟ್ಟೆವು
ಅತಿಶಯದಿ ನಮ್ಮ ಕಡೆ ಪ್ರಾಣ|| ಹೋದರು
ಪ್ರತಿಯ ಕಳ್ಳರ ನಾವು ಕೊಡೆವೆಂದಾ

ಕೊಟ್ಟರೆ ಕಳ್ಳರ ಕುಟ್ಟುವರೀ ತಲೆಗಳ
ನೆಟ್ಟ ಶೂಲದಲಿ ತೆಗೆವಾರಿ || ಕೊಡೆವೆಂಬ
ಕಟ್ಟಿದ ಬಿರುದ ನಮಗುಂಟು"[5]

ಗುಂಡಬ್ರಹ್ಮಯ್ಯರು ಧೀರ ವೀರರು ಕಾಯಕ ನಿಷ್ಠೆಯೇ ಅವರ ಜೀವಾಳ. ತಮ್ಮ ತಲೆ ಉರುಳಿದರೂ ಕಳ್ಳರನ್ನು ಬಿಟ್ಟುಕೊಡುವುದಿಲ್ಲ ಎಂದು, ಮಂತ್ರಿಗಳಿಗೆ ಹೇಳಿದರು. ಮಂತ್ರಿಗಳು, ಭಟರು ಮಹಾರಾಜರಲ್ಲಿಗೆ ಬಂದು, ಕಳ್ಳರು ಗುಂಡಬ್ರಹ್ಮಯ್ಯರ ಮನೆಯಲ್ಲಿ ಇರುವುದಾಗಿ ತಿಳಿಸುವರು. ಅರಸ ಗಣಪತಿಯು ಪುರದಲ್ಲಿ ನಿಂತು ಮಂತ್ರಿಗಳಿಗೆ ವೀರ ಶರಣರ ಕರೆಯೆಂದ. ಗುಂಡಬ್ರಹ್ಮಯ್ಯಗಳು ಬಂದ ನಂತರ 'ಕದ್ದ ಕಳ್ಳರನ್ನು ಬಿಟ್ಟುಕೊಡಬೇಕು ಇಲ್ಲವೆ ನಾನು ಕೊಡುವ ಶೂಲದ ಶಿಕ್ಷೆಗೆ ಗುರಿಯಾಗಬೇಕೆಂದು' ರಾಜಾಜ್ಞೆ ಮಾಡುವರು. ಆಗ ಶರಣರು ಆಡಿದ ನುಡಿಗೆ ತಪ್ಪಲಾರೆವೆಂದು ಶೂಲಕ್ಕೇರಲು ತಾವು ಸಿದ್ದರೆಂದು ತಿಳಿಸಿದರು.

ಗಣಪತಿರಾಯನು ಶ್ರೀಗಂಧ ಮರದ ಹಲಗೆ ತರಿಸಿ ಎರಡು ಶೂಲಸ್ತಂಭಗಳನ್ನು ನಡೆಸುವನು. ಊರ ಜನರೆಲ್ಲ ಗುಂಡಬ್ರಹ್ಮಯ್ಯರ ಮಹಿಮೆ ನೋಡಲು ಬರುವಂತೆ ನೆರೆದರು. ಆಗ ಅವರು ತಮ್ಮ ಮಠದಿಂದ

ಶೂಲಸ್ಥಂಭವಿದ್ದಲಿಗೆ ಕುಣಿ ಕುಣಿಯುತ್ತ ಬರುವರು. ಈ ಸತ್ಯಶರಣರು ಶೂಲಕ್ಕೇರುವುದನ್ನು ಕೇಳಿದ ತಾಯಂದಿರು ತಮ್ಮ ಮಕ್ಕಳಿಗೆ ಹಾಲುಣಿಸುವುದನ್ನೂ ಮರೆತರು. ರಾಜಾಜ್ಞೆಯಂತೆ ಶೂಲವೇರಿ ಕುಳಿತು ಅಂಗೈಯಲ್ಲಿ ಲಿಂಗವಿಡಿದು ತಮ್ಮ ಕೊನೆಯ ಲಿಂಗಪೂಜೆ ಮಾಡಿದರು. ಅವರ ಸತಿಯರಿಬ್ಬರೂ ತಮ್ಮ ತಮ್ಮ ರುಂಡಗಳನ್ನು ಕತ್ತರಿಸಿ ಹೊನ್ನದ ಹರಿವಾಣದಲ್ಲಿಟ್ಟು ಶೂಲದ ಮೇಲಿದ್ದ ಲಿಂಗಪತಿಗಳಿಗೆ ಆರತಿ ಬೆಳಗುವರು. ಶೂಲವು ನಡುತಿದ್ದಂತೆಯೆ, ಕೈಲಾಸದಿಂದ ಕ್ಷಣಾರ್ಧದಲ್ಲಿ ಮಳೆಸುರಿದು ಒಣಗಿದ್ದ ಶೂಲದ ಮರ ಚಿಗಿಯುವುದು. ಅದು ಅಚ್ಚಹಸಿರು ತಳಿರುಗಳಿಂದ ಕೂಡಿರುವುದು.

ಅಲ್ಲಿ ನೆರೆದ ಜನರೆಲ್ಲ ಬೆರಗಾಗಿ ನಿಂತರು. ಮಹಾರಾಜರು ಇದು ಚಿಗುರಲು ಗುಂಡಬ್ರಹ್ಮಯ್ಯರ ಮಹಿಮೆಯೇ ಕಾರಣವೆಂದು ತಿಳಿದರು. ಶರಣರನ್ನು ಶೂಲಕ್ಕೇರಿಸಿದಕ್ಕಾಗಿ ಪ್ರಾಯಶ್ಚಿತ್ತಪಡುವರು. ಉಭಯ ಶರಣರನ್ನು ಪರಶಿವ ಕೈಲಾಸಕ್ಕೆ ಕರೆದೊಯ್ಯುವರು. ಈ ರೀತಿ ಗುಂಡಬ್ರಹ್ಮಯ್ಯಗಳ ಕುರಿತಾಗಿ ಕಾವ್ಯ-ಪುರಾಣಗಳು, ನೀಲಗಾರರ ಹಾಡುಗಳು, ಜನಪದ ಆಚರಣೆಗಳು, ಶಿಲ್ಪಗಳು ಅಭಿವ್ಯಕ್ತಿಪಡಿಸುತ್ತವೆ.

ಕವಿಗಳ ಇತಿವೃತ್ತ

ದೇಶೀಯ ಇತಿಹಾಸವನ್ನು ನಿರೂಪಿಸುವ 'ಗುಂಡಬ್ರಹ್ಮಯ್ಯಗಳ' ಇಂಥ ಕಥೆಯನ್ನು ಕುರಿತು ಹಲವು ಪ್ರಕಾರದ ಸಾಹಿತ್ಯ ಸೃಷ್ಟಿಯಾಗಿದೆ. ಅವುಗಳಲ್ಲಿ ತ್ರಿಪದಿ, ಚೌಪದಿ, ಸಾಂಗತ್ಯ, ನಾಂದ್ಯ, ಗದ್ಯ ಹಾಗೂ ಹಾಡು ಪ್ರಕಾರದ ಸಾಹಿತ್ಯ ಕೃತಿಗಳು ಪ್ರಮುಖವಾಗಿವೆ. ಕವಿಚನ್ನ ತ್ರಿಪದಿಯನ್ನು, ಓದಿಸುವ ಮಡಿವಾಳಯ್ಯ ಚೌಪದಿಯನ್ನು, ಕಾಶಿಪತಿ ಸಾಂಗತ್ಯವನ್ನು, ಆರಾಧ್ಯ ಶಂಕರ ನಾಂದ್ಯವನ್ನು ಬರೆದಿರುವುದು ತಿಳಿದುಬರುತ್ತದೆ. ಗುಂಡಬ್ರಹ್ಮಯ್ಯಗಳ ಬಗ್ಗೆ ಇರುವಂತ ಒಂದೇ ಕಥೆಯನ್ನು ವಿವಿಧ ಕವಿಗಳು. ವಿವಿಧ ಛಂಧೋಪ್ರಕಾರಗಳಲ್ಲಿ ರಚನೆ ಮಾಡಲು ಕಾರಣವೇನು? ಎಂಬ ಪ್ರಶ್ನೆ ಗೋಚರವಾಗುತ್ತದೆ. ಕ್ರಿ.ಶ.೧೦ನೇ ಶತಮಾನದಲ್ಲಿ ಪಂಪ ಕವಿಯು 'ವಿಕ್ರಮಾರ್ಜುನ ವಿಜಯ'ದಲ್ಲಿ ಕಂದ, ರಗಳೆ, ಷಟ್ಪದಿ, ಚಂಪೂ ಮುಂತಾದ ಪ್ರಕಾರದಲ್ಲಿ ಕಾವ್ಯರಚನೆ ಮಾಡಿದನು. ಅಂದರೆ, ಒಬ್ಬ ಕವಿ ಒಂದೇ ಕೃತಿಯಲ್ಲಿ ಹಲವು ಛಂದಾಪ್ರಕಾರಗಳನ್ನು ಬಳಸಿದಂತಾಯಿತು. ಆದರೆ ಒಂದೇ ಸಾಹಿತ್ಯ ಕೃತಿಯಲ್ಲಿ ವಿವಿಧ ಕವಿಗಳು ವಿವಿಧ ಛಂದೋಮಟ್ಟುಗಳಲ್ಲಿ ರಚನೆ ಮಾಡಿಲ್ಲವೆನಿಸುತ್ತದೆ. ವಿಶಿಷ್ಟತೆ ಎನ್ನುವಂತೆ 'ಗುಂಡಬ್ರಹ್ಮಯ್ಯಗಳ ಸಾಹಿತ್ಯ'ವು ವಿವಿಧ ಕವಿಗಳಿಂದ ವಿವಿಧ ಛಂದಾಪ್ರಕಾರಗಳಲ್ಲಿ ಒಂದೇ ಸಾಹಿತ್ಯ ಕೃತಿ ರಚನೆಯಾಗಿದೆ. ಇದಕ್ಕೆ ಕಾರಣ ಗಮನಿಸುವುದಾದರೆ, ಈ ಕೃತಿಯ ಮೂಲ ಉದ್ದೇಶ ವೀರಶೈವ ಧರ್ಮವನ್ನು ಸಾಹಿತ್ಯದ ಮೂಲಕ ಪ್ರಸಾರ ಮಾಡುವಂತಹದು. ಆಗಿನ ಯುಗಧರ್ಮದಲ್ಲಿ ಒಂದೇ ಪ್ರಕಾರದಲ್ಲಿ ಹೇಳಿದರೆ ಕೆಲವರಿಗೆ ತಿಳಿದರೆ, ಇನ್ನೂ ಕೆಲವರಿಗೆ ತಿಳಿಯುತ್ತಿರಲಿಲ್ಲವೆನಿಸುತ್ತದೆ. ಆದ್ದರಿಂದ ಒಂದೇ ಕೃತಿ ಬೇರೆ ಬೇರೆ ಛಂದೋ ಪ್ರಕಾರಗಳಲ್ಲಿ ರಚನೆಯಾಗಿದೆ. ಸಾಮಾನ್ಯ ಜನರಿಗೆ ತಲುಪುವ ದೃಷ್ಟಿಯಿಂದ, ಯುಗಧರ್ಮದ ಬದಲಾವಣೆಯಿಂದಾಗಿ ಒಂದೇ ಕಥೆಯನ್ನು ವಿವಿಧ ಕವಿಗಳು ಹೇಳಿರಬೇಕು. ಕಾವ್ಯ ಶೈಲಿಯ ವಿಭಿನ್ನತೆಯಿಂದಾಗಿ ಮತ್ತು ಶರಣ ಚಳುವಳಿ ನಡೆದಿರುವುದರಿಂದ ಮುಸುಕಾಗದಂತೆ ಮುಂದಿನ ತಲೆಮಾರಿಗೆ ವರ್ಗಾಯಿಸುವುದಕ್ಕಾಗಿ ಹೀಗೆ ರಚನೆಯಾಗಿರಬೇಕು.

೧. ಕವಿಚನ್ನ

ಕ್ರಿ.ಶ.೧೭೦೦ರಲ್ಲಿ ಜೀವಿಸಿದ್ದ ಈತ ಗುಂಡಬ್ರಹ್ಮಯ್ಯಗಳ ತ್ರಿಪದಿಯನ್ನು ಬರೆದಿದ್ದಾನೆಂಬುದಕ್ಕೆ ಭಿನ್ನಾಭಿಪ್ರಾಯಗಳಿವೆ. ಡಾ.ಕೆ.ರವೀಂದ್ರನಾಥರು ಸಂಪಾದನೆಗೆತ್ತಿಕೊಂಡ ಮೈಸೂರು ವಿಶ್ವವಿದ್ಯಾನಿಲಯದ ಕಾಗದ ಪ್ರತಿ (ನಂ.ಕೆ.ಬಿ.೩೫೧/೧)ಯಲ್ಲಾಗಲೀ, ದಿ.ಡಾ.ವಿ.ಶಿವಾನಂದ ಅವರು ಸಂಪಾದಿಸಿಕೊಟ್ಟ ಪ್ರತಿಗಳಲ್ಲಾಗಲಿ ಕವಿಯ ಹೆಸರಿನ ಉಲ್ಲೇಖಗಳಿಲ್ಲ. ಆದರೆ ಮೈಸೂರು ವಿ.ವಿ. (ಕೆ.ಬಿ.೩೫೧/೧)ಯ ಪ್ರತಿಯ ೧ನೇ ಸಂಧಿ ೪ನೇ ಪದ್ಯವಾದ

"ಸಿರಿಯುಳ್ಳ ಶಿವರಾಯ ಧರೆಗೆ ಕಳವಿಗೆ ಬಂದು
ಶರಣರೊಂದಾಗಿ ಮೆರದಾರು|| ಶ್ರೀಗಿರಿಯ
ವರೆದರೀ ಪುಣ್ಯಕಥೆಯನೂ"[೭]

ಇಲ್ಲಿ 'ಶ್ರೀಗಿರಿಯ ವರೆದರೀ ಪುಣ್ಯಕಥೆಯನೂ' ಗಮನಿಸಿ ಸಿ.ನಟರಾಜ್ ಅವರು ಕ್ರಿ.ಶ.೧೫೨೫ರಲ್ಲಿ ಇದ್ದ ಸಾನಂದಗಳ ಸಾಂಗತ್ಯ, ಹರಿಶ್ಚಂದ್ರ ಸಾಂಗತ್ಯ ಬರೆದ ಓದುವ ಗಿರಿಯನು ಗುಂಡಬ್ರಹ್ಮಯ್ಯಗಳ ತ್ರಿಪದಿಯನ್ನು ಬರೆದಿರಬೇಕೆಂದು ಊಹಿಸುತ್ತಾರೆ. ಡಾ.ವಿ.ಶಿವಾನಂದ ಅವರಿಗೆ ದೊರೆತ ಗುಂಡೇನಹಳ್ಳಿಯ ಪ್ರತಿಯಲ್ಲಿ

"ಭಿನ್ನ ಮೇಲಣ ಪೀಠ ರತ್ನಹೇಮದ ಪಚ್ಚೆ
ಹೊನ್ನ ಗಂಗಳ ಹುರಿಗೆಜ್ಜೆ
ಭಿನ್ನವಿಲ್ಲದೆ ಮುತ್ತಿನ ದಂಡೆಯ ಕೊರಳೊಳು
ಚನ್ನನವಗೆ ಶರಣೆಂಬೆ"[೮]

ಎಂಬ ಪದ್ಯದಲ್ಲಿ 'ಚೆನ್ನ' ಎಂಬುದು ಗುಂಡಬ್ರಹ್ಮಯ್ಯಗಳ ತ್ರಿಪದಿಯ ಕರ್ತೃ ಎನ್ನುತ್ತಾರೆ. ಇದಕ್ಕೆ ಪೂರಕವಾಗಿ ಲಕ್ಕುಂಡಿಯ ಬದ್ನಿಮಠದಲ್ಲಿ ದೊರೆತ ಗುಂಡಬ್ರಹ್ಮಯ್ಯಗಳ ತ್ರಿಪದಿಯ ಕಟ್ಟುಗಳಲ್ಲಿ 'ಶಿಬಿರಾಯನ ಚರಿತ್ರೆ' ಹೆಸರಿನ ಕೃತಿಯೊಂದು ದೊರೆಯಿತು. ಅದರಲ್ಲಿ ೨ನೇ ಸಂಧಿ ೬೫ನೆಯ ಪದ್ಯದಲ್ಲಿ ಕವಿಚೆನ್ನ ಎಂದು ಕರ್ತೃವನ್ನು ಹೆಸರಿಸಲಾಗಿದೆ. ಈತನೇ ಗುಂಡಬ್ರಹ್ಮಯ್ಯಗಳ ಚರಿತ್ರೆ ಹಾಗೂ ಶಿಬಿರಾಯನ ಚರಿತ್ರೆಯನ್ನು ಬರೆದಿದ್ದಾನೆಂದು ವಿ.ಶಿವಾನಂದ ಅವರು ಅನುಮಾನಿಸಿದ್ದಾರೆ. ಗುಂಡಬ್ರಹ್ಮಯ್ಯಗಳ ಚರಿತ್ರೆ ಹಾಗೂ ಶಿಬಿರಾಯನ ಚರಿತ್ರೆ ಕೃತಿಗಳೆರಡರಲ್ಲಿಯ ಸಾಮ್ಯತೆಯನ್ನು ಹೀಗೆ ವಿವರಿಸುತ್ತಾರೆ. (ಗುಂಡಬ್ರಹ್ಮಯ್ಯಗಳ ಚರಿತ್ರೆ, ಪುಟ.೩೦-೩೧)

ಶಿಬಿರಾಯನ ಚರಿತ್ರೆ	ಗುಂಡಬ್ರಹ್ಮಯ್ಯಗಳ ಚರಿತ್ರೆ
೧. ಛಂದಸ್ಸು-ತ್ರಿಪದಿ, ಸಂಧಿ ೩, ಪದ್ಯ ೫೨೩	೧. ಛಂದಸ್ಸು-ತ್ರಿಪದಿ, ಸಂಧಿ ೩, ಪದ್ಯ ೫೮೪
೨. ವಸ್ತು-ಮೊರೆ ಹೊಕ್ಕವರನ್ನು ಕಾಪಾಡುವುದು	೨. ವಸ್ತು-ಮೊರೆ ಹೊಕ್ಕವರನ್ನು ಕಾಪಾಡುವುದು
೩. ಮುಖ್ಯ ಪಾತ್ರಗಳು-ಹರ, ನಾರದ ಶಿಬಿರಾಯ	೩. ಮುಖ್ಯ ಪಾತ್ರಗಳು-ಹರ, ನಾರದ, ಗುಂಡ ಬ್ರಹ್ಮಯ್ಯ

೪. ಸಾಮ್ಯ ಪದ್ಯಗಳು	೪. ಸಾಮ್ಯ ಪದ್ಯಗಳು
ಧರೆಗೆ ಉತ್ತರಭಾಗ ಏಳೂರು ಪುರ ಅದು ಹರನ ಭಕ್ತಿ ಕಳಶವು-ತಾನಾದ ಪುರ ಮಹಾಪುಣ್ಯ ಕಥೆಗೇಳಿ (ಸಂ.೧, ಪದ್ಯ ೧೩)	ಉತ್ತರ ದೇಶದೊಳೊಂದು ಓರುಗಲ್ಲೆಂಬುದು ಅದ ರೊತ್ತಲಿ ಪುರವು ಕೈಲಾಸದೊಳಗಣ-ಶಿವ ಭಕ್ತರು ಮೆರೆದ ಕಥೆಕೇಳಿ (ಸಂ.೧, ಪ.೧)
ಪುರವನಾಳುವನೊಬ್ಬ ಅರಸು ಶ್ರೀ ಶಿಬಿರಾಯ ಮೊರೆ ಹೊಕ್ಕವರ ಕೊಡೆನೆಂಬ ಪಂಥದಿ ಬಿರುದಿನ ಕಹಳೆ ಹಿಡಿದಾರು (೧-೧೪)	ಮರೆಹೊಕ್ಕರೆ ಕಾಯ್ವ ಮಾರಾಂತಕರವರಯ್ಯ ಶರಣಾಗತ ವಜ್ರಪಂಜರರು-ತಾವೆಂಬ ಬಿರುದಿನ ಕಹಳೆ ಹಿಡಿದಾರು (೧-೨೬)
ಏಳೂರು ಪುರದ ಅಂದವ ನೋಡಿ ನಾ ಬರುವೆ ಲಿಂಗಯ್ಯ ಹೋಗುವ ಪರಿಯ ಹೇಳೆಂದರೆ ಜಂಗಮ ರೂಪು ಧರಿಸಿದ (೧-೨೬)	ಜಂಗಮ ರೂಪಿಂದ ಶೃಂಗಾರವಾಗೆಂದು ಲಿಂಗಯ್ಯ ತನ್ನ ಮುಡಿಗಳ-ನಾರದನ ಸ ರ್ವಾಂಗಕ್ಕೆ ಮೆಚ್ಚಿ ಧರಿಸಿದ (೧-೩೭)

ಹೀಗೆ ಮೇಲಿನ ಅವತರಣಿಕೆಗಳಲ್ಲಿ ಕಥೆಯ ಸಂದರ್ಭ, ಛಂದಸ್ಸು, ವಸ್ತು, ಪಾತ್ರ, ಸನ್ನಿವೇಷಗಳು ಇತ್ಯಾದಿ ಸಂಗತಿಗಳನ್ನು ಎದುರಿಗಿಟ್ಟುಕೊಂಡು ಈ ಎರಡು ಚರಿತ್ರೆಗಳು ಏಕ ಕವಿಕೃತವೆಂದು ನಿರ್ಧರಿಸಿದ್ದಾರೆ. ಮೇಲಾಗಿ 'ಹತ್ತರಕಿಯ ಚಿಕ್ಕವೀರಣ್ಣನ ಬಲಗೊಂಬೆ' ಎಂಬ ಶಿಬಿರಾಯ ಚರಿತ್ರೆಯ (ಸಂಧಿ ೧. ಪದ್ಯ ೮) ಹೇಳಿಕೆಯಿಂದ ಕವಿ ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಅಥರ್ಗಾ ಇಲ್ಲವೆ ಹತ್ತರಕಿಯವನಾಗಿರಬೇಕು ಎಂದು ಪ್ರತಿಪಾದಿಸಿದ್ದಾರೆ. ಭಾವಸಾಮ್ಯ ಮತ್ತು ಭಾಷಾಸಾಮ್ಯಗಳೆರಡೂ ಈ ಚರಿತ್ರೆಗಳು ಏಕ ಕವಿಯಿಂದ ರಚನೆಯಾಗಿವೆ ಎಂಬುದಕ್ಕೆ ಪ್ರಮಾಣವಾಗಿವೆ. ಈ ಎರಡು ಕೃತಿಯಲ್ಲಿ ಬರುವ ಛಂದಸ್ಸು, ವಸ್ತು, ಪಾತ್ರಗಳು, ಸಾಮ್ಯತೆಯಿರುವ ಪದ್ಯಗಳು, ಭಾವಸಾಮ್ಯ, ಭಾಷೆ ಸಾಮ್ಯತೆಯ ಕಾರಣದಿಂದಾಗಿ ಗುಂಡಬ್ರಹ್ಮಯ್ಯಗಳ ಚರಿತ್ರೆಯನ್ನು ಕವಿಚನ್ನನೇ ಬರೆದಿರಬೇಕೆಂಬುದಕ್ಕೆ ನನ್ನ ಸಹಮತವಿದೆ.

೨. ಓದಿಸುವ ಮಡಿವಾಳಯ್ಯ

ಗುಂಡಬ್ರಹ್ಮಯ್ಯಗಳ ಚೌಪದಿಯನ್ನು ಬರೆದ ಕವಿ ಮಡಿವಾಳಯ್ಯ. ಕ್ರಿ.ಶ. ಸುಮಾರು ೧೬-೧೭ನೇ ಶತಮಾನದಲ್ಲಿ ಜೀವಿಸಿದಂತೆ ತೋರುತ್ತದೆ. ಚೌಪದಿಯ ೧೪೭ನೆಯ ಪದ್ಯದಲ್ಲಿ

"ಮೇಧಿನಿಯೊಳಧಿಕ ಓರ್ಗಲ್ಲ ವೋದಿಸುವಾ।
ಸಾಧುಭಕ್ತನು ಮಡಿವಾಳಯ್ಯನಿಗೆ ಶಿವಸುಖವಾ।
ಆದರದಿ ಕೊಟ್ಟು ಹೇಳಿಸಿದನೀ ಪದವಾ।
ಕಾದು ರಕ್ಷಿಸು ಹರನೆ ಮುಕ್ತಿಸಂಪದವಾ"[೯]

ಎಂಬ ಉಲ್ಲೇಖವಿದೆ. ಹೀಗಾಗಿ ಓದಿಸುವ ಕಾಯಕದವನಾದ ಮಡಿವಾಳಯ್ಯ ಓರುಗಲ್ಲಿನವನು. ಕಲ್ಯಾಣ ಕ್ರಾಂತಿಯ ನಂತರ ಶರಣ ಸಾಹಿತ್ಯ ಸಂಸ್ಕೃತಿಗಳ ಅಸ್ತಿತ್ವವನ್ನು ಒಪ್ಪವಾಗಿ ಉಳಿಸಿಕೊಂಡು ಬಂದವರು ಓರುಗಲ್ಲಿನ ಕಾಕತೀಯರು. ಪ್ರಾಯಶಃ ಇವರ ಆಶ್ರಿತ ಕವಿಯಾಗಿ ಓದಿಸುವ ಮಡಿವಾಳಯ್ಯ ಈ ಶಿವಕಥೆಯನ್ನು ರಚಿಸಿರಬಹುದು.

೩. ಕಾಶಿಪತಿ

ಗುಂಡಬ್ರಹ್ಮಯ್ಯಗಳ ಸಾಂಗತ್ಯ ಬರೆದ ಕಾಶಿಪತಿ ಶ್ರೇಷ್ಠಮಟ್ಟದ ಕವಿಯಾಗಿದ್ದಾನೆ. ೧೮ ಸಂಧಿ ೧೬೧೩ ಪದ್ಯಗಳ ವಿಸ್ತಾರವಾದ ಕಾವ್ಯದಲ್ಲಿ ಲೋಕಜ್ಞಾನ, ಕಾವ್ಯಜ್ಞಾನಗಳನ್ನು ಮೇಳೈಸಿದ ಕವಿಯೀತ. ಆರಂಭದ ಸಂಧಿಯ ೨೩ನೇ ಪದ್ಯ ಹಾಗೂ ೧೮ನೇ ಸಂಧಿ ೧೪೬ನೆಯ ಪದ್ಯದಲ್ಲಿ ಕವಿ ತನ್ನ ಪರಿಚಯವನ್ನು ಹೀಗೆ ಹೇಳಿಕೊಂಡಿದ್ದಾನೆ.

"ಶಿವಶರಣರ ಭೃತ್ಯ ಶಿವನ ಹಂಗಿಗನು
ಶಿವಕವಿಗಳ ಕಿಂಕರನೂ
ಭವನದೊಳಗೆ ಕಾಶೀನಾಥ ಹೊಗಳಿದ
ಶಿವಶರಣ ಕಾವ್ಯವನು"[೧೦]

ಎಂದಿದ್ದಾನೆ. ಹೀಗಾಗಿ ಶಿವಶರಣರ ಶಿವನ ಕಿಂಕರನಾದ ಕಾಶೀನಾಥ ಗುಂಡಬ್ರಹ್ಮಯ್ಯಗಳ ಕಾವ್ಯವನ್ನು ಹೇಳಿರುವುದಾಗಿ ಪ್ರಕಟಿಸಿದ್ದಾನೆ. ತನ್ನ ವಂಶಸ್ಥರನ್ನು ಕುರಿತು ಪದ್ಯವೊಂದರಲ್ಲಿ ಹೀಗೆ ತಿಳಿಸುತ್ತಾನೆ.

"ಅಳಿಯ ಸೋಮ ಮಲ್ಲಿನಾಥ ಭೂಪಾಲನ
ಕರಣಿಕ ನರಸಪ್ಪನ ಸುತನೂ
ಇಳೆಯೊಳಾತನ ಸುತ ಮಧುವರಸನ ಮಗ
ತಿಳಿದು ಹೇಳಿದ ಕಾಶಿಪತಿಯೂ"[೧೧]

ಕಾಶೀನಾಥ, ಕಾಶೀಪತಿಯೆಂದು ಕರೆಸಿಕೊಳ್ಳುವ ಈತ ಮಧುವರಸನ ಮಗ ಮತ್ತು ಕರಣಿಕ ನರಸಪ್ಪನ ಮೊಮ್ಮಗ. ಈ ನರಸಪ್ಪ ಮಲ್ಲಿನಾಥ ಭೂಪಾಲನ ಆಸ್ಥಾನ ಕರಣಿಕ. "ಮಲ್ಲಿನಾಥ ಭೂಪಾಲನು ಅಳಿಯ ಸೋಮನಮಗ. ಈ ಅಳಿಯ ಸೋಮನನ್ನು ಚಿತ್ರದುರ್ಗದ ಕ್ರಿ.ಶ.೧೩೫೫ರ ಸಂಪಿಗೆ ಸಿದ್ದೇಶ್ವರ ಗುಡಿಯ ಶಾಸನದಲ್ಲಿ 'ಅಳಿಯ ಸಾಯಿನಾಯಕ' ಎಂದು ಸಂಬೋದಿಸಲಾಗಿದೆ. ಈತನನ್ನು ಸೋಮ, ಸೋಮಯ, ಸೋಮಯ್ಯ ಎಂದು ಕರೆಯುತ್ತಿದ್ದರು. ಈ ಸೋಮಯ್ಯ ಇಲ್ಲವೆ ಸಾಯಿನಾಯಕ ೧೩೦೫ ರಲ್ಲಿ ಕುಮ್ಮಟದ ಕಂಪಿಲರಾಯನೆದರು ಹೋರಾಡಿ ಹೊಳಲ್ಕರೆ ಯುದ್ಧದಲ್ಲಿ ಸಾಯುತ್ತಾನೆಂಬುದನ್ನು ಹೊಳಲ್ಕೆರೆ ಶಾಸನ ತಿಳಿಸುತ್ತದೆ. ಈತ ಬುಕ್ಕರಾಯನ ಸಹೋದರಿಯನ್ನು ಮದುವೆಯಾಗಿದ್ದನು. ಮತ್ತು ಮುಮ್ಮಡಿ ಬಲ್ಲಾಳನ ಮೈದುನನೂ ಆಗಿದ್ದನು. ಇಷ್ಟು ವಿಚಾರಗಳ ಹಿನ್ನಲೆಯಲ್ಲಿ ಚಿತ್ರದುರ್ಗವನ್ನಾಳಿದ ಮಲ್ಲಿನಾಥ ಭೂಪಾಲನ ಆಸ್ಥಾನ ಕರಣಿಕ ನರಸಪ್ಪ ಆಡಳಿತ ಸಂಬಂಧೀ ದಾಖಲೆಗಳ ಬರಹಕ್ಕೆ ತನ್ನನ್ನು ತೊಡಗಿಸಿಕೊಂಡಿದ್ದರೆ,

ಆತನ ಮೊಮ್ಮಗ ಕಾಶಿಪತಿ ಮಲ್ಲಿನಾಥ ಭೂಪಾಲನ ಆಶ್ರಿತನಾಗಿ ಇಲ್ಲವೆ ಅನಂತರದಲ್ಲಿ ಈ ಕಾವ್ಯವನ್ನು ರಚಿಸಿರಬಹುದು"[೧೨]. ಒಟ್ಟಿನಲ್ಲಿ ಗುಂಡಬ್ರಹ್ಮಯ್ಯಗಳ ಸಾಂಗತ್ಯದ ಕರ್ತೃವಾದ ಕಾಶಿಪತಿ ಚಿತ್ರದುರ್ಗದ ಪರಿಸರದವನೆಂದು ಹೇಳಲು ಸಾಧ್ಯವಾಗುತ್ತದೆ.

೪. ಆರಾಧ್ಯ ಶಂಕರ

ಶರಣರಿಗೆ ಶರಣಾರ್ಥಿನಾಂದ್ಯ ಬರೆದ ಕವಿ 'ಹರಕೃತಿಯ ವಿಸ್ತರಿಸಿದಾರಾಧ್ಯಲೋಲ ಶಂಕರ' ಹಾಗೂ 'ಪ್ರೇಮದಿಂ ಬಲಗೊಂಡು ಪೇಳ್ವ ಚೇರಮಾಂಕನ ಕಾವ್ಯವನು' ಎಂದು ಹೇಳುವಲ್ಲಿ ಈ ಕೃತಿಯ ಮತ್ತೊಂದು ಹೆಸರು ಚೇರಮಾಂಕನಕಾವ್ಯವೆಂದು ತಿಳಿಯುತ್ತದೆ. ಚನ್ನವೀರೇಶನ ಶಿಷ್ಯ ಗಂಗಪ್ಪ ಶೆಟ್ಟಿ ಚೇರಮಾಂಕನ ತಂದೆ. ೧೪೪೮ರಲ್ಲಿ ಗುಬ್ಬಿಮಲ್ಲಣಾರ್ಯನ ಕೃಪೆಯಿಂದ ಚೇರಮಕಾವ್ಯ ರಚಿಸಿದನೆಂದು ಕವಿ ಹೇಳಿಕೊಂಡಿದ್ದಾನೆ. ವಾರ್ಧಕ ಷಟ್ಪದಿಯಲ್ಲಿ ಸೃಷ್ಟಿಯಾದ ಈ ಕೃತಿಯವಸ್ತು ೬೩ ಪುರಾತನ ಶಿವಭಕ್ತರಲ್ಲಿ ಒಬ್ಬನಾದ ಚೇರಮನನ್ನು ಕುರಿತಾಗಿದೆ.

ಪ್ರಸ್ತುತ ಶರಣರಿಗೆ ಶರಣಾರ್ಥಿ ನಾಂದ್ಯ ಬರೆದ ಆರಾಧ್ಯ ಶಂಕರಕವಿ ಚೇರಮಾಂಕ ಕಾವ್ಯವೆಂದು ತನ್ನ ಕೃತಿಯನ್ನು ಕರೆದಿದ್ದರೂ ಚೇರಮಾಂಕನ ವಿಷಯ ಇಲ್ಲಿಲ್ಲ. ನಿಷ್ಠೆ, ತತ್ವ, ಸಿದ್ಧಾಂತಗಳಿಗೆ ಬದ್ಧರಾಗಿ ಬದುಕಿದ ಶರಣರ ಕಥೆಗಳ ಸಂಕಲನವೆಂಬಂತೆ ರಚನೆಯಾಗಿದೆ. ಗುಂಡಬ್ರಹ್ಮಯ್ಯರ ಕಥೆ ಹೇಳುವ ಮೊದಲು ಗುರುಸ್ತುತಿ ಮಾಡಿದ ಆರಾಧ್ಯಶಂಕರ ತನ್ನ ಗುರುವಿನ ಬಗ್ಗೆ ಹೀಗೆ ತಿಳಿಸುತ್ತಾನೆ.

"ಮುನಿವರನು ಋಷಿಶೃಂಗನಾಶ್ರಮದ ಮಧ್ಯದೊಳು
ಘನತರದ ತುಂಗಭದ್ರೆಯ ತಡಿಯೊಳುಟ್ಟಿರುವ
ವಿನಯದಿಂ ರಾಜಿಸುವ ಶೃಂಗಪುರ ಪಟ್ಟಣವು
ಮನುಮುನಿಗಳೆರಗಿ ಪಡಮಡುವ ಮಲ್ಲೇಶ್ವರನ ಚರಣಕಮಲಾಧರನೂ"[೧೩] ಎಂದಿದ್ದಾನೆ. ಮತ್ತು ತನ್ನ ಕುರಿತು ಕೆಳಗಿನಂತೆ ಹೇಳಿಕೊಂಡಿದ್ದಾನೆ.

"ಪೇಳುತಿರ್ದನು ಬಳಿಕ ಆರಾಧ್ಯಶಂಕರನು
ಕೇಳುತಿರ್ದನು ಭೂಪ ಅತಿ ಹರುಷ ಕೊನರುತಲಿ
ದಾಳಿಸುವ ಜಿಹ್ವೆಯೊಳು, ಹರಕೃತಿಯ ವಿಸ್ತರಿಸಿ
ಮೇಳೈಸಿ ಶರಣಕುಲಗಡದೊಗ್ಗಿನೊಳಲ್ಲಿ ಭವನು ತಲೆದೂಗಲು||

ಆಲಿಸಲು ಕರ್ಣಕಮೃತದ ಸೋನೆ ಸುರಿವಂತೆ
ಸಾಲ್ಗೊಳಿಸಿ ಹರಕೃತಿಯ ವಿಸ್ತರಿಸಿದಾರಾಧ್ಯ
ಲೋಲಶಂಕರ ಚೇರಮಾಂಕನ ಕಾವ್ಯವನು
ಸೂರಿಯಂಘ್ರಿಯ ನೆನೆದು ಶರಣ ವಿಸ್ತರಿಸಿದನು ಕೇಳುತಿರ್ದರು ಭಕ್ತರು"[೧೪]

ಈ ಎರಡು ಪದ್ಯಗಳಿಂದ ಶರಣರಿಗೆ ಶರಣಾರ್ಥಿನಾಂದ್ಯದ ಕರ್ತೃ ಆರಾಧ್ಯಶಂಕರರಾಗಿದ್ದಾರೆ. ಈತನ ಗುರು ಹಂಪಿ ಪರಿಸರದ ಶೃಂಗಪುರ ಪಟ್ಟಣದವನಾದ ಮಲ್ಲೇಶ್ವರನಾಗಿದ್ದಾನೆ. ಈ ಶೃಂಗಪುರಪಟ್ಟಣ ಯಾವುದಾಗಿರಬೇಕೆಂಬುದು ಶೋಧಿಸಬೇಕಾದ ಸಂಗತಿ. ಕವಿ ಆರಾಧ್ಯಶಂಕರ ಹಂಪಿ ಪರಿಸರದಲ್ಲಿದ್ದುಕೊಂಡು ಸುಮಾರು ಕ್ರಿ.ಶ.೧೬೫೦ರಲ್ಲಿ ಕಂಪ್ಲಿ ಭಾಗದಲ್ಲಿ ಜನಾದರಣೆಯನ್ನು ಪಡೆದಿದ್ದನು. ವೃತ್ತಿಗಾಯಕರಾದ ನೀಲಗಾರರು ಗುಂಡಬ್ರಹ್ಮಯ್ಯರ ಬಗ್ಗೆ ಮೌಖಿಕವಾಗಿ ಹಾಡುಗಳನ್ನು ಹಾಡಿದ್ದಾರೆ. ಅವುಗಳನ್ನು ಡಾ.ಪಿ.ಕೆ.ರಾಜಶೇಖರ ಅವರು 'ಜನಪದ ಶರಣರ ಕಾವ್ಯಗಳು' ಎಂಬ ಕೃತಿಯಲ್ಲಿ ಪ್ರಕಟಿಸಿದ್ದಾರೆ. ಈ ಮೇಲಿನಂತೆ ವಿವಿಧ ಲೇಖಕರು ವಿವಿಧ ಛಂದೋಮಟ್ಟುಗಳಲ್ಲಿ ಒಂದೇ ಸಾಹಿತ್ಯ ಕೃತಿಯನ್ನು ರಚನೆ ಮಾಡಿರುವುದು ವಿಶೇಷದ ಸಂಗತಿ.

ಗುಂಡಬ್ರಹ್ಮಯ್ಯಗಳ ಇತಿವೃತ್ತ

ಗುಂಡಬ್ರಹ್ಮಯ್ಯರು ಬಸವೋತ್ತರ ಕಾಲದ ಶಿವಶರಣರು. ಕಾವ್ಯದಲ್ಲಿ ಇವರನ್ನು ಗುಂಡಬೊಮ್ಮಯ್ಯ, ಗುಂಡುಬೊಮ್ಮಯ್ಯ, ಗುಂಡುಬೊಮ್ಮ ಮುಂತಾಗಿ ಏಕವ್ಯಕ್ತಿಯಂತೆ ಪ್ರಸ್ತಾಪಗೊಂಡಿದ್ದಾರೆ. ಗುಂಡಯ್ಯ ಬ್ರಹ್ಮಯ್ಯ ಎಂಬ ಇಬ್ಬರು ಭಾವಮೈದುನರು. 'ಭಾವಮೈದುನ ಬೇಧಗಳಿಲ್ಲ ಜೀವವೊಂದಾಗಿ ಇರುತಿಹರು, ಈತನು ಬೊಮ್ಮಣ್ಣ ನಮ್ಮ ಭಾವ' ಎಂಬ ಕಾವ್ಯೋಕ್ತ ಉಲ್ಲೇಖಗಳು ಭಾವಮೈದುನ ಸಂಬಂಧವುಳ್ಳವರೆಂದು ತಿಳಿಸುತ್ತವೆ. ಇವರು ಕ್ರಿ.ಶ.೧೧೯೯-೧೨೬೨ರಲ್ಲಿ ಜೀವಿಸಿದ್ದ ಓರಂಗಲ್ಲಿನ ಗಣಪತಿರಾಯನ ಕಾಲದಲ್ಲಿ ಇದ್ದರೆಂಬುದನ್ನು ಎಲ್ಲ ವೀರಶೈವ ಕಾವ್ಯ-ಪುರಾಣಗಳು ಸಮರ್ಥಿಸಿಕೊಳ್ಳುತ್ತವೆ. ಡಾ.ಕೆ.ರವೀಂದ್ರನಾಥರು ಇವರ ಕಾಲವನ್ನು ಕ್ರಿ.ಶ.೧೨೬೨ ಎಂದು ಸೂಚಿಸಿದ್ದಾರೆ. ಓರಂಗಲ್ಲಿನ ಕಾಕತೀಯರ ದೊರೆ ಗಣಪತಿರಾಯನ ಕಾಲದಲ್ಲಿ (೧೧೯೯-೧೨೬೨) ಗುಂಡಬ್ರಹ್ಮಯ್ಯರು ಜೀವಿಸಿದ್ದರೆಂಬ ಸಂಗತಿ ಮತ್ತು ಕೆಲವು ಚಾರಿತ್ರಿಕ ಪ್ರಮಾಣಗಳೂ ಇವೆ. ಇವೆರಡರ ದೃಷ್ಟಿಯಿಂದ ಇಲ್ಲಿ ಈ ಶರಣರ ಕಾಲನಿರ್ಣಯವನ್ನು ಮಾಡಿದೆ.

ಗುಂಡಬ್ರಹ್ಮಯ್ಯಗಳನ್ನು ಸಹಸ್ರಗಣನಾಮದಲ್ಲಿ ಉಲ್ಲೇಖಿಸಿದ ಮಲ್ಲಿಕಾರ್ಜುನ ಪಂಡಿತರಾಧ್ಯರ ಕಾಲ, ಕವಿಚರಿತೆಕಾರರು ಹೇಳುವಂತೆ ಕ್ರಿ.ಶ.೧೧೬೦ ಆಗಿದ್ದರೂ[೧೫] ಎಸ್.ರಾಮಚಂದ್ರಶಾಸ್ತ್ರಿ ಅವರ ಅಭಿಪ್ರಾಯದಲ್ಲಿ ಈತನ ಜೀವಿತದ ಪರಮಾವಧಿಯ ಗಡುವು ಕ್ರಿ.ಶ.೧೧೮೦ರ ವರೆಗಿದೆ.[೧೬] ಗುಂಡಬ್ರಹ್ಮಯ್ಯಗಳು ಪಂಡಿತಾರಾಧ್ಯರಿಗೆ ಕಿರಿಯ ಸಮಕಾಲೀನರಾಗಿದ್ದು, ತಮ್ಮ ಆಚಾರ ನಿಷ್ಠೆಯಿಂದ ತತ್ಕಾಲದಲ್ಲಿ ಹೆಸರುವಾಸಿಗಳಾಗಿ 'ಸಹಸ್ರಗಣನಾಮ'ದಲ್ಲಿ ಸೇರಿರಬೇಕು. ವೀರಶೈವ ಆಚಾರ್ಯ ಪಂಚಕರಲ್ಲಿ ಒಬ್ಬರಾದ ಮರುಳಸಿದ್ಧರು ಗುಂಡಯ್ಯ-ಬ್ರಹ್ಮಯ್ಯಗಳನ್ನು ಓರಂಗಲ್ಲಿನಲ್ಲಿ ಸಂದರ್ಶಿಸಿದ ಕಾಲ ಕ್ರಿ.ಶ.೧೨೦೦ ಎಂಬುದಾಗಿ ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು ಮರುಳಸಿದ್ಧ ಕಾವ್ಯವನ್ನು ವಿಮರ್ಶಿಸುತ್ತ ಹೇಳುವರು. ಹೀಗೆ ಗಣಪತಿರಾಯ ಬದುಕಿದ್ದ ಕಾಲ, ಪಂಡಿತಾರಾಧ್ಯರ ಕಾಲದ ವಿಚಾರ, ಮರಳಸಿದ್ಧರು ಮತ್ತು ಗುಂಡಬ್ರಹ್ಮಯ್ಯರು ಓರಂಗಲ್ಲಿನಲ್ಲಿ ಸಂದರ್ಶಿಸಿದ ಕಾಲ, ಅನಂತರದ ದಿನಗಳಲ್ಲಿ ಇವರ ಹೆಸರಿನ ದೇವಸ್ಥಾನ ಓರಂಗಲ್ಲಿನಲ್ಲಿ ನಿರ್ಮಾಣವಾಗಿರುವುದು ಮುಂತಾದ ಸಂಗತಿಗಳನ್ನು ಗಮನಿಸಿದರೆ, ಡಾ.ಕೆ.ರವೀಂದ್ರನಾಥರು ಹೇಳಿರುವ ಕ್ರಿ.ಶ.೧೨೬೨ರಲ್ಲಿ ಜೀವಿಸಿರಬೇಕು ಎಂಬ ಮಾತು ಸೂಕ್ತವೆನಿಸುತ್ತದೆ.

ಗುಂಡಬ್ರಹ್ಮಯ್ಯರ ಜನ್ಮ ಸ್ಥಳವನ್ನು ಡಾ.ವಿ.ಶಿವಾನಂದ ಅವರು ಕರ್ನಾಟಕದಲ್ಲಿ ಹುಡುಕುತ್ತಾರೆ. ಹಾವೇರಿ ಜಿಲ್ಲೆ ಗುಂಡೇನಹಳ್ಳಿ, ಚಿಕ್ಕಮಂಗಳೂರು ಜಿಲ್ಲೆ ಆಣೆಗೆರೆ ಇವೆರಡರಲ್ಲಿ ಯಾವುದಾದರೂ ಒಂದು ಜನ್ಮಸ್ಥಳವಾಗಿರಬೇಕೆಂದು ಊಹಿಸುತ್ತಾರೆ. ಅವರು ಅದಕ್ಕೆ ಕೊಡುವ ಪುರಾವೆಗಳೆಂದರೆ ಆ ಗ್ರಾಮಗಳಲ್ಲಿ ಗುಂಡಬ್ರಹ್ಮಯ್ಯಗಳ ಹೆಸರಿನಲ್ಲಿ ದೇವಸ್ಥಾನ ನಿರ್ಮಾಣವಾಗಿರುವುದು, ಕಾರಹಬ್ಬದಲ್ಲಿ (ಕಾರಹುಣ್ಣಿಮೆ) ಗುಂಡಬ್ರಹ್ಮಯ್ಯಗಳ ಸ್ಮಾರಕ ಹಬ್ಬವೆಂಬಂತೆ ಆಚರಿಸುವುದು, ಶೂಲಸ್ತಂಭಗಳಿರುವುದು ಇನ್ನೂ ಮುಂತಾದ ಅವಶೇಷಗಳಿಂದ ಮತ್ತು ಆಚರಣೆಗಳಿಂದ ಈ ನಿಲುವಿಗೆ ಬರುತ್ತಾರೆ. ಕುಮಾರರಾಮನು ಗುಂಡಬ್ರಹ್ಮಯ್ಯರ ಶೂಲದ ಹಬ್ಬವನ್ನು ಕರ್ನಾಟಕದ ಪ್ರದೇಶದಲ್ಲಿ ಆಚರಣೆ ಮಾಡಿದರ ಪರಿಣಾಮದಿಂದ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಇವರ ಕುರುಹುಗಳನ್ನು ಕಾಣಬಹುದೆನಿಸುತ್ತದೆ. ಆದ್ದರಿಂದ ಇವರ ಊಹೆ ಸಮರ್ಪಕವೆನಿಸುತ್ತಿಲ್ಲ.

ಏಕೆಂದರೆ ಗುಂಡಬ್ರಹ್ಮಯ್ಯರನ್ನು ಕುರಿತು ರಚನೆಯಾದ ಸ್ವತಂತ್ರ ಕೃತಿಗಳು ಶಿವಪುರ, ಹೊರಪುರ ಹಾಗೂ ಗವಚೆರಪುರ ಎಂಬ ಹೆಸರುಗಳನ್ನು ಉಲ್ಲೇಖಿಸುತ್ತವೆ. ಕಳವಿಗೆ ಬಂದ ಶಿವನಾರದರು ಗುಂಡಬ್ರಹ್ಮಯ್ಯರ ಬಗ್ಗೆ ನೀರಿಗೆ ಬಂದ ಅವರ ತಂಗಿಯನ್ನು ವಿಚಾರಿಸಿದಾಗ ಅದಕ್ಕವಳು ಈ ಕೆಳಗಿನಂತೆ ಹೇಳುತ್ತಾಳೆ.

"ಅವರೀ ಪಟ್ಟಣದೊಳಗಿಲ್ಲ ಗುರುವೆ
ಅವರತ್ತ ಗವಚೆರರಿಹರೂ
ಅವರ ಊರಾಡಿ ಬಂದರೆ ಹಿರಿಯರಿ
ಗವರು ಸೇವೆಯ ಮಾಡುತಿಹರು"[೧೭]

ಗುಂಡಬ್ರಹ್ಮಯ್ಯರ ತಂಗಿಯ ಮಾತನ್ನು ಕೇಳಿದ ಹರ-ನಾರದರು ಕೆಳಗಿನಂತೆ ಪ್ರಶ್ನೆ ಮಾಡುವರು.

"ಎತ್ತಣ ದಿಕ್ಕದು ಗವಚೆರೆಂಬುದು
ಮತ್ತೆಷ್ಟು ದೂರವು ಮಗಳೆ
ಉತ್ತರ ದಿಕ್ಕುಗಳಿಲ್ಲಿಗೆ ಗಾವುದ
ಹತ್ತಿರ ಚಿತ್ರೈಸಿ ಗುರುವೇ"[೧೮]

ಈ ಮಾತಿನಲ್ಲಿ ಗವಚೆರು ಎಂಬುದು ಎಷ್ಟು ದೂರದಲ್ಲಿದೆ ಎಂದು ಕೇಳಲಾಗಿದೆ. ಆದ್ದರಿಂದ ಗವಚೇರು ಎಂಬುದು ಸ್ಥಳವಾಚಿಯಾಗಿದೆ. ಇನ್ನೊಂದು ಕಡೆಯಲ್ಲಿ ಬಿರುದಿನ ಕಹಳೆಯನ್ನು ಊದುತ್ತಿರುವವರು ಗುಂಡಬ್ರಹ್ಮಯ್ಯರು ಎಂದು ನಾರದನಿಗೆ ಶಿವನು ತಿಳಿಸುವಾಗ

"ನಾರಂದ ಕೇಳಿದ ಮೂರಾರಿಯನಾಗ
ಆರು ಹೇಳು ಹೇಳೆನುತ
ಧಾರುಣಿಯೊಳಗಣ ಗವಚೆಯಲ್ಲಿದ್ದಾನೆ
ನಾರಂದ ಕೇಳು ಭಕ್ತರನೂ"[೧೯]

ಎಂದು ಶಿವ ಹೇಳುತ್ತಾನೆ. 'ಧಾರುಣಿಯೊಳಗಣ ಗವಚಿ' ಎಂದಾಗ ಅದು ಒಂದು ಸ್ಥಳವಾಚಿ ಎಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಆರಾಧ್ಯಶಂಕರನ 'ಶರಣರಿಗೆ ಶರಣಾರ್ಥಿನಾಂದ್ಯ'ದಲ್ಲಿ ಕೆಳಗಿನಂತೆ ಗಮನಿಸಬಹುದು.

"ಭೂಪತಿಯ ಪಟ್ಟಣಕೆ ಅರ್ಧಯೋಜನದಲ್ಲಿ
ವ್ಯಾಪಿಸುವ ಗವಚೆರುಪುರದ ಮಧ್ಯದೊಳ
ಕಾಪಾಲಿಧರ ಭಕ್ತಗುಂಡಬ್ರಹ್ಮಯ್ಯಗಳು"[೨೦]

ಈ ಪದ್ಯದಿಂದಲೂ ಗುಂಡಬ್ರಹ್ಮಯ್ಯರ ಸ್ಥಳ ಗವಚೆಪುರವಾಗಿತ್ತೆಂದು ತಿಳಿಯುತ್ತದೆ. ಗುಂಡಬ್ರಹ್ಮಯ್ಯಗಳ ಗದ್ಯದಲ್ಲಿ "…..ಕೋಲಹರ ಗುಂಡಯ್ಯನೆಂದು ಹೆಸರಂ ಪಡೆದನು| ಯಿತಗೆ ಕುಲಮಹಾಸ್ವಾಮಿ ಕುಂಬೇಶ್ವರಲಿಂಗ| ಈತನ ಗೋತ್ರ ವೃಷಭ ಗೋತ್ರ| ಧರ್ಮಸಿಂಹಾಸನ| ಚಕ್ರದ ಮಠ ಗೊಳಕಲ್ಲು ಬಡಗಿ ಪ್ರಕಾರ ಕೊಟ್ಟು| ಈತನು ಇದೆ ಚಕ್ರದ ಮೇಲೆ ಮೃತ್ತುಕಿಯ ಬಾಂಡಗಳು| ಲಿಂಗದ ಬಟ್ಟಲುಗಳು ಮಾಡಿ ಶಿವಜಂಗಮದ ಸೇವೆಯಲ್ಲು ಇದನು| ಆವಾಗ| ತೇತ್ರಾಯುಗದಲ್ಲು ಕುಂಭಜ ಋಷಿಯ ಕರುಣದಿಂದ ಇಬ್ಬರು ಮಕ್ಕಳಂ ಪಡೆದನು| ಇವರ ನಾಮ ಗುಂಡಯ್ಯ ಬ್ರಹ್ಮಯ್ಯ|ನೆಂದು ಹೆಸರಂನಿಟ್ಟು|ಗುಂಡಯ್ಯಗೆ ಶಿವಕ್ಕ ಬ್ರಹ್ಮಯ್ಯಂಗೆ ಮಹದೇವಕ್ಕ| ಇವರ ಲಗ್ನ ಮಾಡಿದ ಬಳಕ್ಕಾ| ಕುಂಬೇಶ್ವರನ ಕರುಣದಿಂದ ಗಂಡುಮಕ್ಕಳಂ ಪಡೆದರು….."[೨೧] ಈ ಆಕರದಿಂದ ಗುಂಡಬ್ರಹ್ಮಯ್ಯರು ಗವಚೆರುಪುರದವರು ಹಾಗೂ ಕುಂಬಾರರು ಎಂಬುದು ಖಚಿತವಾಗುತ್ತದೆ. ಗುಂಡಬ್ರಹ್ಮಯ್ಯರು ಕುಂಬಾರರು ಎಂಬುದಕ್ಕೆ ಈ ಕೆಳಗಿನ ಪದ್ಯವನ್ನು ಗಮನಿಸಬಹುದು.

"ದಾಸಯ್ನ ಯಾಸದಲ್ಲಿ ನಾರಾಯಣಸ್ವಾಮಿ
ಗುಂಡು ಬ್ರಹ್ಮಯ್ನ ಮನೆಗೆ ಬರುತಾರೆ|
ಜಾಗ್ಟೇಯ ಹೊಡುಕೊಂಡು ಕ್ಯಾರಣ್ಯ ಸಾರಿದರು
ಗುಂಡುಬ್ರಹ್ಮಯ್ನ ಮಗಳು ಕಲ್ಯಾಣಿ|
ಗುಂಡುಬ್ರಹ್ಮಯ್ನ ಮಗಳು ಕಲ್ಯಾಣಮ್ಮ
ಗುಡುಗುಡನೆ ಬಾಗಲಿಗೆ ಬರುತಾಳೆ|
ಕಲ್ಯಾಣಮ್ಮನು ಸ್ವಾಮಿ ಮೊಕುವನ್ನು ನೋಡಿ
ಸ್ವಾಮಿ ಈ ಜೀವ್ಸ ತುಂಬುದ ಸ್ವಾಮುವಾರ
ನಾನು ಲಿಂಗೈತರ ಮಗಳಲ್ಲ ಜಂಗಮರ ಸೊಸೆಯಲ್ಲ
ಜಾತಿವೊಳುಗ ಕುಂಬಾರ್ರ, ಮಗಳಯ್ಯ"[೨೨]

ಹರ-ನಾರದರು ಗುಂಡಬ್ರಹ್ಮಯ್ಯರನ್ನು ಕೇಳಿಕೊಂಡು ಅವರ ಮನೆಗೆ ಹೋಗುವರು. ಆಗ ಅವರು ಇರುವುದಿಲ್ಲ. ಮಗಳಾದ ಕಲ್ಯಾಣಮ್ಮಳು ಹರ-ನಾರದರನ್ನು ಊಟಕ್ಕೆ ಆಹ್ವಾನಿಸುವಾಗ, ನಾನು ಲಿಂಗಾಯತರ

ಮಗಳಲ್ಲ, ಜಂಗಮರ ಸೊಸೆಯಲ್ಲ. ಜಾತಿಯಲ್ಲಿ ಕುಂಬಾರ್‍ರ ಮಗಳು ಭೇದವಿದ್ದರೆ ಹೋಗಿ ಭೇದವಿಲ್ಲ ಅಂದರೆ ಬಿನ್ನಕೆ ದಯಮಾಡಿ ಎಂದು ಹೇಳುವಳು. ಆಗ ಶಿವ-ನಾರದರು ನಿಮ್ಮ ತಂದೆಯನ್ನು ಮೊದಲು ಕಂಡು ನಂತರ ಬಿನ್ನಕೆ ಬರುವೆವು ಎಂದು ಹೊರಡುವರು. ಒಟ್ಟಿನಲ್ಲಿ ಈ ಎಲ್ಲ ಆಕರಗಳಿಂದ ಡಾ.ಪಿ.ಕೆ.ರಾಜಶೇಖರ ಅವರು ಹೇಳುವಂತೆ ಇವರ ಸ್ಥಳ ಓರಂಗಲ್ಲಿನ ಸಮೀಪದ ಗವಚಿಪುರವಾಗಿದ್ದು, ಕುಂಬಾರ ಜಾತಿಯವರಾಗಿದ್ದಾರೆಂದು ಅನಿಸುತ್ತದೆ.

'ಮರೆಹೊಕ್ಕವರ ಕೊಡೆ'ನೆಂಬ ವೀರವ್ರತದಿಂದ ಶೂಲಕ್ಕೆ ಆಹುತಿಯಾಗಿರುವುದು ಕುಮಾರರಾಮನಂಥ ವೀರರಿಗೆ ಆದರ್ಶವಾಗಿ ಕಂಡಿದೆ. ಆದ್ದರಿಂದ ಅವರ ವೀರವ್ರತದ ಬದುಕನ್ನು 'ಶೂಲದ ಹಬ್ಬದ' ಮೂಲಕ ಕನ್ನಡ ನಾಡಿನಲ್ಲಿ ಪ್ರಸಾರಿಸುವ ಬಹುದೊಡ್ಡ ಕಾರ್ಯ ಕುಮಾರರಾಮನ ಸಾಂಸ್ಕೃತಿಕ ವಲಯದಲ್ಲಿ ನಡೆದಿದೆ. ಓರಂಗಲ್ಲಿನ ಮೂಲದ ಇವರು ಕುಮಾರರಾಮನ ಕಾಲಕ್ಕೆ ಕನ್ನಡನಾಡಿನಾದ್ಯಂತ ಆಚರಣೆ, ಆರಾಧನೆಗಳ ಮೂಲಕ ಪ್ರಸಿದ್ಧಿಗೆ ಬಂದಿರಬೇಕೆಂದು ಅನಿಸುತ್ತದೆ.

ಗುಂಡಬ್ರಹ್ಮಯ್ಯಗಳ ಸಾಹಿತ್ಯದ ಪ್ರಕಾರಗಳು

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಷಟ್ಪದಿ, ಸಾಂಗತ್ಯ, ತ್ರಿಪದಿ, ಚೌಪದಿ, ನಾಂದ್ಯ, ಗದ್ಯ, ಕಥೆ ಮುಂತಾದ ಪ್ರಕಾರಗಳಲ್ಲಿ ಕಾವ್ಯಗಳು ರಚನೆಯಾಗಿವೆ. ಅವುಗಳಲ್ಲಿ ಮಧ್ಯಕಾಲೀನ ಸಂದರ್ಭದಲ್ಲಿ 'ಗುಂಡಬ್ರಹ್ಮಯ್ಯಗಳ ಸಾಹಿತ್ಯ'ವು ವಿಶಿಷ್ಟವಾದ ಕೃತಿಯಾಗಿದೆ. ಈ ಹಿಂದೆ ಚರ್ಚಿಸಿದಂತೆ ಈ ಕಾವ್ಯದಲ್ಲಿ ವಿವಿಧ ಸಾಹಿತ್ಯದ ಪ್ರಕಾರಗಳು ಬಳಕೆಯಾಗಿವೆ. ಸಾಂಗತ್ಯ, ತ್ರಿಪದಿ, ಚೌಪದಿ, ನಾಂದ್ಯ, ಗದ್ಯ ಕಥೆಯ ಪ್ರಕಾರಗಳು ಬಳಕೆಯಾಗಿರುವುದನ್ನು ಗಮನಿಸಬಹುದು. ಅವುಗಳನ್ನು ಕೆಳಗಿನಂತೆ ವಿವರಿಸಲಾಗಿದೆ.

ಅ. ತ್ರಿಪದಿ

ಕನ್ನಡ ಸಾಹಿತ್ಯದಲ್ಲಿ ತ್ರಿಪದಿಗೆ ಮಹತ್ವದ ಸ್ಥಾನವಿದೆ. ಜಾನಪದ ಸಾಹಿತ್ಯದಲ್ಲಿ ಮುಕ್ಕಾಲು ಭಾಗ ತ್ರಿಪದಿಯೇ ಬಳಕೆಯಾಗಿದೆ. ಪ್ರಾಚೀನ ಶಾಸನಗಳಲ್ಲಿ ಕಂಡುಬಂದ ತ್ರಿಪದಿ ಆಧುನಿಕ ಕಾಲದವರೆಗೂ ತನ್ನ ಸ್ಥಾನ ಭದ್ರಪಡಿಸಿಕೊಂಡಿದೆ. ಕ್ರಿ.ಶ.೭ನೇ ಶತಮಾನದ ಬಾದಾಮಿ ಶಾಸನದಲ್ಲಿ ದೊರೆತ ಮೂರು ತ್ರಿಪದಿಗಳೆ ಪ್ರಾಚೀನವಾಗಿವೆ. ತ್ರಿಪದಿಗೆ ತ್ರಿವಿದಿ, ತ್ರಿವದಿ, ತಿವುಡೆ, ತ್ರಿಪದಿಕಾ ಮೊದಲಾದ ಪರ್ಯಾಯ ನಾಮಗಳಿವೆ. ಬೇಂದ್ರೆಯವರು ತ್ರಿಪದಿಯನ್ನು 'ಜಾನಪದ ಸಾಹಿತ್ಯದ ಗಾಯತ್ರಿ' ಎಂದು ಕರೆದಿದ್ದಾರೆ. ಮೂರು ಚರಣಗಳನ್ನು ಹೊಂದಿರುವುದರಿಂದ ತ್ರಿಪದಿ ಎಂಬ ಹೆಸರು ರೂಢಿಯಲ್ಲಿದೆ. 'ಗುಂಡಬ್ರಹ್ಮಯ್ಯಗಳ ಚರಿತ್ರೆ' ಜಾನಪದ ತ್ರಿಪದಿಯಲ್ಲಿದೆ. ಆದ್ದರಿಂದ 'ಸುವ್ವಿಹಾಡು' ಎಂದು ಕರೆಯಲಾಗಿದೆ.

ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಹತ್ತರಕೆ ಗ್ರಾಮದ ಚನ್ನಕವಿಯು ಗುಂಡಬ್ರಹ್ಮಯ್ಯಗಳ ತ್ರಿಪದಿ ರಚಿಸಿದನು. ಈ ಕವಿಯು 'ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ' ಕಾವ್ಯ ಬರೆಯಲಾರೆ ಎಂಬ ಹರಿಹರನ ತತ್ವನಿಷ್ಠೆಯವನು. ಇದು ತ್ರಿಪದಿ ಕಾವ್ಯಗಳಲ್ಲಿ ವಿಶಿಷ್ಟವಾದುದು. ಜನಪದ ಗೀತೆಗಳ ಪ್ರಭಾವಕ್ಕೆ ಒಳಗಾಗಿರುವ ಈ ಕೃತಿಯನ್ನು 'ಸುವ್ವಿಹಾಡು' ಎಂದು ಕರೆದಿದ್ದಾರೆ. ಇಲ್ಲಿನ

ತ್ರಿಪದಿಗಳು ನಿಯಮಬದ್ಧವಾಗಿ ಬಳಕೆಯಾಗಿವೆ. ಇವುಗಳನ್ನು ಬಳಸಿ ಗುಂಡಬ್ರಹ್ಮಯ್ಯರ ವ್ರತ, ನಿಷ್ಠೆ, ಅವರ ಜೀವನದ ನಡೆ-ನುಡಿ-ಸಿದ್ಧಾಂತಗಳನ್ನು ವಿಶ್ಲೇಷಿಸಿದ್ದಾನೆ. ಇದೊಂದು ಭಕ್ತಿಯ ಕಾವ್ಯವಾಗಿದ್ದು, ಲಕ್ಷಣಕ್ಕೆ ಕೆಳಗಿನ ಪದ್ಯಗಳನ್ನು ಗಮನಿಸಲಾಗಿದೆ.

"ಆಯವಾದವು ಶೂಲ ಮಾಯವಾದವು ಶೂಲ
ಆಯ ಪಾಯದಲಿ ಬೆಳೆದಾವು ಶರಣರ
ಕಾಯವ ಬೇಡಿ ನಲಿವೂತ"[೨೨]

"ಏಳುಸುತ್ತಿನ ಕೋಟೆ ಹೇಳಬಾರದ ಗುಂಡು
ಏಳುಲೋಕಗಳು ಇಳಿದಂತೆ ಬಿದರೀಗೆ
ಹೇಳುವರಿಲ್ಲ ನರರೊಳು"[೨೪]

"ಹರನು ನಾರಂದರನು ಧರೆಗೆ ಕಳವಿಗೆ ಬಂದು
ಪುರ ವೋರುಗಲ್ಲ ಗಣಪತಿ|| ರಾಯನ
ಸಿರಿಯ ಕದ್ದೊಯ್ದ ಕಥೆಗೇಳಿ"[೨೫]

ತ್ರಿಪದಿಯ ಲಕ್ಷಣದಂತೆ ರಸ-ದಶ (೬-೧೦) ಸ್ಥಾನದಲ್ಲಿ ಬ್ರಹ್ಮಗಣ ಉಳಿದಡೆಯಲ್ಲಿ ವಿಷ್ಣುಗಣಗಳು ಬರುತ್ತವೆ ಎಂಬ ನಾಗವರ್ಮನ 'ಛಂದೋಂಬುಧಿ'ಯ ಹೇಳಿಕೆಗೆ ಮೇಲಿನ ಪದ್ಯಗಳು ಮಾದರಿಯಾಗಿವೆ. ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ಬಳಕೆಯಾದ ತ್ರಿಪದಿಯಲ್ಲಿ ಕೆಲವು ಪದ್ಯಗಳು ಆದಿ-ಅಂತ್ಯಪ್ರಾಸ ಒಳಗೊಂಡಿವೆ. ಆದ್ದರಿಂದ ಈ ಕಾವ್ಯವು ಹಾಡಲು ಬಲು ಯೋಗ್ಯವಾದ ಕಾವ್ಯವಾಗಿದೆ. ಇಲ್ಲಿನ ಲಯದ ಸೊಗಸು ಹೆಚ್ಚಿದೆ. ಒಟ್ಟು ನಾಲ್ಕು ಸಂಧಿಗಳಲ್ಲಿ ಏಳುನೂರ ತೊಂಬತ್ತೆಂಟು ತ್ರಿಪದಿಯ ಪದ್ಯಗಳಿಂದ 'ಗುಂಡಬ್ರಹ್ಮಯ್ಯಗಳ ಸಾಹಿತ್ಯ'ವನ್ನು ರಚಿಸಲಾಗಿದೆ.

ಆ. ಸಾಂಗತ್ಯ

ನಾಗವರ್ಮನು ಸೂಚಿಸಿದ ಕರ್ನಾಟಕ ವಿಷಯ ಜಾತಿಗಳಲ್ಲಿ ಸಾಂಗತ್ಯವು ಕಂಡುಬರದಿದ್ದರೂ ತ್ರಿಪದಿ, ಏಳೆ, ಅಕ್ಕರೆಯಂತೆ ಸಾಂಗತ್ಯ ಕೂಡ ಅಂಶಗಣಾನ್ವಿತವಾದ ಛಂದೋರೂಪವಾಗಿದೆ. ತ್ರಿಪದಿಗಿಂತ ಕವಿಜನ ಪ್ರಿಯವಾದ ಸಾಂಗತ್ಯ ಅಭಿವ್ಯಕ್ತಿಯ ಮಾಧ್ಯಮವಾಗಿ ಕಾವ್ಯಗಳಲ್ಲಿ ಬಳಕೆಯಾಗಿದೆ. ದೇಪರಾಜನ 'ಸೊಬಗಿನ ಸೋನೆ' ಸಾಂಗತ್ಯದಲ್ಲಿ ರಚನೆಗೊಂಡ ಪ್ರಥಮ ಕೃತಿ. ಹಾಡಿನ ರೂಪದಲ್ಲಿ ಒಂದು ಸಂಗತಿಯನ್ನು ಅಂದರೆ ಘಟನೆ ಅಥವಾ ವಿಷಯವನ್ನು ನಿರೂಪಿಸುವುದೇ ಸಾಂಗತ್ಯ. ಇದು ಶೃಂಗಾರ, ಹಾಸ್ಯ, ಕರುಣ, ಶಾಂತಿ ಮೊದಲಾದ ಕೋಮಲವಾದ ಭಾವಕ್ಕೆ ಯೋಗ್ಯವಾದ ಛಂದೋಪ್ರಕಾರವಾಗಿದೆ. ನಂಜುಂಡ ಕವಿಯ ಕುಮಾರರಾಮ ಸಾಂಗತ್ಯ, ಕನಕದಾಸರ ಮೋಹನ ತರಂಗಿಣಿ, ರತ್ನಾಕರವರ್ಣಿಯ ಭರತೇಶ ವೈಭವ, ಸಂಚಿಹೊನ್ನಮ್ಮನ ಹದಿಬದೆಯ ಧರ್ಮ ಮತ್ತು ಗುಂಡಬ್ರಹ್ಮಯ್ಯಗಳ ಸಾಹಿತ್ಯ ಮುಂತಾದವು ಸಾಂಗತ್ಯ ಕೃತಿಗಳಾಗಿವೆ. ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ಕಾಶೀಪತಿ ಕವಿಯು ಒಟ್ಟು ಹದಿನೆಂಟು ಸಂಧಿ, ಒಂದು

ಸಾವಿರದ ಆರುನೂರ ಹದಿಮೂರು ಸಾಂಗತ್ಯ ಪದ್ಯಗಳಲ್ಲಿ ಗುಂಡಬ್ರಹ್ಮಯ್ಯಗಳ ಚರಿತ್ರೆಯನ್ನು ಹೇಳಿದ್ದಾನೆ. ಲಕ್ಷಣಕ್ಕೆ ಕೆಳಗಿನ ಪದ್ಯಗಳನ್ನು ನೋಡಬಹುದು.

"ಕದ್ದರು ರಾಯನ ಮನೆಯ ಕನ್ನವನಿಕ್ಕಿ
ಇದ್ದೊಡವೆಯ ತಂದರವರೂ
ನಿರ್ಧರಿಸಿಯೆ ಆಣೆಭಾರವ ಕೊಟ್ಟರು
ಇದ್ದವರೀ ಪುರದೊಳಗೆ"[೨೬]

"ನಿಚ್ಚಟರಾದರೆ ಬೆದರರು ಗುಂಡಯ್ಯ
ಬೆಚ್ಚುವರನ್ಯಾಯದವರೂ
ಬೆಚ್ಚುವರಾವಲ್ಲ ಗುರುಪಾದ ತೀರ್ಥವು
ವೊಚ್ಚುತವಾಯಿತು ರಾಯಾ"[೨೭]

"ತಂದೆವು ಗಣಪತಿರಾಯನ ಒಡವೆಯ
ಹಿಂದಿಕ್ಕಿಕೊಳ್ಳೊ ಗುಂಡಬೊಮ್ಮಾ
ಇಂದು ನಿಮ್ಮನ್ನು ಮೊರೆಹೊಕ್ಕೆವು ನಾವೀಗ
ಮುಂದರಿಯದೆ ಕದ್ದುತಂದೂ"[೨೮]

ಸಾಂಗತ್ಯದ ಲಕ್ಷಣದಂತೆ ಒಂದು ಮತ್ತು ಮೂರನೆಯ ಪಾದಗಳು ಸಮವಾಗಿದ್ದು, ನಾಲ್ಕು ವಿಷ್ಣುಗಣಗಳು ಬರುತ್ತವೆ. ಎರಡು ಮತ್ತು ನಾಲ್ಕನೇ ಪಾದದಲ್ಲಿ ಎರಡು ವಿಷ್ಣುಗಣಗಳು, ಒಂದು ಬ್ರಹ್ಮಗಣ ಬರುತ್ತದೆ ಎಂಬ ನಾಗವರ್ಮನ ಛಂದೋಂಬುಧಿಯ ಹೇಳಿಕೆಗೆ ಮೇಲಿನ ಪದ್ಯಗಳು ಮಾದರಿಯಾಗಿವೆ. ಒಟ್ಟು ಹದಿನಾಲ್ಕು ಗಣಗಳನ್ನು ಹೊಂದಿದ್ದು, ಹನ್ನೆರಡು ವಿಷ್ಣುಗಳು, ಎರಡು ಬ್ರಹ್ಮಗಣಗಳು ಬಂದಿವೆ. ಸಾಂಗತ್ಯವು ಹಾಡುಗಬ್ಬಕ್ಕೆ ತುಂಬಾ ಅಳವಡುವ ಛಂದೋಪ್ರಕಾರವಾಗಿದೆ. ಮಧುರ ಸ್ವರಗಳ ಸಮ್ಮಿಲನದಿಂದ ಹೊರಡುವ ಗತಿಯನ್ನು ಇದು ಸೂಚಿಸುತ್ತದೆ. ಆದ್ದರಿಂದ ಗುಂಡಬ್ರಹ್ಮಯ್ಯಗಳ ಸಾಹಿತ್ಯವು ಹಾಡಲು ತುಂಬಾ ಯೋಗ್ಯವಾಗಿದೆ. ಹಾಡಿನ ಮೂಲಕ ಜನಸಾಮಾನ್ಯರಿಗೆ ಭಕ್ತಿಯನ್ನು ಮೂಡಿಸುವ ನಿಟ್ಟಿನಲ್ಲಿ ಮತ್ತು ಗುಂಡಬ್ರಹ್ಮಯ್ಯಗಳ ವ್ರತ-ನಿಷ್ಠೆ, ಭಕ್ತಿಯ ಮನೋಭಾವವನ್ನು ಪ್ರಸರಿಸುವ ಹಿನ್ನಲೆಯಲ್ಲಿ ಕಾಶೀಪತಿಯು ಗುಂಡಬ್ರಹ್ಮಯ್ಯಗಳ ಜೀವನ ಚರಿತ್ರೆಯನ್ನು ಸಾಂಗತ್ಯದಲ್ಲಿ ನಿರೂಪಿಸಿದನು.

ಇ. ನಾಂದ್ಯ-ಸ್ತೋತ್ರ

'ನಾಂದಿ' ಎಂದರೆ ಮಂಗಳ ಕಾರ್ಯಗಳ ಆರಂಭದಲ್ಲಿ ನೆರವೇರಿಸುವ ಪ್ರಥಮ ದೇವತಾ ಪೂಜೆ. ನಾಟಕ ಆರಂಭವಾಗುವಾಗ ಹಾಡುವ ದೇವತಾಸ್ತೋತ್ರಗಳು ನಾಂದ್ಯ ಎನಿಸುತ್ತವೆ. ಹಾಗೆಯೇ ಕವಿಗಳು ತಮ್ಮ ಕಾವ್ಯಾರಂಭದಲ್ಲಿ ತಮ್ಮ ತಮ್ಮ ಮನೆದೈವವನ್ನು ಕುರಿತು ಮಾಡಿದ ಪ್ರಾರ್ಥನೆಗಳೂ ನಾಂದಿ.

ಆದ್ದರಿಂದ ಮೊದಲು ನಾಂದಿ ಪದ್ಯದಿಂದ ಆರಂಭಿಸಬೇಕೆಂಬುದು ಒಂದು ರೂಢಿ. ಕೃತಿಯ ಮೊದಲ ಮಂಗಳಾಚರಣ ಪದ್ಯಗಳಲ್ಲಿ ಕವಿ ವೈಯಕ್ತಿಕವಾಗಿ ಪ್ರಾರ್ಥನೆ ಸಲ್ಲಿಸಿದ್ದರೂ, ಅವುಗಳಲ್ಲಿ ಸಾರ್ವತ್ರಿಕ ಮೊರೆಯಿದ್ದು ಭಕ್ತಿಭಾವದಿಂದ ಎಲ್ಲರೂ ಹಾಡಬಹುದಾಗಿದೆ. ಕಾವ್ಯದ ಒಳಗೂ ಪ್ರಸಂಗೋಚಿತವಾಗಿ ಪ್ರಾರ್ಥನಾ ಪದ್ಯಗಳು, ಸ್ತೋತ್ರಗಳು ಬಂದಿವೆ. ಇವುಗಳು ಭಕ್ತಮನದ ಅಭಿವ್ಯಕ್ತಿಗಳೆನಿಸಿವೆ. ದೇವರ ಅನುಗ್ರಹಕ್ಕಾಗಿ ಸದಾ ಹಂಬಲಿಸುವ ಮಾನವನ ಅಂತರಂಗದ ಸುಪ್ತಬಯಕೆಯ ಪ್ರತೀಕಗಳಾಗಿವೆ.

ಭಕ್ತಿಯ ಪ್ರಸಂಗಗಳಲ್ಲಿ, ಅದೂ ಕವಿಯು ಭಕ್ತಮನದವನಾಗಿದ್ದರಂತೂ ಸಾಲು ಸಾಲಾಗಿ ಸ್ತುತಿ ಪದ್ಯಗಳು ಬರುತ್ತವೆ. ಇತರ ಕಾವ್ಯಗಳಂತೆ ಬಹುಮಟ್ಟಿಗೆ ವೀರಶೈವ ಕವಿಗಳ ಕಾವ್ಯಗಳಲ್ಲೂ ಇಂಥ ಸ್ತೋತ್ರರೂಪದ ಪದ್ಯಗಳು ಬಂದಿವೆ. ಅವುಗಳಲ್ಲಿ ಗುಂಡಬ್ರಹ್ಮಯ್ಯಗಳ ಸಾಹಿತ್ಯವು ಒಂದಾಗಿದೆ. ಈ ಕಾವ್ಯದಲ್ಲಿ 'ಶರಣರಿಗೆ ಶರಣಾರ್ಥಿನಾಂದ್ಯ' ಬರೆದ ಕವಿ ಆರಾಧ್ಯಶಂಕರ. ಈ ಕವಿಯು ನಾಂದ್ಯಗಳಿಂದ ಜನರನ್ನು ಭಕ್ತಿಭಾವದಲ್ಲಿ ಬಂಧಿಸಿ, ಅವರನ್ನು ತನ್ಮಯರನ್ನಾಗಿ ಮಾಡುವಲ್ಲಿ ಯಶಸ್ವಿಯಾಗಿದ್ದಾನೆ. ಇವುಗಳೆಲ್ಲವೂ ಸಾರ್ವತ್ರಿಕ ಮೌಲ್ಯವುಳ್ಳವು. "ಪ್ರಾರ್ಥನೆಗಳನ್ನು ಕಂಡು ಆಕರ್ಷಿತರಾದ ಕೆಲವು ಸಂಕಲನಕಾರರು ಬರೆದಿಟ್ಟುಕೊಂಡು ನಾಂದ್ಯವೆಂದು ಹೆಸರಿಸಿ ಪ್ರಸಾರ ಮಾಡತೊಡಗಿದರು. ಇಂಥ ಸಂಕಲನಗಳು ಯಥೇಚ್ಛವಾಗಿವೆ. ಒಂದೇ ಕಾವ್ಯದಿಂದ ಬೇರೆ ಬೇರೆಯವರು ಸಂಕಲಿಸಿದ ಎರಡು-ಮೂರು ಸಂಕಲನಗಳೂ ದೊರೆತಿವೆ. ನಾಂದ್ಯಗಳು ಒಂದು ಕಾಲಕ್ಕೆ ತುಂಬಾ ಜನಪ್ರಿಯವಾಗಿರಬೇಕೆಂಬುದಕ್ಕೆ ಇವು ಸಾಕ್ಷಿಯಾಗಿವೆ. ಉದಾಹರಣೆಗಾಗಿ ಕೆಳಗಿನ ನಾಂದ್ಯ ಕೃತಿಗಳನ್ನು ಗಮನಿಸಬಹುದು. ಗುರುರಾಜ ಚಾರಿತ್ರದ ನಾಂದ್ಯ, ಸೋಮನಾಥ ಕಾವ್ಯದ ನಾಂದ್ಯ, ಶಿವಲಿಂಗ ನಾಂದ್ಯ, ಸಿದ್ದೇಶ್ವರ ಪುರಾಣದ ನಾಂದ್ಯ, ಬಸವೇಶ್ವರ ಪುರಾಣದ ನಾಂದ್ಯ, ಆದಯ್ಯಗಳ ನಾಂದ್ಯ, ಗುರುಸ್ತೋತ್ರದ ನಾಂದ್ಯ"[5] ಹೀಗೆ ವಿವಿಧ ಕಾವ್ಯಗಳ ನಾಂದ್ಯಗಳನ್ನು ಗುರುತಿಸಲಾಗಿದೆ.

ಶರಣರಿಗೆ ಶರಣಾರ್ಥಿನಾಂದ್ಯದಲ್ಲಿ ವಿಶೇಷ ಎನ್ನುವಂತೆ ಪ್ರಾರ್ಥನ ಪದ್ಯಗಳ ಜೊತೆಗೆ ಗುಂಡಬ್ರಹ್ಮಯ್ಯಗಳ ವೀರವ್ರತ, ನಿಷ್ಠೆ, ನಡೆ-ನುಡಿ-ಸಿದ್ಧಾಂತಗಳನ್ನು ಮತ್ತು ಗಣಪತಿರಾಯನ ವಿಷಯಗಳನ್ನು ಪ್ರಸ್ತಾಪಿಸಲಾಗಿದೆ. ಇವರ ಬಗ್ಗೆ ಸ್ಪಷ್ಟ ಮಾಹಿತಿಗಳನ್ನು ನೀಡುವ ನಿಟ್ಟಿನಲ್ಲಿ ನಾಂದಿ ಪದ್ಯಗಳು ಪ್ರಮುಖವಾಗಿವೆ. ಅವುಗಳನ್ನು ಈ ಕೆಳಗಿನಂತೆ ಪ್ರಸ್ತಾಪಿಸಲಾಗಿದೆ.

"ಮರೆಹೊಕ್ಕ ಜಂಗಮವ ಕೊಡುವರಲ್ಲ ನಾವು
ಬಿರಿದಿಕ್ಕಿದೆವು ಮಂತ್ರಿಮನೆಯ ಮುಂಗಡೆಯೊಳಗೆ
ಪರಲೋಕದ ಭವ ಮೆಚ್ಚನು ನಾವು ತಪ್ಪಿದರೆ
ದೊರೆತನಕೆ ಅಳುಕಿ ಬಿರಿದುಗಳ ಬಿಡುವರಲ್ಲ ತೆರೆಮರೆಯ ಮಾತೇಕೆ
ಬಿರುನುಡಿಯ ಮಾತುಗಳ ತೆರನ ಕೇಳುತ ಮಂತ್ರಿ
ತಿರುಗಿ ಅರಸನ ಮುಖವ ನಿಟ್ಟಿಸಲು ದೊರೆ ತಿಳಿದು

ಉರುಬಿದನು ಬಳಿಕವರ ಘರ್ಜಿಸಿದ ಶರಣರನು
ಬರಿಯೆ ದಣಿಯಲಿ ಬೇಡಾ ಕಳ್ಳರನು ಕೊಡಿ ನೀವು ಉರುವ ಶೂಲಕೆಳೆಸುವೆವು"[೨೦]

"ಕೊಂಡಾಡಿ ಆನಂದದಿಂದ ಹೂಮಳೆಗಳನು
ತಂದು ಸುರಿವ ನೀತಿರೊಳು ಗುಂಡಬ್ರಹ್ಮಯ್ಯಗಳು
ಗಂಡುಗಲಿಗಳುಯೆದೆಯನ್ನು ಚಳಿಸೆ ಶೂಲದಲಿ
ಕಂಡ ಧರಿಜನ ಮತ್ತೆ ಹಲವು ಚಂದದೊಳಗಾದ ಕೊಂಡಾಡ ಹರ ಕಂಡನು
ಕಂಡಿಂದುಶೇಖರನು ಹೆಚ್ಚಿ ಮನದೊಳುನಲಿಯೆ
ಬಂದುದಾಗಲೆ ದೇವಪುಷ್ಪಕವು ಶರಣಗೆ
ಅಂಡೆಲೆದು ದೇವದುಂದುಭಿ ಮೊಳಗಿದವು ಕೂಡೆ
ಗೊಂಡೊಯ್ದೀಶ್ವರನಾಗ ಗುಂಡಬ್ರಹ್ಮಣ್ಣಗಳ"[೨೧]

ಹೀಗೆ ಆರಾಧ್ಯಶಂಕರ ಎಂಬ ಕವಿಯು ಶರಣರಿಗೆ ಶರಣಾರ್ಥಿ ನಾಂದ್ಯದಲ್ಲಿ ಗುಂಡಬ್ರಹ್ಮಯ್ಯರ ಜೀವನ ಚರಿತ್ರೆಯನ್ನು ಹೇಳಿದ್ದಾರೆ. ಒಟ್ಟು ಮೂರು ಸಂಧಿಗಳಲ್ಲಿ ಅರವತ್ತೆಂಟು ಪದ್ಯಗಳನ್ನು ಪ್ರಸ್ತಾಪಿಸಲಾಗಿದೆ. ಸ್ತೋತ್ರಗಳು ಮೊದಮೊದಲು ದೈವೀಕೃಪೆಗಾಗಿ ಹಾರೈಸುವ ಪ್ರಾರ್ಥನೆಗಳೆ ವಸ್ತುವಾಗಿದ್ದರೂ, ಕ್ರಮೇಣ ವೀರಶೈವ ತತ್ವ-ಸಿದ್ಧಾಂತಗಳನ್ನು, ಶರಣ-ಶರಣೆಯರ ಜೀವನದ ಮೌಲ್ಯಗಳನ್ನು ತಿಳಿಸುವ ಮಾಧ್ಯಮವಾಗಿರುವುದನ್ನು ಈ ಕಾವ್ಯದಿಂದ ಅರಿಯಬಹುದು.

ಈ. ಗದ್ಯ

ಕನ್ನಡ ಕವಿಗಳು ಸಂಸ್ಕೃತಗದ್ಯದ ಲಕ್ಷಣಗಳನ್ನು ತಿಳಿದವರಾಗಿದ್ದರೂ, ಕನ್ನಡದಲ್ಲಿ ತಮಗೆ ಸರಿಕಂಡ ರೀತಿಯಲ್ಲಿ ಗದ್ಯಗ್ರಂಥಗಳನ್ನು ಬರೆದಂತೆ ಕಂಡುಬರುತ್ತದೆ. ಶಾಸನಗಳಲ್ಲಿರುವ ಗದ್ಯವನ್ನು ಹೊರತುಪಡಿಸಿ ವಡ್ಡಾರಾಧನೆ, ಚಾವುಂಡರಾಯ ಪುರಾಣ, ಪಂಚತಂತ್ರ ಮೊದಲಾದ ಗದ್ಯ ಗ್ರಂಥಗಳು ಹೊರಹೊಮ್ಮಿವೆ. ಸಂಸ್ಕೃತದಲ್ಲಿ ಗದ್ಯ ಎಂದರೆ ಅದೊಂದು 'ಪ್ರೌಢ ಪ್ರಬಂಧ' ಎಂಬ ಭಾವನೆ ಇದ್ದಂತೆ ಕನ್ನಡ ಕವಿಗಳಿಗೆ ಇರಲಿಲ್ಲವೆಂದು ತೋರುತ್ತದೆ. ವೀರಶೈವ ಕವಿಗಳು ಕೇವಲ ಪದ್ಯದ ವ್ಯಾಮೋಹಕ್ಕೆ ಬಿದ್ದವರಲ್ಲ. ಅವರ ದೃಷ್ಟಿ ಜನಸಾಮಾನ್ಯರ ಕಡೆಗೂ ಇದ್ದುದರಿಂದ ಅವರಿಗೆ ಮರೆತು ಹೋಗದ ರೀತಿಯಲ್ಲಿ ಸರಳಭಾಷೆಯೂ, ವಿವಿಧ ರೂಪಗಳೂ ಕಣ್ಮುಂದೆ ನಿಂತವು. ಮಧ್ಯಕಾಲೀನ ಸಾಹಿತ್ಯ ಸಂದರ್ಭದಲ್ಲಿ ಗುಂಡಬ್ರಹ್ಮಯ್ಯಗಳ ಕುರಿತು ಗದ್ಯದಲ್ಲಿ ಕಾವ್ಯವನ್ನು ರಚಿಸಲಾಯಿತು. ಇವರ ಚರಿತ್ರೆಯು ಜನಸಾಮಾನ್ಯರಿಗೆ ಅರ್ಥವಾಗುವಂತೆ ಬರೆಯುವುದು ಮೊದಲ ಉದ್ದೇಶವಾಗಿತ್ತು. ಗುಂಡಬ್ರಹ್ಮಯ್ಯಗಳ ಸಾಹಿತ್ಯವನ್ನು ಬರೆಯಹೊರಟಿದ್ದು ಆಸ್ಥಾನದ ಪಂಡಿತರಿಗೆ-ಸಭಾಸದರಿಗೆ ಮಾತ್ರವಾಗಿರದೆ, ಸಾಮಾನ್ಯರಿಗೂ ಇದ್ದುದರಿಂದ ಸ್ವಾಭಾವಿಕವಾಗಿಯೇ ತಿಳಿಯುವಂತೆ ಹೇಳುವ ಸಾಹಿತ್ಯ ರೂಪಗಳತ್ತ ಗಮನಹರಿಸಬೇಕಾಯ್ತು. ಆದ್ದರಿಂದ ಗದ್ಯ ಪ್ರಕಾರದಲ್ಲಿಯೂ ಕಾವ್ಯ ರಚನೆಯಾಯಿತು. ಆಯಾ ಯುಗಧರ್ಮಕ್ಕೆ ತಕ್ಕಂತೆ ಸಾಹಿತ್ಯ ಪ್ರಕಾರಗಳನ್ನು ಬಳಸಿಕೊಂಡರು.

ಅದರಲ್ಲಿ ಗದ್ಯಪ್ರಕಾರವೂ ಒಂದಾಗಿದೆ. ಗುಂಡಬ್ರಹ್ಮಯ್ಯರ ಜೀವನ ಚರಿತ್ರೆಯನ್ನು ತಿಳಿಸುವ ಗದ್ಯವನ್ನು ಕೆಳಗಿನಂತೆ ಗಮನಿಸಬಹುದಾಗಿದೆ.

"ಕೊಲಹಲನೆಂದು ಬಿರುದು ಪೊಗಳಿಸುತ್ತಯಿರುವ ಅಷ್ಟರಲ್ಲಿ ಒಂದು ದಿನ ಕಹಳೆಯ ಧ್ವನಿಯ| ಆದಿ ರುದ್ರನು ಕೇಳಿ ನಾರದರಂ ಕೂಡಿಕೊಂಡು| ಓರಗಲ್ಲ ಗಣಪತಿರಾಯನ ಮನಿ ಕನ್ಯಮಂ ಮಾಡಲು ಹೋಗುವ ಅಷ್ಟರಲ್ಲಿ ಗಣಪತಿರಾಜನ ದಂಡು ಬೆನ್ನ ಹತ್ತಿ ಹಿಡಿಯಬೇಕೆಂದು ಹೋಗುವಾಗ| ಹರಿವೂಲಿಯಿಂದ ಬರುವಾಗ ಅಲ್ಲಿ ನಿಂತನು ಹರುಮಗಟ್ಟಿಯೆಂಬಾ ಗ್ರಾಮವಾಯ್ತು| ಮುಂದಕ್ಕೆ ಹೋಗುವಷ್ಟರಲ್ಲಿ ಕೆಂಧೂಳು ಮುಸುಕಿತು. ಅಲ್ಲಿ ನಿಂತನು| ಕೈಂಗೊಂಡವೆಂಬಾ ಗ್ರಾಮವಾಯ್ತು| ಮುಂದಕ್ಕೆ ಹೋಗುವಲ್ಲಿ ಅರುವಿಲ್ಲದ ಹೋಗುವಷ್ಟರಲ್ಲಿ ಅಲ್ಲಿ ನಿಂತನು| ಅರುಬುಗೊಂಡವೆಂಬಾ ಗ್ರಾಮವಾಯ್ತು ಮುಂದಕ್ಕೆ ಗುಂಡಯ್ಯಬ್ರಹ್ಮಯ್ಯನೆಂಬುವರ ಗ್ರಾಮಕ್ಕೆ| ಹೋಗಿ ಅವರನ್ನು ಮೊರೆಹೊಕ್ಕನು. ಆವಾಗ ದಂಡು ಬಂದು ಮುತ್ತಿಗೆಯ ಹಾಕಿ| ಇವನ ಕೊಡುಯೆಂದ ಕೇಳುವಲ್ಲಿ ಕೊಡುವುದಿಲ್ಲವೆಂದು| ಈ ಪ್ರಜೆ ಪರಿವಾರವನೆಲ್ಲ ಸಂಹಾರ ಮಾಡಿದನು| ಆವಾಗ ಗಣಪತಿರಾಜನು ಇವರನ್ನ ಶೂಲಕ್ಕೆ ಹಾಕಿಸಬೇಕೆಂದು ಶೂಲವ ನಡೆಸಿದನು| ಈ ಗುಂಡಯ್ಯಗಳು ಹೋಗಿ ಶೂಲವಂ ಮುಟ್ಟುವಷ್ಟರಲ್ಲಿ ಶೂಲವು ಚಿಗಿತು ವನಂತ್ರಗಳಾದವು| ಗಣಪತಿ ರಾಜನು ಇವರು ದೊಡ್ಡವರೆಂದು ಕಾಣಿಕೆಯಂ ಕೊಟ್ಟು ಹಿಂದಿರುಗಿ ಹೋದನು| ಇದು ಕುಂಬೇಶ್ವರವತಾರಣ| ಗುಂಡಬ್ರಹ್ಮಯ್ಯನಪುರಾಣದಲ್ಲಿ ಹೇಳಿದೆ"[೨]

ಹೀಗೆ ಗುಂಡಬ್ರಹ್ಮಯ್ಯಗಳ ಕುರಿತಾಗಿ ಈ ಕಥೆಯು ವಿವರಣೆ ನೀಡುತ್ತದೆ. ಕೇವಲ ಒಂದೇ ಸಾಹಿತ್ಯ ಪ್ರಕಾರದಲ್ಲಿ ಕಾವ್ಯ ರಚಿಸಿದರೆ ಎಲ್ಲ ಜನಸಮುದಾಯಗಳಿಗೆ ತಲುಪುವುದು ಅಸಾಧ್ಯವೆಂದು ತೋರಿರಬೇಕು. ಆದ್ದರಿಂದ ಮೇಲೆ ವಿವರಿಸಿದ ತ್ರಿಪದಿ, ಸಾಂಗತ್ಯ, ಚೌಪದಿ, ನಾಂದ್ಯ, ಗದ್ಯಸಾಹಿತ್ಯ ಪ್ರಕಾರಗಳಲ್ಲಿ ಗುಂಡಬ್ರಹ್ಮಯ್ಯರನ್ನು ನಿರೂಪಿಸಲಾಗಿದೆ. ಇವರ ವೀರವ್ರತ ಕೈಗೊಂಡ ಭಕ್ತಿಯ ಮಾರ್ಗ, ಜೀವನವನ್ನು ಮುಕ್ತಿಯ ನೆಲೆಗೆ ಸಾಗಿಸುವ ನಿಟ್ಟಿನಲ್ಲಿ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಅಭಿವ್ಯಕ್ತಿಗೊಳಿಸಲಾಗಿದೆ. ಒಂದು ಕಾಲಕ್ಕೆ ಇದ್ದ ಸಾಹಿತ್ಯ ಪ್ರಕಾರದ ಜನಪ್ರಿಯತೆ ಇನ್ನೊಂದು ಯುಗಧರ್ಮದಲ್ಲಿ ಇರುವುದಿಲ್ಲ. ಅದಕ್ಕಾಗಿ ಸರ್ವಕಾಲಿಕವಾಗಿ ಶಿವಶರಣರನ್ನು ಮಾದರಿಯನ್ನಾಗಿ ಸ್ವೀಕರಿಸುವ ಹಿನ್ನಲೆಯಲ್ಲಿ ಈ ಕಾವ್ಯವನ್ನು ರಚಿಸಲಾಗಿದೆ.

ಕವಿ-ಕಾವ್ಯ ಮಹೋನ್ನತಿ

ಶಿವಶರಣರು ಕಲ್ಯಾಣಕ್ರಾಂತಿಯ ವಿಪ್ಲವಾನಂತರ ತಮ್ಮ ನೆಲೆಯನ್ನು ಸ್ಥಾಪಿಸಿಕೊಳ್ಳಲು ಬೇರೆ ಬೇರೆ ಪ್ರದೇಶಗಳಿಗೆ ಚದುರಿ ಹೋದರು. ವೀರಶೈವರ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳೆನಿಸಿದ ಕರ್ನಾಟಕದ ಉಳವಿ, ಕೂಡಲಸಂಗಮ/ಕಪ್ಪಡಿಸಂಗಮ, ಬಸವಕಲ್ಯಾಣಗಳೆಡೆಗೆ ಮತ್ತು ಕರ್ನಾಟಕದಿಂದ ಆಂಧ್ರದೆಡೆಗೆ ಸಾಗಿ ಶ್ರೀಶೈಲಗಳಲ್ಲಿ ನಿಜದ ನೆಲೆಗಳನ್ನು ಕಂಡುಕೊಂಡದ್ದು ಇತಿಹಾಸ. ಹನ್ನೆರಡನೇ ಶತಮಾನದ ಈ ಸಾಮಾಜಿಕ ಉತ್ಕ್ರಾಂತಿ ರೂಪಿಸಿದ ಚಿರಂತನ ಸಾಮಾಜಿಕ ಮೌಲ್ಯಗಳು ಆದರ್ಶ ಸಮಾಜವೊಂದರ

ನಿರ್ಮಾಣಕ್ಕೆ ಪ್ರೇರಣೆ ಒದಗಿಸಿದವು. ಶರಣ ಚಳುವಳಿಯಲ್ಲಿ ವಿವಿಧ ಸ್ತರಗಳ ಜನರು ತಮ್ಮಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತ ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳಲು ಹವಣಿಸಿದರು. ಇವರೆಲ್ಲರೂ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಬದುಕಿನ ಪ್ರಾತಿನಿಧಿಕ ಸ್ವರೂಪವಾಗಿ ಮುಂದಿನ ಜನಾಂಗಗಳಿಗೆ ಆದರ್ಶಪ್ರಾಯರೆನಿಸಿದರು. ಆದ್ದರಿಂದ ಶರಣರು ಮಾದರಿ ವ್ಯಕ್ತಿಗಳಾಗಿ ರೂಪುಗೊಂಡರು.

ಶರಣ ಚಳುವಳಿ ಇಂದು ಇತಿಹಾಸ. ಕರ್ನಾಟಕದಲ್ಲಿ ಕಲ್ಯಾಣ, ಕಲಚೂರ್ಯರಿಂದ ಶರಣ ಚಳುವಳಿಯು ತನ್ನ ಪ್ರಾಜ್ವಲ್ಯಮಾನ ಸ್ಥಿತಿಯನ್ನು, ಅಭ್ಯುದಯ ಗತಿಯನ್ನು ಪಡೆದು ಅಂದಿನ ಸಮಾಜಕ್ಕೆ ಕಣ್ಣು ಕುಕ್ಕುವಂತೆ ಮಾಡಿತು. ಅಂತೆಯೇ ಆಂಧ್ರಪ್ರದೇಶದಲ್ಲಿ ಚದುರಿಹೋದ ಶಿವಶರಣರ ಧಾರ್ಮಿಕ ಮತ್ತು ಸಾಂಸ್ಕೃತಿಕ ನೆಲೆಯಾದ ಶ್ರೀಶೈಲವು ಬಹುದೊಡ್ಡ ಪ್ರದೇಶವಾಗಿ ರೂಪುಗೊಂಡಿತು. ಇದೇ ವೇಳೆಗೆ ಆಂಧ್ರದಲ್ಲಿ ಓರಂಗಲ್ ಕಾಕತೀಯ ಅರಸರು ತಮ್ಮ ಪ್ರಾಬಲ್ಯದ ಬಾಹುಗಳನ್ನು ಚಾಚುವಲ್ಲಿ ತೊಡಗಿದರು. ಇದೇ ಸಂದರ್ಭಕ್ಕೆ ಕಲ್ಯಾಣಕ್ರಾಂತಿಯ ನಂತರ ಚದುರಿಹೋದ ಶಿವಶರಣರು ಇವರ ಸ್ಥಾನದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ತವಕಿಸಿದರು. ಶಿವತ್ವ ಮತ್ತು ಪ್ರಭುತ್ವದ ಸಮಾಗಮವಾಯಿತು. ಸಂಘರ್ಷಕ್ಕೆ ಬದಲಾಗಿ ಸಾಮರಸ್ಯದ ಬದುಕಿಗೆ ಸಹಕಾರಿಯಾಯಿತು. ಶಿವಶರಣರ ಮೂಲಕ ರಾಜನಿಗೆ ಮುಂದೆ ಇತಿಹಾಸದಲ್ಲಿ ಪ್ರಚಾರ ದೊರೆತರೆ, ರಾಜರಿಂದ ವೀರಶೈವ ಧರ್ಮವು ಆಂಧ್ರದಲ್ಲಿ ತನ್ನ ಹರಹನ್ನು ವಿಸ್ತರಿಸಿಕೊಳ್ಳಲು ಅವಕಾಶ ಒದಗಿತು. ವೀರಶೈವ ಧರ್ಮದ ಪುನರುತ್ಥಾನದ ಮತ್ತೊಂದು ಆಯಾಮ ಆರಂಭವಾದುದು ಇದೇ ಸಮಯದಲ್ಲಿ. ರಾಜ್ಯಭಾರ ಮಾಡುತ್ತಿದ್ದ ಕಾಕತೀಯ ಅರಸನಾದ ಗಣಪತಿರಾಯನು ವೀರಶೈವ ಧರ್ಮಕ್ಕೆ ಪ್ರಭಾವಿತನಾಗಿದ್ದನು. ಶೈವಧರ್ಮ ನಿಷ್ಠೆ, ಶಿವನಿಷ್ಠೆಯಿಂದಾಗಿ ಶೈವ ಧರ್ಮವನ್ನು ಪುನರುಜ್ಜೀವನಗೊಳಿಸುವ ಮನಸ್ಸು ಗಣಪತಿರಾಯನಲ್ಲಿ ಉಂಟಾಯಿತು.

ವಚನೋತ್ತರ ಯುಗದ ಅಭಿವ್ಯಕ್ತಿ ಮಾಧ್ಯಮ ಪ್ರಸಾರ ಸಾಹಿತ್ಯ. ಈ ಸಾಹಿತ್ಯ ಪ್ರಕಾರವು ಹೆಸರು ಮಾಡುವ ಕಾಲವಾಗಿತ್ತು. ಇದರ ಕೇಂದ್ರ ಭಾವ ಜನಸಾಮಾನ್ಯರಿಗೆ ತಲುಪಬೇಕೆಂಬುದೇ ಆಗಿತ್ತು. ಪ್ರಸಾರ ಸಾಹಿತ್ಯದ ಭಾಗವಾಗಿ ರೂಪುಗೊಂಡ ಸಾಹಿತ್ಯ ಕೃತಿಯೇ ಗುಂಡಬ್ರಹ್ಮಯ್ಯಗಳ ಸಾಹಿತ್ಯ. ಇತಿಹಾಸದ ಮುಖೇನ ಸಾಹಿತ್ಯ ಪ್ರಜ್ಞೆ ಮೂಡಿಸುವ ಕೃತಿ. ಭಿನ್ನ ಕವಿಗಳ ಭಿನ್ನ ಸಾಹಿತ್ಯ ಪ್ರಕಾರಗಳಿಂದ ರೂಪುಗೊಂಡ ಮಹತ್ವದ ಕೃತಿ. ಕನ್ನಡ ನಾಡಿನ ಇತಿಹಾಸ ಮತ್ತು ಸಾಹಿತ್ಯದ ನೆಲೆಗಳಿಂದ ಕೂಡಿದ ಈ ಕೃತಿಯು ಅಂತರ್‌ಶಿಸ್ತೀಯ ಜ್ಞಾನವನ್ನು ಒದಗಿಸುವಂತದ್ದಾಗಿದೆ. ಐತಿಹಾಸಿಕ ಪ್ರಜ್ಞೆಯನ್ನು ಸಾಹಿತ್ಯ ಕೃತಿಗಳ ಮೂಲಕ ಕಂಡುಕೊಳ್ಳಲು ಸಾಧ್ಯವಾಗದಿದ್ದ ಸಂಕ್ರಮಣ ಕಾಲದಲ್ಲಿ ಸಾಹಿತ್ಯ ಕೃತಿಯೊಂದು ಚಾರಿತ್ರಿಕ ಪ್ರಜ್ಞೆಯನ್ನು ಬಿತ್ತರಿಸುವ ಕೃತಿಯಾಗಿ 'ಗುಂಡಬ್ರಹ್ಮಯ್ಯಗಳ ಸಾಹಿತ್ಯ' ನಮ್ಮ ಕಣ್ಣಿಗೆ ಗೋಚರಿಸುತ್ತದೆ.

ಸಾಂಸ್ಕೃತಿಕವಾಗಿ ಸ್ಥಳೀಯ ಚರಿತ್ರೆಯನ್ನು ನಿರೂಪಿಸುವ ಇದರಲ್ಲಿ ಪೌರಾಣಿಕ, ಚಾರಿತ್ರಿಕ ಮತ್ತು ಸಮಕಾಲೀನಗೊಳಿಸಬಹುದಾದ ಅನೇಕ ಅಂಶಗಳು ನಮಗೆ ಲಭಿಸುತ್ತವೆ. ಇವು ಎಂಟುನೂರು ವರ್ಷಗಳ ಹಿಂದೆ ಒಂದು ಆದರ್ಶ ಸಮಾಜದ ನಿರ್ಮಾಣಕ್ಕೆ ಬೇಕೆನಿಸುವ ಸಂಗತಿಗಳಾಗಿದ್ದವು ಎಂಬುದು ಆಶ್ಚರ್ಯ

ಚಕಿತರನ್ನಾಗಿಸುತ್ತದೆ. ಬಸವೋತ್ತರಯುಗದ ವಿವಿಧ ಆಯಾಮಗಳನ್ನು ಪರಿಚಯಿಸುವ ಈ ಕೃತಿಯು ಒಂದು ತಾತ್ವಿಕ ಸಂದೇಶವನ್ನು ನಮಗೆ ನೀಡುತ್ತದೆ. ಕಲ್ಯಾಣಕ್ರಾಂತಿಯ ನಂತರದ ಪಲ್ಲಟಗಳಿಗೆ ಸಾಕ್ಷಿಯಾಗಿರುವ ಗುಂಡಬ್ರಹ್ಮಯ್ಯಗಳ ಸಾಹಿತ್ಯವು 'ಮೊರೆಹೊಕ್ಕವರ ಕಾಯ್ವೆ'ವೆಂಬ ವೀರವ್ರತವನ್ನು ಸ್ವೀಕರಿಸಿದ ಗುಂಡಬ್ರಹ್ಮಯ್ಯರೆಂಬ ವ್ರತವೀರರ ಕಥನವಾಗಿದೆ. ವೀರವ್ರತವೆಂದು ತಾವು ನಂಬಿದ ತತ್ವ, ಆದರ್ಶ, ಜೀವನದ ಸಿದ್ಧಾಂತಗಳನ್ನು ನಿಷ್ಠೆಯಿಂದ ನೆರವೇರಿಸುವಲ್ಲಿ ಪ್ರಾಣದ ಹಂಗು ಇವರಿಗಿಲ್ಲ. ತಾವು ನಂಬಿದ್ದೇ ಪರಮ ಸತ್ಯ. ಈ ಸತ್ಯದ ಪಾಲನೆಯೇ ಗುಂಡಬ್ರಹ್ಮಯ್ಯರ ಜೀವನದ ಗುರಿ. ಇದರ ಸಾಧನೆಗೆ ಹೆಂಡತಿ, ಮಕ್ಕಳು, ದೇಹದ ಪರಿವೇ ಇಲ್ಲ. ಆದ್ದರಿಂದ ಗುಂಡಬ್ರಹ್ಮಯ್ಯಗಳ ಸಾಹಿತ್ಯ ಅಧ್ಯಯನ ಮಾಡುವಾಗ ವೀರವ್ರತದ ಬಗ್ಗೆ ಸೂಕ್ಷ್ಮವಾಗಿ ವಿವೇಚಿಸಬೇಕಾಗುತ್ತದೆ. ಏಕೆಂದರೆ ಈ ಕಾವ್ಯದ ಸತ್ವ ಇರುವುದೇ ಇವರಿಬ್ಬರು ವ್ರತವನ್ನು ಪಾಲನೆ ಮಾಡುವಲ್ಲಿ.

ಜೈನ ವಾಙ್ಮಯದಲ್ಲಿ ಕಾಣುವ ಅನೇಕ ಸಾಂಕೇತಿಕ, ಪಾರಿಭಾಷಿಕ ಪದಗಳಂತೆ ಶಿವಶರಣರ ಸಾಹಿತ್ಯದಲ್ಲಿಯೂ ಹಲವಾರು ವಿಶಿಷ್ಟ ಪದಗಳು ದೊರೆಯುತ್ತವೆ. ಹನ್ನೆರಡನೆಯ ಶತಮಾನದ ವೀರಶೈವ ಸಾಹಿತ್ಯದಿಂದೀಚೆಗೆ ಹೆಚ್ಚು ಹೆಚ್ಚಾಗಿ ಕಾಣುವ 'ವೀರವ್ರತ' ಎಂಬ ಪದವು ವೀರಶೈವ ಪಾರಿಭಾಷಿಕವೆನ್ನುವಷ್ಟು ವಿಶಿಷ್ಟವಾಗಿ ಬಳಕೆಯಾಗಿದೆ. ಆ ಕಾಲದ ಸಮಾಜದ ಶ್ರೇಷ್ಠ ಮೌಲ್ಯವಾಗಿದ್ದ ವೀರಗುಣಕ್ಕೆ ಭಕ್ತಿಯನ್ನು ಕಸಿಮಾಡಿ ಅದನ್ನೇ ವ್ರತವಾಗಿ ಏಕನಿಷ್ಠೆ ಛಲದಿಂದ ಸಾಧಿಸಿಕೊಂಡು ಬಂದುದನ್ನೆ ವೀರವ್ರತ, ವೀರಭಕ್ತಿ ಶಬ್ದಗಳು ಸೂಚಿಸಿದಂತಿವೆ. ವೀರಶೈವ ಸಾಹಿತ್ಯದಲ್ಲಿ ಬಂದಿರುವ 'ವೀರವ್ರತ' ಎಂಬ ಶಬ್ದ ಬಳಕೆಯಾದುದನ್ನು ಉದಾಹರಣೆಯಾಗಿ ಕೆಳಗಿನಂತೆ ಕಾಣಬಹುದು. ಚನ್ನಬಸವಣ್ಣನು ಕಲ್ಯಾಣ ಪಟ್ಟಣದ ಶಿವಭಕ್ತರ ದೀರ್ಘ ವಿವರಗಳನ್ನು ಬರೆದಿದ್ದಾನೆ. ಅಲ್ಲಿ ಅನೇಕ ವಿಧವಾಗಿ ಭಕ್ತಿಯನ್ನು ಆಚರಿಸುವ ಶಿವಶರಣರನ್ನು ವರ್ಣಿಸಲಾಗಿದೆ. ಆಗ "ಐದು ಸಾವಿರ ವೀರವ್ರತನೇಮಗಳ ಕಟ್ಟಳೆಯ ಮಠಗಳು"[೩೩] ಇದ್ದುವೆಂದು ಹೇಳುತ್ತಾರೆ.

ಬಸವ ಪುರಾಣದಲ್ಲಿ ಒಟ್ಟು ಐದು ಬಾರಿ 'ವೀರವ್ರತ' ಎಂಬ ಪದವನ್ನು ಬಳಸಲಾಗಿದೆ. ಉದಾಹರಣೆಗೆ "ನಿಂಬಿಯಕ್ಕಸಾರ ವೀರವ್ರತ ಭರಿತ ಚರಿತೆ, ಮಡಿವಾಳ ಮಾಚಿದೇವನು ಶಿವಗಣಾಲೋಲನತಿ ವೀರವ್ರತಾಚಾರ ಪ್ರಯುತ, ಕಿನ್ನರಯ್ಯ ಅಪೂರ್ವ ವೀರವ್ರತ ಸದಾಚಾರಾನುಪಾಲಕನು, ಕನ್ನದ ಬೊಮ್ಮಯ್ಯ ಸಾರ ವೀರವ್ರತ ನಿಯಮಿಕಾಚಾರಂ ಅದುಭುತ ಚರಿತಂ, ಚವುಡಯ್ಯ ಗಾಢವೀರವ್ರತ ನಿಯಮಿತ ವ್ಯೂಹ ವಿಕ್ರಮದೇಹಿ"[೩೪] ಎಂಬ ವೀರವ್ರತ ಎನ್ನುವ ಪದ ಬಳಕೆಯಾಗಿದೆ.

ಪದ್ಮರಾಜ ಪುರಾಣದಲ್ಲಿ ಸಕಲೇಶ ಮಾದರಸರು ಗೋಪೆಯ ಶಿವದೇವನೆಂಬ ವೀರವ್ರತಿಯ ಹತ್ತಿರ ಬರುವ ಪ್ರಸಂಗವಿದೆ. ಈ ವೀರವ್ರತಿ ಶಿವದೇವನು "ಸೀಮೋಲಂಘನ ವ್ರತ"[೩೫]ದಲ್ಲಿರುತ್ತಾನೆ. ಶಿವತತ್ವ ಚಿಂತಾಮಣಿಯಲ್ಲಿ ಕಣ್ಣಪ್ಪನ ಬಗ್ಗೆ "ತನ್ನಯ ಕಣ್ಣಕಿತ್ತಿಕ್ಕಿ ಮೆರೆವ 'ವೀರವ್ರತಿ' ಕಣ್ಣಪ್ಪಗಳ ಚರಣಾಂಬುಜಕೆ ಶರಣರು"[೩೬] ಎಂದು ಲಕ್ಕಣ್ಣ ದಂಡೇಶ ಹೇಳಿದ್ದಾನೆ. ವೀರಶೈವಾಮೃತ ಪುರಾಣದಲ್ಲಿ "ವೀರವ್ರತಾಚಾರ ಶೀಲ ನಿಯಮಾಭರಿತರು"[೩೭] ಎಂಬ ಪ್ರಸ್ತಾಪ ಬರುತ್ತದೆ. ವೀರವ್ರತ ಎಂಬ ಆಚರಣೆಯ ಪದವನ್ನು

ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ಕಾವ್ಯದ ಜೀವಾಳವಾಗಿ ಕಾಣಬಹುದು. ಗುಂಡಬ್ರಹ್ಮಯ್ಯರು ತಾವು ನಂಬಿದ ತತ್ವ ಆದರ್ಶಗಳನ್ನು ಒಂದು ವೀರವ್ರತವಾಗಿ ಸ್ವೀಕರಿಸಿ, ಆಪತ್ತಿನ ಸ್ಥಿತಿಯಲ್ಲಿಯೂ ಅದರ ಆಚರಣೆಗೆ ಬದ್ಧರಾಗಿರುವರು. ತಾವು ನಂಬಿದ ಸತ್ಯವನ್ನು ಸನ್ಮಾರ್ಗದಲ್ಲಿ ನಡೆಸುವ ಹಿನ್ನಲೆಯಲ್ಲಿ ಗುಂಡಬ್ರಹ್ಮಯ್ಯಗಳು ವೀರವ್ರತವನ್ನು ಸ್ವೀಕರಿಸಿರುವರು. ಈ ಕಾವ್ಯದಲ್ಲಿ ಬರುವ ವೀರವ್ರತವನ್ನು ಕೆಳಗಿನ ಪದ್ಯಗಳ ಮೂಲಕ ಗಮನಿಸಬಹುದು.

"ಆರಿಗೆ ಸಲುವುದು ಮುರಾರಿಯ ಬಿರಿದು
ವೀರಶೈವನ ವ್ರತ ನಮಗುಂಟು|| ಬಿರಿದೀಗೆ
ಆರು ಸಮರ್ಥರು ಧರೆಯೊಳು

ಹೆಣ್ಣ ಕದ್ದರೆ ಕೊಡೆವು ಹೊನ್ನ ಕದ್ದರೆ ಕೊಡೆವು
ಬಣ್ಣ ಬಂಗಾರವ ತೆಗೆದೆಮ್ಮ|| ಮೊರೆಹೋಗಲು
ಕಣ್ಣಾರ ಕಂಡು ಕೊಡೆವಯ್ಯ

ಅಷ್ಟಮದಂಗಳೆ ಕಟ್ಟಿದ ಮದಕರಿ
ಬಿಟ್ಟು ತೇಜಿಗಳ ಮನಧರ್ಮ|| ಶರಣಾರು
ತೊಟ್ಟ ಪಂಥಗಳೆ ವ್ರತನೇಮ

ಉಂಬಲ್ಲಿ ಉಡುವಲ್ಲಿ ಕೊಂಬಲ್ಲಿ ಕೊಡುವಲ್ಲಿ
ಇಂಬು ಬಂದಲ್ಲಿ ಸುಖದಲ್ಲಿ|| ಜಂಗಮಕೆ ಶರ
ಣೆಂಬುದೆ ತಮಗೆ ವ್ರತನೇಮ"[೨೮]

ವೀರವ್ರತವೆಂಬ ಪದ ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ಅನೇಕ ಕಡೆ ಬಳಕೆಯಾಗಿದೆ. ಯಾರಾದರೂ ಶಿವಭಕ್ತರು ಗಣಪತಿರಾಜನ ಅರಮನೆಯಲ್ಲಿ ಹೆಣ್ಣು, ಎತ್ತು, ಮುತ್ತು-ಬಂಗಾರ ಇನ್ನೇನಾದರೂ ಕದ್ದರೆ, ಅಂತವರಿಗೆ ಆಶ್ರಯ ನೀಡುವುದಾಗಿ 'ವೀರವ್ರತ' ಕೈಗೊಳ್ಳುವರು. ಈ ವೀರವ್ರತವನ್ನು ಗುಂಡಬ್ರಹ್ಮಯ್ಯಗಳು ಕೈಗೊಳ್ಳಲು ಮುಖ್ಯ ಕಾರಣವೇನು? ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಈ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನ ಈ ಕೆಳಗೆ ಮಾಡಲಾಗಿದೆ. ಗಣಪತಿರಾಯನು ರಾಮಾಯಿ ಜೊತೆಯಲ್ಲಿ ಮಲಗಿರುವಂತ ಸಮಯದಲ್ಲಿ ಒಂದು ಕನಸು ಕಾಣುವನು. ಆ ಸ್ವಪ್ನದಲ್ಲಿ ನೆಲಕೆ ಸೋಕದ ಕೋಟೆ, ಮುಗಿಲು ಮುಟ್ಟುವ ಕೋಟೆ, ಜಲದಲ್ಲಿ ತೇಲುವ ಘನಕೋಟೆಯನ್ನು ಕಂಡನು. ಬೆಳಿಗ್ಗೆ ಎದ್ದ ನಂತರ ರಾಜನಿಗೆ ಸೋಜಿಗ ಎನಿಸುತ್ತದೆ. ಮುಗಿಲು ಮುಟ್ಟುವ, ನೀರಿನಲ್ಲಿ ತೇಲುವಂತ ಏಳುಸುತ್ತಿನ ಕೋಟೆ ಕಂಡೆನಲ್ಲ ಎಂದು ತುಂಬ ವಿಚಾರ ಮಾಡುವನು. ನಂತರ ನನ್ನ ಕನಸು ನನಸಾಗಲೇಬೇಕು ಎಂದೇಳಿ ಶಿವನನ್ನು ಕುರಿತು ತಪಸ್ಸು ಕೈಗೊಂಡನು. ಅನ್ನ, ನಿದ್ರೆಯ ಬಿಟ್ಟು ಶಿವಸ್ಮರಣೆಯನ್ನು ಕೈಗೊಂಡನು. ಸುಮಾರು ಏಳು ವರ್ಷಗಳ ಕಾಲ ಗಣಪತಿರಾಯ ತಪಸ್ಸು ಮಾಡಿದನು.

ಗಣಪತಿರಾಯನ ತಪಸ್ಸನ್ನು ಕಂಡು ಶಿವನಿಗೆ ಮೆಚ್ಚುಗೆಯಾಯಿತು. ಆದ್ದರಿಂದ ಪಾರ್ವತಿಗೆ 'ಅವ್ನು ಕೇಳುವಂತ ವರವ ಕೊಟ್ಬು ಬರಬೇಕೆಂದು ಹೇಳುವನು. ಪಾರ್ವತಿಯು 'ಸ್ವಾಮಿ ನರಪ್ರಾಣಿಗಳಿಗೆಲ್ಲ ವರಕೊಡಬೇಕು ಅಂತಿರಿ ಮುಂದೆ ಅವರಿಗೆ ಆಂಕಾರ ಅಲ್ವೆ'? ಎನ್ನುವಳು. ಅವರ ಆಹಂಕಾರ ಕಟ್ಟಿಗೊಂಡು ನಮಗೆ ಏನಾಗಬೇಕಾಗಿದೆ? ಅವರ ಅಹಂಕಾರ ಅವರನ್ನೆ ತಿನ್ನುತ್ತೆ ಎಂದು ವರವನ್ನು ನೀಡಲು ಶಿವನು ಪಾರ್ವತಿಯನ್ನು ಕರೆತರುವನು. ಆಗ ಗಣಪತಿರಾಜನು ಶಿವನಿಂದ ತನ್ನ ಕೋರಿಕೆ ನೆರವೇರಿಸುವಂತೆ ಭಾಷೆ ತೆಗೆದುಕೊಂಡು, ಎರಡು ನೇತ್ರಗಳನ್ನು ತೆಗೆಯುವನು. ತನ್ನ ಬೇಡಿಕೆಯನ್ನು ಶಿವನ ಮುಂದಿಡುತ್ತಾ, ನೆಲಕೆ ಸೋಂಕದ ಕೋಟೆ, ಮುಗಿಲು ಮುಟ್ಟುವ ಕೋಟೆ, ಜಲದಲ್ಲಿ ತೇಲಾಡೊ ಘನಕೋಟೆ ಇಂಥ ಘನಕೋಟೆಗೆ ದೊರೆಯಾಗುವಂತೆ ಆಶೀರ್ವಾದ ಮಾಡಿ ಎಂದನು. ಏಳು ಸಮುದ್ರದ ನಡುವೆ ಏಳು ಸುತ್ತಿನ ಕ್ಕೋಟೆ ಇರುವಂತ ವರವ ಕೊಡಬೇಕು. ಕಪ್ಪು ಸಮುದ್ರ, ಉಪ್ಪು ಸಮುದ್ರ, ಹಾಲು ಸಮುದ್ರ, ಜೇನು ಸಮುದ್ರ, ಮೊಸರು ಸಮುದ್ರ, ಮಜ್ಜಿಗೆ ಸಮುದ್ರ ಈ ಎಲ್ಲಕ್ಕೂ ನಡುಮಧ್ಯೆ ಸೀನೀರ್ ಸಮುದ್ರದ ಆ ಸೀನೀರ್ ಸಮುದ್ರದ ಮ್ಯಾಲೆ ಏಳು ಸುತ್ತಿನ ಕೋಟೆ ಇರಬೇಕೆಂದನು. ಕಬ್ಬಿಣದ ಕೋಟೆ, ಕಲ್ಲಿನಕೋಟೆ, ಕಂಚಿನಕೋಟೆ, ಹಿತ್ತಾಳೆ ಕೋಟೆ, ಬೆಳ್ಳಿ, ಚಿನ್ನ, ಅಪರಂಜಿ ಕೋಟೆ ಈ ಏಳುಕೋಟೆಗಳ ನಡುಮಧ್ಯೆ ಏಳಂತಸ್ತಿನ ಅರಮನೆ ಆಗಬೇಕೆಂದನು.

ಗಗನಚಿಕ್ಕಿ, ಮುಗಿಲುಚಿಕ್ಕಿ ನಾದಚಿಕ್ಕಿ, ಏದಚಿಕ್ಕಿ, ಕಾಲಚಿಕ್ಕಿ, ನೀಲಚಿಕ್ಕಿ, ಮಾಯಚಿಕ್ಕಿ, ಎನ್ನುವಂತ ಏಳಂತಸ್ತಿನ ಅರಮನೆಗೆ ದೇವಮಾನವರು ಕನ್ನ ಹಾಕದ ರೀತಿಯಲ್ಲಿ ಇರಬೇಕೆಂದು ಶಿವನಲ್ಲಿ ತನ್ನ ಕೋರಿಕೆ ಇಟ್ಟನು. 'ಅಯ್ಯಾ ನಿನ್ನ ಮಾತಿನಂಗೆ ಆಗಲಿ' ಎಂದು ಶಿವನು ವರವನಿತ್ತನು. ನಂತರ ಗಣಪತಿರಾಜನು ಕಂಚಿನ, ಚಿನ್ನದ, ಕಬ್ಬಿಣದ, ಉಕ್ಕಿನ, ಬೆಳ್ಳಿಯ ಕಹಳೆಯನ್ನು ಮಾಡಿಸಿದನು. ದಿನಕ್ಕೆ ಮೂರು ಸಾರಿ ಕಹಳೆ ಮೊಳಗಿಸುವನು. ಒಂದು ದಿನ ಚಿನ್ನದ ಕಹಳೆಯ ಮೊಳಗಿಸುತ್ತಾ ನನ್ನ ರಾಣಿಯ ಕೈಮುಟ್ಟಿ ಚಿನ್ನವ ಕದ್ದವನ ಕೊಯುವೆನು. ನನ್ನ ಪಟ್ಟಣದಲ್ಲಿ ಕದ್ದವನನ್ನು ಶೂಲಕ್ಕೇರಿಸುವೆನೆಂದು ಸಾರಿದನು. ವಿಷ್ಣು ಬಂದರೂ ಸರಿಯೆ, ಬ್ರಹ್ಮ ಬಂದರೂ ಸರಿಯೇ, ಅಷ್ಟದಿಕ್ಪಾಲಕರು ಬಂದರು ಸರಿಯೆ, ಇವರ ಜೊತೆಗೆ ಶಿವನು ಬಂದರೂ ಅವರನ್ನು ಶೂಲಕ್ಕೇರಿಸುವೆನೆಂದು ಕಹಳೆ ಸಾರಿದನು. ಇದರಿಂದ ಕುಪಿತರಾದ ಗುಂಡಬ್ರಹ್ಮಯ್ಯರು ಗಣಪತಿರಾಯನ ಅಹಂಕಾರವನ್ನು ಮುರಿಯಲು 'ಹೊರೆಹೊಕ್ಕವರ ಕಾಯ್ವೆ' ಎಂಬ ವೀರವ್ರತ ಕೈಗೊಳ್ಳುವರು. ಮಣ್ಣಿನಿಂದ ಕಹಳೆಯನ್ನು ತಯಾರಿಸಿದರು. ನಂತರ ಸುರಲೋಕವೆಲ್ಲ ಕೇಳುವಂತೆ ಕಾಲ್ಪೆಂಡೆಯನ್ನು ಧರಿಸಿ ರಕ್ಷಣೆ ನೀಡುವುದಾಗಿ ವೀರವ್ರತದ ಕಹಳೆಯ ಊದುವರು. ಮಾನವನಲ್ಲಿರುವಂತ ಅಹಂಕಾರದ ಬೀಜವನ್ನು ತೆಗೆದು ಹಾಕುವ ನೆಲೆಯಲ್ಲಿ ಇವರ ಕಹಳೆ ಮೊಳಗಿತು. ಹೀಗೆ ಗುಂಡಬ್ರಹ್ಮಯ್ಯರು ವೀರವ್ರತವನ್ನು ಸ್ವೀಕರಿಸಲು ಗಣಪತಿರಾಯನು ಒಂದು ರೀತಿಯಲ್ಲಿ ಕಾರಣವೆಂದು ಹೇಳಬಹುದಾಗಿದೆ.

ವೀರವ್ರತವನ್ನು ಕೈಗೊಂಡವರಿಗೆ 'ವೀರಗಣ'ಗಳೆನ್ನುವರು. ತಮ್ಮ ದೇಹ ಜೀವಗಳ ಮೋಹವನ್ನು ಕಳೆದುಕೊಂಡ ಶಿವಭಕ್ತರೆ ಈ ವ್ರತ ಹಿಡಿಯಲು ಅರ್ಹರೆಂದು ತೋರುತ್ತದೆ. ಒಮ್ಮೆ ಸ್ವೀಕರಿಸಿದ ವ್ರತವನ್ನು

ಜೀವನ ಪರ್ಯಂತ ಆಚರಿಸುತ್ತಿದ್ದಂತೆ ತೋರುತ್ತದೆ. ಇದರಿಂದ ಬದುಕಿಗೆ ನಿರ್ದಿಷ್ಟ ಉದ್ದೇಶ, ಮಹತ್ವ ಉಂಟಾಗಿರಬೇಕು. ಈ ಎಲ್ಲ ಉಲ್ಲೇಖಗಳು ವೀರಸಹಿತ ಭಕ್ತಿಯನ್ನು ಹೇಳುವಲ್ಲಿ ಬಳಕೆಯಾಗಿದೆ. ವೀರಶೈವ ತತ್ವಗಳು ಭಕ್ತರ ಉದ್ಧಾರಕ್ಕಾಗಿ ಆಚರಣೆಗೊಂಡಿವೆ. ದೈವ ಭಕ್ತಿಯ ಸಂದರ್ಭದಲ್ಲಿ ವೀರತನವನ್ನೇ ವ್ರತವಾಗಿ ಮಾಡಿಕೊಂಡಿದ್ದಾರೆನಿಸುತ್ತದೆ. ನಿರ್ಭಯ, ಅಚಲ ಭಕ್ತಿ, ನಿಷ್ಠೆ, ತತ್ವ-ಸಿದ್ಧಾಂತಗಳನ್ನು ಹೊಂದಿದ ಭಕ್ತರಿಗೆ 'ವೀರವ್ರತಿ'ಗಳೆಂದು ಹೇಳಬಹುದು. ಈ ಹಿನ್ನಲೆಯಲ್ಲಿ ಗುಂಡಬ್ರಹ್ಮಯ್ಯರು ವೀರವ್ರತಿಗಳಾಗಿ ನಮ್ಮಲ್ಲಿ ಮನೆಮಾಡಿಕೊಂಡಿದ್ದಾರೆ. ವ್ರತವೆಂಬ ಆಚರಣೆ ಶರಣರ ಬದುಕಿನ ಅವಿಭಾಜ್ಯ ಅಂಗವಾಗಿತ್ತು. ಇದು ತಮ್ಮ ವ್ಯಕ್ತಿತ್ವಗಳ ಅಭಿವ್ಯಕ್ತಿಗೆ ಸಹಾಯಕವಾಗಿತ್ತು.

ವಿಭಿನ್ನ ಕವಿಗಳ ವಿಭಿನ್ನ ಸಾಹಿತ್ಯ ಪ್ರಕಾರದ ಛಂದಸ್ಸುಗಳಿಂದ ರಚನೆಗೊಂಡಿರುವುದು ಈ ಕೃತಿಯ ಶ್ರೇಷ್ಠತೆಯನ್ನು ಹೆಚ್ಚಿಸಿದೆ. ಈ ಕೃತಿಯು ಒಂದು ನಿರ್ದಿಷ್ಟ ಚಾರಿತ್ರಿಕ ಒತ್ತಡದ ಜೊತೆಗೆ ಒಂದು ಯುಗಧರ್ಮವನ್ನು ಪ್ರತಿನಿಧಿಸುತ್ತದೆ. ಇದಲ್ಲದೆ ವೀರಶೈವ ಧರ್ಮದ ಪುನರುತ್ಥಾನದ ಮತ್ತೊಂದು ಶಕೆ ಕರ್ನಾಟಕೇತರ ಪ್ರದೇಶಗಳಲ್ಲಿ ಪ್ರಚಾರ ಪಡೆಯಲು ಹವಣಿಸಿರುವುದನ್ನು ಈ ಕೃತಿಯಲ್ಲಿ ಕಾಣಲಾಗುತ್ತದೆ. ಸರ್ವದೇಶ, ಸರ್ವಕಾಲ ವ್ಯಾಪ್ತವಾದ ಆದರ್ಶಗಳನ್ನು ಹಾಗೂ ಒಂದು ದೇಶ, ಒಂದು ಕಾಲಪರಿಮಿತವಾದ ಮೌಲ್ಯಗಳನ್ನು ಮತ್ತು ನಂಬಿಕೆಗಳನ್ನು ಮುನ್ನಡೆಸುವ ಸೂತ್ರವಾಗಿ ಈ ಕಾವ್ಯ ಗೋಚರವಾಗುತ್ತದೆ. ಮೊರೆಹೊಕ್ಕವರ ಕಾಯುವುದು ಅಂದಿನ ಪ್ರಭುತ್ವದ ಮೌಲ್ಯವಾಗಿಯೂ ಇತ್ತು ಎನ್ನಬಹುದು. ಜನಸಾಮಾನ್ಯರನ್ನು ರಕ್ಷಿಸಬೇಕಾದ ರಾಜನ/ಪ್ರಭುತ್ವದ ಜವಬ್ದಾರಿಯೂ ಆಗಿ ಅಂದಿನ ಯುಗಧರ್ಮದಲ್ಲಿ ಅಸ್ತಿತ್ವದಲ್ಲಿತ್ತು. ಪಂಪಭಾರತದಲ್ಲಿ ಕಾಣುವ ಮೌಲ್ಯ ಮತ್ತು ನಂಬಿಕೆಯಾಗಿ ಮೊರೆಹೊಕ್ಕವರನ್ನು ಕಾಯುವಂಥದ್ದು ಹತ್ತನೇ ಶತಮಾನದಲ್ಲಿ ಲಭ್ಯವಾಗುತ್ತದೆ. ಉದಾಹರಣೆಗೆ ಕೆಳಗಿನ ಪದ್ಯವನ್ನು ನೋಡಬಹುದು.

> "ಒತ್ತಿ ತರುಂಬಿ ನಿಂದ ರಿಪುಭೂಜ ಸಮಾಜದ ಬೇರ್ಗಳಂ ನಭ
> ಕ್ಕೆತ್ತದೆ ತನ್ನ ಬಂದು ಮರೆವೊಕ್ಕಡೆ ಕಾಯದೆ ಚಾಗದೊಳ್ಪನ
> ಚ್ಚೊತ್ತದೆ ಮಾಣ್ಬ ಬಾಳ್ವ ಪುಳುವಾನಸನೆಂಬನಜಾಂಡ ಮಂ
> ದತ್ತಿಯ ಪಣ್ಣೊಳಿರ್ಪ ಪುಳುವಲ್ಲದೆ ಮಾನಸನೇ ಮುರಾಂತಕಾ"[36]

ಅಳಿಮಾನವನನ್ನು ಪರಿಚಯಿಸುವ ಪಂಪಭಾರತದ ಒಂದು ಅಪೂರ್ವ ಪದ್ಯವಾಗಿದೆ. ಇಲ್ಲಿ ಪರಾಕ್ರಮ, ದಾನ, ಶರಣಾಗತ ರಕ್ಷಣೆಯೆಂಬ ಬಹುಮುಖ್ಯ ಮೂರು ಜೀವನ ಮೌಲ್ಯಗಳನ್ನು ಹೇಳಲಾಗಿದೆ. ಅದೇ ರೀತಿ ರನ್ನನಲ್ಲಿಯೂ 'ಈಯಲ್, ಇರಿಯಲ್, ಶರಣ್ಬುಗೆ ಕಾಯಲ್' ಎಂದೇ ಹೇಳಲಾಗಿದೆ. ಈ ಎರಡು ಕೃತಿಗಳಲ್ಲಿ ಒಂದು ಪ್ರಧಾನ ಮೌಲ್ಯ ಮತ್ತು ವಿಶಿಷ್ಟ ನಂಬಿಕೆಯಾಗಿ ಮೊರೆಹೊಕ್ಕವರನ್ನು ಕಾಯುವುದು ಅಂದಿನ ಕಾಲದ ಯುಗಧರ್ಮದ ಸತ್ಯವು ಆಗಿತ್ತು. ಯಾವುದೇ ಕಾಲದ ವ್ಯಕ್ತಿ ಮತ್ತು ಸಮಾಜಗಳ ವರ್ತನೆಯನ್ನು ನಿಯಂತ್ರಿಸುವಲ್ಲಿ, ಬದುಕನ್ನು ರೂಪಿಸುವಲ್ಲಿ ಮೌಲ್ಯ, ಆದರ್ಶ ಒಂದರೊಳಗೊಂದು

ಬೆಸೆದುಕೊಂಡಿವೆ. ಇವು ಪ್ರಧಾನವಾಗಿ ವ್ಯಷ್ಠಿ ಮತ್ತು ಸಮಷ್ಠಿಯನ್ನು ಪರಿಪೂರ್ಣವಾಗಿ ಕಡಿವಾಣ ಹಾಕಿ ಸಮಾಜದ ವ್ಯವಸ್ಥಿತ ನಡೆಗೆ ಸಹಾಯಕವಾಗಿ ಕೆಲಸ ಮಾಡುತ್ತದೆ. ಎಲ್ಲ ಕಾಲ, ಎಲ್ಲ ದೇಶ, ಎಲ್ಲ ಜನಾಂಗಗಳಿಗೆ ಅನ್ವಯಿಸುವ ಜೀವನ ಸತ್ಯಗಳು ಆದರ್ಶ. ಒಂದು ಕಾಲ, ಒಂದು ದೇಶ, ಒಂದು ಜನಾಂಗಕ್ಕೆ ಅನ್ವಯಿಸುವ ಜೀವನ ಸತ್ಯಗಳು ಮೌಲ್ಯ. ಆದರ್ಶ ಎಷ್ಟೇ ಪ್ರಯತ್ನಿಸಿದರೂ ಒಟ್ಟಾರೆಯಾಗಿ ಸಾಧ್ಯವಾಗಲಾರದು. ಮೌಲ್ಯವು ಪ್ರಯತ್ನ ಬಲದ ನಿರಂತರತೆಯಿಂದ ಬಿಡಿಯಾಗಿ ಅಲ್ಲದಿದ್ದರೂ ಇಡಿಯಾಗಿ ಲಭ್ಯವಾಗುವಂತಹುದು. ಆದರ್ಶವು ಪರಮ ಶಾಶ್ವತವಾದದ್ದು, ಮೌಲ್ಯ ಪರಿವರ್ತನಾಶೀಲವಾದುದಾಗಿದ್ದು ಸಮಾಜವನ್ನು ಪರಿವರ್ತನೆಯ ದಿಸೆಯಲ್ಲಿ ಕೊಂಡೊಯ್ಯುತ್ತದೆ. ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ಮೊರೊಹೊಕ್ಕವರನ್ನು ಕಾಯುವುದನ್ನು ಕೆಳಗಿನಂತೆ ಹೇಳಲಾಗಿದೆ.

"ಗುಂಡಬ್ರಹ್ಮಯ್ಯಗಳು ಗಂಡುಗಲಿ ವೀರರು
ಕಂಡವರು ಕದ್ದು ಮೊರೆಹೋಗಲು|| ಕೊಡೆನೆಂದು ಕಾ
ಲ್ಪೆಂಡೆಯವನಿಟ್ಟು ಮೆರೆದಾರು"[೪೦]

"ಧರಿಯ ರಾಜನ ಮನಿಯ ಕನ್ನ ಕೊರತಂದೂ|
ಹಿರಿದಾದ ಪಟ್ಟಣವ ಸುಲಿದುತಂದೂ||
ಪರಗಂಡು ಮಾರ್ಮಲವ ಹೊಕ್ಕು ಕದ್ದು ತಂದೂ
ಹರಬಂದು ಮೊರೆಹೋಗಲು ಕೊಡೆವು ನಾವೆಂದೂ||

ಹೊನ್ನು ಚಿನ್ನವ ಕದ್ದು ಮರೆಹೋಗಲು ಕೊಡೆವು|
ರನ್ನ ಮಾಣಿಕ್ಯ ಮುತ್ತು ತೇಜಿಯನು ಬಿಡೆವು||
ಕನ್ನೆ ಹೆಣ್ಣನ್ನು ತರಲು ಪುಸಿಯೆನಿತು ನೀಡೆವು|
ಚನ್ನಾಗಿ ಕೊಡವೆಂಬ ಬಿರಿದು ಸಾರಿದೆವು"||೪೧

ಈ ಮೇಲಿನ ಪದ್ಯಗಳಲ್ಲಿರುವ 'ಶರಣಾಗತಿ' ತತ್ವ ಪ್ರಮುಖವಾದುದಾಗಿದೆ. ಪ್ರಪಂಚದಲ್ಲಿರುವ ಮುಖ್ಯ ಧರ್ಮಗಳೆಲ್ಲವೂ ದೇವರನ್ನು ಕರುಣಾಮಯಿಯೆಂದು ಹೇಳಲಾಗಿದೆ. ಅದಕ್ಕಾಗಿ ದೇವರಲ್ಲೇ ಮೊರೆಹೋಗಬೇಕೆಂದು ಹೇಳುತ್ತೇವೆ. ಮುಸ್ಲಿಂರ ಪವಿತ್ರ ಗ್ರಂಥವಾದ ಕುರಾನಿನಲ್ಲಿಯೂ 'ದೇವರು ಕರುಣಾಮಯಿ' ಆದ್ದರಿಂದ ಆತನ ಮೊರೆ ಹೋಗಲು ಪ್ರಾರ್ಥನೆ ಸಲ್ಲಿಸಬೇಕೆಂದು ಹೇಳಿದೆ. 'ಸರ್ವಭಾವದಿಂದಲೂ ಅವನಲ್ಲೇ ಮೊರೆ ಹೋಗು, ನನಗೊಬ್ಬನಿಗೆ ಶರಣು ಬಾ' ಎಂಬ ಉಕ್ತಿಗಳಿವೆ. ಗುಂಡಬ್ರಹ್ಮಯ್ಯಗಳ ಚರಿತ್ರೆಯಲ್ಲಿ ಅಲೌಕಿಕ ಜಗತ್ತು ಲೌಕಿಕಕ್ಕೆ ಬಂದು ಮೊರೆ ಹೋಗುವುದನ್ನು ಕಾಣಬಹುದು. ಕೈಲಾಸದಲ್ಲಿರುವ ಶಿವನು ಗಣಪತಿರಾಯನ ಅರಮನೆಯ ಕದ್ದು ಗುಂಡಬ್ರಹ್ಮಯ್ಯರ ಮನೆಗೆ ಮೊರೆಹೋಗುವಂತಹದು ಈ ಕಾವ್ಯದ ಕುತೂಹಲಕ್ಕೆ ಕಾರಣವಾಗಿದೆ. ಇಲ್ಲಿ ಗುಂಡಬ್ರಹ್ಮಯ್ಯರ ಭಕ್ತಿಯನ್ನು ಅರಿಯುವ ಮೂಲಕ ಭೂಲೋಕದ ಘಟನೆಗಳನ್ನು ಪರಶಿವನು ಕಾಣುವನು. ಹರ ನಾರದರಿಗೆ

ಗಣಪತಿರಾಯನ ಅರಮನೆ ಕಳವು ಮಾಡುವುದು ಮುಖ್ಯವಾಗಿದೆ. ಅದರ ಜೊತೆಗೆ ಗುಂಡಬ್ರಹ್ಮಯ್ಯಗಳನ್ನು ಪರೀಕ್ಷೆಗೆ ಒಳಪಡಿಸುವುದೂ ಅವರ ಉದ್ದೇಶವಾಗಿದೆ. ಆದ್ದರಿಂದ ಹರ-ನಾರದರೇ ಭೂಮಿಗೆ ಬರಬೇಕಾದ ಅನಿವಾರ್ಯತೆ ಉಂಟಾಗುತ್ತದೆ.

ಹರ-ನಾರದರು ಒಂದೇ ಕಳುವಿನಲ್ಲಿ ಗುಂಡಬ್ರಹ್ಮಯ್ಯರನ್ನು ಪರೀಕ್ಷೆ ಮಾಡುವರು. ಅದರ ಜೊತೆಗೆ ಗಣಪತಿರಾಯನಲ್ಲಿರುವ ಅಹಂಕಾರವನ್ನು ಅಡಗಿಸುವರು. ಆದ್ದರಿಂದ ಜನಪದರ ಮಾತಿನಲ್ಲಿ ಹೇಳುವುದಾದರೆ, 'ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಒಡೆದಂತೆ' ಎನ್ನಬಹುದು. ಇದರಿಂದಾಗಿ ಒಬ್ಬರ ಸೊಕ್ಕನ್ನು ಅಡಗಿಸಿದರೆ, ಇನ್ನೊಬ್ಬರನ್ನು ದೈವತ್ವದ ನೆಲೆಗೆ ಕೊಂಡೊಯ್ಯುವಂತಾಗಿದೆ. ಭಕ್ತಿಯ ಪರಾಕಾಷ್ಠೆ ಮತ್ತು ಅಹಂಕಾರದ ಇಳಿಮುಖವನ್ನು ರಾಜರ ಮತ್ತು ಶರಣರ ಜೀವನ ಚರಿತ್ರೆಯೊಂದಿಗೆ ತಿಳಿಯಬಹುದಾಗಿದೆ. ಪ್ರಾಮಾಣಿಕತೆಯ ಸಂಕೇತವಾದ ಶರಣತ್ವ ಮತ್ತು ದೌರ್ಜನ್ಯ, ಅಹಂಕಾರದ ಸಂಕೇತವಾದ ರಾಜತ್ವದ ಅನೇಕ ಅಂಶಗಳು ಇಲ್ಲಿ ಸಮ್ಮಿಲನಗೊಂಡಿವೆ. ರಾಜಪ್ರಭುತ್ವವು ಕೊನೆಗೆ ಶರಣತ್ವಕ್ಕೆ ಶರಣು ಹೋಗುವ ನೆಲೆಯಲ್ಲಿ ಈ ಕಾವ್ಯವು ಅಭಿವ್ಯಕ್ತಿಗೊಂಡಿದೆ. ರಾಜನಾದ ಗಣಪತಿರಾಯನಿಗೆ ಗುಂಡಬ್ರಹ್ಮಯ್ಯರ ಮಹಿಮೆ ಕೊನೆಯಲ್ಲಿ ತಿಳಿಯುತ್ತದೆ. ನಂತರ ತನ್ನ ತಪ್ಪಿಗಾಗಿ ಪಶ್ಚಾತ್ತಾಪ ವ್ಯಕ್ತಪಡಿಸುವನು. ಸಾಮಾನ್ಯ ಪುರುಷರು ಎಂದು ತಿಳಿದಿದ್ದ ಗಣಪತಿರಾಯ ಅವರಿಗೆ ಶಿಕ್ಷೆ ವಿಧಿಸಿ ತಾನು ಜಯಶಾಲಿಯಾದಷ್ಟು ತೃಪ್ತನಾಗಿದ್ದನು. ಅವರಿಗೆ ಏರಿಸಿದ ಶೂಲವು ಚಿಗುರು ಬಂದೊಡನೆ ವಿಸ್ಮಯಭರಿತನಾಗಿ ನೋಡುವನು. ಕೊನೆಗೆ ಇವರು ದೈವೀಪುರುಷರು ಎಂದು ತಿಳಿದಾಗ ಇವರ 'ಮೊರೆಹೊಕ್ಕವರ ಕೊಡೆವು' ಎಂಬ ವೀರವ್ರತವನ್ನು ಗೌರವಿಸುವನು. ಗುಂಡಯ್ಯ ಬ್ರಹ್ಮಯ್ಯರಿಬ್ಬರೂ ಪರಾಕ್ರಮಶಾಲಿಗಳು ಮಾತ್ರವಲ್ಲ ಯಾರಾದರೂ ಶರಣು ಹೊಕ್ಕವರನ್ನು ರಕ್ಷಿಸಲು ತಮ್ಮ ಪ್ರಾಣವನ್ನೇ ಸಮರ್ಪಿಸಲು ಸಿದ್ಧರಾಗುವ ಮನಸ್ಸುಳ್ಳವರು. ಅವರನ್ನು ಯಾವುದೇ ಕಾರಣಕ್ಕೆ ಬಿಟ್ಟುಕೊಟ್ಟು ತಾವು ಮಾತ್ರ ಸುಖವಾಗಿರಬೇಕೆಂಬ ಹಂಬಲವುಳ್ಳವರಲ್ಲ. 'ಪರೋಪಕಾರಮಿದಂ ಶರೀರಂ' ಎಂಬ ಜೀವನ ತತ್ವವನ್ನು ಶಿರಸಾ ವಹಿಸಿ ಪಾಲಿಸುವವರು. ಅದರ ಮೂಲಕವೇ ತಮ್ಮ ಇಹದ ಬದುಕು ಹಸನಾಗುತ್ತದೆಂಬ ಅಚಲವಾದ ನಂಬಿಕೆ ಇವರಲ್ಲಿದೆ. ಇವರಿಬ್ಬರು ಭಾವಮೈದುನರಾಗಿದ್ದು, ಶಿವಭಕ್ತಿ ಸಮುದ್ರವನ್ನು ಕಡೆದು ಅದರಿಂದ ಹೊರಹೊಮ್ಮುವ ನವನೀತದಂತೆ ಇದ್ದವರು. ಮೃದುಸ್ವಭಾವದವರು ಮಾತ್ರವಲ್ಲ ಅನ್ಯರಿಗೆ ಮಾಡುವ ಉಪಕಾರವೇ ಪರಮ ಉಪಕಾರವೆಂದು ಭಾವಿಸಿದ್ದರು. ಆದ್ದರಿಂದ ಶಿವನು ಮತ್ತು ನಾರದರು ಇವರಲ್ಲಿ ಮೊರೆಹೊಕ್ಕರೂ ಇವರನ್ನು ಬಿಟ್ಟುಕೊಡಲಿಲ್ಲ. ಶಿವನಾರದರನ್ನು ಒಪ್ಪಿಸುವಂತೆ ಆಜ್ಞೆ ಮಾಡಿದಾಗ ಅವರನ್ನು ಒಪ್ಪಿಸದೆ ಶೂಲಕ್ಕರಲು ಸಿದ್ಧರಾದರು. ಇದು ಶಿವನ ಪರೀಕ್ಷೆಯಾದರೂ ಒಂದು ಹಂತದಲ್ಲಿ ಬಸವೋತ್ತರ ಯುಗದ ಅರಮನೆ ಗುರುಮನೆಗಳ ಅಥವಾ ಅರಮನೆ ಶರಣರ ಮನೆಗಳ ಸಂಘರ್ಷ ಮುಖಾ ಮುಖಿಯಾಗಿರುವುದನ್ನು ಗುಂಡಬ್ರಹ್ಮಯ್ಯಗಳ ಸಾಹಿತ್ಯದಿಂದ ತಿಳಿಯಬಹುದಾಗಿದೆ. ಮುಖಾಮುಖಿಗೊಂಡ ನಂತರ ಅರಮನೆಯು ಗುರುಮನೆಗೆ ಅಂದರೆ ರಾಜಪ್ರಭುತ್ವವು ಶರಣತ್ವಕ್ಕೆ ಶರಣಾಗುವುದನ್ನು ಕಾಣಬಹುದಾಗಿದೆ. ಈ ಹಿನ್ನಲೆಯಲ್ಲಿ ಗುಂಡಬ್ರಹ್ಮಯ್ಯಗಳ ಸಾಹಿತ್ಯವು ನಮಗೆ ಪ್ರಸ್ತುತವೆನಿಸುತ್ತದೆ.

ಸರ್ವಾಂತರ್ಯಾಮಿಯಾದ ಭಗವಂತನನ್ನು ಕಾಣಲು ಅವರು ತಮ್ಮ ದೈನಂದಿನ ಬದುಕನ್ನು ಶಿವನ ಭಕ್ತಿಯ ಪೂರೈಸಲು ಮೀಸಲಿರಿಸಿದರು. ಶಿವನನ್ನು ಕಾಣುವುದೇ ಸುಖವೆಂದು ಭಾವಿಸಿದ ಗುಂಡಬ್ರಹ್ಮಯ್ಯರು ಅತಂರಂಗದ ಶುದ್ಧಿ ಮಾತ್ರವಲ್ಲದೆ ಬಹಿರಂಗ ಶುದ್ಧಿಯೂ ಪ್ರಮುಖವೆಂದು ಅರಿತವರು. 'ಅರಿತರೆ ಶರಣ ಮರೆತರೆ ಮಾನವ'ನೆಂದು ಪ್ರತಿನಿತ್ಯ ಅರಿತು ಜೀವಿಸಿದವರು. ಇವರ ಭಕ್ತಿ ಬರುಸೆಟಗನ ರೀತಿಯಾಗಿರದೆ, ದೈನಂದಿನ ಬದುಕಿನಲ್ಲಿ ದೃಢಭಕ್ತಿ ಅಥವಾ ನಿಜದಭಕ್ತಿಯಾಗಿ ಹೊರಹೊಮ್ಮುತ್ತಿತ್ತು. 'ಸ್ಥಾವರಕ್ಕೆ ಅಳಿವುಂಟು ಜಂಗಮಕ್ಕಳಿವಿಲ್ಲ'ವೆಂಬಂತೆ ಜಂಗಮತ್ವಕ್ಕೆ ಪ್ರಾಧಾನ್ಯತೆ ನೀಡಿ ಅದಕ್ಕೆ ಶರಣಾಗುವುದೇ ತಮ್ಮ ಬದುಕು ಎಂದು ತಿಳಿದವರು. ಆಚಾರ ವಿಚಾರಗಳ ಸಂಗಮವಾಗಿ ಸದಾಚಾರಗಳಿಗೆ ಆದರ್ಶಪ್ರಾಯವಾದರು. ಇಹದ ಬದುಕನ್ನು ಹಸನಾಗಿಸಲು ಹೊರಟಾಗ ಎದುರಾಗುವ ಸಂಕಷ್ಟಗಳನ್ನು ನಿವಾರಿಸಿಕೊಂಡು ಶೂನ್ಯಸಂಪಾದನೆಯನ್ನು ಸಾಧಿಸುವುದು ಅತಿಮುಖ್ಯವಾಗಿತ್ತು. ಇಹದ ಬದುಕನ್ನು ಹಸನುಗೊಳಿಸದ ಹೊರತು ಪರದ ಬದುಕು ನಮಗೆ ದೊರೆಯದು ಎಂದು ನಂಬಿದವರು. ನಮ್ಮ ಅಂತಸಾಕ್ಷಿ, ಅಂತಸ್ಸತ್ವ ಕೊಲ್ಲುವ ಈ ಪ್ರಾಪಂಚಿಕ ವ್ಯವಹಾರಗಳೊಂದಿಗೆ ಇದ್ದೂ ಇಲ್ಲದಂತಿರುವರು. ಹೊಂದಾಣಿಕೆ, ಸಂಘರ್ಷ, ಸಾಮರಸ್ಯದ ಮೂಲಕ ಜೀವನದಲ್ಲಿ ಶರಣಧರ್ಮ ಅನುಭವಿಸುವುದು ಶ್ರೇಷ್ಠವಾಗಿತ್ತೆಂದು ಈ ಗುಂಡಬ್ರಹ್ಮಯ್ಯಗಳ ಸಾಹಿತ್ಯದಿಂದ ತಿಳಿದುಬರುತ್ತದೆ.

ಬಸವೋತ್ತರ ಯುಗದ ಒಂದು ವಿಶಿಷ್ಟವಾದ ಪ್ರಸಾರ ಸಾಹಿತ್ಯದ ಕೇಂದ್ರಬಿಂದು ಜನಸಾಮಾನ್ಯರನ್ನು ತಲುಪಬೇಕೆಂಬ ಹಂಬಲ. ಆ ಮೂಲಕ ಸಾಮಾನ್ಯರ ಬದುಕನ್ನು ಸಾಮಾನ್ಯರಿಗೆ ತಿಳಿಸುವುದೇ ಆಗಿತ್ತು. ಮಾತ್ರವಲ್ಲ ಅಸಾಮಾನ್ಯರ ಬದುಕಿನ ಮೌಲ್ಯಗಳನ್ನು ಸಾಮಾನ್ಯರಿಗೆ ದಾರಿದೀಪವಾಗುವಂತೆ ಪರಿಚಯಿಸುವ ಕಾರ್ಯವನ್ನು ಈ ಸಾಹಿತ್ಯ ಮಾಡುತ್ತದೆ. ಪ್ರಾಚೀನರ ಬದುಕಿನ ಅನಿವಾರ್ಯವಾದ ಆಚರಣೆ ವ್ರತ, ಈ ವ್ರತಗಳು ಸಾಮಾನ್ಯವಾಗಿ ಒಂದು ಆದರ್ಶವಾಗುವ ಇಲ್ಲವೆ ಸಾಮಾಜಿಕ ಮೌಲ್ಯವಾಗುವ ನೆಲೆಯಲ್ಲಿ ಅವರ ಬದುಕಿನ ಅವಿಭಾಜ್ಯ ಅಂಗವೂ ಹೌದು. ಗುಂಡಬ್ರಹ್ಮಯ್ಯರು ಈ ಆದರ್ಶ ಅಥವಾ ಮೌಲ್ಯವನ್ನು ಸಾಮಾಜಿಕ ಅನುಷ್ಠಾನ, ಆಲೋಚನೆ ಆಚರಣೆಗಳಲ್ಲಿ ತಮ್ಮ ಬದುಕಿನುದ್ದಕ್ಕೂ ರೂಢಿಸಿಕೊಂಡವರು. ಜಗದೇವಮೊಲ್ಲೆಬೊಮ್ಮರೇ ತೆಲುಗುದೇಶದ 'ಗವಚರ' ಎಂಬ ಗ್ರಾಮದಲ್ಲಿ ಪುನರ್ಜನ್ಮ ತಾಳಿ ಆಗಲೂ ಕೂಡ ಶೈವಧರ್ಮಕ್ಕೆ ನಿಷ್ಠರಾಗಿ ಜೀವಿಸಿದವರು. ಈ ಶೈವನಿಷ್ಠೆಯನ್ನು ಪ್ರಕಟಿಸುವ ಸಲುವಾಗಿ ಶಿವನಲ್ಲಿ ಹಾಗೂ ಶೈವಧರ್ಮದಲ್ಲಿ ನಿಷ್ಠೆಯುಳ್ಳ ಯಾರಿಗೇ ಆಗಲಿ ಅಗತ್ಯ ಬಿದ್ದರೆ ರಕ್ಷಣೆ ಕೊಡುವುದಾಗಿ ಘೋಷಿಸಿಕೊಂಡರು. ಇದಕ್ಕಾಗಿ 'ಮೊರೆಹೊಕ್ಕವರ ಕಾಯ್ವೆ'ವೆಂಬ ಸಾಮಾಜಿಕ ಮೌಲ್ಯದ ಅನುಷ್ಠಾನಕ್ಕಾಗಿ ತಮ್ಮ ಪ್ರಾಣತ್ಯಾಗಕ್ಕೂ ಸಿದ್ಧರಾದವರು. ಇವರ ಅಪೂರ್ವ ಆದರ್ಶವು ಮುಂದಿನ ಜನಾಂಗಗಳಿಗೆ ಮಾದರಿಯಾಯಿತು. ಪಂಪ, ರನ್ನರು ಸಹ ಈ ಒಂದು ಮೌಲ್ಯವನ್ನು ತಮ್ಮ ಕಾವ್ಯಗಳಲ್ಲಿ ಪ್ರಚುರಪಡಿಸಿ ಪ್ರಸರಿಸಿದರು.

ಗುಂಡಬ್ರಹ್ಮಯ್ಯರ ಸಾಹಿತ್ಯ ವ್ಯಾಪ್ತಿ ತುಂಬಾ ವಿಸ್ತಾರವಾದುದು. ವಿಶೇಷವೆಂದರೆ ಇಲ್ಲಿಯವರೆಗೆ ಲಭ್ಯವಿರುವ ಕೃತಿಗಳನ್ನು ಪರಿಶೀಲಿಸಿದರೆ ಇವರ ಸಾಹಿತ್ಯವು ಬಹುಪಾಲು ದೇಶೀ ಛಂದೋಮಟ್ಟುಗಳಲ್ಲಿ

ರಚನೆಯಾಗಿರುವುದು. ಹಾಡುಗಬ್ಬದ ಮೂಲಕ ಶರಣರ ವೀರಗುಣವನ್ನು ಕೀರ್ತಿಸುವ ಈ ಕಥಾ ಹಂದರಕ್ಕೆ ಶಿಷ್ಟಪದ ಹಾಗೂ ಜಾನಪದ ಪರಂಪರೆ ಪ್ರಾಪ್ತವಾಗಿದೆ. ಪಾರಂಪರಿಕವಾಗಿ ನಾಮಾವಳಿಗಳಲ್ಲಿ, ಪುರಾಣಗಳಲ್ಲಿ, ತ್ರಿಪದಿ, ಚೌಪದಿ, ಸಾಂಗತ್ಯಗಳಲ್ಲಿ ವಿಸ್ತರಿಸಿಕೊಂಡಿರುವ ಈ ಕಾವ್ಯವು ಜನಪದ ಖಂಡಕಾವ್ಯವಾಗಿ ನೀಲಗಾರರ ಹಾಡುಗಳಲ್ಲಿಯೂ ಉಳಿದುಕೊಂಡು ಬಂದಿರುವುದು ಈ ಕಾವ್ಯದ ವೈಶಿಷ್ಟ್ಯ. ಇದಲ್ಲದೆ ಶಿಲ್ಪಗಳ ಮೂಲಕವೂ ಕಾವ್ಯವೊಂದರ ಅವಲೋಕನಕ್ಕೆ ಸಾಧ್ಯತೆಗಳಿರುವುದು ಇದರ ಮತ್ತೊಂದು ವಿಶೇಷತೆ. ಸಾಹಿತ್ಯ ಮತ್ತು ಶಿಲ್ಪಕಲೆಗಳ ಅಂತರ್‌ಸಂಬಂಧವನ್ನು ಈ ಕೃತಿಯು ಪ್ರಚುರಪಡಿಸುತ್ತದೆ. ಈ ಶಿಲ್ಪಗಳಿಂದ ಇವರ ಆರಾಧನೆ ಅನುಷ್ಠಾನಗಳು ಕರ್ನಾಟಕದಾದ್ಯಂತ ಆಚರಣೆಯಲ್ಲಿರುವುದು ಸ್ಪಷ್ಟವಾಗುತ್ತದೆ. ಆದ್ದರಿಂದ ಈ ಕಾವ್ಯಕ್ಕೆ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಆಯಾಮಗಳಿರುವುದನ್ನು ಅಲ್ಲಗಳೆಯಲಾಗದು. ಸಾಹಿತ್ಯ ತಂತ್ರದ ದೃಷ್ಟಿಯಿಂದ ಸಾಹಿತ್ಯ ಭಾಷೆಯನ್ನು ಶಿಲ್ಪಭಾಷೆಯಲ್ಲಿ ತಿಳಿಸುವುದರ ಜೊತೆಗೆ ಅವುಗಳನ್ನು ದೈವೀ ಸ್ಥಾನದಲ್ಲಿಟ್ಟು ಆರಾಧಿಸುವುದರ ಮೂಲಕ ಅವರ ಬದುಕಿನ ಆದರ್ಶಗಳನ್ನು ಬಿತ್ತರಿಸಿದರು. ಇದರಿಂದಾಗಿ ಗುಂಡಬ್ರಹ್ಮಯ್ಯಗಳು ಆರಾಧ್ಯ ದೈವವಾಗಿ ಒಂದು ಕಾಲಕ್ಕೆ ಆಳ್ವಿಕೆ ಮಾಡಿದ್ದಾರೆಂಬುದರಲ್ಲಿ ಯಾವುದೇ ಅನುಮಾನವಿರಲಾರದು.

ಗುಂಡಬ್ರಹ್ಮಯ್ಯರು ತಮ್ಮ ಕರ್ತವ್ಯ, ವ್ರತ, ನಿಷ್ಠೆಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾಡಲು ಇವರ ಮೇಲೆ ಶರಣ ಚಳುವಳಿಯ ಅಗಾಧ ಪರಿಣಾಮ ಮತ್ತು ಪ್ರಭಾವ ಕಂಡುಬರುತ್ತದೆ. ಆಚರಣೆ, ಆರಾಧನೆ, ಜನವದಂತಿ, ನಂಬಿಕೆಗಳಂತ ಮೌಖಿಕ ಸಂಪ್ರದಾಯಗಳಲ್ಲಿ ಕಂಡು ಬಂದು ಪ್ರಸಾರ ಸಾಹಿತ್ಯಕ್ಕೆ ಇಂಬು ದೊರಕಿಸಿಕೊಟ್ಟಿದ್ದಾರೆ. ಸಕಾರಣವಾಗಿ ಪ್ರಾಚೀನ ಕಾಲದ ಜೀವನ ಪದ್ಧತಿಗಳನ್ನು ವರ್ತಮಾನಕ್ಕೆ ದಾಟಿಸುವುದರ ಮೂಲಕ ಪಾರಂಪರಿಕ ಪ್ರಜ್ಞೆಯನ್ನು ಈ ಕಾವ್ಯ ಮೂಡಿಸುತ್ತದೆ. ಗುಂಡಬ್ರಹ್ಮಯ್ಯಗಳ ಸಾಹಿತ್ಯವನ್ನು ಧಾರ್ಮಿಕ ಪಾತಳಿಯಲ್ಲಿ ವಿವೇಚಿಸಿದರೆ, ಅನೇಕ ಸ್ಥಿತ್ಯಂತರಗಳ ಸಂಕ್ರಮಣ ಕಾಲ, ಅಂದಿನ ಧರ್ಮದ ರೂಪುರೇಷೆಗಳು, ಜನಜೀವನದ ಮೇಲೆ ಧರ್ಮದ ನಿಯಂತ್ರಣ, ವಿಶ್ವಧರ್ಮವಾಗಲು ಹವಣಿಸುತ್ತಿದ್ದ ವೀರಶೈವ ಧರ್ಮವು ಇನ್ನುಳಿದ ಧರ್ಮಗಳಿಗಿಂತ ಭಿನ್ನವಾಗಿ ತೋರಿಸುವ ಪ್ರಯತ್ನ, ಸರ್ವಮಾನ್ಯವಾಗುವ ಸಾರ್ವತ್ರಿಕವೆನಿಸುವ ಮೌಲ್ಯಗಳ ಆಲೋಚನೆ, ಆಚರಣೆಗಳ ಮೂಲಕ ಆದರ್ಶ ಸಮಾಜದ ಕಟ್ಟುವಿಕೆಗೆ ನಡೆಸಿದ ಸಾಮಾಜಿಕ ಆಂದೋಲನ ಇವೆಲ್ಲವೂ ಗುಂಡಬ್ರಹ್ಮಯ್ಯಗಳ ಸಾಹಿತ್ಯದ ಮೇಲೆ ದಟ್ಟವಾದ ಪ್ರಭಾವ ಬೀರಿರುವುದು ಕಂಡುಬರುತ್ತದೆ.

ಕಲ್ಯಾಣ ಕ್ರಾಂತಿಯಂತಹ ವಿಪ್ಲವಸ್ಥಿತಿಯ ನಂತರ ಶರಣ ಸಾಹಿತ್ಯ ಸಂಪತ್ತು ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಿಕೊಂಡು ಬಂದವರಲ್ಲಿ ಓರಂಗಲ್ಲಿನ ಕಾಕತೀಯ ಅರಸರು ಪ್ರಮುಖರು. ಗುಂಡಬ್ರಹ್ಮಯ್ಯರ ಸಾಹಿತ್ಯವು ಇಂಥವರ ಸತ್ಯಾಸತ್ಯತೆಯನ್ನು ಒರೆಹಚ್ಚಿ ನೋಡುವ ಪ್ರಮುಖ ಆಕರಗ್ರಂಥವಾಗಿರುವುದು ನಿಸ್ಸಂದೇಹ. ಶಿವಶರಣರ ಕಥೆಗಳು, ಪುರಾಣ ಕಲ್ಪಿತ ಶಿವನ ಪಂಚವಿಂಶತಿ ಲೀಲೆಗಳು, ಶೂಲವನ್ನು ಮೆರೆಸುವ ಹಬ್ಬಗಳು, ಬೆನ್ನಸಿಡಿಯೇರಿಸುವ ಆಚರಣೆಗಳು, ಅಗ್ನಿ ಹೋಗುವ ಸಂಪ್ರದಾಯಗಳು, ವಗ್ಗಯ್ಯ

ವೀರಗಾಸೆ, ಸಾರುವಯ್ಯಗಳಂಥ ಧಾರ್ಮಿಕ ವೃತ್ತಿಗಾಯಕರು ಆ ಕಾಲದ ವಚನ ಸಾಹಿತ್ಯ ಮತ್ತು ಆಗಮ ಸಾಹಿತ್ಯಗಳ ಧಾರ್ಮಿಕ ಅನುಸಂಧಾನದ ಪ್ರತಿಬಿಂಬಗಳಾಗಿದ್ದವು. ಇದರಿಂದ ಈ ಕಾವ್ಯ ಸೃಷ್ಟಿಯಾದ ಕಾಲದಲ್ಲಿ ಕರ್ನಾಟಕಾಂಧ್ರ ಭಾಗಗಳು ಶೈವೋಪಾಸನೆ, ಶಿವನಿಷ್ಠೆಯ ಬಿರುಸಿನ ಚಟುವಟಿಕೆಗಳ ತಾಣವಾಗಿದ್ದವು.

ಅಂದಿನ ಸಾಮಾಜಿಕ ಜೀವನದಲ್ಲಿ ಭಾವುಕತೆ ಪ್ರಧಾನವಾಗಿತ್ತು. ಭಕ್ತಿ ತನ್ಮಯತೆಯ ಜನರಿದ್ದರು. ಕೌಟುಂಬಿಕವಾಗಿ ಇಬ್ಬರ ಹೆಂಡಿರ ಗೊಡವೆ ಅಂದರೆ 'ಬಹುಪತ್ನೀವಲ್ಲಭ ರಾಜಾ:ಯಿಂದಲೂ ದಿಬ್ಬದೇಹವು ಬರಲೇಸು' ಎಂದು ಜನರು ರೋಸಿ ಹೋಗಿದ್ದ ಪರಿಸ್ಥಿತಿಯಿತ್ತು. 'ಕುಲವಿಹೀನೆಯ ತಂದು ತಲೆಯನೇರಿಸಿಕೊಂಡ' ಎಂಬ ಗಾದೆಮಾತು ಅಂದಿನ ಕೆಳವರ್ಗದ ಜನರನ್ನು ಕುರಿತು ಉನ್ನತ ವರ್ಗದವರು ತಳೆದಿದ್ದ ಭಾವನೆಯನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಕಷ್ಟಪರಂಪರೆ, ಸಂಕಟಗಳು ಬಂದು ಜನರ ಬದುಕನ್ನು ಅಸಹನೀಯ ಮತ್ತು ಅಸಹಾಯಕರಾಗಿಸಿದಾಗ ಅನ್ಯರಿಂದ ಪಡೆದ ಸಾಲದ ಹೊರೆಯಿಂದ ಕಂಗೆಟ್ಟಿದ್ದರು. ಋಣಭಾರದಿಂದ ಸತ್ತರೆ ಮುಂದಿನ ಜನ್ಮದಲ್ಲಿ ಕತ್ತೆ, ಕುದುರೆ ಮತ್ತು ಎತ್ತುಗಳಾಗಿ ದುಡಿದು ಸಾಲ ತೀರಿಸುತ್ತಾರೆಂಬ ನಂಬಿಕೆ ಪ್ರಚಲಿತವಾಗಿತ್ತು. ಗವುಳಿ (ಹಲ್ಲಿ), ಹಸುಬ (ಶಕುನದ ಹಕ್ಕಿ)ನಾಡಿದ ಶಕುನಗಳಂತಹ ಅಂಧಶ್ರದ್ಧೆಗಳು ಸಮಾಜದಲ್ಲಿ ತುಂಬಿತುಳುಕುತ್ತಿದ್ದವು. ಅಪರಾಧಿಗಳಿಗೆ ಕಾದ ಎಣ್ಣೆಯ ಕೊಪ್ಪರಿಗೆಯೊಳಗಿಳಿಸುವ, ಹುತ್ತಕ್ಕೆ ಕೈಯ ನಿಕ್ಕಿಸುವ, ಶೂಲಕ್ಕೇರಿಸುವ, ಕತ್ತಕೊಯಿಸುವ, ಬೆಂಕಿ ಹಿಡಿಯುವ ಮುಂತಾದ ಭಯಾನಕ ಶಿಕ್ಷಾಪರಂಪರೆಗಳು ಜಾರಿಯಲ್ಲಿದ್ದವು. ಇವುಗಳ ಭಯದಿಂದ ಜನರು ಅಪರಾಧ ಮಾಡಲು ಹೆದರುತ್ತಿದ್ದರು. ಇದರಿಂದ ಸಮಾಜದಲ್ಲಿ ಸ್ವಾಸ್ಥ್ಯ ಕಾಪಾಡಲು ಸಹಕಾರಿಯಾಗಿತ್ತು. ಒಡನುಂಡು ಮಿತ್ರನ ಮಡದಿಯ ಕೂಡುವ ಮಿತ್ರದ್ರೋಹಿಗಳು, ಕೊಬ್ಬಿ ಪರಸತಿಗೆ ಅಪ್ಪುವ ಕಾಮುಕರು, ತಂದೆ ತಾಯಿಗಳನ್ನು ಕಾಡಿಸುವಂತಹ ಘೋರ ಪಾತಕರು ಇದ್ದಂತಹ ಯಥೇಚ್ಛ ಚಿತ್ರಣಗಳು ಕಂಡುಬರುತ್ತವೆ. ಇಂತೆಲ್ಲಾ ಪಾತಕ, ಘಾತುಕರ ಮಧ್ಯೆ ಲೋಕೋಪಕಾರವೆನಿಸುವ ಅಗ್ಗಿಷ್ಟಿಕೆ, ಅನ್ನಛತ್ರ, ಅರವಟಿಗೆಗಳು ನಿರ್ಮಾಣಗೊಂಡಿದ್ದವು. ಅಂದಿನ ಕಾಲದ ಶಿಕ್ಷೆಗಳನ್ನು ಈ ಕೆಳಗಿನ ಪದ್ಯಗಳ ಮೂಲಕ ಗಮನಿಸಬಹುದಾಗಿದೆ.

"ಅರಮನೆಯ ಕದ್ದವನ ಗರಗಸದಲಿ ಕೊಯಿಸುವೆ
ಶಿರವ ತುಂಡಾಗಿ ಕಡಿಸೂವೆ|| ಕಳ್ಳರ
ಹೊಡೆದಂಡಿನೊಳಗೆ ಹೊಡೆಸುವೆ

ಮಡದಿಯರ ಮೈಮುಟ್ಟಿ ತೊಡಿಗೆಯ ತೆಗೆದವನ
ಖಡ ಕಂಡವಾಗಿ ಕಡಿಸುವೆ|| ಕಳ್ಳರ
ಸಿಡಿ ಶೂಲದೊಳಗೆ ತೆಗೆಸೂವೆ

ಹೊನ್ನ ಕದ್ದ ಕಳ್ಳನ ಬೆನ್ನಖಂಡವ ಕೊಯಿಸೂವೆ

ಬೆನ್ನ ಚರ್ಮವ ಸುಲಿಸೂವೆ॥ ಎನ್ನುತ ರಾಯ
ತನ್ನ ಕೋಪದಲಿ ನುಡಿದಾನು

ಜಡೆಯ ಕಂಬಕ್ಕೆ ಕಟ್ಟಿ ಎಡಗೈಯ್ಯ ಕಟ್ಟಿಸುವೆ
ಮಡುವಿನೊಳು ಅದ್ದಿ ತೆಗೆಸೂವೆ॥ ಸುಣ್ಣದ
ಕಡಲ ತುಂಬಿಸುವೆ ಮನದಣಿಯಾ"[೨]

ಅರಮನೆಯನ್ನು ಕದ್ದವರಿಗೆ, ಪರಸ್ತ್ರೀಯರನ್ನು ಅಪಹರಿಸಿದವರಿಗೆ ಒಟ್ಟಾರೆ ಅಪರಾಧ ಮಾಡಿದಂತವರಿಗೆ ಈ ಮೇಲಿನ ಪದ್ಯಗಳಂತೆ ಗರಗಸದಿಂದ ಶಿರವನ್ನು ಕೊಯಿಸುವುದು, ಶೂಲಕ್ಕೆ ಏರಿಸುವುದು, ಕಾದ ಎಣ್ಣೆಯಲ್ಲಿ ಹಾಕುವುದು, ಬೆನ್ನಚರ್ಮ ಸುಲಿಯುವುದು, ಜಡೆಗಳನ್ನು ಕಂಬಕ್ಕೆ ಕಟ್ಟುವುದು ಮುಂತಾದ ಘೋರ ಶಿಕ್ಷೆಯನ್ನು ಅಪರಾಧಿಗಳಿಗೆ ಆ ಸಂದರ್ಭದಲ್ಲಿ ನೀಡುತ್ತಿರುವುದಾಗಿ ತಿಳಿಯುತ್ತದೆ. ಇದರಿಂದ ರಾಜನು ತನ್ನ ಆಸ್ಥಾನವನ್ನು ಈ ಲೋಕದಲ್ಲಿ ಯಾರೂ ಕದಿಯಲು ಸಾಧ್ಯವಿಲ್ಲವೆಂದು ಭಾವಿಸಿದನು. ಮಾಯಾಲೋಕದ ಕಳ್ಳರು ಗಣಪತಿರಾಜನ ಈ ನಂಬಿಕೆಯನ್ನು ಹುಸಿಗೊಳಿಸಿದರು. ಗಣಪತಿರಾಜನಲ್ಲಿರುವ ಸೊಕ್ಕನ್ನು ಅಡಗಿಸುವುದರ ಮೂಲಕ ಗುಂಡಬ್ರಹ್ಮಯ್ಯರನ್ನು ಪರಿಶುದ್ಧ ಶಿವಭಕ್ತರನ್ನಾಗಿ ಮಾಡಿದರು. ಆ ಮೂಲಕ ಲೋಕದ ಜನರಿಗೆ ತಿಳುವಳಿಕೆಯ ಪಾಠ ಹೇಳುವಂತಿತ್ತು. ದೈವತ್ವವನ್ನು ಮೀರಿದ್ದು ಈ ಪ್ರಪಂಚದಲ್ಲಿ ಯಾವುದೂ ಇಲ್ಲ ಎಂಬುದನ್ನು ಗುಂಡಬ್ರಹ್ಮಯ್ಯಗಳ ಸಾಹಿತ್ಯದ ಮೂಲಕ ಮತ್ತೊಮ್ಮೆ ಪ್ರತಿಪಾದಿತವಾಗಿದೆ. ಆದ್ದರಿಂದ ಈ ಸಾಹಿತ್ಯವು ಆಧುನಿಕ ಸಂದರ್ಭದಲ್ಲಿಯೂ ನಮಗೆ ಪ್ರಸ್ತುತವೆನಿಸುತ್ತದೆ. ಸಮಾಜವನ್ನು ತಿದ್ದುವ ನೆಲೆಯಲ್ಲಿ ಈ ಸಾಹಿತ್ಯವು ಪೂರಕವಾಗಿ ಕಾರ್ಯನಿರ್ವಹಿಸುತ್ತದೆ. ಈ ಮೂಲಕ ಸಮಾಜದ ಜನರನ್ನು ಸ್ವಾಸ್ಥ್ಯವಾಗಿರುವಂತೆ ಮಾಡುತ್ತದೆ. ಅಂದಿನ ಶಿಕ್ಷಾದಂಡನೆಗಳು ಇಂದಿನ ಕಾಲದಲ್ಲಿ ಮಾದರಿಯಾಗಬೇಕಾಗಿದೆ. ಅಂದಾಗ ಮಾತ್ರ ಆದರ್ಶ ಸಮಾಜದ ನಿರ್ಮಾಣಕ್ಕೆ ಗುಂಡಬ್ರಹ್ಮಯ್ಯಗಳ ಸಾಹಿತ್ಯವು ವಿಶಿಷ್ಟವಾದ ಕೊಡುಗೆ ನೀಡಿದಂತಾಗುತ್ತದೆ. ಪ್ರಸ್ತುತ ದಿನಮಾನಗಳಲ್ಲಿ ಯಾರು ಅಪರಾಧ ಎಸಗುವರೊ ಅವರು ಶಿಕ್ಷೆಯಿಂದ ಹೊರಬರುತ್ತಿರುವರು. ಸಾಮಾನ್ಯರು ಅಪರಾಧ ಮಾಡದಿದ್ದರೂ ಶೋಷಣೆಗೆ ಒಳಗಾಗಬೇಕಾದ ಘೋರ ದುರಂತ ಉಂಟಾಗಿದೆ. ಆದ್ದರಿಂದ ನಿಜವಾದ ಅಪರಾಧಿಗಳನ್ನು ಗುರುತಿಸಿ, ಹಿಂದಿನ ಕಾಲದ ಕಠಿಣ ಶಿಕ್ಷೆಯನ್ನು ಮರಳಿ ಜಾರಿಗೊಳಿಸಿದರೆ ಸಮಾಜದ ಬದಲಾವಣೆಗೆ ಸಹಕಾರ ನೀಡಿದಂತಾಗುತ್ತದೆ.

ಗಂಧಿಗರು, ಗಾಣಿಗರು, ರತ್ನದಂಗಡಿ, ಮಾಲಿಗರು, ದವಸದಂಗಡಿ, ಎಲೆ ಅಡಿಕೆಗಳಂಗಡಿ, ಉತ್ತಮವೆನಿಸುವ ಎಳ್ಳು, ಕುಸುಬೆ, ಎಣ್ಣೆಯಂಗಡಿಗಳು ಸಾಲುಸಾಲಾಗಿ ಸಂಯೋಜನೆಗೊಂಡಿರುವ ವರ್ತಕ ಸಮಾಜವನ್ನು ಪರಿಚಯಿಸುತ್ತದೆ. ಕವಡೆ, ತೆಂಗಿನಕಾಯಿಯ ಜೂಜಾಟಗಳು ಅಂದಿನ ಸಾಂಸ್ಕೃತಿಕ ಬದುಕನ್ನು ಸೂಚಿಸುತ್ತವೆ. ಸೂಳೆಗೇರಿಗಳು ಅಲ್ಲಿಯ ಹದಿಹರೆಯ-ಮುದಿಸೂಳೆಯರು ಅವರ ದೈನಂದಿನ ಬದುಕಿನ ಅವ್ಯವಹಾರಗಳು ಸಾಮಾಜಿಕ ಅನಿಷ್ಟ ಪಿಡುಗುಗಳ ಅಧ್ಯಯನಕ್ಕೆ ಇಂದು ಆಕರಗಳಾಗುತ್ತವೆ. ಸ್ತ್ರೀಯರು

ಧರಿಸುವ ಕಾಂತಾವಳಿ ಸೀರೆ, ಚೌಕ ಸೀರೆ, ನೇತ್ರಾವಳಿ ಸೀರೆ, ಮಕ್ಷಾವಳಿ ಸೀರೆಗಳಿಂದ ಇವುಗಳ ಹೆಸರು ಮತ್ತು ನೇಯ್ಕೆದಾರರ ಬದುಕಿನ ಚಿತ್ರಣವನ್ನು ಸಮರ್ಪಕವಾಗಿ ವಿವರಿಸುತ್ತವೆ. ಎಮ್ಮೆ, ಮೊಸಳೆ, ಕೋಲುಮೊಸಳೆ, ಹಿಮ್ಮೊಸಳೆ ಹಾಗೂ ಹಾವುಮೀನು, ಮರಿಮೀನು, ಹಂದಿಮೀನು, ತುರುಗಿ ಮೀನು ಮುಂತಾದವುಗಳು ಒಂದು ಸಮುದಾಯದ ಆಹಾರ ಪದ್ಧತಿ ಮತ್ತು ವೃತ್ತಿಯನ್ನು ಪ್ರತಿನಿಧಿಸುತ್ತವೆ.

ಗುಂಡಬ್ರಹ್ಮಯ್ಯರು ಕೈಲಾಸವನ್ನು ತಮ್ಮ ಕಾಯಕದಲ್ಲಿ ತಂದು ಭೂಮಿಯನ್ನು ಸ್ವರ್ಗವಾಗಿಸಿದರು. 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂದು ನಂಬಿದ ಶರಣರು ಸ್ಥಾವರವನ್ನು ಕಡೆಗಣಿಸಿ ಜಂಗಮದೆಡೆಗೆ ಸಾಗಿದರು. ಇದ್ದ ಧರ್ಮ ವ್ಯವಸ್ಥೆಯನ್ನು ಕಡೆಗಣಿಸಿ, ಸಮಾನತೆಯ ತಳಹದಿಯ ಮೇಲೆ ಹೊಸ ಧರ್ಮವನ್ನು ಹುಟ್ಟಿ ಹಾಕಿದವರು ಬಸವಾದಿ ಶರಣರಾಗಿದ್ದಾರೆ. ಮುಖ್ಯವಾಗಿ ಕಾಯಕಕ್ಕೆ ಪಾರಮಾರ್ಥಿಕ ಸ್ವರೂಪವನ್ನು ನೀಡಿದ್ದರಿಂದ ವೀರಶೈವ ಕಾವ್ಯಗಳಲ್ಲಿ 'ಗುಂಡಬ್ರಹ್ಮಯ್ಯಗಳ ಚರಿತ್ರೆ'ಗೆ ವಿಶಿಷ್ಟವಾದ ಸ್ಥಾನವಿದೆ. ಹಿಂದೆ ಹೇಳಿದಂತೆ ನಾವು ಮಾಡಿದ ಪಾಪದ ಕಾರ್ಯಗಳಿಗೆ ಇನ್ನೊಬ್ಬರನ್ನು ಬಲಿ ಕೊಡುವ ವರ್ತಮಾನದ ಸಂದರ್ಭದಲ್ಲಿ 'ಗುಂಡಬ್ರಹ್ಮಯ್ಯರ ಸಾಹಿತ್ಯ'ವು ಆದರ್ಶವಾಗಿದೆ. ದೇವಲೋಕ ಭೂಲೋಕದ ವರ್ಣನೆಗಳಿದ್ದರೂ, ಕವಿಯು ಇಲ್ಲಿ ಕೃತಕವೆನಿಸಲು ಆಸ್ಪದ ನೀಡಿಲ್ಲ. ಸ್ವಾಭಾವಿಕ ಎನ್ನುವ ಹಾಗೆ ಪ್ರತಿ ಸಂಧಿಗಳಲ್ಲಿ ಘಟನೆಗಳು ಬಿಚ್ಚಿಕೊಳ್ಳುತ್ತವೆ.

ಪ್ರತಿಯೊಂದು ಘಟನೆಗಳಲ್ಲಿಯೂ ಶೃಂಗಾರ, ವೀರ, ಶೋಕ, ಭಕ್ತಿರಸವು ಬಳಕೆಯಾಗಿದೆ. ಕವಿಗೆ ಇಲ್ಲಿ ರಸನಿರೂಪಣೆ ಮುಖ್ಯವಲ್ಲದಿದ್ದರೂ, ಕಥಾವಸ್ತುವನ್ನು ಕಟ್ಟಿಕೊಡುವ ಸಂದರ್ಭದಲ್ಲಿ ಸಹಜ ಎನ್ನುವಂತೆ ನಿರೂಪಣೆಗೊಂಡಿರುವುದು ಈ ಕಾವ್ಯದ ವಿಶೇಷವೆನಬಹುದು. ಐತಿಹಾಸಿಕ ವ್ಯಕ್ತಿಗಳನ್ನು ಪುರಾಣೀಕೃತಗೊಳಿಸುವ ಸಮಯದಲ್ಲಿ ಕೃತಿಯ ಶೈಲಿ ಮತ್ತು ತಂತ್ರ ಪ್ರಮುಖವಾಗಿರುತ್ತದೆ. ಕವಿಯು ಸ್ವಲ್ಪ ಎಚ್ಚರ ತಪ್ಪಿದರೂ ಕೃತಿಯ ಮೌಲ್ಯಕ್ಕೆ ಕುಂದುಂಟಾಗುತ್ತದೆ. ಈ ವಿಷಯವನ್ನರಿತ ಕವಿಯು ಎಲ್ಲಿಯೂ ಗೊಂದಲಕ್ಕೆ ಎಡೆಮಾಡಿಲ್ಲ. ಸ್ಪಷ್ಟವಾದ ನೇರ ನಿರೂಪಣೆ ಕಾಣಬಹುದು. ನಡುಗನ್ನಡದ ಸರಳ ಭಾಷೆಯ ಮೂಲಕ ಕೃತಿ ರಚನೆಯಾಗಿದೆ. ಆದ್ದರಿಂದ ಸಹೃದಯರಿಗೆ ಕ್ಲಿಷ್ಟತೆ ಎನಿಸುವುದಿಲ್ಲ. ಜನಸಾಮಾನ್ಯರ ಭಾಷೆಗೆ ಹೆಚ್ಚು ಒತ್ತು ನೀಡಲಾಗಿದೆ. ಕೆಲವು ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಪ್ರೌಢಭಾಷೆಯ ಮೊರೆ ಹೋಗಿರುವುದನ್ನು ಗುರುತಿಸಬಹುದು.

ಗುಂಡಬ್ರಹ್ಮಯ್ಯರ ಚರಿತ್ರೆಯು ದೇಶಿಭಾಷೆ, ಛಂದಸ್ಸುಗಳಿಂದ ಅಧ್ಯಯನ ಯೋಗ್ಯವಾದ ಕಾವ್ಯವಾಗಿದೆ. ಬೆನ್ನಚರ್ಮ ಸುಲಿ, ಹಗ್ಗಚಿಲಕಣೆ, ಗದ್ದಕ್ಕೆ ಗಂಟಿಕ್ಕು, ಕೊಲ್ಲಾಪುರಕ್ಕೆ ಹೋಗಿ ಮಾತು ಕಲಿತು ಬರು, ಜಗಳಕ್ಕೆ ಕಾಲು ಕೆದರು, ಅಡವಿಗೆ ಮಳೆ ಸುರಿ, ಮೊರೆಹೊಕ್ಕವರ ಕಾಯ್ಕೆ, ಕಾಲ್ಪೆಂಡೆ ಮುಂತಾದವು ಇಲ್ಲಿನ ಸಶಕ್ತವಾದ ದೇಶಿ ನುಡಿಗಟ್ಟಾಗಿವೆ. ಈ ನುಡಿಗಟ್ಟುಗಳು ಪ್ರಾದೇಶಿಕ ವೈಶಿಷ್ಟ್ಯವನ್ನು ಅನಾವರಣಗೊಳಿಸುತ್ತವೆ. ಸ್ಥಳನಾಮ, ವ್ಯಕ್ತಿನಾಮಗಳ ಸ್ವತಂತ್ರ ಅಧ್ಯಯನಕ್ಕೆ ಈ ಕೃತಿಯಲ್ಲಿ ಇಂಬು ದೊರೆಯುತ್ತದೆ. ಮಹತ್ವದ ಸಂಗತಿಯೆಂದರೆ, ಓರಂಗಲ್ಲಿನ ಪರಿಸರದ ಶೂಲದ ಹಬ್ಬವು ಕಂಪ್ಲಿ ಪರಿಸರದಲ್ಲಿ ಪ್ರಚಲಿತವಾದ ಸಂಗತಿಯನ್ನು

ಹೊಸಕುಮಾರರಾಮನ ಸಾಂಗತ್ಯದಲ್ಲಿ ಒಂದು ಸಂಧಿ ಪೂರ್ಣವಾಗಿ ತಿಳಿಸುತ್ತದೆ. ಹೀಗಾಗಿ "ಮಧ್ಯಕಾಲೀನ 'ಕರ್ನಾಟಕಾಂಧ್ರ' ಸಾಂಸ್ಕೃತಿಕ ರಾಜ್ಯಭಾರತ್ವದ ಅಧ್ಯಯನಕ್ಕೆ ಹೊಸ ಕುಮಾರರಾಮನ ಸಾಂಗತ್ಯದ ಶೂಲದ ಹಬ್ಬದ ಪ್ರಸ್ತಾಪ ಮುಡಿಕಿರೀಟವಾದರೆ, ಗುಂಡಬ್ರಹ್ಮಯ್ಯಗಳ ಶೂಲಕ್ಕೇರಿಸುವ ಕಥಾನಕ ಅಡಿದಾವರೆಯಾಗಿದೆ"೪೬ ಎಂದು ಡಾ.ಕೆ.ರವೀಂದ್ರನಾಥರು ಹೇಳಿದ್ದಾರೆ.

ಕಾಲುಂಗರ, ಬೊಟ್ಟನುಂಗುರ, ಬೆರಳುಂಗರ, ಚಿಂತಾಕು, ಕೊರಳಮುತ್ತು, ವಾಲಿ, ಮೂಗುತಿ, ಕಡಗ, ತೋಳ್ಬಳೆ, ದಿಂಡಿನ ಸೀರೆ ಇವುಗಳು ಸ್ತ್ರೀಯರ ಅಂದಿನ ವಸ್ತ್ರಾಭರಣಗಳಾಗಿದ್ದವೆಂದು ತಿಳಿದುಬರುತ್ತದೆ. ತಿಪ್ಪಾಯಿ, ಪದ್ಮಾಯಿ, ಗಂಗಾಯಿ, ಗೌರಾಯಿ, ಹೊನ್ನಾಯಿ ಇವು ಸಾಮಾನ್ಯವಾಗಿ ಅಂದಿನ ರಾಣಿಯರ ಹೆಸರುಗಳಾಗಿದ್ದವು. ಈ ಕಾವ್ಯದಲ್ಲಿ ಅಂದಿನ ಶರಣ ಧರ್ಮದ ಪರಿಭಾಷೆ ಮತ್ತು ಶರಣ ಸಂಸ್ಕೃತಿ ಸೊಗಸಾಗಿ ಪ್ರತಿಬಿಂಬಿತವಾಗಿದೆ. ಅನೇಕ ಸಾಂಕೇತಿಕ ಪಾರಿಭಾಷಿಕ ಪದಗಳಂತೆ ಶಿವಶರಣರ ಸಾಹಿತ್ಯದಲ್ಲಿಯೂ ಹಲವು ವಿಶಿಷ್ಟ ಪದಗಳು ಬಳಕೆಯಾಗಿವೆ. ಅವುಗಳೆಂದರೆ, ಗುರು, ಲಿಂಗ, ಜಂಗಮ, ವ್ರತ, ಪಾದತೀರ್ಥ, ಪ್ರಸಾದ, ಶರಣ, ಭಕ್ತಿ, ದಾಸೋಹ, ಭಸಿತ, ಈಶ್ವರಾರ್ಚನೆ, ಶಿವ, ಲಿಂಗಮಜ್ಜನ, ಕಾಯಕ, ಎಡೆಮಾಡು, ಬಿಜಮಾಡು, ಶಿವಪೂಜೆ, ಹಸ್ತಲಿಂಗ, ಬಯಲಾಗು, ಸ್ಥಾವರ, ಶಿವನಿಷ್ಠೆ ಮುಂತಾದ ಪದಗಳು ವೀರಶೈವ ಶಬ್ದಕೋಶದ ಸಿರಿಯನ್ನು ಹೆಚ್ಚಿಸಿವೆ. ಶರಣ ಸಂಸ್ಕೃತಿಯ ಪ್ರತಿಬಿಂಬವೆಂಬಂತೆ ಗುಂಡಬ್ರಹ್ಮಯ್ಯಗಳ ಸಾಹಿತ್ಯ ಅಭಿವ್ಯಕ್ತಿಗೊಂಡಿದೆ. ಶಿವಶರಣರ ಜೀವನವನ್ನು ಪರಿಚಯಿಸುವ ಹಿನ್ನಲೆಯಲ್ಲಿ ಈ ಕಾವ್ಯಕ್ಕೆ ಅದರದೇ ಆದ ಮಹತ್ವವಿದೆ. ಆದರೆ ಇಂತಹ ಮೌಲ್ಯದಿಂದ ಕೂಡಿದ ಕೃತಿಗಳು ಓದುಗರ ಅವಕೃಪೆಗೆ ಅಥವಾ ಉಪೇಕ್ಷೆಗೆ ಒಳಗಾಗಿರುವುದು ದುರಂತವೇ ಸರಿ.

ಕನ್ನಡ ಕಾವ್ಯ ಪರಂಪರೆಯಲ್ಲಿ ಅಲ್ಲಲ್ಲಿ ಉಲ್ಲೇಖಗೊಂಡಿರುವ ಗುಂಡಬ್ರಹ್ಮಯ್ಯಗಳ ಸಾಹಿತ್ಯವನ್ನು ಅವಲೋಕಿಸಿದರೆ, ಗುಂಡಬ್ರಹ್ಮಯ್ಯರ ಬದುಕನ್ನು ಕಟ್ಟಿಕೊಡುವ ಇಡಿಯಾಗಿ ಸ್ವತಂತ್ರ ಕಾವ್ಯಗಳಾದ ವಿ.ಶಿವಾನಂದರ ಗುಂಡಬ್ರಹ್ಮಯ್ಯಗಳ ಚರಿತ್ರೆ (ಸುವ್ವಿ), ಗುಂಡಬ್ರಹ್ಮಯ್ಯಗಳ ಸಾಂಗತ್ಯ, ಗುಂಡಬ್ರಹ್ಮಯ್ಯರ ಚೌಪದನ, ಘನಪತಿರಾಯನ ಕಥೆ, ಕನ್ನಡ ವೃತ್ತಿಗಾಯಕರ ಕಾವ್ಯಗಳು, ಡಾ.ಕೆ.ರವೀಂದ್ರನಾಥರ ಗುಂಡಬ್ರಹ್ಮಯ್ಯಗಳ ಸಾಹಿತ್ಯ ಪ್ರಮುಖವಾದ ಕೃತಿಗಳಾಗಿವೆ. ಪ್ರಾಸಂಗಿಕವಾಗಿ ವೀರಶೈವಾಮೃತ ಪುರಾಣ, ಪದ್ಮರಾಜಪುರಾಣ, ಮರಳಸಿದ್ಧ ಕಾವ್ಯ, ಚನ್ನಬಸವ ಪುರಾಣ, ಶಿವತತ್ತ್ವ ಚಿಂತಾಮಣಿ' ಚೆನ್ನರಾಮನ ಸಾಂಗತ್ಯ, ಬಸವೇಶ್ವರ ವಚನ ಕಥಾಸಾರ ಹಾಗೂ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ ಮುಂತಾದ ಕೃತಿಗಳಲ್ಲಿ ಗುಂಡಬ್ರಹ್ಮಯ್ಯಗಳನ್ನು ಉಲ್ಲೇಖಿಸಲಾಗಿದೆ. ಪ್ರಥಮ ಬಾರಿಗೆ ಗುಂಡಬ್ರಹ್ಮಯ್ಯರ ಉಲ್ಲೇಖ ದೊರೆಯುವುದು 'ಶಿವತತ್ವ ಚಿಂತಾಮಣಿ'ಯಲ್ಲಿ ಬಹುಶಃ ಲಕ್ಕಣ್ಣದಂಡೇಶನಂತಹ ಶಿಷ್ಟ ಕವಿಗಳಿಗೂ ಜನಪದ ಹಾಡು, ಕತೆ, ಕಥಾನಕಗಳೇ ಮೂಲವಾಗಿರಬೇಕು.

ಈಗ ಉಪಲಬ್ಧವಿರುವ ಸ್ವತಂತ್ರ ಕಾವ್ಯಗಳೆಲ್ಲವೂ ಜನಪದ ಮೂಲದಲ್ಲಿ ಇರುವುದನ್ನು ಇಲ್ಲಿ ಗುರುತಿಸಬಹುದು. ಅಂತಹ ಕೃತಿಗಳನ್ನು ಇಲ್ಲಿ ಹೆಸರಿಸಲಾಗಿದೆ. ಗುಂಡಬ್ರಹ್ಮಯ್ಯ ಕಥೆ, ಗುಂಡ-ಬ್ರಹ್ಮಯ್ಯ,

ಶಿವಸೌಖ್ಯ, ಗುಂಡಬ್ರಹ್ಮಯ್ಯಗಳ ಸಾಂಗತ್ಯ, ಗುಂಡ-ಬ್ರಹ್ಮಯ್ಯಗಳ ಸಂಗ, ಗುಂಡಬ್ರಹ್ಮಯ್ಯಗಳ ಸುವ್ವಿ, ಗುಂಡಬ್ರಹ್ಮಯ್ಯಗಳ ಚರಿತ್ರೆ, ಗುಂಡ-ಬ್ರಹ್ಮಯ್ಯರ ಯಕ್ಷಗಾನ ಮುಂತಾದವು ಗುಂಡಬ್ರಹ್ಮಯ್ಯರ ಕುರಿತಾದ ಕೃತಿಗಳಾಗಿವೆ. ಸುವ್ವಿಹಾಡು ಎಂದರೇನು? ಎನ್ನುವುದಕ್ಕೆ ಸುಬ್ಬತಿ, ಸುಬ್ಬಾತಿ, ಸುವ್ವಿ ಮುಂತಾದ ಪದಗಳು ಇದಕ್ಕೆ ಸಂವಾದಿಯಾಗಿವೆ. ಜನಪದ ಲಯವುಳ್ಳ ಒಟ್ಟು ಹಾಡುಗಳನ್ನು ನಾವು ಎರಡು ಪ್ರಭೇದಗಳಲ್ಲಿ ವಿಂಗಡಿಸಬಹುದು. ಅವುಗಳೆಂದರೆ ಗ್ರಾಮ್ಯ ಮತ್ತು ಶಿಷ್ಟ. ಗ್ರಾಮ್ಯ ಹಾಡುಗಳು ವ್ಯವಸಾಯ ವೃತ್ತಿಗೆ ಸಂಬಂಧಿಸಿದವು. ಶಿಷ್ಟ ಹಾಡುಗಳು ಶುಭಮುಹೂರ್ತ ಹಾಗೂ ಐತಿಹಾಸಿಕ, ಪೌರಾಣಿಕ, ಭಕ್ತಿ ಪುರುಷನ ಕತೆ, ಕಥಾನಕಗಳನ್ನು ವರ್ಣಿಸುವ ಗೇಯ ರೂಪಗಳಾಗಿವೆ. 'ಸುವ್ವಿ'ಯು ಹೆಣ್ಣುಮಕ್ಕಳು ಅಕ್ಕಿ ಕುಟ್ಟುವಾಗ, ಹಾಗೂ ಲಗ್ನ, ಮುಂಜವಿ ಮುಂತಾದ ಶುಭ ಪ್ರಸಂಗಗಳಲ್ಲಿ ಹಾಗೂ ಗೋಧಿ ಥಳಿಸುವಾಗ ಹಾಡುವ ಮಂಗಳದ 'ಒನಕೆವಾಡಿನ' ಒಂದು ಪ್ರಕಾರವಾಗಿದೆ.

ಗುಂಡಬ್ರಹ್ಮಯ್ಯರ ಕಥೆಯು ಜನಪ್ರಿಯವಾದ 'ಸುವ್ವಿ' ಧಾಟಿಯಲ್ಲೆ ಪ್ರಸಾರಗೊಂಡಿತೆಂಬುದನ್ನು ಚನ್ನಕವಿಯ ಒಂದು ಪದ್ಯ ತಿಳಿಸುತ್ತದೆ. ಗುಂಡಬ್ರಹ್ಮಯ್ಯರು ಶೂಲವೇರಿದುದು ಶಿಕ್ಷಾರ್ಹ ಪ್ರಸಂಗವಾಗಲಿಲ್ಲ. ಬದಲಾಗಿ ಅದೊಂದು ಶುಭಗಳಿಗೆಯಾಯಿತು. ಆ ಶೂಲಗಳು ಹರನಿಗೆ ಅರ್ಪಿತವಾದವು. ಅವಕ್ಕೆ ಗುಂಡಬ್ರಹ್ಮಯ್ಯರು ತಾವು ಅರ್ಪಿತರಾದೆವೆಂಬ ಧನ್ಯತೆಭಾವ ಅಲ್ಲಿದೆ. ಅಂತ ಮಂಗಳ ಪ್ರಸಂಗದಲ್ಲಿ ಒರಳಹಾಡಿನ ಮಂಜುಳನಾದ ಗುಂಡಬ್ರಹ್ಮಯ್ಯರ ಸತಿಯರಿಗೆ ಕೇಳಿಬರುತ್ತದೆ. ಈ ಕೆಳಗಿನ ಉದಾಹರಣೆಗೆ ಪದ್ಯವನ್ನು ಗಮನಿಸಬಹುದು.

"ಬಿದಿರುಬೆಟ್ಟದ ಮೇಲೆ ಚದುರಂಗದ ಒರಳಕ್ಕಿ
ಮದನಾರಿ ಚಿತ್ತದೊನಕಿಯ-ಪಿಡಿಕೊಂಡು
ಚದುರೆ ಪಾಡಿದಳು ಪುರುಷನ

ಶೂಲೆಸುಪ್ಪತ್ತಿಗೆ ಶೂಲೆ ಪುಷ್ಪದ ಹಾಡು
ಶೂಲವೆ ನಿಮಗೆ ಸೆಳೆಮಂಚ-ಕೇಳಿರೆಂದು
ಬಾಲೆ ಪಾಡಿದಳು ಪುರುಷನ

ಶೂಲವೆ ಕೈಲಾಸ ಶೂಲವೆ ಸುರಲೋಕ
ಶೂಲವೆ ಸ್ವರ್ಗ ನಿಮಗಹುದೆಂದು-ಕೆಳಗಿಂದ
ಬಾಲೆ ಪಾಡಿದಳು ಪುರುಷನ"[11]

ಒಬ್ಬ ಮಹಿಳೆ ಕೆಲಸ ಮಾಡುವ ಸಂದರ್ಭದಲ್ಲಿ ಗುಂಡಬ್ರಹ್ಮಯ್ಯರ ಕುರಿತು ಹಾಡುವಂತ ಹಾಡಾಗಿದೆ. ಒನಕೆ ಹಿಡಿದುಕೊಂಡು ಒರಳಿನಲ್ಲಿರುವ ಅಕ್ಕಿಯನ್ನು ಕುಟ್ಟುವಳು. ಈ ಸಂದರ್ಭದಲ್ಲಿ ಅವಳು ಶರಣರನ್ನು ಶೂಲಕ್ಕೇರಿಸಿದರ ಕುರಿತು ಹಾಡುವಳು. ಈ ಪದ್ಯಗಳಿಂದ ಗುಂಡಬ್ರಹ್ಮಯ್ಯಗಳ ಸಾಹಿತ್ಯವು ಕುಟ್ಟುವಾಗ, ಬೀಸುವಾಗ ಹಾಡುವ ಹಾಡುಗಳಾಗಿದ್ದವೆಂದು ನಮಗೆ ಗೋಚರವಾಗುತ್ತದೆ. ಗುಂಡಬ್ರಹ್ಮಯ್ಯರನ್ನು

ಶೂಲಕ್ಕೇರಿಸಿದ್ದು ಅವರಿಗೆ ಶೂಲದ ಸುಪ್ಪತ್ತಿಗೆ, ಸೆಳೆ ಮಂಚದಂತೆ ಆಯಿತೆಂದು ಆ ಮಹಿಳೆ ಹಾಡುವಳು. ಶೂಲವೆ ಕೈಲಾಸ, ಶೂಲವೆ ಸುರಲೋಕ, ಶೂಲವೆ ಸ್ವರ್ಗವಾಗಿದೆಯೆಂದು ಹಾಡುತ್ತ ತನ್ನ ಕೆಲಸದಲ್ಲಿ ಆ ಮಹಿಳೆಯು ಶ್ರದ್ಧೆವಹಿಸುವುದನ್ನು ಕಾಣಬಹುದಾಗಿದೆ. ಇದರಿಂದ ಈ ಶರಣರ ಕಥೆಯು ಜನಸಾಮಾನ್ಯರ ನಾಲಿಗೆಯಲ್ಲಿ ನಲಿದು ಮುಂದೆ ಮೌಖಿಕವಾದ ಇವರ ಹಾಡುಗಳನ್ನು ಸಂಗ್ರಹಿಸಿದರ ಫಲವಾಗಿ ಹಿಡಿಯಾಗಿ ಇವರ ಸಾಹಿತ್ಯವು ನಮಗೆ ಲಭಿಸಿತು. ಶಿಷ್ಟಕಾವ್ಯಗಳಲ್ಲಿ ಗುಂಡಬ್ರಹ್ಮಯ್ಯರು ಉಲ್ಲೇಖವಾಗಲು ಈ ಹಾಡುಗಳು ಸಹಕಾರಿಯಾದವು ಅನಿಸುತ್ತದೆ. ಗುಂಡಬ್ರಹ್ಮಯ್ಯರ ವೇಷ-ಭೂಷಣಗಳನ್ನು ವಿಶ್ಲೇಷಿಸುವ ಇನ್ನೊಂದು ಹಾಡು ಇಂತಿದೆ.

"ಮಂಡೆಯ ಜಡೆಗಳು ಕಂಡೆಯ ಕರದಲ್ಲಿ
ಗೊಂಡೆಯ ದಟ್ಟಿ ಬಿರುದಿನ ಕಾಲಕಡೆಯದ
ಗುಂಡಬ್ರಹ್ಮಯ್ಯಗಳ ಮುನಿಕಂಡ"[೪೫]

ಇಲ್ಲಿಯ ಮಂಡೆ, ಕಂಡೆ. ಗೊಂಡೆ, ಗುಂಡು, ಕಂಡ ಶಬ್ದಗಳಲ್ಲಿ ಅನುಸ್ವರದ ಅನುರೂಪವಿದೆ. ಇದು ನಾದಮಾಧುರ್ಯವನ್ನು ಹೆಚ್ಚಿಸುವಂತಾಗಿದೆ. ಇದರಿಂದ ಗುಂಡಬ್ರಹ್ಮಯ್ಯಗಳ ಸಾಹಿತ್ಯವು ಹಾಡಲು ತುಂಬಾ ಯೋಗ್ಯವಾದುದಾಗಿದೆ. ಅಂತ್ಯಪ್ರಾಸ, ಆದಿಪ್ರಾಸ ಹೊಂದಿರುವಂತಹ ಹಾಡುಗಳನ್ನು ಕೂಡ ಗಮನಿಸಬಹುದಾಗಿದೆ. ಈ ಹಾಡುಗಳು ಗೇಯಪ್ರಧಾನವಾದುದರಿಂದ ಇವರ ವೀರಕಥನಕ್ಕೆ ಮತ್ತಷ್ಟು ಇಂಬು ದೊರೆತಂತಾಗಿದೆ. ಆದ್ದರಿಂದ ಗುಂಡಬ್ರಹ್ಮಯ್ಯಗಳ ಸಾಹಿತ್ಯದ ಅಧ್ಯಯನವು ಮಹತ್ವದ್ದಾಗಿದೆ.

ಭದ್ರಕೋಟೆಯನ್ನು ಭೇದಿಸಲು ಯಾರಿಂದಲೂ ಸಾಧ್ಯವಿಲ್ಲ ಎಂಬ ಹೇಳಿಕೆಯ ಹಿನ್ನಲೆಯಲ್ಲಿ ಜೀವಾಕರ್ಷಣ ಸವಾಲನ್ನು ಸ್ವೀಕರಿಸಿದ ವೇಷಧಾರಿ ಶಿವಕೋಟೆಗೆ ಕನ್ನವಿಕ್ಕಿ ಕಳವು ಮಾಡಿ ಬಂದು ರಕ್ಷಣೆಗಾಗಿ ಶರಣರ ಮೊರೆಹೊಕ್ಕಾಗ, ಕಟುಸತ್ಯದ ಅರಿವಿದ್ದೂ ಅಂಥವರ ಪರವಾಗಿ ಗುಂಡಬ್ರಹ್ಮಯ್ಯರು ನಿಂತರು. ಅವರಿಗೆ ಬದಲಾಗಿ ತಾವೇ ಶೂಲವೇರಿದ ಶರಣರ ಅಸಾಧಾರಣ ಘನವ್ಯಕ್ತಿತ್ವ ಜನಪದರ ಮೇಲೆ ಗಾಢಪ್ರಭಾವ-ಪರಿಣಾಮಗಳ ಕಾರಣದಿಂದ ಸಂಪ್ರದಾಯದ ಸಾಹಿತ್ಯ ಶಿಷ್ಟ ಕವಿಗಳನ್ನೂ ಆಕರ್ಷಿಸಿರಬಹುದಾದ ಕಾರಣದಿಂದ ಶಿಷ್ಟ ಹಾಗೂ ಜನಪದ ಸಾಹಿತ್ಯಗಳೆರಡರಲ್ಲೂ ಗುಂಡಬ್ರಹ್ಮಯ್ಯರ ಕಥಾವಾಹಿನಿ ಹರಿದುಬಂದಿದೆ. ಆಳುವವರ ದೌರ್ಜನ್ಯಕ್ಕೆ ಪ್ರತಿಭಟನೆಯ ಪ್ರತೀಕಗಳಾಗಿ ನಿಂತ ಇವರನ್ನು ಮೆಚ್ಚಿ ಶಿಲ್ಪದಲ್ಲಿ ಚಿತ್ರಿಸಲಾಯಿತು. ಓರುಗಲ್ಲು ಪಟ್ಟಣದ ಗಣಪತಿರಾಯ ಪರಮಭೋಗ ಮತ್ತು ಆಹಂಕಾರಗಳ ಪ್ರತಿನಿಧಿಯಾಗಿದ್ದಾನೆ. ತಪಸ್ಸು ಎನ್ನುವುದು ವ್ಯಕ್ತಿ ಉದ್ಧಾರಕ್ಕೆ, ಆತ್ಮೋನ್ನತಿಗೆ ಕಾರಣವಾಗದೆ ಅದು ಕೇವಲ ಭೋಗಾಪೇಕ್ಷೆಯಾಗುವುದನ್ನು ಈ ಕಾವ್ಯದಲ್ಲಿ ಕಾಣಬಹುದು. ಅದೇ ರೀತಿ ಪ್ರಸ್ತುತ ರಾಜಕೀಯದ ಸ್ಥಿತಿಯು ಇದೇ ಆಗಿರುವುದರ ಕಡೆಗೆ ಬೆರಳು ಮಾಡಿ ತೋರುವ ಕಾವ್ಯ ದೂರದ ಸಂಗತಿಯ ಭಿತ್ತಿಯಾಗದೆ ವಾಸ್ತವದ ಅಂಶವೂ ಆಗಿದೆ.

ತಪಸ್ಸು ಮಾಡಿ ಈಶ್ವರನನ್ನು ಮೆಚ್ಚಿಸಿದ ಗಣಪತಿರಾಯನಿಗೆ ವರ ಕೊಡುವ ವಿಚಾರದಲ್ಲಿ ಶಿವ-ಪಾರ್ವತಿಯರ ನಡುವೆ ನಡೆದ ಸಂವಾದ ಸ್ವಾರಸ್ಯಕರವಾಗಿದೆ.

"ಪಾರ್ವತ ಬುಯಿಲೋಕದಲ್ಲಿ
ನರ್ಪ್ಪುಳ ನಮ್ಮನ್ನು ಕುರ್ರು ಏಗವಾಗಿ
ತಪುಸು ಮಾಡ್ತಿದ್ದಾದೆ
ಅವ್ನು ಕೇಳುವಂತ ವರವ ಕೊಟ್ಟು ಬರಬೇಕು
'ಸ್ವಾಮಿ ನರಪ್ರಾಣಿಗಳಿಗೆಲ್ಲ ವರಕೊಡಬೇಕು ಅಂತಿರಿ
ಮುಂದೆ ಅವುರ್ಗೆ ಆಂಕಾರ ಅಲ್ವೆ'?
ಪಾರ್ವ್ವತ ಅವುರಾಂಕಾರ ಕಟ್ಕೊಂಡು ನಮಗೇನಾಗ್ಬೇಕು
ಅವುರಾಂಕಾರ ಅವುರ್ನೇ ತಿಂತದೆ
ನಡೀ ವರುವ ಕೊಟ್ಟು ಬರುವ"[೪೬]

ಎನ್ನುತ್ತಾನೆ. ಪಾರ್ವತಿಯ ನಿಲುವಿಗೆ ಪರಮೇಶ್ವರನ ನಿಲುವು ಭಿನ್ನವಾಗಿರುವಂತೆ ಕಂಡರೂ ಇವೆರಡೂ ಪರಸ್ಪರ ಪೂರಕ ವಿಚಾರಗಳಾಗಿ ಅಹಂಕಾರಿ ಮನುಷ್ಯನ ಇತಿಹಾಸವನ್ನೇ ಕಣ್ಣೆದುರು ತೆಗೆದಿಡುತ್ತದೆ. 'ಗುಂಡುಬ್ರಹ್ಮಯ್ಯರು ಊದಿದ ಕಹಳೆ ಶಬ್ದ ಪಾರ್ವತಿಯ ಪಾದದ ಮೇಲೆ ಬಿದ್ದು ಮೂರು ತಿಂಗಳು ಮಗು ಒದ್ದಾಡುವಂತೆ ಒದ್ದಾಡಿದಂತೆ' ಎಂಬ ಉಪಮೆ ದುಡಿದು ಬದುಕು ಕಟ್ಟಿಕೊಳ್ಳುವ ಬಡವರ ನಿರಂತರ ಆರ್ತನಾದವನ್ನು ಸಮರ್ಥವಾಗಿ ಸಂಕೇತಿಸುತ್ತದೆ. ಶಿವನೊಡನೆ ಪಗಡೆ ಆಡುತ್ತ ಕುಳಿತಿದ್ದ ಪಾರ್ವತಿಗೆ ಗಣಪತಿರಾಯನ ಗರ್ವದ ಅರಿವಾಗುತ್ತದೆ. 'ಅಂಕಾರ ಪಟ್ಟೋರಿಗೆ ವಾಂಕಾರ ತಪ್ಪಿದ್ದಲ್ಲ. ಪರಮೇಶ್ವರ ವರಾ ಕೊಟ್ಟು ಶಿರಕೆ ತಂದುಕೊಂಡಿದ್ದಾರೆ' ಎಂದುಕೊಂಡ ಅವಳು ಮುಂದಾಲೋಚನೆಯಿಲ್ಲದೆ ವರ ಕೊಟ್ಟ ಹರನನ್ನು ನೆನೆದು ಫಕ್ಕನೆ ನಕ್ಕುಬಿಟ್ಟಳು. ಕಾರಣ ಕೇಳಿದ್ದಕ್ಕೆ 'ಭೋಗಿಯ ಕಹಳೆ ಒಂದು ಕಡೆ ತ್ಯಾಗಿಯ ಕಹಳೆ ಮತ್ತೊಂದು ಕಡೆ ಏನನ್ನು ಸಾರುತಿದೆ ನೋಡಿ' ಎಂದು ಹೇಳಿ ಶಿವನನ್ನು ಚಿಂತೆಗೆ ಹಚ್ಚಿದಳು. ವಾಸ್ತವವಾಗಿ ಗಣಪತಿರಾಯನ ಗರ್ವಭಂಗ ಕಾರ್ಯದಲ್ಲಿ ಶಿವನಾರಾಯಣರೆ ಪ್ರಧಾನ ಪಾತ್ರವಹಿಸಿದರೂ ಅವರ ಯಶಸ್ಸಿನ ಹಿಂದಿರುವವಳು ಪಾರ್ವತಿಯೇ. ಶಿವನ ಅವಿಚಾರ ನಿರ್ಧಾರಗಳಿಗೆಲ್ಲ ಸಕಾರಣ ಪ್ರತಿಕ್ರಿಯೆ ಕೊಡುವವಳು ಶಿವೆಯೇ ಆಗಿದ್ದಾಳೆ. ಗಣಪತಿರಾಯನ ಗಳಿಕೆ ಹಾಗೂ ಗರ್ವದ ನಾಶದ ಜೊತೆಗೆ ಗುಂಡಬ್ರಹ್ಮಯ್ಯರ ದೃಢಮನದ ಪರೀಕ್ಷೆ ನಡೆಯಿತು. ಇವೆರಡನ್ನೂ ಒಟ್ಟಿಗೆ ಅಥವಾ ಪರಸ್ಪರ ಪೂರಕವಾಗಿ ಶಿವ ನಡೆಸುವಂತಿರುವುದು ಕಾವ್ಯದ ಕುತೂಹಲಕ್ಕೆ ಕಾರಣವಾಗಿದೆ.

ಜನಪದ ಕಾವ್ಯಗಳು ವಿಶೇಷವಾಗಿ ಹೆಣ್ಣನ್ನು ಸೂಕ್ಷ್ಮಜ್ಞಾನಿಯಂತೆ ಕಾಣಿಸುತ್ತವೆ. ಇದು ವಾಸ್ತವವೂ ಹೌದು ಪಾರ್ವತಿಯ ಸಂದರ್ಭದಲ್ಲಿ ಈಗಾಗಲೇ ಈ ಬಗ್ಗೆ ಸೂಚಿಸಲಾಗಿದೆ. ಗಣಪತಿರಾಯನ ರಾಣಿ ರಾಮಾಯಿಯ ಸಂದರ್ಭದಲ್ಲೂ ಇಂಥದ್ದನ್ನು ಕಾಣಬಹುದು. 'ಶಾಸ್ತ್ರಕಾರ'ನಾಗಿ ಬಂದಿರುವವನು 'ದೇವರು' ಎಂಬ ಸತ್ಯವನ್ನು ಅರಿಯುವವಳು ಇಲ್ಲಿ ರಾಣಿಯೇ. ಅದಕ್ಕೆ ತಕ್ಕಂತೆ ಪಾದಕ್ಕೆ ಬಿದ್ದು ಕ್ಷಮೆ ಕೋರುವ ಅವಳ ವರ್ತನೆಯೂ ಸಮಂಜಸವಾಗಿದೆ. ಹೆಣ್ಣಿನ ಸೂಕ್ಷ್ಮತೆ, ವಿವೇಕ, ವಿನಯಕ್ಕೆ ಇದು ಸಾಕ್ಷಿಯಾಗಿದೆ. ಜನಪದ ಕಾವ್ಯಗಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ದೇವಲೋಕ ಮತ್ತು ದೇವತೆಗಳ ಸ್ಥಳೀಕರಣ

ಇಲ್ಲಿಯೂ ಕಾಣಿಸಿಕೊಳ್ಳುತ್ತದೆ. ಕೋಳಿ ಕೂಗಿದ ಮೇಲೆಯೇ ಬೆಳಕಾಗುವುದು, ಕನ್ನಗತ್ರಿ ತಯಾರಿಕೆಯಲ್ಲಿ ಶಿವನಾರಾಯಣರೇ ತಿದಿಯೊತ್ತುವುದು, ದೇವರಾಗಿದ್ದರೂ ಶಿವನು ರಾಮಾಯಿಯ ಚೆಲುವಿಗೆ ಮರುಳಾಗುವುದು ಇತ್ಯಾದಿ ಸನ್ನಿವೇಶಗಳು ಮಾನವ ಸಹಜ ಲಕ್ಷಣಗಳೇ ಆಗಿದ್ದು ಜಾನಪದೀಯ ಶೈಲಿಯಲ್ಲಿ ನಿರೂಪಣೆಗೊಂಡಿವೆ.

ಉಪಕಾರ ಪ್ರವೃತ್ತಿ, ಉಪಕಾರ ಸ್ಮರಣೆ, ಕೃತಜ್ಞತೆ ಸಲ್ಲಿಕೆ ಇವು ಜನಪದರ ಪ್ರಮುಖ ಜೀವನದ ಮೌಲ್ಯಗಳು. ಸ್ವಯಂ ಬಾಗಿ ಶಿವನಾರದರಿಗೆ ಕುಡಿಯಲು ಕೆಂದಳನೀರನ್ನು ಕೊಟ್ಟ ತೆಂಗಿನಮರಕ್ಕೆ ಕೃತಜ್ಞತೆ ಹೇಳುವರು. ತೆಂಗಿನಮರಕ್ಕೆ ಹೇಳುವ ಬುದ್ದಿಮಾತು 'ಹೋಗ್ರಪ್ಪ ಈ ಸಲ ಅರಿತ್ಕೊಂಡು ಬೆಳೀಬೇಡಿ ತಗ್ಗಿಬಗ್ಗಿ ಬೆಳೀರಿ' ಎಂದು ತೆಂಗಿನಮರಕ್ಕೆ ಹೇಳುವ ಬುದ್ದಿಮಾತು ಎಲ್ಲ ಕಾಲಕ್ಕೂ ಎಲ್ಲರಿಗೂ ಹೇಳಬಹುದಾದ ನೀತಿಯ ಮಾತಾಗಿದೆ. ಹರ-ನಾರದರು ಓರುಗಲ್ಲಿನ ಕುಂಬಾರಗೇರಿ, ಗಾಣಿಗರಕೇರಿ, ಒಕ್ಕಲಿಗರಕೇರಿ, ಶಿವಭಕ್ತರ ಕೇರಿಗಳಿಗೆಲ್ಲ ಬಂದು ಪಕ್ಕದಲ್ಲೇ ಇದ್ದ ಮುಸ್ಲಿಂಕೇರಿಗೂ ಬರುತ್ತಾರೆ. ಅಲ್ಲಿಗೆ ಬಂದ ನಂತರ 'ದಿನಕ್ಕೆ ಮೂರು ಸಲ ನಮಾಜ್ ಮಾಡುತ್ತಾರೆ. ಇವರು ನಮಗೆ ಒಳ್ಳೆ ಭಕ್ತರಪ್ಪ' ಎಂದು ಹೇಳುತ್ತಾ ಒಬ್ಬರ ಗಡ್ಡವನ್ನು ಮತ್ತೊಬ್ಬರಿಗೆ ಕಟ್ಟಿ "ಇಸ್ಕಿಗಡ್ಡ ದೇಖೋ ಉಸ್ಕಿ ದಾಡಿ ದೇಖೋ ದೇಖೋರೆ ಹಮಾರ ಮಸಲತ್ತು"[೪೭] ಎಂದು ಮಾತನಾಡುವ ಭಾಗ ಜನಪದರ ಉರ್ದುಭಾಷೆಯ ಪರಿಣತಿ ಮತ್ತು ಕೋಮು ಸೌಹಾರ್ದಕ್ಕೆ ಸಾಕ್ಷಿಯಾಗುತ್ತದೆ. ಅಲ್ಲದೆ ಅರಮನೆಯಲ್ಲಿ ಮಲಗಿದ್ದ ಹೆಣ್ಣುಗಳನ್ನು ಹಸ್ತಿನಿ, ಚಿತ್ತಿನಿ, ಶಂಕಿನಿ, ಪದ್ಮಿನಿ ಜಾತಿಯವರೆಂದು ಹೇಳುವುದನ್ನು ನೋಡಿದಾಗ ನಮ್ಮ ಜನಪದರಿಗಿರುವ ಕಾಮಶಾಸ್ತ್ರ ಜ್ಞಾನ ಆಶ್ಚರ್ಯವನ್ನುಂಟು ಮಾಡುತ್ತದೆ.

ಗುಂಡಬ್ರಹ್ಮಯ್ಯಗಳ ಜೀವನದಲ್ಲಿ ಈ ಪರಮಾತ್ಮ ತತ್ವದ ಸಂಸ್ಪರ್ಷವಿಲ್ಲದಿದ್ದರೆ ಅವರೂ ಕೂಡ ಲೋಕವೀರರಾಗಬಹುದಿತ್ತೇ ವಿನಾ ಶರಣರಾಗಿ ಪೂಜೆಗೊಳ್ಳುತ್ತಿರಲಿಲ್ಲ. ಈ ಶರಣರ ಚರಿತ್ರೆಯಲ್ಲಿ ಹರ-ನಾರದರ ಪಾತ್ರಗಳು ಬರುವುದು ಅವರ ಚರಿತ್ರೆಯನ್ನು ಪುರಾಣವಾಗಿಸುವುದಕ್ಕಾಗಿ ಅಲ್ಲ. ಬದಲಾಗಿ ಮಾನವಿಕ ಮಟ್ಟದಿಂದ ಮೇಲೇರಿಸಿ ಶಿವತತ್ವದ ಬೆಳಕಿನಲ್ಲಿ ಅವರ ಚರಿತ್ರೆಯನ್ನು ಬೆಳಗಿಸುವುದಕ್ಕೆ. ಕವಿಯು ಇಲ್ಲಿ ಅವಶ್ಯಕ್ಕೆ ತಕ್ಕಂತೆ ಅಲಂಕಾರ, ವರ್ಣನೆ, ಛಂದೋಪ್ರಕಾರ, ರಸವನ್ನು ಬಳಕೆ ಮಾಡಿದ್ದಾನೆ. ಅತಿಶಯೋಕ್ತಿಗೆ ಅವಕಾಶ ನೀಡದೆ ಸ್ವಾಭಾವಿಕವಾಗಿ ಕೃತಿ ರಚನೆಗೊಂಡಿದೆ. ಈ ಕೃತಿಯಲ್ಲಿ ಬರುವ ಗುಂಡಬ್ರಹ್ಮಯ್ಯರು ತಮ್ಮ ತತ್ವ, ಒಳ್ಳೆಯ ಗುಣಗಳಿಂದ ಬದುಕಿನ ಮೌಲ್ಯವನ್ನು ಹೆಚ್ಚಿಸಿಕೊಂಡರು. ಭಕ್ತಿಯಿಂದಲೇ ಮುಕ್ತಿಯನ್ನು ಸಾಧಿಸಿದರು. ಶಿವಶರಣರ ವೈಶಿಷ್ಟ್ಯವನ್ನು ಗುರುತಿಸುವ ಶಬ್ದಗಳು ಶೀಲವಂತ, ಗುಪ್ತಭಕ್ತ, ಗುಣವಂತ, ವೀರಭಕ್ತ ಮುಂತಾದವುಗಳಾಗಿವೆ. ಗುಂಡಬ್ರಹ್ಮಯ್ಯರು ರಾಜಾಜ್ಞೆಯಂತೆ ಶೂಲವೇರಿ ಕುಳಿತು ಅಂಗೈಯಲ್ಲಿ ಲಿಂಗ ಹಿಡಿದು ತಮ್ಮ ಕೊನೆಯ ಲಿಂಗಪೂಜೆ ಮಾಡುವರು. ಶಿಲ್ಪಗಳಲ್ಲಿಯೂ ಸಹ ಅಂಗೈಯಲ್ಲಿ ಲಿಂಗಪೂಜೆ ಮಾಡುವಂತೆ ಚಿತ್ರಿಸಿರುವುದನ್ನು ನೆನೆಯಬಹುದು. ಸತಿಯರಿಬ್ಬರು ತಮ್ಮ ತಮ್ಮ ರುಂಡಗಳನ್ನು ಕತ್ತರಿಸಿ ಹೊನ್ನ ಹರಿವಾಣದಲ್ಲಿಟ್ಟು ಶೂಲದ ಮೇಲಿಂದ ಲಿಂಗಪತಿಗಳಿಗೆ ಆರತಿ ಬೆಳಗುವರು. ಈ ಅಂಶವನ್ನು ಗಮನಿಸಿದರೆ, ಬಸವಣ್ಣನವರು ಹೇಳಿದ 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂಬ ಮಾತು ಸತ್ಯವೆನಿಸುತ್ತದೆ.

ಗಣಪತಿರಾಯನು ನೆಲಕ್ಕೆ ಸೋಂಕದ ಕೋಟೆ, ಜಲದಲ್ಲಿ ತೇಲಾಡೋ ಘನಕೋಟೆ ಏಳುಸಮುದ್ರದ ನಡುವೆ ಏಳು ಸುತ್ತಿನ ಕೋಟೆ, ಕಪ್ಪು ಸಮುದ್ರ, ಉಪ್ಪುಸಮುದ್ರ, ಹಾಲು ಸಮುದ್ರ, ಜೇನು ಸಮುದ್ರ, ಮೊಸರು ಸಮುದ್ರ, ಮಜ್ಜಿಗೆ ಸಮುದ್ರ, ಸೀನೀರ್ ಸಮುದ್ರದ ಮೇಲೆ ಏಳು ಸುತ್ತಿನ ಕೋಟೆ ಕೇಳುವನು. ಗಗನಚಿಕ್ಕಿ, ಮುಗುಲುಚಿಕ್ಕಿ, ನಾದಚಿಕ್ಕಿ, ಏದಚಿಕ್ಕಿ, ಕಾಲಚಿಕ್ಕಿ, ನೀಲಚಿಕ್ಕಿ, ಮಾಯಾಚಿಕ್ಕಿ ಅನ್ನುವಂತ ಏಳಂತಸ್ತಿನ ಅರಮನೆಯನ್ನು ಶಿವನಲ್ಲಿ ಬೇಡುವುದು ಮಾನವ ಸಹಜವಾದ ಅತಿ ಆಸೆಯಾಗಿದೆ. ಇಂದಿಗೂ ಸುಮಾರು ಜನ ದೇವರಲ್ಲಿ ಅನೇಕ ಬೇಡಿಕೆಗಳಿಡುತ್ತಾರೆ. ಆದರೆ ಎಷ್ಟು ನೆರವೇರುತ್ತವೆ ಎನ್ನುವುದಕ್ಕೆ ಅವರವರ ಅನುಭವಕ್ಕೆ ಬಿಟ್ಟದ್ದು. ದೇವಾಲಯಕ್ಕೆ ಹೋಗುವಾಗ ಬೇಡಿಕೆಗಳ ಕಂತೆಯೇ ಇಟ್ಟುಕೊಂಡು ಹೋಗುವರು. ಗಣಪತಿರಾಯನೂ ಇದಕ್ಕೆ ಹೊರತಲ್ಲ. ಬೇಡಿಕೆಯನ್ನು ನೆರವೇರಿಸಲೆಂದೇ ತಪಸ್ಸಿಗೆ ಕುಳಿತಿದ್ದಾನೆ. ಕೊನೆಗೆ ಬೇಡಿಕೆ ಈಡೇರಿದಾಗ ಅಹಂಕಾರದಿಂದ ವರ್ತಿಸುವನು. ಕೊನೆಗೆ ಇದರ ಪರಿಣಾಮದ ಅರಿವು ಗಣಪತಿರಾಯನಿಗೆ ಆಗುತ್ತದೆ. ಈ ರೀತಿಯ ವ್ಯಕ್ತಿತ್ವವು ನಮ್ಮದು ಆಗಬಾರದೆಂದು ಈ ಸಾಹಿತ್ಯ ಸಂದೇಶ ನೀಡುತ್ತದೆ. ಆದ್ದರಿಂದ ಈ ಕಾವ್ಯವು ಪ್ರಸ್ತುತವೆನಿಸಿದೆ.

ವಸ್ತು, ಕಥನ ತಂತ್ರ ಮತ್ತು ಶೈಲಿ

ಅಪರೂಪದ ಶಿವಶರಣರ ಜೀವನ ಬದುಕು ಪವಿತ್ರವಾದುದು. ಅವರ ಬದುಕಿನಲ್ಲಿ ಪ್ರಾಮಾಣಿಕತೆ, ಆದರ್ಶ, ಮೌಲ್ಯಗಳ ಅನುಷ್ಠಾನವೇ ಜೀವಾಳವಾಗಿದೆ. ಅತ್ಯಂತ ಕಠಿಣ ಸಂದರ್ಭದಲ್ಲಿಯೂ ಛಲಬಿಡದ ಶಿವಧರ್ಮ ನಿಷ್ಠೆ ಮತ್ತು ಶೈವಧರ್ಮ ಪುನರುತ್ಥಾನದಂತಹ ಧಾರ್ಮಿಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಅನ್ಯರ ಬದುಕಿನ ಕಷ್ಟಸಹಿಷ್ಣತೆಗೆ ತಮ್ಮ ಬದುಕನ್ನು ಸಮರ್ಪಣ ಮನೋಭಾವದಿಂದ ಅರ್ಪಿಸುವ ಗುಂಡಬ್ರಹ್ಮಯ್ಯರು ಅದ್ವಿತಿಯರೆ ಸರಿ. ಗುಂಡಬ್ರಹ್ಮಯ್ಯಗಳ ಸಾಹಿತ್ಯವನ್ನು ವಸ್ತುವಿನ ದೃಷ್ಟಿಯಿಂದ ಗಮನಿಸಿದರೆ:

“ಕಾಳಗದ ಕಥೆಯಲ್ಲ ಊಳಿಗದ ಮಾತಲ್ಲ
ಕೋಳು ಹೋದವರ ಕೊಲೆಯಲ್ಲ|| ಶಿವಕಥೆಯ
ಕೇಳಿದರೆ ಪುಣ್ಯ ಫಲವುಂಟು

ಹರನು ನಾರಂದನು ಧರೆಗೆ ಕಳವಿಗೆ ಬಂದು
ಪುರ ವ್ಪೋರುಗಲ್ಲ ಗಣಪತಿ|| ರಾಯನ
ಸಿರಿಯ ಕದ್ದೊಯ್ದ ಕಥೆಗೇಳಿ”[೪೮]

ಈ ಕಾವ್ಯದ ಆರಂಭದಲ್ಲಿ ಕವಿಚನ್ನನು ತನ್ನ ಕೃತಿಯ ವಸ್ತುವಿನ ಬಗ್ಗೆ ಮತ್ತು ಈ ಕೃತಿ ಓದಿದವರಿಗೆ ಉಂಟಾಗುವ ಫಲದ ಕುರಿತು ಪ್ರಸ್ತಾಪಿಸಿದ್ದಾನೆ. ಈ ಕೃತಿಯು ಯಾವುದೇ ಯುದ್ಧದ ವರ್ಣನೆಯನ್ನು ಮಾಡುವುದಿಲ್ಲ. ಯಾರ ಮನೆಯಲ್ಲೋ ಜೀತಕ್ಕಿದ್ದು ತಮ್ಮ ಬದುಕನ್ನು ಸವೆಸಿದವರ ಬದುಕೂ ಅಲ್ಲ. ಕೊಲೆಗೀಲೆಯ ಕಥೆಯೂ ಅಲ್ಲ. ಬದಲಾಗಿ ತಮ್ಮ ಬದುಕನ್ನು ಅನ್ಯರಿಗೆ ಮೀಸಲಿಡುವಂತೆ ಮಾಡಿದ ಶಿವನ

ಪರೀಕ್ಷೆಗೊಳಗಾಗಿ ಶಿವನೆ ಅವರಿಗೆ ಒಲಿದ ಕಥೆಯಾಗಿದೆ ಎಂದು ಕವಿಯೇ ಕಥಾವಸ್ತುವಿನ ಕುರಿತು ಹೇಳುವನು. ಜೊತೆಗೆ ತನ್ನ ಕಾವ್ಯವನ್ನು ಓದಿದಂತವರಿಗೆ ಅಥವಾ ಕೇಳಿದಂತವರಿಗೆ ಪುಣ್ಯದ ಫಲವು ಲಭಿಸುತ್ತದೆಂದು ಹೇಳಿದ್ದಾನೆ. ಹರ-ನಾರದರು ಭೂಲೋಕಕ್ಕೆ ಕಳುವಿಗೆ ಬಂದ ಕಥೆಯನ್ನು ಕೇಳಿ ಎಂದು ಭಿನ್ನವಿಸಿಕೊಳ್ಳುತ್ತಾನೆ.

"ಸಿರಿಯುಳ್ಳ ಶಿವರಾಯ ಧರೆಗೆ ಕಳವಿಗೆ ಬಂದು
ಶರಣರೊಂದಾಗಿ ಮೆರೆದಾರು|| ಶ್ರೀಗಿರಿಯ
ವರೆದರೀ ಪುಣ್ಯಕಥೆಯನೂ"[೪೯]

ಶಿವನೇ ಭೂಮಿಗೆ ಭಕ್ತರನ್ನು ಪರೀಕ್ಷಿಸಲು ಕಳ್ಳನ ವೇಷದಲ್ಲಿ ಬಂದು, ಕಳ್ಳತನ ಮಾಡಿ ಶರಣರ ಮನೆಹೊಕ್ಕು ಶೈವನಿಷ್ಠೆ ಪರೀಕ್ಷೆ ಮಾಡುವನು. ಗುಂಡಬ್ರಹ್ಮಯ್ಯರು ಛಲಬಿಡದೆ ಮೊರೆಹೊಕ್ಕವರನ್ನು ಕಾಯ್ದು ಶಿಕ್ಷೆಗೆ ಗುರಿಪಡಬೇಕಾಗಿ ಬಂದಾಗ ತಮ್ಮ ಜೀವದ ಹಂಗು ತೊರೆದು ಸರ್ವಸಮರ್ಪಣ ಭಾವದಿಂದ ಪ್ರಾಣತ್ಯಾಗಕ್ಕೆ ಸಿದ್ಧರಾದ ವೀರಧೀರ ವ್ರತಾಚಾರಿಗಳ ಕಥೆಯಾಗಿದೆ. ಇಬ್ಬರು ಶರಣರೂ ಸಮಾನ ಮನಸ್ಕರಾಗಿ ಅಲೌಕಿಕ ಜಗತ್ತನ್ನು ಗೆದ್ದವರ ಕಥೆಯಾಗಿದೆಯೆಂದು ತಿಳಿದುಬರುತ್ತದೆ.

ಕಾವ್ಯದ ಆರಂಭದಲ್ಲಿ ಪ್ರತಿಯೊಬ್ಬ ಕವಿಗಳು ತನ್ನ ಕೃತಿಯ ವಸ್ತುವಿಷಯ, ನಿರೂಪಣಾ ಶೈಲಿಯ ಬಗ್ಗೆ ಮತ್ತು ತನ್ನ ಕಾವ್ಯವನ್ನು ಕೇಳಿದರೆ ಅಥವಾ ಓದಿದರೆ ದೊರಕುವ ಪುಣ್ಯದ ಫಲವನ್ನು ಹೇಳುತ್ತಾರೆ. ಉದಾಹರಣೆಗೆ ಕುಮಾರವ್ಯಾಸನು ತನ್ನ ಕೃತಿಯಾದ 'ಕರ್ಣಾಟ ಭಾರತ ಕಥಾಮಂಜರಿ'ಯಲ್ಲಿ 'ವೇದ ಪಾರಾಯಣದ ಫಲ, ಗಂಗಾದಿ ತೀರ್ಥಸ್ನಾನ ಫಲ, ತಪಸ್ಸಿನ ಫಲ, ಜ್ಯೋತಿಷ್ಟೋಮಯಾಗದ ಫಲ, ಕನ್ಯಾದಾನ ಫಲಗಳು ಉಂಟಾಗುತ್ತವೆ ಎಂದು ಹೇಳಿದ್ದಾನೆ. ಅದೇ ರೀತಿಯಾಗಿ ಈ ಕೃತಿಯಲ್ಲಿಯೂ ಕವಿ ಪುಣ್ಯದ ಫಲವುಂಟಾಗುತ್ತದೆ ಎಂದು ಹೇಳಿದ್ದಾನೆ. ಈ ಶಿವಕಥೆಯನ್ನು ಕೇಳಿದವರಿಗೆ ಮುಕ್ತಿ ದೊರೆಯುವುದು. ಯಾರಾದರೂ ಜರಿದರೆ ಅವರಿಗೆ ವಿಧಿ ಸುಮ್ಮನೆ ಬಿಡುವುದಿಲ್ಲ ಎಂಬ ಮಾತನ್ನು ಕವಿಚನ್ನನ ಈ ಕೆಳಗಿನ ಪದ್ಯದಿಂದ ತಿಳಿಯಬಹುದಾಗಿದೆ.

"ಈ ಶಿವಕಥೆಯ ಕೇಳಿದವರಿಗೆ ಮುಕ್ತಿ
ಇದನಾವನೊಬ್ಬ ಜರಿದಾರೆ|| ಅವರಿಗೆ
ವಿಧಿ ಬಂದು ಬೆನ್ನ ನುಲಿವವು"[೫೦]

ಹೀಗೆ ಕವಿಯು ತನ್ನ ಶಿವಕಥೆಯ ವಸ್ತುವನ್ನು ಪರಿಚಯ ಮಾಡಿಕೊಡುವುದರ ಜೊತೆಗೆ ಪುಣ್ಯದ ಫಲಗಳನ್ನು ಹೇಳುವನು.

ಗುಂಡಬ್ರಹ್ಮಯ್ಯಗಳ ಸಾಹಿತ್ಯವು ಪವಾಡ ಕಥೆಯಾಗಿದೆ. ಇಲ್ಲಿ ಶಿವಶರಣರನ್ನು ದೈವೀ ನೆಲೆಯಲ್ಲಿ ಕಾಣಲಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸುಮಾರು ಹದಿನಾರು, ಹದಿನೇಳನೆ ಶತಮಾನದಲ್ಲಿ ಶಿವಶರಣರನ್ನು ತಮ್ಮ ಕೃತಿಯಲ್ಲಿ ಪುರಾಣೀಕರಿಸುವ ಕೆಲಸ ನಡೆಯಿತು. ಚರಿತ್ರೆಯನ್ನು ಮರೆಮಾಚಿ

ಪವಾಡವನ್ನು ಮಾಡಿಕೊಂಡರು. ಅಂಥವರಲ್ಲಿ ಹರಿಹರನು ಪ್ರಥಮನಾಗಿದ್ದಾನೆ. ಹಿಂದೆ ಚರ್ಚಿಸಿದಂತೆ ಇವನ ನಂತರ ಬಂದ ವೀರಶೈವ ಕವಿಗಳೆಲ್ಲ ಈತನ ಮಾದರಿಯಲ್ಲೇ ಬರೆದರು. ಅವರಲ್ಲಿ ಕವಿಚನ್ನನು ಒಬ್ಬನಾಗಿದ್ದಾನೆ. ಗುಂಡಬ್ರಹ್ಮಯ್ಯಗಳ ಸಾಹಿತ್ಯವನ್ನು ಅವಲೋಕಿಸಿದರೆ ಹರಿಹರನ ರಗಳೆಗಳ ಕಥನತಂತ್ರದ ಮಾದರಿಯೊಂದು ನಮಗೆ ಲಭ್ಯವಾಗುತ್ತದೆ. ಕೈಲಾಸದಲ್ಲಿ ಶಿವನ ಸಭೆ ನಡೆಯುವುದು, ಶಿವನೇ ಪರೀಕ್ಷೆಗೆ ಗುರಿಪಡಿಸುವುದು, ನಂತರ ದೈವದಿಂದಲೇ ಅವರ ಸಂರಕ್ಷಣೆಯ ವಿಭಿನ್ನವಾದ ಆಯಾಮಗಳು ಪ್ರಕಟವಾಗುತ್ತವೆ. ಪ್ರತಿನಿತ್ಯ ಶರಣನೊಬ್ಬ ಅಥವಾ ಭಕ್ತನೊಬ್ಬ ದೈವದೆಡೆಗೆ ತುಡಿಯುವ ಮನಸ್ಥಿತಿಯವನಾದರೆ, ದೈವ ಭಕ್ತನಿಗೋಸ್ಕರ ಪರೀಕ್ಷೆಗೊಳಪಡಿಸಿ ಅವನ ಅಂತರಂಗದ ಜೊತೆಗೆ ಬಹಿರಂಗ ಪರಿಶುದ್ಧಿಯಾಗುವಂತೆ ಮಾಡಿ ನಂತರ ಮಿಡಿಸುವ ದೈವ ಗುಣ ನಮಗೆ ಗೋಚರವಾಗುತ್ತದೆ. ಕೈಲಾಸದಲ್ಲಿ ತಪ್ಪು ಮಾಡಿ ಭೂಮಿಗೆ ಬಂದು ಶಿಕ್ಷೆ ಅನುಭವಿಸಿ ಭೂಲೋಕದಲ್ಲಿ ಪರಿಶುದ್ಧರಾಗಿ ಮತ್ತೆ ಕೈಲಾಸಕ್ಕೆ ಹೋಗುವುದು ಒಂದು ಮಾದರಿಯಾದಾದರೆ, ಕೈಲಾಸದಲ್ಲಿ ಯಾವುದೇ ಅಪರಾಧ ಎಸಗದೆ ಶಿವನ ನಾಮಸ್ಮರಣೆಯಿಂದ ವ್ರತಗಳನ್ನು ಗೆದ್ದು ಭೂಲೋಕದಿಂದ ಕೈಲಾಸಕ್ಕೆ ಹೋಗುವ ಮಾದರಿಯೊಂದಾಗಿದೆ. ಗುಂಡಬ್ರಹ್ಮಯ್ಯಗಳ ಸಾಹಿತ್ಯವು ಎರಡನೆ ಮಾದರಿಯದ್ದಾಗಿದೆ.

ಸಾಮಾನ್ಯವಾಗಿ ಶಿವನು ಶರಣರನ್ನು ಪರಿಶುದ್ಧಗೊಳಿಸಲು ಭೂಲೋಕಕ್ಕೆ ಕಳುಹಿಸುವನು. ತಾನು ಮಾತ್ರ ಕೈಲಾಸದಲ್ಲಿದ್ದುಕೊಂಡು ಇವರ ಬಗ್ಗೆ ಹದ್ದಿನ ಕಣ್ಣು ಇಟ್ಟಿರುವನು. ಆದರೆ ಗುಂಡಬ್ರಹ್ಮಯ್ಯಗಳ ಪರೀಕ್ಷೆಗಾಗಿ ತಾನೇ ಭೂಲೋಕಕ್ಕೆ ಬರುವುದು ವಿಶೇಷವಾಗಿದೆ. ದೈವವೇ ಇಲ್ಲಿ ಭೂಮಿಗಿಳಿದು ಸಮಾಜದ ವ್ಯವಹಾರಗಳನ್ನು ಕುತೂಹಲದ ನೋಟ ಬೀರಿದೆ. ಎಲ್ಲ ಕೃತಿಯಲ್ಲಿಯೂ ಮುಮ್ಮುಖ ಚಲನೆಯಿದ್ದರೆ, ಈ ಕೃತಿಯಲ್ಲಿ ಹಿಮ್ಮುಖ ಚಲನೆಯಿದೆ ಅನಿಸುತ್ತದೆ. ಶಿವಶರಣನೊಬ್ಬ ತಪ್ಪು ಮಾಡಿ ಭೂಮಿಗೆ ಬರುವುದು ಅಥವಾ ಶಿವನೇ ಭೂಮಿಗೆ ಬರುವುದು ಹಸನಾದ ಬದುಕಿಗೆ ಭೂಮಿ ನಾಂದಿಯಾಗುವುದು. ಸ್ಥಳೀಯ ಸಾಂಸ್ಕೃತಿಕ ಚರಿತ್ರೆಯನ್ನು ತನ್ನ ಒಡಲಲ್ಲಿಟ್ಟುಕೊಂಡು ನಿರೂಪಿಸುವ ಮತ್ತು ದಾಖಲಿಸುವ ಪ್ರಧಾನ ನೆಲೆಯು ಅಭಿವ್ಯಕ್ತಿಗೊಳ್ಳುತ್ತಲೇ ಕಥೆಯ ಬೆಳವಣಿಗೆಯನ್ನು ಗುರುತಿಸಬಹುದಾಗಿದೆ. ಲೌಕಿಕ ಬದುಕನ್ನು ಹಸನು ಮಾಡಿಕೊಂಡರೆ ಪಾರಮಾರ್ಥಿಕ ನೆಲೆಯು ತನ್ನಷ್ಟಕ್ಕೆ ತಾನೇ ಹಸನಾಗುತ್ತದೆಂಬ ಮಹತ್ವದ ಸಂದೇಶವನ್ನು ಓದುಗರಿಗೆ ತಲುಪಿಸುವ ಕೃತಿಯೂ ಹೌದು.

ಪಾರ್ವತಿಯು ಗುಂಡಬ್ರಹ್ಮಯ್ಯಗಳನ್ನು ಪರೀಕ್ಷಿಸುವಂತೆ ತನ್ನ ಪತಿಯಾದ ಶಿವನಿಗೆ ಹೇಳುವಳು. ಇವಳು ಗುಂಡಬ್ರಹ್ಮಯ್ಯರ ಅಚಲ ಭಕ್ತಿಯನ್ನು ತಿಳಿದವಳಾಗಿದ್ದಾಳೆ. ಆದ್ದರಿಂದ ಇವರ ವ್ರತವನ್ನು ಶಿವನಿಗೆ ತಿಳಿಸುವಳು. ಆಗ ಶಿವನು ಶರಣರನ್ನು ಪರೀಕ್ಷಿಸುವ ರೀತಿಯು ನಿಬ್ಬೆರಗಾಗಿಸುವಂತಹದು.

"ಹಾಳು ಮಾಡುವೆನವರ ಗಾಳಿಗಿಟ್ಟು ತೂರುವೆನು
ಧೂಳಿಪಟವ ಮಾಡಿ ಕೆಡಿಸೂವೆ|| ಶರಣರ
ಶೂಲದ ಬಳಿಗೆ ನಡೆಸೂವೆ

ಹಲವುದರಿಂದ ಒಲಿಸುವೆ ಶರಣರ

ಛಲದಿಂದ ಬಿರುದ ಗೆಲಿದಾರೆ|| ಕಡೆಯಲ್ಲಿ

ಸಲಿಗೆಯನೀವೆ ಎನ್ನಪುರದೊಳು"[39]

ಶಿವನ ಪರೀಕ್ಷೆಯು ಶಿವಶರಣರಾದವರನ್ನು ಅತ್ಯಂತ ಭಯಾನಕ ಪರೀಕ್ಷೆಗೊಳಪಡಿಸುವುದರ ಮುಖ್ಯ ಉದ್ದೇಶ ಅವರಲ್ಲಿರುವ ಪಂಚೇಂದ್ರಿಗಳನ್ನು ಗೆಲ್ಲುವುದು, ಅರಿಷಡ್ವರ್ಗಗಳನ್ನು ದಾಟುವುದು, ಪಂಚಾಕ್ಷರಿ ಷಡಕ್ಷರಿ ಮಂತ್ರಗಳ ಮೂಲಕ ಅವರಲ್ಲಿ ದೈವದ ಬಗ್ಗೆ ವಿಸ್ಮೃತಿ ಉಂಟಾಗದಂತೆ ನೋಡಿಕೊಳ್ಳುವುದು. ಅವರನ್ನು ಅಕ್ಕಸಾಲಿಗನು ಚಿನ್ನವನ್ನು ಒರೆಹಚ್ಚಿ ನೋಡುವಂತೆ ಉಜ್ಜಿ, ತೀಡಿ ಆ ಮೂಲಕ ಎಲ್ಲಾ ಲೋಹಗಳು ಪುರುಷಮಣಿಯನ್ನು ಮುಟ್ಟಿದೊಡನೆ ಚಿನ್ನವೇ ಆಗುವಂತೆ ಶಿವನ ಕೃಪಾಶೀರ್ವಾದ ಉಂಟಾದೊಡನೆ ದೈವವೇ ಆಗುವರು. ಅವರ ಬದುಕನ್ನು ಮೊದಲು ಅಧೋಗತಿಗಿಳಿಸಿ ಅದನ್ನು ಊರ್ಧ್ವಮುಖಿಗೊಳಿಸಲು ಅನೇಕ ಕಷ್ಟಗಳನ್ನು ತಂದೊಡ್ಡುವುದು. ಸೂತ್ರ ತಪ್ಪಿದ ಗಾಳಿಪಟದಂತಾದ ಬದುಕಿನಲ್ಲಿ ಜೀವಂತಿಕೆಯ ಸೆಲೆಯಾದ ಭಕ್ತಿಯನ್ನು ತುಂಬಿ ಕಲ್ಮಷರಹಿತವಾದ ನಿಷ್ಕಲಂಕ ಲಿಂಗವನ್ನು ಅಂಗದಲ್ಲಿ ಸ್ಥಾಪಿಸುವುದು. ಇದೆಲ್ಲವೂ ಅನೇಕ ರೀತಿಯ ಪರೀಕ್ಷೆಗೊಳಪಡಿಸಿದ ನಂತರವೇ ಸಾಧ್ಯವಾಗುವಂತಹುದು. ಇಲ್ಲಿ ಗುಂಡಬ್ರಹ್ಮಯ್ಯರು 'ಮೊರೆ ಹೊಕ್ಕವರ ಕಾಯ್ವ' ವ್ರತವು ಅವರ ಬದುಕಿಗೆ ಪೂರಕವಾಗುವುದರ ಬದಲು ಮಾರಕವಾಗುವಂತೆ ಮಾಡಿ ಶೂಲದ ಬಳಿಗೆ ಬಂದು ಪ್ರಾಣವನ್ನು ತ್ಯಾಗ ಮಾಡಲು ಸಿದ್ಧರಾಗಬೇಕಾಗುತ್ತದೆ. ಇದು ಕೂಡ ಶರಣರನ್ನು ಪರೀಕ್ಷಿಸುವ ದೈವದ ನೆಲೆಯಾಗಿದೆ.

ಮರ್ತ್ಯವೆಂಬುದು ಕರ್ತಾರನ ಕಮ್ಮಟವಾದರೂ ಮರ್ತ್ಯದ ವಿದ್ಯಮಾನಗಳನ್ನು ನೋಡಲು ಮೊದಲು ನಾರದನು ಭೂಲೋಕಕ್ಕೆ ಬರುವನು. ಸಾಮಾನ್ಯರಲ್ಲಿ ಸಾಮಾನ್ಯನಾಗಿ ನಾರದನು ಓರುಗಲ್ಲು ಪ್ರದೇಶಕ್ಕೆ ಬರುವನು. ಗಣಪತಿರಾಯನ ಅರಮನೆಯನ್ನು ಮತ್ತು ಗುಂಡಬ್ರಹ್ಮಯ್ಯಗಳನ್ನು ಸೂಕ್ಷ್ಮವಾಗಿ ಅವಲೋಕನ ಮಾಡಲು ನಾರದನು ಭೂಲೋಕಕ್ಕೆ ಬರುವುದಾಗಿ ದೇವಸಭೆಯಲ್ಲಿ ಒಪ್ಪಿಕೊಳ್ಳುವನು. ಇದರಂತೆ ಭೂಲೋಕಕ್ಕೆ ಬರಲು ಜಂಗಮ ರೂಪವನ್ನು ತಾಳುವನು. ಕಾವಿಯ ದೋತ್ರ, ಕೊರಳಲ್ಲಿ ರುದ್ರಾಕ್ಷಿ, ಕಾಲುಚೈನ, ಚಪ್ಪಲು, ಕೈಯಲ್ಲಿ ಲಿಂಗ, ಮುಖಭಸ್ಮ, ಜಡೆ, ಸುಲಿಪಲ್ಲು, ಕೊನೆಮೀಸೆ, ಗಂಧ-ವಿಭೂತಿಯನ್ನು ಬಳಿದುಕೊಂಡು ಓರುಗಲ್ಲಿಗೆ ಬರುವನು. ದಾರಿಯಲ್ಲಿ ಸುಂದರವಾದ ಪ್ರಕೃತಿಯ ವೈಭವವನ್ನು ಕಂಡು ಆಶ್ಚರ್ಯಗೊಳ್ಳುವನು. ಬೆಳಗಾದೊಡನೆ ಗಣಪತಿರಾಯನ ಅರಮನೆಗೆ ಬಂದು ಅಲ್ಲಿ ಎಲ್ಲರ ಪ್ರೀತಿ-ವಿಶ್ವಾಸಗಳಿಸುತ್ತಾನೆ. ಅರಮನೆಯ ಒಳಹೊಕ್ಕ ಕೋಟೆಗೆ ಕನ್ನಕ್ಕೆಂದು ಕುರುವಿಡುವನು. ಅಂತಪುರದಲ್ಲೆಲ್ಲ ಪ್ರವೇಶಿಸಿ ಕಳ್ಳತನದ ಸರಿಯಾದ ಮಾರ್ಗ ಯಾವುದೆಂದು ಗಮನಿಸಿ ಅಲ್ಲೊಂದು ಗುರುತಿಡುವನು. ಯಾವುದೇ ರೀತಿಯ ಅನುಮಾನಗಳು ಸುಳಿಯದಂತೆ ಗಣಪತಿರಾಜನಿಂದ ಕಳಚಿಕೊಳ್ಳುತ್ತಾನೆ. ಓರಂಗಲ್ಲು ಪ್ರವೇಶಿಸುವ ಮೊದಲು ನಾರದನು ಗುಂಡಬ್ರಹ್ಮಯ್ಯರ ಮನೆಯನ್ನು ಕಾಣಲು ಹೋಗುವನು. ಈ ಕೆಳಗಿನಂತೆ ಗುಂಡಬ್ರಹ್ಮಯ್ಯಗಳ ಮನೆಗೆ ಹೋಗುವನು.

"ಚಿಕ್ಕ ಬೆತ್ತದ ಕೋಲು ಇಕ್ಕಿದ ಆಧಾರ
ಸುಕ್ಕು ಕೆಂಚೆಡೆಯ ಸುಲಿಪಲ್ಲು|| ಮುಖಭಸ್ಮ
ಹೊಕ್ಕ ಗುಂಡಬ್ರಹ್ಮಯ್ಯನರಮನೆಯ

ಬಿರುದೇಕೆ ನಿಮಗೆಂದು ವರಮುನಿ ಕೇಳಿದರೆ
ಮರಳಿ ಗುಂಡಬ್ರಹ್ಮಯ್ಯನ ನುಡಿದಾರು|| ಆರಾದರು
ಮೊರೆ ಹೋಗಲು ನಾವು ಕೊಡೆವೆಂದು

ಪರಧನ ಪರ ನಾರಿಯರ ಕದ್ದು ಬಂದೆಮ್ಮ
ಮೊರೆ ಹೋಗಲು ನಾವು ಕೊಡೆವೆಂದು|| ಗುಂಡಬ್ರಹ್ಮಯ್ಯಗಳು
ಬಿರುದಿನ ಮಾತ ನುಡಿದಾರು"[೨]

ನಾರದನ ವೇಷಭೂಷಣವನ್ನು ಮತ್ತು ಗುಂಡಬ್ರಹ್ಮಯ್ಯರ ಮನೆಗೆ ಬಂದ ಸಂದರ್ಭವನ್ನು ಇಲ್ಲಿ ಕಾಣಬಹುದಾಗಿದೆ. ಚಿಕ್ಕದಾದ ಬೆತ್ತದ ಕೋಲು ಹಿಡಿದುಕೊಂಡು ಸುಕ್ಕುಗಟ್ಟಿದ ಜಡೆ, ಸ್ವಚ್ಛವಾಗಿ ಫಳ ಫಳ ಹೊಳೆಯುವ ಹಲ್ಲು, ಮುಖಕ್ಕೆ ಮುಖಭಸ್ಮವನ್ನು ಬಳಿದುಕೊಂಡು ಗುಂಡಬ್ರಹ್ಮಯ್ಯರ ಅರಮನೆಗೆ ಬರುವನು. ಮನೆಯ ಮುಂದೆ ಬಂದು ನಿಂತಿರುವ ಜಂಗಮ ರೂಪದ ನಾರದನನ್ನು ಕಂಡು ಗುಂಡಬ್ರಹ್ಮಯ್ಯರು ವಂದಿಸುವರು. ನಂತರ ನಾರದನು ಇಂತಹ ವ್ರತವನ್ನು ಪಾಲಿಸುವುದುರ ಔಚಿತ್ಯವೇನೆಂದು ಕೇಳುವನು. ಗಣಪತಿರಾಯ ನಿಮ್ಮ ಬಿರುದನ್ನು ಕಂಡು ಮೊರೆಹೊಕ್ಕವರಿಗೆ ಶಿಕ್ಷೆ ವಿಧಿಸಲು ಬರುವುದಿಲ್ಲವೆ? ಎಂಬ ನಾರದನ ಪ್ರಶ್ನೆಗೆ ರಾಜನು ಬಂದರೂ ತಲೆಗೆ ತಲೆಕೊಟ್ಟು ಗೆಲ್ಲುವೆವು ಅದು ನಮ್ಮ ಬದುಕಿನ ವೀರವ್ರತವೆಂದು ಗುಂಡಬ್ರಹ್ಮಯ್ಯರು ಉತ್ತರಿಸುವರು. ಅಂದು ಇದ್ದ ಯುಗಧರ್ಮ ಮೌಲ್ಯವಾಗಿದ್ದ ಈ ವ್ರತಾಚರಣೆ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುವುದಾಗಿತ್ತೋ ಅಥವಾ ವಿಪರ್ಯಾಸವೆನಿಸುವಂತಹುದೋ ಎಂಬುದನ್ನು ನಾವು ತಿಳಿಯಬೇಕಾಗಿದೆ. ಇದು ಇವರ ಬದುಕಿನ ಅವಿಭಾಜ್ಯ ಅಂಗವಾಗಿದ್ದಂತೆಯೇ ಜೀವನ ಮೌಲ್ಯವಾಗಿತ್ತು. ಪ್ರಭುತ್ವ ಮತ್ತು ಶರಣತ್ವದ ನಡುವಿನ ಸಂಘರ್ಷವು ಪ್ರಾರಂಭದಲ್ಲಿ ಮುಖಾಮುಖಿಗೊಂಡರೂ ಕೊನೆಗೆ ಇವೆರಡೂ ಸಮ್ಮಿಲನಗೊಂಡಿವೆ. ಆದರೆ ಬಸವಯುಗದ ಆದರ್ಶ ಸಮಾಜದ ಮೌಲ್ಯಗಳಾದ ಪರನಾರಿ, ಪರಧನ, ಪರಧರ್ಮ ಮುಂತಾದವುಗಳ ಬಗ್ಗೆ ತಿರಸ್ಕೃತ ಭಾವನೆಯಿದ್ದುದು ಬಸವೋತ್ತರ ಯುಗದಲ್ಲಿ ಈ ಸಂಗತಿಗಳು ವ್ಯತಿರಿಕ್ತ ಭಾವನೆಗಳಾಗಿ ರೂಪಾಂತರ ಹೊಂದಿದ ರೀತಿಯನ್ನು ಕಾಣಬಹುದು.

ನಾರದನು ಗುಂಡಬ್ರಹ್ಮಯ್ಯಪುರ ಪ್ರವೇಶಿಸುತ್ತಿದ್ದಂತೆ ಶಿವಮಯವಾಗಿದ್ದ ಆ ಊರನ್ನು ಕಂಡು ಆಶ್ಚರ್ಯಪಡುವನು. ಅಲ್ಲಿ ನೆರೆದ ಶರಣರೆಲ್ಲರೂ ನಾರದನ ಊರುಕೇರಿ ವಿಚಾರಿಸತೊಡಗಿದರು. ನಾರದನೂ ಸಾಮಾನ್ಯರ ಹಾಗೆ ತನ್ನ ಅಸ್ಮಿತೆಯನ್ನು ಆ ಊರಿನ ಜನರೆದುರಿಗೆ ತೋಡಿಕೊಳ್ಳಬೇಕಾಗುತ್ತದೆ. ಇಹ ಪರದ ಸುವರ್ಣ ಸೇತುವೆಯಾದ ನಾರದನು ಕಲಹಪ್ರಿಯನಾದರೂ ಇಲ್ಲಿ ಮಾತ್ರ ಸೌಮ್ಯ ಮೂರ್ತಿಯಂತೆ ನಿಂತು ಗುಂಡಬ್ರಹ್ಮಯ್ಯರನ್ನು ಪರೀಕ್ಷಿಸಲು ಬೇಕಾದ ಪೂರ್ವಸಿದ್ಧತೆಗಾಗಿ ಬಂದು ನಿಂತಿದ್ದಾನೆ. ಆದರೂ ನಾರದ ಮನಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ,

“ಒಳ್ಳೆ ಒಳ್ಳೆಯದೆಂದು ಭಲೈಸಿಕೊಂಡಾಡಿ
ಕೊಲ್ಲುವ ಕೋಪ ಎದೆಯಲ್ಲಿ ನಾರಂದ
ಅಲ್ಲಿಂದ ಮುಂದಕೆ ನಡೆದಾನು”[೫೩]

ಮೇಲ್ನೋಟಕ್ಕ ಗುಂಡಬ್ರಹ್ಮಯ್ಯನ ಪುರದಲ್ಲಿ ಶರಣರನ್ನು ಓಲೈಸುವಂತೆ, ಕೀರ್ತಿಸುವಂತೆ ಕಂಡುಬಂದರೂ ಕೂಡ ‘ಕೊಲ್ಲುವ ಕೋಪ ಎದೆಯಲ್ಲಿ’ ಎಂಬ ಮಾತು ಮುಂದೆ ಗುಂಡಬ್ರಹ್ಮಯ್ಯರು ಎದುರಿಸಬಹುದಾದ ಕಷ್ಟಗಳನ್ನು ಸಾಂಕೇತಿಸುತ್ತದೆ. ಪರಿಪೂರ್ಣ ಶರಣರಾಗಲು ಇಂತಹ ಸಂಕಟಗಳನ್ನು ತಂದೊಡ್ಡುವ ಮೂಲಕ ಇವರನ್ನು ಪರಿಶುದ್ಧಗೊಳಿಸಲು ಸಹಕಾರಿಯಾದ ನೆಲೆಯನ್ನು ರೂಪಿಸುವಂತಹದು ಗುಂಡಬ್ರಹ್ಮಯ್ಯಗಳ ಸಾಹಿತ್ಯ. ಈ ಹಿನ್ನಲೆಯಲ್ಲಿ ಈ ಕೃತಿಯ ವಸ್ತು, ತಂತ್ರ ಮತ್ತು ಶೈಲಿಯು ವಿಶೇಷವಾಗಿರುವುದನ್ನು ಕಾಣಬಹುದು. ಮೇಲ್ನೋಟಕ್ಕೆ ಈ ಕಾವ್ಯದಲ್ಲಿ ಕಾಯುವ ಹರನೇ ಕಳ್ಳನಾದರೆ, ಸಾಮಾನ್ಯರ ಬದುಕು ಹೇಗೆ ಎಂಬ ಭಾವ ಉಂಟಾಗುತ್ತದೆ. ಆದರೆ ಇಲ್ಲಿನ ಗುಂಡಬ್ರಹ್ಮಯ್ಯರ ದೈವಭಕ್ತಿ, ವ್ರತನಿಷ್ಠೆ ಮತ್ತು ಜೀವನದ ತತ್ವ-ಸಿದ್ಧಾಂತಗಳನ್ನು ಕಂಡಾಗ ಈ ಅಂಶವು ಗೌಣಗೊಳ್ಳುತ್ತದೆ. ಆದ್ದರಿಂದ ಪರಶಿವನು ಕಳ್ಳನಾಗಿರುವುದರಿಂದ ಈ ಸಾಹಿತ್ಯಕ್ಕೆ ಕುಂದುಂಟಾಗಿಲ್ಲ. ಬದಲಾಗಿ ವಿಭಿನ್ನತೆಯಿಂದ ಕಟ್ಟಿಕೊಟ್ಟಿರುವ ಕವಿಯ ಜಾಣ್ಮೆಯನ್ನು ಗಮನಿಸಬಹುದು. ಪರಮಾತ್ಮನು ತನ್ನ ಭಕ್ತರಿದ್ದ ಸ್ಥಳಕ್ಕೆ ಬರುವ ರೀತಿ, ಅವರನ್ನು ಅರೆದೊರೆದು ಅರಿಯುವ ಪರಿ ಅರ್ಥಪೂರ್ಣವಾಗಿ ಕಾವ್ಯದಲ್ಲಿ ನಿರೂಪಣೆಗೊಂಡಿದೆ. ಯಾರೇ ಆಗಲಿ ಶರಣಾರ್ಥಿಗಳಿಗೆ ರಕ್ಷಣೆ ನೀಡುವುದು ಮಾನವೀಯ ಸಂಬಂಧವಾಗಿದೆ. ಕೇವಲ ಶರಣಧರ್ಮದ ಕಾರ್ಯವಷ್ಟೆ ಅಲ್ಲ. ಅದು ಮನುಕುಲದ ಧರ್ಮವೂ ಆಗಿದೆಯೆಂದು ನಾವು ತಿಳಿಯಬೇಕು. ಇಂತಹ ಮನುಕುಲದ ಧರ್ಮವನ್ನು ಮೆರೆದ ಗುಂಡಬ್ರಹ್ಮಯ್ಯಗಳ ಚರಿತ್ರೆ ಪ್ರಸ್ತುತ ಮಹತ್ವದ್ದಾಗಿದೆ. ಮನುಷ್ಯ-ಮನುಷ್ಯರನ್ನೇ ಕಿತ್ತು ತಿನ್ನುವ ಈ ಸಂದರ್ಭದಲ್ಲಿ ಪರರಿಗೆ ನೆರವಾಗುವಂತಹ ಆದರ್ಶವನ್ನು ಬಿತ್ತುವ ಗುಂಡಬ್ರಹ್ಮಯ್ಯಗಳ ಸಾಹಿತ್ಯ ಅಧ್ಯಯನ ಯೋಗ್ಯವಾದ ಉತ್ತಮ ಕಾವ್ಯವಾಗಿದೆ.

ಗಣಪತಿರಾಯನ ಅಂತಪುರವು ಶಿವನ ಒಡ್ಡೋಲಗವನ್ನು ಮೀರಿಸಿದೆ ಎಂಬ ಭಾವದಿಂದ ನಾರದನು ವಿಸ್ಮಯಗೊಳ್ಳುವನು. ಈ ಕೋಟೆಯನ್ನು ನೋಡಿದಾಗ ಅರಮನೆಯ ಒಳಗೆ ಪ್ರವೇಶಿಸಲು ಸಾಧ್ಯವೇ ಎಂಬ ಅನುಮಾನ ಬಂದಿತು. ಈ ಕಾವ್ಯದಲ್ಲಿ ಓರುಗಲ್ಲಿನ ಕೋಟೆಯ ವರ್ಣನೆಯನ್ನು ಕೆಳಗಿನಂತೆ ವರ್ಣಿಸಲಾಗಿದೆ.

“ಅಂಕ ವಜ್ರದ ಕೋಟೆ ಡೆಂಕಣೆ ಹುಲಿಮುಖ
ಅಂಕುಶದ ಮೊಳೆಯು ಕದವೀಗೆ|| ಬಲುದೀವೆ
ಶಂಕರನ ಅಲಗು ತೆಗೆದಂತೆ

ಕೆತ್ತುಗಲ್ಲಿನ ಕೋಟೆ ಎತ್ತಬಾರದ ಗುಂಡು
ಕಿತ್ತು ಹಾಕುವರಳವಲ್ಲ|| ಬಹುತೆನೆ

ಹತ್ತುವವರಿಗೆರಡು ತಲೆಬೇಕು

ಕಾದ ಕಂಚಿನ ಕೋಟೆ ಶೋಧಿಸಿದ ಸುರಿಗುಂಡು

ಕಾದುವರಿಲ್ಲ ನರರೋಳು|| ಕೋಟೆಯ ತೆನೆ

ಹೋದವು ಮುಗಿಲ ತೆರನಾಗಿ"[೫೪]

ಯುದ್ಧ ಮಾಡಲು ಬಂದವರು ಪ್ರವೇಶಿಸದಂತಿರುವ ವಜ್ರದ ಕೋಟೆ, ಹುಲಿಮುಖವಿರುವ ಅಗಸೆಯ ಬಾಗಿಲು, ಶಿವನ ಕೈಯಲ್ಲಿರುವ ಕತ್ತಿಯಂತೆ ಹೊಳೆಯುವ ಓರುಗಲ್ಲನ್ನು ಕಂಡು ನಾರದನಿಗೆ ದಿಗ್ಭ್ರಮೆಯಾಗುತ್ತದೆ. ಹತ್ತಾರು ಜನರು ಕೂಡಿ ಗುಂಡನ್ನು ಎತ್ತಿದರೂ ಮೇಲಕ್ಕೇಳಲಾರದಂತ ದೊಡ್ಡ ಗುಂಡುಗಳಿಂದ ಕೋಟೆಯನ್ನು ಕಟ್ಟಲಾಗಿದೆ. ಇಬ್ಬರು ಮಾನವರು ಇರುವಷ್ಟು ಎತ್ತರ ಈ ಕೋಟೆ ಹೊಂದಿದೆ. ಸಾಮಾನ್ಯರಿಂದ ಈ ಕೋಟೆಯ ಹೊಕ್ಕು ಕನ್ನವಿಡಲು ಸಾಧ್ಯವಿಲ್ಲ. ಕಾದ ಕಂಚಿನಿಂದ ಈ ಕೋಟೆಯನ್ನು ನಿರ್ಮಿಸಲಾಗಿದೆ. ಎಲ್ಲ ವಿಧದ ಲೋಹಗಳಿಂದ ಕೋಟೆಯು ಪಳ ಪಳ ಮಿಂಚುತ್ತದೆ. ಇದರಿಂದ ದೇವಲೋಕವನ್ನೇ ನಾಚಿಸುವಂತೆ ಮಾಡಿದೆ. ಇಲ್ಲಿ 'ಬಾಗಿಲ ಗೊಲ್ಲರು' ಎಂಬುವರನ್ನು ಸೂಕ್ಷ್ಮವಾಗಿ ಗಮನಿಸಬೇಕಾಗಿದೆ. ಬಾಗಿಲು ಕಾಯುವವರು ನಾರದನನ್ನು ತಡೆದು ನಿಲ್ಲಿಸುತ್ತಾರೆ. ಬಾಗಿಲ ಗೊಲ್ಲರು ಅಂದು ನಿಷ್ಠೆಗೆ ಹೆಸರಾದ ಒಂದು ಜನಸಮುದಾಯವಾಗಿರುವುದನ್ನು ಕಾಣಬಹುದು. ನಾರದನು ಬುಡುಬುಡುಕೆ ವೇಷದ ಜೋತಿಷಿಯಂತೆ ಓರುಗಲ್ಲಿನ ಗಣಪತಿರಾಯನ ಅರಮನೆಯು ಕಳ್ಳರ ವಶವಾಗುತ್ತದೆ ಎಂಬ ಸುಳಿವನ್ನು ನೀಡುತ್ತಾನೆ. ಆದರೂ ಈ ಕಾರ್ಯವು ಅಷ್ಟೊಂದು ಸುಲಭವಲ್ಲ ಎಂಬುದು ನಾರದನಿಗೂ ಮನವರಿಕೆಯಾಗುತ್ತದೆ. ಪ್ರಭುತ್ವದ ಮನವೊಲಿಸಲು ಯತ್ನಿಸುವ ನಾರದನಿಗೆ ಮುಂದೆ ಶಿವನೊಡನೆ ಬಂದು ಕಳ್ಳತನಕ್ಕೆ ಬೇಕಾದ ಪೂರ್ವಸಿದ್ಧತೆಗಳನ್ನು ಪೂರ್ಣಮಾಡಿಯೇ ಹೊರಡುತ್ತಾನೆ.

ಈ ಕಾವ್ಯದಲ್ಲಿ ಶಕುನದ ಬಗ್ಗೆ ಪ್ರಸ್ತಾಪಗೊಳ್ಳುತ್ತದೆ. ಜನರು ಒಳ್ಳೆಯ ಅಥವಾ ಕೆಟ್ಟ ಕಾರ್ಯಗಳಿಗೆ ಹೋಗುವಾಗ ಶಕುನವನ್ನು ನಂಬಿಕೊಳ್ಳುವರು. ಜಾಗತೀಕರಣ, ಆಧುನೀಕರಣದ ಸಂದರ್ಭದಲ್ಲಿ ಶಕುನ ನಂಬುವುದನ್ನು ಕಾಣಬಹುದು. ಕೆಲವರಲ್ಲಿ ಇದರ ಬಗ್ಗೆ ಸಂಪೂರ್ಣ ನಂಬಿಕೆಯಿಲ್ಲದಿದ್ದರೂ, ಎಲ್ಲೋ ಒಂದು ಕಡೆ ಸ್ವಲ್ಪವಾದರೂ ಮನೆಮಾಡಿಕೊಂಡಿರುತ್ತದೆ. ಶುಭ ಕಾರ್ಯಕ್ಕೆ ಹೋಗುವಾಗ ಬೆಕ್ಕು, ಹಾವು, ಹೆಣ ಬಂದರೆ ಅಶುಭವೆಂದು ಭಾವಿಸುತ್ತಾರೆ. ದೀಪ ಶಾಂತಿಯಾದರೂ ಅದನ್ನು ಅಶುಭದ ಸಂಕೇತವೆಂದು ನಮ್ಮ ಜನಪದರು ನಂಬಿರುವರು. ಹೀಗೆ ಅನೇಕ ಬಗೆಯ ಶಕುನಗಳನ್ನು ಇಂದಿಗೂ ನಂಬಿಕೊಂಡು ಬಂದಿರುವುದರಿಂದ ಈ ಕಾವ್ಯದಲ್ಲಿಯೂ ಶಕುನದ ಬಗ್ಗೆ ಹೇಳಲಾಗಿದೆ. ಹರ-ನಾರದರು ಗಣಪತಿರಾಯನ ಅರಮನೆಗೆ ಕನ್ನವಿಕ್ಕಲು ಕನ್ನಗತ್ತಿ ತಯಾರಿಸಿಕೊಂಡು ಓರುಗಲ್ಲಿಗೆ ಹೋಗಲು ಸಿದ್ಧರಾಗಿ ಬಂದರು. ಅದೇ ಸಂದರ್ಭದಲ್ಲಿ ತುಂಬಿದ ಕೊಡ ಇದಿರಿಗೆ ಬರುತ್ತದೆ. ಇದನ್ನು ನೋಡಿದ ಹರ-ನಾರದರು ಶುಭ ಸೂಚಕವೆಂದು ಭಾವಿಸಿ, ಕೊಡದಲ್ಲಿಯ ನೀರನ್ನು ತಲೆಯ ಮೇಲೆ ಚಿಮ್ಮಿಸಿಕೊಳ್ಳುವರು.

ಇಂದಿಗೂ ಮದುಮಕ್ಕಳು ಗಂಡನ ಮನೆಗೆ ಹೋಗುವಾಗ ಅಥವಾ ಹೆಂಡತಿಯ ಮನೆಗೆ ಹೋಗುವಾಗ ತುಂಬಿದ ಕೊಡ ಎದುರಿಗೆ ಬಂದರೆ ಕೊಡದಲ್ಲಿಯ ನೀರನ್ನು ತಲೆಯ ಮೇಲೆ ಚಿಮ್ಮಿಸಿಕೊಳ್ಳುವುದನ್ನು ಹಳ್ಳಿಗಳಲ್ಲಿ ಕಾಣಬಹುದಾಗಿದೆ. ಇಂತಹ ನಂಬಿಕೆಗಳು ನಮಗೆ ಪರಂಪರೆಯಿಂದ ಬಂದಂತಹವುಗಳಾಗಿವೆ. ಇವುಗಳು ಸಾಮಾನ್ಯ ಜನರಿಂದ ಬೇಗ ಮರೆಯಾಗಲು ಸಾಧ್ಯವಿಲ್ಲ. ಇವುಗಳನ್ನು ನಂಬಿಕೊಂಡು ಬಾಳುವುದರಲ್ಲಿಯೇ ಅವರಿಗೆ ಒಂದು ರೀತಿಯ ನೆಮ್ಮದಿಯಿದೆ. ಓರುಗಲ್ಲಿನ ಪುರೋದ್ಯಾನದಲ್ಲಿ ಒಂದು ಗೊರವಕ್ಕಿ ಗುಟುಕು ಕೊಡುವುದನ್ನು ಕಂಡು ನಾರದನು ಈ ಶಕುನದಿಂದ ನಿಶ್ಚಿತವಾಗಿ ತಮಗೆ ಅರಮನೆ ಬಂಗಾರ ದೊರಕುವುದೆಂದು ಹೇಳುವನು. ಈ ಕಾವ್ಯದಲ್ಲಿ ನಾರದನು ಶಕುನಗಳನ್ನು ಬಲ್ಲಿದವನಾಗಿದ್ದಾನೆ. ತಳವಾರನಿಗೆ, ಬಾಗಿಲ ಗೊಲ್ಲರಿಗೆ, ಮಂತ್ರಿಗಳಿಗೆ, ಮಹಾರಾಜರಿಗೆ ಶಕುನದ ಬಗ್ಗೆ ಹೇಳುವುದು ಸ್ವಾರಸ್ಯಕರವಾಗಿದೆ. ನಾರದನು ಶಕುನ ಶಾಸ್ತ್ರವನ್ನು ಹೇಳುವುದು ಮುಂದಿನಂತೆ ವಿಶ್ಲೇಷಣೆ ಮಾಡಲಾಗಿದೆ.

ನಾರದನು ಓರುಗಲ್ಲಿನ ಊರ ಬಾಗಿಲಕ್ಕೆ ಹೋಗುವಾಗ ಅಲ್ಲಿಯ ಊರಿನ ಬಾಗಿಲು ಕಾಯುವವನು ನಾರದನನ್ನು ತಡೆಯುವನು. ಆಗ ನಾರದ 'ಕಪಟದ ದೇಶಾಂತ್ರಿ ನಾನಲ್ಲ ಒಳಗೆ ಬಿಡು' ಎಂದು ವಿನಂತಿಸುವನು. ಆದರೂ ಬಾಗಿಲಗೊಲ್ಲನು ಊರೊಳಗೆ ಬಿಡಲಿಲ್ಲ. ನಾಡಿನಲ್ಲಿ ತಿರುಗಾಡುವ ಮೂಢ ಜಂಗಮ ತಾನಲ್ಲವೆನ್ನುತ್ತಾ, ಶಕುನಶಾಸ್ತ್ರಗಳನ್ನು ನೋಡುವೆನೆಂದು ಹೇಳುವನು. ಇದೇ ಸಮಯದಲ್ಲಿ ಮರದಲ್ಲಿರುವ ಹಸುಬ (ಶಕುನದ ಹಕ್ಕಿ) ಹಾಡುತ್ತದೆ. ಆಗ ಊರ ಕಾಯ್ವನು ಹಸುಬನಾಡಿದ ಮಾತು ಹೇಳೆಂದನು. ಅದಕ್ಕೆ ನಾರದ ಈ ಕೆಳಗಿನ ಪದ್ಯವನ್ನು ಹೇಳುವನು.

"ಹಸುಬು ನಾಡಿದ ಮಾತು ಹೊಸ ಬಗೆ ನಿಮಗೆಂದಾ
ಹುಸಿಯಲ್ಲ ಶಕುನ ಶಿವನಾಣೆ|| ಕಳ್ಳರ ಕೈಯ
ದಶ ಕಾಣೋ ನಿಮ್ಮಾರಮನೆ

ಹಿಂದೆ ಕೆಲವು ದಿನ ಬಂಧನದೊಳಗಿದ್ದೆ
ನೊಂದು ಚಿಂತೆಯಲಿ ಮಲಗಿದ್ದೆ|| ಸ್ವಪ್ನದಲಿ ಶಿವ
ಬಂದು ಬಂಧನವ ಬಿಡಿಸಿದಾ"[೫೫]

ಶಕುನದ ಹಕ್ಕಿಯ ಹಾಡು ಹೊಸದನ್ನು ಹೇಳುತ್ತದೆ ಅದು ಸುಳ್ಳಲ್ಲ ಗಣಪತಿರಾಯನ ಅರಮನೆ ಕಳವು ಆಗುತ್ತದೆಂದು ಹಾಡುತ್ತದೆ ಎಂದನು. ಕೆಲವು ದಿನ ಬಂಧನದಲ್ಲಿದ್ದೆ, ನೊಂದು ಚಿಂತೆಯಲ್ಲಿ ಮಲಗಿರುವಾಗ ಶಿವನು ಬಂದು ನಿನ್ನ ಬಂಧನಗಳನ್ನು ಬಿಡಿಸಿದನೆಂದು ಕಪಟದ ನಾರದ ನುಡಿದನು. ಈ ಮಾತನ್ನು ಕೇಳಿದ ಬಾಗಿಲ ಕಾಯ್ವವನು ಆಶ್ಚರ್ಯಗೊಂಡು ನನ್ನ ಮನಸಿನ ಫಲ ಚೆನ್ನಾಗಿ ಹೇಳಿದಿರಿ ಎನ್ನುತ ಮನ್ನಿಸಿ ಮುಂದಕ್ಕೆ ಕಳುಹಿಸಿದನು. ನಾರದನು ಬಾಗಿಲ ಕಾಯ್ವನಿಗೆ ಶಕುನವ ಹೇಳಿ ಮುಂದೆ ಸಾಗಿದನು. ನಂತರ ಮತ್ತೊಬ್ಬ ಕೇರಿಯ ತಳವಾರನು ನಾರದನನ್ನು ತಡೆದನು. ತನಗೆ ಹೇಳಿದ ಶಕುನ ನಿಜವಾದರೆ ನಿಮಗೆ ತೇಜಗಳ (ಚಿನ್ನ, ಹೊನ್ನು) ಕೊಡುವೆನೆಂದ. ಆಗ ನಾರದನು ತಳವಾರನಿಗೆ ಶಾಸ್ತ್ರ

ಹೇಳುವನು. "ನಿನ್ನ ಮೆಚ್ಚಿ ಒಬ್ಬ ಕನ್ಯೆ ಬಂದಳು. ಅವಳ ಮಗ್ಗುಲಿಗೆ ಒಬ್ಬ ಕಂದನಿಲ್ಲದೆ ಚಿಂತೆ ಮಾಡುತಾಳೆಂದನು. ತನ್ನ ಮನದ ಆಸೆಯನ್ನು ಸರಿಯಾಗಿ ನುಡಿದಕ್ಕಾಗಿ ಆಶ್ಚರ್ಯಗೊಂಡು ತೇಜವನ್ನು ಕೊಟ್ಟು ಅರಮನೆಗೆ ಕಳಿಸುವನು. ಅರಮನೆಯ ಬಾಗಿಲಲ್ಲಿ ಹಿರಿಯ ಪ್ರಧಾನಿಗಳು, ಕರುಣಿಕರು ಮತ್ತು ಪರಿವಾರವಿತ್ತು. ನಾರದನು ಬರುವುದನ್ನು ಕಂಡು ಅವರು ಕರೆದರು. ಕರೆದಲ್ಲಿಗೆ ಹೋಗಿ 'ಮುಪ್ಪುರದ ಪರಿಯಾಗಲೆಂದು ನಿಮ್ಮರಮನೆ' ಎನ್ನುವನು. ಮಂತ್ರಿಯು ಬೆಸಗೊಂಡು ಈ ಮಾತಿಗೆ ದೃಢ ಯಾವುದೆಂದು ಕೇಳುವನು. ಆಗ ಅಲ್ಲಿಯೇ ಇದ್ದ ತಳವಾರನು ಮಂತ್ರಿಗೆ ಒಡೆಯರ ಮಾತು ನಿಜವಿದೆ. ಆದ್ದರಿಂದ ಚಾವಡಿಯೊಳಗೆ ಗವುಳಿ (ಹಲ್ಲಿ) ನುಡಿಯಿತೆಂದನು. ಇದನ್ನು ಕೇಳಿದ ಮಂತ್ರಿಯು ಎಲ್ಲ ಶಕುನವ ಬಲ್ಲವನಾದರೆ, ಗವುಳಿಯ ಸೊಲ್ಲು ಹೇಳೆಂದ. ಮುಂದೆ ನಾರದ ಈ ಕೆಳಗಿನಂತೆ ಹೇಳುವನು.

ಗವುಳಿ ಆಡಿದ ಮಾತು ಪವುಳಿಗೆ ಕನಿಷ್ಟ
ಜವಳಿಜಾಳಿಗೆಯಲ್ಲಿ ಕಳಹೋಗಿ-ಅರಮನೆಯೊಳಗೆ
ಹವಳ ಮುತ್ತುಗಳು ಮೊದಲಾಗಿ

ಇಂದಿರುಳಿನ ಕನಸಿನಲಿ ಬಂದಳು ರಾಯನರಾಣಿ
ಮುಂದು ನಿಂದಿರ್ದಾ ನಸುನಕ್ಕು|| ಮರೆಯಾದವ
ಳಂದಾವ ನೋಡಿ ಮನನೊಂದು"[38]

ಅರಮನೆಯೊಳಗಿನ ಹವಳ ಮುತ್ತುಗಳು ಕಳವು ಆಗುವುದಾಗಿ ಅದು ಶಕುನ ನೀಡುತ್ತದೆ ಎಂದನು ನಾರದ. ನಂತರ ಮಂತ್ರಿಯು ಈ ದಿನ ಬೆಳಗಿನ ಜಾವ ನನಗೊಂದು ಕನಸು ಬಿತ್ತು. ಅದನ್ನು ಹೇಳಿದರೆ ನಿನ್ನ ಶಕುನ ದಿಟವೆಂದನು. ಇಂದಿರುಳಿನ ಕನಸಿನಲಿ ರಾಯನ ರಾಣಿ ಬಂದಳು. ಮುಂದೆ ನಿಂತು ನಸುನಕ್ಕಳೆಂದು ಹೇಳಿದನು. ಮಂತ್ರಿಯು ಮುಂದೆ ನಾರದನನ್ನು ಮಾತನಾಡಗೊಡಲಿಲ್ಲ. ನಮ್ಮ ಒಡೆಯರನ್ನು ತೋರುವೆನೆಂದು ಕರೆತಂದನು. ಜಂಗಮನನ್ನು ಏಕೆ ಕರೆತಂದೆ ಎಂದು ರಾಜನು ಮಂತ್ರಿಯನ್ನು ಕೇಳುವನು. 'ಉಂಡ ಊಟವ ಬಲ್ಲ, ಕಂಡ ಕನಸ ಬಲ್ಲ' ಲೋಕದ ಪಂಡಿತನು ಇವನೆಂದ. ಶಾಸ್ತ್ರಶಕುನಗಳನ್ನು ಚೆನ್ನಾಗಿ ಬಲ್ಲವನೆಂದನು. ನಾರದನು ಶಕುನ ಶಾಸ್ತ್ರ ಹೇಳುತ್ತಾ ಅರಮನೆಯು ಕಳ್ಳರ ವಶವಾಗುವುದೆಂದು ಮತ್ತು ರಾಣಿಯು ತೊಟ್ಟ ತೊಡಿಗೆ, ಬಂಗಾರವು ಕಳ್ಳರ ವಶವಾಗುವುದೆಂದು ಹೇಳಿದನು. ಗಣಪತಿಯು ಸಿಡುಕಿನಿಂದ ನನ್ನ ಅರಮನೆ ಕಳವು ಮಾಡಲು ಸಾಧ್ಯವಿಲ್ಲವೆಂದನು. ನಂತರ ನಾರದನು ನಿನ್ನ ಪಟ್ಟದ ರಾಣಿ ನಿನ್ನೊಂದಿಗೆ ಮುನಿಸಿಕೊಂಡು ಊಟ ಮಾಡಿಲ್ಲವೆಂದನು. ಇದನ್ನು ಕೇಳಿದ ರಾಜನು ಜಂಗಮ ವೇಷದಲ್ಲಿದ್ದ ನಾರದನ ಶಕುನವನ್ನು ಒಪ್ಪಿಕೊಳ್ಳುವನು. ಹೀಗೆ ಬಾಗಿಲ ಗೊಲ್ಲರನ್ನು, ತಳವಾರರನ್ನು, ಮಂತ್ರಿಗಳನ್ನು, ರಾಜರನ್ನು, ರಾಣಿಯನ್ನು ಶಾಸ್ತ್ರ ಮತ್ತು ಶಕುನ ಹೇಳುವುದರಿಂದ ಮನವೊಲಿಸಿಕೊಂಡನು. ಹೀಗೆ ಶಾಸ್ತ್ರ ಶಕುನಗಳ ಫಲ ಹೇಳಿ ಅರಮನೆ ಪ್ರವೇಶಿಸುವ ನಾರದರನ ಜಾಣ್ಮೆ ಇಲ್ಲಿ ಮನೋಜ್ಞವಾಗಿದೆ. ಯಾವ ತರ್ಕಕ್ಕೂ ನಿಲುಕದ ಈ ಮೂಢನಂಬಿಕೆಗಳು ಸಮಕಾಲೀನ ಬದುಕಿನಲ್ಲೂ ತಮ್ಮ ಅಸ್ತಿತ್ವ

ಉಳಿಸಿಕೊಂಡಿರುವುದು ಕಂಡುಬರುತ್ತದೆ. ಶಕುನಗಳೇ ನಮ್ಮ ಬದುಕನ್ನು ಎಷ್ಟೋ ಬಾರಿ ಮುನ್ನಡೆಸಿದ್ದುಂಟು. ಆದ್ದರಿಂದ ಈ ಕಾವ್ಯದಲ್ಲಿ ದೀರ್ಘವಾಗಿ ಪ್ರಸ್ತಾಪಿಸಿರುವುದನ್ನು ಕಾಣಬಹುದು.

ಜನ ಜೀವನದಲ್ಲಿ ಕೆಲವು ನಂಬಿಕೆಗಳು ಜ್ಯೋತಿಷ್ಯ, ಶಕುನಗಳಲ್ಲಿಯ ವಿಶ್ವಾಸವನ್ನು ಈ ಕಾವ್ಯದಲ್ಲಿ ಚಿತ್ರಿಸಲಾಗಿದೆ. ಶಾಸ್ತ್ರ ಕೃತಿಗಳಲ್ಲಿ ಶಕುನವೂ ಒಂದಾಗಿದೆ. ೨ನೇ ಚಾವುಂಡರಾಯನ ಶಾಸ್ತ್ರಕೃತಿಯಾದ 'ಲೋಕೋಪಕಾರ'ದಲ್ಲಿ ಒಟ್ಟು ಹನ್ನೆರಡು ಪ್ರಕರಣಗಳಿದ್ದು ಕೊನೆಯ ಪ್ರಕರಣದಲ್ಲಿ ಶಕುನಕ್ಕೆ ಮೀಸಲಿರಿಸಲಾಗಿದೆ. 'ಶಕುನಸಾರ' ಎಂಬ ಕೃತಿಯಲ್ಲಿ ಶಕುನದ ಲಕ್ಷಣಗಳನ್ನು, ಸುಳಿವು ಸೂಚನೆಗಳನ್ನು ವಿವರವಾಗಿ ಚರ್ಚಿಸಲಾಗಿದೆ. ಇದರಲ್ಲಿ ಒಟ್ಟು ೮ ಅಧ್ಯಾಯಗಳಿರುವುದನ್ನು ಗುರುತಿಸಬಹುದು. ಚಾಕರಾಜನ 'ಶಕುನ ಪ್ರಪಂಚ'ವು ಶಕುನದ ಬಗ್ಗೆ ಪ್ರಸ್ತಾಪಿಸುತ್ತದೆ. ಇಲ್ಲಿ ಒಟ್ಟು ಇಪ್ಪತ್ತೈದು ಅಧ್ಯಾಯಗಳಿರುವುದನ್ನು ಗುರುತಿಸಬಹುದು. ಕನ್ನಡ ವಿಶ್ವವಿದ್ಯಾಲಯ ಹಂಪಿಯ ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ೫೯ನೇ ಕ್ರಮಸಂಖ್ಯೆಯ ಹಸ್ತಪ್ರತಿಯಲ್ಲಿ ಶಕುನಶಾಸ್ತ್ರದ ಬಗ್ಗೆ ಪ್ರಸ್ತಾಪಗೊಂಡಿದೆ. ಹೀಗೆ ಕನ್ನಡ ಸಾಹಿತ್ಯದಲ್ಲಿ ಹಲವಾರು ಕೃತಿಗಳಲ್ಲಿ ಶಕುನಶಾಸ್ತ್ರದ ಬಗ್ಗೆ ವಿವರಿಸಲಾಗಿದೆ. ಅವುಗಳಲ್ಲಿ ಗುಂಡಬ್ರಹ್ಮಯ್ಯರ ಸಾಹಿತ್ಯ ಕೃತಿಯೂ ಒಂದಾಗಿದೆ.

ಓರುಗಲ್ಲಿನ ಗಣಪತಿರಾಯ ಮತ್ತು ಆತನ ರಾಣಿಯ ಮೈಮನಸ್ಸನ್ನು ನಾರದ ಬಲ್ಲವನಾಗಿದ್ದಾನೆ. ಮುನಿಸಿಕೊಂಡ ಪಟ್ಟದ ರಾಣಿಯು ನಾರದನನ್ನು ನೋಡಿ ದೈವೀ ಕೃಪೆ ಉಂಟಾಗಿ ರಾಜನಿಗೆ ತಿಳಿಯ ಹೇಳಿರೆಂದು ಬೇಡುವಳು. ಇದಕ್ಕೆ ಪ್ರತಿಯಾಗಿ ರಾಜನು ರಾಣಿಯ ಪರಿಗಳನ್ನು ಹೇಳಿರಿಯೆಂದು ವಿನಂತಿಸಿಕೊಳ್ಳುವುದನ್ನು ಕೆಳಗೆ ಕಾಣಬಹುದು.

"ಎದ್ದು ಬಂದಳು ರಾಣಿ ಬಿದ್ದಳು ಪಾದದ ಮೇಲೆ

ಮುದ್ದು ಬಿನ್ನಗಳ ನುಡಿದಾಳು|| ನಮ್ಮ ರಾಯಗ

ಬುದ್ದಿಯ ಹೇಳಿ ಗುರುರಾಯ

ರಾಯ ಹೇಳಿದ ತನ್ನ ರಾಣಿಯ ಪರಿಗಳನು

ಆವ ವಿಚಾರಕ್ಕೆ ಮುನಿದಾಳು|| ಆಕೆಗೆ

ದಯವ ಹೇಳಿ ಗುರುರಾಯ"[೫೨]

ರಾಣಿಯು ರಾಜನ ಮೇಲೆ ದೂರು ಹೇಳುವುದು, ರಾಣಿಯ ಕೋಪವನ್ನು ಉಪಶಮನಗೊಳಿಸುವುದು, ರಾಜ ರಾಣಿಯರನ್ನು ಎಡಬಲದಲ್ಲಿ ಕುಳ್ಳಿರಿಸಿ ಅವರು ಒಲಿಯುವಂತೆ, ನಗುವಂತೆ ಮಾಡಿದ. ನಾರದನು ಒಂದು ರೀತಿಯಲ್ಲಿ ನ್ಯಾಯಾಧೀಶನ ಸ್ಥಾನದಲ್ಲಿ ನಿಂತು ಪಂಚಾಯ್ತಿ ಮಾಡುವ ವ್ಯಕ್ತಿಯಂತೆ ಕಾಣಿಸುವನು. ಸಾಮಾನ್ಯವಾಗಿ ಒಬ್ಬರಿಂದ ಮತ್ತೊಬ್ಬರಿಗೆ ಜಗಳ ಬರುವಂತೆ ಮಾಡುವ ನಾರದನು ಇಲ್ಲಿ ತನ್ನ ಕಾರ್ಯ

ಸಾಧನೆಗಾಗಿ ರಾಜ-ರಾಣಿಯರನ್ನು ಒಂದುಗೂಡಿಸುವುದನ್ನು ಕಾಣಬಹುದು. ನಾರದನು ಇವರನ್ನು ಕೂಡಿಸಿದರ ಫಲವಾಗಿ ರಾಜನಿಗೆ ಇವನ ಬಗ್ಗೆ ವಿಶೇಷ ಪ್ರೀತಿ, ಗೌರವ, ದೈವಭಕ್ತಿ ಉಂಟಾಗುತ್ತದೆ. ಇಲ್ಲೆಲ್ಲಾ ದೇವಮಾನವರೂ ಸಾಮಾನ್ಯರಂತೆ ಬಂದು ಉಂಡು ತಿಂದು ಸಾಮಾನ್ಯರ ಜೊತೆಯಲ್ಲಿ ಬೆರೆಯುವ ಗುಣ ವಿಶಿಷ್ಟವಾದುದು. ಇವರೆಲ್ಲರನ್ನು ಸಂತೈಸಿದ ನಾರದರನ್ನು ಕಂಡು ನೀವು ಇಲ್ಲೇ ಇರಿ ಎಲ್ಲಿಗೂ ಹೋಗಬೇಡಿರಿ ನಮ್ಮ ಅರಮನೆಯಲ್ಲಿ ನಿಮಗೆ ಎಲ್ಲ ವ್ಯವಸ್ಥೆ ಮಾಡುವೆವು ಎಂದು ಗಣಪತಿರಾಯನು ನಾರದನಲ್ಲಿ ಕೇಳಿಕೊಳ್ಳುವನು. ಅದಕ್ಕೆ ನಾರದ ಈ ಕೆಳಗಿನಂತೆ ಹೇಳುವನು.

"ಅರಮನೆಯಲಿ ನಾವು ಇರೆವು ದೇಶಾಂತ್ರಿಯು
ನಮಗೊಬ್ಬರುಂಟು ಹಿರಿಯರು|| ಅವರನ್ನು
ಕರಕೊಂಡು ಇಲ್ಲಿಗೆ ಬರುವೇನು

ಅಲ್ಲಿ ಬೆಳೆವಂತಾದ್ದು ಎಲ್ಲವು ರಾಜನ್ನ
ಪಲ್ಯೈಸಿ ಬೆಳೆವ ಬೆಳೆಯಲ್ಲ|| ಷಡುರುಚಿ
ಎಲ್ಲರುಂಬೂಟ ಅಮೃತನ್ನ"[೫೮]

ನಾರದರು ಇಲ್ಲಿ ನಾವು ಇರುವುದಿಲ್ಲ. ನಾವು ತ್ರಿಲೋಕ ಸಂಚಾರಿಗಳು. ನಮಗಿಂತ ಮಿಗಿಲಾದವರು ಒಬ್ಬರಿದ್ದಾರೆ ಅವನೇ ಶಿವ. ಬಸವಣ್ಣನವರು ಹೇಳುವಂತೆ 'ಎನಗಿಂತ ಕಿರಿಯರಿಲ್ಲ ಶಿವಶರಣರಿಗಿಂತ ಹಿರಿಯರಿಲ್ಲ' ಎಂಬಂತೆ ಜನರನ್ನು ಸಂರಕ್ಷಿಸುವವನೊಬ್ಬ ಇದ್ದಾನೆ. ಅವನಿಲ್ಲದೆ ಒಂದು ಹುಲ್ಲು ಕಡ್ಡಿಯೂ ಮಿಸುಕದು. ಕೈಲಾಸವೆಂಬ ಪುರದಲ್ಲಿ ಅರಮನೆಯ ಪಟ್ಟದಂತೆ ಗಣಾಧೀಶನಾಗಿ ಅವನೇ ಒಂದು ಶಕ್ತಿಯಾಗಿ ಎಲ್ಲ ಕಾರ್ಯವನ್ನು ಸಮತೋಲನದಿಂದ ನೋಡಿಕೊಳ್ಳುವನು. ನಿಮ್ಮಲ್ಲಿ ಹೊಟ್ಟೆಯ ಹಸಿವನ್ನು ಇಂಗಿಸುವ ರಾಜನ್ನದಂತೆಯೇ ನಮ್ಮಲ್ಲಿ ಅಮೃತನ್ನವಿದೆ ಎಂದು ನಾರದನು ಕೈಲಾಸದ ಬಗ್ಗೆ ವಿವರಿಸುವನು. ಈ ಭೂಮಿ, ಕೈಲಾಸದ ನಡುವೆ ಇರುವ ಭಕ್ತಿ ಸೋಪಾನದ ನೆಲೆಗಳನ್ನು ತಾವು ಕಾಣಬೇಕು. ಇಹಪರಕ್ಕೆ ದೈವನೂ ಅವನೇ. ಅವನು ಸರ್ವಚೇತನನಾಗಿದ್ದಾನೆ. ಅವನ ವ್ಯಕ್ತಿತ್ವವು ಎಲ್ಲರನ್ನು ಸಂರಕ್ಷಿಸುವಂತದ್ದೆ ಆಗಿರುತ್ತದೆ. ಇಹದ ಬದುಕಿನ ಪರೀಕ್ಷಕ. ಪರದ ಬದುಕಿನ ಅನ್ವೇಷಕನಾಗಲು ಅಣಿಗೊಳಿಸುವ ಶಕ್ತಿಯುಳ್ಳವನಾಗಿರುವನು. ಹೀಗೆ ನಾರದನು ಶಿವನ ಸತ್ಯ ಮತ್ತು ಸತ್ವವನ್ನು ಪರಿಚಯಿಸುತ್ತಾನೆ.

ನಾರದನು ಹೊರಡುವಾಗ ಮಂತ್ರೀಶನು ನಾರದನ ಪಾದಗಳಿಗೆ ಮಣಿದು ಇನ್ನೊಬ್ಬ ಹಿರಿಯರನ್ನು ನಿಮ್ಮೊಂದಿಗೆ ಕರೆದುಕೊಂಡು ಬನ್ನಿ ಎಂದು ವಿನಂತಿಸಿಕೊಂಡನು. ನಾರದನು ನಮಗೆಲ್ಲ ಅಧಿಕನಾದ ಶಿವನನ್ನು ಭೂಮಿಗೆ ಕರೆತರಲು ಹೋಗಬೇಕಾಗಿದೆ. ಈ ಅರಮನೆಯ ವೈಭವವನ್ನು ನನ್ನ ಒಡೆಯನಿಗೆ ತಿಳಿಸಿ ಕರೆತರುತ್ತೇನೆಂದನು. 'ನಿನ್ನಂತ ಜಂಗಮನನ್ನು ನಮ್ಮ ಅರಮನೆಯಲ್ಲಿ ತಡೆವೆನು ಎಂದೆನುತ ದಾನ ಧರ್ಮವನ್ನು ಕೊಟ್ಟು ಕಳುಹಿಸಿದ. ದೇಶ ದೇಶವನ್ನು ತಿರುಗಿ ಬೇಸತ್ತ ನಾರದನು ಶಶಿಧರನ ಕರೆ ತರುವೆನೆಂದು ಜಗದೀಶ್ವರ ಓಲಗಕ್ಕೆ ನಡೆದನು. ಇದು ಭಕ್ತ ಮತ್ತು ದೈವದ ನಡುವೆ ನಡೆಯುವ ಅವಿನಾಭಾವ

ಸಂಬಂಧವೆನಿಸುತ್ತದೆ. ಬಸವೋತ್ತರ ಯುಗದ ಈ ಕೃತಿಯಲ್ಲಿ ದೈವವನ್ನು ಕಾಣಲು ಕಷ್ಟದ ಮಾರ್ಗವಾದ ಭಕ್ತಿಯ ಪರಾಕಾಷ್ಠೆಯನ್ನು ಅನುಸರಿಸಿದರು. ಇದರಿಂದ ದೈವವನ್ನು ತಮ್ಮ ಕಡೆಗೆ ಸೆಳೆದುಕೊಳ್ಳಲು ಸಹಕಾರಿಯಾಯಿತು. ಇದಕ್ಕೆ ಗುಂಡಬ್ರಹ್ಮಯ್ಯರೂ ಹೊರತಲ್ಲ. ಶಿವನ ಸಾಕ್ಷಾತ್ಕಾರ ಪಡೆಯಲು ತಮ್ಮ ಜೀವನವನ್ನೇ ಮುಡುಪಾಗಿಟ್ಟು ನಿಜದ ಭಕ್ತಿಯ ಶಕ್ತಿಯನ್ನು ಡಾಂಭಿಕ ಜನರಿಗೆ ತಿಳಿಸಿದರು. ಈ ನೆಲೆಯಲ್ಲಿ ಇವರ ಸಾಹಿತ್ಯವು ಪ್ರಮುಖವಾದ ಪಾತ್ರವಹಿಸುತ್ತದೆ. ಸಾಮಾನ್ಯರ ದೃಷ್ಟಿಯಲ್ಲಿ ಶರಣರು ಯಾವ ರೀತಿ ಉಳಿದರು ಎಂಬುದನ್ನು ಗುಂಡಬ್ರಹ್ಮಯ್ಯಗಳ ಕಾವ್ಯ ತಿಳಿಸುತ್ತದೆ. ಆದ್ದರಿಂದ ಈ ಸಾಹಿತ್ಯವು ಮೌಲ್ಯ ಪಡೆದುಕೊಂಡಿದೆ.

ಕೈಲಾಸದ ವರ್ಣನೆಯೊಂದಿಗೆ ಆರಂಭವಾಗುವ ಈ ಸಂದರ್ಭದಲ್ಲಿ ಶರಣರ ಚಾರಿತ್ರ್ಯದ ವಿವಿಧ ಮುಖಗಳನ್ನು ಕವಿಯು ಇಲ್ಲಿ ಪರಿಚಯಿಸುತ್ತಾನೆ. ಶಿವನ ಸ್ವರೂಪವನ್ನು ಕೊಂಡಾಡುತ್ತಿರುವಾಗ್ಗೆ ನಾರದನು ಬಂದು ಶಿವನ ಬಳಿಯಲ್ಲಿ ತಾನು ಭೂಲೋಕಕ್ಕೆ ಹೋಗಿ ಬಂದಿರುವ ಸಂಗತಿಗಳನ್ನು ಮರೆಮಾಚದೆ ತಿಳಿಸುತ್ತಾನೆ. ನಾರದನು ಗುಂಡಬ್ರಹ್ಮಯ್ಯರ ಜೀವನ ತತ್ವ-ಸಿದ್ಧಾಂತಗಳನ್ನು ಶಿವನ ಮುಂದೆ ಪ್ರಸ್ತಾಪಿಸುವ ರೀತಿ ಈ ಕೆಳಗಿನಂತೆ ಗಮನಿಸಲಾಗಿದೆ.

"ಹಿಂಡು ದೇವರಿಗೆಲ್ಲ ಗಂಡದೇವನೆ ಕೇಳು
ಗುಂಡಬ್ರಹ್ಮಯ್ಯಗಳ ಅರಮನೆಗಳ || ಹೊಕ್ಕು
ಕಂಡೆನವನ ಪರಿಗಳ

ಸತ್ಯ ಧರ್ಮದ ಕೋಟೆ ಸುತ್ತುಗಳು ಕ್ಷಮೆ ದಯೆ
ಭಕ್ತಿ ಸಾಯುದವು ಬಲುಬೀಗ|| ಶರಣರಿಗೆ
ಚಿತ್ತವೆ ಕದವು ಹೊಗಬಾರ"[38]

ಭಾರತೀಯ ಪರಂಪರೆಯಲ್ಲಿ ಮೂವತ್ಮೂರು ಕೋಟಿ ದೇವತೆಗಳಿಗೂ ಶಿಖರಪ್ರಾಯನಾದ ಶಿವನೇ ಕೇಳು, ಗುಂಡಬ್ರಹ್ಮಯ್ಯಗಳ ಅರಮನೆಯ ಹೊಕ್ಕು ಅವರ ಮಾತುಗಳನ್ನು (ಬಿರುದು) ಕೇಳಿ ದಿಗ್ಭ್ರಮೆಗೊಳಗಾಗಿದ್ದೇನೆ. ಅವರ ಶರಣರ ಬದುಕಿನ ರೀತಿಯು ಇತರರಿಗೆ ಆದರ್ಶವಾಗಿದೆ. ಅಲ್ಲದೆ ಭೂಲೋಕದ ಎಲ್ಲ ನರರಿಗೂ ಭಕ್ತಿಯ ಮಾರ್ಗಸೂಚಿಯಂತೆ ಆಗಿದ್ದಾರೆ. ಗವಚೆಪುರ, ಓರುಗಲ್ಲುಗಳಿಗೆ ಇರುವುದು ಕಲ್ಲು ಮಣ್ಣಿನಿಂದ ಕೂಡಿದ ನಿರ್ಜೀವ ವಸ್ತುಗಳ ಕೋಟೆಯಲ್ಲ. ಸತ್ಯ, ಧರ್ಮಗಳೆಂಬ ಮಾನವೀಯ ಮೌಲ್ಯಗಳ ಕೋಟೆ ಅದರ ಸುತ್ತುಗಳು ಕೂಡ ಕ್ಷಮೆ, ಕರುಣೆಗಳಿಗೆ ಆಗರವಾಗಿದೆ. ಆ ಊರುಗಳ ಸಂರಕ್ಷಣೆಗೆ ಹಾಕಿರುವ ಬಲು ಬೀಗವೆಂದರೆ ಸರ್ವತ್ಯಾಗಕ್ಕೂ ಬದ್ಧವಾದ ದೃಢಭಕ್ತಿ. ಆ ಶರಣರಿಗೆ ಮನಸ್ಸು ಎಂಬ ಕದವಿರುವುದರಿಂದ ಹೋಗುವುದು (ಪ್ರವೇಶಿಸುವುದು) ಅಷ್ಟು ಸುಲಭ ಸಾಧ್ಯವೇನಲ್ಲ. ಅವರ ಊರು ಹೃದಯ ಶ್ರೀಮಂತಿಕೆಯಿರುವ, ಮಾನವೀಯ ಮೌಲ್ಯಗಳನ್ನು ಹೊಂದಿರುವ, ಜೀವಂತಿಕೆಯಿಂದ ನಳನಳಿಸುವ ಶಿವನೇ ಸರ್ವಸ್ವವೆಂದು ನಂಬಿರುವ ಶರಣರ ಊರು. ಅವರ ಮನದ

ತುಂಬ ಶಿವನ ಸಾನಿಧ್ಯವೇ ತುಂಬಿ ಹೋಗಿದೆ. ಭಕ್ತಿಯ ರಸದ ಕಾಲುವೆ ಊರ ತುಂಬಾ ಹರಿಯುತ್ತದೆ. ಅನ್ಯಮನಸ್ಕರಾಗದೆ ಶಿವಮನಸ್ಕರಾಗಿ ಶರಣರ ಬದುಕಿನ ಸಾತ್ವಿಕ ಸ್ವರೂಪವನ್ನು ಪ್ರಕಟಪಡಿಸುವವರಾಗಿದ್ದಾರೆ.

ಗುಂಡಬ್ರಹ್ಮಯ್ಯರು ಬಿರುದಿನ ಮಾತನಾಡುವುದರಲ್ಲಿ ಹಿಂಜರಿಯರು. ಅವರಿಗೆ ಬಿರುದಿನ ಮಾತೇ ವ್ರತವಾಗಿದೆ. ಅದು ಅವರ ಬದುಕಿನ ಅವಿಭಾಜ್ಯ ಅಂಗವಾಗಿದೆ. ಇವರ ವ್ರತವನ್ನು ಕೇಳಿದವರಿಗೆ ಕರ್ಮ ಕಂಟಕವು ಪರಿಹಾರವಾಗುವಂತಿದೆ. ಮಾರಿಮಸಣಿ ಮುಂತಾದ ಕ್ಷುದ್ರದೇವತೆಗಳಿಗೆ ಅಲ್ಲಿ ಸ್ಥಳವಿಲ್ಲ. ‘ಮುರಾರಿ ಚಿತ್ತೈಸು ಓರುಗಲ್ಲಿನ ಕೋಟೆ ಬಾರಿಯ ಕಲ್ಲು ಬಲುಗುಂಡು’. ಎಲೈ ಶಿವನೇ ಓರುಗಲ್ಲಿನ ಕೋಟೆಯಂತೂ ಆನೆಗಾತ್ರಕ್ಕೂ ಮಿಗಿಲಾದ ಹೆಬ್ಬಂಡೆಗಳಿಂದ ಮಾಡಲಾದ ಕೋಟೆ. ಇಂತಹ ಕೋಟೆಯ ಪ್ರವೇಶಕ್ಕೆ ಹರಿತವಾದ ರತ್ನದ ಕನ್ನಗತ್ತಿಗಳೇ ಬೇಕಾಗುತ್ತವೆ ಎಂದು ನಾರದನು ಶಿವನಿಗೆ ತನ್ನ ಮನದ ಮಾತುಗಳನ್ನು ವಿವರಿಸುತ್ತಾನೆ. ಶಿವನಿಗೂ ಇವನ ಮಾತುಗಳು ಒಂದು ಕ್ಷಣ ಕುತೂಹಲವೆನಿಸುತ್ತವೆ.

ಈ ಎಲ್ಲಾ ಮಾತುಗಳನ್ನು ಆಲಿಸಿದ ನಂತರ ಶಿವನು ಕನ್ನಗತ್ತಿ ಮಾಡಿಸಿದರೆ ಕಳುವಿಗೆ ಸಹಾಯವಾಗುತ್ತದೆ. ಆದ್ದರಿಂದ ಕನ್ನಗತ್ತಿ ತಯಾರಿಸಲು ‘ಕರೆ ಕರೆ ವೀರನ ಕರೆ ಶರಣನ ಕರೆಯಿರೊ ವಿಶ್ವಕರ್ಮನ’ ಎಂದು ವಿಶ್ವಕರ್ಮನನ್ನು ಕರೆ ತರಲು ಸೂಚಿಸಿದನು. ವಸಂತ ಕಾಲದಲ್ಲಿ ಶಿಶು ಪಕ್ಷಿಯ ಕರೆಯುವಂತೆ, ಸಸಿ ಬಾಡಿ ಮಳೆಯು ಕರೆದಂತೆ ವಿಶ್ವಕರ್ಮನನ್ನು ಕರೆಸಿದಾಗ ಅವನು ಬಂದು ವಿಜ್ಞಾಪನೆ ಏನೆಂದು ಬೇಡಿಕೊಳ್ಳುತ್ತಾನೆ. ಅದಕ್ಕೆ ಶಿವನು:

“ಶಶಿಧರ ನುಡಿದನು ಹಸಮಾಡಿ ಕನ್ನಗತ್ತಿಯ
ವಸುಧೆಯೊಳ ಹೋಗಿ ಕಳಬೇಕು ಎಂದೆನುತ
ಶಶಿಧರನು ನುಡಿದ ಕುಶಲದಿ

ಹಿಂಭಾನುವಾರ ಮುಂದೆ ಇಂದುವಾರ
ಚಂದ್ರನ ಗ್ರಹಣ ತಿಥಿಯಲ್ಲಿ ಅಮವಾಸೆಲಿ
ಕಂಡ ಕಬ್ಬಿನವ ತರಿಸಯ್ಯ”[೬೦]

ಕಳ್ಳತನ ಮಾಡಲು ದೈವವೇ ಮುಂದಾಗುವುದು ಅಪರಾಧವೆಂದು ತಿಳಿದು ತಿಳಿದೂ ಭಕ್ತರನ್ನು ಪರೀಕ್ಷಿಸುವ ಸಂಕಲ್ಪವು ವಿಭಿನ್ನವಾಗಿದೆ. ದೈವಸಂಕಲ್ಪ ಮೀರುವುದಾದರೂ ಉಂಟೆ? ಎಂಬ ನಿಲುವು ಸಾಹಿತ್ಯದಲ್ಲಿ ಅಭಿವ್ಯಕ್ತವಾಗುತ್ತದೆ. ಕನ್ನಗತ್ತಿಯನ್ನು ತಯಾರಿಸಲು ಬೇಕಾದ ಕಬ್ಬಿಣ ತರುವಲ್ಲಿಯೂ ಶುಭಗಳಿಗೆ ಬೇಕಾಗುತ್ತದೆ. ಕಳ್ಳತನಕ್ಕೂ ಶುಭಗಳಿಗೆಯ ಅಗತ್ಯವನ್ನು ನೋಡಿದಾಗ ಚಂದ್ರಗ್ರಹಣ ತಿಥಿ ಅಥವಾ ಅಮವಾಸೆಯ ದಿನವೇ ಕಬ್ಬಿಣ ತರಿಸಬೇಕೆಂದು ವಿಶ್ವಕರ್ಮನು ಹೇಳುವನು. ಇದು ಅಂದಿನ ಕಾಲದಲ್ಲಿ ಸಮಾಜದಲ್ಲಿ ರೂಢಿಗತವಾದ ಮೂಢನಂಬಿಕೆ, ಅಂಧಶ್ರದ್ಧೆಗಳ ವ್ಯಂಗ್ಯ ಅಥವಾ ವಿಡಂಬನೆ ಮಾತ್ರವಲ್ಲ. ಉಸಿರುಗಟ್ಟಿಸುವ ವಾತಾವರಣದಲ್ಲಿದ್ದ ಜನಸಾಮಾನ್ಯರನ್ನು ಅಂತಹ ಸಂಕೋಲೆಗಳಿಂದ ವಿಮುಕ್ತಿಗೊಳಿಸುವುದೇ ಆಗಿತ್ತು. ವಿಶ್ವಕರ್ಮನು ಇಂದು ಭಾನುವಾರ ನಾಳೆ ಸೋಮವಾರವಾಗಿದೆ. ಸಮ

ಸಮ ರಾತ್ರಿಯಲಿ ಅಮವಾಸೆಯ ದಿನ ಸುಡುಗಾಡಿಗೆ ಹೋಗಿ ಅಲ್ಲಿ ಬಿದ್ದಿರುವ ಕಬ್ಬಿಣವನ್ನು ತರಿಸಬೇಕೆಂದ. ನಾರದನು ಅಮೃತದ ಘಳಿಗೆ ತಕ್ಕೊಂಡು ಭಾನುವಾರ ಅಮವಾಸೆ ಮಾಡಿದನು. ಸಮ ಸಮ ರಾತ್ರಿಯಲಿ ಸುಡುಗಾಡಿನಲ್ಲಿ ಬಿದ್ದ ಕಬ್ಬಿಣ ತೆಗೆದುಕೊಂಡು ಬಂದು ವಿಶ್ವಕರ್ಮನ ಮುಂದೆ ಸುರಿದ. ನಂತರ ವಿಶ್ವಕರ್ಮನು ಹನ್ನೆರಡು ಆಯುಧಗಳು ಬೇಕು. ಆಯುಧವಿಲ್ಲದೆ ಕನ್ನಗತ್ತಿ ಮಾಡಲಾಗುವುದಿಲ್ಲ, ಆದ್ದರಿಂದ ನಾನೇ ಶ್ರೀಶೈಲಗಿರಿ ಪರ್ವತಕ್ಕೆ ಹೋಗಿ ಅಲ್ಲಿಯೇ ಮಾಡಿಕೊಂಡು ಬರುವೆನೆಂದ. ಅದಕ್ಕೆ ಒಪ್ಪದ ಹರ-ನಾರದರು ತಾವೇ ಆಯುಧಗಳನ್ನು ತಂದುಕೊಟ್ಟರು. ವಿಶ್ವಕರ್ಮ ಹೇಳಿದ ಎಲ್ಲಾ ವಸ್ತುಗಳನ್ನೂ ನಾರದನು ಚಾಚುತಪ್ಪದೆ ತಂದಿಟ್ಟನು. ಏಳು ಲೋಕ ಪ್ರವೇಶಿಸಿ ಏಳುಲೋಹ ತಂದು ವಿಶ್ವಕರ್ಮನಿಗೆ ನೀಡಿದಾಗ ಏಳು ಗಳಿಗೆಗಳಲ್ಲಿ ಕನ್ನಗತ್ತಿಯನ್ನು ಅಣಿಗೊಳಿಸಿದನು.

"ನಾಗಲೋಕದ ಮಣ್ಣು ದೇವಲೋಕದ ಉದಕ
ತೂಗಿ ಲೇಪಗಳವರೆದಾರು॥ ಒಲೆ ಮೊಗ
ಸಾಗಿತು ಕುಲುಮೆ ಜಗವರಿಯೆ

ಆರೂರ ಇದ್ದಿಲ ಮೂರೂರ ಕಬ್ಬಿನ ತಂದು
ಊರು ಗಾಳಿ ಪೂಜೆಯಲಿ ಒಲೆ ಮಾಡಿ॥ ವಿಶ್ವಕರ್ಮನು
ಅರಣ್ಯದೊಳಗೆ ಎಸೆದಾನು"[೬೧]

ಕನ್ನಗತ್ತಿಯನ್ನು ತಯಾರು ಮಾಡಲು ಸರ್ಪಲೋಕದ ಮಣ್ಣು, ಸ್ವರ್ಗಲೋಕದ ನೀರನ್ನು ಬಳಸಿ ಕುಲುಮೆ ತಯಾರಿಸುವುದು. ಅರಿಷಡ್ವರ್ಗಗಳೆಂಬ ಇದ್ದಿಲು ಬಳಸಿ ತ್ರಿಕರಣ ಶುದ್ಧವೆಂಬ ಕಬ್ಬಿಣ ತಂದು ಒಲೆಯನ್ನು ಹೊತ್ತಿಸಲಾಗಿದೆ. ಸೂರ್ಯ ಚಂದ್ರರು ಒಂದಾದ ವೇಳೆಯಲ್ಲಿ ತಂದು ಹೂಡಿದರು ಕುಲುಮೆಯ. ಅಷ್ಟದಿಕ್ಕುಗಳ ಒಡೆಯರನ್ನು ಬಳಸಿಕೊಂಡು ಕನ್ನಗತ್ತಿಯ ತಯಾರಿಕೆಗೆ ತೊಡಗಿ ಮುಂಭಾಗ ವಿಷ್ಣು ರೂಪದಲ್ಲಿಯೂ ಹಿಂಭಾಗ ಬ್ರಹ್ಮ ರೂಪದ ನಡುವೆ ಈಶ್ವರನ ಪ್ರತಿಬಿಂಬದಂತೆ ಕನ್ನಗತ್ತಿಯು ಆಕಾಶಮಾರ್ಗಕ್ಕೆ ಶೋಭಿಸಿತು. ನಾಗರ ಹಾವಿನ ಎಡೆಯಂತೆ ಅದು ಹೊಳೆಯುವ ಹಾಗೆ ಮಾಡಿ ಅದಕ್ಕೆ ಬಲಿ ನೀಡಿ ವೇದಮಂತ್ರಗಳನುಚ್ಚರಿಸಿ ಗಂಧಾಕ್ಷತೆಯಿಕ್ಕಿ ಬಲಗೈಯಲ್ಲಿ ಹಿಡಿದು ವಿಶ್ವಕರ್ಮನು ಶಿವನ ಬಳಿಗೆ ಬರುತ್ತಾನೆ. ಕನ್ನಗತ್ತಿಯನ್ನು ತಯಾರಿಸಿದ ನಂತರ ಮಾಡಿದ ಆಚರಣೆಯನ್ನು ಕವಿಯು ಕೆಳಗಿನಂತೆ ವಿವರಿಸಿದ್ದಾನೆ.

"ವೇದ ಶಾಸ್ತ್ರಗಳಿಂದ ಮೋಡಿ ಮಂತ್ರವ ಮಾಡಿ
ಬೇಧಕತನದಲ್ಲಿ ಅನುಮಾಡಿ॥ ಕನ್ನಗತ್ತಿಗೆ ನೈ
ವೇದ್ಯ ಬೋನಗಳಿಂದ ಬಲಗೊಂಡು

ಹಲವು ಗಂಧಾಕ್ಷತೆಯಿಕ್ಕಿ ಬಲಗೈಲಿ ಹಿಡುಕೊಂಡು
ಗೆಲುವಿಂದ ಶಿವನ ನೆನೆಯುತ್ತ॥ ಬಂದಾನು
ನಲಿದು ವಿಶ್ವಕರ್ಮ ಮುದದಿಂದ"[೬೨]

ಈ ಕಾವ್ಯದಲ್ಲಿಯೂ ಸಾಂಪ್ರದಾಯಿಕವಾಗಿ ನೆರವೇರಿಸುವ ಆಚರಣೆಯನ್ನು ಕಾಣಬಹುದಾಗಿದೆ. ಜನಪದ ಕಾವ್ಯವಾಗಿರುವುದರಿಂದ ಅನೇಕ ನಂಬಿಕೆಗಳು ಈ ಕಾವ್ಯದಲ್ಲಿ ಪ್ರಸ್ತಾಪಗೊಳ್ಳುತ್ತವೆ. ಮಂಗಳ ಕಾರ್ಯದಂತೆ ಈ ಕನ್ನಗತ್ತಿಯನ್ನು ತಯಾರಿಸಲು ಒಳ್ಳೆಯ ಗಳಿಗೆಯಲ್ಲಿ ಕಾರ್ಯಕೈಗೊಳ್ಳುವನು. ವಿಶ್ವಕರ್ಮನು ಸಿದ್ಧತೆ ನಡೆಸುವುದನ್ನು ನೋಡಿದರೆ ಮದುವೆಗೆ ಸಿದ್ಧಗೊಳಿಸಿದಂತೆ ಭಾಸವಾಗುತ್ತದೆ. ಇಲ್ಲಿ ಒಂದು ರೀತಿಯಲ್ಲಿ ವಿಶ್ವಕರ್ಮನು ಗೊಂದಲಕ್ಕೆ ಗುರಿಯಾಗಿದ್ದಾನೆ. ಏನನ್ನು ಅರಿಯದ ವಿಶ್ವಕರ್ಮನು ಕಳುವು ಮಾಡಲು ಕನ್ನಗತ್ತಿ ಮಾಡಿಕೊಡುವುದು ಅಪರಾಧವೆಂದು ತಿಳಿದಿದ್ದಾನೆ. ಆದ್ದರಿಂದ ಕಷ್ಟಸಾಧ್ಯವಾದ ವಸ್ತುಗಳೆಲ್ಲವನ್ನು ಹೇಳುತ್ತಾನೆ. ಅದನ್ನು ಶಿವನಾರದರು ತರುವಾಗಲೆಲ್ಲ ಆಶ್ಚರ್ಯ ಉಂಟಾಗುತ್ತದೆ. ಕಾಲಗತಿಯ ನಂತರ ಇವರು ದೈವೀ ಪುರುಷರು ಎಂದು ತಿಳಿಯುತ್ತದೆ. ಹರ-ನಾರದರು ಎಂದು ತಿಳಿದಾಗ ವಿಶ್ವಕರ್ಮನಿಗೆ ತನ್ನ ಕಾರ್ಯವು ಸಾರ್ಥಕವೆಂದು ಭಾವಿಸುತ್ತಾನೆ. ಕನ್ನಗತ್ತಿ ಮಾಡಿದ ನಂತರ ವಿಶ್ವಕರ್ಮನು ಕನ್ನಗತ್ತಿಯ ಮಹತ್ವದ ಬಗ್ಗೆ ಶಿವನಿಗೆ ಪರಿಚಯಿಸುವ ರೀತಿ ಓದುಗರನ್ನು ಚಕಿತಗೊಳಿಸುತ್ತದೆ. ಕನ್ನಗತ್ತಿಯ ಸಾಮರ್ಥ್ಯವನ್ನು ಪರಿಚಯಿಸುತ್ತ ಅದನ್ನು ಶಿವನ ಮುಂದಿರಿಸಿ ಕರವ ಮುಗಿದನು. ಕನ್ನಗತ್ತಿಯನ್ನು ಪರಿಚಯಿಸುವ ರೀತಿ ಕೆಳಗಿನಂತೆ ಗಮನಿಸಬಹುದು.

"ಗುಂಡು ಗುಂಡುಗಳೆಲ್ಲ ಕಂಡರಿಸಿ ಬೀಳಲಿ ಆನೆಯು
ಕೊಂಡೊಯ್ಯುವಂತೆ ಕೆಲವೀಗೆ|| ಹೋಗೆಂದು
ಕೊಂಡಾಡಿ ಬೆಸನ ಕೊಡುತಿರ್ದಾ

ಮುಡಿಗೆ ವಿಷ್ಣುವಿನ ರೂಪ ಕಡೆಗೆ ಬ್ರಹ್ಮನ ರೂಪ
ನಡುವೆ ಈಶ್ವರನ ಪ್ರತಿರೂಪ|| ಕನ್ನಗತ್ತಿಯು
ಗಗನ ಮಾರ್ಗಕ್ಕೆ ಎಸೆದಾವು"[೬೩]

ಕನ್ನಗತ್ತಿಯನ್ನು ಬಳಸಿದರೆ ಅದರಿಂದ ಉಂಟಾಗುವ ಮಹತ್ವದ ಕಾರ್ಯವನ್ನು ವಿಶ್ವಕರ್ಮನು ಭಿನ್ನವಿಸುತ್ತಾನೆ. ಕನ್ನಗತ್ತಿಯಿಂದ ಒಮ್ಮೆ ಹೊಡೆದರೆ ಗುಂಡುಗಳೆಲ್ಲ ಪುಡಿ ಪುಡಿಯಾಗುತ್ತವೆ. ಆನೆಯನ್ನು ಸಂಹರಿಸಲು ಬರುತ್ತದೆ. ಅಥವಾ ಆನೆಯ ಭಾರದ ಗುಂಡುಗಳೂ ಸಹ ಅಲುಗಾಡುವಂತೆ ಹೊಡೆಯಬಹುದೆಂದನು. ಮುಂದೆ ವಿಷ್ಣುವಿನ ರೂಪ, ಕಡೆಗೆ ಬ್ರಹ್ನ ರೂಪ, ನಡುವೆ ಶಿವನ ರೂಪವಿದೆಯೆಂದು ಅದರ ರೂಪವನ್ನು ಮತ್ತು ಸಾಮರ್ಥ್ಯವನ್ನು ಶಿವನಿಗೆ ಪರಿಚಯಿಸುವನು. ಶಿವನು ಮನಸು ಮಾಡಿದ್ದರೆ, ತನ್ನ ಮಾಯಾಶಕ್ತಿಯಿಂದ ಕನ್ನಗತ್ತಿ ತೆಗೆದುಕೊಳ್ಳಬಹುದಾಗಿತ್ತು. ಆದರೆ ಸಾಮಾನ್ಯನಾದ ವಿಶ್ವಕರ್ಮನಿಂದ ಇದನ್ನು ಮಾಡಿಸುವುದು ಸೋಜಿಗವೆನಿಸುತ್ತದೆ. ಅವರವರ ಕಾರ್ಯಗಳು ಅವರಿಗೆ ಸಿದ್ಧಿಸಿರುತ್ತವೆಂದು ಶಿವನು ತಿಳಿದವನಾಗಿದ್ದಾನೆ. 'ಕಾಯಕವೇ ಕೈಲಾಸ'ವೆಂದು ತಿಳಿದ ಶಿವನು ವಿಶ್ವಕರ್ಮನಿಂದ ಕನ್ನಗತ್ತಿ ಮಾಡಿಸುವುದರ ಮೂಲಕ ಆತನ ಕೆಲಸದ ಮಹತ್ವವನ್ನು ಸಾರಿದ್ದಾನೆ. ಅಲ್ಲದೆ ಆ ಕಾರ್ಯಕ್ಕಾಗಿ ಸಹಾಯ ಮಾಡಿದ ವಿಶ್ವಕರ್ಮನಿಗೆ ಕದ್ದ ಒಡವೆ ಬಂಗಾರಗಳೆಲ್ಲ ಇಬ್ಬರಿಗೂ ಸಮಪಾಲು ಎಂದು

ಹೇಳುವನು. ಕೆಲಸದ ಪ್ರತಿಫಲವನ್ನು ಎಲ್ಲರೂ ಅನುಭವಿಸಬೇಕೆಂಬುದು ಶಿವನ ಪಾತ್ರದ ಮೂಲಕ ಈ ಕಾವ್ಯದಲ್ಲಿ ಅಭಿವ್ಯಕ್ತಿಗೊಳ್ಳುತ್ತದೆ. ಶಿವನು ವಿಶ್ವಕರ್ಮನಿಗೆ ಹೇಳುವ ಮಾತುಗಳನ್ನು ಕೆಳಗಿನಂತೆ ಗಮನಿಸಬಹುದಾಗಿದೆ.

“ಕನ್ನಗತ್ತಿಯ ಮಾಡಿದ ಚಿನ್ನಣ್ಣ ನೀ ಕೇಳು
ಚನ್ನಾಗಿ ಕಳವು ದೊರೆತಾರೆ|| ನಾವು ಕದ್ದ
ಹೊನ್ನು ಬಂಗಾರ ಸರಿಪಾಲು

ಕತ್ತಿಯ ಮಾಡಿದ ಚಿತ್ರೀಕ ನೀ ಕೇಳು
ಚಿತ್ರಾದಿ ಕಳವು ದೊರೆತಾರೆ|| ನಾವು ತಂದ
ಹೊನ್ನು ಬಂಗಾರ ಸರಿಪಾಲು”[೬೪]

ಇಲ್ಲಿ ಶಿವನು ವಿಶ್ವಕರ್ಮನಿಗೆ ಆಮಿಷ ಒಡ್ಡುತ್ತಾನೆಂದು ತಿಳಿಯಬಾರದು. ಬದಲಾಗಿ ಸಮಾನತೆಯ ತತ್ವವನ್ನು ಮೆರೆಯುತ್ತಾನೆಂದು ಪರಿಭಾವಿಸುವುದು ಸೂಕ್ತವೆನಿಸುತ್ತದೆ. ಹೊನ್ನು, ಮಣ್ಣು, ಹೆಣ್ಣಿಗಾಗಿ ನರಳುತ್ತಿರುವ ಈ ಸಂದರ್ಭದಲ್ಲಿ ಶಿವನ ಈ ಮನಸ್ಥಿತಿಯು ನಮಗೆಲ್ಲ ಮಾದರಿಯಾಗಿದೆ. ಆದ್ದರಿಂದ ಈ ಹಿನ್ನಲೆಯಲ್ಲಿ ಗುಂಡಬ್ರಹ್ಮಯ್ಯಗಳ ಸಾಹಿತ್ಯದ ಕಥನ ತಂತ್ರವು ವಿಶಿಷ್ಟವಾದ ಆಯಾಮವನ್ನು ಪಡೆದುಕೊಂಡಿದೆ.

ಹರನು ಗಣಪತಿರಾಯನ ಅರಮನೆಗೆ ಕನ್ನಕ್ಕೆ ಹೊರಡಲು ಸಿದ್ಧನಾದನು. ನಾರದನನ್ನು ಕರೆಯಿಸಿ ಭಸಿತವ (ಭಸ್ಮ, ವಿಭೂತಿ) ತೆಗೆದುಕೊಂಡು ಬರಲು ಹೇಳಿಕಳುಹಿಸಿದನು. ಆಗ ನಾರದನು ಗೌರಮ್ಮನ ಅರಮನೆಗೆ ಬರುತ್ತಾನೆ. ಅವಳ ಅರಮನೆಯ ಸೌಂದರ್ಯವನ್ನು ವರ್ಣಿಸಲು ಯಾವ ಕವಿಗೂ ಸಾಧ್ಯವಾಗದೆಂದು ಉದ್ಗಾರವೆತ್ತುತ್ತಾನೆ. ‘ನವರತ್ನ ರನ್ನದ ಪ್ರಭೆಯಂತೆ ಯುವತಿ ಗೌರಮ್ಮ ಅರಮನೆಯ ಶೃಂಗಾರವ ವರ್ಣಿಸಬಲ್ಲ ಕವಿಯಾರು’ ಎಂದು ಕಾವ್ಯದಲ್ಲಿ ವರ್ಣಿಸಲಾಗಿದೆ. ಪಾರ್ವತಿಗೆ ಶಿವನು ‘ಶರಣರ ಮನಗಳ ಬಗೆದು ನೋಡುವೆ ಮೊರೆಹೊಕ್ಕು’ ಎಂದು ಪಾರ್ವತಿಗೆ ಸಮಾಧಾನಿಸಿ ಕನ್ನಕ್ಕೆ ಮುಂದುವರೆಯುತ್ತಾನೆ. ಕಳವು ಮಾಡುವುದಾಗಿ ಪಾರ್ವತಿಗೆ ಹೇಳಿದಾಗ ಕಳವೇಕೆ ಸ್ವಾಮಿ ಕರಕಷ್ಟವದು ಮರ್ತ್ಯದ (ಭೂಲೋಕ) ಶರಣರು ನಿಮ್ಮನ್ನು ಕಂಡು ನಗುವರೆಂದು ಹೇಳುವಳು. ದೂರದ ಓರಂಗಲ್ಲಿಗೆ ಹೋಗಿ ನಿನಗೆ ಕದ್ದು ಬಂಗಾರವ ತರುವೆನೆಂದು ಪಾರ್ವತಿಗೆ ಆಸೆ ತೋರಿಸುವನು. ಸಾಮಾನ್ಯವಾಗಿ ಸ್ತ್ರೀಯರು ಆಭರಣ ಪ್ರಿಯರು ಆದ್ದರಿಂದ ಪಾರ್ವತಿಯ ಅನುಮತಿ ಪಡೆದು ಹೋಗಲು ಆಭರಣದ ಆಸೆ ತೋರಿಸುವುದನ್ನು ಗಮನಿಸಬಹುದು. ಇಲ್ಲಿ ಪಾರ್ವತಿಯ ಉಪದೇಶವನ್ನು ಕೇಳದ ಶಿವನು ಹೆಣ್ಣಿನ ಬಗ್ಗೆ ಮಾತನಾಡುವುದನ್ನು ಕೆಳಗಿನಂತೆ ಕಾಣಬಹುದು.

“ಅಜ್ಜಿಗೆ ಬುದ್ಧಿಗಳುಂಟೆ ವಜ್ರಕೆ ವೆಜ್ಜಗಳುಂಟೆ
ಸಜ್ಜನರ ಮಾತು ಸಟೆವುಂಟೆ|| ಹೆಣ್ಣಿನ ಬುದ್ಧಿಗೆ
ಮೆಚ್ಚುವರು ಮರುಳಾರು

ಕಲ್ಲ ಮೇಲೆ ಮಳೆ ಹೊಯ್ದರೆ ಕಲ್ಲು ಸಿಡಿಗೊಂಬುದೆ
ಕಲ್ಲ ಮೇಲೆ ತಾವರೆ ಬೆಳೆವುದೆ|| ಹೆಣ್ಣಿನ
ಸೊಲ್ಲ ಮೆಚ್ಚುವರು ಮರುಳಾರು

ಅಡವೀಗೆ ಮಳೆ ಹೊಯಿದಾರೆ ಗಿಡ ಕಿಡಿಗೊಂಬುದೆ
ಮುಡಿಯ ಮೇಲೆ ಪಚ್ಚೆ ಬೆಳೆಯಾದೆ|| ಹೆಣ್ಣೆಂಬ
ನುಡಿಯ ನೆಚ್ಚುವರೆ ಮರುಳಾರು"[18]

ಇಲ್ಲಿ ಸ್ತ್ರೀಯ ವಿಚಾರಗಳಿಗೆ ಶಿವನು ವ್ಯಂಗ್ಯ ಮಾಡುವುದನ್ನು ಕಾಣಬಹುದಾಗಿದೆ. ಜನಪದರು ಹೇಳುವ 'ಹೆಣ್ಣಿನ ಬುದ್ಧಿ ಮೊಣಕಾಲು ಕೆಳಗೆ' ಎಂಬ ನುಡಿಯನ್ನು ನೆನಪಿಸುವ ರೀತಿಯಲ್ಲಿ ಈ ಪದ್ಯಗಳು ಮೂಡಿಬಂದಿವೆ. ಹನ್ನೆರಡನೆ ಶತಮಾನದಲ್ಲಿ ಸಿಕ್ಕಂತ ಸ್ತ್ರೀ ಸ್ವಾತಂತ್ರ್ಯ ಬಸವೋತ್ತರ ಕಾಲಘಟ್ಟದ ನಂತರ ದೊರೆಯಿತೆ ಎಂಬ ಅನುಮಾನಗಳು ಸುಳಿಯುತ್ತವೆ. ಬಸವಾದಿ ಶರಣರ ಕಾಲದಲ್ಲಿ ಸ್ತ್ರೀಯರನ್ನು ಗೌರವದಿಂದ ಕಾಣಲಾಗುತ್ತಿತ್ತು. ಅವರಿಗೆ ವಾಕ್‌ಸ್ವಾತಂತ್ರ್ಯವನ್ನು ನೀಡಲಾಗಿತ್ತು. ಆದ್ದರಿಂದ ಅಕ್ಕಮಹಾದೇವಿ, ಮುಕ್ತಾಯಕ್ಕ, ನೀಲಾಂಬಿಕೆ, ಸೂಳೆಸಂಕವ್ವೆ, ಆಯ್ದಕ್ಕಿ ಲಕ್ಕಮ್ಮ ಮುಂತಾದವರ ವಚನಗಳನ್ನು ಕಾಣಲಾಗಿದೆ. ಮಹಾಮನೆಯಲ್ಲಿ ಲಿಂಗಬೇಧವಿಲ್ಲದೆ ತಮ್ಮ ವಿಚಾರಗಳನ್ನು ಅಭಿವ್ಯಕ್ತಿಗೊಳಿಸಿದ್ದರು. ಇದರಿಂದ ಸರಿಯಾದುದನ್ನು ಸ್ವೀಕರಿಸುತ್ತಿದ್ದರು. ಆದರೆ ಬಸವೋತ್ತರ ನಂತರದ ಈ ಕಾವ್ಯವನ್ನು ಗಮನಿಸಿದರೆ ಸ್ತ್ರೀಗೆ ಅಷ್ಟೊಂದು ಮಾನ್ಯತೆ ನೀಡಿರಲಿಲ್ಲವೆನಿಸುತ್ತದೆ. ಆದ್ದರಿಂದ ಶಿವನು ಹೆಣ್ಣಿನ ಮಾತಿಗೆ ಯಾರು ಮರುಳಾರು ಎಂದು ಪಾರ್ವತಿಗೆ ವಿವಿಧ ರೀತಿಯಲ್ಲಿ ಹೇಳುವುದನ್ನು ಕಾಣಬಹುದು. ಸ್ತ್ರೀ ಸಹಜವಾದ ಎಚ್ಚರಿಕೆಯ ಮಾತುಗಳನ್ನು ಪಾರ್ವತಿಯು ಹೇಳುವಳು. ಕದ್ದರೆ ಕೈ ಕೊಯಿದಾರು, ಕಾದ ಜಲದಲ್ಲಿ ತೆಗೆದಾರು, ಗಂಟಲ ತೆಗೆದಾರು ಎಂದು ಎಚ್ಚರಿಕೆಯ ಮಾತುಗಳನ್ನು ಆಡುತ್ತಾಳೆ. ಹೆಣ್ಣಿನ ಮಾತನ್ನವಲಂಬಿಸಿ ಯಾವುದೇ ಸಮಾಜವೂ ತನ್ನ ಕಾರ್ಯಗಳನ್ನು ಮಾಡುವುದಿಲ್ಲ. ಅದೂ ಅಲ್ಲದೆ ನಿಜವಾದ ವ್ಯಕ್ತಿತ್ವಗಳು ರೂಪಗೊಂಡಿದ್ದು ಹೆಣ್ಣಿನ ಸ್ವರೂಪದಲ್ಲಿಯಾದರೂ ಅವಳನ್ನು ವಿಡಂಬನಾತ್ಮಕವಾಗಿಯೇ ಚಿತ್ರಿಸಲಾಗಿದೆ. ಶಿವನ ಮಾತನ್ನು ಕೇಳಿದ ಪಾರ್ವತಿಯು ಕೊನೆಗೆ ಜಯಿಸಿ ಬರುವಂತೆ ಮಂಗಳಾರತಿ ಬೆಳಗುವಳು. ಏಳು ಸುತ್ತಿನ ಅರಮನೆಯನ್ನು ಕಳವು ಮಾಡುವುದು ಅಷ್ಟೊಂದು ಸುಲಭವಲ್ಲ. ಆದ್ದರಿಂದ ಶಕ್ತಿಗಿಂತಲೂ ಯುಕ್ತಿ ಮುಖ್ಯವಾಗಿದೆ. ಹರ-ನಾರದರು ಭೂಮಿಗೆ ಬರುವುದನ್ನು ಭೂಮಿ ಮತ್ತು ಸ್ವರ್ಗಲೋಕದ ನಡುವಿನ ಬಾಂದವ್ಯವನ್ನು ಚಿತ್ರಿಸಲಾಗಿದೆ. ಹರ-ನಾರದರು ದಾರಿಯಲ್ಲಿ ಬರುವಾಗ ನಾದರನು ಶಿವನಿಗೆ ಕೆಳಗಿನಂತೆ ಹೇಳುವನು.

"ಅನ್ಯರ ಮನೆಯ ಸೊಮ್ಮುಗಳಿಲ್ಲದೆ ಸುಮ್ಮನೆಯವರಿಗೆ
ಬಂಧನ ಬರುವುದೆ|| ಸ್ವಾಮಿಯೆಂದು
ನಾರದ ಶಿವಗೆ ನುಡಿದಾನು

ಹೊಕ್ಕರೆ ಅರಮನೆಯ ಕಟ್ಟುವರು ಎಡಗೈಯ
ಮೆಟ್ಟುವರು ನಮ್ಮ ಜಲದಿಯಲಿ|| ಕಂಭಕ್ಕೆ
ಕಟ್ಟಿ ಕೊಳ್ಳುವರು ಧರೆಯೊಳಗೆ"[೬೬]

ನಾರದನು ಶಿವನಿಗೆ ಬೇರೆಯವರು ಬಂಧನಕ್ಕೊಳಗಾಗುವ ರೀತಿಯನ್ನು ನಾವೆ ತಂದುಕೊಳ್ಳುತ್ತಿದ್ದೇವೆ. ಮಾತ್ರವಲ್ಲ ನಮ್ಮ ಅಹಂಕಾರದಿಂದ ನಾವೇ ಮಾಡಿಕೊಳ್ಳುವ ಸ್ವಯಂ ಅಪರಾಧವಾಗಿದೆ. ಹಗ್ಗವನ್ನು ಕೊಟ್ಟು ಕೈಕಟ್ಟಿಸಿಕೊಳ್ಳುವ ಕೆಲಸದಂತಾದೀತು ಎಂದು ನಾರದನು ತಿಳಿಯ ಹೇಳುವನು. ಅರಮನೆಯ ಪ್ರವೇಶ ಅಷ್ಟೊಂದು ಸುಲಭವಾದುದಲ್ಲ. ಅಲ್ಲದೆ ಸಿಕ್ಕಿಕೊಂಡರೆ ಎಡಮುರಿ ಕಟ್ಟುವುದು, ನೀರಿನಲ್ಲಿ ಮುಳುಗಿಸುವುದು, ಕಂಬಕ್ಕೆ ಕಟ್ಟಿ ಥಳಿತ ಮಾಡುವುದು, ತೆಂಗಿನ ಹಗ್ಗದಲ್ಲಿ ಬಿಗಿಯುವುದು ಮುಂತಾದ ಶಿಕ್ಷೆಗೊಳಪಡಬೇಕಾದೀತು. ಕಷ್ಟಪರಂಪರೆಯನ್ನು ನಾವಾಗಿಯೇ ತಂದುಕೊಂಡಂತೆ ಆಗುತ್ತದೆ. ಇದು ಬೇಡವೆಂಬ ಅಸಮಾಧಾನದ ಮಾತನ್ನು ನಾರದನು ಹೇಳುತ್ತಾನೆ. ಅದಕ್ಕೆ ಶಿವನು ಅಭಯವ ನೀಡುತ್ತಾನೆ. ನಾರದನು ಈ ಮೊದಲು ಗುಂಡಬ್ರಹ್ಮಯ್ಯಗಳನ್ನು ಕಂಡಿದ್ದರಿಂದ 'ಸೋಲದು ಶರಣರ ಭಕ್ತಿ ದೃಢವೆಂದ. ಅವರ ಮನಸ್ಸನ್ನು ಹೊಕ್ಕು ಅವರನ್ನು ಮತ್ತಷ್ಟು ಪರಿಶುದ್ಧಗೊಳಿಸುವುದು ಶಿವನಿಗೆ ಮುಖ್ಯ. ಮಾತ್ರವಲ್ಲದೆ ಅವರು ಲೌಕಿಕ ವ್ಯಾಪಾರಗಳಿಂದ ಸಂಪೂರ್ಣವಾಗಿ ಮುಕ್ತರಾಗುವತ್ತ ಆಧ್ಯಾತ್ಮಿಕ ಸಾಧನೆಗೆ ಬೇಕಾದ ಪೂರ್ವಸಿದ್ಧತೆಯನ್ನು ಮಾಡಿಕೊಡುವುದು ಪ್ರಮುಖವಾಗಿದೆ.

ಇಲ್ಲಿ ಶಿವನೆ ಪರೀಕ್ಷೆಗೊಳಪಡಿಸುವುದರಿಂದ ಶರಣರ ಬಗ್ಗೆ ಅಪಾರವಾದ ಪ್ರೀತಿಯನ್ನು ಇಟ್ಟುಕೊಂಡೆ ಅವರ ಪರಿಶೀಲನೆಗೆ ಶಿವ ಒಳಪಡಿಸುತ್ತಾನೆ. ಶಿವ-ನಾರದರು ಆಕಾಶಮಾರ್ಗವಾಗಿ ಬರುವಾಗ ನಾರದನು ಭೂಪ್ರವೇಶ ಮಾಡಬೇಕು. ಆಕಾಶಮಾರ್ಗವಾಗಿ ನಡೆದರೆ 'ಜಗದೀಶ' ಎಂದು ಕರೆಯುವರೆಂಬ ಕುಹಕದ ನುಡಿಗಳನ್ನಾಡುತ್ತಾರೆ. ಭೂಪ್ರವೇಶದ ಮೂಲಕ ಆಧ್ಯಾತ್ಮಿಕತೆಯ ಬೆಳಕು ಭೂಮಿಯಲ್ಲಿ ಪಸರಿಸುವಂತೆ ಮಾಡುವುದು, ಜನಸಾಮಾನ್ಯರ ಮನಸ್ಸನ್ನು ಪರಿಶುದ್ಧಗೊಳಿಸುವುದು ಅತಿಮುಖ್ಯವಾಗುತ್ತದೆ. ಹರ-ನಾರದರು ಕನ್ನವಿಕ್ಕುವಾಗ ಭೂಮಿಯು ಕಳವಳಿಸಿತು. ಅಚಲ ಗುರಿ ಇಟ್ಟುಕೊಂಡಿದ್ದ ಹರ-ನಾರದರು ಮೊದಲು ಕಂಚಿನ ಕೋಟೆಯ ಕನ್ನಿವಿಕ್ಕುವರು. ನಂತರ ಉಕ್ಕಿನ ಕೋಟೆಗೆ ಲೋಕವು ಉರಿಯುವಂತೆ ಕನ್ನವಿಕ್ಕುವರು. ಮೂರನೆಯದಾಗಿ ಗಾಜಿನ ಕೋಟೆಯನ್ನು ಒಡೆಯುವರು. ಮಾಯಾದ ನಿದ್ರೆ ಬರಿಸಿದಕ್ಕಾಗಿ ರಾಯನ ಪುರದ ಜನರೆಲ್ಲ ಆಯುಷ್ಯವಾದಂತೆ, ಮರದಂತೆ ಮಲಗಿದ್ದರು. ಏಳು ಕೋಟೆಯನ್ನು ದಾಟಿ ಬಂದು ಅರಮನೆಯ ಜನರೆಲ್ಲರೂ ಮಂಕುಕವಿದ ನಿದ್ರೆಯಲ್ಲಿ ಮುಳುಗುವಂತೆ ಮಾಡಿದರು. ಇದು ಒಂದು ರೀತಿಯ ಪವಾಡವೆನಿಸುವುದು.

"ಮಾಯಾದ ನಿದ್ರೆಗಳು ಆಯದಿಂದಲಿ ತಳಿಯೆ
ರಾಯನಪುರದ ಜನರೆಲ್ಲ|| ಮಲಗಿದರು
ಆಯುಷ್ಯವಾದಂತೆ ಮರದಂತೆ

ಪಟ್ಟಣದೊಳು ತಿರುಗುವ ಪಹರೆ ಹರೆಕಾಳೆ
ತೊಟ್ಟೆಂದು ಬಾಯ ತೆಗೆಯಲು|| ತಳವರರು ಮತಿ
ನೆಟ್ಟು ಮಂಕಾಗಿ ಮಲಗಿದರು"[೬೭]

ಶಿವನು ಮಾಯೆಯಿಂದ ಎಲ್ಲರಿಗೂ ಗಾಢವಾದ ನಿದ್ರಾದೇವಿಯ ಆಲಿಂಗನದಲ್ಲಿರುವಂತೆ ಮಾಡುತ್ತಾನೆ. ಇವರು ಕಳ್ಳತನಕ್ಕೆ ಬಂದದ್ದು ಯಾರಿಗೂ ಗೊತ್ತಾಗಬಾರದು. ಶಿವನಾರದರು ಸಾಮಾನ್ಯ ಕಳ್ಳರಂತೆ ಬರದೆ ಅವರನ್ನು ಗಾಢಾಂಧಕಾರದಲ್ಲಿ ಮುಳುಗಿಸಿ ಅವರ ಮನಸ್ಸುಗಳು ಜಾಗೃತಗೊಳ್ಳದಂತೆ ಎಚ್ಚರವಹಿಸಿ ಅರಮನೆಯ ಕನ್ನಕ್ಕೆ ಸಕಲ ಸಿದ್ಧತೆ ಮಾಡುತ್ತಾರೆ. ರಾಯನ ಅರಮನೆಯವರೆಲ್ಲ ಮಲಗಿದ್ದರೆ ಅವರೆಲ್ಲರ ಆಯಸ್ಸು ಮುಕ್ತಾಯವಾಗಿ ಜೀವಂತ ಶವೋಪಾದಿಯಲ್ಲಿ ನಿದ್ರಾವಸ್ಥೆಯಲ್ಲಿರುತ್ತಾರೆ. ಇದು ಶಿವನಾರದರು ಕಳ್ಳತನಕ್ಕೆ ರೂಪಿಸಿದ ತಂತ್ರ ಮಾತ್ರವಾಗಿರದೆ ಕಾವ್ಯದ ತಂತ್ರವಾಗಿರುವುದೂ ವಿಶೇಷವಾಗಿದೆ. ಮಾಯದ ನಿದ್ರೆಯನ್ನು ಬರಿಸಿದ ಹರ-ನಾರದರಿಗೆ ಯಾವುದೇ ರೀತಿಯ ಭಯ ಅವರಲ್ಲಿಲ್ಲ. ಆದ್ದರಿಂದ ಆ ಸಂದರ್ಭದಲ್ಲಿ ಅವರು ಒಬ್ಬರ ಕೈಯನ್ನು ಮತ್ತೊಬ್ಬರಿಗೆ ಕಟ್ಟುವರು. ಒಬ್ಬೊಬ್ಬರ ಗಡ್ಡ, ಜಡೆಗಳನ್ನು ಗಂಟುಕಟ್ಟಿ ಅಡ್ಡದಿಡ್ಡಾಗಿ ಮಲಗಿಸಿ ಚೇಷ್ಟೆ ಮಾಡುವರು. ಕಳುವಿಗೆ ಬರುವುದು ಇವರಿಗೆ ಒಂದು ರೀತಿಯಲ್ಲಿ ಹೊಸ ಅನುಭವವಾಗಿದೆ. ಕೋಟೆಯನ್ನು ನಾಶಪಡಿಸುವ ಸಂದರ್ಭದಲ್ಲಿ ಇದ್ದ ಭಯ ಈ ಸಂದರ್ಭದಲ್ಲಿ ಇಲ್ಲ. ಇಲ್ಲಿ ಹರ-ನಾರದರು ಮಾಯಾಸಕ್ತಿಯನ್ನು ಮೆರೆದಿದ್ದಾರೆ. ಇದಾದ ನಂತರದಲ್ಲಿ ಅರಮನೆಯ ಪ್ರವೇಶಿಸಲು ಕಪ್ಪುಗತ್ತಲು ಕವಿದಿದೆ. ಹೋಗಲು ಅವಕಾಶವಿಲ್ಲದಂತಾದ್ದರಿಂದ ಒಂದು ಪಂಜನ್ನು ಒತ್ತಿಸಿ ಅದರ ಮಾರ್ಗವಾಗಿ ಸಾಗಲು ಅನುವು ಮಾಡಿಕೊಡೆಂದು ಶಿವ ನಾರದಗೆ ಹೇಳುತ್ತಾನೆ. ಅಲ್ಲಿಯೂ ಇವರಿಬ್ಬರ ವಿನೋದಗಳು ನಡೆದಾಗ ಕಳ್ಳತನಕ್ಕಿರಬೇಕಾದ ಗಾಂಭೀರ್ಯವನ್ನು ಕುರಿತು ಶಿವನು ಈ ಕೆಳಗಿನಂತೆ ಹೇಳುತ್ತಾನೆ.

"ನಗಬೇಡ ನಾರಂದ ಬಗೆಯಯ್ಯ ಕನ್ನವ
ತೆಗೆ ನಿನ್ನ ಭುಜದ ಅಳತೆಗೆ|| ನಾರಂದ
ಹೋಗು ನಿನ್ನ ಶಿವನ ನೆನೆಯುತ್ತ"[೬೮]

ಎಂದು ನಾರದನಿಗೆ ಹೇಳಿದಾಗ ಅದರಂತೆ ಕಾರ್ಯನಿರ್ವಹಿಸಲು ನಾರದನು ಮುಂದಾಗುತ್ತಾನೆ. ಇದರಿಂದ ಕನ್ನ ಮಾಡಲು ಕೂಡ ಗಾಂಭೀರ್ಯದ ಅಗತ್ಯವನ್ನು ತಾವು ಅವರಿಗೆ ಸಿಕ್ಕಿ ಹಾಕಿಕೊಳ್ಳದಂತೆ ತಂತ್ರಗಳನ್ನು ರೂಪಿಸಿ ಹೊರಡುವರು. ಕಳ್ಳತನ ಮಾಡಲು ನಿರ್ದಿಷ್ಟವಾದ ರೂಪರೇಷೆಗಳನ್ನು ಹಾಕಿಕೊಂಡು ಹೊರಡುತ್ತಾರೆ. ಈ ಸಂದರ್ಭದಲ್ಲಿ ಶಿವನಕೌಶಲ್ಯ, ಕಳ್ಳತನ ಮಾಡಲು ಬೇಕಾದ ನಿಪುಣತೆ, ಎಚ್ಚರಿಕೆಯನ್ನು ಮೆಚ್ಚಲೇಬೇಕು. ರಾಣಿಯ ಅರಮನೆ ಪ್ರವೇಶ ಮಾಡಿದಾಗ ವಿವಿಧ ಬಗೆಯ ಹೆಣ್ಣುಗಳ ಮಲಗುವಿಕೆ, ಮುಂದೆ ಗಣಪತಿರಾಯನು ಮಲಗುವ ಶಯ್ಯಾಗೃಹ (ಮಲಗುವ ಕೋಣೆ) ಕಾಣುತ್ತದೆ. ಇಲ್ಲಿ ಪ್ರತಿಮೆ, ಉಪಮೆ, ರೂಪಕಗಳ ಮೂಲಕ ಅರಮನೆ ಸೌಂದರ್ಯ, ರಾಮಾಯಿಯ ವರ್ಣನೆಯನ್ನು ಕಾವ್ಯದಲ್ಲಿ

ಅಭಿವ್ಯಕ್ತಗೊಳಿಸಲಾಗಿದೆ. ಉಳಿದ ಹೆಣ್ಣುಗಳ ಬಗ್ಗೆ ವರ್ಣಿಸುವಾಗ ರಾಮಾಯಿಯ ವರ್ಣನೆಯ ಶೃಂಗಾರರಸ ಕಡಲಾಗಿ ವರ್ಧಿಸಿದೆ. ಉದಾಹರಣೆಗೆ ಕೆಳಗಿನ ಪದ್ಯಗಳ ಮೂಲಕ ಗಮನಿಸಬಹುದಾಗಿದೆ.

"ಇಂಗಡಲ ಸಿರಿಯಂತೆ ಸಂಗಡನ ಸತಿಯಂತೆ
ಕಂಗಳ ಜಡನು ಹರಿದಂತೆ|| ರಾಮಾಯಿ
ಶೃಂಗಾರ ಮುಖದ ಚಲುವೀಕೆ

ಸಂಪಿಗೆ ಹಾಸಿನ ಮೇಲೆ ಕಂಪಿಯ ನೋಡು ನಾರಂದ
ಸೊಪುಳ್ಳ ತಾವರೆ ಹೊಳೆವಂತೆ|| ರಾಮಾಯಿ
ಕೆಂಪು ಸೂರ್ಯ ಪ್ರಭೆಯಂತೆ

ಸತಿಯರಿಗೆ ಸತಿಯವಳು ಮುಖ ಹೊನ್ನ ಪದ್ಮವು
ಅತಿಭಾವ ಇವಳ ಮುಖದಲ್ಲಿ|| ಕಂಗಳ ನೋಟ
ಯತಿಗಳ ತಪವ ಕೆಡಿಸಿದವು"[೬೯]

ರಾಮಾಯಿಯ ಸೌಂದರ್ಯವು ಯತಿಗಳ ತಪಸ್ಸನ್ನು ಕೆಡಿಸುವಂತೆ ಇತ್ತು ಎಂದು ಹೇಳಿರುವುದು ಅತಿಶಯೋಕ್ತಿಯೆನಿಸಿದರೂ ಅವಳ ಸೌಂದರ್ಯಕ್ಕೆ ಯಾರೂ ಸರಿಸಾಟಿಯಿರಲಿಲ್ಲವೆನಿಸುತ್ತದೆ. ರಾಮಾಯಿಯ ಮೂಗು ಸಂಪಿಗೆಯ ಎಸಳಂತೆ, ತಾವರೆಯು ಹೊಳೆವಂತೆ, ಕೆಂಪು ಸೂರ್ಯನ ಪ್ರಭೆಯಂತೆ, ಹರಿಣಾಕ್ಷಿಯಂತೆ, ತೋಳು ತೊಡೆಗಳೆರಡು ಹೊನ್ನ ಬಾಳೆಯ ಕಂಬದಂತೆ ಹೀಗೆ ಉಪಮ ಅಲಂಕಾರವನ್ನು ಪುಂಖಾನುಪುಂಖವಾಗಿ ಈ ಕಾವ್ಯದಲ್ಲಿ ನಿರೂಪಿಸಲಾಗಿದೆ. ಅದೇ ರೀತಿ ರೂಪಕ ಅಲಂಕಾರಗಳನ್ನು ಕಾಣಬಹುದಾಗಿದೆ. ಉದಾಹರಣೆಗೆ ರಾಮಾಯಿಯ ಮುಖ ಬಾಲ ಚಂದಿರನ ಮುಖ, ಚಂದ್ರಮನಿಗೊಲಿದ ರವಿಯೊಳು, ತೊಡೆ ಬಾಳೆಯ ಕಂಬ ಹೀಗೆ ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ಅದರಲ್ಲೂ ರಾಮಾಯಿಯು ಮಲಗಿದ ಸಂದರ್ಭದಲ್ಲಿ ಉಪಮ, ರೂಪಕ, ಶೃಂಗಾರ ರಸವನ್ನು ಕಾಣಬಹುದಾಗಿದೆ. ಶಿವನಿಗೆ ರಾಮಾಯಿಯ ಸೌಂದರ್ಯವನ್ನು ಕಂಡು ಭೂಲೋಕದಲ್ಲಿಯೂ ಇಂತಹ ಸುಂದರಿಯರು ಇದ್ದಾರೆಯೆ? ಎಂಬ ಪ್ರಶ್ನೆ ಕಾಡುತ್ತದೆ. ರಾಮಾಯಿಯನ್ನು ಮುಟ್ಟುವ ಆಸೆಯಾಗುತ್ತದೆ. ಆಗ ನಾರದನು ಶಿವನಿಗೆ ಕೆಳಗಿನಂತೆ ಎಚ್ಚರಿಸುತ್ತಾನೆ.

"ಪರನಾರಿ ಪರಸ್ತ್ರೀಯ ಮೈ ಮುಟ್ಟಬಾರದು
ಮುಟ್ಟಿದರೆ ಪಾಪ ಬರುವುದು|| ನಾರಂದ
ಶಿವಗೆ ನುಡಿದನವಳ ಮಾತ

ನೋಡಿದರೆ ಕರ್ಮವು ನುಡಿಸಿದರೆರಡು ಕರ್ಮವು
ಮುಟ್ಟಿದರೆ ಕರ್ಮ ಸರಿಪಾಲು|| ಶಿವರಾಯ
ಮುಟ್ಟಬಾರದು ಪರಸತಿಯರ"[೭೦]

ಮಾನವ ಸಹಜವಾದ ಆಸೆಯನ್ನು ಶಿವನ ಮೂಲಕ ವಿಶ್ಲೇಷಣೆ ಮಾಡಲಾಗಿದೆ. ಶಿವನಿಗೆ ರಾಮಾಯಿಯ ಅರಮನೆ ಬಿಟ್ಟು ಹೊರಡಲು ಮನಸ್ಸಿಲ್ಲ. ಅಲ್ಲದೆ ನಾರದನ ಎಚ್ಚರಿಕೆಯ ಮಾತುಗಳನ್ನು ಶಿವನು ಕೇಳಲು ಸಿದ್ಧನಿಲ್ಲ. ಕರ್ಮಕ್ಕೆ ಬಂದಿರುವುದರಿಂದ ಧರ್ಮದ ಮಾತು ಬೇಡವೆಂದು ಹೇಳುವನು. ಅದಕ್ಕೆ ನಾರದನು 'ಮಕ್ಕಳ ಕಂಡಂತೆ ಎತ್ತಿ ಮುದ್ದಾಡುವರು ಮುಕ್ಕಣ್ಣ ನಿಮಗೆ ತರವಲ್ಲ. ಮೂರು ಲೋಕದ ಶಿವಭಕ್ತರು ನಿಮ್ಮನ್ನು ಕಂಡು ನಗುವರು' ಎಂದು ಮತ್ತೆ ಉಪದೇಶ ಮಾಡುವನು. ಕಾಶಿಗೆ ಹೋಗಿ ಕರ್ಮ ಕಳಕೊಂಡರಾಯಿತು ಎಂದು ಶಿವನ ಪ್ರತ್ಯುತ್ತರವಾಗಿದೆ. ಈ ಸಂದರ್ಭದ ಮೂಲಕ ಪರಸ್ತ್ರೀಯರನ್ನು ನೋಡಿದರೆ ಕರ್ಮದ ಫಲ ದೊರಕುವುದು ಎಂದು ಶಿವನ ಪಾತ್ರದ ಮೂಲಕ ವಿವರಿಸಲಾಗಿದೆ. ಸ್ತ್ರೀಯರನ್ನು ಕದ್ದು ನೋಡುವುದು ಅಥವಾ ಮುಟ್ಟುವುದು ಅಪರಾಧವೆಂಬ ಸಂದೇಶವನ್ನು ಜನರಿಗೆ ನಾರದನು ಶಿವನ ಮೂಲಕ ಹೇಳಿದಂತಿದೆ. ಶಿವನಿಗೆ ರಾಮಾಯಿಯನ್ನು ಬಿಟ್ಟು ಬರಲು ಮನಸ್ಸಿಲ್ಲದಿದ್ದರೂ ಅಲ್ಲಿ ಚಿತ್ರಶಾಲೆಗೆ ಬರುವನು. ಅಲ್ಲಿ ಶರಣ ಧರ್ಮವನ್ನು ಪುನರುಜ್ಜೀವನಗೊಳಿಸಿದ ಶೈವನಿಷ್ಠೆ, ಶಿವನಿಷ್ಠೆ ಪ್ರಕಟಿಸುವ ಚಿತ್ರಶಾಲೆಯನ್ನು ಹರನಾರದರು ನೋಡಿದೊಡನೆ ವಿಸ್ಮಯರಾದರು. ಅಲ್ಲಿ ಪಾರ್ವತಿಯ ಪಟವಿರುವುದನ್ನು ನಾರದನು ಶಿವನಿಗೆ ತೋರಿಸುತ್ತಾನೆ. ಮುಂದೆ ಶಿವಶರಣರ ಪಟಗಳನ್ನು ತೋರಿಸುತ್ತ ಸಾಗುವನು. ಆಗ ಶಿವನು ಕೆಳಗಿನಂತೆ ಹೇಳುವನು.

"ಚಿತ್ರವ ನೋಡುವರೆ ಹತ್ತೆಂಟು ದಿನ ಬೇಕು
ಕಟ್ಟು ನಾರಂದ ನವರತ್ನ|| ಮಾಣಿಕವ
ಕಟ್ಟು ನಮಗೊಂದು ಹೊರೆ ಮಾಡಿ"[೨೮]

ಚಿತ್ರವನ್ನು ನೋಡುತ್ತ ಹೋದರೆ ಸುಮಾರು ಹತ್ತು ದಿನಗಳು ಬೇಕಾಗುತ್ತವೆ. ಮೊದಲು ಬಂಗಾರದ ಗಂಟುಕಟ್ಟು ಮುಂದೆ ಸಾಗೋಣವೆನ್ನುವನು. ನಾರದನು ಪರಿಚಯಿಸುವ ಚಿತ್ರಣಶಾಲೆಯ ವರ್ಣನೆಯು "ಚದುರಿ ಹೋದ ಶರಣರ ಚಿತ್ರಗಳಿಂದ ಅಲಂಕೃತವಾಗಿ ಆವೃತವಾಗಿತ್ತು ಭಗೀರಥನ ಪ್ರಯತ್ನದ ಮೂಲಕ ಶಿವನ ಜಡೆಯಿಂದ ಭೂಮಿಗಿಳಿದ ಗಂಗೆಯ ಚಿತ್ರಪಟವಿದೆ. ನುಲಿಯ ಚಂದಯ್ಯ, ಹೆಂಡದ ಮಾರಯ್ಯ, ಭಕ್ತಶಿರಿಯಾಳನ ತಂದೆತಾಯಿಗಳಾದ ಸಿರಿಯಾಳ ಚಂಗಳೆಯರ ಚಿತ್ರ, ಏಕಾಂತರಾಮಯ್ಯ, ಸಿಂಧುಬಲ್ಲಾಳನ ಹೆಂಡತಿ, ಸತ್ಯಕ್ಕ, ಮುಕ್ತಾಯಕ್ಕ, ಅಕ್ಕಮಹಾದೇವಿ, ಅಮರವ್ವೆ, ಚಂಗಳದೇವಿ, ಮಂಗಾಯಕ್ಕ, ಅಮ್ಮವ್ವೆ, ಕೆಂಬಾವಿ ಬೋಗಣ್ಣ, ಮಡಿವಾಳ ಮಾಚಯ್ಯ ಮುಂತಾದ ಇಪ್ಪತ್ಮೂರು ಮಂದಿ ಶಿವಶರಣರ ಚಿತ್ರಪಟಗಳಿವೆ. ಇವುಗಳು ನಮಗೆ ತಿಳಿಯಪಡಿಸುವುದೆಂದರೆ, ಅರಮನೆಯ ರಾಜಪ್ರಭುತ್ವ ಮತ್ತು ಶರಣಧರ್ಮದ ಧಾರ್ಮಿಕ ಪ್ರಭುತ್ವದ ಸಂಗಮವಾಗಿರುವುದು. ಅರಮನೆ ಗುರುಮನೆಗಳಿಗಿಂತಲೂ ಸಾಮಾಜಿಕ ಪ್ರಭಾವ ಬೀರಿದ ಶರಣರ ಮಹಾಮನೆ ಅಂದಿನ ಯುಗದಲ್ಲಿ ಮಾಡಿದ ಪ್ರಭಾವದ ಸ್ವರೂಪವನ್ನು ಈ ಕಾವ್ಯ ಪರಿಚಯಿಸುತ್ತದೆ. ಕಂಡುಬರುವ ಶರಣರೆಲ್ಲರನ್ನು ಈ ಕೃತಿಯಲ್ಲಿ 'ಶರಣ ಮುಕ್ತರು' ಎಂದು ಹೇಳಿದೆ. ಇಲ್ಲಿನ ಭವ ಬಂಧನಗಳಿಂದ ಮುಕ್ತರಾಗುವುದೇ ಶರಣ ಮುಕ್ತರು. ಈ ಶರಣರು ಗಣಪತಿರಾಯನ ಅರಮನೆಯ

ಚಿತ್ರಶಾಲೆಯ ಗೋಡೆಗಳ ಮೇಲೆ ವಿರಾಜಮಾನವಾಗಿ ಕಂಗೊಳಿಸುತ್ತಿದ್ದರು. ಅವರ ಒಂದೊಂದು ಚಿತ್ರಪಟವು ಶರಣರ ತತ್ವ-ಸಿದ್ಧಾಂತಗಳನ್ನು ಸಾರುವಂತೆ ಭಾಸವಾಗುತ್ತವೆ.

ಈ ಚಿತ್ರಪಟಗಳು ಕರ್ನಾಟಕಾಂಧ್ರದ ಸಂಬಂಧದ ದ್ಯೋತಕವೂ ಹೌದು. ಈ ಚಿತ್ರಗಳನ್ನು ನೋಡುತ್ತ ಕುಳಿತರೆ ನಾವು ಬಂದ ಕಾರ್ಯವನ್ನು ಮರೆಯಬೇಕಾದೀತು ಎಂದು ಶಿವನು ನಾರದನನ್ನು ಎಚ್ಚರಿಸುವನು. ಈ ಕಾವ್ಯದುದ್ದಕ್ಕೂ ಹರ-ನಾರದರು ತಮ್ಮನ್ನು ಒಬ್ಬರನ್ನೊಬ್ಬರು ಎಚ್ಚರಿಸುವುದನ್ನು ಕಾಣಬಹುದು. ಈ ಎಚ್ಚರಿಕೆಯ ಮಾತುಗಳು ನಮಗೆ ಸಮಯ ಪ್ರಜ್ಞೆಯನ್ನು ತಿಳಿಸುತ್ತದೆ. ಇಲ್ಲಿ ದೈವತ್ವದ ಕಳುವಿನ ಮೂಲಕ ಭೂಲೋಕದ ಜನತೆಗೆ ಎಚ್ಚರಿಕೆಯ ಸಂದೇಶ ನೀಡುವುದು ಕವಿಗೆ ಮುಖ್ಯವೆನಿಸಿದೆ. ದೈವವೇ ಕಳವು ಮಾಡಲು ಎಷ್ಟೊಂದು ಕಷ್ಟಪಡುತ್ತದೆ ಎಂಬುದು ತಿಳಿಸುವ ಮೂಲಕ ಕಳುವಿನ ಕರಕಷ್ಟವನ್ನು ವಿವರಿಸುತ್ತ ಹೋಗುತ್ತದೆ. ಶಿವನ ಮನದಲ್ಲಿ ಶಿವನು ನೆಲೆಸಿರುವುದರಿಂದ ಅವರೆಲ್ಲರ ಚಿತ್ರಪಟಗಳನ್ನು ನೋಡುವ ಶಿವಶರಣರು ನೆಲೆಸಿರುವುದರಿಂದ ಮತ್ತು ಶಿವಶರಣರ ಮನದಲ್ಲಿ ಶಿವನು ನೆಲೆಸಿರುವುದರಿಂದ ಅವರೆಲ್ಲರ ಚಿತ್ರಪಟಗಳನ್ನು ನೋಡುವ ಅಗತ್ಯವಿಲ್ಲಯೆನಿಸುತ್ತದೆ. ಈ ಹಿಂದೆ ಪ್ರಸ್ತಾಪಿಸಿರುವಂತೆ ಶರಣಧರ್ಮಕ್ಕೆ ಮಾರುಹೋದ ಗಣಪತಿರಾಯ ಶರಣರ ಧರ್ಮೋತ್ಥಾನಕ್ಕಾಗಿ ಮನಸ್ಸು ಮಾಡಿರುವುದನ್ನು ಗುಂಡಬ್ರಹ್ಮಯ್ಯಗಳ ಸಾಹಿತ್ಯವು ದಾಖಲು ಮಾಡುತ್ತದೆ. ಕಳುವಿನ ಸಮಯದಲ್ಲಿ ನಾರದನು ಗುಂಡಬ್ರಹ್ಮಯ್ಯಗಳ ಸಾಹಿತ್ಯವು ದೇವರ ಮಂದಿರಕ್ಕೆ ನೈವೇದ್ಯ ಮಾಡಿ ಶಿವನಿಂದ ಒಪ್ಪಿಗೆ ಪಡೆದು ಮುಂದೆ ಬಂದು ಹೊನ್ನಿನ ರಾಶಿಯನ್ನೆಲ್ಲ ಹೊರೆ ಮಾಡಿ ಕಟ್ಟಿ ಕಟ್ಟಿ ಬಿಸಾಕುತ್ತಾನೆ. ಮನುಷ್ಯನ ಮನಸ್ಸಿನ ದುರಾಸೆಯ ಪ್ರತೀಕವೆಂಬಂತೆ ಶಿವನು ಕೆಳಗಿನಂತೆ ನುಡಿಯುತ್ತಾನೆ.

"ದಿಂಡು ದಿಂಡಿನ ಸೀರೆ ಗಿಂಡಿ ಹರಿವಾಣವ
ಕೊಂಡು ಹೋಗುವರೆ ಅಳವಲ್ಲ|| ನಾರಂದ
ಬಂಡಿಯ ತರದೆ ಮರತೇವೊ

ಬಂಡಿಯ ಕಳವೀಗೆ ತರವಲ್ಲ ಬಡವನಿಗೆ ಹೋರಾಟವಲ್ಲ
ಕೊಂಡಗವಲ್ಲ ಅರಸಿಗೆ|| ಶಿವರಾಯ
ಬಂಡಿ ಕಳವಿಗೆ ತರವಲ್ಲ"[೨೨]

ಶಿವನು ತಾವು ಕದ್ದಿರುವ ವಸ್ತುಗಳನ್ನು ಕೊಂಡೊಯ್ಯಲು ಗಾಡಿಯೊಂದನ್ನು ತರಬೇಕಿತ್ತು. ಅದು ಇದ್ದರೆ ಇನ್ನೂ ಹೆಚ್ಚಿನ ಸರಕುಗಳನ್ನು ಕೊಂಡೊಯ್ಯಲು ಅನುವಾಗುತ್ತಿತ್ತು ಎಂದನು. ನಾರದನು ಬಂಡಿಯು ಕಳವಿಗೆ ತರವಲ್ಲ. ಬಡವನಿಗೆ ಹೋರಾಟವಲ್ಲವೆಂದನು. ನಾರದನು ಹೇಳುವ ಈ ಮಾತುಗಳು ಆಯ್ದಕ್ಕಿ ಲಕ್ಕಮ್ಮನ ವಚನವನ್ನು ನೆನಪಿಸುವಂತಿದೆ.

"ಆಸೆಯೆಂಬುದು ಅರಸಿಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯಾ

ರೋಷವೆಂಬುದು ಯಮಧೂತರಿಗಲ್ಲದೆ
ಅಜಾತರಿಗುಂಟೆ ಅಯ್ಯಾ
ಈಸಕ್ಕಿಯಾಸೆ ನಿಮಗೇಕೆ ಈಶ್ವರನೊಪ್ಪ
ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ದೂರ ಮಾರಯ್ಯ"[೬೩]

ನಾರದನು ಈ ವಚನದಲ್ಲಿ ಆಯ್ದಕ್ಕಿ ಲಕ್ಕಮ್ಮನ ತತ್ವವನ್ನು ಅನುಸರಿಸಿದರೆ, ಶಿವನು ಆಕೆಯ ಗಂಡನಂತೆ ನಡೆಯುವನು. ಇಲ್ಲಿ ಶಿವನ ಆಸೆಯ ಮೂಲಕ ಜನರ ಆಸೆಯನ್ನು ಅಡಗಿಸಲು ತಂತ್ರ ರೂಪಿಸಿದಂತಿದೆ. ಕಪಟ ನಾಟಕದ ಸೂತ್ರದಾರಿಯಾದ ನಾರದನಿಗೆ ಆಸೆಯನ್ನು ಹೆಚ್ಚಿಸದೆ ಶಿವನೇ ಆಸೆಪಡುವಂತದ್ದು ವಿಶೇಷವೆಂದು ತೋರುತ್ತದೆ. ಇಲ್ಲಿ ನಾವು ನಾರದನ ಪಾತ್ರದ ಮೂಲಕ ಆತ್ಮಪರಿಶುದ್ಧಿ ಮಾಡಿಕೊಳ್ಳಬೇಕಾಗಿದೆ. ಶಿವನಾರದರ ಪಾತ್ರಗಳು ಮಾನವರಲ್ಲಿ ಅಡಗಿದ ಅತಿಯಾದ ಆಸೆಯನ್ನು ತೊಲಗಿಸುವ ನಿಟ್ಟಿನಲ್ಲಿ ಮೂಡಿಬಂದಂತಿವೆ. ಹರನಾರದರು ಗಣಪತಿರಾಯನ ಅರಮನೆಯ ತವನಿಧಿಯನ್ನು ಕೊಂಡೊಯ್ಯುತಿರುವುದನ್ನು ಕಂಡು ಪಂಜರದಲ್ಲಿದ್ದ ಗಿಳಿಯು ಆತಂಕಗೊಂಡು ಕೂಗಿಕೊಳ್ಳತೊಡಗುತ್ತದೆ. ಈ ಸಂದರ್ಭದಲ್ಲಿ ಗಿಳಿಯು ಹೇಳುವ ಬುದ್ಧಿವಾದ, ರಾಜ-ರಾಣಿಯರನ್ನು ನಿದ್ರೆಯಿಂದ ಎಚ್ಚರಿಸುವ ವಿಧಾನ ರಸವತ್ತಾಗಿ ಮೂಡಿದೆ. ಕನ್ನವಿಡುವ ಸಮಯದಲ್ಲಿ ಗಿಳಿಯ ನುಡಿಗಳು ಇಂತಿವೆ.

"ಅಕ್ಕಕ್ಕ ಅರಮನೆಯ ಹೊಕ್ಕರು ಕಳ್ಳರು
ಇಕ್ಕಿದ ಬಂಗಾರ ತೆಗೆದಾರು|| ರಾಮಾಯಿ
ಅಕ್ಕ ನಿಮ್ಮ ನಿದ್ರೆ ತಿಳಿಯಾದೆ

ಅರಸು ಎಚ್ಚರವಾದರೆ ಶಿರವ ಹೊಡೆಯಿಸುವ
ಗರಗಸದೊಳಗೆ ಕೋಯಿಸುವ|| ಚೋರರೆ
ಇರಬೇಡಿ ಬೇಗ ತೆರಳಯ್ಯ

ಹೊನ್ನು ಬೇಕಾದರೆ ಹೋರುವಷ್ಟು ಕಟ್ಟಿಕೊಳ್ಳಿ
ಚೆನ್ನೆಯರ ಭಂಗ ಪಡಿಸಬೇಡಿ|| ಹೋಗೆಂದು
ರಾಮಕ್ಕ ಸಾಕಿದ ಗಿಳಿಯು ನುಡಿಯಿತು."[೬೪]

ಗಿಳಿಯು ಕಳ್ಳರು ಅರಮನೆಯ ಕದ್ದು ಹೋಗುವರು, ಬೇಗ ನಿದ್ರೆಯಿಂದ ತಿಳಿಗೊಳ್ಳೆಂದು ರಾಣಿಯಾದ ರಾಮಾಯಿಯನ್ನು ಕೂಗುತ್ತದೆ. ರಾಣಿಗೆ ಎಚ್ಚರವಾಗದಿದ್ದ ಸಂದರ್ಭದಲ್ಲಿ 'ರಾಯ ನಿನ್ನ ಮಂಚಗಳನ್ನು ಕಳ್ಳರು ಕದ್ದರು ಬೇಗ ತಿಳಿಗೊಳ್ಳೆಂದು ನುಡಿಯುತ್ತದೆ. ಮಾಯದ ನಿದ್ರೆಯ ಫಲವಾಗಿ ಯಾರಿಗೂ ಎಚ್ಚರವಾಗಲಿಲ್ಲ. ಆಗ ಹರ-ನಾರದರಿಗೆ ಪರರ ವಸ್ತುಗಳನ್ನು ಕದಿಯುವುದು ಒಳಿತಲ್ಲವೆನ್ನುವುದು. ಒಂದು ವೇಳೆ ನಮ್ಮ ಅರಸನಿಗೆ ಸಿಕ್ಕರೆ ನಿಮ್ಮ ರುಂಡ-ಮುಂಡಗಳನ್ನು ತೆಗೆಯುವನು. ಅರಮನೆಯ ಕಳವು ನಿಲ್ಲಿಸಿ ಬೇಗ ಹೊರಡಿ. ಇಲ್ಲದಿದ್ದರೆ, ಗರಗಸದಿಂದ ನಿಮ್ಮ ಶಿರವ ಕೋಯಿಸುವನೆಂದು ಎಚ್ಚರಿಕೆಯ

ಮಾತುಗಳನ್ನು ಹೇಳುತ್ತದೆ. ಗಿಳಿಯ ಮಾತನ್ನು ಹರನಾರದರು ಅಲಕ್ಷಿಸುವರು. ಗಿಳಿಯು ಮತ್ತೆ ಕೂಗಿಕೊಳ್ಳುತ್ತ 'ಹೊನ್ನು, ಮುತ್ತು, ರತ್ನ, ಹವಳ ಎಷ್ಟಾದರೂ ತೆಗೆದುಕೊಂಡು ಹೋಗಿರಿ. ಆದರೆ ಚನ್ನೆಯರನ್ನು ಭಂಗಪಡಿಸದೆ ಹೋಗಿ'ರೆಂದು ಹರ-ನಾರದರಲ್ಲಿ ಮೊರೆ ಇಡುತ್ತದೆ. ಗಿಳಿಯು ಇಲ್ಲಿ ನಿಷ್ಠೆ ತೋರುವ ಆತ್ಮದ ಸಂಕೇತವಾಗಿದೆ. ತನ್ನ ರಾಣಿ ನೀಡಿದ ಹಣ್ಣು-ಹಂಪಲಿನ ಋಣದಿಂದ ತನ್ನ ಕರ್ತವ್ಯವನ್ನು ನಿರ್ವಹಿಸುತ್ತದೆ. ಕಾವಲು ಕಾಯುವಂತ ಕಾರ್ಯವನ್ನು ಇಲ್ಲಿ ಗಿಳಿಯು ನಿರ್ವಹಿಸುತ್ತಿದೆ. ಮುಂದೆ ಇವರು ಕಳವು ಮಾಡುವುದನ್ನು ನಿಲ್ಲಿಸದ ಕಾರಣ ಮತ್ತೆ ತನ್ನವರನ್ನು ಕರೆಯಲು ಪ್ರಾರಂಭ ಮಾಡುತ್ತದೆ. ಗಿಳಿಯು ಇಲ್ಲಿ ಆತ್ಮಸಾಕ್ಷಿಯಿಂದ ಕಾರ್ಯವನ್ನು ಕೈಗೊಂಡಿದೆ. ಹರ-ನಾರದರು 'ಬೇಡ ಗಿಳಿರಾಮ ನಿನ್ನವರನ್ನು ನಿದ್ರೆಯಿಂದ ತಿಳಿಗೊಳಿಸಬೇಡ ನಿನಗೆ ಹಣ್ಣು ಹಂಪಲುಗಳನ್ನು ಕೊಡುವೆವು' ಎಂದು ಹರ-ನಾರದರು ಹೇಳಿದರೂ, ಲೆಕ್ಕಿಸದೆ 'ಜಲ್ಲಿ-ಪುಟ್ಟಿಗಳು, ಮುತ್ತು-ರತ್ನಗಳು ಸೂರೆ ಹೋಗುತ್ತವೆ' ಎಂದು ತಲ್ಲಣಗೊಂಡು ತನ್ನ ಅನ್ನದಾತರನ್ನು ಗಿಳಿಯು ಕರೆಯತೊಡಗಿತು. ಆಗ ಹರ-ನಾರದರ ಮಾತನ್ನು ಕೆಳಗಿನಂತೆ ಕಾಣಲಾಗಿದೆ.

"ಬೇಡ ಗಿಳಿರಾಮನೆ ರೂಢಿಯೊಳಾಡಬೇಡ
ಗಾಡಿಸಿ ನಿನ್ನವರ ಕರೆಯದೆ|| ಇದ್ದರೆ ನಿನಗೆ
ಹಣ್ಣು ಹಂಪಲವ ಕೊಡುವೆವು

ಸುಮ್ಮನಿರು ಗಿಳಿರಾಮ ಉನ್ನಷ್ಟು ಚಿಲುಪಾಲು
ಒಮ್ಮನ ಕಡಲೆ ತನಿವಣ್ಣು|| ಕೊಟ್ಟೇವು
ನಿಮ್ಮವರ ಕರೆಯದಿರು ಕಂಡಾ"[29]

ಗಿಳಿಗೆ ಆಮಿಷ ಒಡ್ಡಿದರೂ ತನ್ನ ಒಡೆಯರಿಗೆ ದ್ರೋಹ ಬಗೆಯಲಿಲ್ಲ. ಇದು ಮಾನವರಿಗೆ ಆದರ್ಶವಾಗಿ, ಮಾದರಿಯಾಗಿ ಕಂಡುಬರುತ್ತದೆ. ಇಂದಿನ ಆಧುನಿಕ ಕಾಲದ ಜನತೆಗೆ ನವ ಸಂದೇಶವನ್ನು ಗಿಳಿಯ ಮೂಲಕ ನೀಡಲಾಗಿದೆ. ಆದ್ದರಿಂದ ಈ ಕಾವ್ಯವು ಮಹತ್ವವೆನಿಸಿದೆ. ತನ್ನ ಒಡೆಯರನ್ನು ಕರೆಯುವುದನ್ನು ಕಂಡ ಶಿವನು 'ನೋಡಿದೆಯ ನಾರದ ಗೂಡಿನ ಗಿಳಿಯ ಸೊಕ್ಕು ಎನ್ನುವನು. ನಾರದನು 'ಅಡವಿಯ ಪಕ್ಷಿಗೆ ಮಾತನಾಡಲು ಕೊಟ್ಟರೆ ಸುಮ್ಮನಿರುವುದೆ'? ಎಂದು ಪ್ರಶ್ನೆ ಮಾಡುತ್ತಾನೆ. ಇಲ್ಲಿ ಎರಡು ಹಿನ್ನಲೆಯಲ್ಲಿ ನೋಡಬಹುದು. ಒಂದು ಪಂಜರದ ಗಿಳಿಗೆ ಮಾತನಾಡುವ ಶಕ್ತಿ ನೀಡಿದ್ದು, ಇನ್ನೊಂದು ತಪಸ್ಸು ಕೈಗೊಂಡ ಕಾರಣ ಗಣಪತಿರಾಯನಿಗೆ ಐಶ್ವರ್ಯ ನೀಡಿದ್ದು. ಪಾರ್ವತಿಯು ಆಗಲೇ 'ಮಾನವರಿಗೆ ಐಶ್ವರ್ಯ ಕೊಟ್ಟರೆ ಅಹಂಕಾರಪಡುವರು' ಎನ್ನುತ್ತಾಳೆ. ಇಲ್ಲಿ ನಾರದನು ಸೂಕ್ಷ್ಮವಾಗಿ ಗಿಳಿಯ ಮೂಲಕ ಗಣಪತಿರಾಯನನ್ನು ಸೇರಿಸಿಕೊಂಡು ಹೇಳಿದಂತಿದೆ. ಗಿಳಿಗೆ ಕೂಗದಿರು ಗಿಳಿರಾಮ ದೊಡ್ಡ ಭಾವುಗ ಬಂದು ಕೊರಳನ್ನು ಮುರಿಯುತ್ತದೆಂದು ಹೇಳಿದನು. ಗಿಳಿಯು ಹೆದರಿ ಕಳವಳಿಸಿತು. ನಂತರ ಬಂದವರು ಶಿವನೆಂದು ಗಿಳಿಗೆ ತಿಳಿದಾಗ 'ಶರಣು ಶರಣಾರ್ಥಿ' ಎಂದು ನಮಿಸಿತು. ಗಿಳಿಯ ವಂದನೆಯನ್ನು ಸ್ವೀಕರಿಸಿದ ಹರನು ಮುಸು ನಗುವನು. ಒಂದು ಗಿಳಿಯೂ ಸಹ ತನ್ನ ಸಾಕಿದವರ ಬಗ್ಗೆ

ಎಷ್ಟೊಂದು ಪ್ರೀತಿ, ಗೌರವ, ಕೃತಜ್ಞತೆ ಇಟ್ಟುಕೊಂಡಿದೆ ಎಂಬುದನ್ನು ಈ ಕೃತಿ ಸಾದರಪಡಿಸುತ್ತದೆ. ಈ ನೆಲೆಯಲ್ಲಿ ಮಾನವನನ್ನು ನಿಜದ ಮಾರ್ಗದಲ್ಲಿ ಕೊಂಡೊಯ್ಯುವಂತಹ ಅಭೂತಪೂರ್ವ ಕಾರ್ಯವನ್ನು ಗುಂಡಬ್ರಹ್ಮಯ್ಯಗಳ ಸಾಹಿತ್ಯ ನಿರ್ವಹಿಸುತ್ತದೆ.

ಈ ಕಾವ್ಯದಲ್ಲಿ ಗಿಳಿಯು ಆತ್ಮದ ಸಂಕೇತವಾಗಿದೆ. ಪಂಜರವನ್ನು ದೇಹಕ್ಕೆ, ಗಿಳಿಯನ್ನು ಆತ್ಮಕ್ಕೆ, ಅದರ ಐದು ಬಣ್ಣವನ್ನು ಪಂಚೇದ್ರಿಯಗಳಿಗೆ ಹೋಲಿಸಬಹುದಾಗಿದೆ. ಕಳ್ಳತನಕ್ಕೆ ಬಂದಿರುವುದು ಶಿವನೆಂದು ತಿಳಿದ ಮೇಲೆ ಗಿಳಿಯು ಸುಮ್ಮನಾಯಿತು. ಅಲ್ಲಿಯವರೆಗೆ ಇದ್ದ ಆರ್ತಧ್ವನಿ ಕಡಿಮೆಯಾಗಿ ಆತ್ಮಸ್ವರೂಪ ತಿಳಿಯಲು ಪ್ರಯತ್ನಿಸಿತು. ಆತ್ಮವನ್ನು ಪರಮಾತ್ಮನಲ್ಲಿ ಲೀನಗೊಳಿಸುವುದು, ಅದರಂತೆ ನಾನು ನಿಮ್ಮಲ್ಲಿ ಐಕ್ಯವಾಗಿ ಪಾವನವಾಗುತ್ತೇನೆಂಬ ನಿರೀಕ್ಷೆಯು ಅಭಿವ್ಯಕ್ತಿಗೊಳ್ಳುತ್ತದೆ. ವೈವಿಧ್ಯಮಯವಾದ ಸಂಪತ್ತಿಗಿಂತ ಹೆಣ್ಣಿನ ಶೀಲಸಂಪತ್ತು ಪ್ರಧಾನವಾದುದು ಎನ್ನುವಂತೆ ಗಿಳಿಯು ನಮಗೆಲ್ಲ ಸಂದೇಶ ನೀಡುತ್ತದೆ. ಹೀಗೆ ಗುಂಡಬ್ರಹ್ಮಯ್ಯಗಳ ಸಾಹಿತ್ಯದಲ್ಲಿ ಪ್ರತಿಯೊಂದು ಪಾತ್ರಗಳು ಜೀವನದ ಮೌಲ್ಯವನ್ನು ನೀಡುತ್ತವೆ. ಆ ಮೂಲಕ ಅಪೂರ್ಣತೆಯಿಂದ ಪೂರ್ಣತೆಯೆಡೆಗೆ, ಮೂರ್ತದಿಂದ ಅಮೂರ್ತಕ್ಕೆ ಕೊಂಡೊಯ್ಯುವಂತೆ ಮಾಡುತ್ತದೆ. ಸೂರ್ಯೋದಯಕ್ಕೆ ಸ್ವಲ್ಪ ಮುಂಚೆ ಎಚ್ಚರವಾದೀತೆಂದು ಎಂದು ಹರ-ನಾರದರು ಹೊರಡುವಾಗ ಕದ್ದ ವಸ್ತುಗಳ ವಿವರಣೆ ದೊರೆಯುತ್ತದೆ.

"ತೊಟ್ಟ ಹೊಂಬಳೆ ಕದ್ದೆ ಬೊಟ್ಟಿನುಂಗುರವ ತೆಗೆದೆ
ತೊಟ್ಟ ಮುತ್ತುಗಳನಿಳುಹಿದೆ|| ರಾಯನ
ಮುತ್ತೈದೆಯರು ತೊಟ್ಟ ತೊಡಿಗೆಯ

ವಾಲಿ ಮೂಗುತಿ ಉಟ್ಟ ಸೀರೆಯ ಮಡಗಿ
ಮೇಲಾದನೆಲ್ಲ ತೆಗೆದೆವು|| ರಾಮಾಯಿ
ವಾಲಿ ಭಾಗ್ಯದಲಿ ವರಗಮ್ಮ"೭೭

ರಾಣಿಯ ಹೊಂಬಳೆ, ಬೊಟ್ಟಿನುಂಗುರ, ಮುತ್ತು, ವಾಲಿ, ಮೂಗುತಿಗಳನ್ನು ಕದ್ದುದಾಗಿ ತಿಳಿಯುತ್ತದೆ. ರಾಣಿಯ ಉಟ್ಟ ಸೀರೆಯನ್ನು ಬಿಟ್ಟು ಉಳಿದ ಆಭರಣಗಳೆಲ್ಲವನ್ನು ತೆಗೆದುಕೊಂಡಿರುವುದು ತಿಳಿಯುತ್ತದೆ. ಇದರ ಜೊತೆಗೆ ಅರಮನೆಯ ಬಂಗಾರ, ಬೆಳ್ಳಿ, ಆಭರಣಗಳನ್ನು, ವಸ್ತ್ರಗಳನ್ನು ಹರನಾರದರು ಗಂಟುಕಟ್ಟುವರು. ಮುಂಗೋಳಿ ಕೂಗಿ ಮೂಡಣ ಕೆಂಪೇರುವ ಹೊತ್ತಿಗೆ ಹರ-ನಾರದರು ತಾವು ಹೊರುವಷ್ಟು ಕನಕಮಣಿ ರತ್ನಗಳನ್ನು ತೆಗೆದುಕೊಂಡು ಹೊರಡುವರು. ನಂತರ ಇವರಿಬ್ಬರು ನಂದಿಯ ಗುಡಿಗೆ ಬರುವರು. ತಮ್ಮ ಅಂತಃಸತ್ವ ಪ್ರಕಟಣೆಯಾಗುವಂತೆ ಬರುತ್ತಾರೆ. ಮುಂದೆ ಗುಂಡಬ್ರಹ್ಮಯ್ಯರ ಕನಸಿನಲ್ಲಿ ಕಾಣಸಿಗುತ್ತಾರೆ. ಶಿವನು ಗುಂಡಬ್ರಹ್ಮಯ್ಯನ ಕನಸಿನಲ್ಲಿ ಕಾಣಿಸಿಕೊಳ್ಳುವ ಮೂಲಕ ಅವರನ್ನು ಮುಂದೆ ಪರೀಕ್ಷೆಗೊಳಪಡಿಸುವುದು, ಅವರ ಅಂತರಂಗವನ್ನು ಪರಿಶುದ್ಧಗೊಳಿಸುವುದು ಅವರ ಬಿರುದಿನ ಮಾತುಗಳಿಗೆ ಶಕ್ತಿ ಬರುವಂತೆ ಮಾಡುವುದು, ಗುಂಡಬ್ರಹ್ಮಯ್ಯರ ಪುರಕ್ಕೆ ಬಂದು ಅವರಲ್ಲಿ ಮೊರೆ ಹೋಗುವುದು

ಇವೆಲ್ಲವೂ ಕಾವ್ಯದಲ್ಲಿ ಅಭಿವ್ಯಕ್ತಿಗೊಳ್ಳುತ್ತವೆ. ಕನಸಿನಲ್ಲಿ ಕಳ್ಳರು ಬಂದುದನ್ನು ಗುಂಡಬ್ರಹ್ಮಯ್ಯಗಳು ತಿಳಿದೆದ್ದು ತಮ್ಮ ಹೆಂಡತಿಯರ ಬಳಿ ಹೇಳುವರು.

"ಮಾಯದ ಕಳ್ಳರು ಬಂದು ಮೊರೆಹೋಗುವರು ನಮ್ಮಲ್ಲಿ
ರಾಯ ದಂಡೆತ್ತಿ ಬರುವನು|| ಅವನಿಗೆ ನಮ್ಮ
ಕಾಯವನು ಕೊಟ್ಟು ಕಳುಹುವೆವು"[೨೭]

ಗುಂಡಬ್ರಹ್ಮಯ್ಯಗಳು ಪರಾಕ್ರಮಶಾಲಿಗಳು, ವೀರರಾದ ಕಾರಣ ಶಿವನ ಪರೀಕ್ಷೆಗೆ ಸಿದ್ಧರಾಗುವರು, ಪವಾಡದ ಮೂಲಕ ನಿಮ್ಮ ಬಿರುದಿನ ಮಾತಿಗೆ ಹಾನಿಯನ್ನುಂಟುಮಾಡಲೋಸುಗವೇ ಬಂದಂತಿದೆ ಎನ್ನುವ ಮಾತುಗಳು ಕಾವ್ಯದ ಉತ್ಕಟತೆಯೊಂದಿಗೆ ಅವರ ಮನಸ್ಸಿನ ಸಂಕಲ್ಪವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ. ಕನಸು ಎಂಬುದು ಕೂಡ ಸುಪ್ತ ಮನಸ್ಸಿನ ಅನಿಸಿಕೆಯಾಗಿರುವುದರಿಂದ ಮುಂದಾಗುವ ಪರಿಣಾಮಗಳನ್ನು ಪರಿಚಯಿಸುತ್ತದೆ. ಗುಂಡಬ್ರಹ್ಮಯ್ಯರ ದೃಢಸಂಕಲ್ಪವನ್ನು ಮತ್ತೆ ಮತ್ತೆ ಪರೀಕ್ಷಿಸಲು ಹರನಾರದರು "ತರವಲ್ಲ ಠಾವಿನಲಿ ಅರಮನೆಯ ಕದ್ದೆವು ಅರಸು ಗಣಪತಿಯು ಅರಿತಡೆ ಅವ ನಿಮ್ಮ ಬಿರುದಿಗೆ ಅಂಜಿಬಿಡುವನೆ"[೨೮] ಎಂದು ಕೇಳುವರು. ಹರ-ನಾರದರು ನಾವು ಕದ್ದಿರುವುದು ಸಾಮಾನ್ಯರ ಮನೆಯಲ್ಲ. ಅದು ಗಣಪತಿರಾಯನ ಅರಮನೆ. ಎಂದಾಗಲೂ ಗುಂಡಬ್ರಹ್ಮಯ್ಯರ ಸಂಕಲ್ಪಚಿತ್ತ ಅಲುಗಾಡಲಿಲ್ಲ. ಅವರ ಪತ್ನಿಯರನ್ನೂ ಅಸ್ಥಿರಗೊಳಿಸಲು ಪ್ರಯತ್ನಿಸುತ್ತಾರೆ. ಅಲ್ಲಿಯು ಹರ-ನಾರದರು ಅವರನ್ನು ಅಂಜಿಸುವಲ್ಲಿ ವಿಫಲರಾಗುವರು. ಶಿವನನ್ನೆ ಸಂರಕ್ಷಿಸುವ ಹೊಣೆಗಾರಿಕೆ ಇರುವುದನ್ನು ಮನಗಾಣುತ್ತಾರೆ. 'ಶರಣಸತಿ ಲಿಂಗಪತಿ' ತತ್ವದಲ್ಲಿ ನಂಬಿಕೆಯಿದ್ದ ಇವರಿಗೆ ಶಿವನಾಡಿದ ಮಾತುಗಳಿಂದ ವಿಚಲಿತವಾಗಲಿಲ್ಲ. ಕಳ್ಳತನ ಮಾಡಿ ಬಂದವರನ್ನು ಸಂರಕ್ಷಿಸುವುದು ಅಪರಾಧವೆನಿಸದೆ ಅದೊಂದು ಸಾಮಾಜಿಕ ಮೌಲ್ಯವೇ ಎನ್ನುವಂತೆ ಬಸವೋತ್ತರ ಯುಗದ ಸ್ಥಿತಿ ಮತ್ತು ಸಂದರ್ಭವನ್ನು ಪರಿಚಯಿಸುತ್ತದೆ. ಇದು ಅಂದಿನ ಯುಗಧರ್ಮವೂ ಆಗಿರುವುದು ಕಂಡುಬರುತ್ತದೆ. ಆ ಯುಗಧರ್ಮವು ಪ್ರಸ್ತುತ ಎಷ್ಟು ಸಮರ್ಪಕವಾಗಿದೆ ಎಂಬುದು ಪ್ರಶ್ನೆಯಾಗಿದೆ. ಮಾನವೀಯತೆಯ ಸಂಕೇತವಾಗಿ ಕಾಪಾಡುವಂತದ್ದನ್ನು ಕಾಣಬಹುದಾಗಿದೆ. ಆದ್ದರಿಂದ ಗುಂಡಬ್ರಹ್ಮಯ್ಯರ ಅಂತಸತ್ವ ಪ್ರಕಟವಾಗುವುದು ಇಲ್ಲಿಯೇ ಎನ್ನಬಹುದು.

ಸೂರ್ಯೋದಯವಾಗಿ ವೀರ ಗಣಪತಿರಾಯನು ಎಚ್ಚರಗೊಂಡು ತನ್ನ ರಾಣಿಯರನ್ನು ನೋಡಿದಾಗ ಆಶ್ಚರ್ಯವಾಗುತ್ತದೆ. ಕನ್ನಗಿಂಡಿಯಿಂದ ತಣ್ಣನೆಯ ಗಾಳಿಯು ಬಂದು ಇವನ ಮೈ ಸ್ಪರ್ಶಿಸುತ್ತದೆ. ಪಟ್ಟದ ರಾಣಿಯಾದಿಯಾಗಿ ಎಲ್ಲರನ್ನು ಎಬ್ಬಿಸಿ ನೋಡಿದರೆ ಇಡೀ ಅರಮನೆ ಬಯಲಾಗಿರುತ್ತದೆ. 'ರಾಮಾಯಿ ನಿನ್ನ ಗಲ್ಲದ ಮೇಲೆ ಏನು ಹೊಸ ರೇಖೆ' ಎಂದು ಹೆಣ್ಣಿನ ಮೇಲೆ ಆದ ಅವಮಾನವನ್ನು ಕಂಡು ಅನುಮಾನ ಪಡುವಂತೆ ಗಣಪತಿರಾಯನು ರಾಮಾಯಿಯ ಮೇಲೆ ಅನುಮಾನ ವ್ಯಕ್ತಪಡಿಸಿದ್ದಾನೆ. ಅದಕ್ಕೆ ರಾಮಾಯಿಯು ಮಾಯೆಯ ನಿದ್ದೆ ಮುಸಿಕಿದ್ದಾಗ ಈ ಸ್ಥಿತಿ ತಲುಪಿರಬಹುದೆಂದು ಜಾರಿಕೆಯ ಉತ್ತರ ನೀಡುವಳು. ಆಗ ಕೋಪೋದ್ರಿಕ್ತನಾದ ಗಣಪತಿರಾಯನು ಕೆಳಗಿನಂತೆ ರೋಷವನ್ನು ಹೊರ ಹಾಕುವನು.

"ನಾಲಿಗೆಯನು ಕೊಯುವೆ ಶೂಲಕ್ಕೆ ಹಾಕಿಸುವೆ
ಘೋರನೆ ಅಲಗ ತೆಗೆದನು|| ಗಣಪತಿ
ಕರಿದೊಟ್ಟಿ ಕೊರಳ ಕೂಯಿಸುವೇನು

ಊರೊಳಗಳ ಕಿಚ್ಚು ಅಂಬರ ತುಡುವಂತೆ
ವೀರಗಣಪತಿ ಎದೆಯಲ್ಲಿ|| ಕಿಚ್ಚೆದ್ದು
ಬೇರಿ ಹೊಯ್ದಂತೆ ಧ್ವನಿಯಾದೊ"[೭೯]

ಗಣಪತಿರಾಯನಿಗೆ ಸಿಟ್ಟು ತಾರಕಕ್ಕೆ ಏರಿದೆ. ಎದೆಯಲ್ಲಿನ ಕಿಚ್ಚು ಊರಿಗೆಲ್ಲ ಹಬ್ಬುವಂತೆ ಧ್ವನಿ ಕೇಳುತ್ತಿದೆ. ತನ್ನ ರಾಣಿಯ ಮೈಮುಟ್ಟಿ ಕದ್ದವರಿಗೆ ಹುತ್ತದೊಳಗೆ ಕೈ ಹಿಡಿಸುವೆ, ನಾಲಗೆಯ ಕೊಯ್ಯುವೆ, ಉಕ್ಕುವ ಎಣ್ಣೆಯಲ್ಲಿ ಮುಳುಗಿಸುವೆ, ಶೂಲದ ಶಿಕ್ಷೆ ವಿಧಿಸುವೆಯೆಂದು ಹೇಳುತ್ತಾ, ರಾಣಿಯಾದ ರಾಮಾಯಿಯನ್ನು ಸಮಾಧಾನಗೊಳಿಸುವನು. ಕಳ್ಳರು ಎಲ್ಲಿ ಅಡಗಿದರೂ ಭೂಮಿಯನ್ನು ಛಿದ್ರಮಾಡಿ ಹಿಡಿದುತರುವೆ ಎನ್ನುವನು. ಅರಮನೆಯ ಹೊರಬರಲು ಮುತ್ತುರತ್ನಗಳು ಬಿದ್ದುದನ್ನು ಕಾಣುವರು. ಗುಂಡಬ್ರಹ್ಮಯ್ಯರ ಗುಡಿಯ ಮುಂದೆ ಸಂದೇಹದಿಂದ ಬಂದು ನಿಲ್ಲುವರು. ಹಿರಿಯ ಪ್ರಧಾನಿಗಳು, ಕರುಣಿಕರು, ಸೈನಿಕರು ಎಲ್ಲರು ಬಂದು 'ನಿಮ್ಮ ಗುಡಿಗೆ ಕಳ್ಳರು ಬಂದಿದ್ದಾರೆಂಬುದಕ್ಕೆ ದಾರಿಯುದ್ದಕ್ಕೂ ಕುರುಹುಗಳಿವೆ. ಆದ್ದರಿಂದ ಕಳ್ಳರನ್ನು ನಮಗೊಪ್ಪಿಸಿ ಎನ್ನುವರು. 'ಸತಿಯನಾದರೆ ಕೊಟ್ಟೇವು ಸುತನಾದರೆ ಕೊಟ್ಟೇವು ಕೊನೆಗೆ ನಮ್ಮ ಪ್ರಾಣ ಹೋದರೂ ಕಳ್ಳರ ಕೊಡೆವು' ಎಂದು ಅಚಲ ನಿಷ್ಠೆಯನ್ನು ಮೆರೆದರು. ಇದರಿಂದ ಶೂಲವೇರಬೇಕಾದ ಸಂದರ್ಭ ಗುಂಡಬ್ರಹ್ಮಯ್ಯರಿಗೆ ಒದಗಿತು. ಭಾವ-ಮೈದುನರಾದ ಗುಂಡಬ್ರಹ್ಮಯ್ಯರು ಭಾವದೊಳಿಬ್ಬರು, ಆದರೆ ಭಕ್ತಿಯಲ್ಲಿ ಒಂದಾದರು.

ಶೂಲವೇರುವ ಹೊತ್ತು ಬಂದಾಗಲೂ ಇವರಲ್ಲಿ ಎರಡಿಲ್ಲದ ಭಕ್ತಿ. ಉಭಯ ಭಾವವಳಿದು ಏಕೋಭಾವ ನೆಲೆಗೊಂಡ ಅಚಲ ಭಕ್ತಿ. ನಾನು-ನೀನಲ್ಲದ, ಒಳ-ಹೊರಗಿಲ್ಲದ ಅಭೇದ ಭಕ್ತಿಯಾಗಿರುವುದನ್ನು ಈ ಕಾವ್ಯದಲ್ಲಿ ಕಾಣಬಹುದಾಗಿದೆ. ಶರಣಾಗತರನ್ನು ಕಾಯುವ ಅವರ ವೀರವ್ರತವನ್ನು ಭಂಗಪಡಿಸುವಲ್ಲಿ ಸ್ವತಃ ಶಿವನೂ ಕೂಡ ಅಧೀನನಾಗುತ್ತಾನೆ. ಶೌರ್ಯ, ತೇಜ, ಧೃತಿ, ಈಶ್ವರೀಭಾವ ಹೊಂದಿರುವುದರಿಂದ ಇವರನ್ನು ಕ್ಷತ್ರಿಯ ಶರಣರೆಂದೇ ವರ್ಣಿಸಬಹುದಾಗಿದೆ. ಶೂಲದ ಮೇಲೆ ಕುಳಿತಾಗ ಅವರಂಗನೆಯರು ಆರತಿಯ ಬೆಳಗಿ ಗಂಗೆಯಿಂದ ಲಿಂಗಮಜ್ಜನ ಮಾಡುವರು. ಮಲ್ಲಿಗೆಯ ಹೂಗಳಿಂದ ಲಿಂಗವನ್ನು ಅಲಂಕರಿಸುವರು. ಕಾಯ, ವಾಚ, ಮನಸಾ ಇಚ್ಛೆಯಿಂದ ಲಿಂಗಕ್ಕೆ ನೈವೇದ್ಯ ಮಾಡುವರು. ಗುಂಡಬ್ರಹ್ಮಯ್ಯರು ಶೂಲದ ಮೇಲೆ ಇದ್ದರೂ ಶಿವಭಾವದಲ್ಲಿರುವುದು, ನಿಶ್ಚಲತೆಯಿಂದಿರುವುದು, ದೃಢ ಮನಸ್ಸಿನಿಂದಿರುವುದು ಈ ಕಾವ್ಯದ ಮಹೋನ್ನತಿಗೆ ಕಾರಣವಾಗಿದೆ.

ಭೀಷ್ಮನ ಮೈಯಲ್ಲಿ ಬಾಣಗಳು ನೆಟ್ಟಾಗಲೂ ಚಿತ್ತವಿರಲಿಲ್ಲ, ಧ್ಯಾನದಲ್ಲಿ ಮಗ್ನನಾಗಿದ್ದನೆಂದು ಮಹಾಕವಿ ಪಂಪನು 'ವಿಕ್ರಮಾರ್ಜುನ ವಿಜಯದಲ್ಲಿ' ಬಣ್ಣಿಸಿದ್ದಾನೆ. ಭೀಷ್ಮರ ಶರಶಯ್ಯೆಯಲ್ಲಿನ ಭಾವ

ದುಃಖಾಂತವಾದರೆ, ಗುಂಡಬ್ರಹ್ಮಯ್ಯಗಳಲ್ಲಿ ಇದು ಸುಖಾಂತವಾಗಿದೆ. ಜೊತೆಗೆ ಶಿವಾಂತವೂ ಆಗಿರುವುದನ್ನು ಕಾಣಬಹುದು. ಗುಂಡಬ್ರಹ್ಮಯ್ಯರು ತಮ್ಮ ಶೂಲದ ಬಾಧೆಯನ್ನು ಶಿವಸೌಖ್ಯವೆಂದು ತಿಳಿದಿದ್ದಾರೆ. ಆದ್ದರಿಂದ ಅವರ ಸತಿಯರು ತಮ್ಮ ತಮ್ಮ ರುಂಡಗಳನ್ನು ಕತ್ತರಿಸಿಕೊಂಡಾಗಲೂ ಅವರಿಗೆ ಯಾವುದೇ ಮಮಕಾರ, ಮೋಹ, ವ್ಯಥೆಯಾಗುವುದಿಲ್ಲ. ಆದರೆ ಭೀಷ್ಮಚಾರ್ಯರು ಅದೇ ಭಕ್ತಿಯಲ್ಲಿದ್ದರೂ, ಲೌಕಿಕ ಸಂಕಟದಲ್ಲಿ ಸಿಕ್ಕು ತೊಳಲುತ್ತಾರೆ. ಇಲ್ಲಿ ಮುಖ್ಯವಾಗಿ ಲೌಕಿಕ ವಸ್ತುಗಳಿಗಿಂತ, ಲೌಕಿಕ ಜೀವನಕ್ಕಿಂತ ಆಧ್ಯಾತ್ಮಿಕ ಜೀವನ ಮತ್ತು ವಸ್ತುಗಳ ಶ್ರೇಷ್ಠತೆಯನ್ನು ಈ ಕಾವ್ಯದಲ್ಲಿ ಪ್ರತಿಬಿಂಬಿಸಲಾಗಿದೆ.

ದೈವವನ್ನು ಭೂಮಿಗೆ ಇಳಿಯುವಂತೆ ಮಾಡಿದ ಪ್ರಯತ್ನವೇ ಈ ಕೃತಿಯ ಮತ್ತೊಂದು ವಿಶೇಷವಾಗಿದೆ. ಪರಿಶುದ್ಧ ಮನಸ್ಸಿನವರಾದ ಗುಂಡಬ್ರಹ್ಮಯ್ಯರನ್ನು ಪರೀಕ್ಷೆ ಒಳಪಡಿಸುವುದೇ ಇಲ್ಲಿನ ಕೇಂದ್ರ ಭಾವ. ಶರಣರನ್ನು ಪರೀಕ್ಷೆಗೆ ಗುರಿಪಡಿಸಲು ಅವನು ಆಯ್ಕೆ ಮಾಡಿಕೊಂಡದ್ದು ಸಾಮಾಜಿಕ ಅಪಮೌಲ್ಯವಾದ ಕಳ್ಳತನ ಮತ್ತು ಕಳ್ಳತನ ಮಾಡಿ ಮೊರೆಹೊಕ್ಕವರನ್ನು ಕಾಪಾಡುವುದು. ಮತ್ತೊಂದು ಅಪಮೌಲ್ಯವಾಗಿ ಇವೆರಡನ್ನು ಏಕೀಕೃತಗೊಳಿಸಿ ಮುಖಾಮುಖಿಗೊಳಿಸಲಾಗಿದೆ. ಇದರಿಂದ ಶರಣರ ವ್ಯಕ್ತಿತ್ವವು ಪ್ರಜ್ವಲಿಸುವಂತಾಗಿದೆ. ಗುಂಡಬ್ರಹ್ಮಯ್ಯರ ಬದುಕು ಹಸನಾಗಿದ್ದರೂ ಮತ್ತಷ್ಟು ಹೊಳಪುಗೊಳಿಸಲು ಅವರ ಗುಣಕ್ಕೆ ಬಂಗಾರದ ಗುಣ ಬರುವಂತೆ ಮಾಡಲು ಪರೀಕ್ಷೆಗೆ ಒಳಪಡಿಸುತ್ತಾರೆ. ಪ್ರಭುತ್ವ ಮತ್ತು ಶಿವತ್ವದ ಸಂಘರ್ಷ ಹಾಗೂ ಸಾಮರಸ್ಯ ಅನಾವರಣಗೊಳ್ಳುತ್ತದೆ. ಅರಮನೆ ಗುರುಮನೆಗಳಿಗಿಂತ ಶರಣರ ಮಹಾಮನೆಯು ರೂಪಿಸಿದ ತತ್ವಗಳಿಗೆ ಗುಂಡಬ್ರಹ್ಮಯ್ಯರಂತ ಶರಣರ ವ್ಯಕ್ತಿತ್ವ ಸಾಕ್ಷಿಯಾಗಿ ನಿಂತು ಸಾಕ್ಷಾತ್‌ಕರಿಸಿಕೊಳ್ಳುತ್ತದೆ. ಶಿವತ್ವದ ಮುಂದೆ ಪ್ರಭುತ್ವ ಅಸಹಾಯಕವಾಗುತ್ತದೆ. ಶಕ್ತಿಗಿಂತ, ಯುಕ್ತಿಗಿಂತ ಭಕ್ತಿ ತನ್ನ ಶ್ರೇಷ್ಠತೆ ಮೆರೆಯುತ್ತದೆ. ಇಂತಹ ವಿವಿಧ ಆಯಾಮಗಳಿಂದ ಕೃತಿಯು ಹೊಸ ಆಯಾಮ ಪಡೆದುಕೊಳ್ಳುತ್ತದೆ.

ಕಾವ್ಯದ ಲಕ್ಷಣಗಳ ದೃಷ್ಟಿಯಿಂದ ವಸ್ತು, ಶೈಲಿ ಛಂದಸ್ಸುಗಳು ಹೊಸತನವನ್ನು ಪಡೆದುಕೊಂಡಿವೆ. ವಸ್ತು ಒಂದೇ ಆದರೂ ಶೈಲಿಯಲ್ಲಿ ಮತ್ತು ಛಂದೋರೂಪಗಳಲ್ಲಿ ವೈವಿಧ್ಯತೆಯಿದೆ. ದೇಶಿ ಮಟ್ಟುಗಳೊಂದಿಗೆ ಗದ್ಯವೂ ಸ್ಥಾನಪಡೆದು ಕಾವ್ಯದ ದಾಟಿಯಲ್ಲಿ ಸಾಗುವ ಅದರ ನಡೆ ಮನಮೋಹಕವಾದುದು. ಕೃತಿಯ ಅಂತಃಸತ್ವ ಪ್ರಕಟವಾಗುವುದೇ ವೈವಿಧ್ಯಮಯ ಛಂದೋರೂಪಗಳಲ್ಲಿ ಮತ್ತು ಅವುಗಳನ್ನು ಬಳಸಿದ ಕವಿಗಳಲ್ಲಿ. ಗುಂಡಬ್ರಹ್ಮಯ್ಯರ ಸಾಹಿತ್ಯವು ಶೈವನಿಷ್ಠೆ, ವೀರಶೈವ ಧರ್ಮದ ಅನುಷ್ಠಾನ ಮತ್ತು ಅಭ್ಯುದಯ ಅದರ ತಾತ್ವಿಕತೆ. ಅದರ ಬಳಕೆಯಲ್ಲಿ ಕಂಡುಬರುವ ಹೊಸತನ, ಉಸಿರುಗಟ್ಟಿಸುವ ವೈಧಿಕ ಧರ್ಮದ ಆಚರಣೆಗಳು ಇಲ್ಲದಿರುವಿಕೆ, ಚಾರಿತ್ರಿಕ ಪ್ರಜ್ಞೆ, ಚರಿತ್ರೆಯ ಒಳನೋಟಗಳು ಸಾಹಿತ್ಯ ರೂಪಿಸಿರಬಹುದಾದ ಪ್ರೇರಣೆ ಮತ್ತು ಧೋರಣೆಗಳು ಈ ಕೃತಿಯನ್ನು ಮೇಲ್ಮಟ್ಟಕ್ಕೆ ಏರಿಸಿವೆ. ಇದರಿಂದಾಗಿ ಗುಂಡಬ್ರಹ್ಮಯ್ಯಗಳ ಸಾಹಿತ್ಯವು ಶರಣ ಸಂಸ್ಕೃತಿಯ ವಿನೂತನ ಕೃತಿಯಾಗಿದೆ. ಈ ಸಾಹಿತ್ಯವನ್ನು ಧರ್ಮದ ದೃಷ್ಟಿಯಿಂದ ನೋಡಿದರೆ ವೀರಶೈವ ಧರ್ಮದ ಪುನರುತ್ಥಾನ, ರಾಜಕೀಯವಾಗಿ ನೋಡಿದರೆ ಓರಂಗಲ್ಲಿನ ಶೈವನಿಷ್ಠೆ,

ಸಾಂಸ್ಕೃತಿಕವಾಗಿ ನೋಡಿದರೆ ಮೊರೆ ಹೊಕ್ಕವರ ಕಾಯುವ ವೀರವ್ರತ, ಶೂಲದಹಬ್ಬ ಆಚರಣೆ, ಸಾಮಾಜಿಕವಾಗಿ ನೋಡಿದರೆ ಒಂದು ಮೌಲ್ಯ ಇನ್ನೊಂದು ಆದರ್ಶ. ಮೊರೆಹೊಕ್ಕವರ ಕಾಯ್ವುದು ಒಂದು ಮೌಲ್ಯ. ಆದರ್ಶ ಎನ್ನುವುದು ಮುಂದಿನ ಜನಾಂಗಕ್ಕೆ ಮಾದರಿ. ಇಂತಹ ಅನೇಕ ಪಾತಳಿಗಳ ಹಿನ್ನಲೆಯಲ್ಲಿ ಈ ಕೃತಿಯನ್ನು ವಿಶ್ಲೇಷಣೆ ಮಾಡಬಹುದಾಗಿದೆ. ಯುಗಧರ್ಮ ಮತ್ತು ಪಲ್ಲಟ ಏಕೀಭವಿಸುವ ಸ್ವರೂಪವನ್ನು ಈ ಕೃತಿ ತಿಳಿಯಪಡಿಸುತ್ತದೆ.

ಆಧ್ಯಾತ್ಮಿಕ ಬದುಕಿಗೆ ಲೌಕಿಕ ಬದುಕೆ ಸೋಪಾನವಾಗುವುದನ್ನು ಪರಿಚಯಿಸುತ್ತದೆ. ಮಾತ್ರವಲ್ಲದೆ ಸ್ವರ್ಗ ಮತ್ತು ಮರ್ತ್ಯಗಳ ನಿಕಟ ಸಂಬಂಧವನ್ನು ದಾಖಲಿಸುತ್ತದೆ. ಸಾಮಾನ್ಯ ಮನುಷ್ಯನ ದೈವಕ್ಕೇರಿಸುವ ಒಂದು ನೆಲೆ ಸಾಹಿತ್ಯದಲ್ಲಿ ಅಲ್ಲಲ್ಲಿ ಉಲ್ಲೇಖಗೊಂಡಿರುವುದನ್ನು ಕಾಣುತ್ತೇವೆ. ಆದರೆ ಈ ಕೃತಿಯಲ್ಲಿ ಶಿವನನ್ನೇ ಭೂಮಿಗಿಳಿಸುವ ಪವಾಡವು ಆಶ್ಚರ್ಯವೆನಿಸುತ್ತದೆ. ತ್ರಿಪದಿ, ಸಾಂಗತ್ಯ, ನಾಂದ್ಯ, ಚೌಪದಿ, ಗದ್ಯ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಈ ಕಾವ್ಯ ಅಭಿವ್ಯಕ್ತಿಗೊಂಡಿರುವುದು ಎಂತವರನ್ನು ಚಕಿತಗೊಳಿಸುತ್ತದೆ. ಉಪಮ, ರೂಪಕ, ಅಲಂಕಾರಗಳು, ಶೃಂಗಾರ, ಹಾಸ್ಯ, ವೀರ, ಭಕ್ತಿರಸಗಳನ್ನು ಈ ಕಾವ್ಯದಲ್ಲಿ ಬಳಸಲಾಗಿದೆ. ದೇಶಿ ಸೊಗಡನ್ನು ಹೊಂದಿರುವ ಕಾವ್ಯವಾಗಿರುವುದರಿಂದ ಜನರಾಡುವ ಸಾಮಾನ್ಯ ಭಾಷೆಯನ್ನು ಬಳಸಲಾಗಿದೆ. ಜನಪದ ವೀರರ ಕಾವ್ಯವೆಂಬುದಕ್ಕೆ ಜಾನಪದ ಸೊಗಡನ್ನು ಒಳಗೊಂಡಿದೆ. ಶಾಸ್ತ್ರ, ಶಕುನ, ಮೂಢನಂಬಿಕೆ, ಆಚರಣೆಯನ್ನು ಈ ಕಾವ್ಯದಲ್ಲಿ ಗುರುತಿಸಲಾಗಿದೆ. ಹೀಗೆ ವಿವಿಧ ನೆಲೆಗಳಲ್ಲಿ ಗುಂಡಬ್ರಹ್ಮಯ್ಯಗಳ ಸಾಹಿತ್ಯವು ಅಭಿವ್ಯಕ್ತಿಗೊಂಡಿರುವುದನ್ನು ಮೇಲಿನಂತೆ ಕಾಣಲಾಗಿದೆ.

ಅಡಿಟಿಪ್ಪಣಿಗಳು

೧. ವೀರಶೈವ ಚಂಪೂ ಸಾಹಿತ್ಯ: ಪ್ರೊ.ಆರ್.ರಾಚಪ್ಪ, ಪುಟ.೩೧, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೨೦೦೩.

೨. ಗುಂಡಬ್ರಹ್ಮಯ್ಯಗಳ ಸಾಹಿತ್ಯ: ಸಂ.ಡಾ.ಕೆ.ರವೀಂದ್ರನಾಥ, ಸಂಧಿ ೧, ಪುಟ ೩೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೩. ಅದೇ. ಸಂಧಿ ೧, ಪುಟ ೩೭.

೪. ಜನಪದ ಶರಣರ ಕಾವ್ಯಗಳು: ಸಂ.ಪಿ.ಕೆ.ರಾಜಶೇಖರ್, ಪುಟ ೪೩೫, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೦.

೫. ಗುಂಡಬ್ರಹ್ಮಯ್ಯಗಳ ಸಾಹಿತ್ಯ: ಸಂ.ಡಾ.ಕೆ.ರವೀಂದ್ರನಾಥ, ಸಂಧಿ ೩, ಪುಟ ೭೫-೭೭, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೬. ಅದೇ. ಸಂಧಿ ೪, ಪದ್ಯ ೪೯-೫೦.

೭. ಅದೇ. ಪುಟ ೪.

೮. ಗುಂಡಬ್ರಹ್ಮಯ್ಯಗಳ ಚರಿತ್ರೆ (ಸುವ್ವಿ): ಸಂ.ವಿ.ಶಿವಾನಂದ, ಪು.೨೯, ಅಖಂಡೇಶ್ವರ ಗ್ರಂಥಮಾಲೆ ಜೇವರಗಿ ಜಿ.ಗುಲಬರ್ಗಾ, ೧೯೭೪.

೯. ಗುಂಡಬ್ರಹ್ಮಯ್ಯಗಳ ಸಾಹಿತ್ಯ: ಡಾ.ಕೆ.ರವೀಂದ್ರನಾಥ, ಪುಟ ೧೪೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೧೦. ಅದೇ. ಸಂಧಿ ೧, ಪದ್ಯ ೨೩, ಪುಟ ೧೪೯.

೧೧. ಅದೇ. ಸಂಧಿ ೧೮, ಪದ್ಯ ೧೪೬, ಪುಟ.೩೭೯.

೧೨. ಅದೇ. ಪುಟ.೬.

೧೩. ಅದೇ. ಪುಟ.೧೩.

೧೪. ಅದೇ. ಪುಟ. ೧೩.

೧೫. ಕರ್ನಾಟಕ ಕವಿಚರಿತೆ ಭಾಗ ೧: ಸಂ.ಆರ್.ನರಸಿಂಹಚಾರ್ಯ, ಪುಟ ೨೪೧, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೦೭.

೧೬. ಗುಂಡಬ್ರಹ್ಮಯ್ಯಗಳ ಚರಿತ್ರೆ: ಸಂ.ವಿ.ಶಿವಾನಂದ, ಪುಟ ೨೫, ಅಖಂಡೇಶ್ವರ ಗ್ರಂಥಮಾಲೆ ಜೇವರಗಿ, ಜಿ.ಗುಲಬರ್ಗಾ, ೧೯೭೪.

೧೭. ಗುಂಡಬ್ರಹ್ಮಯ್ಯಗಳ ಸಾಹಿತ್ಯ: ಡಾ.ಕೆ.ರವೀಂದ್ರನಾಥ, ಸಂಧಿ ೬, ಪದ್ಯ ೨೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೧೮. ಅದೇ.

೧೯. ಅದೇ. ಸಂಧಿ ೩, ಪದ್ಯ ೪೨.

೨೦. ಅದೇ. ಪದ್ಯ ೫, ಪುಟ ೩೯೦.

೨೧. ಜನಪದ ಶರಣ ಕಾವ್ಯಗಳು: ಸಂ.ಪಿ.ಕೆ.ರಾಜಶೇಖರ್, ಪುಟ IXXVii, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೧.

೨೨. ಅದೇ. ಪುಟ ೪೨೫.

೨೩. ಗುಂಡಬ್ರಹ್ಮಯ್ಯಗಳ ಚರಿತ್ರೆ: ಸಂ.ವಿ.ಶಿವಾನಂದ, ಸಂಧಿ ೧, ಪದ್ಯ ೭೮, ಅಖಂಡೇಶ್ವರ ಗ್ರಂಥಮಾಲೆ ಜೇವರಗಿ, ಜಿ.ಗುಲಬರ್ಗಾ, ೧೯೭೪.

೨೪. ಅದೇ. ಸಂಧಿ ೧, ಪದ್ಯ ೭೩.

೨೫. ಗುಂಡಬ್ರಹ್ಮಯ್ಯಗಳ ಸಾಹಿತ್ಯ: ಸಂ.ಡಾ.ಕೆ.ರವೀಂದ್ರನಾಥ, ಸಂಧಿ ೧, ಪದ್ಯ ೫, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೨೬. ಅದೇ. ಸಂಧಿ ೧೫, ಪದ್ಯ ೩೭.

೨೭. ಅದೇ. ಸಂಧಿ ೧೫, ಪದ್ಯ ೮೧.

೨೮. ಅದೇ. ಸಂಧಿ ೧೪, ಪದ್ಯ ೮೯.

೨೯. ಗೌರವ: ಸಂ.ಡಾ.ಬಿ.ವಿ.ಶಿರೂರ (ನಾಂದ್ಯ-ಸ್ತೋತ್ರ ಸಾಹಿತ್ಯ: ಶ್ರೀ ಟಿ.ಆರ್.ಮಹದೇವ) ಪುಟ ೨೦೪, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, ೧೯೮೬.

೩೦. ಗುಂಡಬ್ರಹ್ಮಯ್ಯಗಳ ಸಾಹಿತ್ಯ: ಸಂ: ಡಾ.ಕೆ.ರವೀಂದ್ರನಾಥ, ಸಂಧಿ ೨, ಪದ್ಯ ೧೫, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೩೧. ಅದೇ. ಸಂಧಿ ೩, ಪದ್ಯ ೫.

೩೨. ಅದೇ. ಪುಟ ೩೮೫.

೩೩. ಚೆನ್ನಬಸವಣ್ಣನವರ ವಚನಗಳು: ಸಂ.ಡಾ.ಆರ್.ಸಿ.ಹಿರೇಮಠ, ವಚನ ೧೬೩೯.

೩೪. ಬಸವಪುರಾಣ: ಸಂ.ಆರ್.ಸಿ.ಹಿರೇಮಠ, ಸಂಧಿ ೫೭, ಶ್ರೀ ನಿ.ಪ್ರ.ಸ್ವ.ಮಹಾಂತ ಸ್ವಾಮಿಗಳು, ಶ್ರೀಗುರು ಮೃತ್ಯುಂಜಯ ಸ್ವಾಮಿಗಳು, ಶ್ರೀಮುರುಘಾಮಠ, ಧಾರವಾಡ, ೧೯೭೧.

೩೫. ಪದ್ಮರಾಜ ಪುರಾಣ: ಸಂ.ಆರ್.ಸಿ.ಹಿರೇಮಠ, ೨-೨೬೯, ಶ್ರೀನಿ. ಪ್ರ.ಸ್ವಂ.ಮೃತ್ಯುಂಜಯ ಮಹಾಸ್ವಾಮಿಗಳು ಮುರುಘಾಮಠ, ಧಾರವಾಡ, ೧೯೫೮.

೩೬. ಶಿವತತ್ತ್ವ ಚಿಂತಾಮಣಿ: ಸಂ.ಎಸ್.ಬಸಪ್ಪ, ಪುಟ ೩೧೨, ಪ್ರಾಚ್ಯವಸ್ತು ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೬೦.

೩೭. ವೀರಶೈವಾಮೃತ ಪುರಾಣ: ಸಂ.ವೀರಪ್ಪಶಾಸ್ತ್ರಿ ೧-೨೪, ಎನ್.ಎಸ್.ಎಸ್. ಕಲ್ಯಾಣ ಕೇಂದ್ರ, ಬೆಂಗಳೂರು, ೧೯೦೬.

೩೮. ಗುಂಡಬ್ರಹ್ಮಯ್ಯಗಳ ಸಾಹಿತ್ಯ: ಸಂ.ಡಾ.ಕೆ.ರವೀಂದ್ರನಾಥ, ಪುಟ ೩೪-೩೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೩೯. ಮಾರ್ಗ ಸಂಪುಟ ೨: ಡಾ.ಎಂ.ಎಂ.ಕಲಬುರ್ಗಿ, ಪುಟ.೫೨, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೦.

೪೦. ಗುಂಡಬ್ರಹ್ಮಯ್ಯಗಳ ಸಾಹಿತ್ಯ: ಸಂ.ಡಾ.ಕೆ.ರವೀಂದ್ರನಾಥ, ಸಂಧಿ ೧, ಪದ್ಯ ೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೪೧. ಅದೇ. ಪುಟ ೧೨೮.

೪೨. ಅದೇ. ಸಂಧಿ ೪, ಪದ್ಯ ೮೨-೮೫.

೪೩. ಅದೇ. ಪುಟ ೨೭.

೪೪. ಗುಂಡಬ್ರಹ್ಮಯ್ಯಗಳ ಚರಿತ್ರೆ (ಸುವ್ವಿ): ವಿ.ಶಿವಾನಂದ, ಪುಟ ೮೦, ಅಖಂಡೇಶ್ವರ ಗ್ರಂಥಮಾಲೆ ಚೇವರಗಿ, ಜಿ.ಗುಲಬರ್ಗಾ, ೧೯೭೪.

೪೫. ಗುಂಡಬ್ರಹ್ಮಯ್ಯಗಳ ಸಾಹಿತ್ಯ: ಸಂ.ಡಾ.ಕೆ.ರವೀಂದ್ರನಾಥ, ಸಂಧಿ ೧, ಪದ್ಯ ೫೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೪೬. ಜನಪದ ಶರಣ ಕಾವ್ಯಗಳು: ಸಂ.ಪಿ.ಕೆ.ರಾಜಶೇಖರ, ಪುಟ ೪೧೭, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೧೦.

೪೭. ಅದೇ. ಪುಟ IXXXiii

೪೮. ಗುಂಡಬ್ರಹ್ಮಯ್ಯಗಳ ಸಾಹಿತ್ಯ: ಸಂ.ಡಾ.ಕೆ.ರವೀಂದ್ರನಾಥ, ಸಂಧಿ ೧, ಪದ್ಯ ೨,೫, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೪೯. ಅದೇ. ಸಂಧಿ ೧, ಪದ್ಯ ೪.

೫೦. ಅದೇ. ಸಂಧಿ ೧, ಪದ್ಯ ೩.

೫೧. ಅದೇ. ಸಂಧಿ ೧, ಪದ್ಯ ೨೯-೩೦.

೫೨. ಅದೇ. ಸಂಧಿ ೧, ಪದ್ಯ ೪೮, ೫೨, ೫೩.

೫೩. ಅದೇ. ಸಂಧಿ ೧, ಪದ್ಯ ೬೧.

೫೪. ಅದೇ. ಸಂಧಿ ೧, ಪದ್ಯ ೭೮, ೭೦, ೭೨.

೫೫. ಅದೇ. ಸಂಧಿ ೧, ಪದ್ಯ ೮೮-೮೯.

೫೬. ಗುಂಡಬ್ರಹ್ಮಯ್ಯಗಳ ಚರಿತ್ರೆ (ಸುವ್ವಿ): ಸಂ.ವಿ.ಶಿವಾನಂದ, ಸಂಧಿ ೧, ಪದ್ಯ ೧೦೫, ೧೦೭, ಅಖಂಡೇಶ್ವರ ಗ್ರಂಥಮಾಲೆ ಚೇವರಗಿ, ಜಿ.ಗುಲಬರ್ಗಾ, ೧೯೭೪.

೫೭. ಗುಂಡಬ್ರಹ್ಮಯ್ಯಗಳ ಸಾಹಿತ್ಯ: ಸಂ: ಡಾ.ಕೆ.ರವೀಂದ್ರನಾಥ, ಸಂಧಿ ೧, ಪದ್ಯ ೧೨೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೫೮. ಅದೇ. ಸಂಧಿ ೧, ಪದ್ಯ ೧೩೧, ೧೩೩.

೫೯. ಅದೇ. ಸಂಧಿ ೧, ಪದ್ಯ ೧೦, ೧೩.

೬೦. ಅದೇ. ಸಂಧಿ ೨, ಪದ್ಯ ೨೮, ೩೧.

೬೧. ಅದೇ. ಸಂಧಿ ೨, ಪದ್ಯ ೩೯, ೪೧.

೬೨. ಅದೇ. ಸಂಧಿ ೨, ಪದ್ಯ ೫೨, ೫೩.

೬೩. ಅದೇ. ಸಂಧಿ ೨, ಪದ್ಯ ೫೭, ೫೦.

೬೪. ಅದೇ. ಸಂಧಿ ೨, ಪದ್ಯ ೫೯, ೬೦.

೬೫. ಅದೇ. ಸಂಧಿ ೨, ಪದ್ಯ ೭೪, ೭೫, ೭೮.

೬೬. ಅದೇ. ಸಂಧಿ ೨, ಪದ್ಯ ೧೨೯, ೧೩೧.

೬೭. ಅದೇ. ಸಂಧಿ ೨, ಪದ್ಯ ೧೭೯, ೧೮೦.

೬೮. ಅದೇ. ಸಂಧಿ ೨, ಪದ್ಯ ೧೯೫.

೬೯. ಅದೇ. ಸಂಧಿ ೩, ಪದ್ಯ ೨೮, ೫೨.

೭೦. ಅದೇ. ಸಂಧಿ ೩, ಪದ್ಯ ೫೩, ೫೪.

೭೧. ಅದೇ. ಸಂಧಿ ೩, ಪದ್ಯ ೯೮.

೭೨. ಅದೇ. ಸಂಧಿ ೩, ಪದ್ಯ ೧೨೨-೧೨೩.

೭೩. ವಚನ ಸಾವಿರ: ಸಂ.ಓ.ಎಲ್.ನಾಗಭೂಷಣಸ್ವಾಮಿ, ಪುಟ ೪೯, ವಚನ ೧೬೮, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೭೪. ಗುಂಡಬ್ರಹ್ಮಯ್ಯಗಳ ಸಾಹಿತ್ಯ: ಸಂ.ಡಾ.ಕೆ.ರವೀಂದ್ರನಾಥ, ಸಂಧಿ ೩, ಪದ್ಯ ೧೨೭, ೧೩೧, ೧೩೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೭೫. ಅದೇ. ಸಂಧಿ ೩, ಪದ್ಯ ೧೪೧, ೧೪೦.

೭೬. ಅದೇ. ಸಂಧಿ ೩, ಪದ್ಯ ೧೬೩, ೧೬೪.

೭೭. ಅದೇ. ಸಂಧಿ ೩, ಪದ್ಯ ೨೧೧.

೭೮. ಅದೇ. ಸಂಧಿ ೩, ಪದ್ಯ ೨೨೭.

೭೯. ಅದೇ. ಸಂಧಿ ೪, ಪದ್ಯ ೧೯, ೨೫.

ಅಧ್ಯಾಯ-ಐದು

ಗುಂಡಬ್ರಹ್ಮಯ್ಯಗಳ ಶಿಲ್ಪಸಂಪತ್ತು

ಅಧ್ಯಾಯ-ಐದು

ಗುಂಡಬ್ರಹ್ಮಯ್ಯಗಳ ಶಿಲ್ಪಸಂಪತ್ತು

ವಚನ ಸಾಹಿತ್ಯದಂತೆ ಪ್ರಾಚೀನ ಕಾಲದಿಂದಲೂ ಅನೇಕ ಐತಿಹಾಸಿಕ ಘಟನೆಗಳು ನಡೆದುಹೋಗಿವೆ. ಬೇರೆ ಬೇರೆ ವಂಶಗಳ ಅರಸರು ಕರ್ನಾಟಕದ ವಿವಿಧ ಭಾಗಗಳಲ್ಲಿ ಆಡಳಿತ ನಡೆಸಿ ರಾಜಕೀಯ, ಸಾಮಾಜಿಕ, ಧಾರ್ಮಿಕ, ಅರ್ಥಿಕ ಕ್ಷೇತ್ರಗಳಲ್ಲಿ ಮಹತ್ವದ ಕೊಡುಗೆಯನ್ನಿತ್ತು ಹೋಗಿದ್ದಾರೆ. ಅನೇಕ ಭೀಕರ ಯುದ್ಧಗಳು ಗತಿಸಿಹೋಗಿವೆ. ನಾಡಿನ ಸಾಂಸ್ಕೃತಿಕ ಪರಂಪರೆ ಉಳಿಸಲು ತಮ್ಮ ಜೀವನವನ್ನೆ ಬಲಿಕೊಟ್ಟಿದ್ದಾರೆಂದು ಇತಿಹಾಸ ಮತ್ತು ಸಾಹಿತ್ಯ ಗ್ರಂಥಗಳಿಂದ ತಿಳಿಯಬಹುದು. ಇವುಗಳ ಜೊತೆಗೆ ಇಂತಹ ಘಟನೆಗಳನ್ನು ಪುಷ್ಟೀಕರಿಸಲು ಐತಿಹಾಸಿಕ ಸಾಮಾಗ್ರಿಗಳಾದ ಶಾಸನ, ನಾಣ್ಯ, ಶಿಲಾವಿಗ್ರಹಗಳು ಇತರ ಆಧಾರಗಳು ಪ್ರಮುಖ ಪಾತ್ರವಹಿಸಿವೆ.

ಕರ್ನಾಟಕವನ್ನಾಳಿದ ಅರಸರು, ಅಧಿಕಾರಿಗಳು ದೇವಸ್ಥಾನಗಳನ್ನು ಅಥವಾ ಐತಿಹಾಸಿಕ ಕಟ್ಟಡಗಳನ್ನು ಕಟ್ಟಿಸಿದರು. ಅಲ್ಲಿ ರಾಮಾಯಣ, ಮಹಾಭಾರತ, ಪಂಚತಂತ್ರ ಹೀಗೆ ವಿವಿಧ ಕಾವ್ಯ, ಪುರಾಣಗಳಲ್ಲಿ ಬರುವ ಕಥೆಗಳನ್ನು ದೇವಸ್ಥಾನದ ಗೋಡೆ, ಕಂಬಗಳ ಮೇಲೆ ಕೆತ್ತಿಸಿ, ದೇವಸ್ಥಾನಗಳನ್ನು ನೋಡುವ ಜನರಿಗೆ ಅಂದವಾಗಿ ಕಾಣುವಂತೆ ಮಾಡಿದ್ದಾರೆ. ಈ ರೀತಿ ವಿವಿಧ ಧರ್ಮಗಳಿಗೆ ಸಂಬಂಧಿಸಿದ ಕಾವ್ಯ-ಪುರಾಣಗಳಲ್ಲಿ ಬರುವ ಕಥೆಗಳ ಶಿಲ್ಪಗಳನ್ನು ನಾವು ದೇವಸ್ಥಾನಗಳಲ್ಲಿ ಕಾಣಬಹುದು. ಜೈನ, ಭೌದ್ಧ ಧರ್ಮಗಳಿಗೆ ಸಂಬಂಧಿಸಿದ ಬುದ್ಧನ, ಮಹಾವೀರನ ಶಿಲ್ಪಗಳು ಅಲ್ಲಲ್ಲಿ ಕಂಡುಬರುತ್ತವೆ. ಶೈವಧರ್ಮಕ್ಕೆ ಸಂಬಂಧಿಸಿದ ಶಿಲ್ಪಗಳಲ್ಲಿ ಹೆಚ್ಚಾಗಿ ಶಿವನ ಲೀಲೆಗಳ ಶಿಲ್ಪಗಳ - ಕಾಮದಹನ ಲೀಲೆ, ಗಿರಿಜಾ ಕಲ್ಯಾಣ, ಕಿರಾತಾರ್ಜುನ ಮುಂತಾದ ಶಿಲ್ಪಗಳು ಹೆಚ್ಚಾಗಿ ದೇವಸ್ಥಾನಗಳಲ್ಲಿ ಕಂಡುಬರುತ್ತವೆ. ಆದರೆ ಶೈವಧರ್ಮದ ಉನ್ನತಿಗಾಗಿ ಹೋರಾಡಿದ ಪುರಾತನರ ಶಿಲ್ಪಗಳಾಗಲಿ ಅಥವಾ ೧೨-೧೩ನೇಯ ಶತಮಾನದಲ್ಲಿ ವೀರಶೈವ ಧರ್ಮದ ಮಹೋನ್ನತಿಗಾಗಿ ಹೋರಾಡಿದ ಶಿವಶರಣರ ಶಿಲ್ಪಗಳಾಗಲಿ ಹೆಚ್ಚಾಗಿ ಕಂಡುಬರುವುದಿಲ್ಲ.

ಇವರ ಬಗ್ಗೆ ಪುರಾಣ-ಪುಣ್ಯಕಥೆಗಳ ಗ್ರಂಥಗಳೇ ಹೆಚ್ಚಾಗಿ ದೊರೆಯುತ್ತವೆ. ಕರ್ನಾಟಕದಲ್ಲಿ ಬೆರಳೆಣಿಕೆಯಷ್ಟು ದೇವಸ್ಥಾನಗಳಲ್ಲಿ ಮಾತ್ರ ಶಿವಶರಣರ ಶಿಲ್ಪಗಳು ದೊರೆತಿರುವುದು ಶೋಚನೀಯ ಸಂಗತಿ. ತಮ್ಮ ನಡೆ-ನುಡಿಯಿಂದ ಉನ್ನತ ಸ್ಥಾನಕ್ಕೇರಿದ ಶಿವಶರಣರ ಶಿಲ್ಪಗಳು ಹೆಚ್ಚಾಗಿ ದೊರೆಯದಿರುವುದು ವಿಪರ್ಯಾಸದ ಸಂಗತಿಯೆ ಸರಿ. ವಿನೋದಾ ಪಾಟೀಲರು "ಸ್ಥಾವರ ಲಿಂಗಕ್ಕೆ ಹೆಚ್ಚು ಮಹತ್ವ ಕೊಡದೆ

ಇಷ್ಟಲಿಂಗ ಪೂಜೆಯೇ ಶ್ರೇಷ್ಠವೆಂದು ನಂಬಿದ್ದೇ ಇದಕ್ಕೆ ಕಾರಣವಿರಬಹುದು"[೧] ಎಂದು ಹೇಳಿದ್ದಾರೆ. "ಅರವತ್ತು ಮೂರು ಪುರಾತನರು ತಮ್ಮ ನಿಷ್ಠೆ, ಭಕ್ತಿಯಿಂದ ಶಿವನನ್ನು ಒಲಿಸಿಕೊಂಡು ಜನರಲ್ಲಿ ನಾಸ್ತಿಕತೆಯನ್ನು ತೊಲಗಿಸಿ ಆಸ್ತಿಕತೆಯನ್ನು ಬೆಳೆಸಿದ್ದಲ್ಲದೆ, ಅವರೂ ಪೂಜ್ಯನೀಯರಾಗಿ ಮೆರೆದಿದ್ದಾರೆ. ಈ ಕಾರಣಕ್ಕಾಗಿಯೇ ಇವರ ಮಹಿಮೆ ತಮಿಳುನಾಡಿನಲ್ಲಿ ಅಷ್ಟೇ ಅಲ್ಲದೆ ಕರ್ನಾಟಕದಲ್ಲಿಯೂ ಹರಡಿತು. ಜನರು ಇವರನ್ನು ಪ್ರಾರ್ಥಿಸುವುದರ ಜೊತೆಗೆ ದೇವಸ್ಥಾನಗಳಲ್ಲಿ ಅವರ ವಿಗ್ರಹಗಳನ್ನು ಸ್ಥಾಪಿಸಿ ಪೂಜೆ ಸಲ್ಲಿಸುವ ಸಂಪ್ರದಾಯ ಬೆಳೆದು ಬಂದಿದೆ"[೨] "ತಮಿಳುನಾಡಿನಲ್ಲಿ ಶೈವಧರ್ಮ ಪ್ರಸಾರ ಮಾಡಿದ ಅರುವತ್ತು ಮೂವರು ಪುರಾತನರ ಪ್ರಭಾವ ಕರ್ನಾಟಕದ ಮೇಲೆ ಅದರಲ್ಲೂ ವಿಶೇಷವಾಗಿ ಶಿವಶರಣರ ಮೇಲಾಗಿದೆ"[೩] ಈ ಅರುವತ್ತು ಮೂರು ಪುರಾತನರನ್ನು ಕುರಿತು ತಮಿಳುನಾಡಿನಲ್ಲಿ ಹಾಗೆಯೇ ಕನ್ನಡದಲ್ಲಿ ಅಧ್ಯಯನ ನಡೆದಿರುವುದು ಕಾಣಬಹುದು. ಶರಣರು ತಮ್ಮ ಜೀವನದ ಅನುಭವಗಳನ್ನು ವಚನಗಳ ಮೂಲಕ ಅಭಿವ್ಯಕ್ತಪಡಿಸಿದರು.

ವಚನಗಳ ಒಡಲಿನಲ್ಲಿ ಅಡಗಿದ ಶರಣರ ವ್ಯಕ್ತಿತ್ವ ಮತ್ತು ಅವರ ಬದುಕನ್ನು ವಿದ್ವಾಂಸರು ಅಧ್ಯಯನ ಕೈಗೊಂಡು ವ್ಯವಸ್ಥಿತವಾಗಿ ಲೇಖನ, ಗ್ರಂಥಗಳ ಮೂಲಕ ಪ್ರಕಟಿಸಿದರು. ನಾಡಿನ ಚರಿತ್ರೆ ಮತ್ತು ಸಂಸ್ಕೃತಿಯ ಅಧ್ಯಯನದ ಪ್ರಮುಖ ಆಕರಗಳಾದ ಶಾಸನಗಳನ್ನು ಅಭ್ಯಾಸಿಸಿ ಅಲ್ಲಿ ದಾಖಲಿಸಲ್ಪಟ್ಟ ಶರಣರ ಇತಿಹಾಸವನ್ನು ಕೃತಿಯ ಮೂಲಕ ಪ್ರಕಟಿಸಿದರು. "ಕರ್ನಾಟಕದಲ್ಲಿ ಶರಣ ಪರಂಪರೆಯನ್ನು ನಿಚ್ಚಳವಾಗಿ ಪ್ರಾರಂಭಿಸಿದವರೆಂದರೆ, ಕಲ್ಯಾಣದ ಶಿವಶರಣರು. ಇವರಿಗೆ ವಂದ್ಯರಾದ ೬೩ ಪುರಾತನರನ್ನು ಮತ್ತು ಭೋಜ ಮೊದಲಾದ ಶಿವೋಪಾಸಕರನ್ನು ಈ ಶರಣವರ್ಗದಲ್ಲಿ ಪರಿಗಣಿಸಲಾಗುತ್ತದೆ. ಅರವತ್ತು ಮೂವರು ಶಿವಶರಣರು ತಮಿಳುನಾಡಿಗೆ ಸಂಬಂಧಿಸಿದವರು. ರಾಜವಂಶ ಸಂಭೂತರೂ, ರಾಜ್ಯಪೂಜ್ಯರೂ ಆದ ಈ ಕೆಲವರ ಅನೇಕ ವಿಗ್ರಹಗಳು, ದೇವಾಲಯ ಮತ್ತು ಶಾಸನಗಳೂ ತಮಿಳುನಾಡಿನಲ್ಲಿ ಕಾಣಸಿಗುತ್ತವೆ. ಕರ್ನಾಟಕದಲ್ಲಿ ಮಾತ್ರ ಈ ಸಂಖ್ಯೆ ತೀರ ಕಡಿಮೆ. ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯ, ಚಾಮರಾಜನಗರದ ಚಾಮರಾಜೇಶ್ವರ ದೇವಾಲಯ ಮತ್ತು ಬಳ್ಳಾರಿಯ ಮಲ್ಲಿಕಾರ್ಜುನ ದೇವಾಲಯಗಳಲ್ಲಿ ಇವರ ವಿಗ್ರಹಗಳಿವೆಯೆಂದು ತಿಳಿದು ಬಂದಿದೆ."[೪]

ಕರ್ನಾಟಕದ ಶಿವಶರಣರ ಅಧ್ಯಯನಕ್ಕೆ ಕೇವಲ ಪುರಾಣಗಳು, ಕಾವ್ಯಗಳು, ಶಾಸನಗಳು, ಕೈಫಿಯತ್ತು, ಗವಿ - ಮಠಗಳು, ಸಮಾಧಿ, ಸ್ಥಳ-ನಿವೇಶನಗಳು ಮಾತ್ರ ಆಧಾರವಾಗಲಾರವು. ಇವುಗಳ ಜೊತೆಗೆ ಅಮೂಲ್ಯವಾದ ಐತಿಹಾಸಿಕ ದಾಖಲೆಯೆನಿಸುವ ಶಿಲ್ಪಗಳೂ ಸಹ ಪ್ರಮುಖ ಆಕರಗಳಾಗಿವೆ. ಈ ಶಿಲ್ಪಗಳ ಶೋಧ ಸಮರ್ಪಕವಾಗಿ ನಡೆದರೆ ಶಿವಶರಣರ ಚರಿತ್ರೆಗೆ ಇತಿಹಾಸದಲ್ಲಿ ನಿಷ್ಕಳಂಕವಾದ ಸ್ಥಾನ ದೊರೆತಂತಾಗುತ್ತದೆ. ಆದ್ದರಿಂದ ಶಿಲ್ಪಗಳು ಪ್ರಮುಖವಾದ ಆಕರ ಸಾಮಾಗ್ರಿಗಳಾಗಿವೆ. ಇವುಗಳು ಬೇರೆ ಯಾವ ಆಕರ ಸಾಮಾಗ್ರಿಗಳು ಒದಗಿಸದೆ ಇರುವ ಮಾಹಿತಿಯನ್ನು ಒದಗಿಸುತ್ತವೆ. "ಶರಣರನ್ನು ಕಾವ್ಯಗಳಲ್ಲಿ ತರುವಾಯ ಶಾಸನಗಳಲ್ಲಿ ಹುಡುಕುವ ಪ್ರಯತ್ನ ಈ ವರೆಗೆ ತೃಪ್ತಿಕರವಾಗಿ ನಡೆದಿದ್ದು ಇನ್ನು ಮುಂದೆ

ಶಿಲ್ಪಗಳಲ್ಲಿ ಶೋಧಿಸುವ ಕಾರ್ಯ ಸಮರ್ಪಕವಾಗಿ ನಡೆಯಬೇಕಾಗಿದೆ. ಪವಾಡವನ್ನು ನಿರೂಪಿಸುವ ಕಾವ್ಯಗಳಿಗಿಂತ ಚರಿತ್ರೆಯನ್ನು ಹೇಳುವ ಶಾಸನಗಳು ಹೆಚ್ಚು ವಿಶ್ವಸನೀಯವಾಗಿವೆ. ಈ ಶಾಸನಗಳು ಶರಣರ ಶಬ್ದಚಿತ್ರವನ್ನು ಬಿಡಿಸಿದರೆ ಶಿಲ್ಪಗಳು ರೂಪಚಿತ್ರವನ್ನು ಕಂಡರಿಸಿವೆ."[3] ಪ್ರತಿಯೊಂದು ವಿಗ್ರಹವನ್ನು ಶಿಲ್ಪಶಾಸ್ತ್ರದ ಹಿನ್ನೆಲೆಯಲ್ಲಿ ಅಭ್ಯಸಿಸಿ ಅದರ ಶಿಲ್ಪವಿನ್ಯಾಸ, ಕಾಲ, ರೂಪ, ಚಿತ್ರಿಸಿದ ಭಂಗಿ ಇತ್ಯಾದಿ ಅಂಶಗಳನ್ನು ಅರಿತುಕೊಳ್ಳುವುದು ಮುಖ್ಯವಾಗಿದೆ.

ಜೆ. ಎಂ. ನಾಗಯ್ಯರು 'ಶಿಲ್ಪಗಳಲ್ಲಿ ಶಿವಶರಣರು' ಎಂಬ ಶೀರ್ಷಿಕೆಯಡಿಯಲ್ಲಿ ಸಂಶೋಧನ ಕಾರ್ಯವನ್ನು ಕೈಗೊಂಡರು. ಇದರ ಫಲವಾಗಿ ಮುಂದೆ 'ಕರ್ನಾಟಕದ ಶಿಲ್ಪಗಳಲ್ಲಿ ಶಿವಶರಣರು' ಎಂಬ ಕೃತಿಯನ್ನು ರಚಿಸಿದರು. ನಂತರ ವಿನೋದಾ ಪಾಟೀಲರು 'ಶಿಲ್ಪಗಳಲ್ಲಿ ಶಿವಭಕ್ತರು' ಎಂಬ ಕೃತಿಯಲ್ಲಿ ಶಿವಭಕ್ತರ ಶಿಲ್ಪಗಳನ್ನು ಪರಿಚಯಿಸಿದರು. ಆದರೂ ಶರಣರ ರೂಪವನ್ನು ಪ್ರತಿಬಿಂಬಿಸುವ ಶಿಲ್ಪಗಳು ಹೆಚ್ಚು ಲಭ್ಯವಾಗಿಲ್ಲ. ಇದಕ್ಕೆ ಕಾರಣ ನಮ್ಮಲ್ಲಿ ಚರಿತ್ರೆಯನ್ನು ತಿಳಿಯುವ ಆಕರಗಳ ಬಗ್ಗೆ ಅಧ್ಯಯನ ಕೈಗೊಳ್ಳುವ ಉತ್ಸಾಹಿಗಳ ಸಂಖ್ಯೆ ಕಡಿಮೆ ಇರುವುದು. ಈ ಕಾರಣದಿಂದಾಗಿ ಕರ್ನಾಟಕದಲ್ಲಿ ಕೆಲವು ಪ್ರದೇಶಗಳಲ್ಲಿ ಮಾತ್ರ ಶರಣರ ಶಿಲ್ಪಗಳು ಕಂಡುಬರುತ್ತವೆ. ಈ ರೀತಿಯ ಅಪರೂಪವಾದ ಶಿವಶರಣರ ಶೋಧ ನಡೆಯಬೇಕಾಗಿರುವುದು ಅವಶ್ಯವಾಗಿದೆ. ಈ ಶಿಲ್ಪಗಳ ಸಂಪತ್ತಿನಿಂದ ವೀರಶೈವ ಶಿವಶರಣರ ಸಂಸ್ಕೃತಿಯನ್ನು ಅವರ ಜೀವನದ ತತ್ವ - ಸಿದ್ಧಾಂತಗಳನ್ನು ತಿಳಿಯಲು ಸಹಕಾರಿಯಾಗುತ್ತದೆ. ಆದ್ದರಿಂದ ಅಲ್ಲಲ್ಲಿ ಲಭ್ಯವಾದ ಶಿವಶರಣರ ಶಿಲ್ಪಗಳನ್ನು ಶೋಧಿಸಿ ಅವುಗಳನ್ನು ಸಮಗ್ರವಾಗಿ ಅಧ್ಯಯನ ಮಾಡಬೇಕಾಗಿದೆ.

ಶಿಲ್ಪಗಳನ್ನು ಕೆತ್ತಿದ ಶಿಲ್ಪಿಗಳು ಶರಣರನ್ನು ನೋಡಿದ, ಇಲ್ಲವೆ ನೋಡಿದವರು ಹೇಳಿದ ವಿವರಗಳನ್ನು ಅಥವಾ ಕಾವ್ಯೋಕ್ತ ಸೂಚನೆಯನ್ನು ಆಧರಿಸಿ 'ತದ್ರೂಪ' ಮೂಡುವಂತೆ ಶಿಲ್ಪಗಳನ್ನು ಕೆತ್ತಿರುತ್ತಾರೆ. ಶರಣರ ರೂಪವನ್ನು ಇಂದು ನಾವು ಕಲ್ಪಿಸಿಕೊಂಡು ರಚಿಸುವ ಚಿತ್ರಗಳಿಗಿಂತ, ಪ್ರಾಚೀನ ಶಿಲಾವಿಗ್ರಹಗಳು ಸತ್ಯಕ್ಕೆ ಹೆಚ್ಚು ಹತ್ತಿರವಾಗಿರುತ್ತವೆ. ಶಿವಶರಣರ ರೂಪ, ಅವರು ತೊಟ್ಟ ಉಡುಗೆ-ತೊಡುಗೆ, ಕುಳಿತ ಭಂಗಿ, ಧರಿಸಿದ ಆಭರಣಗಳು, ವ್ಯಕ್ತಿತ್ವದ ವೈಶಿಷ್ಟ್ಯಗಳು ಅಲ್ಪಮಟ್ಟಿಗಾದರೂ ಮೂಲರೂಪದಲ್ಲಿ ಉಳಿದಿರುತ್ತವೆ. ಹೀಗಾಗಿ ಇತ್ತೀಚಿನ ಶಿಲ್ಪಗಳಿಗಿಂತ ಪ್ರಾಚೀನ ಶಿಲ್ಪಗಳು ಚರಿತ್ರೆ ಮತ್ತು ಸಂಸ್ಕೃತಿಯನ್ನು ತಿಳಿಸುತ್ತವೆ. ಕೆಲವು ಶಿವಶರಣರ ಶಿಲ್ಪಗಳಿಗೆ ಶಾಸನವಿರುವುದರಿಂದ ಅವುಗಳನ್ನು ಸುಲಭವಾಗಿ ಗುರುತಿಸಬಹುದು. ಶಾಸನವಿಲ್ಲದ ಶಿವಶರಣರ ಶಿಲ್ಪಗಳನ್ನು ಗುರುತಿಸುವಲ್ಲಿ ಎಚ್ಚರ ವಹಿಸಬೇಕಾಗುತ್ತದೆ.

ಶಿವಶರಣರ ಚರಿತ್ರೆಗೆ ಕೆಲವು ಪವಾಡಗಳು ಅಂಟಿಕೊಂಡಿರುತ್ತವೆ. ಪವಾಡವನ್ನು ಅಥವಾ ಅವರ ಕಾಯಕವನ್ನು ಸೂಚಿಸುವಂತೆ ಶಿಲ್ಪಗಳನ್ನು ಕೆತ್ತಿದ್ದರೆ, ಅವುಗಳನ್ನು ಸುಲಭವಾಗಿ ಇಂಥ ಶಿವಶರಣರ ಶಿಲ್ಪವೆಂದು ಗುರುತಿಸಬಹುದು. ಇನ್ನು ಕೆಲವು ಶಿಲ್ಪಗಳನ್ನು ಪರಂಪರಾಗತವಾಗಿ ಇದೇ ಶಿವಶರಣರ ಶಿಲ್ಪವೆಂದು ನಂಬಿಕೊಂಡು ಬಂದಿರಲಾಗಿರುತ್ತದೆ. ಇಂತಹ ವೇಳೆಯಲ್ಲಿ ಎಚ್ಚರಿಕೆಯಿಂದ ಗಮನಿಸಬೇಕು.

"ಶಿವಶರಣರ ಶಿಲ್ಪಗಳ ಶೋಧನೆಯ ಕಾರ್ಯ ಮೊದಲು ಪ್ರಾರಂಭವಾದದ್ದು ಕರ್ನಲ್ ಮೆಕೆಂಝಿಯವರಿಂದ. ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯದ ಮಹಾದ್ವಾರದ ಮೇಲೆ ಅಕ್ಕಮಹಾದೇವಿಯ ವಿಗ್ರಹವಿರುವುದನ್ನು ತೋರಿಸಿಕೊಟ್ಟರು."[೬] ಡಾ. ಬಿ. ಎಸ್.ಗದ್ದಿಗಿಮಠರವರು 'ಶಾಸನೋಕ್ತ ವೀರಶೈವರು' ಎಂಬ ಲೇಖನದಲ್ಲಿ ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿ ಶರಣರ ವಿಗ್ರಹವಿರುವುದನ್ನು ಸೂಚಿಸಿದರು. ಡಾ. ಗದ್ದಿಗಿಮಠರವರ ಸೂಚನೆಯನ್ನು ಆಧಾರವಾಗಿಟ್ಟುಕೊಂಡು ಡಾ. ವಿ. ಶಿವಾನಂದರು "ಮಧುಕೇಶ್ವರ ದೇವಾಲಯದ ಶರಣರ ವಿಗ್ರಹಗಳು"[೭] ಎಂಬ ಲೇಖನದಲ್ಲಿ ಈ ಶಿಲ್ಪಗಳಲ್ಲಿ ಒಂದನ್ನು ದೇವರದಾಸಿಮಯ್ಯನೆಂದು ತಪ್ಪಾಗಿ ಗುರುತಿಸಿದರು. ಡಾ. ವಿ. ಶಿವಾನಂದರಿಂದ ಗುರುತಿಸಲಾಗದ ಐದನೆಯ ವಿಗ್ರಹವನ್ನು 'ಇಕ್ಕದ ಮಾರಯ್ಯ'ನದೆಂದು ಡಾ. ಎಂ. ಎಂ. ಕಲಬುರ್ಗಿಯವರು "ಮಧುಕೇಶ್ವರ ದೇವಾಲಯದ ಶರಣರ ವಿಗ್ರಹಗಳು"[೮] ಎಂಬ ಲೇಖನದಲ್ಲಿ ಪ್ರಕಟಿಸಿದರು. ಅಬ್ಬಲೂರಿನ ಶಿವಶರಣರ ಶಿಲ್ಪಗಳನ್ನು ಡಾ. ಪಿ. ಬಿ. ದೇಸಾಯಿಯವರು[೯] ಶೋಧಿಸಿದ್ದರೆ, ಅಂತರವಳ್ಳಿಯ ಮೂರುಜಾವಿದೇವನ ಶಿಲ್ಪವನ್ನು ಡಾ. ಎಂ. ಎಂ. ಕಲಬುರ್ಗಿಯವರು ಬೆಳಕಿಗೆ ತಂದಿದ್ದಾರೆ.

ಆರ್. ಎಸ್. ಗುರವ ಅವರು ಮಡಿವಾಳ ಮಾಚಿದೇವನ ಎರಡು ವಿಗ್ರಹಗಳನ್ನು ಶೋಧಿಸಿ ಪ್ರಕಟಿಸಿದ್ದಾರೆ.[೧೦] ಕರ್ನಾಟಕದಾದ್ಯಂತ ದೊರೆಯುವ ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ವಿ. ಶಿವಾನಂದ ಮತ್ತಿತರರು ಲೇಖನಗಳ ಮೂಲಕ ಪ್ರಕಟಿಸಿದರು. ಇದರಿಂದ ಬಸವಣ್ಣ, ಅಕ್ಕಮಹಾದೇವಿ, ಇಕ್ಕದ ಮಾರಯ್ಯ, ಜೇಡರದಾಸಿಮಯ್ಯ,ಅಲ್ಲಮಪ್ರಭು, ಮೋಲ್ಲೆಬೊಮ್ಮಯ್ಯ, ಏಕಾಂತರಾಮಯ್ಯ, ಆದಯ್ಯ ಮತ್ತು ಗುಂಡಬ್ರಹ್ಮಯ್ಯಗಳ ಶಿಲ್ಪಗಳು ನಮಗೆ ಲಭ್ಯವಾದವು. ಹೀಗೆ ಲಭ್ಯವಾದ ಶರಣರ ಶಿಲ್ಪಗಳನ್ನು "ಬಸವಪೂರ್ವಯುಗ, ಬಸವಯುಗ, ಬಸವೋತ್ತರಯುಗ"[೧೧] ಎಂದು ವಿಂಗಡಿಸಿದರು. ಬಸವಪೂರ್ವ ಯುಗದಲ್ಲಿ ಅರುವತ್ತು ಮೂವರು ಪುರಾತನರನ್ನು, ಕುಂಬಾರ ಗುಂಡಯ್ಯ ಮತ್ತು ಜೇಡರದಾಸಿಮಯ್ಯರನ್ನು ಹೆಸರಿಸಿದ್ದಾರೆ. ಬಸವಯುಗದಲ್ಲಿ ಬಸವಣ್ಣ, ಮಡಿವಾಳ ಮಾಚಿದೇವ, ಅಕ್ಕಮಹಾದೇವಿ, ಏಕಾಂತರಾಮಯ್ಯ, ಆದಯ್ಯ, ನುಲಿಯ ಚೆಂದಯ್ಯ, ಆಯ್ದಕ್ಕಿ ಮಾರಯ್ಯ, ಇಕ್ಕದ ಮಾರಯ್ಯ, ಹಡಪದ ಅಪ್ಪಣ್ಣ ಮುಂತಾದವರನ್ನು ಹೆಸರಿಸಲಾಗಿದೆ. ಬಸವೋತ್ತರ ಕಾಲದ ಶಿವಶರಣರಲ್ಲಿ ಗುಂಡಬ್ರಹ್ಮಯ್ಯ, ಮೂರುಜಾವಿದೇವ, ಹೋಳಿನ ಹಂಪಯ್ಯ ಮುಂತಾದ ಶರಣರನ್ನು ಗುರುತಿಸಲಾಗಿದೆ.

ಬಸವೋತ್ತರ ಯುಗದ ಶಿವಶರಣರಲ್ಲಿ ಶಿಲ್ಪದಲ್ಲಿ ಪ್ರಧಾನವಾಗಿ ಕಂಡುಬರುವವರು ಗುಂಡಬ್ರಹ್ಮಯ್ಯಗಳು. ೧೨ನೆಯ ಶತಮಾನದಲ್ಲಿ ನಡೆದ ಕಲ್ಯಾಣ ಕ್ರಾಂತಿಯಲ್ಲಿ ಬಿಜ್ಜಳನನ್ನು ಕೊಂದ ಜಗದೇವ - ಮಲ್ಲಿಬೊಮ್ಮಣ್ಣಗಳೇ ಶಿವನ ಆಜ್ಞೆಯ ಮೇರೆಗೆ ಓರಂಗಲ್ಲಿನಲ್ಲಿ ಗುಂಡಬ್ರಹ್ಮಯ್ಯಗಳಾಗಿ ಜನಿಸಿದರೆಂದು 'ಚನ್ನಬಸವ ಪುರಾಣ' ದಲ್ಲಿ ವಿರುಪಾಕ್ಷ ಪಂಡಿತ ಪ್ರಸ್ತಾಪಿಸಿದ್ದಾನೆ. 'ಶರಣಾಗತ ರಕ್ಷಣೆ' ವೀರನ ಕರ್ತವ್ಯಗಳಲ್ಲಿ ಒಂದು. ಇದನ್ನು ಪರಿಪಾಲಿಸುತ್ತಿದ್ದ ವೀರನನ್ನು 'ಶರಣಾಗತ ವಜ್ರಪಂಜರ' ಎಂಬ ಬಿರುದಿನಿಂದ ಗೌರವಿಸುತ್ತಿದ್ದರು. ತಮ್ಮನ್ನು ಮೊರೆಹೊಕ್ಕ ಶರಣರ ರಕ್ಷಣೆ ಮಾಡುವುದು

ಗುಂಡಬ್ರಹ್ಮಯ್ಯಗಳ ವೀರವ್ರತವಾಗಿತ್ತು. ಶಿವನು ಇವರನ್ನು ಪರೀಕ್ಷಿಸಲು ಕಳ್ಳನ ವೇಷಧಾರಿಯಾಗಿ ಕಾಕತೀಯ ಅರಸ ಗಣಪತಿರಾಯನ ಅರಮನೆಯಲ್ಲಿ ಕಳ್ಳತನ ಮಾಡಿ ತನ್ನನ್ನು ರಕ್ಷಿಸುವಂತೆ ಗುಂಡಬ್ರಹ್ಮಯ್ಯಗಳ ಮೊರೆ ಹೋಗುತ್ತಾನೆ. ಅರಸನು ವಿಧಿಸಿದ ಶೂಲದ ಶಿಕ್ಷೆಯನ್ನು ಇವರು ಸ್ವೀಕರಿಸಿ ಶೂಲಕ್ಕೇರುತ್ತಾರೆ. ಶಿವ ಪ್ರತ್ಯಕ್ಷನಾಗಿ ಶೂಲ ಸಹಿತ ಅವರನ್ನು ಕೈಲಾಸಕ್ಕೆ ಒಯ್ಯುತ್ತಾನೆ.

ತಾವು ಹಿಡಿದ ಮತಕ್ಕೆ ಬದ್ಧರಾಗಿ ಶೂಲಕ್ಕೇರಿದ ಈ ಶಿವಭಕ್ತರನ್ನು ಕುರಿತು 'ಗುಂಡಬ್ರಹ್ಮಯ್ಯಗಳ ಸಾಹಿತ್ಯ', 'ಗುಂಡಬ್ರಹ್ಮಯ್ಯಗಳ ಚರಿತ್ರೆ', 'ಗಣಸಹಸ್ರನಾಮಾವಳಿ', 'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ', 'ಬಸವಪುರಾಣ', 'ಶಿವತತ್ವ ಚಿಂತಾಮಣಿ', 'ಕುಮಾರ ರಾಮನ ಸಾಂಗತ್ಯಗಳು', 'ಸೋಮನಾಥ ಪುರಾಣ' ಮುಂತಾದ ಕೃತಿಗಳು ವಿವರಗಳನ್ನು ಒದಗಿಸುತ್ತವೆ. ಗುಂಡಬ್ರಹ್ಮಯ್ಯರ ವೀರಗಾಥೆ ಕನ್ನಡ ನಾಡಿನಾದ್ಯಂತ ಗಾಢ ಪ್ರಭಾವ ಬೀರಿದ್ದುದು ಕಂಡುಬರುತ್ತದೆ. ಆದ್ದರಿಂದ ಕರ್ನಾಟಕಾದ್ಯಂತ ಇವರ ಶಿಲ್ಪಗಳು ಲಭ್ಯವಾಗಿವೆ. ಕೆಲವೆಡೆ ಇವರ ಹೆಸರಿನಲ್ಲಿ ದೇವಾಲಯಗಳೇ ಇವೆ. ಗುಂಡೇನಹಳ್ಳಿಯಲ್ಲಿ ಗುಂಡಬ್ರಹ್ಮಯ್ಯರ ದೊಡ್ಡ ದೇವಾಲಯವೇ ಇದೆ. ಇವರ ಕೆಲವು ಶಿಲ್ಪಗಳು ಇಂದಿಗೂ ಪೂಜೆಗೊಳ್ಳುತ್ತಿವೆ. ಇನ್ನೂ ಕೆಲವು ಶಿಲ್ಪಗಳು ಅನಾಥವಾಗಿ ಬಿದ್ದಿವೆ. ಇವೆಲ್ಲ ಒಂದೇ ಮಾದರಿಯಲ್ಲಿರದೆ ವೈವಿಧ್ಯತೆಯಿಂದ ಕೂಡಿವೆ. ಬನವಾಸಿಯ ಶಿಲ್ಪದ ಮೇಲೆ ಇವರ ಹೆಸರನ್ನು ಕೆತ್ತಲಾಗಿದೆ. ಇದನ್ನು ಬಿಟ್ಟರೆ ಮತ್ತಾವ ಶಿಲ್ಪದ ಮೇಲೂ ಶಾಸನವಿಲ್ಲ.

ಬಳ್ಳಾರಿ ಜಿಲ್ಲೆಯ ಬುಕ್ಕಸಾಗರದಲ್ಲಿ ಈ ಮೇಲೆ ವಿವರಿಸಿದ ಕಥೆಗೆ ಸಂಬಂಧಿಸಿದ ಎರಡು ಶಿಲ್ಪವನ್ನು ಕಾಣಬಹುದು. ಮೊದಲನೆಯದರಲ್ಲಿ ಇಬ್ಬರು ಪರಾಕ್ರಮಿಗಳು ವೀರಗಾಸಿಗಳನ್ನುಟ್ಟಿದ್ದು ಒಬ್ಬೊಬ್ಬರಿಗೆ ಎದುರಾಗಿ ವೀರ ಭಂಗಿಯಲ್ಲಿ ನಿಂತಿದ್ದಾರೆ. ಎರಡನೆಯದರಲ್ಲಿ ಅವರಿಬ್ಬರೂ ತಮ್ಮ ಕೈಗಳಲ್ಲಿ ಎರಡು ಬಿರುದಿನ ಕಹಳೆಗಳನ್ನು ಎತ್ತಿ ಹಿಡಿದಿದ್ದಾರೆ. ತಮ್ಮ ಧ್ಯೇಯ-ಧೋರಣೆಗಳನ್ನು ಕಹಳೆಯ ಮೂಲಕ ಊದಿ ಸಾರಿ ಪ್ರಕಟಿಸುತ್ತಿರುವಂತೆ ವೀರ ಭಂಗಿಯಲ್ಲಿ ಕೆತ್ತಲಾಗಿದೆ.

ಗುಂಡಬ್ರಹ್ಮಯ್ಯಗಳ ಶಿಲ್ಪಗಳ ಸಾಮಾನ್ಯ ಲಕ್ಷಣವೆಂದರೆ ಇವರು ಶೂಲಗಳ ಮೇಲೆ ಕುಳಿತಿರುವ ಇಲ್ಲವೆ ಅವುಗಳನ್ನು ತಮ್ಮ ಒಂದು ಕೈಯಿಂದ ಹಿಡಿದಿದ್ದರೆ ಇನ್ನೊಂದು ಕೈಯಲ್ಲಿ ಲಿಂಗ ಹಿಡಿದಿರುತ್ತಾರೆ. ಕೆಲವೊಮ್ಮೆ ಇವರಿಬ್ಬರೂ ಇಷ್ಟಲಿಂಗ ಹಿಡಿದು ಕುಳಿತಿರುವ, ಸಾಂಕೇತಿಕವಾಗಿ ಇವರ ಪಕ್ಕದಲ್ಲಿ ಅಥವಾ ಕೆಳಗೆ ಎರಡು ಶೂಲಗಳನ್ನು ಕೆತ್ತಿರುತ್ತಾರೆ. ಕೊರಳಿನಲ್ಲಿ ರುದ್ರಾಕ್ಷಿಯ ಹಾರ ಹಾಗೂ ಜನಿವಾರದ ರೀತಿಯಲ್ಲಿ (ಶಿವದಾರ) ರುದ್ರಾಕ್ಷಿಯ ಸರವನ್ನು ಧರಿಸಿರುತ್ತಾರೆ. ಕೈಗಳಲ್ಲಿ ಕಂಕಣ, ಕಾಲುಗಳಲ್ಲಿ ಕಾಲಂದುಗೆ, ಕಿವಿಯಲ್ಲಿ ಕರ್ಣಕುಂಡಲಗಳನ್ನು ಹಾಕಿಕೊಂಡಿರುತ್ತಾರೆ. ಕಚ್ಚೆಪಂಚೆಯನ್ನು ಹುಟ್ಟಿರುತ್ತಾರೆ. ಜೊತೆಗೆ ಸಾಧಾರಣವಾಗಿ ಗುಂಡಬ್ರಹ್ಮಯ್ಯಗಳ ವಿಗ್ರಹಗಳು ಒಂದೇ ಶಿಲಾಫಲಕದ ಮೇಲೆ ಜೋಡಿಯಾಗಿ ಕಂಡುಬರುತ್ತವೆ. ಆದರೆ ದೊಡ್ಡಗದ್ದವಳ್ಳಿಯಲ್ಲಿ, ಗರಗನಾಗಲಾಪುರದ ಬಳ್ಳಾರಿಜಿಲ್ಲೆಯಲ್ಲಿ ಮತ್ತು ಓರಂಗಲ್ಲಿನಲ್ಲಿ ದೊರೆತ ಶಿಲ್ಪಗಳು ಮಾತ್ರ ಬೇರೆ ಬೇರೆಯಾಗಿ ಎರಡು ಪ್ರತ್ಯೇಕ ಶಿಲ್ಪಗಳಲ್ಲಿರುವುದು ವಿಶೇಷ. ಹೀಗೆ ಸಾಮಾನ್ಯವಾಗಿ ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ಗುರುತಿಸಬಹುದು.

ಶಿಲ್ಪಗಳ ಶೋಧದ ಇತಿಹಾಸ

ಕರ್ನಾಟಕದಲ್ಲಿ ಗುಂಡಬ್ರಹ್ಮಗಳ ಶಿಲ್ಪವನ್ನು ಮೊದಲು ಗುರುತಿಸಿದ ಶ್ರೇಯಸ್ಸು ದಿ. ಡಾ. ವಿ. ಶಿವಾನಂದ ಅವರಿಗೆ ಸಲ್ಲುತ್ತದೆ. ಕವಿಚೆನ್ನ ವಿರಚಿತ 'ಗುಂಡಬ್ರಹ್ಮಯ್ಯಗಳ ಚರಿತ್ರೆ' (ಸುವ್ವಿ) ಎಂಬ ಕೃತಿಯನ್ನು ಸಂಪಾದಿಸಿ ಅದರಲ್ಲಿ ಗುಂಡಬ್ರಹ್ಮಯ್ಯಗಳ ಭಾವಚಿತ್ರವನ್ನು ಪ್ರಕಟಿಸಿದರು.[೧೨] ಇವರು ಶಿಲ್ಪಗಳ ಸ್ವರೂಪ ಮತ್ತು ಚಿತ್ರವಿನ್ಯಾಸದ ಲಕ್ಷಣಗಳನ್ನು ತಿಳಿಸಿದ ಮೇಲೆ ಕರ್ನಾಟಕದಲ್ಲಿ ಬೇರೆಡೆಯಿದ್ದ ಶಿಲ್ಪಗಳ ಶೋಧನೆ ವಿದ್ವಾಂಸರಿಂದ ನಡೆಯಿತು. ಇವುಗಳಲ್ಲಿ ಕೆಲವು ಶಿಲ್ಪಗಳ ಪ್ರಕಟಣೆ 'ಕರ್ನಾಟಕ ಭಾರತಿ', 'ಸಾಧನೆ', 'ಇತಿಹಾಸದರ್ಶನ' ಮುಂತಾದ ನಿಯತಕಾಲಿಕೆಗಳಲ್ಲಾದರೆ, ಇನ್ನುಳಿದವು ವಿದ್ವಾಂಸರ ಸಂಪ್ರಬಂಧಗಳ ಸಂಕಲನದಲ್ಲಿ ಪ್ರಕಟವಾಗಿವೆ.

ವಿ. ಶಿವಾನಂದರವರು ಬನವಾಸಿ, ಗುಂಡೇನಹಳ್ಳಿ ಶಿಲ್ಪಗಳನ್ನು ಪ್ರಕಟಿಸಿದ ನಂತರ ಎಂ. ಎಂ.ಕಲಬುರ್ಗಿಯವರು ಚಿತ್ರದುರ್ಗದ ಕೋಟೆಯಲ್ಲಿರುವ ಸಂಪಿಗೆ ಸಿದ್ದೇಶ್ವರ ದೇವಾಲಯದಲ್ಲಿನ ಗುಂಡಬ್ರಹ್ಮಯ್ಯರ ಶಿಲ್ಪಗಳನ್ನು ಗುರುತಿಸಿದರು.[೧೩] ನೀತಿಗೆರೆಯ ಶಿಲ್ಪವನ್ನು ಬಿ. ಆರ್. ಹಿರೇಮಠ ಮತ್ತು ಎಂ. ಚಿದಾನಂದಮೂರ್ತಿಯವರು ಪ್ರತ್ಯೇಕವಾಗಿ ಪ್ರಕಟಿಸಿದ್ದಾರೆ.[೧೪] ಬಳ್ಳಾರಿಯ ಶಿಲ್ಪವನ್ನು ಶ್ರೀಮತಿ ಹನುಮಾಕ್ಷಿ ಗೋಗಿ ಅವರು ಪ್ರಕಟಿಸಿದರು. ಚಿತ್ರದುರ್ಗದ ಹಿಡಿಂಬೇಶ್ವರ ದೇವಾಲಯ ಮತ್ತು ಅದೇ ಜಿಲ್ಲೆಯ ಅಸಗೋಡು, ಚಿಕ್ಕಪುರ, ಹಿರೇಗುಂಟನೂರು, ಹೊಸದುರ್ಗ, ಶ್ರೀರಾಂಪುರ ಹಾಗೂ ಚಿಕ್ಕಮಂಗಳೂರಿನ ಬುಕ್ಕಾಂಬುದಿಯಲ್ಲಿನ ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು 'ದುರ್ಗಶೋಧನ' ಎಂಬ ತಮ್ಮ ಕೃತಿಯಲ್ಲಿ ಡಾ. ಬಿ. ರಾಜಶೇಖರಪ್ಪರವರು ಪ್ರಕಟಿಸಿದರು. ಡಾ. ಸಿ. ಟಿ. ಎಂ. ಕೊಟ್ರಯ್ಯನವರು ಬಳ್ಳಾರಿ ಜಿಲ್ಲೆಯ ಬುಕ್ಕಸಾಗರದ ಶಿಲ್ಪಗಳನ್ನು 'ಎನಗಿಂತ ಕಿರಿಯರಿಲ್ಲ' (ಶ್ರೀಅಗಡಿ ಸಂಗಣ್ಣ ಅಭಿನಂದನ ಗ್ರಂಥ) ಎಂಬ ಗ್ರಂಥದಲ್ಲಿ ಚಿತ್ರಸಮೇತ ವಿಶ್ಲೇಷಿಸಿದ್ದಾರೆ. ಎಂ. ಜಿ. ಮಂಜುನಾಥನ್‌ರವರು ಹಾಸನ ತಾಲೂಕಿನ ದೊಡ್ಡಗದ್ದನವಳ್ಳಿ ಮತ್ತು ಹಾರನಹಳ್ಳಿ ಹಾಗೂ ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲೂಕಿನ ನಂದಿಬೆಟ್ಟದ ಮೇಲಿರುವ ಯೋಗನಂದೀಶ್ವರ ದೇವಾಲಯದಲ್ಲಿ ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ಶೋಧಿಸಿದರು.[೧೫] ಹಾಗೆಯೇ ಜಿ. ಎಂ. ನಾಗಯ್ಯರವರು ಹೊಸದುರ್ಗ ತಾಲೂಕಿನ ದೇವಪುರ ಮತ್ತು ತುಮಕೂರು ಜಿಲ್ಲೆಯ ಗುಬ್ಬಿ ಹಾಗೂ ಬಳ್ಳಾರಿ ಜಿಲ್ಲೆಯ ಉಜ್ಜಯನಿಯ ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ಶೋಧಿಸಿ ಪ್ರಕಟಿಸಿದರು. ಇಷ್ಟೇ ಅಲ್ಲದೆ ಬುಕ್ಕಸಾಗರದ ಶಿಲ್ಪದಲ್ಲಿರುವ ಗುಂಡಬ್ರಹ್ಮಯ್ಯರ ಪತ್ನಿಯರು ತಮ್ಮ ತಲೆ ಕತ್ತರಿಸಿಕೊಂಡು ಸತಿ ಹೋದುದನ್ನು ನಿರೂಪಿಸುವಂಥ ಶಿಲ್ಪವನ್ನು ಗುರುತಿಸಿದರು.[೧೬]

ವಿಶೇಷವಾಗಿ ಬೆಳಗಾವಿ ಜಿಲ್ಲೆಯ ಮುರ್ಕಿಬಾವಿಯಲ್ಲಿನ ಗುಂಡಬ್ರಹ್ಮಯ್ಯಗಳ ಶಿಲ್ಪವನ್ನು ಡಾ. ಚೆನ್ನಕ್ಕ ಪಾವಟೆಯವರು ಶೋಧಿಸಿದರು.[೧೭] ಹೀಗೆ ವಿವಿಧ ವಿದ್ವಾಂಸರು ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ಸಂಶೋಧನೆ ಮಾಡಿದರು. ಈ ಎಲ್ಲ ವಿದ್ವಾಂಸರ ಸಂಶೋಧನೆಯ ಮುಂದುವರಿಕೆಯಾಗಿ ನನ್ನ ಸಂಶೋಧನೆಯ ಅವಧಿಯಲ್ಲಿ ಕರ್ನಾಟಕದ ವಿವಿಧ ಭಾಗಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಸಂಶೋಧನೆ

ನಡೆಸಲಾಯಿತು.ಇದರ ಫಲವಾಗಿ ಎರಡು ಅಪ್ರಕಟಿತ ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ಸಂಶೋಧಿಸಲಾಗಿದೆ. ಚಿತ್ರದುರ್ಗ ಜಿಲ್ಲೆಯ ಸಿಂಗಾಪುರ ಹಾಗೂ ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನ ಸಾವನದುರ್ಗದಲ್ಲಿ ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ಗುರುತಿಸಲಾಗಿದೆ. ಇದುವರೆಗೂ ಒಟ್ಟು ೨೩ ಶಿಲ್ಪಗಳು ನಮಗೆ ಲಭ್ಯವಾಗಿದ್ದವು. ಈ ಎರಡು ಶಿಲ್ಪಗಳ ಶೋಧನೆಯಿಂದ ಇವುಗಳ ಸಂಖ್ಯೆ ೨೫ಕ್ಕೆ ಹೆಚ್ಚಿವೆ.

ಇವುಗಳ ಸಂಶೋಧನೆಯ ಕಾರ್ಯವು ಇದುವರೆಗೂ ತಕ್ಕಮಟ್ಟಿಗೆ ನಡೆದಿದ್ದು, ಇನ್ನು ಮುಂದೆ ತ್ವರಿತಗತಿಯಲ್ಲಿ ಶಿಲ್ಪಗಳ ಶೋಧನೆಯ ಕಾರ್ಯ ನಡೆಯಬೇಕಾಗಿದೆ. ಕರ್ನಾಟಕದ ವೀರಭದ್ರ ದೇವಸ್ಥಾನಗಳಿರುವ ಊರುಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡರೆ, ಇವುಗಳ ಸಂಖ್ಯೆ ಹೆಚ್ಚುವ ಸಂಭವವಿದೆ. ಆದ್ದರಿಂದ ಇವುಗಳು ಸಂಶೋಧನೆಗೆ ವಿಸ್ತಾರವಾದ ಅವಕಾಶವನ್ನು ಕಲ್ಪಿಸಿವೆ. ಇವರ ಶಿಲ್ಪಗಳು ಹೆಚ್ಚಾಗಿ ವೀರಭದ್ರ ದೇವಾಲಯಗಳಲ್ಲಿ ಕಂಡುಬರುತ್ತವೆ. ಆದ್ದರಿಂದ ಸಂಶೋಧಕರು ವೀರಭದ್ರ ದೇವಾಲಯದ ಕಡೆಗೆ ಗಮನಿಸುವುದು ಮುಖ್ಯವಾಗಿದೆ. ಕೆಲವು ಶಿಲ್ಪಗಳು ವೀರಭದ್ರ ದೇವಾಲಯಗಳಿಗೆ ಮಾತ್ರ ಸೀಮಿತವಾಗಿರದೆ, ವಿರಳವಾಗಿ ಬೇರೆ ಬೇರೆ ದೇವಸ್ಥಾನಗಳಲ್ಲಿಯೂ ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ಗುರುತಿಸಲಾಗಿದೆ. ಈ ಶಿಲ್ಪಗಳ ಸಂಶೋಧನೆಯಿಂದ ಅಂತರ್‌ಶಿಸ್ತಿಯ ಅಧ್ಯಯನಕ್ಕೆ ಪೂರಕವಾದ ಆಕರಗಳು ದೊರೆತಂತಾಗುತ್ತದೆ. ಜೊತೆಗೆ ಸಾಹಿತ್ತಿಕವಾಗಿ ಗುಂಡಬ್ರಹ್ಮಯ್ಯಗಳನ್ನು ಅರಿಯುವಲ್ಲಿ ನಿರ್ಣಾಯಕ ಪಾತ್ರವಹಿಸುತ್ತವೆ.

ಇದುವರೆಗೂ ದೊರೆತಿರುವ ಗುಂಡಬ್ರಹ್ಮಯ್ಯಗಳ ಶಿಲ್ಪಗಳು ಶರಣರ ಬದುಕಿನ ಮಾನವೀಯ ಮೌಲ್ಯಗಳನ್ನು ಪ್ರತಿನಿಧಿಸುತ್ತವೆ. ಆದ್ದರಿಂದ ಶರಣರ ಚರಿತ್ರೆಗಳಲ್ಲಿ ಈ ಶಿಲ್ಪಗಳು ವಿನೂತನವಾದ ದಾಖಲೆಗಳೆನಿಸಿವೆ. ಶರಣ ಬದುಕಿನ ಆದರ್ಶ ಮತ್ತು ವೀರವ್ರತದ ಪ್ರತೀಕದಂತಿರುವ ಈ ಗುಂಡಬ್ರಹ್ಮಯ್ಯಗಳ ಶಿಲ್ಪಗಳು ಐತಿಹಾಸಿಕ ಮಹತ್ವವನ್ನು ನಿರೂಪಿಸುತ್ತವೆ. ಆದ್ದರಿಂದ ಶರಣರ ಶಿಲ್ಪಗಳ ಶೋಧವು ಕ್ರಿಯಾಶೀಲತೆಯಿಂದ ಸಮಗ್ರವಾಗಿ ನಡೆಯಬೇಕಾಗಿದೆ. ಇಂತಹ ಶಿಲ್ಪಗಳ ಅಧ್ಯಯನಗಳಿಂದ ಶರಣರ ಬದುಕಿನ ನಡೆ, ನುಡಿ, ಸಿದ್ಧಾಂತಗಳನ್ನು ತಿಳಿಯಲು ಸಹಕಾರಿಯಾಗಿವೆ. ಇಲ್ಲಿಯವರೆಗೂ ನಮಗೆ ದೊರೆತಿರುವ ೨೫ ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ಕೆಳಗಿನಂತೆ ವಿವರಿಸಲಾಗಿದೆ.

ಸಿಂಗಾಪುರದ ಶಿಲ್ಪ

ಸಿಂಗಾಪುರ ಗ್ರಾಮವು ಚಿತ್ರದುರ್ಗ ತಾಲೂಕಿಗೆ ಸೇರಿದೆ. ಈ ಗ್ರಾಮವನ್ನು ಪ್ರವೇಶಿಸಲು ಎರಡು ಮಾರ್ಗಗಳಿವೆ. ಮೊದಲನೆಯದು ಚಿತ್ರದುರ್ಗದಿಂದ ಜಾನಕೊಂಡ ಮಾರ್ಗವಾಗಿ ಸಿಂಗಾಪುರವನ್ನು ತಲುಪಬಹುದು. ಚಿತ್ರದುರ್ಗದಿಂದ ಸುಮಾರು ೧೫ ಕಿ.ಮೀ ದೂರದಲ್ಲಿದೆ. ಎರಡನೆಯದು ಚಿತ್ರದುರ್ಗದಿಂದ ಸಿದ್ದಾಪುರ ಮಾರ್ಗವಾಗಿ ಹಳಿಯೂರು ಕ್ರಾಸ್‌ನಿಂದ ಕುರುಬರಹಳ್ಳಿಯ ಮಾರ್ಗವಾಗಿ ಸಿಂಗಾಪುರಕ್ಕೆ ಪ್ರವೇಶಿಸಬಹುದು. ಈ ಊರಿನ ಉತ್ತರ ಭಾಗದಲ್ಲಿ ಪುರಾತನವಾದ ವೀರಭದ್ರ ದೇವಾಲಯವಿದ್ದು, ವೀರಭದ್ರ ಮೂರ್ತಿಯ ಎಡಭಾಗದಲ್ಲಿ ಗುಂಡಬ್ರಹ್ಮಯ್ಯಗಳ ಶಿಲ್ಪವಿದೆ. ಇಲ್ಲಿಯವರೆಗೂ ಲಭ್ಯವಾಗದಿದ್ದ

ಸಿಂಗಾಪುರ ಶಿಲ್ಪವು ನನ್ನ ಕ್ಷೇತ್ರ ಕಾರ್ಯ ಅವಧಿಯಲ್ಲಿ ಲಭಿಸಿದೆ. ಇಲ್ಲಿಯವರೆಗೂ ಒಟ್ಟು ೨೩ ಶಿಲ್ಪಗಳು ನಮಗೆ ಲಭ್ಯವಾಗಿದ್ದವು. ಇದನ್ನು ಸೇರಿಸಿದರೆ ೨೪ ಶಿಲ್ಪಗಳಿರುವುದನ್ನು ಗುರುತಿಸಬಹುದಾಗಿದೆ. ಕ್ಷೇತ್ರಕಾರ್ಯ ಮತ್ತು ಅಧ್ಯಯನದ ಪರಿಶ್ರಮದಿಂದ ಕಂಡುಹಿಡಿಯದ ಶಿಲ್ಪವಾಗಿದ್ದು ಇದರ ಉಲ್ಲೇಖವು ಯಾವ ಕೃತಿಯಲ್ಲಿಯೂ ಪ್ರಸ್ತಾಪವಾಗಿರುವುದಿಲ್ಲ. ಆದ್ದರಿಂದ ಈ ಶಿಲ್ಪವು ವಿಶೇಷವಾಗಿದೆ. ಸಿಂಗಾಪುರದ ಶಿಲ್ಪದ ರಚನಾ ವಿನ್ಯಾಸವನ್ನು ಕೆಳಗಿನಂತೆ ವಿವರಿಸಲಾಗಿದೆ.

ವೀರಭದ್ರ ದೇವರ ಎಡಗಡೆ ಮೊದಲು ಎರಡು ನಾಗರ ವಿಗ್ರಹಗಳಿವೆ. ಈ ವಿಗ್ರಹದ ನಂತರ ಗುಂಡಬ್ರಹ್ಮಯ್ಯಗಳ ಶಿಲ್ಪವಿರುವುದನ್ನು ಗಮನಿಸಲಾಗಿದೆ. ಸುಮಾರು ೩೮ ಇಂಚು ಎತ್ತರ ೨೩ ಇಂಚು ಅಗಲದ ಶಿಲ್ಪದಲ್ಲಿ ಗುಂಡಬ್ರಹ್ಮಯ್ಯರನ್ನು ಚಿತ್ರಿಸಲಾಗಿದೆ. ಇವರ ಮಧ್ಯದಲ್ಲಿ ಎರಡು ಶೂಲಗಳನ್ನು ಕೆತ್ತಲಾಗಿದ್ದು ಇಬ್ಬರೂ ಒಂದೇ ದೃಷ್ಟಿಯಿಂದ ಶೂಲದ ಕಡೆಗೆ ನೋಡುತ್ತಿದ್ದಾರೆ. ಇವರಿಬ್ಬರೂ ತಮ್ಮ ಕೈಗಳಿಂದ ಶೂಲವನ್ನು ಸ್ಪರ್ಶಿಸುವಂತೆ ಶಿಲ್ಪವನ್ನು ಕೆತ್ತಲಾಗಿದೆ. ಗುಂಡಯ್ಯ (ಮೊದಲ ಶಿಲ್ಪ) ಎಡಗೈಯಿಂದ ಶೂಲವನ್ನು ಹಿಡಿದಿದ್ದು ಬಲಗೈಯಲ್ಲಿ ಲಿಂಗ ಹಿಡಿದಿದ್ದಾನೆ. ಈ ಭಾಗ ಸ್ವಲ್ಪ ನಶಿಸಿದೆ. ಬ್ರಹ್ಮಯ್ಯನು ಬಲಗೈಯಿಂದ ಶೂಲ ಹಿಡಿದಂತಿದ್ದು ಎಡಗೈಯಲ್ಲಿ ಇಷ್ಟಲಿಂಗ ಹಿಡಿದಿದ್ದಾನೆ. ಇವರಿಬ್ಬರಿಗೂ ಕಾಲಿಗೆ ಕಡಗ (ಕಾಲ್ಪೆಂಡೆ), ರಟ್ಟೆ ಮುಂಗೈಗಳಿಗೆ ಕಡಗದಂತಿರುವ ಆಭರಣವನ್ನು ಧರಿಸಿದ್ದಾರೆ. ಕೊರಳಲ್ಲಿ ಮಾಲೆಯಿದ್ದು ವೀರಗಾಸೆಯವರ ಹಾಗೆ ಪಂಚೆ ಧರಿಸಿದ್ದಾರೆ. ಇದು ಉಬ್ಬು ಶಿಲ್ಪವಾಗಿದೆ. ಈ ಶಿಲ್ಪದಲ್ಲಿ ಸಿಂಹಲಾಟವನ್ನು ಕೆತ್ತಲಾಗಿಲ್ಲ. ತುಂಬ ಸರಳವಾಗಿ ಶಿಲ್ಪವನ್ನು ಚಿತ್ರಿಸಲಾಗಿದೆ. ಸಿಂಗಾಪುರದ ಶಿಲ್ಪಗಳು ಬುಕ್ಕಸಾಗರ ಶಿಲ್ಪ, ಅಸಗೂಡಿನ ಶಿಲ್ಪ, ಹೊಸದುರ್ಗದ ಶಿಲ್ಪ, ಹೀರೆಗುಂಟನೂರಿನ ಶಿಲ್ಪ ಇನ್ನಿತರ ಶಿಲ್ಪಗಳಂತೆ ನಿಂತು ಕೊಂಡಿರುವ ಭಂಗಿಯಲ್ಲಿದೆ. ಬುಕ್ಕಸಾಗರ, ಅಸಗೂಡಿನ ಶಿಲ್ಪಗಳನ್ನು ಈ ಶಿಲ್ಪವು ಹೋಲುತ್ತದೆ. ಬುಕ್ಕಸಾಗರದ ಶಿಲ್ಪದಲ್ಲಿ ಜಡೆ ಬಿಟ್ಟಿದ್ದಾರೆ. ಇಲ್ಲಿ ಜಡೆಗಳು ಕಾಣುವುದಿಲ್ಲ. ಈ ವ್ಯತ್ಯಾಸವನ್ನು ಮಾತ್ರ ಗುರುತಿಸಬಹುದು. ಕಪ್ಪುನುಚ್ಚುಗಲ್ಲಿನಲ್ಲಿ ಈ ಶಿಲ್ಪಗಳನ್ನು ಚಿತ್ರಿಸಲಾಗಿದೆ. ಇಲ್ಲಿಯ ಜನರು ಇವುಗಳಿಗೆ ಪೂಜೆ ಮಾಡಿ ಇವುಗಳನ್ನು ಸ್ಪಷ್ಟವಾಗಿ ಕಾಣದಂತೆ ವಿಕಾರಗೊಳಿಸಿದ್ದಾರೆ. ಗುಂಡಬ್ರಹ್ಮಯ್ಯರ ಕುರಿತು ಅಲ್ಲಿಯ ಪೂಜಾರಿಗಳಿಗೆ ತಿಳಿದಿಲ್ಲ. ಹಾಗೆಯೇ ದೇವರೆಂದು ಪೂಜೆ ಮಾಡುತ್ತಿರುವುದಾಗಿ ಅವರು ಹೇಳಿದರು.

ಸಾವನದುರ್ಗದ ಶಿಲ್ಪ

ಸಾವನದುರ್ಗ ಗ್ರಾಮವು ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನಲ್ಲಿದೆ. ಈ ಊರಿನಲ್ಲಿ ಪ್ರಾಚೀನವಾದ ವೀರಭದ್ರ ದೇವಾಲಯದ ಹೊರಗಡೆ ಗುಂಡಬ್ರಹ್ಮಯ್ಯರ ಶಿಲ್ಪವನ್ನು ಇಡಲಾಗಿದೆ. ವೀರಭದ್ರ ದೇವಾಲಯವು ಉತ್ತರ ದಿಕ್ಕಿನಲ್ಲಿದ್ದು, ಪ್ರಾಚೀನದಾದರೂ ನೋಡಲು ಆಕರ್ಷಣೆಯಿಂದ ಕೂಡಿದೆ. ಇಲ್ಲಿರುವ ಗುಂಡಬ್ರಹ್ಮಯ್ಯಗಳ ಶಿಲ್ಪವು ಇದುವರೆಗೂ ಎಲ್ಲಿಯೂ ಪ್ರಕಟಗೊಂಡಿಲ್ಲ. ಹೀಗೆ ಲಭ್ಯವಾಗದಿದ್ದ ಇವರ ಶಿಲ್ಪಗಳನ್ನು ನನ್ನ ಅಧ್ಯಯನದ ಅವಧಿಯಲ್ಲಿ ಕ್ಷೇತ್ರಕಾರ್ಯ ಕೈಗೊಂಡಿದರ ಫಲವಾಗಿ ಈ ಶಿಲ್ಪವನ್ನು

ಸಂಶೋಧಿಸಲಾಯಿತು. ಈಗಾಗಲೇ ಪ್ರಸ್ತಾಪಿಸಿದಂತೆ ಕ್ಷೇತ್ರಕಾರ್ಯ ಹಾಗೂ ಅಧ್ಯಯನದ ಪರಿಶ್ರಮದಿಂದ ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ಕಂಡುಹಿಡಿಯಲಾಗಿದೆ. ಇದರ ಉಲ್ಲೇಖವು ಯಾವುದೇ ಕೃತಿಯಲ್ಲಿಯೂ ಆಗಿರದೇ ಇರುವುದು ಈ ಶಿಲ್ಪದ ವಿಶೇಷವಾಗಿದೆ. ಇದುವರೆಗೂ ನಡೆಸಿದ ಸಂಶೋಧನೆಯಿಂದ ಒಟ್ಟು ೨೩ ಶಿಲ್ಪಗಳು ಲಭ್ಯವಾಗಿದ್ದವು. "ನನ್ನ ಈ ಸಂಶೋಧನೆಯಿಂದ ಇವುಗಳ ಸಂಖ್ಯೆ ೨೫ಕ್ಕೆ ಏರಿದೆ."

ಗುಂಡಬ್ರಹ್ಮಯ್ಯಗಳ ರೂಪ ಮತ್ತು ವಿನ್ಯಾಸದ ಬಗ್ಗೆ ಕೆಳಗಿನಂತೆ ವಿವರಿಸಲಾಗಿದೆ. ಗುಂಡಬ್ರಹ್ಮಯ್ಯಗಳಿರುವ ಸಾವಣದುರ್ಗದ ಶಿಲ್ಪವನ್ನು ಒಂದೇ ಕಲ್ಲಿನಲ್ಲಿ ಚಿತ್ರಿಸಲಾಗಿದೆ. ಬಂಡೆಗಲ್ಲಿನಿಂದ ಈ ಶಿಲ್ಪವನ್ನು ಚಿತ್ರಿಸಿರುವುದು ವಿಶೇಷವಾಗಿದೆ. ಸುಮಾರು ೧ ಅಡಿ ಎತ್ತರ ೨ ಅಡಿ ಅಗಲ ಇವೆ. ಉಬ್ಬು ಶಿಲ್ಪದಲ್ಲಿ ಇವರನ್ನು ಚಿತ್ರಿಸಲಾಗಿದ್ದು ಮಧ್ಯದಲ್ಲಿ ಎರಡು ಶೂಲಗಳಿವೆ. ಇವರಿಬ್ಬರೂ ನಿಂತಿರುವ ಭಂಗಿಯಲ್ಲಿದ್ದಾರೆ. ಒಂದೇ ದೃಷ್ಠಿಯಿಂದ ಶೂಲದ ಕಡೆಗೆ ನೋಡುತ್ತಿದ್ದಾರೆಂದು ಗಮನಿಸಬಹುದು. ಗುಂಡಯ್ಯ (ಮೊದಲ ಶಿಲ್ಪ) ಎಡಗೈಯಿಂದ ಶೂಲವನ್ನು ಸ್ಪರ್ಶಿಸಿದ್ದು, ಬಲಗೈಯಲ್ಲಿ ಕೈಗತ್ತಿ ಹಿಡಿದುಕೊಂಡು ಮೇಲಕ್ಕೆ ತೋಳು ಎತ್ತಿದ್ದಾನೆ. ಬ್ರಹ್ಮಯ್ಯ (ಎರಡನೆ ಶಿಲ್ಪ) ಬಲಗೈಯಿಂದ ಶೂಲವನ್ನು ಸ್ಪರ್ಶಿಸಿದ್ದು ಕೈಯನ್ನು ಸ್ವಲ್ಪ ಮಡಚಿದ್ದಾನೆ. ಮಡಚಿದ ಕೈಯಲ್ಲಿ ಯಾವುದೂ ಸ್ಪಷ್ಟವಾಗಿ ಕಾಣುತ್ತಿಲ್ಲ. ಎಲ್ಲ ಶಿಲ್ಪಗಳಲ್ಲಿ ಇಷ್ಟಲಿಂಗ ಇರುವುದರಿಂದ ಮುಚ್ಚಿದ ಕೈಯಲ್ಲಿ ಶಿವಲಿಂಗ ಇರಬಹುದು. ಇವರಿಬ್ಬರೂ ಕಾಲಿಗೆ ಕಡಗ ಧರಿಸಿದ್ದಾರೆ. ರಟ್ಟೆ, ಮುಂಗೈಗಳಿಗೆ ಕಡಗ ರೂಪದ ಆಭರಣವನ್ನು ಧರಿಸಿದ್ದಾರೆ. ಕೊರಳಲ್ಲಿ ಮಾಲೆಯಿದ್ದು, ವೀರಗಾಸೆಯವರು ಧರಿಸುವ ಪಂಚೆಯನ್ನು ಧರಿಸಿದ್ದಾರೆ. ರೂಪ ದೃಷ್ಠಿಯಿಂದ ಇತರ ಶಿಲ್ಪಗಳಿಗಿಂತ ಸ್ವಲ್ಪ ಬಿನ್ನವಾಗಿದೆ. ಹೀಗೆ ಸಾವಣದುರ್ಗದಲ್ಲಿ ಸಂಶೋಧಿಸಿರುವ ಗುಂಡಬ್ರಹ್ಮಯ್ಯರ ಶಿಲ್ಪದ ವಿವರವನ್ನು ಕಾಣಬಹುದು.

ಬುಕ್ಕಸಾಗರದ ಶಿಲ್ಪಗಳು

ಬಳ್ಳಾರಿ ಜಿಲ್ಲೆಯ ಬುಕ್ಕಸಾಗರದ ವೀರಭದ್ರ ದೇವಾಲಯದಲ್ಲಿ ರಂಗಮಂಟಪದ ಕಂಬಗಳ ಮೇಲೆ ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ಸಿ. ಟಿ. ಎಂ. ಕೊಟ್ರಯ್ಯನವರು ಗುರುತಿಸಿದ್ದಾರೆ.[೧೮] ಕಹಳೆ ಊದುವ, ಶೂಲಕ್ಕೇರಿದ ಪ್ರಸಂಗ ನಿರೂಪಿಸುವ ಇವರ ಪತ್ನಿಯರು ಸತಿ ಹೋದುದನ್ನು ನಿರೂಪಿಸುವ ಶಿಲ್ಪಗಳನ್ನು ಕೆತ್ತಲಾಗಿದೆ. ಈ ರೀತಿಯ ವಿಶೇಷತೆಯಿಂದ ಕೂಡಿದ ಶಿಲ್ಪಗಳು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಬೇರೆಡೆ ಕಾಣಲಿಲ್ಲ. ಈ ರೀತಿಯ ಅಪರೂಪದ ಶಿಲ್ಪಗಳು ದೊರೆಯದೇ ಹೋಗಿದ್ದು ಶೋಚನೀಯ ಸಂಗತಿ. ಇತಿಹಾಸದ ಪ್ರಜ್ಞೆಯಿಲ್ಲದೆ ಕಾಲಗರ್ಭದಲ್ಲಿ ಹುದುಗಿ ಹೋಗಿವೆ. ಹೊಸ ದೇವಾಲಯ ನಿರ್ಮಿಸುವಾಗ ಈ ರೀತಿಯ ಶಿಲ್ಪಗಳು ನಶಿಸಿರುವುದು ಗಮನಕ್ಕೆ ಬಂದಿದೆ. ಮೊದಲನೆ ಶಿಲ್ಪದಲ್ಲಿ ಇಬ್ಬರು ಪರಾಕ್ರಮಿ ವ್ಯಕ್ತಿಗಳು ವೀರಗಾಸಿಗಳನ್ನುಟ್ಟಿದ್ದು ಒಬ್ಬರಿಗೆ ಎದುರಾಗಿ ಇನ್ನೊಬ್ಬರಂತೆ ವೀರಭಂಗಿಯಲ್ಲಿ ನಿಂತಿದ್ದಾರೆ. ಹೀಗೆ ಎದುರು ಬದರು ನಿಂತು ಕಹಳೆ ಊದುತಿದ್ದಾರೆ. ಗುಂಡಯ್ಯನ (ಮೊದಲ ಶಿಲ್ಪ) ಕಹಳೆ ಸ್ವಲ್ಪ ಕಿರಿದಾಗಿದ್ದು, ಬ್ರಹ್ಮಯ್ಯನ (ಎರಡನೆ ಶಿಲ್ಪ) ಕಹಳೆ ಉದ್ದವಾಗಿದೆ. ಇಬ್ಬರೂ ವೀರಗಾಸೆ ತೊಟ್ಟಿದ್ದು ಉದ್ದಕ್ಕೆ ಜಡೆಯನ್ನು ಬಿಟ್ಟಿದ್ದಾರೆ.

ಗುಂಡಬ್ರಹ್ಮಯ್ಯಗಳು ಈ ಶಿಲ್ಪದಲ್ಲಿ ಕಹಳೆ ಊದುತ್ತಿರುವುದರಿಂದ ಕಹಳೆಯ ಬಗ್ಗೆ ಸಂಕ್ಷಿಪ್ತವಾಗಿ ಪ್ರಸ್ತಾಪಿಸುವುದು ಸೂಕ್ತವೆನಿಸುತ್ತದೆ. ಗುಂಡಬ್ರಹ್ಮಯ್ಯಗಳು ಗಣಪತಿರಾಜನ ಆಸ್ಥಾನದಲ್ಲಿ ಕಹಳೆ ನುಡಿಸಬೇಕೆಂದು ಇಬ್ಬರೂ ಸೇರಿ ನಿರ್ಧರಿಸುವರು. ಇದಕ್ಕಾಗಿ ಇಬ್ಬರೂ ಗಾಡಿ ಕಟ್ಟಿಕೊಂಡು ಮೂರುಕ್ಕುಡದ ರಸ್ತೆಗೆ ಬರುವರು ಅಲ್ಲಿ ಮಣ್ಣನ್ನು ಶಿವನ ಹೆಸರು ಹೇಳಿ ಗಾಡಿಗೆ ತುಂಬುತ್ತಾರೆ. ಒಳ್ಳೆಣ್ಣೆಲಿ ಮಿದಿಸಿ ತುಪ್ಪದಲ್ಲಿ ಹದಗೂಡಿ ಅವರು ಮಣ್ಣಿನಲ್ಲಿ ಕಹಳೆ ತಯಾರಿಸುವರು. ಮಣ್ಣಿನ ಕಹಳೆಯನ್ನು ಬೇಯಿಸಲು ಒಲೆಯನ್ನು ಹೂಡಿದರು. ಅದರಲ್ಲಿ ಬೆಂದಿದ್ದ ಕಹಳೆಯನ್ನು ಕೈಲಿಡುಕೊಂಡು ಕಹಳೆಯನ್ನು ಊದಿದರು. ಈ ಕೆಳಗಿನಂತೆ ಅವರು ತಮ್ಮ ವ್ರತವನ್ನು ಕಹಳೆಯ ಮೂಲಕ ಸಾರಿದರು.

"ಬೆಂದಿದ್ದ ಕಾಳೆಯ ಕೈಲಿಡುಕೊಂಡು
ಪಾರ್ವತಿ ಪರಮೇಶ್ವರ ನಿಮ್ಮ ಪಾದ್ವೆ ಗತಿ ಅಂದಿದ್ದಾರೆ.
ನಿಸ್ರಾತ್ರೆ ಜಾಮ ಕಲ್ಲೂನೀರು ಕರಗೊಹೊತ್ತಲ್ಲಿ
ಘನಪತಿ ರಾಜುನ್ಗೆ ಎದುರುಗಾಳೆ ಮಾಡಿ ನಡುಸ್ತಿದ್ದಾನೆ.
ಯಾರು ಬೇಕಾದ್ರೂ ಓರ್ಗಲ್ ಕ್ಕೋಟೆಗೆ ಕನ್ನ ಹಾಕಬಹುದು.
ಕದ್ದವನ ಕೊಡೋದಿಲ್ಲ ಮೊರೆಬಿದ್ದೋನ ಬುಡೋದಿಲ್ಲ.
ಅವನೇರೊ ಶೂಲ್ಕೆ ನಾನೇರುತೀನಿ|
ಏಡು ಹೊತ್ತಿನ ಕಾಳೆ ಸಾರ್ತಾವೋರ್ಗಲ್ಲುನಲ್ಲಿ
ಎದುರುಬದುರಾಗಿ ಅವು ಓಂಕರಿಸಿದವು"|[೯]

ಈ ಮೇಲಿನ ಪದ್ಯದಂತೆ ಗುಂಡಬ್ರಹ್ಮಯ್ಯಗಳು ಮೊರೆಹೊಕ್ಕವರ ಕೊಡೆವೆಂದು ವೀರ ಕಹಳೆಯನ್ನು ಊದಿರುವುದಾಗಿ ಕಾವ್ಯಗಳಿಂದ ತಿಳಿಯುತ್ತದೆ. ಇದಕ್ಕೆ ಆಧಾರವೆನ್ನುವಂತೆ ಬುಕ್ಕಸಾಗರದ ಮೊದಲನೆಯ ಶಿಲ್ಪವನ್ನು ಕಾಣಬಹುದು. ಆದ್ದರಿಂದ ಈ ಶಿಲ್ಪಗಳು ಐತಿಹಾಸಿಕ ಸಂಗತಿಗಳಿಗೆ ಮೂಖ ಸಾಕ್ಷಿಗಳಾಗಿವೆ. ಐತಿಹಾಸಿಕ ಘಟನೆಗಳನ್ನು ತಿಳಿಯಲು ಈ ಶಿಲ್ಪಗಳು ಪ್ರಮುಖ ಆಧಾರಗಳಾಗಿವೆ. ಈ ದೃಷ್ಠಿಯಿಂದ ಗುಂಡಬ್ರಹ್ಮಯ್ಯರ ಶಿಲ್ಪಗಳು ಆಧುನಿಕ ಕಾಲದಲ್ಲಿಯೂ ಮಹತ್ವದ ಸ್ಥಾನವನ್ನು ಪಡೆದುಕೊಂಡಿದ್ದು ಇವುಗಳ ಹೆಚ್ಚಿನ ಅಧ್ಯಯನ ಜರೂರಾಗಿ ನಡೆಯಬೇಕಾಗಿದೆ.

ಎರಡನೆ ಶಿಲ್ಪದಲ್ಲಿ ಗುಂಡಬ್ರಹ್ಮಯ್ಯರ ಮಧ್ಯೆ ಎರಡು ಶೂಲಗಳನ್ನು ಕೆತ್ತಲಾಗಿದೆ. ಗುಂಡಯ್ಯ ಎಡಗೈಯಲ್ಲಿ ಇಷ್ಟಲಿಂಗ ಹಿಡಿದು, ಬಲಗೈಯಿಂದ ಶೂಲವನ್ನು ಹಿಡಿದಿದ್ದಾನೆ. ಬ್ರಹ್ಮಯ್ಯನು ಎಡಗೈಯಲ್ಲಿ ಇಷ್ಟಲಿಂಗ ಹಿಡಿದು, ಬಲಗೈಯಿಂದ ಶೂಲ ಹಿಡಿದಿದ್ದಾನೆ. ಇಬ್ಬರೂ ವೀರಗಾಸೆ ತೊಟ್ಟು ಜಡಿಯನ್ನು ಉದ್ದಕ್ಕೆ ಹಿಂದೆ ಬಿಟ್ಟಿದ್ದಾರೆ. ಮುಂಗೈಗಳಿಗೆ ಇಬ್ಬರೂ ರುದ್ರಾಕ್ಷಿ ಸರ ಕಟ್ಟಿಕೊಂಡಿದ್ದಾರೆ. ಶೂಲದ ಮೇಲ್ಭಾಗದಲ್ಲಿ ಲತೆಯನ್ನು ಕೆತ್ತಲಾಗಿದೆ. ಅದರೊಂದಿಗೆ ಪ್ರತ್ಯಕ್ಷನಾದ ಶಿವನ ಶಿಲ್ಪವನ್ನು ಕೆತ್ತಲಾಗಿದೆ.

ಮೂರನೆಯ ಶಿಲ್ಪವು ಇದುವರೆಗೂ ದೊರೆಯದೇ ಇರುವ ಅಪೂರ್ವ ಮಾಹಿತಿಯನ್ನು ಒದಗಿಸುತ್ತದೆ. ಗುಂಡಬ್ರಹ್ಮಯ್ಯರು ಶೂಲಕ್ಕೇರಿದಾಗ ಇವರ ಪತ್ನಿಯರು ಸತಿ ಹೋಗುತ್ತಾರೆ. ಇವರು ಹೇಗೆ ಸತಿ

ಹೋದರೆಂಬುದನ್ನು ಈ ಶಿಲ್ಪವು ಹೇಳುತ್ತದೆ. ಇಲ್ಲಿ ಗೌರಾಯಿ ಮತ್ತು ಅಮರಾಯಿ ಅವರು ತಮ್ಮ ತಲೆಯನ್ನು ಕತ್ತರಿಸಿಕೊಂಡು ಅದನ್ನು ತಟ್ಟೆಯಲ್ಲಿಟ್ಟು ಮುಂದಕ್ಕೆ ಚಾಚಿ ಹಿಡಿದಿದ್ದಾರೆ. ಇವರು ತಮ್ಮ ತಮ್ಮ ತಲೆಗಳನ್ನು ಕಡಿದುಕೊಂಡು ಸತಿ ಹೋಗಿದ್ದುದು ಇದರಿಂದ ಸ್ಪಷ್ಟವಾಗುತ್ತದೆ. ಇವರಿಬ್ಬರ ಮಧ್ಯೆ ಎರಡು ಶೂಲಗಳನ್ನು ಕೆತ್ತಲಾಗಿದೆ. ಶೂಲದ ಮೇಲ್ಭಾಗದಲ್ಲಿ ಗುಂಡಬ್ರಹ್ಮಯ್ಯರು ಒಂದು ಕಾಲನ್ನು ಹಿಂದಕ್ಕೆ ಮಡಚಿ ಕುಕ್ಕರಗಾಲಲ್ಲಿ ಕುಳಿತಿದ್ದಾರೆ. ಇಲ್ಲಿಯೇ ಎರಡು ಶೂಲಗಳ ಮಧ್ಯೆ ಶಿವ ಪ್ರತ್ಯಕ್ಷನಾಗಿರುವುದನ್ನು ಕೆತ್ತಲಾಗಿದೆ. ಶೂಲ ಸಮೇತ ಗುಂಡಬ್ರಹ್ಮಯ್ಯರು ಮತ್ತು ಅವರ ಪತ್ನಿಯರು ಕೈಲಾಸಕ್ಕೆ ಹೋದರೆಂಬುದನ್ನು ಈ ಶಿಲ್ಪವು ಬಿಂಬಿಸುತ್ತದೆ. ಹೀಗಾಗಿ ಈ ಮೂರನೆ ಶಿಲ್ಪವು ಮಹತ್ವವನ್ನು ಪಡೆದುಕೊಂಡಿದೆ. ಈ ರೀತಿಯ ಶಿಲ್ಪಗಳು ಕ್ಷೇತ್ರಕಾರ್ಯದ ಸಮಯದಲ್ಲಿ ಎಲ್ಲೂ ದೊರೆಯಲಿಲ್ಲ. ಬುಕ್ಕಸಾಗರದ ವೀರಭದ್ರ ದೇವಸ್ಥಾನದಲ್ಲಿ ಮಾತ್ರ ದೊರೆತಿರುವುದು ವಿಶೇಷವಾಗಿದೆ ಈ ಹಿನ್ನೆಲೆಯಲ್ಲಿ ಬುಕ್ಕಸಾಗರದ ಶಿಲ್ಪಗಳು ಗುಂಡಬ್ರಹ್ಮಯ್ಯರಿಗೆ ಸಂಬಂಧಿಸಿದಂತೆ ಪ್ರಮುಖ ಪಾತ್ರವಹಿಸಿರುವುದು ಮುಖ್ಯವಾದ ಅಂಶವಾಗಿದೆ.

ಹಿರೇಗುಂಟನೂರಿನ ಶಿಲ್ಪ

ಹಿರೇಗುಂಟನೂರು ಗ್ರಾಮವು ಚಿತ್ರದುರ್ಗ ತಾಲೂಕಿಗೆ ಸೇರಿದೆ. ಈ ಊರಿನ ದಕ್ಷಿಣ ಭಾಗದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿದ್ದು, ಇದರ ಪಕ್ಕದಲ್ಲಿ ದೇವರಿಲ್ಲದ ಶಿಥಿಲಗೊಂಡ ಚಿಕ್ಕ ದೇವಾಲಯವಿದೆ. ಇಲ್ಲಿ ಗುಂಡಬ್ರಹ್ಮಯ್ಯರ ಶಿಲ್ಪವಿರುವುದನ್ನು ಬಿ. ರಾಜಶೇಖರಪ್ಪರವರು ಗುರುತಿಸಿದ್ದಾರೆ.[೨೦] "ಗರ್ಭಗುಡಿಗೆ ತ್ರಿಶೂಲಡಮರುಧಾರಿಗಳಾದ ದ್ವಾರಪಾಲಕರನ್ನು ಕೆತ್ತಿರುವ ದ್ವಾರವಿರುವುದರಿಂದ ಈ ದೇವಾಲಯವು ಶೈವ ಸಂಬಂಧವಾದುದೆಂದು ಹೇಳಿದ್ದಾರೆ. ಗರ್ಭಗುಡಿಯ ಮಧ್ಯದಲ್ಲಿ ಚೌಕಾಕಾರದ ಗುಳಿ (ತೆಗ್ಗು) ಇರುವ ಒಂದು ಪೀಠವಿರುವುದರಿಂದ ಇಲ್ಲಿ ಶೈವಸಂಬಂಧವಾದ ಯಾವುದಾದರೊಂದು (ಬಹುಶಃ ವೀರಭದ್ರ) ವಿಗ್ರಹ ಇತ್ತೆಂದು ಊಹೆ ಮಾಡಿದ್ದಾರೆ."[೨೧] ಮೇಲೆ ಹೇಳಿದ ಪೀಠದಲ್ಲಿ ಈಚೆಗೆ ಗುಂಡಬ್ರಹ್ಮಯ್ಯರ ಶಿಲ್ಪವನ್ನು ಇಡಲಾಗಿತ್ತೆಂದು ಅಲ್ಲಿಯ ಸ್ಥಳಿಯರಿಂದ ತಿಳಿದುಬಂದಿದೆ. ಆದರೆ ನಾನು ಕ್ಷೇತ್ರಕಾರ್ಯಕ್ಕೆ ತೆರಳಿದ ಸಮಯದಲ್ಲಿ ಈ ಎಲ್ಲ ಹೇಳಿಕೆಗಳನ್ನು ಪರೀಕ್ಷಿಸಲಾಗಲಿಲ್ಲ. ಕಾರಣವೆಂದರೆ ಈ ದೇವಸ್ಥಾನವು ಇತ್ತೀಚೆಗೆ ನೆಲಸಮವಾಗಿದೆ. ಕಲ್ಲು, ಮಣ್ಣು ಮಾತ್ರ ನನಗೆ ನೋಡಲು ದೊರೆಯಿತು. ಇನ್ನು ಕೆಲವು ದಿನ ಬಿಟ್ಟರೆ ಬಹುಶಃ ಇವುಗಳನ್ನು ನೋಡಲಾಗುವುದಿಲ್ಲ. ಏಕೆಂದರೆ ಕಲ್ಲು ಬಂಡೆಗಳನ್ನು ಜನರು ಸ್ವಂತ ಕೆಲಸಕ್ಕೆ ಬಳಕೆ ಮಾಡಿಕೊಳ್ಳುತ್ತಿರುವುದು ತಿಳಿದುಬಂದಿದೆ.[೨೨] ಕೆಲವರು ವೀರಭದ್ರ ದೇವಾಲಯವೆಂದು ಹೇಳಿದರೆ ಇನ್ನುಳಿದವರು ಕಲ್ಲಪ್ಪನ ಮಠ ಅಥವಾ ಹಾಳುಮಠ ಎಂದು ಕರೆಯುವರು. ಅಲ್ಲಿಯ ಜನರಿಗೂ ಈ ದೇವಾಲಯದ ಬಗ್ಗೆ ಮತ್ತು ಶಿಲ್ಪದ ಬಗ್ಗೆ ಅಸ್ಪಷ್ಟವಾಗಿ ತಿಳಿದಿದೆ. ಇದರಿಂದ ಅಲಕ್ಷೆಗೆ ಒಳಗಾದ ಗುಂಡಬ್ರಹ್ಮಯ್ಯಗಳ ಶಿಲ್ಪವು ಮಣ್ಣು-ಕಲ್ಲುಗಳಿಂದ ಮುಚ್ಚಿಕೊಂಡಿತ್ತು. ಸುಮಾರು ನಿಮಿಷಗಳ ಕಾಲ ಶೋಧ ಮಾಡಿದಾಗ ಸ್ವಲ್ಪ ಭಾಗ ಮಾತ್ರ ನಮಗೆ ಕಾಣಿಸಿತು.[೨೩]

ಈಗಾಗಲೇ ಇವರ ಶಿಲ್ಪವು ಸಾಕಷ್ಟು ಪ್ರಮಾಣದಲ್ಲಿ ಸವೆದು ಮಸಕಾಗಿದೆ. ಯಾರೋ ಡಾಂಬರು (ಟಾರು) ಸುರಿದಿರುವುದರಿಂದ ನೋಡಲು ಸುಂದರವಾಗಿ ಕಾಣುವುದಿಲ್ಲ. ತಿಳಿಹಸಿರು ಬಣ್ಣದ ಬಳಪದ ಚಿಕ್ಕದಾದ ಕಲ್ಲಿನಲ್ಲಿ ಈ ಶಿಲ್ಪವನ್ನು ಕೆತ್ತಿರುವುದು ಕಾಣಬಹುದು. ಸುಮಾರು ೨ ಅಡಿ ಎತ್ತರ ೧ ೧/೨ ಅಡಿ ಅಗಲದ ಶಿಲ್ಪವಿದೆ ಗುಂಡಬ್ರಹ್ಮಯ್ಯಗಳು ಶೂಲವನ್ನು ನಡುವೆ ಮಾಡಿಕೊಂಡು ಆಚೆ ಈಚೆ ನಿಂತಿರುವರು. ತಮ್ಮೆಡಗೈಯಲ್ಲಿ ಇಷ್ಟಲಿಂಗವನ್ನು ಹಿಡಿದುಕೊಂಡಿದ್ದಾರೆ. ಬಲಗೈಯಲ್ಲಿ ಶೂಲವನ್ನು ಸ್ಪರ್ಶಿಸಿರುವಂತೆ ಚಿತ್ರಿಸಲಾಗಿದೆ. ಅತ್ಯಂತ ಸುಂದರವಾಗಿ ಕಾಲುಗಳಲ್ಲಿ ಕಾಲ್ಪೆಂಡೆ, ತೋಳುಗಳಲ್ಲಿ ತೋಳಬಂದಿ, ಕಿವಿಗಳಲ್ಲಿ ಕರ್ಣಕುಂಡಲ ಮತ್ತು ಕಚ್ಚೆಪಂಚೆ ಧರಿಸಿದ್ದಾರೆ. ವರದಾ ಮೂಲದ ಶಿಲ್ಪವನ್ನು ಇದು ಹೆಚ್ಚು ಹೋಲುವುದನ್ನು ಗುರುತಿಸಲಾಗಿದೆ. ಹೀಗೆ ಹಿರೇಗುಂಟನೂರಿನ ಶಿಲ್ಪವು ಅಳಿವಿನೊಂದಿಗೆ ಚಾರಿತ್ರಿಕ ಪ್ರಜ್ಞೆಯನ್ನು ಸಾರುತ್ತಿದೆ.

ಕಡೂರಿನ ಶಿಲ್ಪ

ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನ ಚಿಕ್ಕಜಾಜೂರಿನಿಂದ ಸುಮಾರು ಮೂರು ಕಿಲೋಮೀಟರ್ ದೂರದಲ್ಲಿ ಕಡೂರಿನ ವೀರಭದ್ರ ದೇವಾಲಯವಿದೆ. ಈ ದೇವಾಲಯದ ಅವರಣದಲ್ಲಿರುವ ವಿಗ್ರಹವನ್ನು ಮೊದಲ ಬಾರಿಗೆ ಡಾ. ಸಿ. ಯು. ಮಂಜುನಾಥ್‌ರವರು ಗುರುತಿಸಿದರು.[೨೪] ವೀರಭದ್ರ ದೇವಾಲಯದ ಗರ್ಭಗುಡಿಯ ಎಡಭಾಗದಲ್ಲಿ ಸ್ವಲ್ಪ ದೂರದಲ್ಲಿ ಚಿಕ್ಕ ಗುಡಿಯಂತಹ ರಚನೆಯಲ್ಲಿ ಎರಡು ನಾಗರಕಲ್ಲುಗಳಿವೆ. ಇವುಗಳ ನಂತರ ಗುಂಡಬ್ರಹ್ಮಯ್ಯಗಳ ಶಿಲ್ಪವನ್ನು ಕಾಣಬಹುದು. ಈ ಶಿಲ್ಪಗಳು ಉಬ್ಬುಕೆತ್ತನೆಯಾಗಿದ್ದು ಅಂಚನ್ನು ಕೆತ್ತಿ ಮಧ್ಯೆಭಾಗದಲ್ಲಿ ಸಿಂಹಲಲಾಟವನ್ನು ಕೆತ್ತಲಾಗಿದೆ. ಅಂಚಿನ ಒಳಗಿನ ಮೇಲ್ಭಾಗದಲ್ಲಿ ಚಂದ್ರ ಸೂರ್ಯರನ್ನು ಕೆತ್ತಲಾಗಿದೆ. ಮಧ್ಯದಲ್ಲಿ ಎರಡು ಆಕರ್ಷಕ ಶೂಲಗಳಿವೆ. ಶೂಲಗಳ ಮೇಲ್ಭಾಗ ಅಲಂಕಾರಮಯವಾಗಿ ಒಂದರ ಪಕ್ಕದಲ್ಲಿ ಒಂದು ಇರುವಂತೆ ಕೆತ್ತಲಾಗಿದೆ. ವಿಗ್ರಹದ ಎದುರಾಗಿ ನಿಂತರೆ ಎಡಪಕ್ಕದ ವಿಗ್ರಹದ ಎಡಗೈ ಶೂಲದ ಹತ್ತಿರವಿದ್ದು ಲಿಂಗವನ್ನು ಹಿಡಿದಿದೆ. ಬಲಗೈಯಲ್ಲಿ ಚಾಕುವನ್ನು ಮೇಲೆತ್ತಿ ಹಿಡಿಯಲಾಗಿದೆ. ಬಲಭಾಗದ ವಿಗ್ರಹ ಬಲಗೈ ಶೂಲದ ಕಡೆ ಚಾಚಿದ್ದು ಹಸ್ತದಲ್ಲಿ ಲಿಂಗ ಹಿಡಿದಿದೆ. ಶೂಲದ ಮತ್ತು ಚಾಕುಗಳ ಮೊನಚು ಅರಿವಿಗೆ ಬರುವಂತೆ ಕೆತ್ತಲಾಗಿದೆ.

ಎರಡೂ ಶೂಲಗಳನ್ನು ಆಧರಿಸಿದಂತೆ ಒಂದು ಚಿಕ್ಕ ಮಂಟಪದ ಆಕೃತಿ ಇದ್ದು ಪೀಠದಲ್ಲಿ ಲಿಂಗಾಕೃತಿಯನ್ನು ಕೆತ್ತಲಾಗಿದೆ. ಎರಡೂ ಶೂಲಗಳ ಮೇಲ್ಭಾಗದಲ್ಲಿ ಧ್ವಜಾಕಾರದ ಆಕೃತಿಯನ್ನು ಕೆತ್ತಲಾಗಿದೆ. ವಿಗ್ರಹಗಳೆರಡೂ ಸಮ ಪ್ರಮಾಣದಲ್ಲಿ ಇವೆ. ತೋಳಬಂದಿ, ಕಂಕಣ, ಹಾರಗಳನ್ನು ಧರಿಸಿರುವಂತೆ ಕೆತ್ತಲಾಗಿದೆ. ವೀರಗಚ್ಚೆಯನ್ನು ಧರಿಸಿರುವ ವಿಗ್ರಹಗಳು ತೋರಹಾರಗಳನ್ನು ಧರಿಸಿವೆ. ಮಲ್ಲಗಚ್ಚೆಯ ಮಧ್ಯದಲ್ಲಿ ಹೊರಟ ನೆರಿಗೆ ಸೊಂಟದಿಂದ ಮೂರು ಹಂತದಲ್ಲಿ ಪಾದದವರೆಗೂ ಆಕರ್ಷಕವಾಗಿ ಇಳಿಬಿದ್ದಿದೆ. ಕಾಲಿಗೆ ಕಂಕಣ ಧರಿಸಿದ್ದು ಪಾದಗಳೂ ಅಲಂಕೃತಗೊಂಡಿವೆ. ಈ ಗುಂಡಬ್ರಹ್ಮಯ್ಯರ ಶಿಲ್ಪವು ಒಟ್ಟು ೩೨ ಅಂಗುಲ ಎತ್ತರವಿದ್ದು ೨೬ ಅಂಗುಲ ಅಗಲವಿದೆ. ಎರಡೂ ಶಿಲ್ಪಗಳ ಮಧ್ಯದಲ್ಲಿ ಶೂಲವಿದ್ದು ವಿಗ್ರಹಗಳು

ಅನುರೂಪ ಸಮಪಾರ್ಶ್ವತೆಯಿಂದ ಇರುವಂತೆ ಕೆತ್ತಲಾಗಿದೆ. ಸೊಂಟದಲ್ಲಿ ಎರಡೂ ವಿಗ್ರಹಗಳಿಗೆ ಮಲ್ಲಗಚ್ಚೆ ಕಟ್ಟಲು ಕುಚ್ಚನ್ನು (ಗೊಂಡೆ) ಆಕರ್ಷಕವಾಗಿ ಕೆತ್ತಲಾಗಿದೆ. ಹೆಗಲಿನಿಂದ ಆವೃತವಾಗಿ ಮಂಡಿಯವರೆಗೂ ವಸ್ತ್ರಪಟ್ಟೆಯನ್ನು ಕೆತ್ತಲಾಗಿದೆ. ಚಿಕ್ಕ ಗುಡ್ಡದ ಮೇಲಿರುವ ಕಡೂರಿನ ವೀರಭದ್ರ ದೇವಾಲಯ ಬಹಳ ಪುರಾತನವಾದುದಾಗಿದೆ. ಬಹುಸಂಖ್ಯಾತ ಭಕ್ತರಿಂದ ಕೂಡಿದ ಈ ದೇವಾಲಯವು ಪ್ರಸಿದ್ಧಿ ಪಡೆದಿದೆ. ಸುಂದರವಾದ ಗುಡ್ಡಗಳ ನಡುವೆ ಈ ದೇವಾಲಯವಿರುವುದನ್ನು ನೋಡಲು ರಮ್ಯವೆನಿಸುತ್ತದೆ. ಈ ಕಡೂರಿನ ಶಿಲ್ಪವು ಹೊಸದುರ್ಗದ ಶಿಲ್ಪವನ್ನು ಹೋಲುತ್ತದೆ. ಹೊಸದುರ್ಗದ ಶಿಲ್ಪದಲ್ಲಿ ಚಂದ್ರ ಸೂರ್ಯರ ಚಿತ್ರವನ್ನು ಚಿತ್ರಿಸಲಾಗಿದೆ. ಅದರಂತೆ ಇಲ್ಲಿಯೂ ಸಿಂಹಲಾಟವಿದ್ದು ಚಂದ್ರ ಸೂರ್ಯರಿದ್ದಾರೆ.

ಹೊಸದುರ್ಗದ ಶಿಲ್ಪ

ಹೊಸದುರ್ಗವು ಚಿತ್ರದುರ್ಗ ಜಿಲ್ಲೆಯ ತಾಲೂಕು ಸ್ಥಳವಾಗಿದೆ. ಈ ಊರಿನ ಪೂರ್ವದಲ್ಲಿ ವೀರಭದ್ರ ದೇವಾಲಯವಿದ್ದು ಗರ್ಭಗುಡಿಯ ಮುಂದಿನ ಎಡಭಾಗದ ಗೋಡೆಗೆ ಗುಂಡಬ್ರಹ್ಮಗಳ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಸುಮಾರು ೨ ೧/೨ ಅಡಿ ಎತ್ತರ, ೨ ಅಡಿ ಅಗಲ ಇರುವ ಈ ಶಿಲ್ಪದಲ್ಲಿ ಮೇಲುಗಡೆ ಸೂರ್ಯ ಚಂದ್ರ ಸಮೇತವಾದ ಸಿಂಹಲಲಾಟವಿದೆ. ಮಧ್ಯಭಾಗದಲ್ಲಿ ಎರಡು ಶೂಲಗಳಿರುವುದನ್ನು ಕಾಣಬಹುದು. ಶೂಲಗಳ ಎರಡೂ ಪಕ್ಕದಲ್ಲಿ ಗುಂಡಬ್ರಹ್ಮಯ್ಯಗಳನ್ನು ಚಿತ್ರಿಸಲಾಗಿದೆ. ಇವರ ಆಚೆ ಈಚೆಗೆ ಸತಿಯರಾದ ಗೌರಾಯಿ ಮತ್ತು ಅಮರಾಯಿಗಳನ್ನು ಕೆತ್ತಲಾಗಿದೆ. ಇವರು ಗುಂಡಬ್ರಹ್ಮಯ್ಯರ ನಡುವಿಗೆ ಬರುವಷ್ಟು ಎತ್ತರವಿದ್ದಾರೆ. ಪ್ರಾಣಾರ್ಪಣೆಯ ಆವೇಶದಲ್ಲಿರುವ ಶಿವಶರಣರು ತಂತಮ್ಮ ಬಲಗೈಗಳಲ್ಲಿ ಕತ್ತಿಯೆತ್ತಿ ನಿಂತಿದ್ದಾರೆ.

ಇತರ ಅನೇಕ ಶಿಲ್ಪಗಳಲ್ಲಿ ಇವರು ಒಂದೊಂದು ಕೈಯಲ್ಲಿ ಇಷ್ಟಲಿಂಗ ಹಿಡಿದುಕೊಂಡಿರುವ ಹಾಗೆ ಚಿತ್ರಿತವಾಗಿದ್ದರೂ ಈ ಶಿಲ್ಪದಲ್ಲಿ ಮಾತ್ರ ಹಾಗಿಲ್ಲದಿರುವುದು ಗಮನಾರ್ಹ ಸಂಗತಿ. ಎಡಭಾಗದಲ್ಲಿರುವವರು ಎಡಗೈಯಲ್ಲಿ ಹಿಡಿದುಕೊಂಡಿರುವುದು ಕೈವಸ್ತ್ರವೋ ಏನೋ ಸ್ಪಷ್ಟವಾಗಿ ತಿಳಿಯದು. ಬಲಗಡೆಯಲ್ಲಿರುವವರು ಮಾತ್ರ ಎಡಗೈಯಿಂದ ಶೂಲದ ಮೊನೆಯನ್ನು ಹಿಡಿದಿರುವುದು ಸ್ಪಷ್ಟವಾಗಿ ಕಾಣುತ್ತದೆ. ಸ್ಥಳದ ಅಭಾವದಿಂದಲೋ ಏನೋ ಅವರ ಹೆಂಡತಿಯರನ್ನು ಕುಬ್ಜವಾಗಿ ಚಿತ್ರಿಸಲಾಗಿದೆ. ಇಬ್ಬರೂ ತಮ್ಮ ಎರಡೂ ಕೈಗಳಲ್ಲಿ ಮಂಗಳದ್ರವ್ಯಗಳ ತಟ್ಟೆಹಿಡಿದುಕೊಂಡಿರುವುದು ಅಸ್ಪಷ್ಟವಾಗಿ ಕಾಣುತ್ತದೆ. ಈ ಶಿಲ್ಪದಲ್ಲಿ ಗುಂಡಯ್ಯ ಬ್ರಹ್ಮಯ್ಯರು ವಿಭಿನ್ನ ಭಂಗಿಯಲ್ಲಿ ನಿಂತುಕೊಂಡು, ಕತ್ತಿ ಎತ್ತಿರುವ ಭಂಗಿ ನೋಡುಗರನ್ನು ಆಕರ್ಷಿಸುವಂತಿದೆ. ಸಾಮಾನ್ಯ ಎನ್ನುವಂತೆ ಕರ್ಣಕುಂಡಲ, ತೋಲ್ಬಳೆ, ಕಡಗ, ದೋತ್ರದ ಕಚ್ಚೆಯನ್ನು ಧರಿಸಿರುವುದನ್ನು ನೋಡಬಹುದು. ಮೊನಚಾದ ಶೂಲಗಳನ್ನು ಈ ಶಿಲ್ಪದಲ್ಲಿ ವಿಶೇಷವಾಗಿ ಕೆತ್ತಲಾಗಿದೆ. ಗುಂಡಬ್ರಹ್ಮಯ್ಯಗಳು ಸತಿಯರ ಸಮೇತವಾಗಿ ಚಿತ್ರಿತವಾಗಿರುವ ನೀತಿಗೆರೆ ಮತ್ತು ಅಸಗೋಡು ಶಿಲ್ಪಗಳ ಜೊತೆಗೆ ಹೊಸದುರ್ಗದ ಶಿಲ್ಪವು ಮೂರನೆಯದಾಗಿ ಸೇರುತ್ತದೆ.

ಹೊಸದುರ್ಗದ ಗುಂಡಬ್ರಹ್ಮಯ್ಯಗಳ ಶಿಲ್ಪಗಳು ವಿಶಿಷ್ಟ ಆರಾಧನೆಗೆ ಪ್ರಸಿದ್ಧಿಯಾಗಿವೆ.[೨೫] ಊರಿನ ಜನರು ಗುಂಡಬ್ರಹ್ಮಯ್ಯಗಳ ಶಿಲ್ಪಗಳಿಗೆ ಚೌಡಮ್ಮ ಎಂದು ಕರೆಯುವರು. ಚಿಕ್ಕ ಮಕ್ಕಳಿಗೆ ಕೆಮ್ಮು,

ನೆಗಡಿ, ಜ್ವರ ಬಂದಾಗ ಜನ ಚೌಡಮ್ಮ ಎಂದೇ ಹರಕೆ ಕಟ್ಟಿಕೊಳ್ಳುತ್ತಾರೆ. ನಂತರ ಇವುಗಳು ವಾಸಿಯಾದಾಗ ಮೊಸರನ್ನವನ್ನು ನೈವೇದ್ಯ ಮಾಡುವುದು ವಿಶಿಷ್ಟವಾಗಿದೆ. ಪ್ರತಿ ವರ್ಷವೂ ಫೆಬ್ರವರಿ ತಿಂಗಳಲ್ಲಿ ಕೆಂಡದ ಅರ್ಚನೆ ಮಾಡುವುದು ನಡೆದುಕೊಂಡು ಬರುತ್ತಿದೆ. ಮಕ್ಕಳ ರೋಗಗಳಿಗೆ ಮಾತ್ರ ಚೌಡಮ್ಮ ದೇವರು ಮೀಸಲು ಎಂಬುದು ತಿಳಿದು ಬಂದಿದೆ.[೨೬] ಹೀಗೆ ಗುಂಡಬ್ರಹ್ಮಯ್ಯಗಳ ಶಿಲ್ಪಗಳು ವಿವಿಧ ಭಾಗಗಳಲ್ಲಿ ಆಚರಣೆಗೆ ಒಳಗಾಗಿರುವುದನ್ನು ತಿಳಿಯಲಾಗಿದೆ.

ಚಿತ್ರದುರ್ಗದ (ಸಂಪಿಗೆ ಸಿದ್ಧೇಶ್ವರದ) ಶಿಲ್ಪ

ಚಿತ್ರದುರ್ಗದಲ್ಲಿ ಎರಡು ಗುಂಡಬ್ರಹ್ಮಯ್ಯರ ಶಿಲ್ಪಗಳು ಲಭಿಸಿವೆ. ಸಂಪಿಗೆ ಸಿದ್ಧೇಶ್ವರ ದೇವಾಲಯದಲ್ಲಿನ ಶಿಲ್ಪ, ಇನ್ನೊಂದು ಹಿಡಿಂಬೇಶ್ವರ ದೇವಾಲಯದಲ್ಲಿನ ಶಿಲ್ಪ. ಸಂಪಿಗೆ ಸಿದ್ಧೇಶ್ವರ ದೇವಾಲಯದಲ್ಲಿ ವೀರಭದ್ರನ ಚಿಕ್ಕ ದೇವಾಲಯವಿದೆ. ಅದರ ಎದುರಿಗೆ ಕಿರುದೇವಾಲಯ (ಕಿರು ಮಾಡುವಿನಲ್ಲಿ) ದಲ್ಲಿ ಗುಂಡಬ್ರಹ್ಮಯ್ಯರನ್ನು ಪ್ರತಿಷ್ಠಾಪಿಸಲಾಗಿದೆ. ೩೩ ಇಂಚು ಎತ್ತರ ೩೫ ಇಂಚು ಅಗಲದಲ್ಲಿ ಈ ಶಿಲ್ಪವಿದ್ದು ಮೂರ್ತಿಗಳನ್ನು ಬಹಳ ಸುಂದರವಾಗಿ ಕುಸುರಿ ಕೆತ್ತನೆಯಿಂದ ನಿರ್ಮಿಸಲಾಗಿದೆ. ಇಲ್ಲಿಯವರೆಗೂ ದೊರೆತಿರುವ ಸುಮಾರು ೨೫ ಗುಂಡಬ್ರಹ್ಮಯ್ಯಗಳ ಶಿಲ್ಪಗಳಲ್ಲಿ ಚಿತ್ರದುರ್ಗದ ಈ ಶಿಲ್ಪವು ಅತ್ಯಂತ ಸುಂದರವಾಗಿದೆ. ಈ ಶಿಲ್ಪವನ್ನು ಸೂಕ್ಷ್ಮವಾಗಿ ಪ್ರಾವಿಣ್ಯತೆಯಿಂದ ಕೆತ್ತನೆ ಮಾಡಲಾಗಿದೆ. ಇವರ ಶಿಲ್ಪಗಳು ಕಪ್ಪು ಬಣ್ಣದಿಂದ ಮಿರಮಿರನೆ ಮಿಂಚುತ್ತವೆ. ಪ್ರತ್ಯಕ್ಷವಾಗಿ ಅಲ್ಲಿ ಇವುಗಳನ್ನು ನೋಡುವುದೇ ಒಂದು ಒಳ್ಳೆಯ ಅನುಭವ ಎಂದು ಹೇಳಬಹುದು.

ಗುಂಡಬ್ರಹ್ಮಯ್ಯರ ಮಧ್ಯ ಎರಡು ಶೂಲಗಳನ್ನು ಕೆತ್ತಲಾಗಿದೆ. ಗುಂಡಯ್ಯ (ಮೊದಲ ಶಿಲ್ಪ) ಎಡಗೈಯಿಂದ ಶೂಲ ಹಿಡಿದು ಬಲಗೈಯಲ್ಲಿ ಇಷ್ಟಲಿಂಗಹಿಡಿದಿದ್ದಾನೆ. ಬ್ರಹ್ಮಯ್ಯ ಬಲಗೈಯಲ್ಲಿ ಶೂಲ ಹಿಡಿದು ಎಡಗೈಯಲ್ಲಿ ಇಷ್ಟಲಿಂಗ ಹಿಡಿದಿದ್ದಾನೆ. ಇಬ್ಬರೂ ತಮ್ಮ ಕಾಲುಗಳಿಗೆ ಕಡಗಗಳನ್ನು ಮತ್ತು ಗೆಜ್ಜೆರೂಪದ ಆಭರಣವನ್ನು ಧರಿಸಿದ್ದಾರೆ. ಸೊಂಟಕ್ಕೆ ಚೂರಿ (ಗುದ್ದಬಾಕು) ಸಿಕ್ಕಿಸಿಕೊಂಡಿದ್ದಾರೆ. ಮುಂಗೈ, ರಟ್ಟೆಗಳಿಗೆ ರುದ್ರಾಕ್ಷಿಸರ ಕಟ್ಟಿಕೊಂಡಿದ್ದಾರೆ. ಕಿವಿಯಲ್ಲಿ ದುಂಡನೆಯ ಆಭರಣಗಳನ್ನು ಹಾಕಿಕೊಂಡಿರುವಂತೆ ಚಿತ್ರಿಸಲಾಗಿದೆ. ಕೊರಳಲ್ಲಿ ರುದ್ರಾಕ್ಷಿ ಸರವಿದೆ. ತಲೆಗೆ ಮೂರು ಸುತ್ತು ರುದ್ರಾಕ್ಷಿಸರ ಕಟ್ಟಿಕೊಂಡಿರುವಂತೆ ಟಂಕಿಸಲಾಗಿದೆ. ಇವರು ತೊಟ್ಟಿರುವ ಪಂಚೆಯ ನಿರಿಗೆಗಳನ್ನು ಸೊಗಸಾಗಿ ಕೆತ್ತಲಾಗಿದೆ. ಇವರಿಬ್ಬರೂ ತಲೆಯ ಕೂದಲನ್ನು ಎಡಕ್ಕೆ ತಿರುವಿ ತುರುಬು ಕಟ್ಟಿಕೊಂಡಿದ್ದಾರೆ. ಈ ಶಿಲ್ಪಗಳಿಗೂ ಪ್ರತಿದಿನ ಪೂಜೆ ನೆರವೇರುತ್ತದೆ. ಅಲ್ಲಿಯ ಸ್ಥಳಿಯರಿಗೆ ಇವರ ಮಹತ್ವ ತಿಳಿಯದೆ. ದೇವರೆಂದು ಪರಿಗಣಿಸಿದ್ದಾರೆ. ಇಲ್ಲಿಯೂ ಸಹ ವೀರಭದ್ರ ದೇವಾಲಯದ ಪಕ್ಕದಲ್ಲಿಯೇ ಇರುವುದನ್ನು ಕಾಣಬಹುದಾಗಿದೆ. ಗುಂಡಬ್ರಹ್ಮಯ್ಯರು ವೀರ ಪರಂಪರೆಯಿಂದ ಬಂದ ಕಾರಣವಿರುವುದರಿಂದ ಇವರ ಶಿಲ್ಪಗಳು ಹೆಚ್ಚಾಗಿ ವೀರಭದ್ರ ದೇವಾಲಯದಲ್ಲಿ ಲಭ್ಯವಾಗುತ್ತವೆ. ಶಿವಭಕ್ತಿಯನ್ನು ಪ್ರತಿಬಿಂಬಿಸುವಂತೆ ಈ ಶಿಲ್ಪಗಳು ನಾಡಿನ ತುಂಬ ಹರಡಿಕೊಂಡಿವೆ. ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಗುಂಡಬ್ರಹ್ಮಯ್ಯಗಳ ಶಿಲ್ಪಗಳು ದೊರೆತಿರುವುದು ವಿಶೇಷದ ಸಂಗತಿ.

ಚಿತ್ರದುರ್ಗದ (ಹಿಡಿಂಬೇಶ್ವರ ದೇವಾಲಯದ) ಶಿಲ್ಪ

ಈ ಹಿಂದೆ ಪ್ರಸ್ತಾಪಿಸಿದಂತೆ ಚಿತ್ರದುರ್ಗದ ಬೆಟ್ಟದ ಮೇಲೆ ಒಟ್ಟು ಎರಡು ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ಗುರುತಿಸಲಾಗಿದೆ. ೧) ಹಿಡಿಂಬೇಶ್ವರ ದೇವಾಲಯದ ಶಿಲ್ಪ ೨) ಸಂಪಿಗೆ ಸಿದ್ದೇಶ್ವರ ದೇವಾಲಯದ ಶಿಲ್ಪ. ಚಿತ್ರದುರ್ಗದ ಕೋಟೆ ಪ್ರವೇಶಿಸಿದ ನಂತರ ಮೇಲಕ್ಕೆ ಹತ್ತುವಾಗ ಮೊದಲು ಹಿಡಿಂಬೇಶ್ವರ ದೇವಾಲಯ ಬರುತ್ತದೆ. ಈ ದೇವಾಲಯದ ನವರಂಗದ ಒಳಮಗ್ಗುಲಿನಲ್ಲಿ ಪೂರ್ವಕ್ಕೆ ವಿಸ್ತರಿಸಿ ಕಟ್ಟಲಾಗಿರುವ ವೀರಭದ್ರದೇವರ ಕೋಟೆಯಲ್ಲಿ ಈ ಶಿಲ್ಪವಿದೆ. ಒಳಗಿನ ಕೋಣೆಯ ದಕ್ಷಿಣದ ಗೋಡೆಗೆ ಈ ಪೀಠಸ್ಥ ಶಿಲ್ಪವನ್ನು ಒರಗಿಸಿಡಲಾಗಿದೆ. ಸುಮಾರು ೨ ಅಡಿ ಎತ್ತರ, ೨ ಅಡಿ ಅಗಲ ಇರುವ ಈ ಶಿಲ್ಪದಲ್ಲಿ ಶೂಲಗಳು ನಡುವೆ ಇದ್ದು ಇವುಗಳ ಆಚೆ ಈಚೆಗೆ ಗುಂಡಬ್ರಹ್ಮಯ್ಯಗಳು ನಿಂತಿರುವ ಭಂಗಿಯನ್ನು ಕೆತ್ತಲಾಗಿದೆ. ಇಬ್ಬರ ಎಡಗೈಯಲ್ಲಿ ಸುಂದರವಾದ ಪುಟ್ಟ ಇಷ್ಟಲಿಂಗಗಳಿವೆ. ಇವರಿಬ್ಬರ ತಲೆಯ ಮೇಲೆ ವಿಶಿಷ್ಟವಾದ ಮುಂಡಾಸುಗಳಿವೆ. ಅಲ್ಲದೆ ಕಿವಿಯಲ್ಲಿ ಮಣಿಕುಂಡಲಗಳು, ಇತರ ಆಭರಣ ವಸ್ತ್ರಾದಿಗಳು ಈ ಶಿಲ್ಪದಲ್ಲಿ ಇರುವುದನ್ನು ಗುರುತಿಸಲಾಗಿದೆ.

ಇವರೀರ್ವರ ಮುಖಮುದ್ರೆಯು ಪ್ರಸನ್ನ ಕಳೆಯಿಂದ ಮನಸೆಳೆಯುವಂತೆ ಚಿತ್ರಿಸಲಾಗಿದೆ. ಹಿಡಿಂಬೇಶ್ವರ ದೇವಾಲಯದ ಗುಂಡಬ್ರಹ್ಮಯ್ಯಗಳ ಶಿಲ್ಪದ ವಿಶಿಷ್ಟತೆಯೆಂದರೆ, ಮೇಲಿರುವ ಸಿಂಹಲಲಾಟ ಮತ್ತು ಶೂಲಗಳಿಗೆ ಮಧ್ಯದಲ್ಲಿ ತ್ರಿಶೂಲ ಡಮರುಗಧಾರಿಯೂ, ಅಭಯ ಮುದ್ರಾಹಸ್ತನೂ ಆದ ಶಿವನ ಮೂರ್ತಿಯನ್ನು ಚಿತ್ರಿಸಲಾಗಿದೆ. ಇಲ್ಲಿಯವರೆಗೂ ಗುಂಡಬ್ರಹ್ಮಯ್ಯರ ಶಿಲ್ಪಗಳಲ್ಲಿ ಈ ರೀತಿಯ ಶಿವನ ಚಿತ್ರಣ ಕಂಡುಬಂದಿರುವುದು ಇದೇ ಮೊದಲು. ಆದ್ದರಿಂದ ಹಿಡಿಂಬೇಶ್ವರ ದೇವಾಲಯದ ಶಿಲ್ಪವು ಮಹತ್ವ ಪಡೆದುಕೊಂಡಿದೆ. ಶಿವನು ಕುಳಿತ ಪೀಠದಲ್ಲಿ ನಡುವೆ ಚಿಕ್ಕ ನಂದಿಯ ಕೆತ್ತನೆಯೂ ಇದೆ. ಇದು ಗುಂಡಬ್ರಹ್ಮಯ್ಯರು ಶೂಲಾರೋಹಣ ಮಾಡಿದ ಸಂದರ್ಭವನ್ನು ನೆನಪಿಸುತ್ತದೆ. ಆದ್ದರಿಂದ ಈ ವಿಷಯಕ್ಕೆ ಸಂಬಂಧಿಸಿದಂತೆ ಉದಾಹರಣೆಯಾಗಿ ಕೆಳಗಿನ ಪದ್ಯವನ್ನು ಗಮನಿಸಬಹುದು.

"ಕೆತ್ತೆರೆಡು ಶೂಲವ ಹತ್ತಿದರು ಪುಷ್ಪಕವ
ಹೊತ್ತು ವೋರಗಲ್ಲದ ಪುರದಲ್ಲಿ|| ಗುಂಡಬ್ರಹ್ಮಯ್ಯಗಳ
ಎತ್ತಿಕೊಂಡೊಯ್ದ ಶಿವರಾಯ"[೨೭]

"ಸತ್ಯ ಶರಣರ ಅರ್ತಿಯಲ್ಲಿ ಕೇಳಿದರೆ
ಮುಕ್ತಿ ಫಲ ಪದವಿ ಕೈಲಾಸ|| ದೊರಕುವುದು ಶಿವ
ಸತ್ಯದ ಪಾದಕ್ಕೆ ಉಘೇಯೆನ್ನಿ"[೨೮]

ಗುಂಡಬ್ರಹ್ಮಯ್ಯಗಳನ್ನು ಗಣಪತಿರಾಯ ಶೂಲಕ್ಕೇರಿಸುವ ಸಮಯದಲ್ಲಿ ಶಿವನು ಪ್ರತ್ಯಕ್ಷನಾದನೆಂಬ ಪೌರಾಣಿಕ ಹೇಳಿಕೆಯನ್ನು ಸಮರ್ಥಿಸುವ ರೀತಿಯಲ್ಲಿ ಮೂರ್ತರೂಪ ಕೊಡುವ ಪ್ರಯತ್ನವಾಗಿ ಹಿಡಿಂಬೇಶ್ವರ ದೇವಾಲಯದ ಗುಂಡಬ್ರಹ್ಮಯ್ಯಗಳ ಶಿಲ್ಪವನ್ನು ಚಿತ್ರಿಸಲಾಗಿದೆ.

ಚಿಕ್ಕಪುರದ ಶಿಲ್ಪ

ಚಿತ್ರದುರ್ಗದ ತಾಲೂಕಿನ ಚಿಕ್ಕಪುರ ಗ್ರಾಮದ ಉತ್ತರದಲ್ಲಿ ವೀರಭದ್ರ ದೇವಾಲಯದ ಹೊರಗೆ ಉತ್ತರದ ಗೋಡೆಗೆ ಈ ಶಿಲ್ಪವನ್ನು ಒರಗಿಸಿಡಲಾಗಿದೆ. ಸುಮಾರು ೨ ಅಡಿ ಎತ್ತರ, ೨ ೧/೪ ಅಡಿ ಅಗಲದಲ್ಲಿ ಈ ಶಿಲ್ಪವನ್ನು ಕೆತ್ತಲಾಗಿದೆ. ಗುಂಡಬ್ರಹ್ಮಯ್ಯಗಳು ಶಿಲ್ಪದಲ್ಲಿ ಎದುರುಬದುರಾಗಿ ನಿಂತಿದ್ದು ಅವರ ನಡುವೆ ಶೂಲಗಳಿವೆ. ಈ ಶಿಲ್ಪವು ಚಿತ್ರದುರ್ಗದ ಸಂಪಿಗೆ ಸಿದ್ದೇಶ್ವರ ದೇವಾಲಯದೊಳಗಿನ ಶಿಲ್ಪವನ್ನು ಹೋಲುತ್ತದೆ. ಪ್ರತಿಬಿಂಬಾನುಕ್ರಮದಲ್ಲಿ ಬಲಗಡೆಯವನು ಬಲಗೈಯಲ್ಲೂ, ಎಡಗಡೆಯವನು ಎಡಗೈಯಲ್ಲೂ ಇಷ್ಟಲಿಂಗಳನ್ನು ಹಿಡಿದುಕೊಂಡಿರುವುದನ್ನು ಚಿತ್ರಿಸಲಾಗಿದೆ. ಉಳಿದ ಕೈಗಳಿಂದ ಶೂಲದ ಮೊನೆಯ ಬುಡವನ್ನು ಹಿಡಿದುಕೊಂಡಿರುವಂತೆ ಕಾಣುತ್ತದೆ. ಇಬ್ಬರೂ ಮಾಲೆಗಳನ್ನು ಧರಿಸಿರುವಂತೆ ಚಿತ್ರಣವಿದೆ. ಒಳಗಡೆಯವನು ಇಷ್ಟಲಿಂಗವನ್ನು ಹಿಡಿದುಕೊಂಡಿರುವುದು ಶಿಲ್ಪದಲ್ಲಿ ಹಾಳಾಗಿಹೋಗಿದೆ.

ಸಾಮಾನ್ಯ ಎನ್ನುವಂತೆ ತಲೆಯಲ್ಲಿ ಮುಂಡಾಸು, ಕಾಲಲ್ಲಿ ಕಾಲ್ಪೆಂಡೆ, ಕಿವಿಯಲ್ಲಿ ಕರ್ಣಕುಂಡಲ, ತೋಳ್ಬಂದಿಯನ್ನು ಧರಿಸಿದ್ದಾರೆ. ಈ ಚಿತ್ರಗಳಿಗೆ ಯಾರೂ ಪೂಜೆ ಸಲ್ಲಿಸದಿರುವುದನ್ನು ಕಾಣಬಹುದು. ಊರಿನಿಂದ ಸುಮಾರು ೧ ೧/೧ ಕಿ.ಮೀ. ದೂರದಲ್ಲಿರುವುದರಿಂದ ಇದು ಆರಾಧನೆಗೊಳ್ಳುತ್ತಿಲ್ಲ.[೨೯] ಇಲ್ಲಿಯ ಗುಂಡಬ್ರಹ್ಮಯ್ಯಗಳ ಶಿಲ್ಪಗಳಿಗೆ ಬಿಳಿಯ ಸುಣ್ಣವನ್ನು ಬಳಿಯಲಾಗಿದೆ. ಆದ್ದರಿಂದ ಸ್ಪಷ್ಟವಾಗಿ ಗುರುತಿಸಲು ಸಾದ್ಯವಾಗುವುದಿಲ್ಲ ಜನರಿಂದ ಅಲಕ್ಷೆಗೆ ಒಳಗಾಗಿ ಚಿಕ್ಕಪುರದ ಶಿಲ್ಪವು ನಶಿಸುವ ಹಂತದಲ್ಲಿದೆ. ಆದ್ದರಿಂದ ಜರೂರಾಗಿ ಇವುಗಳ ರಕ್ಷಣೆ ಮಾಡಬೇಕಾಗಿದೆ. ಇಲ್ಲದಿದ್ದರೆ ಇತಿಹಾಸ ಸಾರುವ ಈ ಶಿಲ್ಪವು ನಮ್ಮಿಂದ ದೂರವಾಗುತ್ತದೆ. ಹೀಗೆ ಗುಂಡಬ್ರಹ್ಮಯ್ಯಗಳ ಶಿಲ್ಪ ಸಂಪತ್ತನ್ನು ಕ್ಷೇತ್ರಕಾರ್ಯದ ಮೂಲಕ ಅಧ್ಯಯನ ಮಾಡಿದಾಗ ಅನೇಕ ಅಂಶಗಳು ಕಂಡುಬಂದವು. ಕೆಲವು ಭಾಗಗಳಲ್ಲಿ ಆರಾಧನೆಗೆ ಒಳಗಾದರೆ, ಇನ್ನು ಕೆಲವು ಕಡೆ ಉಪೇಕ್ಷೆಗೆ ಒಳಗಾಗಿರುವುದನ್ನು ಗುರುತಿಸಬಹುದು.

ಶ್ರೀರಾಮಪುರದ ಶಿಲ್ಪ

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಶ್ರೀರಾಮಪುರವು ಒಂದು ಹೋಬಳಿ ಸ್ಥಳವಾಗಿದೆ. ಈ ಊರನ್ನು ಹಿಂದೆ 'ಬೂದಿಹಾಳು' ಎಂಬ ಹೆಸರಿನಿಂದ ಕರೆಯುತ್ತಿದ್ದರು.[೩೦] ಪ್ರಾಚೀನವಾದ ಈ ಊರು ವಿಶಿಷ್ಟವಾದ ಇತಿಹಾಸ ಹೊಂದಿದೆ. ಊರಿನ ಈಶಾನ್ಯದ ಅಂಚಿನಲ್ಲಿ ಶಿಥಿಲಾವಸ್ಥೆಗೆ ಬಂದಿರುವ ವೀರಭದ್ರ ದೇವಾಲಯದಲ್ಲಿ ಈ ಶಿಲ್ಪವನ್ನು ಗುರುತಿಸಲಾಗಿದೆ.[೩೧] ಗರ್ಭಗುಡಿಯ ಬಾಗಿಲ ಹೊರಗೆ ಎಡಬದಿಯ ಗೋಡೆಗೆ, ಪೀಠವೊಂದರ ಮೇಲೆ ಗುಂಡಬ್ರಹ್ಮಯ್ಯರ ಶಿಲ್ಪವನ್ನು ಒರಗಿಸಿಟ್ಟಿದೆ. ಸುಮಾರು ೧ ೧/೨ ಅಡಿ ಎತ್ತರ, ೨ ಅಡಿ ಅಗಲ ಇರುವ ಈ ಶಿಲ್ಪದಲ್ಲಿ ಯಥಾ ಪ್ರಕಾರ ಮಧ್ಯದಲ್ಲಿ ಎರಡು ಶೂಲಗಳಿವೆ. ಅವುಗಳ ಬಲಕ್ಕೆ ಎಡಕ್ಕೆ ಬಲಗೈಗಳಲ್ಲಿ ಸಣ್ಣ ಕತ್ತಿಗಳನ್ನು ಎತ್ತಿ ಹಿಡಿಯಲಾಗಿದೆ.

ಇಷ್ಟಲಿಂಗವಿರುವ ಎಡಗೈಗಳಿಂದ ಶೂಲಗಳನ್ನು ಸ್ಪರ್ಶಿಸಿ ಗುಂಡಬ್ರಹ್ಮಯ್ಯಗಳು ನಿಂತಿದ್ದಾರೆ. ಎರಡೂ ಶೂಲಗಳಿಗೂ ಹೂಮಾಲೆ ಹಾಕಿ (ಅಲಂಕರಿಸಿ)ರುವಂತೆ ಚಿತ್ರಿಸಲಾಗಿದೆ. ಕುಸ್ಕೂರು ಮತ್ತು

ಹೊಸದುರ್ಗದ ಶಿಲ್ಪಗಳಂತೆ ಇವರು ಕತ್ತಿಯೆತ್ತಿದಂತೆ ಕೆತ್ತಿರುವುದರಿಂದ ಇದು ಅಂಥ ಮೂರನೆಯ ಶಿಲ್ಪವೆಂದು ಗುರುತಿಸಬಹುದು. ರಟ್ಟೆಮುಂಗೈಗಳಿಗೆ ಕಡಗಗಳನ್ನು ಧರಿಸಿದ್ದಾರೆ. ಈ ವೀರಭದ್ರ ದೇವಾಲಯದ ಗುಂಡಬ್ರಹ್ಮಯ್ಯಗಳ ಶಿಲ್ಪಗಳಿಗೆ ಭಕ್ತರು ಬಂದು ಪೂಜೆ ಸಲ್ಲಿಸುತ್ತಿರುವುದಾಗಿ ಅಲ್ಲಿಯ ಪೂಜಾರಿಗಳಿಂದ ತಿಳಿದು ಬಂದಿದೆ.[೩೨] ಈ ಶಿಲ್ಪದಲ್ಲಿ ರಟ್ಟೆ ಮುಂಗೈಗಳಿಗೆ ಕಡುಗಗಳನ್ನು ಧರಿಸಿ, ವೀರಗಾಸೆಯಂತೆ ಪಂಚೆಯನ್ನು ಉಡಿಸಲಾಗಿದೆ. ಹೀಗೆ ಗುಂಡಬ್ರಹ್ಮಯ್ಯರ ಶಿಲ್ಪಸಂಪತ್ತನ್ನು ಶ್ರೀರಾಮಪುರದಲ್ಲಿ ಗುರುತಿಸಲಾಗಿದೆ.

ಅಸಗೋಡಿನ ಶಿಲ್ಪ

ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲೂಕಿನ ಅಸಗೋಡು ಒಂದು ಚಿಕ್ಕ ಗ್ರಾಮವಾಗಿದೆ. ಈ ಊರಿನ ಪೂರ್ವದಲ್ಲಿರುವ ಶಂಭುಲಿಂಗ ದೇವಾಲಯದ ಒಳಗೆ ದಕ್ಷಿಣದ ಗೋಡೆಯಲ್ಲಿ ಗುಂಡಬ್ರಹ್ಮಯ್ಯಗಳ ಶಿಲ್ಪವನ್ನು ಗುರುತಿಸಲಾಗಿದೆ. ಇದು ಸುಮಾರು ೧ ಅಡಿ ಎತ್ತರ ೨ ೧/೨ ಅಡಿ ಅಗಲವಾಗಿದೆ. ದೇವಸ್ಥಾನದ ಗೋಡೆಗೆ ಶಿಲ್ಪವನ್ನು ಕೆತ್ತಲಾಗಿದ್ದು, ಉಬ್ಬುಶಿಲ್ಪದಲ್ಲಿ ಗುಂಡಬ್ರಹ್ಮಯ್ಯಗಳು ಅವರ ಸತಿಯರಾದ ಗೌರಾಯಿ ಹಾಗೂ ಅಮರಾಯಿಯ ಶಿಲ್ಪವಿರುವುದನ್ನು ಕಾಣಬಹುದು. ನಾಲ್ಕು ಜನರ ಚಿತ್ರಗಳು ನೋಡುಗರಿಗೆ ಹಿತವೆನಿಸುತ್ತವೆ. ಸಾಮಾನ್ಯ ಸ್ವರೂಪ ಎನ್ನುವಂತೆ ಇವರ ನಡುವೆ ಎರಡು ಶೂಲಗಳಿವೆ. ಗುಂಡಬ್ರಹ್ಮಯ್ಯರನ್ನು ದೊಡ್ಡ ಗಾತ್ರದಲ್ಲಿ ಕೆತ್ತಲಾಗಿದ್ದು ಇವರ ಸತಿಯರನ್ನು ಚಿಕ್ಕದಾಗಿ ಕೆತ್ತಲಾಗಿದೆ. ಹೊಸದುರ್ಗದ ಶಿಲ್ಪದಲ್ಲಿಯೂ ಈ ರೀತಿ ಗಮನಿಸಬಹುದು. ಅಸಗೊಡಿನ ಈ ಶಿಲ್ಪಕ್ಕೆ ಸಿಂಹಲಲಾಟವಿಲ್ಲ. ಬಲಗಡೆಯವರು ಬಲಗೈಯಲ್ಲಿ, ಎಡಗಡೆಯವರು ಎಡಗೈಯಲ್ಲಿ ಇಷ್ಟಲಿಂಗಗಳನ್ನು ಹಿಡಿದುಕೊಂಡಿದ್ದಾರೆ.

ಇನ್ನೊಂದು ಕೈಯನ್ನು ಶೂಲದತ್ತ ಚಾಚಿಕೊಂಡು ನಿಂತಿದ್ದಾರೆ. ಬಲಗಡೆಯವರ ಬಲಬದಿಯಲ್ಲಿ, ಎಡಗಡೆಯವರ ಎಡಬದಿಯಲ್ಲಿ ನಿಂತಿರುವ ಸತಿಯರು ನೀತಿಗೆರೆಯ ಶಿಲ್ಪದಂತೆ ಮಂಗಳದ್ರವ್ಯಗಳ ತಟ್ಟೆಯನ್ನು ಹಿಡಿದುಕೊಂಡಿದ್ದಾರೆ. ಇನ್ನು ಒಂದು ವಿಶೇಷವೆಂದರೆ, ಇಲ್ಲಿ ಇಬ್ಬರು ಹೆಂಗಸರೂ ಸತೀತ್ವದ ಸೂಚಕವೇನೋ ಎನ್ನುವಂತಹ ಮಾಲೆಗಳನ್ನು ಧರಿಸಿದ್ದಾರೆ. ನೆಲದಿಂದ ಶೂಲದತ್ತ ಜಿಗಿಯುವಂತೆ ಚಿತ್ರಿತವಾಗಿರುವ ಗುಂಡಬ್ರಹ್ಮಯ್ಯಗಳ ಭಂಗಿಯು, ಮರಣದ ಬಗೆಗಿನ ಅವರ ನಿರ್ಭೀತಿಯನ್ನು, ಆತ್ಮಾರ್ಪಣೆಯ ಉತ್ಸಾಹವನ್ನು ಪ್ರಕಟಿಸುವಂತಿದೆ. ಈವರೆಗೆ ಗುಂಡಬ್ರಹ್ಮಯ್ಯಗಳು ಮತ್ತು ಅವರ ಸತಿಯರು ಇರುವ ಶಿಲ್ಪಗಳು ನೀತಿಗೆರೆಯದಷ್ಟೇ ಆಗಿತ್ತು. ಇದರ ಸಂಶೋಧನೆಯಿಂದ ಈಗ ಇದು ಅಂತಹ ಎರಡನೆಯ ಶಿಲ್ಪವಾಗಿದೆ.

ದೊಡ್ಡಗದ್ದವಳ್ಳಿಯ ಶಿಲ್ಪ

ಹಾಸನ ಜಿಲ್ಲೆಯ ಹಾಸನ ತಾಲೂಕಿನ ದೊಡ್ಡಗದ್ದವಳ್ಳಿಯಲ್ಲಿ ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ಗುರುತಿಸಲಾಗಿದೆ.[೩೩] ಲಕ್ಷ್ಮೀದೇವಾಲಯಕ್ಕೆ ಹೋಗುವ ದಾರಿಯಲ್ಲಿ ಬಲಭಾಗದ ಒಂದು ಸಣ್ಣದಿಣ್ಣೆಯ ಮೇಲೆ ಈಗ ಶಿವಾಲಯವಾಗಿ ಪರಿವರ್ತಿತವಾಗಿರುವ ಒಂದು ಜೈನ ಬಸದಿಯಿದೆ. ಆ ದೇವಾಲಯದ

ಮುಖಮಂಟಪದ ಹೊರಗೆ ಎರಡೂ ಬದಿಗಳಲ್ಲಿ ಗುಂಡಬ್ರಹ್ಮಯ್ಯಗಳ ವಿಗ್ರಹಗಳಿವೆ. ತಿಳಿಹಸಿರು ಬಣ್ಣದ ಬಳಪದ ಕಲ್ಲಿನಲ್ಲಿ ಈ ಶಿಲ್ಪಗಳನ್ನು ಕೆತ್ತಲಾಗಿದೆ. ತಮ್ಮ ಎಡಗೈಯಲ್ಲಿ ಇಷ್ಟಲಿಂಗವನ್ನು ಹಿಡಿದು ಬಲಗೈಯಲ್ಲಿ ಕಠಾರಿಯನ್ನು ಹಿಡಿದು ನಿಂತಿರುವಂತೆ ಚಿತ್ರಿಸಲಾಗಿದೆ. ಇವರು ಕೊರಳಿನಲ್ಲಿ ರುದ್ರಾಕ್ಷಿಯ ಹಾರ ಹಾಗೂ ಜನಿವಾರದ ರೀತಿಯಲ್ಲಿ (ಶಿವದಾರ) ರುದ್ರಾಕ್ಷಿಯ ಸರವನ್ನು ಧರಿಸಿದ್ದಾರೆ. ತೋಳುಗಳಲ್ಲಿ ತೋಳಬಂದಿ, ಕೈಗಳಲ್ಲಿ ಕಂಕಣ, ಕಾಲುಗಳಲ್ಲಿ ಕಾಲಂದುಗೆ, ಕಿವಿಗಳಲ್ಲಿ ಕರ್ಣಕುಂಡಲ, ತಲೆಯ ಮೇಲೆ ಮುಕುಟಗಳನ್ನು ಧರಿಸಿದ್ದಾರೆ. ಅವರು ಧರಿಸಿರುವ ಕಚ್ಚೆಪಂಚೆ ಹಾಗೂ ಕಟಿವಸ್ತ್ರಗಳನ್ನು ಸ್ಪಷ್ಟವಾಗಿ ಕಾಣುವಂತೆ ಶಿಲ್ಪಿಯು ನೈಪುಣ್ಯತೆಯಿಂದ ಶಿಲ್ಪವನ್ನು ಚಿತ್ರಿಸಿರುವುದನ್ನು ಕಾಣಬಹುದು.

ಸಾಧಾರಣವಾಗಿ ಗುಂಡಬ್ರಹ್ಮಯ್ಯಗಳ ವಿಗ್ರಹಗಳು ಒಂದೇ ಶಿಲಾಫಲಕದ ಮೇಲೆ ಜೋಡಿಯಾಗಿರುವುದನ್ನು ಗಮನಿಸಬಹುದು. ಆದರೆ ದೊಡ್ಡಗದ್ದವಳ್ಳಿಯಲ್ಲಿರುವ ಶಿಲ್ಪಗಳು ಮಾತ್ರ ಬೇರೆ ಬೇರೆಯಾಗಿ ಎರಡು ಪ್ರತ್ಯೇಕ ಶಿಲ್ಪಗಳಾಗಿರುವುದು ವಿಶೇಷವೆಂದು ಹೇಳಬಹುದು. ಸಾಮಾನ್ಯವಾಗಿ ಪ್ರತಿ ಶಿಲ್ಪದ ನಡುವೆ ಅಥವಾ ಗುಂಡಬ್ರಹ್ಮಯ್ಯಗಳ ಮಧ್ಯ ಭಾಗದಲ್ಲಿ ಶೂಲಗಳಿರುತ್ತವೆ. ಆದರೆ ಈ ಶಿಲ್ಪದಲ್ಲಿ ಗುಂಡಬ್ರಹ್ಮಯ್ಯಗಳೇ ನಡುವೆ ಇದ್ದು ಆಚೆಗೆ ಈಚೆಗೆ ಶೂಲಗಳಿರುವುದು ವಿಶಿಷ್ಟವೆನಿಸಿದೆ. ನೃತ್ಯ ಮಾಡುವ ರೀತಿಯಲ್ಲಿ ಇವರ ಭಂಗಿಗಳಿವೆ. ಅಷ್ಟೊಂದು ಸುಂದರವಾಗಿ ಇವರನ್ನು ಚಿತ್ರಿಸಿಲ್ಲ. ಇವುಗಳನ್ನು ಸ್ಪಷ್ಟವಾಗಿ ನೋಡಲು ಆಗುವುದಿಲ್ಲ. ಕಾರಣವೆಂದರೆ ಈಗಾಗಲೇ ನಶಿಸುವ ಹಂತದಲ್ಲಿವೆ. ಆದ್ದರಿಂದ ತುರ್ತಾಗಿ ಇವುಗಳ ರಕ್ಷಣೆಯ ಕಾರ್ಯ ನಡೆಯಬೇಕಾಗಿರುವುದು ಅವಶ್ಯವಾಗಿದೆ.

ಹಾರನಹಳ್ಳಿಯ ಶಿಲ್ಪ

ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನ ಹಾರನಹಳ್ಳಿಯ ಈಶ್ವರ ದೇವಾಲಯದ ನವರಂಗದಲ್ಲಿ ಗುಂಡಬ್ರಹ್ಮಯ್ಯಗಳ ಶಿಲ್ಪವನ್ನು ಗುರುತಿಸಲಾಗಿದೆ.[೬೪] ಇಲ್ಲಿ ಗುಂಡಬ್ರಹ್ಮಯ್ಯಗಳ ವಿಗ್ರಹವಿರುವ ಒಂದು ಶಿಲಾಫಲಕವಿದೆ. ಎರಡು ಅಡಿ ಅಗಲ ಹಾಗೂ ಒಂದು ಅಡಿ ಎತ್ತರ ನಸುಗಪ್ಪು ಬಣ್ಣದ ಬಳಪದ ಕಲ್ಲಿನಲ್ಲಿ ಈ ಶಿಲ್ಪವನ್ನು ಚಿತ್ರಿಸಲಾಗಿದೆ. ಉಬ್ಬು ಶಿಲ್ಪದಂತೆ ಈ ವಿಗ್ರಹಗಳನ್ನು ಕೆತ್ತಲಾಗಿದೆ. ಬನವಾಸಿಯ ಮಧುಕೇಶ್ವರ ದೇವಾಲಯದ ತ್ರಿಲೋಕಮಂಟಪದ ಪೀಠದಲ್ಲಿರುವ ಗುಂಡಬ್ರಹ್ಮಯ್ಯಗಳ ವಿಗ್ರಹಗಳನ್ನು ಹೋಲುವ ಈ ಶಿಲ್ಪಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಶಿಲ್ಪಗಳ ವೈಶಿಷ್ಟ್ಯತೆ ತಿಳಿಯುತ್ತದೆ. ಬನವಾಸಿಯ ಶಿಲ್ಪದಲ್ಲಿರುವಂತೆ ಇಲ್ಲಿಯೂ ಎರಡು ತ್ರಿಶೂಲಗಳ ಇಕ್ಕಲಗಳಲ್ಲಿ ಗುಂಡಬ್ರಹ್ಮಯ್ಯರು ನಿಂತಿರುವಂತೆ ಕೆತ್ತಲಾಗಿದೆ. ಬನವಾಸಿಯ ಶಿಲ್ಪದಲ್ಲಿ ಗುಂಡಬ್ರಹ್ಮಯ್ಯಗಳು ಸಮಪಾದ ಭಂಗಿಯಲ್ಲಿ ಕೈಗಳನ್ನು ಮುಗಿದು ನಿಂತಿದ್ದರೆ, ಹಾರನಹಳ್ಳಿಯ ಶಿಲಾಫಲಕದಲ್ಲಿನ ಎಡಭಾಗದಲ್ಲಿರುವ ಶಿಲ್ಪವು ಕಮಂಡಲುವನ್ನು ಬಲತೋಳಿನಲ್ಲಿ ತೂಗು ಹಾಕಿಕೊಂಡು ತನ್ನ ಬಲಗೈಯಲ್ಲಿ ಇಷ್ಟಲಿಂಗವನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ.

ಎಡಗೈಯಲ್ಲಿ ಕಠಾರಿಗಳನ್ನು ಹಿಡಿದು ಬಲಗಾಲನ್ನು ಮುಂದಿಟ್ಟು ನಿಂತಿರುವಂತೆ ಶಿಲ್ಪಿತವಾಗಿದೆ. ಶಿಲಾಫಲಕದ ಬಲಭಾಗದಲ್ಲಿನ ಶಿಲ್ಪವು ಎಡಗಡೆಯಲ್ಲಿರುವ ಶಿಲ್ಪಕ್ಕೆ ಸಂಪೂರ್ಣವಾಗಿ ವಿರುದ್ಧ

ಭಂಗಿಯದಾಗಿದೆ. ಅಂದರೆ ತನ್ನ ಎಡಗಾಲನ್ನು ಮುಂದಿಟ್ಟು ಎಡಗೈಯಲ್ಲಿ ಕಮಂಡಲುವನ್ನು ತೂಗಿಹಾಕಿಕೊಂಡು ಬಲಗೈಯಲ್ಲಿ ಕಠಾರಿಯನ್ನು ಹಿಡಿದುಕೊಂಡು ನಿಂತಿರುವಂತೆ ಈ ಶಿಲ್ಪವನ್ನು ಕೆತ್ತಲಾಗಿದೆ. ಸಾಮಾನ್ಯ ಎನ್ನುವಂತೆ ಗುಂಡಬ್ರಹ್ಮಯ್ಯಗಳ ಮಧ್ಯದಲ್ಲಿ ಎರಡು ಶೂಲಗಳಿರುತ್ತವೆ. ಆದರೆ ಇಲ್ಲಿ ಮಧ್ಯದಲ್ಲಿ ತ್ರಿಶೂಲಗಳಿರುವುದು ವಿಶೇಷವಾಗಿದೆ. ಹೀಗೆ ಗುಂಡಬ್ರಹ್ಮಯ್ಯಗಳ ಶಿಲ್ಪಗಳ ರಚನಾ ವಿನ್ಯಾಸವನ್ನು ವಿಶ್ಲೇಷಿಸಬಹುದು. ಕರ್ನಾಟಕದ ಅನೇಕ ಭಾಗಗಳಲ್ಲಿ ಈ ರೀತಿಯ ಶಿಲ್ಪಗಳು ದೊರೆತಿರುವುದು ಗುಂಡಬ್ರಹ್ಮಯ್ಯಗಳ ಪ್ರಮುಖ್ಯತೆಯನ್ನು ಸಾರುತ್ತದೆ.

ನಂದಿಬೆಟ್ಟದ ಮೇಲಿನ ಶಿಲ್ಪ

ಚಿಕ್ಕಬಳ್ಳಾಪುರ ತಾಲೂಕಿನ ನಂದಿಬೆಟ್ಟದ ಮೇಲಿರುವ ಯೋಗನಂದೀಶ್ವರ ದೇವಾಲಯದ ನವರಂಗದಲ್ಲಿ ಗುಂಡಬ್ರಹ್ಮಯ್ಯಗಳ ವಿಗ್ರಹವಿರುವ ಒಂದು ಶಿಲಾಫಲಕವನ್ನು ಗುರುತಿಸಲಾಗಿದೆ.[೩೯] ಎರಡು ಅಡಿ ಅಗಲ ಹಾಗೂ ಎರಡು ಅಡಿ ಉದ್ದದ ಬಳಪದ ಕಲ್ಲಿನ ಫಲಕದ ಮೇಲೆ ಗುಂಡಬ್ರಹ್ಮಯ್ಯಗಳ ವಿಗ್ರಹವನ್ನು ಕೆತ್ತಲಾಗಿದೆ. ಹಾವೇರಿಯ ಹಾಗೂ ಗುಂಡೇನಹಳ್ಳಿಯ ವಿಗ್ರಹಗಳಂತೆ ಈ ವಿಗ್ರಹವನ್ನು ಶೂಲಗಳ ಮೇಲೆ ಗುಂಡಬ್ರಹ್ಮಯ್ಯಗಳು ಕುಳಿತಿರುವಂತೆ ಕೆತ್ತಲಾಗಿದೆ. ಆದರೆ ಹಾವೇರಿಯ ಹಾಗೂ ಗುಂಡೇನಹಳ್ಳಿಯ ವಿಗ್ರಹಗಳ ಕೈಗಳಲ್ಲಿ ಕಠಾರಿಗಳಿಲ್ಲ. ಇಲ್ಲಿ ಕೈಗತ್ತಿಯನ್ನು ಬಲಗೈಯಲ್ಲಿ ಹಿಡಿದುಕೊಂಡು ಶೂಲಗಳ ಮೇಲೆ ಕೆತ್ತಲಾಗಿದೆ. ಈ ಶಿಲ್ಪಗಳ ಎಡಗೈಗಳಲ್ಲಿ ಇಷ್ಟಲಿಂಗವಿದ್ದರೆ ಬಲಗೈಗಳಲ್ಲಿ ಕೈಗತ್ತಿಯನ್ನು ಸುಂದರವಾಗಿ ಚಿತ್ರಿಸಲಾಗಿದೆ. ಸೂಕ್ಷ್ಮವಾದ ಕುಸುರಿ ಕೆಲಸದಿಂದ ಕೂಡಿರುವ ಈ ಶಿಲ್ಪವು ಅತ್ಯಂತ ಆಕರ್ಷಕವಾಗಿರುವುದನ್ನು ಕಾಣಲಾಗಿದೆ. ಗುಂಡಬ್ರಹ್ಮಯ್ಯರ ತಲೆಯ ಮೇಲೆ ಬೆಳ್ಗೊಡೆಯಿದೆ. ಹಿಂಭಾಗದಲ್ಲಿ ಪ್ರಭಾವಳಿಯಿದ್ದು ಪ್ರಭಾಳಿಯ ಮೇಲ್ಭಾಗದಲ್ಲಿ ಸಿಂಹಲಲಾಟವಿದೆ. ಇಲ್ಲಿಯ ಶೂಲಗಳು ವಿಶಿಷ್ಟವಾದ ರಚನಾ ವಿನ್ಯಾಸದಿಂದ ಕೂಡಿವೆ. ಕುಳಿತಿರುವ ಈ ಭಂಗಿಯನ್ನು ನೋಡಿದರೆ, ಕಾವ್ಯಗಳಲ್ಲಿ ಉಲ್ಲೇಖವಾಗಿರುವಂತೆ ಶೂಲಕ್ಕೇರುವರೆಂಬ ಭಾವ ಉಂಟಾಗುತ್ತದೆ. ಆದ್ದರಿಂದ ಈ ಶಿಲ್ಪವು ವಿಶಿಷ್ಟವಾಗಿದೆಂದು ಹೇಳಲಾಗಿದೆ.

ಗುಂಡೇನಹಳ್ಳಿಯ ಶಿಲ್ಪ

ರಾಣೇಬೆನ್ನೂರಿಗೆ ಸಮಿಪದಲ್ಲಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೪ಕ್ಕೆ ಹೊಂದಿಕೊಂಡಿರುವ ಗುಂಡೇನಹಳ್ಳಿ ಗ್ರಾಮದಲ್ಲಿ ಗುಂಡಬ್ರಹ್ಮಯ್ಯರ ದೇವಾಲಯವಿದೆ. ಗರ್ಭಗೃಹದಲ್ಲಿ ಗುಂಡಬ್ರಹ್ಮಯ್ಯರ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದ್ದು ಅವುಗಳಿಗೆ ಗುಂಡಬ್ರಹ್ಮಯ್ಯ ದೇವರೆಂದು ನಿತ್ಯ ಪೂಜೆ ಸಲ್ಲಿಸಲಾಗುತ್ತಿದೆ.[೩೭] ಈ ದೇವಸ್ಥಾನವು ಅತ್ಯಂತ ಪ್ರಾಚೀನವಾದುದಾಗಿದೆ. ಇಲ್ಲಿ ಗುಂಡಬ್ರಹ್ಮಯ್ಯರು ಕಾಚಾ ತೊಟ್ಟಿದ್ದು ಶೂಲದ ಮೇಲೆ ಕುಳಿತಿದ್ದಾರೆ. ಇಬ್ಬರೂ ಕೈಯಲ್ಲಿ ಇಷ್ಟಲಿಂಗ ಹಿಡಿದಿದ್ದಾರೆ. ಬಲಕ್ಕೆ ಕಾಣಿಸುವ ಮೂರ್ತಿ ಅರ್ಧ ಹೋಳಾಗಿದ್ದು ಹಾಗೆಯೇ ಜೋಡಿಸಿ ಪೂಜಿಸಲಾಗುತ್ತಿದೆ. ಗುಂಡಬ್ರಹ್ಮಯ್ಯರಿಬ್ಬರೂ ಕಾಲುಗಳಿಗೆ ಕಡಗರೂಪದ ಆಭರಣ ಧರಿಸಿದ್ದಾರೆ. ಮೊದಲ ವಿಗ್ರಹಕ್ಕೆ ಸಿಂಹಲಾಟವಿಲ್ಲ. ಎರಡನೆಯ ವಿಗ್ರಹಕ್ಕೆ ಸಿಂಹಲಾಟವಿದೆ.

ಮೊದಲ ವಿಗ್ರಹದ ಮುಖದಲ್ಲಿ ಮೀಸೆಯಿಲ್ಲ. ಎರಡನೆ ವಿಗ್ರಹಕ್ಕೆ ಮೀಸೆ, ಗಡ್ಡಗಳನ್ನು ಕೆತ್ತಿದ್ದಾರೆ. ಮೊದಲನೆಯ ವಿಗ್ರಹ ಗುಂಡಯ್ಯನದು ಎರಡನೆಯದು ಬ್ರಹ್ಮಯ್ಯನದು. ಇಬ್ಬರಿಗೂ ಕೊರಳಲ್ಲಿ ರುದ್ರಾಕ್ಷಿ ಸರವನ್ನು ಕೆತ್ತಲಾಗಿದೆ. ಕಿವಿಗಳಲ್ಲಿ ಆಭರಣ ತಲೆಗೊಂದು ಪಟ್ಟಿ, ರುದ್ರಾಕ್ಷಿ ಸರ ಕೆತ್ತಲಾಗಿದೆ. ತಲೆಗೆ ಸುತ್ತಲೂ ಗರಿ ಸಿಕ್ಕಿಸಿಕೊಂಡಂತೆ ಕೆತ್ತಲಾಗಿದೆ. ಎರಡೂ ವಿಗ್ರಹಗಳ ರಟ್ಟೆ, ಮುಂಗೈಗಳಿಗೆ ರುದ್ರಾಕ್ಷಿ ಸರಗಳನ್ನು ಕೆತ್ತಲಾಗಿದೆ. ಶಿವದಾರ ರೂಪದಲ್ಲಿ ರುದ್ರಾಕ್ಷಿ ಸರವಿರುವುದನ್ನು ಗಮನಿಸಬಹುದು. ಗುಂಡ ಮತ್ತು ಬ್ರಹ್ಮಯ್ಯರನ್ನು ಗುರುತಿಸಲು ಗಡ್ಡಮೀಸೆಗಳು ಆಧಾರವಾಗಿವೆ. ಗುಂಡಬ್ರಹ್ಮಯ್ಯ ಎಂದು ರೂಢಿಸಿ ಕರೆಯುವುದರಿಂದ ಮೊದಲನೆಯದು ಗುಂಡಯ್ಯನ ಶಿಲ್ಪ, ಈತನಿಗೆ ಮೀಸೆಯಿಲ್ಲ. ಎರಡನೆಯದು ಬ್ರಹ್ಮಯ್ಯ, ಈತನಿಗೆ ಗಡ್ಡ ಮೀಸೆಗಳಿವೆ. ವಿ. ಶಿವಾನಂದರವರು ಸಂಪಾದಿಸಿ ಪ್ರಕಟಿಸಿರುವ 'ಗುಂಡಬ್ರಹ್ಮಯ್ಯಗಳ ಚರಿತ್ರೆ' (ಸುವ್ವಿ)ಯಲ್ಲಿ ಗುಂಡೇನಹಳ್ಳಿಯಲ್ಲಿರುವ ಗುಂಡಬ್ರಹ್ಮಯ್ಯಗಳ ಶಿಲ್ಪವನ್ನು ಪ್ರಕಟಿಸಿದ್ದಾರೆ. ಕೆಳಗೆ ಅವರ ಹೆಸರನ್ನು ಕೆತ್ತಿರದಿದ್ದರೂ ಜನತೆ ಪಾರಂಪಾರಿಕವಾಗಿ ಕರೆಯುವ ಹೆಸರು, ಆಚರಣೆ, ಶಿಲ್ಪಗಳ ಸ್ವರೂಪ, ಶೂಲಗಳಿಂದ ಇವರ ಶಿಲ್ಪಗಳನ್ನು ಗುರುತಿಸಲಾಗಿದೆ. ಈ ಗುಂಡೇನ ಹಳ್ಳಿಯಲ್ಲಿ ಜನರು ಗುಂಡಬ್ರಹ್ಮಯ್ಯರ ಹೆಸರಿನಿಂದ ದೇವರಲ್ಲಿ ಹರಕೆ ಕಟ್ಟಿಕೊಳ್ಳುವರು. ಅದು ಫಲಕಾರಿಯಾದರೆ ತಮ್ಮ ಹರಕೆಯನ್ನು ತೀರಿಸುವರು. ಗುಂಡಬ್ರಹ್ಮಯ್ಯಗಳ ಜಾತ್ರೆಯ ಸಂದರ್ಭದಲ್ಲಿ ಶಿಲ್ಪಗಳಿಗೆ ಎಣ್ಣೆಯಿಂದ ನೈವೇದ್ಯ ಮಾಡುವುದಾಗಿ ಮತ್ತು ಅತ್ಯಂತ ಸಡಗರದಿಂದ ಆಚರಣೆ ಮಾಡುವುದಾಗಿ ಅರಿತುಕೊಳ್ಳಲಾಗಿದೆ. ಊರಿನ ಕಷ್ಟ ನಷ್ಟಗಳಿಗೆ ಗುಂಡಬ್ರಹ್ಮಯ್ಯರೇ ಕಾರಣವೆಂಬುದು ಅಲ್ಲಿಯ ಜನರ ನಂಬಿಕೆಯಾಗಿದೆ.

೧೬. ಕುಸ್ಕೂರಿನ ಶಿಲ್ಪ

ಶಿವಮೊಗ್ಗ ಜಿಲ್ಲೆ ಕುಸ್ಕೂರಿನ ಗುಂಡಬ್ರಹ್ಮಯ್ಯಗಳ ಶಿಲ್ಪಗಳು ಈಗ ಶಿವಪ್ಪನಾಯಕನ ಅರಮನೆಯ ವಸ್ತುಸಂಗ್ರಹಾಲಯದಲ್ಲಿವೆ.[೨೨] ಈ ಶಿಲ್ಪವು ಕುಳಿತ ಭಂಗಿಯ ವಿಗ್ರಹಗಳ ಇನ್ನೊಂದು ಗುಂಪಿಗೆ ಸೇರುತ್ತದೆ. ಇಡೀ ಶಿಲೆಯ ಅಂಚು ಲತೆ ಮತ್ತು ಇತರ ವಿನ್ಯಾಸಗಳಿಂದ ಅಲಂಕೃತವಾಗಿದೆ. ಮೇಲ್ಭಾಗದ ಪ್ರಭಾವಳಿಯಲ್ಲಿಯೂ ಲತಾವಿನ್ಯಾಸವಿದೆ. ಇಲ್ಲಿ ಗುಂಡಯ್ಯ ಮತ್ತು ಬ್ರಹ್ಮಯ್ಯರು ಎತ್ತರದ ಕಂಬಗಳ ಮೇಲೆ ಪೀಠದಲ್ಲಿ ಕಾಲು ಇಳಿಬಿಟ್ಟು ಕುಳಿತಿದ್ದಾರೆ. ಎಡಗೈಯಲ್ಲಿ ಶಿವಲಿಂಗಗಳನ್ನು ಹಿಡಿದು ಬಲಗೈಯಲ್ಲಿ ಚಿಕ್ಕ ಕಠಾರಿಯನ್ನು ಹಿಡಿದಿದ್ದಾರೆ. ಶಿವಭಕ್ತರಿಗಾಗಿ ತಮ್ಮನ್ನು ತಾವು ಅರ್ಪಿಸಿಕೊಂಡ ಸಂಕೇತವಾಗಿ ಕಠಾರಿಗಳನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ. ಗುಂಡಬ್ರಹ್ಮಯ್ಯರ ತಲೆಯ ಮೇಲೆ ಮುತ್ತಿನ ಕಚ್ಚುಗಳ ಛತ್ರಿಗಳಿರುವುದು ಮತ್ತು ಕೊರಳಲ್ಲಿರುವ ದೊಡ್ಡ ಮಾಲೆಗಳು ಅವರನ್ನು ಮಹಾಪುರುಷರೆನ್ನುವಂತೆ ಬಿಂಬಿಸಿವೆ. ಕೊರಳಿನಲ್ಲಿ ರುದ್ರಾಕ್ಷಿಯ ಹಾರ ಹಾಗೂ ಜನಿವಾರದ ರೀತಿಯಲ್ಲಿ ರುದ್ರಾಕ್ಷಿಯ ಸರವನ್ನು ಧರಿಸಿದ್ದಾರೆ. ತೋಳುಗಳಲ್ಲಿ ತೋಳ ಬಂದಿ, ಕೈಗಳಲ್ಲಿ ಕಂಕಣ, ಕಾಲುಗಳಲ್ಲಿ ಕಾಲ್ಕೆಂಡೆ, ಕಿವಿಯಲ್ಲಿ ಕರ್ಣಕುಂಡಲ, ತಲೆಯ ಮೇಲೆ ಮುಕುಟಗಳನ್ನು ಧರಿಸಿರುವಂತೆ ಶಿಲ್ಪಗಳನ್ನು ಚಿತ್ರಿಸಲಾಗಿದೆ.

"ಇಡೀ ಶಿಲ್ಪದ ಸೂಕ್ಷ್ಮ ಕೆತ್ತನೆಯ ಕೆಲಸ, ಅಲಂಕರಣ, ಲತಾವಿನ್ಯಾಸಗಳು ಇವೆಲ್ಲ ಹೊಯ್ಸಳ ಶೈಲಿಯನ್ನು ನೆನಪಿಗೆ ತರುತ್ತವೆ. ಈ ಶಿಲ್ಪದ ಕಾಲ ಯಾವುದೇ ಇರಲಿ, ಹೊಯ್ಸಳ ದೇವಾಲಯ ಶಿಲ್ಪಗಳ ಪರಿಚಯವಿದ್ದ ಶಿಲ್ಪಿಯಿಂದ ಇದು ನಿರ್ಮಾಣವಾಗಿದೆಯೆಂಬಲ್ಲಿ ಅನುಮಾನ ಕಾಣದು."[೩೮] ಗುಂಡೇನಹಳ್ಳಿ ಮತ್ತು ಹಾವೇರಿ ಶಿಲ್ಪಗಳಲ್ಲಿ ಕೈಯಲ್ಲಿ ಶಿವಲಿಂಗ ಹಿಡಿದು ನೆಟ್ಟಶೂಲಗಳ ಮೇಲೆ ಕುಳಿತಿರುವಂತೆ ಚಿತ್ರಿತವಾಗಿದ್ದರೆ, ಇಲ್ಲಿ ಕಂಬಗಳ ಮೇಲೆ ಕುಳಿತಿರುವಂತೆ ಚಿತ್ರಿತವಾಗಿದೆ. ಒಂದು ಕೈಯಲ್ಲಿ ಕಠಾರಿ ಹಿಡಿದಿರುವಂತೆ ತೋರುವುದು ಕುಸೂರು ಚಿತ್ರದಲ್ಲಿ ಮಾತ್ರ. ಉಳಿದ ಕಡೆಗಳಲ್ಲಿ ಶೂಲಗಳುಂಟು. ಗುಂಡಬ್ರಹ್ಮಯ್ಯಗಳ ತ್ಯಾಗ, ಧೈರ್ಯ, ಶಿವಭಕ್ತಿ-ಶಿವನಿಷ್ಠೆಗಳಿಗೆ ಸಂಕೇತಗಳೆಂಬಂತೆ ಶೂಲಗಳಿವೆ. ಬಹುತೇಕ ಶಿಲ್ಪಗಳಲ್ಲೂ ಒಟ್ಟಿಗೆ ಒಂದೇ ಶಿಲ್ಪದಲ್ಲಿ (ಒಂದೆರಡು ಶಿಲ್ಪಗಳನ್ನು ಬಿಟ್ಟರೆ) ಚಿತ್ರಿಸಿರುವುದು ಗಮನಾರ್ಹ ಸಂಗತಿ. ಈ ಕುಸಕೂರಿನ ಶಿಲ್ಪವನ್ನು ಚಿದಾನಂದಮೂರ್ತಿಯವರು ಸಂಶೋಧಿಸಿ ಪ್ರಕಟಿಸಿದ್ದಾರೆ.[೩೯]

ಬಳ್ಳಾರಿಯ ಶಿಲ್ಪ

ಬಳ್ಳಾರಿಯ ಕೋಟೆ ಮಲ್ಲೇಶನ ದೇವಾಲಯದ ಪೌಳಿಯ ಒಳಬಿತ್ತಿಯ ಮೇಲೆ ಗುಂಡಬ್ರಹ್ಮಯ್ಯರ ಶಿಲ್ಪವಿದೆ. ಪದ್ಮಾಸನದಲ್ಲಿ ಕುಳಿತ ಭಂಗಿಯಲ್ಲಿ ವಿಗ್ರಹಗಳನ್ನು ಕೆತ್ತಲಾಗಿದೆ. ಎಡಗೈಯಲ್ಲಿ ಇಷ್ಟಲಿಂಗ ಹಿಡಿದು ಬಲಗೈಯಿಂದ ಅರ್ಧಮುಚ್ಚಿದ ಹಾಗೆ ಶಿಲ್ಪವನ್ನು ಕೆತ್ತಲಾಗಿದೆ. ಇಲ್ಲಿ ಶೂಲಗಳನ್ನು ಅವರು ಕುಳಿತ ಕೆಳಗಿನ ಪಟ್ಟಿಕೆಯಲ್ಲಿ ಸಾಂಕೇತಿಕವಾಗಿ ಕೆತ್ತಿದ್ದಾರೆ. ತಲೆಗೆ ಮಠದ ಸ್ವಾಮಿಗಳು ಧರಿಸುವ ಕಾವಿ ಟೊಪ್ಪಿಗೆಯಂಥ ಟೊಪ್ಪಿಗೆಗಳನ್ನು ಧರಿಸಿದ್ದಾರೆ.

ನೀತಿಗೆರೆಯ ಶಿಲ್ಪ

ನೀತಿಗೆರೆಯು ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಒಂದು ಚಿಕ್ಕ ಗ್ರಾಮ. ಚನ್ನಗಿರಿಯಿಂದ ಸಂತೆಬೆನ್ನೂರಿಗೆ ಹೋಗುವ ರಸ್ತೆಯಲ್ಲಿ ನುಗ್ಗೆಹಳ್ಳಿ ಅಡ್ಡರಸ್ತೆಗೆ ಇಳಿದು ಸುಮಾರು ೨ ಕಿ. ಮೀ. ನಡೆದರೆ ನೀತಿಗೆರೆ ಗ್ರಾಮ ಸಿಗುತ್ತದೆ. ಈ ಗ್ರಾಮದ ವೀರಭದ್ರಸ್ವಾಮಿ ದೇವಾಲಯದ ಗರ್ಭಗೃಹದಲ್ಲಿ ಎಡಗಡೆ ಗೋಡೆಗೆ ಗುಂಡಬ್ರಹ್ಮಯ್ಯರ ಶಿಲ್ಪವಿದೆ. ಮೇಲೆ ಸಿಂಹಲಲಾಟವಿದ್ದು, ಕೆಳಗೆ ಎಡ-ಬಲಗಳ ತುದಿಯಲ್ಲಿ ಇಬ್ಬರು ಸ್ತ್ರೀಯರು ಎತ್ತಿದ ತಮ್ಮ ತೋಳುಗಳಲ್ಲಿ ಮಂಗಳ ದ್ರವ್ಯದ ತಟ್ಟೆ ಹಿಡಿದಿದ್ದಾರೆ. ಗುಂಡಬ್ರಹ್ಮಯ್ಯರು ಮೊರೆಹೊಕ್ಕವರನ್ನು ಬಿಟ್ಟುಕೊಡದೆ ಶೂಲಕ್ಕೇರುವರು ಆಗ ಅವರ ಹೆಂಡಿರಾದ ಗೌರಾಯಿ ಮತ್ತು ಅಮರಾಯಿ ಆರತಿ ಬೆಳಗುವುದಾಗಿ ಕಾವ್ಯದಲ್ಲಿ ಪ್ರಸ್ತಾಪವಾಗುತ್ತದೆ. ಆದ್ದರಿಂದ ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಈ ಶಿಲ್ಪಗಳು ಪೂರಕ ಆಕಾರಗಳಾಗಿವೆ. ಇದರಿಂದ ಗುಂಡಬ್ರಹ್ಮಯ್ಯಗಳ ಶಿಲ್ಪಗಳಿಗೆ ಐತಿಹಾಸಿಕ ಮಹತ್ವವಿದೆ.

ಗುಂಡಬ್ರಹ್ಮಯ್ಯಗಳ ಶಿಲ್ಪಗಳಲ್ಲಿ ಮಧ್ಯೆ ಶೂಲಗಳನ್ನು ಕೆತ್ತಿ ಅವುಗಳನ್ನು ಕೈಯಿಂದ ಹಿಡಿದ, ಕೆಲವೊಮ್ಮೆ ಹಿಡಿಯದೇ ಇರುವ ಶಿಲ್ಪಗಳು ಇವೆ. ನೀತಿಗೆರೆಯ ಶಿಲ್ಪದಲ್ಲಿ ಶೂಲಗಳನ್ನು ಮಧ್ಯದಲ್ಲಿ ಕೆತ್ತಲಾಗಿದ್ದು, ಇವುಗಳನ್ನು ಕೈಯಿಂದ ಹಿಡಿದಿಲ್ಲ. ೫೧ ೧/೨ ಇಂಚು ಎತ್ತರದ ಕಲ್ಲಿನಲ್ಲಿ ೩೪ ಇಂಚು ಎತ್ತರ ೨೩ ಇಂಚು ಅಗಲದ ಗುಂಡಬ್ರಹ್ಮಯ್ಯರ ಶಿಲ್ಪವನ್ನು ಕೆತ್ತಲಾಗಿದೆ. ಸಿಂಹಲಲಾಟ ಸುಂದರವಾಗಿದ್ದು

ಅದರ ಮೇಲೆ ಕುಂಭವನ್ನು ಕೆತ್ತಲಾಗಿದೆ. ಇವರು ಎಡಗೈಯಲ್ಲಿ ಇಷ್ಟಲಿಂಗ ಹಿಡಿದುಕೊಂಡು ಬಲಗೈಯಿಂದ ಸ್ವಲ್ಪ ಮುಚ್ಚಿದ್ದಾರೆ. ಇವರಿಬ್ಬರ ಮಧ್ಯೆ ಎರಡು ಶೂಲಗಳಿವೆ. ಕೊರಳಲ್ಲಿ ಎರಡು ರುದ್ರಾಕ್ಷಿ ಸರವಿದೆ. ರಟ್ಟೆ ಮುಂಗೈಗಳಿಗೆ ರುದ್ರಾಕ್ಷಿಯ ಸರಗಳನ್ನು ಕಟ್ಟಿಕೊಂಡಿರುವಂತೆ ಚಿತ್ರಿಸಲಾಗಿದೆ. ಸೊಂಟಕ್ಕೆ ಖಡ್ಗ, ಕಾಲಿಗೆ ಕಡಗ ಧರಿಸಿದ್ದಾರೆ. ಇಂದು ವೀರಗಾಸೆ ನರ್ತನ ಮಾಡುವವರು ತೊಡುವಂತೆಯೇ ಪಂಚೆಯನ್ನು ತೊಟ್ಟಿದ್ದು ಕಾಲಲ್ಲಿ ಪಾದುಕೆಗಳಿವೆ. ನಿಂತಿರುವ ಅವರ ಭಂಗಿ ಅತ್ಯಂತ ಆಕರ್ಷಕವಾಗಿದೆ. ಮಧ್ಯೆ ನಟ್ಟಿರುವ ಎರಡು ಶೂಲಗಳು ಅವರು ಗುಂಡಯ್ಯ ಮತ್ತು ಬ್ರಹ್ಮಯ್ಯರೆಂಬುದನ್ನು ಖಚಿತಪಡಿಸುತ್ತವೆ. ಈ ದೃಷ್ಟಿಯಿಂದ ಇದು ಚಿತ್ರದುರ್ಗದ ಶಿಲ್ಪವನ್ನು ಹೋಲುತ್ತದೆ. ಚಿತ್ರದುರ್ಗದ ಶಿಲ್ಪದಲ್ಲಿ ಗುಂಡಬ್ರಹ್ಮಯ್ಯರು ಮಧ್ಯ ಇರುವ ಶೂಲಗಳನ್ನು ತಮ್ಮ ಎಡಗೈ ಬಲಗೈಗಳಿಂದ ಮುಟ್ಟಿ ಹಿಡಿದು, ಬಲಗೈ ಎಡಗೈಗಳಲ್ಲಿ ಶಿವಲಿಂಗಗಳನ್ನು ಧರಿಸಿದ್ದಾರೆ. ಬನವಾಸಿಯ ಶಿಲ್ಪದಲ್ಲೂ ಗುಂಡಬ್ರಹ್ಮಯ್ಯರು ನಿಂತುಕೊಂಡಿದ್ದಾರೆ. ನಾನು ಸಂಶೋಧಿಸಿದ ಚಿತ್ರದುರ್ಗದ ಸಿಂಗಾಪುರದ ಶಿಲ್ಪದಲ್ಲಿಯು ಗುಂಡಬ್ರಹ್ಮಯ್ಯರು ನಿಂತುಕೊಂಡಿದ್ದು ಮಧ್ಯದಲ್ಲಿ ಶೂಲಗಳಿವೆ. ಇವುಗಳು ನಿಂತಿರುವ ಶಿಲ್ಪಗಳಾಗಿದ್ದು ಒಂದೇ ಗುಂಪಿಗೆ ಸೇರಿಸಬಹುದಾಗಿದೆ.

ಬುಕ್ಕಾಂಬುಧಿಯ ಶಿಲ್ಪ

ಚಿಕ್ಕಮಂಗಳೂರು ಜಿಲ್ಲೆಯ ತರಿಕೆರೆ ತಾಲೂಕಿನ ಬುಕ್ಕಾಂಬುಧಿ ಗ್ರಾಮದಲ್ಲಿರುವ ಮೂಲವಿರುಪಾಕ್ಷ ದೇವಾಲಯದಲ್ಲಿ ರಂಗಮಂಟಪದ ಕಂಭದ ಮೇಲೆ ಗುಂಡಬ್ರಹ್ಮಯ್ಯರ ಶಿಲ್ಪವನ್ನು ಕೆತ್ತಲಾಗಿದೆ. ೧೯ ಇಂಚು ಅಗಲ ೧೩ ಇಂಚು ಎತ್ತರದ ಅಳತೆಯಲ್ಲಿ ಈ ಶಿಲ್ಪವಿದೆ. ಇವರಿಬ್ಬರ ಮಧ್ಯದಲ್ಲಿ ಎರಡು ಶೂಲಗಳನ್ನು ಕೆತ್ತಿದ್ದು ಇಬ್ಬರೂ ಎದುರು ಬದುರಾಗಿ ನಿಂತಿದ್ದಾರೆ. ಗುಂಡಯ್ಯ (ಮೊದಲ ಶಿಲ್ಪ) ಎಡಗೈಯಿಂದ ಶೂಲ ಹಿಡಿದುಕೊಂಡಿದ್ದು ಬಲಗೈಯಲ್ಲಿ ಇಷ್ಟಲಿಂಗ ಹಿಡಿದುಕೊಂಡಿದ್ದಾನೆ. ಬ್ರಹ್ಮಯ್ಯ (ಎರಡನೆ ಶಿಲ್ಪ) ಬಲಗೈಯಿಂದ ಶೂಲ ಹಿಡಿದಿದ್ದರೆ ಎಡಗೈಯಲ್ಲಿ ಇಷ್ಟಲಿಂಗ ಹಿಡಿದಿದ್ದಾನೆ. ಇವರಿಗೂ ಕಾಲಿಗೆ ಕಡಗವನ್ನು ಕೆತ್ತಲಾಗಿದೆ. ಪಂಚೆಯನ್ನು ಮೇಲಕ್ಕೆತ್ತಿ ಕಟ್ಟಿದ್ದು ಕೊರಳಲ್ಲಿ ಸರ, ಕಿವಿಗೆ ದುಂಡನೆಯ ಆಭರಣ ಧರಿಸಿದ್ದಾರೆ. ಇಲ್ಲಿ ಇಬ್ಬರಿಗೂ ಉದ್ದನೆಯ ಕೂದಲಿದ್ದು ಅದನ್ನು ಹಿಂದೆ ಜಡೆಯ ರೂಪದಲ್ಲಿ ಕೆತ್ತಲಾಗಿದೆ. ಈ ಶಿಲ್ಪಕ್ಕೆ ಎದುರಿಗೆ ವೀರಭದ್ರನ ಮೂರ್ತಿಯಿರುವುದು ಕಂಡುಬರುತ್ತದೆ.

ಬನವಾಸಿಯ ಶಿಲ್ಪ

ಬನವಾಸಿಯ ಮಧುಕೇಶ್ವರ ದೇವಾಲಯದ ಶಿವೋತ್ಸವ ಮಂಟಪದ ಗಗ್ಗರಿಯಲ್ಲಿ ಕೆತ್ತಲಾದ ಶರಣರ ವಿಗ್ರಹಗಳ ಜೊತೆ ಗುಂಡಬ್ರಹ್ಮಯ್ಯಗಳು ನಿಂತಿರುವ ಶಿಲ್ಪವಿದೆ. ಶಿವಶರಣರ ಶಿಲ್ಪಗಳ ಸಾಲಿನಲ್ಲಿ ಗುಂಡಬ್ರಹ್ಮಯ್ಯರ ಶಿಲ್ಪ ಹತ್ತನೆಯದು. ಶಿಲ್ಪವಿನ್ಯಾಸದಲ್ಲಿ ಚಿತ್ರದುರ್ಗದ ಸಂಪಿಗೆ ಸಿದ್ದೇಶ್ವರ ದೇವಾಲಯದ ಶಿಲ್ಪವನ್ನು ಹೋಲುತ್ತದೆ. ಶಿವಶರಣರ ಶಿಲ್ಪಗಳ ಸಾಲಿನಲ್ಲಿ ಗುಂಡಬ್ರಹ್ಮಯ್ಯರ ಶಿಲ್ಪ ಹತ್ತನೆಯದು . "ನಾಲ್ಕು ಇಂಚು ಎತ್ತರ ಎರಡು ಇಂಚು ಅಗಲ ಅಳತೆಯಲ್ಲಿರುವ ಶರಣರ ಶಿಲ್ಪಗಲಿರುವ ಶಿಲಾ

ಮಂಟಪವನ್ನು ಸೋಂದೆಯ ಅರಸ ಒಂದನೆಯ ಸದಾಶಿವರಾಯ (ಕ್ರಿ. ಶ. ೧೬೭೪ - ೧೬೯೭) ನಿರ್ಮಿಸಿ ಮಧುಕೇಶ್ವರನಿಗೆ ಅರ್ಪಿಸಿದ್ದಾರೆ."[೪೦] ಇಲ್ಲಿಯ ಶಿಲ್ಪ ಸಮೂಹದಲ್ಲಿ ಶರಣರಾದ ಲದ್ದೆ ಸೋಮಣ್ಣ, ಮೋಳಿಗೆ ಮಾರಯ್ಯ, ನುಲಿಯ ಚಂದಯ್ಯ, ಆಯ್ದಕ್ಕಿ ಮಾರಯ್ಯ, ದಕ್ಷಿಣಮೂರ್ತಿ, ಹಡಪದ ಅಪ್ಪಣ್ಣ, ಹೋಳಿನ ಹಂಪಣ್ಣ, ಅಗ್ಘವಣಿ ಹೊನ್ನಯ್ಯಗಳ ಜೊತೆಗೆ ೧೦ ಹಾಗೂ ೧೧ನೇ ಶಿಲ್ಪಗಳಾಗಿ ಗುಂಡಬ್ರಹ್ಮರನ್ನು ಕಂಡರಿಸಲಾಗಿದೆ. ಇಲ್ಲಿಯ ಗುಂಡಬ್ರಹ್ಮಯ್ಯರ ಶಿಲ್ಪ ಇತರೆಡೆ ಸಿಗುವ ಶಿಲ್ಪಗಳಿಗಿಂತ ಭಿನ್ನವಾಗಿವೆ. ಇಲ್ಲಿ ಗುಂಡಬ್ರಹ್ಮಯ್ಯರು ಕೈಮುಗಿದು ನಿಂತಿದ್ದು ಈರ್ವರ ಬಲ ಭಾಗದಲ್ಲಿ ತ್ರಿಶೂಲಾಕಾರದ ಶೂಲಗಳನ್ನು ಕೆತ್ತಲಾಗಿದೆ. ಶಿಲ್ಪದ ಮೇಲೆ 'ಗುಂಡಬ್ರಹ್ಮ' ಎಂಬ ಶಾಸನ ಕಂಡುಬರುತ್ತದೆ. ಈ ಶಿಲ್ಪಗಳಲ್ಲಿ ಮೊದಲನೆಯ (ಬಲಭಾಗದ) ಮೂರ್ತಿಯ ತೊಡೆಯಿಂದ ಕೆಳಭಾಗ ಹೊಡೆದು ಹೋಗಿದೆ. ಇನ್ನೊಂದು ಎಡಗಡೆಯ ಮೂರ್ತಿಯ ತಲೆ, ಬಲಭುಜವನ್ನು ಬಿಟ್ಟು ಮಿಕ್ಕ ಭಾಗವೆಲ್ಲ ಒಡೆದು ಹೋಗಿದೆ.

ತ್ರಿಶೂಲದ ಕೆಳಭಾಗದಲ್ಲಿ ಕಮಲದ ರೀತಿಯಲ್ಲಿ ಕಟ್ಟೆಯನ್ನು ಕೆತ್ತಲಾಗಿದೆ. ಕೊರಳಲ್ಲಿ ಮಾಲೆಯಿದೆ. ಎರಡೂ ಮುಂಗೈಗಳಿಗೆ ಕಡಗದ ಆಭರಣವನ್ನು ಹಾಕಿರುವಂತೆ ಚಿತ್ರಿಸಲಾಗಿದೆ. ಬನವಾಸಿ ಮಧುಕೇಶ್ವರ ದೇವಾಲಯದ ಶಿವೋತ್ಸವ ಮಂಟಪದ ಗಗ್ಗರಿಯಲ್ಲಿ ಕೆತ್ತಲಾದ ಶರಣರ ಶಿಲ್ಪಗಳ ಜೊತೆ ಗುಂಡಬ್ರಹ್ಮಯ್ಯಗಳ ವಿಗ್ರಹಗಳಿದ್ದುದಾಗಿ ಹದಿನೈದು ವರ್ಷಗಳ ಹಿಂದೆ ಡಾ. ಗದ್ದಗಿಮಠ ಅವರು ಹುಡುಕಿ ಹೇಳಿದ್ದರು.[೪೧] ನಂತರ ಕೆಲವು ದಿನಗಳ ಹಿಂದೆ ವಿ. ಶಿವಾನಂದ ಅವರು ಸಂಪಾದಿಸಿದ 'ಗುಂಡಬ್ರಹ್ಮಯ್ಯಗಳ ಚರಿತ್ರೆ' (ಸುವ್ವಿ) ಯಲ್ಲಿ ಬನವಾಸಿಯ ಶಿಲ್ಪ ಹಾಗೂ ಗುಂಡೇನಹಳ್ಳಿಯ ಶಿಲ್ಪದ ಚಿತ್ರವನ್ನು ಪ್ರಕಟಿಸಿದರು.[೪೨] ಈ ಶಿಲ್ಪದಲ್ಲಿರುವ ಗುಂಡಬ್ರಹ್ಮಯ್ಯರ ಹೆಸರನ್ನು ಕೆಳಗಿನ ಭಾಗದಲ್ಲಿ ಕೆತ್ತಿರುವುದು ಈ ಶಿಲ್ಪದ ವಿಶೇಷವಾಗಿದೆ. ಇನ್ನುಳಿದ ಯಾವುದೇ ಶಿಲ್ಪದಲ್ಲಿಯೂ ಇವರ ಹೆಸರನ್ನು ಶಾಸನದಲ್ಲಿ ಪ್ರಸ್ತಾಪಿಸಿಲ್ಲ. ಬಹುಶಃ ಬನವಾಸಿಯ ಶಿಲ್ಪಗಳಲ್ಲಿ ಬಹಳ ಜನ ಶಿವಶರಣರ ಶಿಲ್ಪಗಳಿರುವುದರಿಂದ ಇವರ ಹೆಸರನ್ನು ಶಾಸನದಲ್ಲಿ ಕೆತ್ತಿರಬಹುದು.

ಯಳಂದೂರ ಶಿಲ್ಪ

ಚಾಮರಾಜನಗರ ಜಿಲ್ಲೆಯ ಯಳಂದೂರಿನ ಗೌರೇಶ್ವರ ದೇವಾಲಯದ ಪ್ರವೇಶಕ್ಕೆ ಪೌಳಿಯ ಮಂಟಪದಲ್ಲಿಯ ಬಲಗಡೆಯ ಕಂಭದ ಮೇಲೆ ಗುಂಡಬ್ರಹ್ಮಯ್ಯರ ಶಿಲ್ಪವನ್ನು ಕೆತ್ತಲಾಗಿದೆ. ಶಿಲ್ಪಗಳು ಸುಂದರವಾಗಿದ್ದು ಸ್ಪಷ್ಟವಾಗಿವೆ. ಗುಂಡಬ್ರಹ್ಮಯ್ಯರ ಮಧ್ಯೆ ತ್ರಿಶೂಲ ರೂಪದ ಒಂದು ಶೂಲವನ್ನು ಕೆತ್ತಲಾಗಿದೆ. ಇದು ಈ ಶಿಲ್ಪದ ವಿಶೇಷ. ಇಬ್ಬರಿಗೂ ಉದ್ದವಾದ ಜಡೆಯನ್ನು ಹೆಣೆದುಕೊಂಡಂತೆ ಕೆತ್ತಲಾಗಿದೆ. ತಲೆಗೊಂದು ಆಭರಣದ ಪಟ್ಟಿಯನ್ನು ಕಟ್ಟಿಕೊಂಡಂತೆ ಕೆತ್ತಲಾಗಿದೆ. ಕೊರಳು, ರಟ್ಟೆ, ಮುಂಗೈಗಳಿಗೆ ರುದ್ರಾಕ್ಷಿಸರ ಕಟ್ಟಿಕೊಂಡಂತೆ ಎರಡೂ ಶಿಲ್ಪಗಳಿವೆ. ಇಬ್ಬರೂ ಸೊಂಟಕ್ಕೆ ಚೂರಿಯೊಂದನ್ನು ಸಿಕ್ಕಿಸಿಕೊಂಡಿದ್ದಾರೆ. ಇಬ್ಬರೂ ಕಾಚಾ ಧರಿಸಿದ್ದಾರೆ. ಗುಂಡಯ್ಯ (ಮೊದಲ ಶಿಲ್ಪ) ಎಡಗೈಯಲ್ಲಿ ಇಷ್ಟಲಿಂಗ ಹಿಡಿದು ಕೈಯನ್ನು ಶೂಲಕ್ಕೆ ತಾಗಿಸಿದ್ದಾನೆ. ಬಲಗೈಯಲ್ಲಿ ಕಠಾರಿ ಹಿಡಿದು ಕೈಯನ್ನು ಮೇಲಕ್ಕೆತ್ತಿದ್ದಾನೆ.

ಬ್ರಹ್ಮಯ್ಯ ಬಲಗೈಯಲ್ಲಿ ಲಿಂಗವನ್ನು ಹಿಡಿದು ಕೈಯನ್ನು ಮೇಲಕ್ಕೆತ್ತಿದ್ದಾನೆ. ಈ ಶಿಲ್ಪದ ಸ್ವರೂಪವು ಸಾಮಾನ್ಯವಾಗಿದ್ದು ಸ್ಪಷ್ಟವಾಗಿ ಗುಂಡಬ್ರಹ್ಮಯ್ಯಗಳ ಶಿಲ್ಪವು ಗೋಚರವಾಗುತ್ತದೆ. ಈ ಶಿಲ್ಪಗಳು ವೀರಶೈವರ ಆಚರಣೆ, ನಂಬಿಕೆ ಮತ್ತು ವ್ರತನೇಮಗಳನ್ನು ಹಾಗೂ ನಿಷ್ಠೆಯಿಂದ ಪಾಲನೆ ಮಾಡಿರುವ ಚಾರಿತ್ರಿಕ ಸಂದರ್ಭವನ್ನು ತಿಳಿಸುತ್ತವೆ. ಶಿವನಲ್ಲಿರುವ ಅಚಲವಾದ ಭಕ್ತಿಯನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಈ ಶಿಲ್ಪಗಳನ್ನು ದೇವಾಸ್ಥಾನಗಳಲ್ಲಿ ಚಿತ್ರಿಸಲಾಗಿದೆ.

ಹಾವೇರಿಯ ಶಿಲ್ಪ

ಪ್ರಸ್ತುತ ಕನ್ನಡ ಸಂಶೋಧನ ಸಂಸ್ಥೆಯಲ್ಲಿರುವ (ಕರ್ನಾಟಕ ವಿಶ್ವವಿದ್ಯಾಲಯ) ಗುಂಡಬ್ರಹ್ಮಯ್ಯಗಳ ವಿಗ್ರಹವು ಹಾವೇರಿ ನಗರದ ವೀರಭದ್ರ ದೇವಾಲಯದ ಹಿಂದೆ ಮರದ ಕೆಳಗೆ ಇತ್ತು. ಡಾ. ಶ್ರೀನಿವಾಸ ರಿತ್ತಿ ಅವರ ಪ್ರಯತ್ನದ ಫಲವಾಗಿ ಅದು ಕನ್ನಡ ಸಂಶೋಧನ ಸಂಸ್ಥೆಗೆ ಬಂದಿತು. ಈ ಶಿಲ್ಪದಲ್ಲಿ ಗುಂಡಬ್ರಹ್ಮಯ್ಯರು ಶೂಲದ ಮೇಲೆ ಕುಳಿತಿದ್ದು ದೇವಾಪುರದ ಶಿಲ್ಪ, ಹಾರನಹಳ್ಳಿಯ ಶಿಲ್ಪಗಳನ್ನು ಹೋಲುತ್ತದೆ. ಇಲ್ಲಿಯೂ ಸಹ ಗುಂಡಬ್ರಹ್ಮಯ್ಯರು ಶೂಲದ ಮೇಲೆ ಕುಳಿತಿರುವಂತೆ ಚಿತ್ರಿಸಲಾಗಿದೆ. ಎಡಗೈಯಲ್ಲಿ ಇಷ್ಟಲಿಂಗ ಹಿಡಿದುಕೊಂಡು ಬಲಗೈಯಿಂದ ಅದನ್ನು ಮುಚ್ಚಿದ್ದಾರೆ. ಕೊರಳಲ್ಲಿ ರುದ್ರಾಕ್ಷಿ ಸರವನ್ನು ಶಿವದಾರದ ರೀತಿಯಲ್ಲಿ ರುದ್ರಾಕ್ಷಿ ಸರ ಧರಿಸಿದ್ದಾರೆ. ಎರಡೂ ಮುಂಗೈಗಳಿಗೆ, ರಟ್ಟೆಗಳಿಗೆ ರುದ್ರಾಕ್ಷಿ ಸರವನ್ನು ಕಟ್ಟಿಕೊಂಡಿದ್ದಾರೆ. ತಲೆಗೆ ರುದ್ರಾಕ್ಷಿಯ ಸರ ಧರಿಸಿದ್ದಾರೆ. ಕಿವಿಗೆ ದುಂಡನೆಯ ಆಭರಣ, ಕಾಲಿಗೆ ಪಾದುಕೆಗಳನ್ನು ಧರಿಸಿದ್ದು ನಾವು ನೋಡುವ ಮೊದಲ ಶಿಲ್ಪಕ್ಕೆ (ಗುಂಡಯ್ಯ) ಮೀಸೆಯಿಲ್ಲ. ಇನ್ನೊಂದು ಶಿಲ್ಪಕ್ಕೆ (ಬ್ರಹ್ಮಯ್ಯ) ಮೀಸೆ ಮತ್ತು ಗಡ್ಡವನ್ನು ಚಿತ್ರಿಸಲಾಗಿದೆ. ಸುಮಾರು ೪-೫ ಶಿಲ್ಪಗಳಲ್ಲಿ ಗುಂಡಯ್ಯನಿಗೆ ಮೀಸೆ-ಗಡ್ಡಗಳಿಲ್ಲ ಆದ್ದರಿಂದ ಗುಂಡಯ್ಯನ್ನು ಸರಳವಾಗಿ ಗುರುತಿಸಲು ಸಾಧ್ಯವಾಗುತ್ತದೆ. ಮೀಸೆಗಡ್ಡಗಳಿದ್ದ ಶಿಲ್ಪವು ಬ್ರಹ್ಮಯ್ಯನದಾದರೆ, ಮೀಸೆಯಿಲ್ಲದೆ ಇರುವ ಶಿಲ್ಪವು ಗುಂಡಯ್ಯನದಾಗಿದೆ. ಆದ್ದರಿಂದ ಇವರಿಬ್ಬರ ವ್ಯತ್ಯಾಸವನ್ನು ಸರಳವಾಗಿ ಗುರುತಿಸಬಹುದೆನಿಸುತ್ತದೆ.

ಗುಬ್ಬಿಯ ಶಿಲ್ಪ

ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ ಅಮರಗೊಂಡ ಮಲ್ಲಿಕಾರ್ಜುನ ದೇವಾಲಯವಿದೆ. ಈ ದೇವಾಲಯದಲ್ಲಿ ಗುಂಡಬ್ರಹ್ಮಯ್ಯರ ಶಿಲ್ಪವಿದೆ. ಇಲ್ಲಿ ಇವರಿಬ್ಬರ ಮಧ್ಯದಲ್ಲಿ ಎರಡು ಶೂಲಗಳನ್ನು ಕೆತ್ತಲಾಗಿದೆ. ಗುಂಡಯ್ಯನ (ಮೊದಲ ಶಿಲ್ಪ) ಎರಡೂ ಕೈಗಳು ತುಟಿತವಾಗಿವೆ. ಆದಾಗ್ಯೂ ಹಾಳಾದ ಭಾಗವನ್ನು ಆಧರಿಸಿ ಇವನು ಎಡಗೈಯ ಮಧ್ಯಭಾಗವನ್ನು ಶೂಲಕ್ಕೆ ತಾಗಿಸಿ ಹಸ್ತವನ್ನು ಮುಂದೆ ಚಾಚಿದಂತೆ ಕೆತ್ತಲಾಗಿದೆ. ಬಲಗೈಯಲ್ಲಿ ಇಷ್ಟಲಿಂಗ ಹಿಡಿದಂತೆ ಕಾಣುತ್ತದೆ. ಬ್ರಹ್ಮಯ್ಯನು ಮೊಳಕೈಯನ್ನು ಶೂಲಕ್ಕೆ ತಾಗಿಸಿ ಕೈಯಲ್ಲಿ ಇಷ್ಟಲಿಂಗ ಹಿಡಿದಂತೆ ಎಡಗೈಯನ್ನು ಮಡಚಿ ಇಷ್ಟಲಿಂಗದ ಹತ್ತಿರ ಹಸ್ತ ಚಾಚಿದಂತೆ ಕೆತ್ತಲಾಗಿದೆ. ಇಬ್ಬರೂ ಪಂಚೆಯನ್ನು ತೊಟ್ಟಿದ್ದು ಮೇಲೆತ್ತಿ ಕಟ್ಟಿದಂತೆ, ನಿರಿಗೆಗಳು ಎದ್ದು ಕಾಣುವ ಹಾಗೆ ಶಿಲ್ಪವನ್ನು ಕೆತ್ತಲಾಗಿದೆ. ಗುಬ್ಬಿಯ ಈ ಶಿಲ್ಪದ ಮೇಲ್ಭಾಗ ಸವೆದು ಹೋಗಿದೆ. ಈ ಶಿಲ್ಪವು ನಾಶವಾಗುವ ಅಂಚಿನಲ್ಲಿದ್ದು ಇದರ ರಕ್ಷಣೆ ಕಾರ್ಯ ಕೈಗೊಳ್ಳುವುದು ಅವಶ್ಯಕವಾಗಿದೆ.

ಉಜ್ಜಯನಿ ಶಿಲ್ಪ

ಬಳ್ಳಾರಿ ಜಿಲ್ಲೆಯ ಉಜ್ಜಯನಿ ಕ್ಷೇತ್ರದ ಮರುಳ ಸಿದ್ದೇಶ್ವರ ದೇವಾಲಯದ ಆವರಣದ ಚಿಕ್ಕ ದೇವಾಲಯದಲ್ಲಿ ಈ ಶಿಲ್ಪವಿದೆ. ಗುಂಡಬ್ರಹ್ಮಯ್ಯಗಳ ಶಿಲ್ಪಗಳಿಗೆ ಎಣ್ಣೆ ಸುರಿದು ಜಿಡ್ಡುಗೊಳಿಸಲಾಗಿದೆ. ಇದರಿಂದ ಶಿಲ್ಪದ ಸೌಂದರ್ಯ ಕಾಣದಾಗಿದೆ. ಸಾಮಾನ್ಯ ಎನ್ನುವಂತೆ ಗುಂಡಬ್ರಹ್ಮಯ್ಯರ ಮಧ್ಯೆ ಎರಡು ಶೂಲಗಳನ್ನು ಕೆತ್ತಲಾಗಿದೆ. ಹಿಂಭಾಗದಲ್ಲಿ ಸಿಂಹಲಲಾಟವಿದ್ದು, ಇಬ್ಬರೂ ಎಡಗೈಯಲ್ಲಿ ಇಷ್ಟಲಿಂಗ ಹಿಡಿದುಕೊಂಡಿದ್ದಾರೆ. ಬಲಗೈಯಿಂದ ಏನನ್ನೊ ಮುಚ್ಚಿಕೊಂಡಿರುವಂತೆ ಕಾಣುತ್ತದೆ. ಇಬ್ಬರೂ ಕಾಲಿಗೆ ಕಾಲ್ಪೆಂಡೆ ರೂಪದ ಆಭರಣಗಳನ್ನು ಧರಿಸಿರುವಂತೆ ಇವರ ಶಿಲ್ಪವನ್ನು ಚಿತ್ರಿಸಲಾಗಿದೆ.

ಗರಗ ನಾಗಲಾಪುರದ ಶಿಲ್ಪ

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿ ಗರಗ ನಾಗಲಾಪುರವಿದೆ. ಈ ಊರಿನ ಅರಳಿ ಮರದ ಕೆಳಗೆ ಎರಡು ಪ್ರತ್ಯೇಕ ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ಕೆತ್ತಲಾಗಿದೆ. ಪ್ರಸ್ತುತ ಈ ಶಿಲ್ಪಗಳನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿಯ ವಸ್ತುಸಂಗ್ರಹಾಲಯದಲ್ಲಿ ಇಡಲಾಗಿದೆ. ಈ ಶಿಲ್ಪಗಳು ಪ್ರತ್ಯೇಕಗೊಂಡಿರುವುದು ವಿಶೇಷ. ಇಲ್ಲಿ ಗುಂಡಬ್ರಹ್ಮಯ್ಯರು ಎಡಗೈಯಲ್ಲಿ ಇಷ್ಟಲಿಂಗವನ್ನು ಹಿಡಿದುಕೊಂಡಿದ್ದಾರೆ. ಪಕ್ಕದಲ್ಲಿ ಎರಡು ಶೂಲಗಳಿವೆ. ಕೊರಳು, ರಟ್ಟೆ, ಮುಂಗೈಗಳಲ್ಲಿ ರುದ್ರಾಕ್ಷಿಸರ ಹಾಕಲಾಗಿದೆ. ಪಂಚೆಯನ್ನು ಮೊಣಕಾಲು ಮೇಲಕ್ಕೆ ಎತ್ತಿ ಕಟ್ಟಿದ ಭಂಗಿಯಲ್ಲಿವೆ.

ಇದುವರೆಗೆ ದೊರೆತಿರುವ ಗುಂಡಬ್ರಹ್ಮಯ್ಯಗಳ ಶಿಲ್ಪಗಳು ವೀರಶೈವ ಶರಣರ ಚರಿತೆಯಲ್ಲಿ ನೂತನ ದಾಖಲೆಗಳೆನಿಸಿವೆ. ವಿವಿಧ ವಿದ್ವಾಂಸರು ಸಂಶೋಧಿಸಿದ ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ಮುಖ್ಯವಾಗಿ ಅವರ ಭಂಗಿಯ ದೃಷ್ಟಿಯಿಂದ ೨ ರೀತಿಯಲ್ಲಿ ವಿಂಗಡಿಸಬಹುದು. ೧) ಶೂಲದ ಮೇಲೆ ಕುಳಿತ ಶಿಲ್ಪಗಳು ೨) ಶೂಲವಿಡಿದು ನಿಂತ ಶಿಲ್ಪಗಳು. ಶೂಲದ ಮೇಲೆ ಕುಳಿತ ಶಿಲ್ಪಗಳಲ್ಲಿ ಗುಂಡೇನಹಳ್ಳಿ, ಕುಸ್ನೂರು, ದೇವಪುರ, ಹಾವೇರಿ, ನಂದಿಯ ಶಿಲ್ಪಗಳು ಸೇರಿವೆ. ಶೂಲದೊಂದಿಗೆ ನಿಂತ ಶಿಲ್ಪಗಳಲ್ಲಿ ಚಿತ್ರದುರ್ಗ, ಹೊಸದುರ್ಗ, ಚಿಕ್ಕಪುರ, ಹಿರೇಗುಂಟನೂರು, ಅಸಗೋಡು, ಶ್ರೀರಾಂಪುರ, ಸಿಂಗಾಪುರ, ಸಾವನದುರ್ಗ, ಗುಬ್ಬಿ, ಉಜ್ಜಯನಿ, ನೀತಿಗೆರೆ, ಬುಕ್ಕಾಂಬುಧಿ, ಗರಗ ನಾಗಲಾಪುರದ ಶಿಲ್ಪಗಳು ಸೇರುತ್ತವೆ. ಈ ರೀತಿಯಾಗಿ ಗುಂಡಬ್ರಹ್ಮಯ್ಯಗಳ ಶಿಲ್ಪಸಂಪತ್ತನ್ನು ಅಧ್ಯಯನ ಮಾಡಬಹುದಾಗಿದೆ.

ಇವರ ಶಿಲ್ಪಗಳ ಅಧ್ಯಯನದ ಸಂದರ್ಭದಲ್ಲಿ ನಮಗೆ ಮುಖ್ಯವಾಗಿ ಕೆಲವು ಪ್ರಶ್ನೆಗಳು ಉದ್ಭವಿಸುತ್ತವೆ. ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಕೆಳಗಿನಂತೆ ಮಾಡಲಾಗಿದೆ. ಗುಂಡಬ್ರಹ್ಮಯ್ಯಗಳನ್ನು ಶಿಲ್ಪ ಮಾಧ್ಯಮದಲ್ಲಿ ಏಕೆ ಚಿತ್ರಿಸಲಾಯಿತು? ಎನ್ನುವುದು ಪ್ರಮುಖವಾದ ಅಂಶವಾಗಿದೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ, ಗುಂಡಬ್ರಹ್ಮಯ್ಯಗಳು ತಮ್ಮ ನಡೆ-ನುಡಿ, ಸಿದ್ಧಾಂತ ಹಾಗೂ ವ್ರತನೇಮಗಳ ಮೂಲಕ ಜನಸಾಮಾನ್ಯರಲ್ಲಿ ಮನೆಮಾಡಿಕೊಂಡಿದ್ದ ಭಕ್ತಿಯ ಕಲ್ಪನೆಯನ್ನು ಹೊಸ ನೆಲೆಯೊಂದರಿಂದ ಅರ್ಥೈಸಿದರು. ಭಕ್ತಿಯ ಬಗೆಗೆ ಸಾಮಾನ್ಯರಲ್ಲಿರುವ ಮೂಢನಂಬಿಕೆಯ ಆಚರಣೆಗಳನ್ನು ತೊಲಗಿಸುವ ನಿಟ್ಟಿನಲ್ಲಿ ಮತ್ತು

ಭಕ್ತಿಯ ಪರಿಕಲ್ಪನೆಯನ್ನು ಮುರಿದುಕಟ್ಟುವ ಹಿನ್ನೆಲೆಯಲ್ಲಿ ಗುಂಡಬ್ರಹ್ಮಯ್ಯರು ಪ್ರಮುಖರಾಗಿದ್ದಾರೆ. ಇದರಿಂದ ಇವರ ಶಿಲ್ಪಗಳನ್ನು ದೇವಾಲಯಗಳಲ್ಲಿ ಪ್ರತಿಷ್ಠಾಪಿಸಿದರು.

ಕೇವಲ ಕಾವ್ಯ-ಪುರಾಣಗಳ ಮೂಲಕ ಶರಣರ ಜೀವನದ ಸಿದ್ಧಾಂತಗಳನ್ನು ಕಟ್ಟಿಕೊಡಲು ಸಾಧ್ಯವಾಗದು. ಇವುಗಳ ಜೊತೆಗೆ ಶಿಲ್ಪಸಂಪತ್ತಿನ ಮೊರೆ ಹೋಗಬೇಕಾದ ಅನಿವಾರ್ಯ ಸಂದರ್ಭ ಒದಗುತ್ತದೆ. ಇಲ್ಲಿ ಅವರು ಧರಿಸಿರುವಂತ ರುದ್ರಾಕ್ಷಿಸರ, ಕಾಲ್ಪಂಡೆ, ತೋಳ್ಬಂದಿ, ವೀರಗಾಸೆಯವರಂತೆ ತೊಟ್ಟ ಪಂಚೆ, ಅಂಗೈಯಲ್ಲಿರುವ ಇಷ್ಟಲಿಂಗ, ಕೈಗತ್ತಿ, ಶೂಲಗಳು ಮುಂತಾದವು ಗುಂಡಬ್ರಹ್ಮಯ್ಯಗಳ ಕುರುಹುಗಳು. ಇವುಗಳು ಅವರ ಜೀವನದ ಪ್ರತಿನಿಧಿಗಳು. ಪ್ರತಿನಿಧಿಗಳಂತಿದ್ದ ಈ ಕುರುಹುಗಳನ್ನು ನಾವು ಶಿಲ್ಪಸಂಪತ್ತಿನಲ್ಲಿ ಮಾತ್ರ ಪ್ರತ್ಯಕ್ಷವಾಗಿ ನೋಡಲು ಸಾಧ್ಯವಾಗುತ್ತದೆ. ಕಾವ್ಯಗಳಲ್ಲಿ ಓದುವ ಬದಲಾಗಿ, ಶಿಲ್ಪಗಳಲ್ಲಿ ನೋಡುವುದರಿಂದ ಇವರ ಬಗ್ಗೆ ಇರುವ ಅಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ. ಈ ನಿಟ್ಟಿನಲ್ಲಿ ಗುಂಡಬ್ರಹ್ಮಯ್ಯಗಳ ಶಿಲ್ಪಗಳನ್ನು ಚಿತ್ರಿಸಿರಬಹುದು.

ಒಂದು ಕಾವ್ಯವನ್ನು ಓದಿ ವಿಮರ್ಶಿಸುವ ಸಂಖ್ಯೆ ವಿರಳ. ಅದರಂತೆ ಒಂದು ಶಿಲ್ಪವನ್ನು ನೋಡಿ ಸಮರ್ಪಕವಾಗಿ ವಿಮರ್ಶಿಸುವ ಸಂಖ್ಯೆಯೂ ಕಡಿಮೆ. ಕಾವ್ಯವನ್ನು ಓದುವ ಸಂದರ್ಭದಲ್ಲಿ ಕೇವಲ ಅಕ್ಷರಸ್ಥರಿಗೆ ಮಾತ್ರ ಸೀಮಿತವಾಗುತ್ತದೆ. ಅದರಲ್ಲೂ ಕೆಲವರಿಗೆ ಅದನ್ನು ಅರ್ಥೈಸಿಕೊಳ್ಳಲಾರದೆ, ಸಂತೋಷ ನೀಡದೆ ಇರಬಹುದು. ಆದರೆ ಶಿಲ್ಪಮಾಧ್ಯಮವು ಕೆಲವರಿಗೆ ಒಳನೋಟಗಳನ್ನು ಬಿಚ್ಚಿಡದಿದ್ದರೂ, ಅದರ ರಚನೆ, ವಿನ್ಯಾಸ ರೂಪದ ದೃಷ್ಟಿಯಿಂದ ಎಲ್ಲರಿಗೂ ಆನಂದವನ್ನು ಒದಗಿಸುತ್ತದೆ. ಕಾವ್ಯಗಳು ಓದುವ ವರ್ಗಕ್ಕೆ ಸಹಕಾರಿಯಾದರೆ, ಶಿಲ್ಪಗಳು ಓದುವ ಮತ್ತು ಓದದೇ ಇರುವ ಎರಡೂ ವರ್ಗಕ್ಕೆ ವಿಸ್ತರಿಸಿಕೊಂಡಿದೆ. ಈ ರೀತಿಯಾಗಿ ಕಾವ್ಯಗಳು ಪಂಡಿತರಿಗೆ, ಓದುಗರಿಗೆ ಸೀಮಿತವಾದರೆ, ಶಿಲ್ಪಮಾಧ್ಯಮವು ಸಾರ್ವಜನಿಕರಿಗೆ ತಲುಪುವ ಅಮೂಲ್ಯ ಮಾಧ್ಯಮವಾಗಿದೆ. ಆದ್ದರಿಂದ ಸಾರ್ವಜನಿಕರಿಗೆ ಗುಂಡಬ್ರಹ್ಮಯ್ಯಗಳ ಶಿವನಿಷ್ಠೆಯನ್ನು, ಶರಣಧರ್ಮವನ್ನು ತಲುಪಿಸುವ ಹಿನ್ನೆಲೆಯಲ್ಲಿ ಇವರ ಶಿಲ್ಪಗಳನ್ನು ದೇವಾಲಯಗಳಲ್ಲಿ ಚಿತ್ರಿಸಿರಬೇಕು.

ಈ ರೀತಿಯಾಗಿ ಉತ್ತರಗಳನ್ನು ಹುಡುಕುವ ಪ್ರಯತ್ನದಲ್ಲಿ ಮತ್ತೊಂದು ಪ್ರಶ್ನೆ ಕಾಡುತ್ತದೆ. ಮೂಲತಃ ಓರಂಗಲ್ಲಿನ ಅರಸಮನೆತನದ ಶರಣರಾದ ಗುಂಡಬ್ರಹ್ಮಯ್ಯರು ಕರ್ನಾಟಕದಲ್ಲಿ ಹೇಗೆ ಪ್ರಚಾರ ಪಡೆದರು? ಇವರ ಶಿಲ್ಪಗಳನ್ನು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಏಕೆ ಪ್ರತಿಷ್ಠಾಪಿಸಲಾಯಿತು? ಎಂದು ಅವಲೋಕಿಸುವುದು ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದಾದರೆ, ನಂಜುಂಡ ಕವಿಯ 'ಕುಮಾರರಾಮ ಚರಿತೆ'ಯನ್ನು ಆಧಾರವಾಗಿ ಇಟ್ಟುಕೊಳ್ಳುವುದು ಮುಖ್ಯವೆನಿಸುತ್ತದೆ. ಆಗ ಕುಮಾರರಾಮನಿಗೆ ಮತ್ತು ಗುಂಡಬ್ರಹ್ಮಯ್ಯರಿಗೂ ಏನು ಸಂಬಂಧ? ಎನ್ನುವ ಮತ್ತೊಂದು ಪ್ರಶ್ನೆ ಉದ್ಭವವಾಗುತ್ತದೆ. ಆದರೆ ಇಲ್ಲಿಯೇ ಮೂಲಬೇರು ಇರಬೇಕು.

ಕುಮಾರರಾಮನು ಕಾಕತೀಯ ಅರಸನಾದ ಪ್ರತಾಪರುದ್ರನ ಅಧೀನದಲ್ಲಿದ್ದ 'ಬೊಲ್ಲ'ನೆಂಬ ಕುದುರೆಯನ್ನು ವಶಪಡಿಸಿಕೊಳ್ಳಲು ಓರಂಗಲ್ಲಿಗೆ ಹೋಗುತ್ತಾನೆ. ಪುರ ಪ್ರವೇಶಕ್ಕೆ ಮೊದಲು 'ಗುಂಡಬ್ರಹ್ಮಯ್ಯಗಳ ದೇವಾಲಯ'ಕ್ಕೆ ದರ್ಶನವೀಯುತ್ತಾನೆ. ಅಂದು ರಾತ್ರಿ ಅಲ್ಲಿಯೇ ಕಳೆದು ನಿದ್ರೆ ಹೋದನು. ಆಗ ಗುಂಡಬ್ರಹ್ಮಯ್ಯಗಳು ಸಾಕ್ಷಾತ್ಕಾರವಾಗಿ ಬಂದು, ಅವನಿಗೆ ಜಯ ದೊರಕುವಂತೆ ಅಭಯ ನೀಡುತ್ತಾರೆ. ಕುಮಾರರಾಮನು ಕುದುರೆಯನ್ನು ಗೆದ್ದ ನಂತರ ಪುನಃ ಆ ದೇವಾಲಯಕ್ಕೆ ಬಂದು ಪ್ರಾರ್ಥನೆ ಸಲ್ಲಿಸುತ್ತಾನೆ. ಇವರನ್ನು ಶೂಲಕ್ಕೇರಿದುದರ ಸ್ಮರಣಾರ್ಥವಾಗಿ ತನ್ನ ರಾಜಧಾನಿಯಲ್ಲಿ 'ಶೂಲದ ಹಬ್ಬ'ವನ್ನು ಆಚರಿಸುವುದಾಗಿ ಹರಕೆ ಹೊತ್ತು ಕಂಪಿಲೆಗೆ ಬರುವನು. ನಂತರ ತನ್ನ ತಂದೆಯಾದ ರತ್ನಾಜಿಯ ಅಪ್ಪಣೆ ಪಡೆದು ವಿಜೃಂಬಣೆಯಿಂದ 'ಶೂಲದ ಹಬ್ಬ'ವನ್ನು ಆಚರಿಸುತ್ತಾನೆ. ಇದರಿಂದ ಗುಂಡಬ್ರಹ್ಮಯ್ಯರು ಕರ್ನಾಟಕದಲ್ಲಿ ವಿಶೇಷವಾಗಿ ಪ್ರಚಾರಗೊಂಡಿರಬೇಕು. ಕರ್ನಾಟಕದಲ್ಲಿ ಚದುರಿದ ಶರಣರು ಆಂಧ್ರದ ಶ್ರೀಶೈಲಕ್ಕೆ ತೆರಳಿದರು. ಇದರಿಂದಾಗಿ ಗುಂಡಬ್ರಹ್ಮಯ್ಯರಿಗೆ ಪ್ರಭಾವ ಬೀರಿರಬೇಕೆನಿಸುತ್ತದೆ. ಹಾಗೆಯೇ ಕರ್ನಾಟಕದ ಸಂದರ್ಭದಲ್ಲಿ ಇವರು ಪ್ರಚಾರಗೊಳ್ಳಲು 'ಶೂಲದ ಹಬ್ಬ'ವೇ ಪ್ರೇರಣೆ ಒದಗಿಸಿರಬೇಕು. ಆದ್ದರಿಂದ ಶರಣತತ್ವ ಮತ್ತು 'ಶೂಲದ ಹಬ್ಬ'ದ ನೆನಪಿಗಾಗಿ ಇವರನ್ನು ಕರ್ನಾಟಕದಲ್ಲಿ ವಿಶೇಷವಾಗಿ ಶಿಲ್ಪ ಮಾಧ್ಯಮದಲ್ಲಿ ಚಿತ್ರಿಸಿರಬೇಕು. ಆದ್ದರಿಂದ ಇದುವರೆಗೂ ಕರ್ನಾಟಕದಲ್ಲಿ ೨೫ ಶಿಲ್ಪಗಳು ದೇವಾಲಯಗಳಲ್ಲಿ ಲಭಿಸಿವೆ.

ಇವರ ಶಿಲ್ಪಗಳು ವೀರಭದ್ರ ದೇವಾಲಯಗಳಲ್ಲಿ ಏಕೆ ಹೆಚ್ಚಾಗಿ ಕಂಡುಬರುತ್ತವೆ? ಎಂಬುದು ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ, ಗುಂಡಬ್ರಹ್ಮಯ್ಯರ ಶಿಲ್ಪಗಳಿಗೂ ವೀರಭದ್ರದೇವರಿಗೂ ಏನೋ ಸಂಬಂಧವಿರುವ ಹಾಗೆ ತೋರುತ್ತದೆ. ಇವರ ಶಿಲ್ಪಗಳು ದೊರೆತಿರುವ ಪರಿಸರವನ್ನು ಪರಿಶೀಲಿಸಿದರೆ, ಹೆಚ್ಚಾಗಿ ಶಿಲ್ಪಗಳು ವೀರಭದ್ರದೇವಸ್ಥಾನದ ಹತ್ತಿರ ಕಂಡುಬರುತ್ತಿವೆ. ಹಿಂದೆ ಪ್ರಕಟವಾದ ಚಿತ್ರದುರ್ಗದ ಸಂಪಿಗೆ ಸಿದ್ದೇಶ್ವರ ದೇವಾಲಯದ ಶಿಲ್ಪ, ಹಾವೇರಿ ಮತ್ತು ನೀತಿಗೆಯ ಶಿಲ್ಪಗಳು ಒಂದಲ್ಲ ಒಂದು ರೀತಿಯಲ್ಲಿ ವೀರಭದ್ರ ದೇವರ ಸಮೀಪದಲ್ಲೆ ಇವೆ. ನನ್ನ ಸಂಶೋಧನೆಯ ಅವಧಿಯಲ್ಲಿ ಸಂಶೋಧಿಸಿದ ಸಿಂಗಾಪುರ ಹಾಗೂ ಸಾವನದುರ್ಗ ಶಿಲ್ಪಗಳು ಸಹ ವೀರಭದ್ರ ದೇವಾಲಯದಲ್ಲಿವೆ. ಅಸಗೂಡು ಮತ್ತು ಹಿರೇಗುಂಟನೂರಿನ ಶಿಲ್ಪಗಳನ್ನು ಬಿಟ್ಟರೆ, ಉಳಿದ ಬಹುಮಟ್ಟಿನ ಶಿಲ್ಪಗಳು ವೀರಭದ್ರ ದೇವಾಲಯದ ಹತ್ತಿರವೇ ಇವೆ. ಅಸಗೋಡಿನಲ್ಲೂ ಆ ದೇವಾಲಯದ ಹೊರ ಅಂಗಳದಲ್ಲಿ ಗೋಡೆಗೆ ಒರಗಿಸಿದ ಒಂದು ವೀರಭದ್ರಮೂರ್ತಿ ಇದೆ ಎನ್ನುವುದು ಗಮನಾರ್ಹ.

ಅನೇಕ ಕಡೆ ಹೀಗೆ ಗುಂಡಬ್ರಹ್ಮಯ್ಯಗಳ ಶಿಲ್ಪಗಳು ವೀರಭದ್ರ ದೇವಸ್ಥಾನದಲ್ಲಿ ಕಂಡುಬರುವುದು ಆಕಸ್ಮಿಕವಲ್ಲವೆಂದು ತೋರುತ್ತದೆ. ಈ ರೀತಿ ಹೆಚ್ಚಾಗಿ ಕಂಡುಬರುವುದಕ್ಕೆ ವೀರಭದ್ರ ದೇವರಿಗು ಹಾಗೂ ಗುಂಡಬ್ರಹ್ಮಯ್ಯರಿಗೂ ಇರುವ ಸಂಬಂಧ ಕಾರಣವಾಗಿದೆ. ಇವರಿಬ್ಬರು ವೀರಭದ್ರಸ್ವಾಮಿಯ ಪರಮ ಭಕ್ತರಾಗಿರಬೇಕು. ಅಂದರೆ ಇವರು ವೀರಭದ್ರನ ಆರಾಧಕರಾಗಿದ್ದು, ಶಿವಭಕ್ತಿಯಲ್ಲಿ

ನಿಷ್ಠೆಯುಳ್ಳವರಾಗಿರಬೇಕು. ಮತ್ತು ಗುಂಡಬ್ರಹ್ಮಯ್ಯರು ವೀರದೇವನಾದ ವೀರಭದ್ರನ ಗಣಗಳು ಅಥವಾ ಗಣಗಳ ಅವತಾರವೆಂಬಂತೆ ಹಿಂದೆ ಜನರು ಭಾವಿಸಿದ್ದರೆ? ಎಂಬ ಅನುಮಾನ ಬರುತ್ತದೆ. ಏಕೆಂದರೆ, ೧೨ನೇ ಶತಮಾನದ ಕಲ್ಯಾಣ ಕ್ರಾಂತಿ ಕಾಲದಲ್ಲಿ ಮಹತ್ವದ ಪಾತ್ರವಹಿಸಿದ ಜಗದೇವ ಮಲ್ಲೆಬೊಮ್ಮಣ್ಣರೇ ಮುಂದೆ ಗುಂಡಬ್ರಹ್ಮಯ್ಯಗಳಾಗಿ ಹುಟ್ಟಿದರೆಂದು ಹೇಳಲಾಗುತ್ತಿದೆ. ಜಗದೇವ ಮಲ್ಲಿಬೊಮ್ಮಣ್ಣಗಳದ್ದು ಒಂದು ಬಗೆಯ ವೀರಕಾರ್ಯವಾದರೆ, ಗುಂಡಬ್ರಹ್ಮಯ್ಯಗಳದ್ದು ಇನ್ನೊಂದು ಬಗೆಯ ವೀರಕಾರ್ಯ. ಆದ್ದರಿಂದ ಇಂತಹ ವೀರಕಾರ್ಯ ಮಾಡುವುದು ವೀರಭದ್ರನ ಗಣಗಳಂಥ ಅಸಾಧಾರಣ ಸಾಮರ್ಥ್ಯದವರಿಗೆ ಮಾತ್ರ ಸಾಧ್ಯವೆನಿಸುತ್ತದೆ. ಈ ಒಂದು ನಂಬಿಕೆ ಇರುವುದರಿಂದ ಬಹುಶಃ ವೀರಭದ್ರ ದೇವಾಲಯಗಳಲ್ಲಿ ಗುಂಡಬ್ರಹ್ಮಯ್ಯರ ಶಿಲ್ಪಗಳು ಹೆಚ್ಚಾಗಿ ದೊರೆತಿರಬೇಕು.

ಗುಂಡಬ್ರಹ್ಮಯ್ಯಗಳ ಶಿಲ್ಪಗಳ ಹೊರತಾಗಿಯೂ ಕನ್ನಡ ನಾಡಿನ ಶಿವಶರಣರ ಶಿಲ್ಪಸಂಪತ್ತನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಕಾಣಬಹುದು. ಗುಂಡಬ್ರಹ್ಮಯ್ಯ ಮತ್ತು ಇತರೆ ಶಿವಶರಣರ ಸಂಬಂಧವು ಪಾರಲೌಕಿಕವಾದುದು. ಇದರಿಂದ ಇಹದ ಬದುಕಿಗೆ ವ್ರತನೇಮಗಳಂತೆ ಆಧ್ಯಾತ್ಮಿಕ ಬದುಕಿಗೆ ಗುಂಡಬ್ರಹ್ಮಯ್ಯರ ಬದುಕು ನಿದರ್ಶನವಾಗಿ ನಿಲ್ಲುತ್ತದೆ. ಹೀಗಾಗಿ ಶಿಲ್ಪಗಳ ಮೂಲಕ ಕಾವ್ಯವನ್ನು ಮತ್ತು ಕಾವ್ಯದ ಮೂಲಕ ಶಿಲ್ಪಸಂಪತ್ತನ್ನು ಗಮನಿಸುವುದು ಮುಖ್ಯವೆನಿಸಿದೆ. ಇವುಗಳು ನಮಗೆ ಒಂದಕ್ಕೊಂದು ಪೂರಕ ಆಕರಗಳಾಗಿ ಲಭಿಸಿವೆ. ಇವರ ಅಧ್ಯಯನದ ಸಂದರ್ಭದಲ್ಲಿ ಕೇವಲ ಒಂದು ಜ್ಞಾನಶಿಸ್ತನ್ನು ಮಾತ್ರ ಗಮನಿಸಿದರೆ ಸೂಕ್ತವಾಗದು. ಸಾಹಿತ್ಯ ಮತ್ತು ಶಿಲ್ಪಸಂಪತ್ತು ಈ ಎರಡನ್ನು ಅಧ್ಯಯನ ಶಿಸ್ತಾಗಿ ಗಮನಿಸುವುದು ಮುಖ್ಯವಾಗಿದೆ. ಆದ್ದರಿಂದ ಗುಂಡಬ್ರಹ್ಮಯ್ಯಗಳ ಸ್ಥಾನಮಾನ ಗುರುತಿಸುವಲ್ಲಿ ಶಿಲ್ಪಸಂಪತ್ತು ಪ್ರಮುಖ ಆಕರ ಸಾಮಾಗ್ರಿಯಾಗಿದೆ. ಈ ಕಾರಣಕ್ಕಾಗಿ ಪ್ರಸ್ತುತ ನಿಬಂಧದ ಪ್ರಕಾರ "ಗುಂಡಬ್ರಹ್ಮಯ್ಯಗಳ ಸಾಹಿತ್ಯ ಅಧ್ಯಯನ ಪರಿಪೂರ್ಣಗೊಳಿಸಬೇಕಾದರೆ, ಶಿಲ್ಪ ಸಂಪತ್ತು ಅನಿವಾರ್ಯ. ಇದರ ಅಧ್ಯಯನ ಮಾಡದೆ 'ಗುಂಡಬ್ರಹ್ಮಯ್ಯಗಳ ಸಾಹಿತ್ಯ' ಅಧ್ಯಯನವು ಪರಿಪೂರ್ಣವಾಗಲಾರದು".

ಅಡಿಟಿಪ್ಪಣಿ

೧. ಶಿಲ್ಪಗಳಲ್ಲಿ ಶಿವಭಕ್ತರು : ವಿನೋದಾ ಪಾಟೀಲ್, ಪುಟ. ೧೭, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಹೊಸಪೇಟೆ, ೨೦೦೩.

೨. ಅದೇ. ಪುಟ ೧೭.

೩. ಕರ್ನಾಟಕ ಶಿಲ್ಪಗಳಲ್ಲಿ ಶಿವಶರಣರು : ಡಾ. ಜಿ. ಎಂ. ನಾಗಯ್ಯ, ಪುಟ. ೧, ಶ್ರೀಚೆನ್ನಬಸವೇಶ್ವರ ಸಂಸ್ಥಾನ ಹಿರೇಮಠ ಹಾರಕೊಡ ತಾ. ಬಸವಕಲ್ಯಾಣ ಜಿ. ಬೀದರ್.

೪. ಮಾರ್ಗ-೨ : ಡಾ. ಎಂ. ಎಂ. ಕಲಬುರ್ಗಿ, ಪುಟ ೮೪, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು. ೧೯೯೫.

೫. ಅದೇ. ಪುಟ ೯೫.

೬. ಕರ್ನಾಟಕ ಶಿಲ್ಪಗಳಲ್ಲಿ ಶಿವಶರಣರು: ಡಾ. ಜಿ. ಎಂ. ನಾಗಯ್ಯ, ಪುಟ ೨, ಶ್ರೀಚೆನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಹಾರಕೂಡ ತಾ. ಬಸವಕಲ್ಯಾಣ ಜಿ. ಬೀದರ್.

೭. ಕರ್ನಾಟಕ ಭಾರತಿ ಸಂಪುಟ. ೬, ಸಂಚಿಕೆ ೩, ಪುಟ ೩-೫.

೮. ಮಧುಕೇಶ್ವರ ದೇವಾಲಯದ ಶರಣರ ವಿಗ್ರಹಗಳು: ಡಾ. ಎಂ. ಎಂ. ಕಲಬುರ್ಗಿ, ಕರ್ನಾಟಕ ಭಾರತಿ ಸಂಪುಟ ೭, ಸಂಚಿಕೆ ೧, ಪುಟ ೧೪೯.

೯. Eixxix ಅಬ್ಬಲೂರು, ಹಿರೇಕೆರೂರು (ತಾ.) ಹಾವೇರಿ (ಜಿ.)

೧೦. ಮಡಿವಾಳ ಮಾಚಿದೇವನ ವಿಗ್ರಹಗಳು : ಆರ್. ಎನ್. ಗುರುವ, 'ಕರ್ನಾಟಕ ಭಾರತಿ' ಸಂಪುಟ.೬, ಸಂಚಿಕೆ ೪, ಪುಟ ೧೫೭-೧೫೯.

೧೧. ಮಾರ್ಗ - ೨ : ಡಾ. ಎಂ. ಎಂ. ಕಲಬುರ್ಗಿ, ಪುಟ ೯೫, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು. ೧೯೯೫.

೧೨. ಗುಂಡಬ್ರಹ್ಮಯ್ಯಗಳ ಚರಿತ್ರೆ : ಸಂ. ಡಾ. ವಿ. ಶಿವಾನಂದ, ಅಖಂಡೇಶ್ವರ ಗ್ರಂಥಮಾಲೆ ಜೇವರಗಿ, ಜಿ. ಗುಲ್ಬರ್ಗಾ, ೧೯೭೪ (ಚಿತ್ರಗಳು)

೧೩. ಶಾಸನ ವ್ಯಾಸಂಗ : ಡಾ. ಎಂ. ಎಂ. ಕಲಬುರ್ಗಿ, ಸಂಪುಟ. ೭, ಪುಟ ೧೮೯ ಕನ್ನಡ ಅಧ್ಯಯನ ಪೀಠ ಪಠ್ಯಪುಸ್ತಕ ನಿರ್ದೇಶನಾಲಯ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೫.

೧೪. ಜನ-ಜನಪದ-ಜಾನಪದ : ಚಿದಾನಂದ ಮೂರ್ತಿ.

೧೫. ಇತಿಹಾಸದರ್ಶನ : ಸಂ. ಎಂ. ಜಿ. ನಾಗರಾಜ್, ಡಾ. ಪಿ. ವಿ. ಕೃಷ್ಣಮೂರ್ತಿ (ನವಶೋಧಿತ ಗುಂಡಬ್ರಹ್ಮಯ್ಯಗಳ ವಿಗ್ರಹಗಳು : ಡಾ. ಎಂ. ಜಿ. ಮಂಜುನಾಥ) ಕರ್ನಾಟಕ ಇತಿಹಾಸ ಅಕಾಡೆಮಿ ಬೆಂಗಳೂರು, ಸಂಪುಟ. ೧೫, ಪುಟ ೭೨-೭೪.

೧೬. ಕರ್ನಾಟಕ ಶಿಲ್ಪಗಳಲ್ಲಿ ಶಿವಶರಣರು : ಡಾ. ಜಿ. ಎಂ. ನಾಗಯ್ಯ, ಪು ೧೫೧, ಶ್ರೀಚೆನ್ನಬಸವೇಶ್ವರ ಸಂಸ್ಥಾನ ಹಿರೇಮಠ, ಹಿರಕೂಡ ತಾ. ಬಸವಕಲ್ಯಾಣ ಜಿ. ಬೀದರ್.

೧೭. ಇತಿಹಾಸ ದರ್ಶನ : ಸಂ. ಎಂ. ಜಿ. ನಾಗರಾಜ್, ಡಾ. ಪಿ. ವಿ. ಕೃಷ್ಣಮೂರ್ತಿ, ಸಂಪುಟ ೧೯, (ಬೈಲುಹೊಂಗಲ ಪ್ರಾದೇಶಿಕ ಪ್ರಾಚ್ಯಸ್ಮಾರಕಗಳು ಡಾ. ಚನ್ನಕ್ಕ ಪಾವಟೆ) ಕರ್ನಾಟಕ ಇತಿಹಾಸ ಅಕಾಡೆಮಿ ಬೆಂಗಳೂರು, ೨೦೦೪.

೧೮. ಕರ್ನಾಟಕದ ಶಿಲ್ಪಗಳಲ್ಲಿ ಶಿವಶರಣರು : ಡಾ. ಜಿ. ಎಂ. ನಾಗಯ್ಯ, ಪುಟ ೧೫೮, ಶ್ರೀಚೆನ್ನಬಸವೇಶ್ವರ ಸಂಸ್ಥಾನ ಹಿರೇಮಠ ಸುಕ್ಷೇತ್ರ ಹಾರಕೂಡ, ತಾ. ಬಸವಕಲ್ಯಾಣ.

೧೯. ಜನಪದ ಶರಣರ ಕಾವ್ಯಗಳು : ಡಾ. ಪಿ. ಕೆ. ರಾಜಶೇಖರ, ಪದ್ಯ ೩೦೦, ಪುಟ ೪೨೧, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೦.

೨೦. ಕರ್ನಾಟಕ ಭಾರತಿ, ಸಂಪುಟ ೧೨, ಸಂಚಿಕೆ ೧-೪, ಪು ೧೩೪.

೨೧. ಅದೇ. ಪುಟ ೧೨೪.

೨೨. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವಕ್ತೃವಿನಿಂದ ಮಾಹಿತಿ ಪಡೆಯಲಾಗಿದೆ.

೨೩. ಶಿಲ್ಪವು ದೊರೆತ ನಂತರ ಅದನ್ನು ಸ್ವಚ್ಛಗೊಳಿಸಿ ಅಲ್ಲಿಯೇ ಬಯಲಿನಲ್ಲಿ ಗೋಡೆಗೆ ಬಾಗಿಸಿ ಇಟ್ಟುಬಂದಿದೆ. ಸ್ಥಳಿಯರಿಗೆ ಇದರ ಬಗ್ಗೆ ಮಾಹಿತಿ ಇಲ್ಲ.

೨೪. ಇತಿಹಾಸ ದರ್ಶನ : ಸಂ. ಡಾ. ಎಂ. ಜಿ. ನಾಗರಾಜ್, ಡಾ. ಪಿ. ವಿ. ಕೃಷ್ಣಮೂರ್ತಿ ಸಂಪುಟ. ೨೫, (ಶೂಲಬ್ರಹ್ಮಯ್ಯಗಳ ವಿಗ್ರಹ: ನವಶೋಧ:: ಡಾ. ಸಿ. ಯು. ಮಂಜುನಾಥ) ಕರ್ನಾಟಕ ಇತಿಹಾಸ ಅಕಾಡೆಮಿ ಬೆಂಗಳೂರು, ೨೦೧೦.

೨೫. ವಕ್ತೃ : ತಿಪ್ಪೇಸ್ವಾಮಿ, ಪೂಜಾರಿಗಳು ಹೊಸದುರ್ಗ.

೨೬. ಅದೇ.

೨೭. ಗುಂಡಬ್ರಹ್ಮಯ್ಯಗಳ ಸಾಹಿತ್ಯ : ಸಂ. ಡಾ. ಕೆ. ರವೀಂದ್ರನಾಥ, ಪುಟ ೧೨೩, ಪದ್ಯ ೨೧೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೨೮. ಅದೇ. ಪುಟ ೧೨೩, ಪದ್ಯ ೨೧೯.

೨೯. ಕೆಸಾಪುರಕ್ಕೆ ಹೋಗುವ ರಸ್ತೆಗೆ ಈ ದೇವಸ್ಥಾನವಿದೆ.

೩೦. ಇದೇ ತಾಲೂಕಿನಲ್ಲಿ ಜೋಡಿಶ್ರೀರಾಮಪುರ ಎನ್ನುವ ಊರಿದೆ. ಇದು ಶಿಲ್ಪಗಳಿರುವ ಊರಲ್ಲ. ಬೂದಿಹಾಳ ಶ್ರೀರಾಂಪುರಕ್ಕೆ ಹೋಗಬೇಕು. ಇದು ಗುಂಡಬ್ರಹ್ಮಯ್ಯಗಳ ಶಿಲ್ಪಗಳಿರುವ ಊರಾಗಿದೆ.

೩೧. ಚಿದಾನಂದಮೂರ್ತಿಯವರ ಸೂಚನೆಯ ಮೇರೆಗೆ ಬಿ. ರಾಜಶೇಖರಪ್ಪನವರು ಈ ಶಿಲ್ಪವನ್ನು ಪ್ರಕಟಿಸಿದರು.

೩೨. ವಕ್ತೃ : ಶರಣಯ್ಯ ಪೂಜಾರಿಗಳು ಶ್ರೀರಾಮಪುರ, ಜಿ. ಚಿತ್ರದುರ್ಗ.

೩೩. ಇತಿಹಾಸದರ್ಶನ : ಸಂ. ಎಂ. ಜಿ. ನಾಗರಾಜ್ (ನವಶೋಧಿತ ಗುಂಡಬ್ರಹ್ಮಯ್ಯಗಳ ವಿಗ್ರಹಗಳು: ಡಾ. ಎಂ. ಜಿ. ಮಂಜುನಾಥ) ಸಂಪುಟ ೧೫, ಪುಟ೭೨, ಕರ್ನಾಟಕ ಇತಿಹಾಸ ಅಕಾಡೆಮಿ (ರಿ) ಬೆಂಗಳೂರು, ೨೦೦೦.

೩೪. ಅದೇ. ಪುಟ ೭೩

೩೫. ಅದೇ. ಪುಟ ೭೪.

೩೬. ವಕ್ತೃ: ಪಂಪಣ್ಣ ಗುಂಡೇನಹಳ್ಳಿ.

೩೭. ಜನ-ಜನಪದ-ಜಾನಪದ: ಚಿದಾನಂದ ಮೂರ್ತಿ.

೩೮. ಅದೇ. ಪುಟ. ೨೨೦.

೩೯. ಅದೇ.

೪೦. ಕರ್ನಾಟಕದ ಶಿಲ್ಪಗಳಲ್ಲಿ ಶಿವಶರಣರು ಡಾ. ಜಿ. ಎಂ. ನಾಗಯ್ಯ, ಪುಟ ೧೫೧, ಶ್ರೀಚನ್ನಬಸವೇಶ್ವರ ಸಂಸ್ಥಾನ ಹಿರೇಮಠ ಸುಕ್ಷೇತ್ರ ಹಾರಕೂಡ ತಾ. ಬಸವಕಲ್ಯಾಣ.

೪೧. ಕರ್ನಾಟಕ ಭಾರತಿ ೬-೩ ರಲ್ಲಿ ನೋಡಬಹುದು.

೪೨. ಗುಂಡಬ್ರಹ್ಮಯ್ಯಗಳ ಚರಿತ್ರೆ (ಸುವ್ವಿ): ಸಂ. ಡಾ. ವಿ. ಶಿವಾನಂದ, ಪ್ರಾರಂಭದಲ್ಲಿರುವ ಚಿತ್ರಗಳು, ಅಖಂಡೇಶ್ವರ ಗ್ರಂಥಮಾಲೆ ಜೇವರ್ಗಿ ಜಿ. ಗುಲಬರ್ಗಾ. ೧೯೭೪.

ಅಧ್ಯಾಯ-ಆರು

ಗುಂಡಬ್ರಹ್ಮಯ್ಯಗಳ ಸಾಂಸ್ಕೃತಿಕ ಅನನ್ಯತೆ

ಅಧ್ಯಾಯ-ಆರು

ಗುಂಡಬ್ರಹ್ಮಯ್ಯಗಳ ಸಾಂಸ್ಕೃತಿಕ ಅನನ್ಯತೆ

ಮಾನವ ಜನ್ಮ ಅಭೂತಪೂರ್ವ ನಿಸರ್ಗದ ಕೊಡುಗೆ. ಇಂತಹ ಜನ್ಮವು ಮೊದಲಿಗೆ ಎಲ್ಲಿ ಮತ್ತು ಯಾವ ಸಂದರ್ಭದಲ್ಲಿ ಜನನವಾಯಿತೆಂದು ಉತ್ತರ ಹುಡುಕುತ್ತ ಹೋದರೆ, ಅನೇಕ ತರ್ಕ ಪ್ರಶ್ನೆಗಳು ನಮ್ಮ ಮುಂದೆ ತಲೆ ಎತ್ತುತ್ತವೆ. ಆದ್ದರಿಂದ ಎಲ್ಲಿ ಜನಿಸಿದರೂ, ಯಾವ ಸಮಯದಲ್ಲಿ ಜನಿಸಿದರು ಅತಿ ಶ್ರೇಷ್ಠನಾಗಿದ್ದಾನೆ. ಈ ಕಾರಣದಿಂದ ದಾಸಶ್ರೇಷ್ಠರಾದ ಪುರಂದರ ದಾಸರು ತಮ್ಮ ಕೀರ್ತನೆಗಳ ಮೂಲಕ 'ಮಾನವ ಜನ್ಮ ದೊಡ್ಡದು ಅದನ್ನು ಹಾಳು ಮಾಡಿಕೊಳ್ಳಬೇಡಿರಿ ಹುಚ್ಚಪ್ಪಗಳಿರಾ' ಎಂದು ಸಾರಿದ್ದಾರೆ. ಜೀವನ ವಿಕಾಸವಾಗುತ್ತಾ ಹೋದಂತೆಲ್ಲ ಅನೇಕ ರೀತಿಯ ಚಲನಶೀಲತೆ ಅಥವಾ ಸ್ಥಿತ್ಯಂತರಗಳನ್ನು ಕಾಣಬಹುದು. ಹುಟ್ಟಿನಿಂದ ಏಕಾಂಗಿಯಾದ ಒಂದು ಮಗು ಶೈಶವಾಸ್ಥೆಯ ನಂತರ ತನ್ನ ಕುಟುಂಬದೊಂದಿಗೆ, ಸಮಾಜದೊಂದಿಗೆ ಬೆರೆತುಕೊಳ್ಳುತ್ತದೆ. ನಂತರ ಆಯಾ ಜನಾಂಗದ ಭಾಷೆ-ಸಂಸ್ಕೃತಿಯನ್ನು ಕಲಿಯುತ್ತದೆ. ಆದ್ದರಿಂದ ವಿಸ್ತಾರವಾದ ಸಮಾಜದಲ್ಲಿ ನಾನಾ ಬಗೆಯ ಸಾಂಸ್ಕೃತಿಕ ವೈಶಿಷ್ಟ್ಯಗಳಿವೆ.

ಈಗಾಗಲೆ ತಿಳಿದಂತೆ ಭಾರತವು ವೈವಿಧ್ಯಮಯ ದೇಶ. ನಾನಾ ಬಗೆಯ ಧರ್ಮ, ಸಂಪ್ರದಾಯ, ನಂಬಿಕೆ ಮತ್ತು ಆಚರಣೆಗಳ ಗೂಡನ್ನು ಕಟ್ಟಿಕೊಂಡಿದೆ. ಆಯಾ ಜನಾಂಗಕ್ಕೆ ತಕ್ಕಂತೆ ಅನೇಕ ಬಗೆಯ ಜಾತ್ರೆ, ಉತ್ಸವ, ಸಂಪ್ರದಾಯಗಳು ನಡೆದುಕೊಂಡು ಬರುತ್ತಿವೆ. ಈ ಬಗೆಯ ಆಚರಣೆಗಳು ಜಾತಿ, ಧರ್ಮ, ಆಯಾ ಪ್ರದೇಶಗಳಿಗೆ ಸೀಮಿತವಾದರೆ, ಬಹುಭಾಗಗಳಲ್ಲಿ ಇವುಗಳನ್ನು ಮೀರಲಾಗಿದೆ. ಇದಕ್ಕೆ ನಿದರ್ಶನವೆನ್ನುವಂತೆ ಗುಂಡಬ್ರಹ್ಮಯ್ಯಗಳ ಶೂಲದ ಹಬ್ಬವನ್ನು ಕಾಣಬಹುದು. 'ಶೂಲದ ಹಬ್ಬ' ಆಚರಣೆಯಿಂದಾಗಿ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಪ್ರಚಾರಗೊಂಡರು. ಭಾವನಾತ್ಮಕವಾಗಿ ಭಕ್ತಿಭಾವದಿಂದ ಶೂಲದ ಹಬ್ಬವನ್ನು ಆಚರಣೆ ಮಾಡುವರು.

ಕೆಲವು ಹಬ್ಬಗಳು ಸಂತೋಷದ ಪ್ರತೀಕವಾದರೆ, ಇನ್ನು ಕೆಲವು ಹಬ್ಬಗಳು ದುಃಖದ ಸಂಕೇತಗಳಾಗಿವೆ. ಭಾರತದಲ್ಲಿ ಆಚರಣೆಗೊಳ್ಳುವ ಹಬ್ಬಗಳ ಹಿನ್ನಲೆಯಲ್ಲಿ ಗಮನಿಸಿದರೆ ಈ ಅಂಶ ವೇದ್ಯವಾಗುತ್ತದೆ. ಇದೇ ರೀತಿಯಲ್ಲಿ ಗುಂಡಬ್ರಹ್ಮಯ್ಯಗಳ ಶೂಲದ ಹಬ್ಬವನ್ನು ಗಮನಿಸಲಾಗಿದೆ. ಈ ಹಬ್ಬದ ಹಿನ್ನಲೆಯಲ್ಲಿ ಸಾಂಸ್ಕೃತಿಕವಾಗಿ ಕೆಲವು ಹಬ್ಬ-ಉತ್ಸವ ಆಚರಣೆಗಳು ಬೆಳೆದುಬಂದಿವೆ. ಗುಂಡಬ್ರಹ್ಮಯ್ಯರನ್ನು ಶೂಲಕ್ಕೇರಿಸಿದರಿಂದ ಇವರ ಸತ್ವಪರೀಕ್ಷೆ ಮಾಡಿದಂತಾಗಿದೆ. ಇದರಿಂದ ನಿಜವಾದ ಭಕ್ತಿಯನ್ನು ಅರಿಯಲು

ಸಹಕಾರಿಯಾಯಿತು. ಪ್ರಾರಂಭದಲ್ಲಿ ಈ ಸಂದರ್ಭವು ಜನರಿಗೆ ದುಃಖಾಂತವೆನಿಸಿದರೂ, ನಂತರ ಸುಖಾಂತಗೊಳಿಸಿ ಜನಮನವನ್ನು ತಣಿಸಿದಂತಾಗಿದೆ. ಅಂದಿನ ಕಾಲದ ಶಿಕ್ಷೆಯ ಸ್ವರೂಪವನ್ನು ತಿಳಿಸುವ ಜೊತೆಗೆ ಗುಂಡಬ್ರಹ್ಮಯ್ಯಗಳ ತತ್ವ-ಸಿದ್ಧಾಂತಗಳನ್ನು ಅರೆದು ನೋಡಲಾಗಿದೆ. ಇದರಿಂದ ಇವರಿಗೆ ಬಂಗಾರದ ಒಳಪು ಬಂದಂತಾಗಿದೆ.

ಚೂಪಾದ ತುದಿಯುಳ್ಳ ಒಂದು ಬಗೆಯ ಆಯುಧವನ್ನು ಶೂಲ ಎನ್ನುವರು. ಶೂಲವು ಒಂದು ಪ್ರಕಾರದ ಉದ್ದನೆಯ ಮೊನಚಾದ ಭರ್ಚಿಯಂತಹ ದಂಡಾಯುಧವಾಗಿದೆ. ಮರಣದಂಡನೆಗೊಳಗಾದವರನ್ನು ಏರಿಸಿ ಕೊಲ್ಲಲು ಬಳಸುವ ಒಂದು ಕಂಬವೆ ಶೂಲ. ಪರಶಿವನಿಗೆ ಶೂಲಾಯುಧವೆಂದು ಕರೆಯುವರು. ಶೂಲಾಯುಧ ಎಂದರೆ, ಕೈಯಲ್ಲಿ ಶೂಲವನ್ನು ಹಿಡಿದುಕೊಂಡವನು ಎಂದರ್ಥ. ಶೂಲಕ್ಕೇರಿಸು ಎಂದರೆ, ಶೂಲಕ್ಕೆ ಹಾಕು, ಮರಣದಂಡನೆಗೆ ಒಳಪಡಿಸು ಎಂಬುದಾಗಿದೆ. ಶೂಲದ ಮರವೆಂದರೆ, ಮರಣದಂಡನೆಗೆ ಒಳಗಾದವರನ್ನು ಏರಿಸಿಕೊಳ್ಳಲು ನೆಟ್ಟಿರುವ ಕಂಬ. ಶೂಲವನ್ನು ಶ್ರೀಗಂಧದ ಮರ ಇಲ್ಲವೆ ಆಲದ ಮರ ಕೋಯ್ದು ರೆಂಬೆಕೊಂಬೆ ಸಮೇತವಾಗಿ ನಾನಾ ವಿಧದ ಪುಷ್ಪಗಳಿಂದ ಅದನ್ನು ಅಲಂಕರಿಸಿ, ತರುವಾಯದಲ್ಲಿ ಶೂಲಾಯುಧದ ಮೇಲೆ ಅಪರಾಧಿಗಳನ್ನು ಏರಿಸಲಾಗುತಿತ್ತು.

'ಗುಂಡಬ್ರಹ್ಮಯ್ಯಗಳ ಚರಿತ್ರೆ' (ಸುಪ್ರಿ) ಮತ್ತು 'ಗುಂಡಬ್ರಹ್ಮಯ್ಯಗಳ ಸಾಹಿತ್ಯ'ದಲ್ಲಿ ಶೂಲವನ್ನು ಶೃಂಗರಿಸುವಂತಹ ವರ್ಣನೆ ಮಾಡಲಾಗಿದೆ. ಗುಂಡಬ್ರಹ್ಮಯ್ಯರೆಂಬ ಶರಣರನ್ನು ಶೂಲಕ್ಕೇರಿಸಿದ ಸ್ಮರಣಾರ್ಥವಾಗಿ ಅಂದು ಆಚರಿಸುವ ಹಬ್ಬವೆ ಶೂಲದ ಹಬ್ಬವಾಗಿದೆ. 'ಆ ಕಾಲದಲ್ಲಿ ಬಂದಿತು ಶೂಲದ ಹಬ್ಬ'ವೆಂದು ಕುಮಾರರಾಮನ ಸಾಂಗತ್ಯದಲ್ಲಿ ಬರುತ್ತದೆ. ಶೂಲದ ಹಬ್ಬದ ವಿಶೇಷತೆಯನ್ನು ಕುಮಾರರಾಮ ಸಾಂಗತ್ಯ, ಗುಂಡಬ್ರಹ್ಮಯ್ಯಗಳ ಚರಿತ್ರೆ, ಗುಂಡಬ್ರಹ್ಮಯ್ಯಗಳ ಸಾಹಿತ್ಯ ಕೃತಿಗಳು ಸಂಪೂರ್ಣವಾಗಿ ತಿಳಿಸುತ್ತವೆ. "ಗಿರಿದುರ್ಗದಲ್ಲಿ ಶೂಲಗಳು ಮೆರೆದವು"[೧] ಎಂಬ ಪ್ರಸ್ತಾಪ ಕುಮಾರರಾಮನ ಸಾಂಗತ್ಯದಲ್ಲಿ ಬರುತ್ತದೆ. ಕನ್ನಡ ಸಾಹಿತ್ಯದಲ್ಲಿ 'ಶೂಲ'ವೆಂಬ ಪದವು ಬಳಕೆಯಾಗಿರುವುದನ್ನು ಕೆಳಗಿನಂತೆ ಗಮನಿಸಲಾಗಿದೆ.

ಎರಡನೆ ಚಾವುಂಡರಾಯನ ಲೋಕೋಪಕಾರದಲ್ಲಿ ತೀವ್ರವಾದ ಕಾಯಿಲೆಗೆ ಬಿದ್ದಾಗ ಅದರ ಪರಿಣಾಮ ಹೇಗಿರುತ್ತದೆಂದು ವಿವರಿಸುವಾಗ ಶೂಲದಂತಿರುತ್ತದೆಂದು ಪ್ರಸ್ತಾಪಿಸಲಾಗಿದೆ. "ಉದಯಿಸುಗುಂ ಶೂಲಂ ವಾತದಿನುರಿಪಂ ಪಿತ್ತದೇಜ್ಜೆಯಿಂ"[೨] ಎಂಬ ಮಾತು ಬರುತ್ತದೆ. ಒಂದನೆ ನಾಗವರ್ಮನ 'ಕಾವ್ಯಾವಲೋಕನ'ದಲ್ಲಿ "ಶರಶೂಲಚಾಪಚಕ್ರಾಸಿ ರೂಪಮಿ ಭರಥತುರಂಗ ಪದಗತಪಾಠ ಮುರಜಂ ಗೋಮೂತ್ರಿಕೆ ಪುಷ್ಕರಮರ್ಧಭ್ರಮಣಸರ್ವತೋಭದ್ರಂಗಳ್"[೩] ಎಂಬ ಪ್ರಸ್ತಾಪ ಬರುತ್ತದೆ. ಹೊಸ ಕುಮಾರರಾಮನ ಸಾಂಗತ್ಯದಲ್ಲಿ ಶೂಲದ ಹಬ್ಬ ಸಂದರ್ಭದಲ್ಲಿ "ಇತ್ತ ಶೂಲಗಳು ಶೃಂಗಾರವಾಗಿ ಮೆರೆದವು ಮೊತ್ತದ ಜನ ನೆರೆದಿರಲು"[೪] ಎಂದು ವಿವರಿಸಲಾಗಿದೆ. ವಡ್ಡಾರಾಧನೆಯಲ್ಲಿ "ಭಗಂದರಂ ಕುಷ್ಠಕ್ಷಯ ಗಂಡ ಶಿರೋವೇದನೆ ಮೊದಲಾಗೊಡೆಯ ವೇಮಿನೂಱುವ್ಯಾಧಿಗಳೊರ್ಮಾದಲೆ ಮೆಯ್ಯಳ್ ಪುಟ್ಟಿದೊಡೆ"[೫] ಎಂದು ಪ್ರಸ್ತಾಪಿಸಲಾಗಿದೆ. ಹೀಗೆ ಕನ್ನಡ ಸಾಹಿತ್ಯದ ವಿವಿಧ ಕೃತಿಗಳಲ್ಲಿ ಶೂಲವೆಂಬ ಪದವು ವಿಶೇಷವಾಗಿ ಬಳಕೆಗೊಂಡಿದೆ.

ಶೂಲವೇರಿದವರು

ಸಾಮಾನ್ಯವಾಗಿ ಶೂಲಕ್ಕೆ ಏರಿಸುವುದು ಎಂದರೆ ಅಪರಾಧ ಮಾಡಿದರ ಫಲವಾಗಿ ತಕ್ಕ ಶಿಕ್ಷೆ ಅನುಭವಿಸುವುದು ಎಂದು ಭಾವಿಸಲಾಗಿದೆ. ಆದರೆ ಶೂಲಕ್ಕೇರಿದವರ ಕಥೆಗಳನ್ನು ಓದಿದರೆ, ಈ ಬಗೆಯ ಸಾವು ಅತಿ ಪವಿತ್ರವೆಂದು ಪರಿಗಣಿಸಲ್ಪಡುತ್ತದೆ. ಕನ್ನಡ ಕಾವ್ಯ-ಪುರಾಣಗಳಲ್ಲಿ ಹಲವಾರು ಶರಣರು, ವ್ರತನಿಷ್ಠರು ತಾವು ನಂಬಿದ ತತ್ವ-ಸಿದ್ಧಾಂತಗಳಿಗಾಗಿ ಶೂಲವೇರಿದ್ದಾರೆ. ಬಹುತೇಕವಾಗಿ ಇಂತಹ ಶಿಕ್ಷೆ ಸಾಮಾನ್ಯ ಅಪರಾಧಿಗಳಿಗೆ ದೊರಕದೆ, ಕೆಲವು ಸತ್ಯ-ನಿಷ್ಠರಿಗೆ ಅನಿರೀಕ್ಷಿತವಾಗಿಯೊ, ದೈವ ಸಂಕಲ್ಪದಿಂದಲೊ ಒದಗಿದೆ. ಶೂಲವೇರುವ ಮೂಲಕ ದೈವೀ ಸ್ವರೂಪ ಪಡೆದುಕೊಂಡರು. ಇದರಿಂದ ಅಧ್ಯಯನಕಾರರಿಗೆ ಆಕರ ಸಾಮಾಗ್ರಿಯಾಗಿದ್ದಾರೆ. ಶೂಲಕ್ಕೇರಿದವರಲ್ಲಿ ಗುಂಡಬ್ರಹ್ಮಯ್ಯರದು ಒಂದು ಬಗೆಯ ವ್ರತವಾದರೆ, ಇನ್ನುಳಿದವರದು ಮತ್ತೊಂದು ರೀತಿಯ ವ್ರತವಾಗಿದೆ. ತಮ್ಮ ಅಪರಾಧಕ್ಕಾಗಿ ಅನ್ಯರನ್ನು ಬಲಿಕೊಡುವ ಪ್ರಸ್ತುತ ದಿನಮಾನಗಳಲ್ಲಿ ತಮ್ಮ ತತ್ವ-ಸಿದ್ಧಾಂತಗಳಿಗಾಗಿ ಶೂಲಕ್ಕೇರಲೂ ಹಿಂಜರಿಯದೆ, ಶರಣಾಗತರನ್ನು ರಕ್ಷಣೆ ಮಾಡುವರು. ಶರಣು ಬಂದವರನ್ನು ಕಾಪಾಡುವುದರಲ್ಲಿ ಶರಣರಿಗೆ ಶಿವಲಿಂಗದ ಸುಖವಿದೆ. ಆದ್ದರಿಂದ ಕೆಳಗಿನ ಪುರಾತನರು-ನೂತನರು ವಿವಿಧ ಕಾರಣಗಳಿಗಾಗಿ ಶೂಲವೇರಿದವರನ್ನು ಕಾಣಲಾಗಿದೆ.

ಅಣಿಮಾಣ್ಡವ್ಯ

ಈತನು ಒಬ್ಬ ಮುನಿಯಾಗಿದ್ದಾನೆ. ತಪೋಮಗ್ನನಾದಾಗ ಕಳ್ಳರು ಬಂದು ಇವನ ಆಶ್ರಮದಲ್ಲಿ ಮರೆಹೊಕ್ಕರು. ನಂತರ ರಾಜಭಟರು ಬಂದು ಕಳ್ಳರ ಜಾಡನ್ನು ಕೇಳಿದರು. ಈ ಮುನಿಯು ಮೌನವಹಿಸಿದ ಕಾರಣ ಈತನನ್ನು ರಾಜನಲ್ಲಿಗೆ ಎಳೆದೊಯ್ದರು. ನಂತರ ಅಣಿಮಾಣ್ಡವ್ಯನನ್ನು ಶೂಲಕ್ಕೇರಿಸಲಾಯಿತು. ನಂತರ ರಾಜನಿಗೆ ಪಶ್ಚಾತಾಪವಾಗಿ ಓಡಿಬಂದು ಶೂಲದಿಂದ ಇಳಿಸಿ, ತನ್ನನ್ನು ಮನ್ನಿಸುವಂತೆ ಕೇಳಿದನು.[೬]

ಶೂಲದ ಬೊಮ್ಮಯ್ಯ

ಗುಂಡಬ್ರಹ್ಮಯ್ಯ ಮತ್ತು ಶೂಲದ ಬ್ರಹ್ಮಯ್ಯರು ಭಿನ್ನರಾಗಿದ್ದಾರೆ. ಗಣಸಹಸ್ರ ನಾಮಾವಳಿಯಲ್ಲಿ ೧೩೩ನೆಯ ಹೆಸರು ಗುಂಡಬ್ರಹ್ಮಯ್ಯದಾಗಿದ್ದರೆ, ೨೨೦ನೆಯದು ಶೂಲದ ಬ್ರಹ್ಮಯ್ಯನದಾಗಿದೆ. ಶೂಲದ ಬ್ರಹ್ಮನ ಕಥೆ ಮತ್ತು ಗುಂಡಬ್ರಹ್ಮಯ್ಯರ ಕಥೆ ಸಾದೃಶ್ಯವೆನಿಸುತ್ತಿದ್ದರೂ ಇವರಿಬ್ಬರ ಕಾಲ, ದೇಶ, ಜೀವನ ಸಂಗತಿಗಳು ಬೇರೆ ಬೇರೆಯಾಗಿವೆ. ಶೂಲದ ಬೊಮ್ಮಯ್ಯನು ಬಸವಣ್ಣನವರ ಕಾಲದಲ್ಲಿದ್ದನು. ಈತನ ವೃತ್ತಾಂತವಿಂತಿದೆ.

ಬಿಜ್ಜಳನ ಸಾಮಾಂತನಾದ ಪನ್ನಾತಪುರದ ಗರುಡರಾಜನ ಮನೆಯ ರತ್ನಾಭರಣಗಳನ್ನು ರಾಯನಾಥನೆಂಬುವನು ಕಳ್ಳತನ ಮಾಡಿದನು. ನಂತರ ಅವನು ಜಂಗಮನಾದ ಬ್ರಹ್ಮಯ್ಯನ ಮನೆಯಲ್ಲಿ ಗೌಪ್ಯವಾಗಿ ತಂದಿರಿಸುತ್ತಾನೆ. ರಾಜಭಟರು ಬಂದು ಶೋಧಿಸಿದಾಗ ಬ್ರಹ್ಮಯ್ಯನ ಮನೆಯಲ್ಲಿ ದೊರೆಯುತ್ತವೆ. ಇದರಿಂದ ಅಪರಾಧ ಇವನ ತಲೆಗೆ ಬರುತ್ತದೆ. ಬಿಜ್ಜಳನು ಬಸವಣ್ಣನವರ ಸಮಕ್ಷಮದಲ್ಲಿ ಬ್ರಹ್ಮಯ್ಯನಿಗೆ ಶೂಲದ ಶಿಕ್ಷೆ ವಿಧಿಸುತ್ತಾನೆ. ನಿರಪರಾಧಿಯಾದ ಬ್ರಹ್ಮಯ್ಯನಿಗೆ ಶೂಲ ನೆಡುವುದೇ ಇಲ್ಲ. ಅಂದಿನಿಂದ

ಬ್ರಹ್ಮಯ್ಯನಿಗೆ ಶೂಲದ ಬ್ರಹ್ಮಯ್ಯನೆಂಬ ಹೆಸರು ಪ್ರಾಪ್ತವಾಗುತ್ತದೆ. ಇವನು ಕಲ್ಯಾಣದಲ್ಲಿಯೇ ಇದ್ದು ಕಲ್ಯಾಣಕ್ರಾಂತಿಯಾದ ಮೇಲೆ ಬಿಜ್ಜಳನ ಸೈನ್ಯದೊಡನೆ ಹೋರಾಡುತ್ತ, ಶರಣರೊಡನೆ ಉಳುವಿಗೆ ಬಂದು ಅಲ್ಲಿಯೆ ಲಿಂಗೈಕ್ಯನಾಗುವನು.[೭]

ಗುರುಭಕ್ತ

ಈತನು ಅಮರಗುಂಡದ ಮಲ್ಲಿಕಾರ್ಜುನ ಪಂಡಿತಾರಾಧ್ಯನ ಮೆಚ್ಚಿಗೆಯ ಶಿಷ್ಯ. ಒಮ್ಮೆ ಈತನು ಗುರುವಿನ ಮಂಚವನೇರಿ ಶಿಷ್ಯರಿಗೆ ಪಾಠಮಾಡುತ್ತಿರಲು ಶಿಷ್ಯರೆಲ್ಲ ಅಸೂಯೆಪಟ್ಟರು. ಪಂಡಿತಾರಾಧ್ಯರು ಈತನಲ್ಲಿದ್ದ ಗುರುಭಕ್ತಿಯನ್ನು ತೋರಿಸಲು ಮಂಚದ ಬಳಿಯಲ್ಲಿದ್ದ ಶೂಲವನ್ನೇರಲು ಹೇಳಿದರು. ಗುರುಭಕ್ತನು ಶೂಲವೇರಿದಾಗ ಶೂಲದ ಮೊನೆ ತಲೆಯಿಂದ ಪಾರಾಯಿತು. ಇಳಿಯಲು ಹೇಳಿದಾಗ ಶೂಲದ ಮೊನೆಯಿಂದಲೆ ಕೆಳಗಿಳಿದನು. ಆದರೂ ಶೂಲವು ಅವನನ್ನು ಭೇದಿಸದೇ ಹೋಯಿತು.[೮]

ಕನ್ನದ ಮಾರಯ್ಯ

ಬಿಜ್ಜಳನ ಅರಮನೆಗೆ ಕನ್ನಹಾಕಿದ ಮಾರಯ್ಯ ಸಿಕ್ಕುಬಿದ್ದು ಶೂಲಕ್ಕೇರಿದ. ಭಕ್ತಾಭಿಮಾನಿಯಾದ ಬಸವಣ್ಣ ಇವನನ್ನು ಮರಳಿ ತಾರೆನಲು 'ಶಿವನಿಗರ್ಪಿಸಿದ ದೇಹ ಇನ್ನು ಬರಲಾರದು' ಎಂದು ಹೇಳಿದ. ಇದರಿಂದ ಮಾರಯ್ಯನ ಬಿನ್ನವಿಲ್ಲದ ಬಕ್ತಿಗೆ ಬಸವಣ್ಣ ಮೆಚ್ಚಿಕೊಂಡ.[೯]

ತುಳುವ ಚಂಡಿಗ

ಈತನು ಬಳ್ಳಿಗಾವಿಯ ಪಾಳೆಗಾರನಾಗಿದ್ದನು. ದಾನಕ್ಕಾಗಿ ಒಮ್ಮೆ ಎತ್ತಿದ ಕೈಯನ್ನು ಹಿಂದೆ ತೆಗೆದುಕೊಳ್ಳುವುದಿಲ್ಲವೆಂದು ಪ್ರತಿಜ್ಞೆ ತೊಟ್ಟಿದ್ದನು. ಅವನು ಬಿಟ್ಟ ಒಂದು ದತ್ತಿಯನ್ನು ಆಕ್ಷೇಪಿಸಿ ಕದಂಬ ಸತ್ಯಾಶ್ರಯದೇವನು ದತ್ತಿ ಹಿಂತೆಗೆದುಕೊಳ್ಳಬೇಕೆಂದೂ ಇಲ್ಲವಾದರೆ ದತ್ತಿಯನ್ನು ಧಾರೆಯೆರೆದು ಕೊಟ್ಟ ಕೈಯನ್ನು ಕತ್ತರಿಸುವುದಾಗಿ ಆಜ್ಞಾಪಿಸಿದನು. ತುಳುವ ಚಂಡಿಗನು 'ಪ್ರಾಣತ್ಯಾಗ ಮಾಡುತ್ತೇನೆ. ಆದರೆ ಭಾಷೆಗೆ ತಪ್ಪಲಾರೆ'ನೆಂದು ಹೇಳಿ, ಬೇರುಂಡೇಶ್ವರ ಸ್ಥಂಭದ ಮೇಲೆ ನಿಂತು ಏಳು ಶೂಲಗಳನ್ನು ರಚಿಸಿ ಅದರ ಮೇಲೆ ಬಿದ್ದನು.[೧೦]

ಕುಳಶ್ಚರ್ರ್ಯ

ಈತನು ಕೂನಪಾಂಡ್ಯ ಅರಸನ ಮಂತ್ರಿಯಾಗಿದ್ದನು. ಕುಳಶ್ಚರ್ರ್ಯನು ಜೈನರೊಡನೆ ಸ್ಪರ್ಧಿಸಿ ವೀರಶೈವ ಮತೋತ್ಕರ್ಷಕ್ಕೆ ಕಾರಣರಾದರು. ಜೈನ, ವೀರಶೈವ ಪರವಾದ ಮಂತ್ರಗಳನ್ನು ಬರೆದ ಓಲೆಗಳನ್ನು ಹೊಳೆಯಲ್ಲಿ ಹರಿಬಿಟ್ಟು, ಶಿವಮಂತ್ರದ ಓಲೆಗಳನ್ನಷ್ಟೇ ಮೇಲೆತ್ತಿಕೊಳ್ಳುವಲ್ಲಿ ಇವನಿಗೆ ಎದುರಾಳುಗಳಾಗಿ ಬಂದ ೧೨೦೦ ಜೈನರನ್ನು ಶೂಲಕ್ಕೇರಿಸಿದನು. ಈತನ ಸಮಯಾಭಿಮಾನಕ್ಕೆ ಮೆಚ್ಚಿ ಶಿವನು ಗಣಪದವಿಯನ್ನಿತ್ತನು.[೧೧] ಹೀಗೆ ವಿವಿಧ ರೀತಿಯಲ್ಲಿ ಶರಣರು ಶೂಲವೇರಿರುವುದನ್ನು ತಿಳಿಯಲಾಗಿದೆ. ಗುಂಡಬ್ರಹ್ಮಯ್ಯಗಳ ವೀರವ್ರತಗಳಿಗೂ ಇವರ ವ್ರತ-ಸಿದ್ಧಾಂತಗಳಿಗೆ ಅಲ್ಪ ವ್ಯತ್ಯಾಸವಿದೆ. ಆದರೆ ಇವರೆಲ್ಲರೂ ಸೇರುವ ಮಹಾಮಾರ್ಗ ಒಂದೇ ಆಗಿದೆ. ಶೂಲವೇರಿದವರ ಕಥೆಗಳಲ್ಲಿ ಗುಂಡಬ್ರಹ್ಮಯ್ಯಗಳದ್ದು ವಿಶೇಷವಾಗಿದೆ.

ಇವರೆಲ್ಲರಿಗಿಂತಲೂ ಗುಂಡಬ್ರಹ್ಮರು ನಮಗೆ ಶ್ರೇಷ್ಠವಾಗಿ ತೋರುತ್ತಾರೆ. ವಾಸ್ತವದ ಬದುಕಿಗೆ ಶರಣರ ತತ್ವ, ಆದರ್ಶ, ಮೌಲ್ಯಗಳು ಮಾದರಿಯಾಗಿವೆ. ನಿಜದ ನೆಲೆಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಭಕ್ತಿಮಾರ್ಗವನ್ನು ತೋರಲಾಗಿದೆ.

ಮೊರೆಹೊಕ್ಕವರನ್ನು ಕಾಪಾಡಿದವರು

ಗುಂಡಬ್ರಹ್ಮಯ್ಯಗಳಂತೆ ಶೂಲಕ್ಕೇರಿದವರು ಹಲವರಿದ್ದಾರೆ, ಅವರಂತೆ ಮೊರೆಹೊಕ್ಕವರನ್ನು ಕೊಡೆನೆಂದು ಭಾಷೆ ತೊಟ್ಟ ಕಲಿಗಳು ಕೆಲವರಿದ್ದಾರೆ. ಶರಣು ಬಂದವರನ್ನು ರಕ್ಷಣೆ ಮಾಡುವುದೆಂದರೆ, ಶಿವನ ಕಾರ್ಯನಿರ್ವಹಿಸಿದಂತೆ ಎಂದು ನಂಬಿದವರಾಗಿದ್ದಾರೆ. ಆದ್ದರಿಂದ ವ್ರತನಿಷ್ಠರು ಅನ್ಯರ ತಪ್ಪಿಗಾಗಿ ತಾವು ಶಿಕ್ಷೆಗೆ ಒಳಗಾಗಿ ಶಿವನ ಸಾನಿಧ್ಯವನ್ನು ಪಡೆದಿದ್ದಾರೆ. ಮುಖ್ಯವಾಗಿ ಇಲ್ಲಿ ಶಿಬಿಚಕ್ರವರ್ತಿಯ ಕಥೆಯನ್ನಿಲ್ಲಿ ಕಾಣಲಾಗಿದೆ. ಶಿಬಿರಾಯನ ಯಕ್ಷಪರೀಕ್ಷೆ ಮಾಡಲೆಂದು ಒಮ್ಮೆ ಇಂದ್ರನು ಗಿಡುಗನಾಗುತ್ತಾನೆ. ಬ್ರಹ್ಮನು ಪಾರಿವಾಳವಾಗಿ ಬಂದು ಶಿಬಿಯ ಮೊರೆಹೋಗುತ್ತಾನೆ. ವಿಷ್ಣು ಬೇಟೆಗಾರನಾಗಿ ಬಂದು ಪಾರಿವಾಳವನ್ನು ತನಗೆ ಒಪ್ಪಿಸಬೇಕೆಂದು ಕೇಳಿದರೆ, ಶಿಬಿಯು ಅದರ ತೂಕದಷ್ಟು ತನ್ನ ದೇಹದ ಮಾಂಸವನ್ನಿತ್ತು ಕೀರ್ತಿಕಾಯನಾಗುತ್ತಾನೆ.[೧೨]

ಮೊರೆಹೊಕ್ಕ ಶರಣರನ್ನು ಕೊಡೆನೆಂಬ ಭಾಷೆಯಿಂದಿದ್ದ ದೇವಯ್ಯಗಳನ್ನು ಒಮ್ಮೆ ಒರ್ವ ಭಕ್ತ ಕಳ್ಳತನ ಮಾಡಿ ಮೊರೆಹೋಗುತ್ತಾನೆ. ಕಳ್ಳನನ್ನು ಬಿಡಲು ಕೇಳಿದಾಗ ದೇವಯ್ಯ ತನ್ನ ಮೈದೊಗಲನ್ನು ಸುಲಿದಿತ್ತು ಅಮರ ಪದವಿ ಪಡೆಯುತ್ತಾನೆ.[೧೩] ಓರಂಗಲ್ಲು ಯಾದಲೂರಲ್ಲಿದ್ದ ಅನ್ನಮರಾಜ ಕೊಲೆಗಾರನಾದ ಓರ್ವ ಜಂಗಮನಿಗೆ ಆಶ್ರಯ ಕೊಟ್ಟು, ಜಂಗಮ ತೀರಲು ತಾನೂ ಕೂಡ ಪ್ರಾಣಬಿಟ್ಟು ಶಿವಕೃಪೆ ಪಡೆದನೆಂದು ತಿಳಿದು ಬರುತ್ತದೆ.[೧೪] ಸಾಮಾನ್ಯವಾಗಿ ರಾಜ ಮಹಾರಾಜರು 'ಶರಣಾಗತ ವಜ್ರಪಂಜರ'ವೆಂಬ ಬಿರುದನ್ನು ಧರಿಸಿಕೊಂಡಿದ್ದಾರೆ. "ರಾಷ್ಟ್ರಕೂಟರ ಗೊಜ್ಜಿಗ 'ಶರಣಾಗತರನೆಯ್ದೆ ಕಾಯುವ ವೀರನೆಂದು" ತಿಳಿಯುತ್ತದೆ. ಹೊಯ್ಸಳ ವಿಷ್ಣುವರ್ಧನ 'ಶರಣಾಗತ ವಜ್ರಪಂಜರ, ನುಡಿದಂತೆ ಗಂಡನೆಂದು ಪ್ರಸಿದ್ಧನಾಗಿದ್ದಾನೆ. ವೀರಬಲ್ಲಾಳನು ಶರಣಾಗತವಾರ್ದಿ"[೧೫] ಎಂದು ತಿಳಿಯಲಾಗಿದೆ.

ಮುಖ್ಯವಾಗಿ ಅರಸರಿಗೆ ಈ ಬಿರುದು ಅನ್ವರ್ಥಕವಾಗಿದೆ. ಇದನ್ನು ಗುಂಡಬ್ರಹ್ಮಯ್ಯರಂತ ಶರಣರೂ ಧರಿಸಿರುವುದು ಅವರ ವೀರತ್ವದ ಪ್ರತೀಕವಾಗಿದೆ. ಗುಂಡಬ್ರಹ್ಮಯ್ಯಗಳಂತೂ ಇದೇ ಬಿರುದಿನಿಂದ ಪ್ರಸಿದ್ಧರಾಗಿದ್ದಾರೆ. ಇದರ ಮೇಲಿಂದ ಇವರ ನೀತಿ ಅರಸರಿಗೂ ಕೂಡ ಆದರ್ಶಪ್ರಾಯವಾಗಿ ತೋರಿದುದು ಮಹತ್ವಪೂರ್ಣವಾಗಿದೆ.

ಶೂಲದ ಆಚರಣೆ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶೂಲದ ಆಚರಣೆಯು ವಿಶಿಷ್ಟವಾಗಿದೆ. ಗುಂಡಬ್ರಹ್ಮಯ್ಯಗಳು ಶೂಲಕ್ಕೇರಿದ ನಂತರ ಅವರು ಏರಿದ ಶೂಲವನ್ನು ಭಕ್ತಿಭಾವದಿಂದ ಪೂಜಿಸುವ ಮತ್ತು ಶೂಲದ ಹಬ್ಬವನ್ನು ಆಚರಿಸುವ ವೀರಪರಂಪರೆ ಮುಂದುವರೆಯಿತು. ಕರ್ನಾಟಕದಲ್ಲಿ ಗುಂಡಬ್ರಹ್ಮಯ್ಯರ ಹೆಸರಿನಲ್ಲಿ ಶೂಲದ

ಹಬ್ಬವನ್ನು ಆಚರಿಸಿದ ಕೀರ್ತಿ ಕುಮಾರರಾಮನಿಗೆ ಸಲ್ಲುತ್ತದೆ. ಈಗಾಗಲೇ ಚರ್ಚಿಸಿದಂತೆ ಗುಂಡಬ್ರಹ್ಮಯ್ಯಗಳು ತಮ್ಮ ತತ್ವ-ಸಿದ್ಧಾಂತಗಳಿಗೆ ಕಟ್ಟುಬಿದ್ದು ಮೊರೆಹೊಕ್ಕವರನ್ನು ರಕ್ಷಣೆ ಮಾಡುವ ಕಾರ್ಯ ಕೈಗೊಂಡರು. ಇದರಿಂದ ಮುಂದೆ ಶೂಲಕ್ಕೇರುವ ಪ್ರಸಂಗ ಉಂಟಾಯಿತು. ಗುಂಡಬ್ರಹ್ಮಯ್ಯರು ಶೂಲವೇರಿದ ಕಾರಣವಾಗಿ ಇವುಗಳನ್ನು ಭಕ್ತಿ-ಭಾವದಿಂದ ಕಾಣಲಾಗುತ್ತಿದೆ. ಈ ಶೂಲಗಳನ್ನು ತಯಾರಿಸುವ ಬಗೆಯನ್ನು 'ಗುಂಡಬ್ರಹ್ಮಯ್ಯಗಳ ಸಾಹಿತ್ಯ'ದಲ್ಲಿ ಕಾಣಲಾಗಿದೆ. ಕದ್ದ ಕಳ್ಳರನ್ನು ಬಿಡಲು ಒಪ್ಪದೆ 'ಅರಸುತನಕೆ ಮುಂದೆ ಹರುಷ ಬರುವ ಹಾಗೆ ತರಿಸಿ ಶೂಲಗಳನ್ನು ನೆಡಿಸಯ್ಯ' ಎಂದು ಗುಂಡಬ್ರಹ್ಮಯ್ಯಗಳು ನುಡಿದರು. ಮೊರೆಹೊಕ್ಕ ಕಳ್ಳರನ್ನು ಬಿಟ್ಟುಕೊಡದಿದ್ದಾಗ ಗಣಪತಿರಾಯನು ಇವರಿಗೆ ಶೂಲದ ಶಿಕ್ಷೆ ವಿಧಿಸುವನು. ನಂತರ ಶೂಲದ ಕಂಬವನ್ನು ತಯಾರಿಸಲು ಆದೇಶ ನೀಡುವನು. ಮಂತ್ರಿಗಳು ಶೂಲವನ್ನು ತಯಾರಿಸಲು ಸಿದ್ಧತೆ ನಡೆಸಿರುವುದನ್ನು ಕೆಳಗಿನಂತೆ ಕಾಣಲಾಗಿದೆ.

"ಪಂಚಾಳ ಬಡಗಿಯ ಸಂಚು ವೇಗದಿ ಕರಸಿ
ಕಂಚಿನ ಹಿಡಿಯ ಉಳಿ ಕೊಡತಿ|| ಬಾಚಿಯ ತೆಕ್ಕೊಂಡು
ಪಂಚಾಳ ಬಂದ ತವಕದಲಿ

ಬಂದನು ಪ್ರಧಾನ ನಂದನ ವನಕಾಗಿ ಶ್ರೀ
ಗಂಧದ ಮರನ ಕಡಿಸಿದಾಗ || ಮೇಲಕ್ಕೆ
ಚಂದ ಮಾಡಿದರು ಹಲಗೇಯಾ"[೧೬]

ಬಡಗಿಯನ್ನು ಬೇಗನೆ ಕರೆತಂದು ಶೂಲವನ್ನು ತಯಾರಿಸುವಂತೆ ಹೇಳಿದರು. ಪಂಚಾಳ ಬಡಗಿಯು ಕಂಚಿನ ಹಿಡಿಯ ಉಳಿ, ಕೊಡತಿ, ಬಾಚಿಯನ್ನು ತೆಗೆದುಕೊಂಡು ತವಕದಲಿ ಬಂದನು. ಶೂಲಕ್ಕಾಗಿ ಶ್ರೀಗಂಧದ ಮರವನ್ನು ಕಡಿಸಲಾಯಿತು. ಬಡಗಿಯು ಶ್ರೀಗಂಧದ ಮರವನ್ನು ಕೆತ್ತಿ, ತೀಡಿ ಶೂಲಗಳನ್ನು ತಯಾರಿಸಿದನು. ಶ್ರೀಗಂಧದ ಮರವು ರೂಪ ಬದಲಾವಣೆಯಿಂದ ಪವಿತ್ರವಾಯಿತು. ಕಲ್ಲು ಶಿಲೆಯಾಗುವಂತೆ, ಮರವು ಶೂಲವಾಯಿತು. ಇದರಿಂದ ಶೂಲಗಳಿಗೆ ಮುಕ್ತಿಯ ಮಾರ್ಗ ದೊರೆತಂತಾಯಿತು. ಗುಂಡಬ್ರಹ್ಮಯ್ಯಗಳಿಗಾಗಿ ಶೂಲಗಳು ನಲಿಯುವುದನ್ನು ಕೆಳಗಿನಂತೆ ಕಾಣಲಾಗಿದೆ.

"ಸತ್ಯರು ಶರಣರಿಗೆ ಎತ್ತಿ ನಡೆಸಿದ ಶೂಲ
ಮುಕ್ತಿ ಫಲ ಪದವಿ ದೊರಕಿದೋ || ಶರಣರ
ಚಿತ್ತವ ಹರಸಿ ನಲಿದಾವೂ

ಫಲವುಳ್ಳ ಶರಣರಿಗೆ ನೆಡುವ ಶೂಲಕ್ಕೆಂದು
ಅನುಕೂಲವಾದೆವೆಂದು ನಲಿದರು|| ಶರಣರಿಗೆ
ಗೆಲುವ ಹರಸಿ ನಲಿದಾವೂ

ಆಯವಾದವು ಶೂಲ ಜಾಯವಾದವು ಶೂಲ
ಆಯಪಾಯದಲಿ ನಲಿದಾವು|| ಗುಂಡಬ್ರಹ್ಮಯ್ಯಗಳ
ಕಾಯವ ಬೇಡಿ ನಲಿದಾವೂ"[೧೭]

ಹೀಗೆ ಶೂಲಗಳು ಗುಂಡಬ್ರಹ್ಮಯ್ಯಗಳ ಕಾಯವ ಬೇಡಿ ನಲಿಯುತ್ತವೆ. ಮುಕ್ತಿಯ ಫಲ ದೊರಕುವುದೆಂದು ಶರಣರ ಚಿತ್ತವ ಹರಸಿ ನಲಿದವು. ತಾವು ಇನ್ನೊಬ್ಬರಿಗೆ ಅನುಕೂಲವಾದೆವು ಎಂದು, ಗುಂಡಬ್ರಹ್ಮಯ್ಯಗಳ ಗೆಲುವನು ಹರಸಿ ನಲಿದವು. ಶರಣರ ಶಿವಭಕ್ತಿಗೆ ತಾವೂ ಸಾಕ್ಷಿಯಾದೆವಲ್ಲ ಎಂಬ ಭಾವ ಶೂಲಗಳದ್ದು. ತೆಂಗಿನ ಮರದಂತೆ ಶೂಲಗಳು ನಿಂತಿದ್ದವು. ಅಡಕೆಯ ಮರದಂತೆ ತೊಡಕಿದವು. ಇವುಗಳನ್ನು ನಿಲ್ಲಿಸಿದ ಬಳಿಕ ವಸ್ತ್ರ ಅಲಂಕಾರಗಳಿಂದ ಶೃಂಗರಿಸಲಾಯಿತು. ಹಳದಿ, ಹಸಿರು, ಕೆಂಪು ಮೊದಲಾದ ಸೀರೆಗಳನ್ನು ಬಳಸಿ ಶೂಲಕ್ಕೆ ಬಿಗಿದರು. ಇದರಿಂದ ಎರಡೂ ಶೂಲಗಳು ಅಂದವಾಗಿ ಶೋಭಿಸಿದವು. ಗುಂಡಬ್ರಹ್ಮಯ್ಯಗಳನ್ನು ಕೈಮಾಡಿ ಕರೆಯುವಂತೆ ತಳಿರು-ತೋರಣಗಳಿಂದ ಶೃಂಗರಿಸಲಾಗಿತ್ತು.

ಇತ್ತ ಗುಂಡಬ್ರಹ್ಮಯ್ಯಗಳು ವೀರ ಜಡೆಗಳ ಕಟ್ಟಿದರು. ಗಂಧ ಭಸಿತವ ಬಳಿದುಕೊಂಡು, ಕೊರಳಲ್ಲಿ ರುದ್ರಾಕ್ಷಿಯ ಧರಿಸಿ, ಶಿವಪೂಜೆಯ ಕೈಗೊಂಡರು. ಅಂಗೈಯಲ್ಲಿ ಲಿಂಗವ ಹಿಡಿದಿದ್ದರು. ಶಿವನಲ್ಲಿ ಅಚಲ ನಿಷ್ಠೆ ಹೊಂದಿದ್ದರಿಂದ ತಮ್ಮ ವ್ರತಕ್ಕಾಗಿ ಜೀವದ ಹಂಗು ತೊರೆದಿದ್ದಾರೆ. ತನು-ಮನವನ್ನು ಶಿವನಿಗಾಗಿ ಮೀಸಲಿರಿಸಿದ್ದಾರೆ. ಆದ್ದರಿಂದ ಶೂಲಕ್ಕೇರುವ ಸಂದರ್ಭ ಒದಗಿದರೂ ಅವರ ಚಿತ್ತ ವಿಚಲಿತವಾಗಲಿಲ್ಲ. ಇವರು ಶೂಲಕ್ಕೇರುವ ಸುದ್ದಿ ಕೇಳಿದ ಊರಿನ ಜನರೆಲ್ಲ ಸಾಗರದಂತೆ ಸೇರಿದರು. ಶೂಲವೇರುವ ವಿಷಯ ತಿಳಿದು ಅನ್ನ, ನೀರನ್ನು ತ್ಯಜಿಸಿದರು. ಕೆಲವು ತಾಯಿಯರು ತಮ್ಮ ಶಿಶುಗಳಿಗೆ ಹಾಲನ್ನು ಹೆರೆಯುವುದು ನಿಲ್ಲಿಸಿದರು. ಸೇರಿದ ಜನರೆಲ್ಲ ಮುಂದೆ ಏನಾಗುವುದೊ ಎಂದು ಭಯ, ಆತಂಕ, ಕುತೂಹಲದಿಂದ ನಿರೀಕ್ಷೆಯ ಭಾರ ಹೊತ್ತಿದ್ದರು. ಗುಂಡ ಬ್ರಹ್ಮಯ್ಯರಿಗೆ ಆರತಿ ಬೆಳಗಿದ ನಂತರ ಶೂಲಕ್ಕೇರಿದರು. ಆಗ ಇವರಿಗೆ ಶೂಲಗಳು ಸುಖದ ಸುಪ್ಪತ್ತಿಗೆಯಾದವು. ಪುಷ್ಪದ ಹಾಸು ಶೂಲವೆ ಮಂಚವಾಯಿತು. ಶೂಲವೇ ಸಿಂಹಾಸನ, ಸುರಲೋಕ, ಕೈಲಾಸವಾಯಿತು. ಶಿವಭಕ್ತರು ತಾವು ಶೂಲದಲ್ಲಿ ಕುಳಿತಿದ್ದರೂ ಶಿವನ ನಾಮಸ್ಮರಣೆಯಲ್ಲಿರುವುದನ್ನು ಕೆಳಗಿನಂತೆ ಕಾಣಲಾಗಿದೆ.

"ಜಾಜಿಯ ಹೂವಿಂದ ಜವನದ ಕೆನೆಯಿಂದ
ರಾಜ ಮಲ್ಲಿಗೆಯೆಸಳಿಂದಾ|| ಅರ್ಚಿಸಿದರು
ತೇಜೇಶ ಶಿವನ ಚರಣಾವ

ಪಚ್ಚೆಯ ಕೆನೆಯಿಂದ ಮೊಲ್ಲೆಯ ಮೊಗ್ಗಿಂದ
ಬೆಲ್ಲವತ್ತಾದೆಸಳಿಂದ|| ಅರ್ಚಿಸಿದರು
ಮಲ್ಲಿಕಾರ್ಜುನ ಚರಣವಾ"[೧೮]

ಹೀಗೆ ಗುಂಡಬ್ರಹ್ಮಯ್ಯಗಳು ಶಿವನ ಚರಣಕ್ಕೆ ಅರ್ಚಿಸಿದರು. ಈ ಎಲ್ಲವನ್ನು ಕಂಡು ಹರ-ನಾರದರು ಮನದಲ್ಲಿಯೇ ಇವರಿಗೆ ಹರಸುವರು. 'ನಂಬಿನೆಚ್ಚಿ ಕರೆದರೆ ಓ ಎನ್ನನೆ ಶಿವನು' ಎನ್ನುವಂತೆ ಶಿವನ ನಾಮಸ್ಮರಣೆಯೊಂದಿದ್ದರೆ ಏನನ್ನಾದರೂ ಸಾಧಿಸಬಹುದೆಂದು ತಿಳಿದಿದ್ದರು. ಗುಂಡಬ್ರಹ್ಮಯ್ಯರ ಸತಿಯರು ತಮ್ಮ ಶಿರಗಳನರಿದು ಮುಂಡದಲಿ ಆರತಿಯನ್ನು ಬೆಳಗಿದರು. ಶರಣೆಯರು ಶಿಶುಗಳ ಶಿರಗಳನರಿದು ತಂದು ಹೊನ್ನದ ಹರಿವಾಣದಲ್ಲಿ ಬೆಳಗಿದರು. ಗುಂಡಬ್ರಹ್ಮಯ್ಯರ ವ್ರತ-ನೇಮ ಹಾಗೂ ನಿಷ್ಠೆಯನ್ನು ಕಂಡು ಮೇಲಿದ್ದ ಗಂಗೆ ಇಳಿದಳು. ಅದೇ ಸಮಯದಲ್ಲಿ ಶೂಲಗಳು ಚಿಗುರಿದವು. ಹೀಗೆ ಚಿಗುರಿದ ಶೂಲಗಳನ್ನು ಕೆಳಗಿನಂತೆ ಕಾಣಲಾಗಿದೆ.

"ತಳಿರು ಮೊಗ್ಗೆಗಳಾಗಿ ಕಾಯಿ ಹಣ್ಣುಗಳಾಗಿ
ಇಳೆಯೊಳಗಾರು ಅರಿಯಾದ|| ಫಲವಾಗಿ
ಕಳಿತ ಹಣ್ಣುಗಳು ಶಿವನಿಗೆ

ಸತ್ಯ ಶರಣರಿಗೆ ಕೆತ್ತಿ ನೆಡೆಸಿದ ಶೂಲ
ಹುಟ್ಟಿ ಪಲ್ಲವಿಸಿ ಫಲವಾದೋ|| ಅವರಿಂದ ನಮ್ಮ
ಪಟ್ಟಣಕ್ಕೆ ಕೇಡು ಬರುತಿದೆ"[೧೯]

ಹೀಗೆ ಗುಂಡಬ್ರಹ್ಮಯ್ಯಗಳು ಶೂಲದ ಮೇಲೆ ಕುಳಿತ ಸಮಯದಲ್ಲಿ ಶೂಲಗಳು ಚಿಗುರಿ ಮೊಗ್ಗುಗಳಾಗಿ, ಕಾಯಿಗಳಾಗಿ, ಭೂಮಿಯ ಮೇಲೆ ಯಾರಿಗೂ ತಿಳಿಯದ ಹಣ್ಣುಗಳಾದವು. ಈ ಸಂದರ್ಭದಲ್ಲಿ ನೆರೆದ ಜನರೆಲ್ಲ ವಿಸ್ಮಯಚಕಿತರಾದರು. ನಂತರ ದೈವೀ ಪುರುಷರಾಗಿರಬೇಕೆಂದು ನಮಿಸಿದರು. ಭಕ್ತಿರಸವು ಉಂಟಾಯಿತು. ಅರಸನಿಗೆ ತನ್ನ ತಪ್ಪಿನ ಅರಿವಾಯಿತು. ಆದ್ದರಿಂದ ಇಂತಹ ವೀರ ಶರಣರಿಗೆ ಶಿಕ್ಷೆ ನೀಡಿದ್ದರಿಂದ ಪಟ್ಟಣಕ್ಕೆ ಕೇಡು ಬರುತ್ತದೆ ಎಂದು ಭಾವಿಸಿದ. ಕೇಡು ಒದಗುವ ಮುನ್ನ ಗುಂಡಬ್ರಹ್ಮಯ್ಯಗಳಿಗೆ ಬಿನ್ನಹವ ಮಾಡಿ ಎದ್ದು ಕೈ ಮುಗಿದನು. ಸತ್ಯವನ್ನು ತಿಳಿಯದೆ ಶೂಲಕ್ಕೇರಿಸಿದ್ದು ತಪ್ಪಾಯಿತೆಂದು, ತನ್ನನ್ನು ಹರಸಿರಿ ಎಂದು ಬೇಡಿಕೊಂಡನು.

ಗುಂಡಬ್ರಹ್ಮಯ್ಯಗಳೆ ಎಂದೆಂದಿಗೂ ದೈವ ನಮಗೆಂದು ರಾಜನೊಡನೆ ಪರಿವಾರವೆಲ್ಲ ವಾದ್ಯ ಧ್ವನಿಯೊಂದಿಗೆ ಹಿಂತಿರುಗಿತು. ಸ್ವಲ್ಪ ಸಮಯದ ನಂತರ ಗಣಪತಿರಾಯ ತಿರುಗಿ ನೋಡಿದನು. ಆಗ ಗುಂಡಬ್ರಹ್ಮಯ್ಯರು ಶೂಲದಲ್ಲಿರಲಿಲ್ಲ. ಬದಲಾಗಿ ಸತಿಯರೊಂದಿಗೆ ಕೈಲಾಸಕ್ಕೆ ಕರೆದೊಯ್ಯಲಾಗಿತ್ತು. ಅಂದಿನಿಂದ ವೀರಶರಣರು ಏರಿದ ಶೂಲಗಳು ಪವಿತ್ರವಾದವು. ಆದ್ದರಿಂದ ಈ ಶೂಲಗಳನ್ನು ನಿಲ್ಲಿಸಿ ವರ್ಷವರ್ಷವೂ ಹಬ್ಬವನ್ನು ಆಚರಿಸುವುದು ರೂಢಿಯಲ್ಲಿ ಬಂದಿರಬೇಕು. ನಂತರ ಇವರ ದೇವಾಲಯ ನಿರ್ಮಾಣವಾಗಿದೆ. ಕ್ರಿ.ಶ.೧೪ನೆ ಶತಮಾನದ ಪ್ರಥಮ ಪಾದದಲ್ಲಿ ಓರಂಗಲ್ಲಿನಲ್ಲಿ ಪ್ರತಾಪರುದ್ರರಾಯ ಎಂಬ ಅರಸನು ಆಳುತ್ತಿದ್ದನು. ಪ್ರತಾಪರುದ್ರನ ಮಗನಾದ ಎಪ್ಪತ್ತುರಾಜನ ಬಳಿ ಒಂದು ಲಕ್ಷ ವರಹ ಬೆಲೆ ಬಾಳುವ ಬೊಲ್ಲ ಎಂಬ ಪ್ರಸಿದ್ಧವಾದ ಕುದುರೆ ಇತ್ತು. ಕುದುರೆಯ ಸವಾರಿಯಲ್ಲಿ ಬಲುಗಟ್ಟಿಗನಾದ ಕುಮ್ಮಟ ನಗರದ ಕುಮಾರರಾಮನು ಈ ಬೊಲ್ಲ ಕುದುರೆ ಹೊಂದಲು ಆಶಿಸಿದನು.

ಹೇಗಾದರೂ ಮಾಡಿ ಕುದುರೆಯನ್ನು ತರುವೆನೆಂದು ತನ್ನ ತಂದೆ ಕಂಪಿಲರಾಯನೊಡನೆ ಪಂಥ ಮಾಡಿ ಕೆಲವು ವೀರರೊಡಗೊಂಡು ಓರಂಗಲ್ಲಿಗೆ ಪ್ರಯಾಣ ಮಾಡಿ ಗುಂಡಬ್ರಹ್ಮಯ್ಯರ ದೇವಾಲಯದ ಬಳಿ ಬೀಡುಬಿಟ್ಟನು. ಅಲ್ಲಿಯ ಸ್ಥಾನಪತಿಗಳ ಮೂಲಕ ತನ್ನ ಬರುವಿಕೆಯನ್ನು ಓರಂಗಲ್ಲಿನ ಅರಸರನಿಗೆ ಹೇಳಿಕಳುಹಿಸಿದನು. ಮಾರನೆದಿನ ಬರುವಂತೆ ಪ್ರತಾಪರುದ್ರನ ಅಪ್ಪಣೆಯಾಯಿತು. ಕುಮಾರರಾಮನು ಉದಯಕ್ಕೆ ಮುನ್ನವೆ ಎದ್ದು ಸ್ನಾನ ಮಾಡಿ ಗುಂಡಬ್ರಹ್ಮಯ್ಯಗಳನ್ನು ಧ್ಯಾನಿಸಿದನು. ನನ್ನ ತಂದೆಯು ನಿಂದಿಸಿ ಕಳುಹಿಸಿದನು. ಇಂದು ನಿಮ್ಮ ಪಾದವೇ ಗತಿ ವರವಿತ್ತು ಪಾಲಿಸೆಂದು ಬೇಡಿದನು. ಎಪ್ಪತ್ತು ರಾಜನು ಏರುವ ಬೊಲ್ಲ ಕುದುರೆ ತನ್ನ ವಶವಾದರೆ ಶೂಲದ ಹಬ್ಬವನ್ನು ಮಾಡುವೆನೆಂದು ಹರಸಿ ನಿಂತಿರಲು ಗುಂಡಬ್ರಹ್ಮಯ್ಯಗಳ ಆಶೀರ್ವಾದವಾಯಿತು. ವರ ಪಾಲಿಸಿ ಗುಂಡಬ್ರಹ್ಮಯ್ಯರು ಅದೃಶ್ಯವಾಗಲು, ಕುಮಾರರಾಮ ಸಂತೋಷಗೊಂಡು ಓರಂಗಲ್ಲಿಗೆ ಹೋದನು. ಅಲ್ಲಿ ಯುವಕುಮಾರನಾದ ಎಪ್ಪತ್ತು ರಾಜನನ್ನು ಸೋಲಿಸಿ ಬೊಲ್ಲ ಕುದುರೆಯನ್ನು ಹೊಂದಿ ಗುಂಡಬ್ರಹ್ಮಯ್ಯರ ಆಲಯಕ್ಕೆ ಬಂದು ಪ್ರಾರ್ಥನೆ ಸಲ್ಲಿಸುತ್ತಾನೆ.

ಮಾರನೆ ದಿನ ಪ್ರಯಾಣ ಮಾಡಿ ತನ್ನ ರಾಜಧಾನಿಯನ್ನು ಸೇರಿದನು. ನಂತರ ತಂದೆಯನ್ನು ಕಂಡು. 'ಶೂಲದ ಹಬ್ಬ' ಆಚರಣೆ ಮಾಡಲು ಅಪ್ಪಣೆ ಬೇಡಿದನು. ನಂತರ ತನ್ನ ತಂದೆಯಾದ ಕಂಪಿಲರಾಯನ ಅಪ್ಪಣೆ ಪಡೆದು ವಿಜೃಂಭಣೆಯಿಂದ ಶೂಲದ ಹಬ್ಬವನ್ನು ಆಚರಣೆ ಮಾಡಲು ಸಿದ್ಧತೆ ನಡೆಸಿದನು. ವಸಂತ ಋತುವಿನ ಆಗಮನದೊಂದಿಗೆ ಶೂಲದ ಹಬ್ಬ ಬಂದಿತು. ಶೂಲಗಳನ್ನು ವಿಭೂತಿ, ಮುತ್ತಿನಾಭರಣಗಳಿಂದ ಶೃಂಗರಿಸಿದರು. ಪುರಜನರೂ, ಅರಮನೆಯ ಸ್ತ್ರೀಯರು ವಸ್ತ್ರಾಭರಣಗಳನ್ನು ಧರಿಸಿ ಬಂದು ನೆರೆದರು. ಮಲ್ಲಿಗೆ, ಜಾಜಿ, ಸುರಹೊನ್ನೆ, ಸಂಪಿಗೆಯಿಂದ ಶೂಲಗಳು ಅಲಂಕಾರಗೊಂಡಿದ್ದವು. ಶೂಲದ ಹಬ್ಬವನ್ನು ಆಚರಿಸುವ ಸಮಯದಲ್ಲಿ ಶೂಲಗಳನ್ನು ಪೂಜಿಸುವುದನ್ನು ಕೆಳಗಿನಂತೆ ಕಾಣಲಾಗಿದೆ.

"ಮಿಸುನಿಯ ಚಿನ್ನದ ಪುಷ್ಪಗಳ ತಂದು
ಕುಶಲದಿ ರಾಮ ಪೂಜಿಸಲು
ಹಸನಾದ ಧೂಪದೀಪಾರತಿಗಳನಾಗ
ಪಸುಪತಿಧರಗೆ ಎತ್ತಿದರು

ದಿಟ್ಟರಾಮನು ಮಹದಾದಿಭಕ್ತಿಯೊಳಗಾ
ಸಾಷ್ಟಾಂಗವೆರಗಿ ವಂದಿಸಿ
ಕಟ್ಟು ವಾದ್ಯ ಘೋಷಣಗಳಾಗ
ಅಷ್ಟದಿಗ್ಗಜಗಳು ನಡುಗೆ

ಪಟ್ಟದರಾಣಿ ಹರಿಹರದೇವಿ ಹಂಪಾಯಿ
ನೆಟ್ಟನೇ ಮುತ್ತಿನಾರತಿಯ
ಅಷ್ಟೈಶ್ವರ್ಯದಿಂದೆತ್ತಿದರೊಲಿದಾಗ

ಕಟ್ಟುವ ವಾದ್ಯಘೋಷದಲಿ

ಕಡುಚಲ್ವೆಯಾದ ರತ್ನಾಜಿ ತಾ ನಡೆದಳು

ಸಡಗರದಲ್ಲಿ ಸಂಭ್ರಮದೀ

ಬಡನಾಡು ಬಳುಕುತಾ ಬಂದಾಗ ಎತ್ತಿದಳು

ಒಡನೆ ಮುತ್ತಿನಾರತಿಯ"[೨೦]

ಗುಂಡಬ್ರಹ್ಮಯ್ಯಗಳ ಸ್ಮರಣೆಗಾಗಿ ನಡೆದ ಶೂಲದ ಹಬ್ಬದಲ್ಲಿ ಕುಮಾರರಾಮ, ಹರಿಹರದೇವಿ, ಹಂಪಾಯಿ, ರತ್ನಾಜಿ ಮುಂತಾದವರು ಫಲಪುಷ್ಪಗಳನ್ನು ಅರ್ಪಿಸಿ ಆರತಿ ಬೆಳಗಿದರು. ಶೂಲಕ್ಕೆ ವಂದಿಸಿ ಕಾಣಿಕೆಯಿಕ್ಕುವರು. ಈ ಸಮಯದಲ್ಲಿ ಮಂಗಳವಾದ್ಯದ ಧ್ವನಿ ದಿಗಂತಕ್ಕೆ ಮುಟ್ಟುತ್ತದೆ. ಶೂಲಗಳ ಮೆರವಣಿಗೆ ನಗರದ ಪ್ರಮುಖ ಬೀದಿಗಳಿಗೆ ಸಾಗುತ್ತದೆ. ರತ್ನಾಜಿಯು ಉಪ್ಪರಿಗೆಯ ಮೇಲೆ ನಿಂತು ಶೂಲಗಳ ಮೆರವಣಿಗೆಯನ್ನು ವೀಕ್ಷಣೆ ಮಾಡುವಳು. ಹೀಗೆ ಶೂಲದ ಹಬ್ಬವನ್ನು ಕುಮಾರರಾಮನು ಗುಂಡಬ್ರಹ್ಮಯ್ಯಗಳ ಆರಾಧನೆಯ ಪ್ರತೀಕವಾಗಿ ನೆರವೇರಿಸಿದನು. ಇದರಿಂದ ಈ ಭಾಗಗಳಲ್ಲಿ ಗುಂಡಬ್ರಹ್ಮಯ್ಯಗಳ ಮಹಿಮೆ ಹರಡಿಕೊಂಡಿತು. ಆದ್ದರಿಂದ ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಗುಂಡಬ್ರಹ್ಮಯ್ಯಗಳ ಶಿಲ್ಪಗಳು ನಮಗೆ ಲಭ್ಯವಾಗಿವೆ. ಶರಣರ ಆರಾಧನೆಯ ಫಲವಾಗಿ ಶಿಲ್ಪಮಾಧ್ಯಮದ ಮೂಲಕ ಅವರನ್ನು ಚಿತ್ರಿಸಲಾಯಿತು. ಇದರಿಂದ ಈ ಶಿವಶರಣರು ವಿವಿಧ ಪ್ರದೇಶಗಳಲ್ಲಿ ಪ್ರಚಾರ ಹೊಂದಿದರು.

ಮರೆಹೊಕ್ಕವರನ್ನು ಕಾಪಾಡಿದ ಶರಣರ ಆದರ್ಶ, ಲೋಕದ ಕಲಿಗಳಿಗೆ ಆದರ್ಶಪಥವಾಗಿ ತೋರಿತು. ಕುಮಾರರಾಮನ 'ಶೂಲದ ಹಬ್ಬ' ಆಚರಣೆಯಿಂದಂತೂ ಇವರ ಐತಿಹಾಸಿಕ ಮಹತ್ವ ಇನ್ನೂ ಹೆಚ್ಚಾಯಿತು. ದೇಹತ್ಯಾಗ ಜೀವಿಗಳಾದ ಇಬ್ಬರು ಶರಣರು ಅನುಸರಿಸಿದ ಧಾರ್ಮಿಕ ಪ್ರಾಣತ್ಯಾಗ ವಿಶೇಷವಾಗಿದೆ. ಮೋಕ್ಷಕ್ಕಾಗಿ ತಮ್ಮಿಷ್ಟಕ್ಕೆ ಆತ್ಮಾರ್ಪಣೆ ಮಾಡಿಕೊಳ್ಳುವ ಏಕಾಂತ ವಿಧಾನ ಇವರದ್ದಾಗಿದೆ. ದೇಹತ್ಯಾಗವು ಜನಾಂಗದಲ್ಲಿ ಎಂತಹ ವೀರಭಕ್ತಿಯನ್ನು ಪ್ರಚೋದಿಸಿತೆಂಬುದಕ್ಕೆ ಗುಂಡಬ್ರಹ್ಮಯ್ಯರ ವೀರಮೌಲ್ಯದ ಪ್ರತಿಪಾದನೆಯಿಂದ ತಿಳಿಯಲಾಗಿದೆ. ಇದರಿಂದ ವಿವಿಧ ಭಾಗಗಳಲ್ಲಿ ಶಿವಶರಣರು ಆಚರಣೆಗೊಂಡರು. ಶೂಲದ ಹಬ್ಬವನ್ನು ಸುರಪುರದ ನಾಯಕ ದೊರೆಗಳು ಕಳೆದ ಶತಮಾನದವರೆಗೂ ಆಚರಿಸುತ್ತಿದ್ದರೆಂದು ಗೊತ್ತಾಗುತ್ತದೆ.[೨೧] ಮಂಡ್ಯ ಜಿಲ್ಲೆಯ ಅರಕೆರೆ ಗ್ರಾಮದಲ್ಲಿ ಮಾರಮ್ಮನ ಹಬ್ಬದ ಸಂದರ್ಭದಲ್ಲಿ ಶೂಲ ಆಡುವ ಸಂಪ್ರದಾಯ ಈಗಲೂ ಇರುವುದನ್ನು ಡಾ.ಎಂ.ಚಿದಾನಂದಮೂರ್ತಿ ಅವರು ಇತ್ತೀಚಿಗೆ ಪ್ರತ್ಯಕ್ಷ ಕಂಡು ವರ್ಣಿಸಿರುವರು.[೨೨] ಅಂತೆಯೆ ಧಾರವಾಡ ಜಿಲ್ಲೆಯ ಗುಂಡೇನಹಳ್ಳಿಯಲ್ಲಿ ಇವರ ದೇವಾಲಯವಿದ್ದು ಪ್ರತಿ ಶ್ರಾವಣಮಾಸದಲ್ಲಿ ಈ ವೀರರ ಉತ್ಸವ ಏರ್ಪಡುತ್ತದೆ.[೨೩]

ಹೀಗೆ ಶೂಲಗಳ ಆಚರಣೆಯಿಂದ ಗುಂಡಬ್ರಹ್ಮಯ್ಯಗಳು ಚಾರಿತ್ರಿಕ ಶರಣರು ಅಷ್ಟೇ ಅಲ್ಲ. ಬದಲಾಗಿ ಕರ್ನಾಟಕ ಮತ್ತು ಆಂಧ್ರದ ಚಾರಿತ್ರಿಕ ವೀರ ಪುರುಷರಿಗೆ ಆರಾಧ್ಯ ದೈವವಾಗಿ ನಿಂತ

ಮಹಾಪುರುಷರೆಂದು ತಿಳಿಯಲಾಗಿದೆ. ಈ ಶರಣರಿಗೆ ಸಂಬಂಧಿಸಿದ ಶಿಲಾ ವಿಗ್ರಹ, ದೇವಸ್ಥಾನ, ಮಂಟಪಗಳು, ಕತೆ, ಕಥಾನಕಗಳು, ಸ್ಥಳ-ಐತಿಹ್ಯಗಳು, ನಮ್ಮ ಚಾರಿತ್ರಿಕ ಶೋಧನೆಗೆ ಹಾಗೂ ಸಾಂಸ್ಕೃತಿಕ ಅನನ್ಯತೆಗೆ ಹೊಸ ಅಂಶಗಳನ್ನು ಒದಗಿಸಿವೆ.

ಅಡಿ ಟಿಪ್ಪಣಿಗಳು

೧. ಕುಮಾರರಾಮನ ಸಾಂಗತ್ಯ, ಸಂಧಿ ೧-೧೩.

೨. ಲೋಕೋಪಕಾರಂ, ಸಂಧಿ ೯-೩.

೩. ಕಾವ್ಯಾವಲೋಕನ, ಪುಟ ೫೬೯.

೪. ಹೊಸಕುಮಾರರಾಮನ ಸಾಂಗತ್ಯ, ಸಂಧಿ ೭-೨೧.

೫. ಗುಂಡಬ್ರಹ್ಮಯ್ಯಗಳ ಚರಿತ್ರೆ (ಸುವ್ವಿ), ಪುಟ ೧೫.

೬. ಮಹಾಭಾರತದ ಆದಿಪರ್ವ, ಸಂಧಿ ೬೪-೧೧೬.

೭. ಗುಂಡಬ್ರಹ್ಮಯ್ಯಗಳ ಚರಿತ್ರೆ (ಸುವ್ವಿ), ಪುಟ ೧೬.

೮. ಅದೇ. ಪುಟ ೧೭.

೯. ಅದೇ. ಪುಟ ೧೭.

೧೦. ಬಳಿಗಾವೆ ಕ್ಷೇತ್ರದರ್ಶನ, ಪುಟ ೨೪.

೧೧. ಗುಂಡಬ್ರಹ್ಮಯ್ಯಗಳ ಚರಿತ್ರೆ (ಸುವ್ವಿ), ಪುಟ ೧೬.

೧೨. ಅದೇ. ಪುಟ ೧೭.

೧೩. ಶಿವಶರಣರ ರತ್ನಾಕೋಶ, ಪುಟ ೯೧.

೧೪. ಅದೇ. ಪುಟ ೪೬೩.

೧೫. ಗುಂಡಬ್ರಹ್ಮಯ್ಯಗಳ ಚರಿತ್ರೆ (ಸುವ್ವಿ), ಪುಟ ೧೮.

೧೬. ಗುಂಡಬ್ರಹ್ಮಯ್ಯಗಳ ಸಾಹಿತ್ಯ, ಸಂಧಿ ೪-೧೧೮, ೧೧೯.

೧೭. ಅದೇ. ಸಂಧಿ ೪-೧೨೨.

೧೮. ಅದೇ. ಸಂಧಿ ೪-೧೭೭, ೧೭೯.

೧೯. ಅದೇ. ಸಂಧಿ ೪-೧೯೨, ೧೯೩.

೨೦. ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು, ಪುಟ ೨೭೭-೨೭೮.

೨೧. ಹರತಿಸಿರಿ, ಪುಟ ೧೧೬.

೨೨. ಜನ-ಜನಪದ-ಜಾನಪದ, ಪುಟ ೨೯೦-೩೦೫.

೨೩. ಗುಂಡಬ್ರಹ್ಮಯ್ಯಗಳ ಚರಿತ್ರೆ (ಸುವ್ವಿ), ಪುಟ ೨೦-೨೧.

ಅಧ್ಯಾಯ-ಏಳು

ಸಮಾರೋಪ

ಅಧ್ಯಾಯ-ಏಳು

ಸಮಾರೋಪ

ಗುಂಡಬ್ರಹ್ಮಯ್ಯಗಳ ಸಾಹಿತ್ಯವು ಪವಾಡ ಕಥೆಯಾಗಿದೆ. ಕನ್ನಡ ಸಾಹಿತ್ಯದಲ್ಲಿ ೧೬-೧೭ನೇ ಶತಮಾನದಲ್ಲಿ ಶಿವಶರಣರನ್ನು ದೈವತ್ವದ ನೆಲೆಗೇರಿಸಿ ಕಾವ್ಯ ರಚನೆ ಮಾಡಿದರು. ಚರಿತ್ರೆಯನ್ನು ಹಿಂದೆಸರಿಸಿ ಪವಾಡವನ್ನು ಸೃಜಿಸಿಕೊಂಡರು. ಅಂಥವರಲ್ಲಿ ಹರಿಹರ ಪ್ರಮುಖವಾಗಿದ್ದಾನೆ. ಹರಿಹರನ ನಂತರ ಬಂದ ವೀರಶೈವ ಕವಿಗಳೆಲ್ಲ ಈತನ ಮಾದರಿಯಲ್ಲೆ ಕಾವ್ಯ ರಚನೆ ಮಾಡಿದರು. ಅಂಥವರಲ್ಲಿ ಕವಿ ಚನ್ನನೂ ಒಬ್ಬನಾಗಿದ್ದಾನೆ. ಈ ಕಾವ್ಯದ ಮಾದರಿಯನ್ನು ಗಮನಿಸಿದರೆ, ಹರಿಹರನ ರಗಳೆಯ ಕಥನತಂತ್ರದ ಮಾದರಿಯೊಂದು ನಮಗೆ ನೆನಪಾಗುತ್ತದೆ. ಕೈಲಾಸದಲ್ಲಿ ಶಿವನ ಸಭೆ ನಡೆಯುವುದು, ಶಿವನೇ ಪರೀಕ್ಷೆಗೆ ಗುರಿಪಡಿಸುವುದು ನಂತರ ದೈವದಿಂದಲೇ ಅವರ ಸಂರಕ್ಷಣೆಯ ವಿಭಿನ್ನವಾದ ಆಯಾಮಗಳು ಪ್ರಕಟಗೊಳ್ಳುತ್ತವೆ. ಪ್ರತಿನಿತ್ಯ ಶರಣನೊಬ್ಬ ಅಥವಾ ಭಕ್ತನೊಬ್ಬ ದೈವದೆಡೆಗೆ ತುಡಿಯುವ ಮನಸ್ಥಿತಿಯವನಾದರೆ, ದೈವ ಭಕ್ತನಿಗೋಸ್ಕರ ಪರೀಕ್ಷೆಗೊಳಪಡಿಸಿ ಅವರ ಅಂತರಂಗದ ಜೊತೆಗೆ ಬಹಿರಂಗ ಶುದ್ಧಿಯಾಗುವಂತೆ ಮಾಡಿ ನಂತರ ಮಿಡಿಯುವ ದೈವದ ಗುಣ ನಮಗೆ ಗೋಚರವಾಗುತ್ತದೆ.

ಕೈಲಾಸದಲ್ಲಿ ತಪ್ಪು ಮಾಡಿ ಭೂಮಿಗೆ ಬಂದು ಶಿಕ್ಷೆ ಅನುಭವಿಸಿ ಭೂಲೋಕದಲ್ಲಿ ಪರಿಶುದ್ಧರಾಗಿ ಮತ್ತೆ ಕೈಲಾಸಕ್ಕೆ ಹೋಗುವುದು ಒಂದು ಮಾದರಿಯಾದರೆ, ಕೈಲಾಸದಲ್ಲಿ ಯಾವುದೇ ಅಪರಾಧ ಎಸಗದೆ ಶಿವನ ನಾಮಸ್ಮರಣೆಯಿಂದ ವ್ರತಗಳನ್ನು ಗೆದ್ದು ಭೂಲೋಕದಿಂದ ಕೈಲಾಸಕ್ಕೆ ಹೋಗುವುದು ಇನ್ನೊಂದು ಮಾದರಿಯಾಗಿದೆ. ಗುಂಡಬ್ರಹ್ಮಯ್ಯಗಳ ಸಾಹಿತ್ಯವು ಎರಡನೆಯ ಮಾದರಿಯಾಗಿದೆ. ಎಲ್ಲಾ ಕೃತಿಗಳಲ್ಲಿ ಮುಮ್ಮುಖ ಚಲನೆಯಿದ್ದರೆ, ಈ ಕಾವ್ಯದಲ್ಲಿ ಹಿಮ್ಮುಖ ಚಲನೆಯಿದೆ. ಲೌಕಿಕ ಬದುಕನ್ನು ಹಸನುಮಾಡಿಕೊಂಡರೆ ಪಾರಮಾರ್ಥಿಕ ನೆಲೆಯು ತನ್ನಷ್ಟಕ್ಕೆ ತಾನೆ ಹಸನಾಗುತ್ತದೆಂಬುದನ್ನು ಗುಂಡಬ್ರಹ್ಮಯ್ಯಗಳ ಸಾಹಿತ್ಯದ ಮೂಲಕ ಅಭಿವ್ಯಕ್ತಿಗೊಳಿಸಿದೆ. ಒಟ್ಟಾರೆ ಗುಂಡಬ್ರಹ್ಮಯ್ಯಗಳ ಸಾಹಿತ್ಯವನ್ನು ಸಾಂಸ್ಕೃತಿಕ ಹಿನ್ನಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಯನ ಫಲಿತಗಳು

೧. ಕಲ್ಯಾಣ ಕ್ರಾಂತಿ ನಂತರದಲ್ಲಿ ಶರಣ ಸಾಹಿತ್ಯ ಧರ್ಮ-ಸಂಸ್ಕೃತಿಯು ಜಾಗೃತವಾಗಿಯೆ ಇದ್ದವು. ಅವುಗಳ ಪ್ರಸಾರ ಕಾರ್ಯವು ಕರ್ನಾಟಕದಲ್ಲಿ ಆಗದೆ ಆಂಧ್ರನಾಡಿನ ಓರಂಗಲ್‌ನ ಕಾಕತೀಯರ ಅರಸರ

ಪೋಷಣೆಯಲ್ಲಿ ಉಳಿದು-ಬೆಳೆದು ಬಂದವು. ಇದನ್ನು ಗುರುತಿಸದೆ ಹೋದುದರಿಂದ ಇಲ್ಲಿಯವರೆಗೆ ಅಜ್ಞಾತ ಪುಟಗಳಾಗಿ ಉಳಿದಿದೆ. ಈ ನಿಟ್ಟಿನಲ್ಲಿ ಕಾಕತೀಯರ ಅರಸನಾದ ಗಣಪತಿರಾಯನ ಕಾಲದ ಇಬ್ಬರು ವೀರ ಶರಣರಾದ 'ಗುಂಡಬ್ರಹ್ಮಯ್ಯರ ಚರಿತ್ರೆ'ಯು ನಮಗೆ ಮಹತ್ವದ ಹಿನ್ನಲೆಯನ್ನು ಒದಗಿಸಿದೆ. ಪ್ರಸ್ತುತ ಮಹಾಪ್ರಬಂಧದ ಮೂಲಕ ಆಂಧ್ರದ ಓರಂಗಲ್ಲಿನ ಅರಸನಾದ ಗಣಪತಿರಾಯನ ಕಾಲದಲ್ಲಿ ಶರಣರನ್ನು, ಶರಣ ಸಾಹಿತ್ಯವನ್ನು, ಧರ್ಮ-ಸಂಸ್ಕೃತಿಯನ್ನು ಪೋಷಿಸಿದರೆಂಬ ಅಂಶ ಬೆಳಕಿಗೆ ಬಂದಿದೆ.

೨. ಶರಣರ ದೃಷ್ಟಿಯಲ್ಲಿ ಭಕ್ತಿಯೆಂದರೆ ಭಜನೆಯಲ್ಲ. ಬದಲಾಗಿ ಅಂತರಂಗ ಬಹಿರಂಗ ಶುದ್ಧಿಗೊಂಡ ಮಾನವ ಪ್ರೀತಿ ಮತ್ತು ಸೇವೆಯೆ ನಿಜವಾದ ಭಕ್ತಿಯಾಗಿದೆ. ಇಂತಹ ಸಿದ್ಧಾಂತವನ್ನು ಬಹುತೇಕ ಶರಣರು ಇಟ್ಟುಕೊಂಡಿದ್ದಾರೆ. ಗಣಪತಿರಾಯನು ಶರಣರ ನಡೆ-ನುಡಿ-ಸಿದ್ಧಾಂತಗಳನ್ನು, ವ್ರತನೇಮವನ್ನು, ಕಾಯಕ ಮತ್ತು ಶಿವನಿಷ್ಠೆಯನ್ನು ಗೌರವಿಸಿದ್ದಾನೆ. ಆದ್ದರಿಂದ ಇವರ ಹಾದಿಯಲ್ಲಿ ಸಾಗುವ ಸಂಕೇತವಾಗಿ ಕರ್ನಾಟಕದ ಮಹಾಮನೆಯ ಶರಣರ ಚಿತ್ರಪಟಗಳನ್ನು ಅರಮನೆಯ ಗೋಡೆಗಳ ಮೇಲೆ ಹಾಕಲಾಗಿದೆ. ಈ ಮೂಲಕ ಶರಣ ಧರ್ಮ ಮತ್ತು ರಾಜಧರ್ಮ ಮಿಲನಗೊಂಡಿರುವುದನ್ನು ಈ ಮಹಾಪ್ರಬಂಧದಿಂದ ಕಂಡುಕೊಳ್ಳಲಾಗಿದೆ.

೩. ಆಂಧ್ರನಾಡಿನ ಶರಣರಾದ ಗುಂಡಬ್ರಹ್ಮಯ್ಯಗಳು ಕರ್ನಾಟಕದ ಭಾಗಗಳಲ್ಲಿ ಶೂಲದ ಹಬ್ಬದ ಆಚರಣೆಯ ಮೂಲಕ ಬೆಳಕಿಗೆ ಬಂದರು. ಕುಮಾರರಾಮನು ತನ್ನ ತಂದೆಯಾದ ರತ್ನಾಜಿಯ ಅಪ್ಪಣೆಯ ಮೇರೆಗೆ ಶೂಲದ ಹಬ್ಬವನ್ನು ನೆರವೇರಿಸಿದನು. ಇದರಿಂದ ಕರ್ನಾಟಕದ ವಿವಿಧ ಭಾಗಗಳಲ್ಲಿ ಗುಂಡಬ್ರಹ್ಮಯ್ಯರು ಪ್ರಚುರಗೊಂಡರೆಂದು ಪ್ರಸ್ತುತ ಮಹಾಪ್ರಬಂಧದಿಂದ ತಿಳಿಯಲಾಗಿದೆ.

೪. ಕನ್ನಡ ಸಾಹಿತ್ಯದ ಕಾವ್ಯ-ಪುರಾಣಗಳಲ್ಲಿ ಗುಂಡಬ್ರಹ್ಮಯ್ಯಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಈ ಸಂದರ್ಭದಲ್ಲಿ ಸಾಮಾನ್ಯ ವಿಚಾರ ಎನ್ನುವಂತೆ ಗುಂಡಬ್ರಹ್ಮಯ್ಯರ ಎಲ್ಲಾ ಉಲ್ಲೇಖಿತ ಕೃತಿಗಳು ಇವರ ಕಥೆಯನ್ನು ಹೇಳಿವೆ. ಆದರೆ ಮರುಳಸಿದ್ಧ ಕಾವ್ಯದಲ್ಲಿ ಮರುಳಸಿದ್ಧರು ಕೊಲ್ಲಾಪುರಕ್ಕೆ ಹೋಗುವ ಮಾರ್ಗದಲ್ಲಿ ಗುಂಡಬ್ರಹ್ಮಯ್ಯರನ್ನು ಕಂಡು ಬಸವ ತತ್ವಗಳನ್ನು ಕೇಳಿದನು ಎಂಬ ಪ್ರಸ್ತಾಪ ಬರುತ್ತದೆ. ಇದು ಓರಂಗಲ್ಲಿನ ಪ್ರದೇಶದಲ್ಲಿ ಕರ್ನಾಟಕದ ಶರಣರ ಪ್ರಭಾವ ಆಗಿರುವುದಕ್ಕೆ ಮೂಲ ನಿದರ್ಶನವಾಗಿರುವುದನ್ನು ಈ ಅಧ್ಯಯನದಿಂದ ತಿಳಿದುಬರುತ್ತದೆ.

೫. ಗುಂಡಬ್ರಹ್ಮಯ್ಯಗಳು 'ಪರೋಪಕಾರಮಿದಂ ಶರೀರಂ' ಎಂಬ ತತ್ತ್ವವನ್ನು ಶಿರಸಾವಹಿಸಿ ಪಾಲಿಸುವರು. ಅದರ ಮೂಲಕವೇ ಪರಿಪೂರ್ಣ ಬದುಕು ದೊರೆಯುವುದೆಂದು ಅಚಲವಾದ ನಂಬಿಕೆ ಇಟ್ಟುಕೊಂಡಿದ್ದರು. ಆದ್ದರಿಂದ ಹರ-ನಾರದರು ಮೊರೆಹೊಕ್ಕರೆ ಬಿಟ್ಟುಕೊಡಲಿಲ್ಲ. ಕೊನೆಗೆ ಶೂಲದ ಶಿಕ್ಷೆ ಅನುಭವಿಸಿದರು. ಈ ಶೂಲವು ಗುಂಡಬ್ರಹ್ಮರಿಗೆ ಹೂವಿನ ಹಾಸಿಗೆಯಂತಾಯಿತು. ಇದು ಶಿವನ ಪರೀಕ್ಷೆಯಾದರೂ ಒಂದು ಹಂತದಲ್ಲಿ ಬಸವೋತ್ತರ ಯುಗದಲ್ಲಿ ರಾಜಪ್ರಭುತ್ವವು ಶರಣತ್ವದ ಕಡೆಗೆ ಶರಣಾಗಿ ತಮ್ಮ ಜೀವನವನ್ನು ಅಮೂರ್ತದ ಕಡೆಗೆ ಕೊಂಡೊಯ್ದಿರುವುದನ್ನು ಪ್ರಸ್ತುತ ಮಹಾಪ್ರಬಂಧದ ಮೂಲಕ ಕಂಡುಕೊಳ್ಳಲಾಗಿದೆ.

೬. ಮೊರೆಹೊಕ್ಕವರನ್ನು ಕಾಯುವುದು ಅಂದಿನ ದಿನಗಳಲ್ಲಿ ಮೌಲ್ಯವಾಗಿತ್ತು. ಪಂಪಭಾರತದಲ್ಲಿಯೂ ಮೊರೆಹೊಕ್ಕವರನ್ನು ಕಾಯುವ ಕುರಿತು ಅಪೂರ್ವವಾದ ಪದ್ಯವಿದೆ. ಇಲ್ಲಿ ಪರಾಕ್ರಮ, ದಾನ, ಶರಣಾಗತ ರಕ್ಷಣೆಯೆಂಬ ಬಹುಮುಖ್ಯ ಮೂರು ಜೀವನದ ಮೌಲ್ಯಗಳನ್ನು ಹೇಳಲಾಗಿದೆ. ಅದೇ ರೀತಿ ರನ್ನನಲ್ಲಿಯೂ 'ಈಯಲ್, ಇರಿಯಲ್, ಶರಣ್ಬುಗೆ ಕಾಯಲ್' ಎಂದು ಹೇಳಲಾಗಿದೆ. ಒಟ್ಟಿನಲ್ಲಿ ನೋಡಿದರೆ ಮೌಲ್ಯ ಮತ್ತು ವಿಶಿಷ್ಟ ನಂಬಿಕೆಯಾಗಿ ಮೊರೆಹೊಕ್ಕವರನ್ನು ಕಾಯುವುದು ಅಂದಿನ ಯುಗಧರ್ಮದಲ್ಲಿತ್ತು ಎಂದು ಪ್ರಸ್ತುತ ಈ ಅಧ್ಯಯನದ ಮೂಲಕ ತಿಳಿದು ಬರುತ್ತದೆ.

೭. ಕೇವಲ ಕಾವ್ಯ-ಪುರಾಣಗಳ ಮೂಲಕ ಗುಂಡಬ್ರಹ್ಮಯ್ಯರನ್ನು ನಿರೂಪಿಸಲು ಸಾಧ್ಯವಾಗದು. ಇವುಗಳ ಜೊತೆಗೆ ಶಿಲ್ಪಸಂಪತ್ತಿನ ಮೊರೆ ಹೋಗಬೇಕಾಗಿದೆ. ಅಲ್ಲಿ ಶರಣರು ಧರಿಸಿರುವಂತಹ ರುದ್ರಾಕ್ಷಿಸರ, ಕಾಲ್ಪೆಂಡೆ, ತೋಳ್ಬಂದಿ, ವೀರಗಾಸೆಯವರಂತೆ ತೊಟ್ಟ ಪಂಚೆ, ಅಂಗೈಯಲ್ಲಿ ಇಷ್ಟಲಿಂಗ, ಶೂಲಗಳು ಮುಂತಾದವು ಇವರ ಕುರುಹುಗಳಾಗಿವೆ. ಇವುಗಳನ್ನು ಶಿಲ್ಪಮಾಧ್ಯಮದಲ್ಲಿ ಮಾತ್ರ ಪ್ರತ್ಯಕ್ಷವಾಗಿ ನೋಡಲು ಸಾಧ್ಯವಾಗುತ್ತದೆ. ಕಾವ್ಯದಲ್ಲಿ ಓದುವ ಬದಲಾಗಿ ನೋಡುವುದರಿಂದ ಇವರ ಬಗ್ಗೆ ಇರುವ ಅಪ್ರಜ್ಞೆ ಜಾಗೃತಗೊಳಿಸುವುದರಿಂದ ಇವರನ್ನು ಶಿಲ್ಪದಲ್ಲಿ ಕೆತ್ತನೆ ಮಾಡಲಾಗಿಯೆಂದು ತಿಳಿದುಬರುತ್ತದೆ.

೮. ಕ್ಷೇತ್ರಕಾರ್ಯದ ಮೂಲಕ ಆಂಧ್ರನಾಡಿನ ಓರಂಗಲ್ಲಿನ ಶಿಲ್ಪಗಳನ್ನು ಮತ್ತು ಕರ್ನಾಟಕದಲ್ಲಿರುವ ವಿವಿಧ ಶಿಲ್ಪಗಳನ್ನು ಗುರುತಿಸಲಾಗಿದೆ. ಪ್ರಸ್ತುತ ಸಂಶೋಧನೆಯಿಂದ ಎರಡು ಗುಂಡಬ್ರಹ್ಮಯ್ಯಗಳ ಶಿಲ್ಪಗಳು ಲಭ್ಯವಾಗಿವೆ. ಈ ಶಿಲ್ಪಗಳು ಕರ್ನಾಟಕಾಂಧ್ರದ ಸಾಂಸ್ಕೃತಿಕ ಸಂಬಂಧಕ್ಕೆ ಸೇತುವೆಯಂತಿವೆ ಎಂದು ಮಹಾಪ್ರಬಂಧದ ಮೂಲಕ ಕಂಡುಕೊಳ್ಳಲಾಗಿದೆ.

೯. ಗುಂಡಬ್ರಹ್ಮಯ್ಯರ ಶಿಲ್ಪಗಳು ವೀರಭದ್ರ ದೇವಾಲಯದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಇದು ವೀರಭದ್ರ ದೇವರಿಗೂ ಗುಂಡಬ್ರಹ್ಮಯ್ಯರಿಗೂ ಇರುವ ಸಂಬಂಧವನ್ನು ಸೂಚಿಸುತ್ತದೆ. ಇವರು ವೀರಭದ್ರನ ಆರಾಧಕರಾಗಿದ್ದು ಶಿವನಲ್ಲಿ ನಿಷ್ಠೆಯುಳ್ಳವರಾಗಿದ್ದರು. ಇಂತಹ ವೀರಕಾರ್ಯ ಮಾಡುವುದು ವೀರಭದ್ರನ ಗಣಗಳಂಥ ಅಸಾಧಾರಣ ಸಾಮರ್ಥ್ಯದವರಿಗೆ ಮಾತ್ರ ಸಾಧ್ಯವಾಗಿದೆ. ಇದರಿಂದ ವೀರಭದ್ರ ದೇವಾಲಯಗಳಲ್ಲಿ ಗುಂಡಬ್ರಹ್ಮಯ್ಯರ ಶಿಲ್ಪಗಳು ಹೆಚ್ಚಾಗಿ ದೊರೆಯುತ್ತಿವೆ.

೧೦. ಶಿಲ್ಪಗಳಲ್ಲಿ ಗುಂಡಬ್ರಹ್ಮಯ್ಯರನ್ನು ಜೋಡಿಯಾಗಿ ಕೆತ್ತಲಾಗಿದೆ. ಆದರೆ ಕೆಲವೆ ಶಿಲ್ಪಗಳಲ್ಲಿ ಮಾತ್ರ ಒಬ್ಬೊಬ್ಬರನ್ನು ಚಿತ್ರಿಸಲಾಗಿದೆ. ಇವರಿಬ್ಬರ ನಡುವೆ ಶೂಲಗಳಿವೆ. ಅಂಗೈಯಲ್ಲಿ ಇಷ್ಟಲಿಂಗವನ್ನು ಹಿಡಿದಿರುವರು. ಕಾಲ್ಪೆಂಡೆ, ತೋಳ್ಬಂದಿ, ಕಚ್ಚೆಪಂಚೆ, ಕೈಗತ್ತಿ ಹಿಡಿದಿರುವಂತೆ ಸಾಮಾನ್ಯವಾಗಿ ಇವರನ್ನು ಚಿತ್ರಿಸಲಾಗಿದೆ. ಕರ್ನಾಟಕದಲ್ಲಿ ಇದುವರೆಗೆ ೨೫-೩೦ ಶಿಲ್ಪಗಳು ಲಭ್ಯವಾಗಿವೆ. ಇವುಗಳ ಕುರಿತು ಹೆಚ್ಚಾಗಿ ಸಂಶೋಧನೆ ಕೈಗೊಂಡರೆ ಇನ್ನು ಹಲವಾರು ಶಿಲ್ಪಗಳು ಬೆಳಕಿಗೆ ಬರುತ್ತವೆ.

೧೧. ವಿಭಿನ್ನ ಕವಿಗಳ ವಿಭಿನ್ನ ಸಾಹಿತ್ಯ ಪ್ರಕಾರಗಳಿಂದ ರಚನೆಗೊಂಡಿರುವ 'ಗುಂಡಬ್ರಹ್ಮಯ್ಯಗಳ ಸಾಹಿತ್ಯ' ನಿರ್ದಿಷ್ಟ ಚಾರಿತ್ರಿಕ ಒತ್ತಡದ ಜೊತೆಗೆ ಒಂದು ಯುಗಧರ್ಮವನ್ನು ಪ್ರತಿನಿಧಿಸುತ್ತದೆ. ಸರ್ವದೇಶ,

ಸರ್ವಕಾಲ ವ್ಯಾಪ್ತವಾದ ಆದರ್ಶಗಳನ್ನು ಹಾಗೂ ಒಂದು ದೇಶ, ಒಂದು ಕಾಲಪರಿಮಿತವಾದ ಮೌಲ್ಯಗಳನ್ನು ಮತ್ತು ನಂಬಿಕೆಗಳನ್ನು ಮುನ್ನೆಡೆಸುವ ಸೂತ್ರವಾಗಿ ಗುಂಡಬ್ರಹ್ಮಯ್ಯಗಳ ಸಾಹಿತ್ಯ ಗೋಚರವಾಗುವುದನ್ನು ಪ್ರಸ್ತುತ ಮಹಾಪ್ರಬಂಧದ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

೧೨. ವೀರಶೈವ ಕಾವ್ಯ-ಪುರಾಣಗಳನ್ನು ಅಧ್ಯಯನ ಮಾಡಿದಾಗ ಗುಂಡಬ್ರಹ್ಮಯ್ಯರು ಮತ್ತು ಶೂಲದ ಬ್ರಹ್ಮಯ್ಯರು ಭಿನ್ನರೆಂಬ ವಿಷಯ ಖಚಿತವಾಗುತ್ತದೆ. ಗಣಸಹಸ್ರ ನಾಮಾವಳಿಯಲ್ಲಿ ೧೩೩ನೆಯ ಹೆಸರು ಗುಂಡಬ್ರಹ್ಮಯ್ಯರದ್ದಾಗಿದ್ದರೆ, ೨೭೦ನೆಯದು ಶೂಲದ ಬ್ರಹ್ಮಯ್ಯನದಾಗಿದೆ. ಇನ್ನುಳಿದ ಕಾವ್ಯಪುರಾಣಗಳು ಶೂಲದ ಬ್ರಹ್ಮಯ್ಯನನ್ನು ಗುಂಡಬ್ರಹ್ಮಯ್ಯರಿಂದ ಪ್ರತ್ಯೇಕಿಸಿ ಹೇಳುತ್ತವೆ. ಶೂಲದ ಬ್ರಹ್ಮನ ಕಥೆಯು ಗುಂಡಬ್ರಹ್ಮಯ್ಯರಿಗೆ ಸಾದೃಶ್ಯವೆನಿಸಿದರೂ ಇವರಿಬ್ಬರ ಕಾಲ, ದೇಶ, ಜೀವನ ಸಂಗತಿಗಳು ಬೇರೆ ಬೇರೆಯಾಗಿರುವುದು ಎಂಬುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೧೩. ಶರಣರನ್ನು ಪರೀಕ್ಷೆಗೆ ಗುರಿಪಡಿಸಲು ಅವನು ಆಯ್ಕೆಮಾಡಿಕೊಂಡದ್ದು ಸಾಮಾಜಿಕ ಅಪಮೌಲ್ಯವಾದ ಕಳ್ಳತನ ಮತ್ತು ಕಳ್ಳತನಮಾಡಿ ಮೊರೆಹೊಕ್ಕವರನ್ನು ಕಾಪಾಡುವುದು. ಮತ್ತೊಂದು ಅಪಮೌಲ್ಯವಾಗಿ ಇವರೆಡನ್ನು ಏಕೀಕೃತಗೊಳಿಸಿ ಮುಖಾಮುಖಿಗೊಳಿಸಲಾಗಿದೆ. ಇದರಿಂದ ಶರಣರ ವ್ಯಕ್ತಿತ್ವವು ಪ್ರಜ್ವಲಿಸುವಂತಾಗಿದೆ. ಗುಂಡಬ್ರಹ್ಮಯ್ಯರ ಬದುಕು ಹಸನಾಗಿದ್ದರೂ ಮತ್ತಷ್ಟು ಹೊಳಪುಗೊಳಿಸಲು ಅವರ ಗುಣಕ್ಕೆ ಬಂಗಾರದ ಗುಣ ಬರುವಂತೆ ಮಾಡಲು ಪರೀಕ್ಷೆಗೆ ಒಳಪಡಿಸಿದ್ದಾರೆ. ಪ್ರಭುತ್ವ ಮತ್ತು ಶಿವತ್ವದ ಸಂಘರ್ಷ ಹಾಗೂ ಸಾಮರಸ್ಯ ಅನಾವರಣಗೊಳ್ಳುತ್ತದೆ. ಅರಮನೆ ಗುರುಮನೆಗಳಿಗಿಂತ ಶರಣರ ಮಹಾಮನೆಯು ರೂಪಿಸಿದ ತತ್ವಗಳಿಗೆ ಗುಂಡಬ್ರಹ್ಮಯ್ಯರಂತ ಶರಣರ ವ್ಯಕ್ತಿತ್ವ ಸಾಕ್ಷಿಯಾಗಿ ನಿಂತು ಸಾಕ್ಷಾತ್ಕರಿಸಿಕೊಳ್ಳುತ್ತದೆ. ಶಿವತ್ವದ ಮುಂದೆ ಪ್ರಭುತ್ವ ಅಸಾಹಾಯಕವಾಗುತ್ತದೆ. ಶಕ್ತಿಗಿಂತ, ಯುಕ್ತಿಗಿಂತ ಭಕ್ತಿ ತನ್ನ ಶ್ರೇಷ್ಠತೆ ಮೆರೆಯುತ್ತದೆ. ಇಂತಹ ವಿವಿಧ ಆಯಾಮಗಳಿಂದ ಗುಂಡಬ್ರಹ್ಮಯ್ಯಗಳ ಸಾಹಿತ್ಯವು ಹೊಸ ಆಯಾಮ ಪಡೆದುಕೊಳ್ಳುತ್ತದೆ ಎಂಬುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಆಕರ ಗ್ರಂಥಗಳು

೧. ಅಗ್ನಿದಿವ್ಯ: ಡಾ.ಕೆ.ರವೀಂದ್ರನಾಂಥ, ಸುರಚಿರ ಪ್ರಕಾಶನ, ಗುಲಬರ್ಗಾ, ೨೦೦೬.

೨. ಇತಿಹಾಸ ದರ್ಶನ ಸಂಪುಟ ೧೫: ಸಂ.ಎಂ.ಜೆ.ನಾಗರಾಜ್, ಡಾ.ಪಿ.ವಿ.ಕೃಷ್ಣಮೂರ್ತಿ, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೨೦೦೦.

೩. ಇತಿಹಾಸ ದರ್ಶನ ಸಂಪುಟ ೧೯: ಸಂ.ಎಂ.ಜೆ.ನಾಗರಾಜ್, ಡಾ.ಪಿ.ವಿ.ಕೃಷ್ಣಮೂರ್ತಿ, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೨೦೦೪.

೪. ಇತಿಹಾಸ ದರ್ಶನ ಸಂಪುಟ ೨೫: ಸಂ.ಎಂ.ಜೆ.ನಾಗರಾಜ್, ಡಾ.ಪಿ.ವಿ.ಕೃಷ್ಣಮೂರ್ತಿ, ಕರ್ನಾಟಕ ಇತಿಹಾಸ ಅಕಾಡೆಮಿ ಬೆಂಗಳೂರು, ೨೦೧೦.

೫. ಉಜ್ಜಯಿನಿ ಸದ್ಧರ್ಮ ಪೀಠದ ಸಾಂಸ್ಕೃತಿಕ ಅಧ್ಯಯನ: ಡಾ.ಆರ್.ಎಮ್.ಷಡಕ್ಷರಯ್ಯ, ಶ್ರೀ ಜಗದ್ಗುರು ಸದ್ಧರ್ಮ ಸಿಂಹಾಸನ ಜ್ಞಾನಗುರು ವಿದ್ಯಾಪೀಠ ಉಜ್ಜಯಿನಿ, ೨೦೦೩.

೬. ಕರ್ನಾಟಕ ಕವಿಚರಿತೆ ಭಾಗ-೧, ಸಂ: ಆರ್.ನರಸಿಂಹಚಾರ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೦೭.

೭. ಕರ್ನಾಟಕದ ಶಿಲ್ಪಗಳಲ್ಲಿ ಶಿವಶರಣರು: ಡಾ.ಜೆ.ಎಂ.ನಾಗಯ್ಯ, ಶ್ರೀಚೆನ್ನಬಸವೇಶ್ವರ ಸಂಸ್ಥಾನ ಹಿರೇಮಠ ಹಾರಕೂಡ ತಾ.ಬಸವಕಲ್ಯಾಣ ಜಿ.ಬೀದರ್.

೮. ಕನ್ನಡ ಸಾಹಿತ್ಯದಲ್ಲಿ ಪ್ರಧಾನ ಮತ್ತು ಅಧೀನ ಸಂಸ್ಕೃತಿ: ಪ್ರಧಾನ ಸಂ. ಬರಗೂರು ರಾಮಚಂದ್ರಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೯. ಕೊಮರ ರಾಮಯ್ಯನ ಚರಿತ್ರೆ: ಸಂ.ಎಂ.ಎಂ.ಕಲಬುರ್ಗಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

೧೦. ಗುಂಡಬ್ರಹ್ಮಯ್ಯಗಳ ಚರಿತ್ರೆ (ಸುವ್ವಿ): ಸಂ.ಡಾ.ವಿ.ಶಿವಾನಂದ, ಅಖಂಡೇಶ್ವರ ಗ್ರಂಥಮಾಲೆ ಜೇವರ್ಗಿ, ಜಿ.ಗುಲ್ಬರ್ಗ, ೧೯೭೪.

೧೧. ಗುಂಡ ಬಸವೇಶ್ವರ ಚರಿತ್ರೆ: ಸಂ.ಎಂ.ಎಂ.ಕಲಬುರ್ಗಿ, ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ಬೆಂಗಳೂರು, ೨೦೦೭.

೧೨. ಗುಂಡಬ್ರಹ್ಮಯ್ಯಗಳ ಸಾಹಿತ್ಯ: ಸಂ.ಡಾ.ಕೆ.ರವೀಂದ್ರನಾಥ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೧೩. ಗೌರವ: ಸಂ.ಡಾ.ಬಿ.ವಿ.ಶಿರೂರು, ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ೧೯೮೬.

೧೪. ಗ್ರಾಮೀಣ: ಡಾ.ಎಂ.ಚಿದಾನಂದಮೂರ್ತಿ, ಬಾಪ್ಕೊ ಪ್ರಕಾಶನ, ಬೆಂಗಳೂರು, ೧೯೭೭.

೧೫. ಚನ್ನಬಸವ ಪುರಾಣ: ವಿರುಪಾಕ್ಷ ಪಂಡಿತ, ಲಿಂಗಾಯತರ ವಿದ್ಯಾಭಿವೃದ್ಧಿ ಸಂಸ್ಥೆಯ ವಾಙ್ಮಯಶಾಖೆ, ಧಾರವಾಡ, ೧೯೩೪.

೧೬. ಚನ್ನಬಸವಪುರಾಣ (ಗದ್ಯಾನುವಾದ): ಚಂದ್ರಶೇಖರ ಎಂ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೭೯.

೧೭. ಜನ-ಜನಪದ-ಜಾನಪದ: ಡಾ.ಎಂ.ಚಿದಾನಂದಮೂರ್ತಿ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೨.

೧೮. ಜನಪದ ಶರಣ ಕಾವ್ಯಗಳು: ಸಂ.ಡಾ.ಪಿ.ಕೆ.ರಾಜಶೇಖರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೧.

೧೯. ಧಾರ್ಮಿಕ ನಂಬಿಕೆಗಳು ಮತ್ತು ದಾರ್ಶನಿಕ ವಿಶ್ಲೇಷಣೆ: ಡಾ.ಎನ್.ಜಿ.ಮಹದೇವಪ್ಪ, ವೀರಶೈವ ಅಧ್ಯಯನ ಅಕಾಡೆಮಿ, ನಾಗನೂರುಮಠ, ಬೆಳಗಾವಿ, ೧೯೯೫.

೨೦. ದೇವಗಂಗೆ: ಬಿ.ಶಿವಮೂರ್ತಿಶಾಸ್ತ್ರಿಗಳ ಷಟ್ಯ್ಯಬ್ದಶಾಂತಿ ಸಮಾರಂಭ ಸಮಿತಿ, ಬೆಂಗಳೂರು, ೧೯೬೮.

೨೧. ನಂದಿಯಾಗಮಲೀಲೆ: ಸಂ.ಇರಸಂಗಯ್ಯ ಕೊಡೆಕಲ್ಲಮಠ, ಶ್ರೀಕೊಡೇಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಕೊಡೇಕಲ್, ೨೦೦೪.

೨೨. ಪಂಚಗಣಾಧೀಶ್ವರರು: ಸಾಂಸ್ಕೃತಿಕ ಅಧ್ಯಯನ (ಅಪ್ರಕಟಿತ): ಸತೀಶ ಪಾಟೀಲ್, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೨೩. ಬಸವಪುರಾಣ: ಸಂ.ಡಾ.ಆರ್.ಸಿ.ಹಿರೇಮಠ, ಶ್ರೀನಿ.ಪ್ರ.ಸ್ವ.ಮಹಾಂತ ಸ್ವಾಮಿಗಳು, ಶ್ರೀಗುರು ಮೃತ್ಯುಂಜಯ ಮಹಾಸ್ವಾಮಿಗಳು, ಶ್ರೀ ಮುರುಘಾಮಠ, ಧಾರವಾಡ, ೧೯೭೧.

೨೪. ಬಸವೋತ್ತರ ಯುಗದ ವಚನಕಾರರು: ಡಾ.ವೀರಣ್ಣ ರಾಜೂರ, ಶ್ರೀ ಚನ್ನಬಸವೇಶ್ವರ ಸಂಸ್ಥಾನ, ಹಿರೇಮಠ ಹಾರಕೂಡ, ತಾ.ಬಸವಕಲ್ಯಾಣ, ಜಿ.ಬೀದರ್.

೨೫. ಬಾಲರಾಮನ ಸಾಂಗತ್ಯ: ಸಂ.ಡಾ.ಎಂ.ಎಂ.ಕಲಬುರ್ಗಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೨೬. ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ: ಸಂ.ಡಾ.ಆರ್.ಸಿ.ಹಿರೇಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೮.

೨೭. ಮರುಳಸಿದ್ಧ ಕಾವ್ಯ: ಸಂ.ಅ.ನ.ಕೃಷ್ಣರಾಯ, ವಿಶ್ವವಾಣಿ ಪ್ರಕಟನ ಮಂದಿರ ಬೆಂಗಳೂರು, ೧೯೫೮.

೨೮. ಮಾರ್ಗ-೧: ಡಾ.ಎಂ.ಎಂ.ಕಲಬುರ್ಗಿ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೦.

೨೯. ಮಾರ್ಗ-೨: ಡಾ.ಎಂ.ಎಂ.ಕಲಬುರ್ಗಿ, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೧೯೯೫.

೩೦. ಮಾರ್ಗ-೪: ಡಾ.ಎಂ.ಎಂ.ಕಲಬುರ್ಗಿ, ಸ್ವಪ್ನಬುಕ್ ಹೌಸ್, ಬೆಂಗಳೂರು, ೨೦೦೪.

೩೧. ವಚನ ಸಾವಿರ: ಸಂ.ಓ.ಎಲ್.ನಾಗಭೂಷಣಸ್ವಾಮಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೩೨. ವಚನ ಸಾಹಿತ್ಯ ಸಂಗ್ರಹ: ಸಂ.ಶಿ.ಭೂಸನೂರಮಠ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.

೩೩. ವಿಜಯನಗರ ಅಧ್ಯಯನ ಸಂಪುಟ ೬: ಸಂ.ಪ್ರೊ.ಎಂ.ವಿ.ಕೃಷ್ಣಪ್ಪ, ಹೆಚ್.ಟಿ.ತಳವಾರ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೧.

೩೪. ವೀರಶೈವ ಚಂಪೂ ಸಾಹಿತ್ಯ: ಪ್ರೊ.ಆರ್.ರಾಚಪ್ಪ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೨೦೦೩.

೩೫. ವೀರಶೈವ ದರ್ಶನ: ಸಂ.ಡಾ.ಆರ್.ಸಿ.ಹಿರೇಮಠ, ಚನ್ನಚೇತನ ಪ್ರಕಾಶನ, ಹಿರೇಕಲ್ಮಠ, ಹೊನ್ನಾಳಿ, ೧೯೯೮.

೩೬. ವೀರಶೈವ ಧರ್ಮದ ಕೈಪಿಡಿ: ಪ್ರೇಮಾದೇವಿ ಮಳಿಮಠ (ಅನುವಾದ), ಶ್ರೀ ಬಸವೇಶ್ವರ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೦.

೩೭. ವೀರಶೈವಾಮೃತ ಪುರಾಣ: ಸಂ.ಡಾ.ಆರ್.ಸಿ.ಹಿರೇಮಠ, ಎನ್.ಎಸ್.ಎಸ್.ಕಲ್ಯಾಣ ಕೇಂದ್ರ, ಬೆಂಗಳೂರು.

೩೮. ವೀರಶೈವ ಸಾಹಿತ್ಯ: ಡಾ.ಎಸ್.ಎಂ.ಹಿರೇಮಠ, ಶ್ರೀ ಚನ್ನಬಸವೇಶ್ವರ ಸಂಸ್ಥಾನ, ಹಾರಕೋಡ, ೧೯೯೬.

೩೯. ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು: ಡಾ.ವಿ.ಜಿ.ಪೂಜಾರ, ಪುಸ್ತಕ ಅಕಾಡೆಮಿ, ಕಲಬುರ್ಗಿ, ೧೯೯೯.

೪೦. ಶರಣರ ಅನುಭಾವ ಸಾಹಿತ್ಯ: ಡಾ.ಎಚ್.ತಿಪ್ಪೇರುದ್ರಸ್ವಾಮಿ, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು, ೧೯೯೮.

೪೧. ಶಿಲ್ಪಗಳಲ್ಲಿ ಶಿವಭಕ್ತರು: ವಿನೋದಾ ಪಾಟೀಲ್, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, ೨೦೦೩.

೪೨. ಶಿವತತ್ತ್ವ ಚಿಂತಾಮಣಿ: ಸಂ.ಎಚ್.ದೇವಿರಪ್ಪ, ಪ್ರಾಚ್ಯವಸ್ತು ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೦.

೪೩. ಶಿವಶರಣ ಕಥಾರತ್ನಕೋಶ: ತ.ಸು.ಶಾಮರಾಯ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಮೈಸೂರು, ೨೦೦೩.

೪೪. ಶಿವಶರಣ ವಿಲಾಸ: ಸಂ.ಬಿ.ನಂಜುಂಡಪ್ಪ, ಶ್ರೀ ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ, ೧೯೪೯.

೪೫. ಶಾಸನ ವ್ಯಾಸಂಗ: ಡಾ.ಎಂ.ಎಂ.ಕಲಬುರ್ಗಿ, ಕನ್ನಡ ಅಧ್ಯಯನ ಪೀಠ, ಪಠ್ಯಪುಸ್ತಕ ನಿರ್ದೇಶನಾಲಯ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫.

೪೬. ಶಾಸನಗಳಲ್ಲಿ ಶಿವಶರಣರು: ಡಾ.ಎಂ.ಎಂ.ಕಲಬುರ್ಗಿ, ಸಿರಿಗನ್ನಡ ಪ್ರಕಾಶನ, ಕವಿವಿ, ಧಾರವಾಡ, ೧೯೭೦.

೪೭. ಶೈವಧರ್ಮ ದರ್ಶನ: ರಾಮಯ್ಯಂಗಾರ್ ಎಚ್.ಜೆ, ಟಿ.ಎನ್.ಕೃಷ್ಣಯ್ಯಶೆಟ್ಟಿ ಅಂಡ್‌ಸನ್, ಬೆಂಗಳೂರು, ೧೯೮೧.

೪೮. ಸಾನಂದ ಚರಿತೆ: ಸಂ.ಎಸ್.ಬಸಪ್ಪ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೫.

೪೯. ಸಾಮ್ರಾಜ್ಯಕ್ಕಾಗಿ ಹೋರಾಟ: ಸಂ.ಆರ್.ಸಿ.ಮಜುಂದಾರ್, ಭಾರತೀಯ ವಿದ್ಯಾಭವನ, ಬೆಂಗಳೂರು, ೨೦೦೦.

೫೦. ಸ್ವರವಚನ ಸಂಚಯ: ಸಂ.ಗೌ.ಮ.ಉಮಾಪತಿಶಾಸ್ತ್ರಿ, ಶಿವಪ್ಪ ನಾಯಕ ವಸ್ತು ಸಂಗ್ರಹಾಲಯ ಮತ್ತು ಸಂಶೋಧನ ಪ್ರತಿಷ್ಠಾನ ಶಿವಮೊಗ್ಗ, ೨೦೦೭.

೫೧. ಹದಿನೈದನೆಯ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆ: ಪ್ರೊ.ಕೆ.ನಾಗೇಂದ್ರಪ್ಪ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೯೬.

೫೨. ಹಳೆಯ ಕುಮಾರರಾಮನ ಸಾಂಗತ್ಯ: ಸಂ.ಎಂ.ಎಂ.ಕಲಬುರ್ಗಿ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೮.

೫೩. ಹೊಸ ಕುಮಾರರಾಮನ ಸಾಂಗತ್ಯ: ಸಂ.ಎಂ.ಎಂ.ಕಲಬುರ್ಗಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.



ಓರಂಗಲ್ ಕೋಟೆ



ಓರಂಗಲ್ಲಿನ ತೋರಣ ದ್ವಾರ



ಓರಂಗಲ್ಲಿನ ಕೋಟೆಯ ಪಕ್ಕದಲ್ಲಿಯ ಆವರಣ



ಓರಂಗಲ್ ಕೋಟೆಯ ಒಳಭಾಗ



ಓರಂಗಲ್ಲಿನ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವ ಶಿಲ್ಪ



ಓರಂಗಲ್ಲಿನ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವ ಶಿಲ್ಪ



ಹೊಸದುರ್ಗದ ವೀರಭದ್ರ ದೇವಾಲಯ



ಚಿತ್ರದುರ್ಗ ಜಿಲ್ಲೆಯ ದೇವಪುರದಲ್ಲಿರುವ ವೀರಭದ್ರ ದೇವಾಲಯ



ಚಿತ್ರದುರ್ಗದ ಸಂಪಿಗೆ ಸಿದ್ದೇಶ್ವರ ದೇವಾಲಯದಲ್ಲಿರುವ ಶಿಲ್ಪ



ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನ ಸವಣದುರ್ಗದಲ್ಲಿರುವ ಶಿಲ್ಪ



ಬಳ್ಳಾರಿ ಜಿಲ್ಲೆಯ ಬುಕ್ಕಸಾಗರದಲ್ಲಿರುವ ಶಿಲ್ಪ



ಬಳ್ಳಾರಿ ಜಿಲ್ಲೆಯ ಬುಕ್ಕಸಾಗರದಲ್ಲಿರುವ ಶಿಲ್ಪ



ಚಿತ್ರದುರ್ಗ ಜಿಲ್ಲೆಯ ಹಿರೇಗುಂಟೂರು ಗ್ರಾಮದಲ್ಲಿರುವ ಶಿಲ್ಪ



ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ದೇವಪುರದಲ್ಲಿರುವ ಶಿಲ್ಪ



ಕನ್ನಡ ವಿಶ್ವವಿದ್ಯಾಲಯದ ವಸ್ತುಸಂಗ್ರಹಾಲಯದಲ್ಲಿರುವ ಶಿಲ್ಪ



ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಶ್ರೀರಾಂಪುರದಲ್ಲಿರುವ ಶಿಲ್ಪ



ಚಿತ್ರದುರ್ಗ ಜಿಲ್ಲೆಯ ಚಿಕ್ಕಾಪುರದಲ್ಲಿರುವ ಶಿಲ್ಪ



ಚಿತ್ರದುರ್ಗ ಜಿಲ್ಲೆಯ ಸಿಂಗಾಪುರದಲ್ಲಿರುವ ಶಿಲ್ಪ



ಚಿತ್ರದುರ್ಗ ಜಿಲ್ಲೆಯ ಕೊಡದಗುಡ್ಡ ಗ್ರಾಮದಲ್ಲಿರುವ ವೀರಭದ್ರ ದೇವಾಲಯ



ಚಿತ್ರದುರ್ಗ ಜಿಲ್ಲೆಯ ಆಸಗೋಡಿನಲ್ಲಿರುವ ಶಿಲ್ಪ